# ಅಧ್ಯಾಯ - 17

## ಪ್ರೇಕ್ಷಣೀಯ ಸ್ಥಳಗಳು

ಪಶ್ಚಿಮಘಟ್ಟಗಳು ಹಾಗೂ ಅವುಗಳ ಶ್ರೇಣಿಗಳ ಮುಂದುವರಿಕೆಯ ಅಂಕುಡೊಂಕಾದ ಕಣಿವೆಗಳನ್ನು ಹೊಂದಿದ ಧಾರವಾಡ ಜಿಲ್ಲೆಯು ಸಮುದ್ರಮಟ್ಟಕ್ಕಿಂತ 2,500 ಅಡಿಗಳಿಗೂ ಮೀರಿದ ಎತ್ತರವಾದ ಪ್ರಸ್ಥಭೂಮಿಯಾಗಿದೆ. ಸುಂದರ ನೈಸರ್ಗಿಕ ಹಸಿರು ಪರ್ವತ ಶ್ರೇಣಿಗಳು, ನದಿ ಕಣಿವೆಗಳು, ಹಾಗೂ ವಿಶಾಲ ಬಯಲು ಪ್ರದೇಶಗಳು ಸಹಜವಾಗಿ ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಸಮುದಾಯ ಜನಜೀವನಕ್ಕೆ ಎಡೆಮಾಡಿಕೊಟ್ಟಿದೆ. ಜಿಲ್ಲೆಯಲ್ಲಿ ಅಸಂಖ್ಯಾತ ಐತಿಹಾಸಿಕ ಹಾಗೂ ವಾಸ್ತುಕಲಾ ವಿಶೇಷ ಅವಶೇಷಗಳು ಶಾತವಾಹನ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣದ ಚಾಳುಕ್ಯರ ಕಾಲದಿಂದಲೂ ಉಳಿದು ಬಂದಿವೆ. ಅಲ್ಲದೇ ಧಾರ್ಮಿಕ ಕ್ಷೇತ್ರಗಳು, ಸಂತಮಹಂತರು ಇದ್ದ ನೆಲೆಗಳು, ವಾಣಿಜ್ಯ ಕೇಂದ್ರಗಳು, ಸಾಂಸ್ಕೃತಿಕ ಕೇಂದ್ರಗಳು ಹಾಗೂ ನೈಸರ್ಗಿಕ ತಾಣಗಳೂ ಕಂಡು ಬರುತ್ತವೆ. ಕೆಲವು ಸ್ಥಳಗಳು ಪೂರ್ವೇತಿಹಾಸದ ಕೇಂದ್ರಗಳಾಗಿದ್ದರೆ ಮತ್ತೆ ಕೆಲವು ಚಾರಿತ್ರಿಕ ಮಹತ್ವದ ರಾಜಕೀಯ ಘಟನೆಗಳಿಂದಾಗಿ ಮಹತ್ವವನ್ನು ಪಡೆದಿವೆ. ಅಂಥ ಸ್ಥಳಗಳಲ್ಲಿ ನದಿಯ ಕಣಿವೆಗಳು, ಬಂಕಾಪುರ, ಅಬಲೂರು, ಗಳಗನಾಥ, ಚೌಡದಾನಪುರ, ಲಕ್ಷ್ಮೇಶ್ವರ, ಲಕ್ಕುಂಡಿ, ಗದಗು, ಕಲಕೇರಿ, ತಿಳವಳ್ಳಿ, ರಟ್ಟೀಹಳ್ಳಿ, ಡಂಬಳ, ಹಾನಗಲ್ಲು, ಯಳವಟ್ಟಿ ಮುಂತಾದ ಹಲವಾರು ಸ್ಥಳಗಳನ್ನು ಇಲ್ಲಿ ಉದಾಹರಿಸಬೇಕಾಗಿದೆ. ಈ ಅಧ್ಯಾಯದಲ್ಲಿ ಜಿಲ್ಲೆಯಲ್ಲಿರುವ ಜನಪ್ರಿಯತೆ ಪಡೆದ, ಪಡೆಯದೇ ನಿಗೂಢವಾಗಿರುವ ಹಾಗೂ ಬಹುಜನರಿಗೆ ಅಗೋಚರವೆನಿಸಿದ ಸ್ಥಳಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಜಿಲ್ಲೆಯಲ್ಲಿರುವ ಪ್ರಾಚ್ಯ ಅವಶೇಷಗಳ ದೃಷ್ಟಿಯಿಂದ ನಮ್ಮ ಸರ್ವೇಕ್ಷಣೆಯು ಸಂಪೂರ್ಣವಾಗಿ ನಡೆದಿದೆ ಎಂದು ಹೇಳುವುದು ಕಷ್ಟ. ಧಾರವಾಡ ಜಿಲ್ಲೆಯ ವಾಸ್ತು ಹಾಗೂ ಶಿಲ್ಪಕಲಾ ಅವಶೇಷಗಳು ಸಮೃದ್ಧವಾದುವು. ಅವುಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವುದೇ ಈ ಅಧ್ಯಾಯದ ಉದ್ದೇಶವಾಗಿದೆ. ಅದೇ ರೀತಿ ನೈಸರ್ಗಿಕ ಸೌಂದರ್ಯದ ಕ್ಷೇತ್ರಗಳನ್ನೂ ಪರಿಚಯಿಸಿದೆ. ಸ್ಥಳಗಳನ್ನು 'ಅ' ಕಾರಾದಿ ನಿಯಮದಲ್ಲಿ ನಿಯೋಜಿಸಲಾಗಿದೆ. ಕಂಸದಲ್ಲಿ ಆಯಾ ಊರಿನ ಜನಸಂಖ್ಯೆಯನ್ನು 1991ರ ಜನಗಣತಿಯಂತೆ ಒದಗಿಸಲಾಗಿದೆ.

**ಅಂದಲಗಿ :** ಶಿಗ್ಗಾಂವಿ ತಾಲೂಕಿನ ಅಂದಲಗಿ (ಜನಸಂಖ್ಯೆ : 2,425) ಅಥವಾ ಶಾಸನದ (ಹಾನಗಲ್‌ನಿಂದ 25 ಕಿ.ಮೀ) ಅಂಡಣಗೆಯು ಪುರಾತನವಾದ ಐತಿಹಾಸಿಕ ಸ್ಥಳವಾಗಿದ್ದು ಇಲ್ಲಿನ ಕೆರೆಯ ದಂಡೆಯ ಮೇಲೆ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ರಾಮನಾಥೇಶ್ವರ ದೇವಾಲಯವಿದೆ. ಖಾಸಗಿ ಮನೆಯ ಆವರಣದಲ್ಲಿ ಸಿಕ್ಕಿರುವ ಶಾಸನದಲ್ಲಿ ಉಕ್ತವಾಗಿರುವ ಹೋಬೇಶ್ವರ ದೇವಾಲಯವು ಇದೇ ಎಂದು ಊಹಿಸಬಹುದಾಗಿದೆ. ಈ ಶಾಸನದ ಪ್ರಕಾರ ಕ್ರಿ.ಶ. 1138ರಲ್ಲಿ ಕಲ್ಯಾಣದ ಚಾಳುಕ್ಯ ದೊರೆ ಮೂರನೇಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಉದ್ದರ ಹೋಮಿಸೆಟ್ಟಿಯಿಂದ ನಿರ್ಮಿತವಾದ ಹೋಬೇಶ್ವರ ದೇವಾಲಯಕ್ಕೆ ಕನಕಗಾವುಂಡಿಕಬ್ಬೆ ಮತ್ತು ಊರ ಅರವತ್ತು ಒಕ್ಕಲು ಬಿಟ್ಟ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಈ ದೇವಾಲಯದ ಗರ್ಭಗೃಹವು ಕೋನಾಕಾರವಾದ ತಳವಿನ್ಯಾಸವನ್ನು ಹೊಂದಿದ್ದು ಮೇಲ್ಭಾಗದ ಶಿಖರವು ಕುಸಿದು ಹೋಗಿದೆ. ಇದರ ನವರಂಗ, ಮುಖಮಂಟಪಗಳು

ಪೂರ್ಣವಾಗಿ ಬಿದ್ದುಹೋಗಿವೆ. ರಾಮನಾಥೇಶ್ವರ ದೇವಾಲಯದಲ್ಲಿರುವ ವೀರಗಲ್ಲು ಶಾಸನವು ಅಸ್ಪಷ್ಟವಾಗಿದ್ದು ಹೇಮಳಂಬಿ ಸಂವತ್ಸರದ್ದಾಗಿದ್ದು) ಕ್ರಿ.ಶ.13ನೇ ಶತಮಾನದ ಲಿಪಿಯನ್ನು ಹೋಲುತ್ತದೆ; ಹಾಗೂ ಕೇವಲ ಅಂಡಣಗೆಯ ಗೋಗ್ರಹಣದಲ್ಲಿ ವೀರನೊಬ್ಬನ ಮರಣದ ಬಗೆಗೆ ಉಲ್ಲೇಖಿಸುತ್ತದೆ. ಇದರ ಪಕ್ಕದಲ್ಲೆ ಇರುವ ಇನ್ನೊಂದು ವೀರಗಲ್ಲಿನ ಶಾಸನವೂ ಇದೇ ರೀತಿ ಅಸ್ಪಷ್ಟವಾಗಿದೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ವೀರಭದ್ರ ಗುಡಿಯ ಗರ್ಭಗೃಹದ ಮೇಲೆ ಸುಂದರ ಆಧುನಿಕ ಗೋಪುರವಿದೆ. ವಿಗ್ರಹವು ಸುಮಾರು ಐದು ಅಡಿ ಎತ್ತರವಿದ್ದು ನಿಂತಿರುವ ಆಧುನಿಕ ಮೂರ್ತಿಗೆ ನಾಗಫಣಿ ಅಲಂಕಾರವಿದೆ. ಇದರ ಹತ್ತಿರವೇ ಒಂದು ಮಹಾಸತಿ ಕಲ್ಲು ಇದ್ದು ಅದರ ಮೇಲೆ ವಿಜಯನಗರದ ಕಾಲದ ಲಿಪಿಯುಳ್ಳ ಶಾಸನವಿದೆ. ಈ ಗುಡಿಯಿಂದ ಸ್ವಲ್ಪ ದೂರದಲ್ಲಿ ಬಸವಣ್ಣನ ಚಿಕ್ಕಗುಡಿ ಇದೆ. ಇಲ್ಲಿರುವ ಇತರೆ ದೇವಾಲಯಗಳೆಂದರೆ ದ್ಯಾಮವ್ವ, ಹನುಮಂತ ಹಾಗೂ ಮರಿಯಮ್ಮ. ಅಂದಲಗಿಯಲ್ಲಿ ಒಂದು ಮಸೀದಿ ಹಾಗೂ ಒಂದು ದರ್ಗಾ ಇದ್ದು ದರ್ಗಾದಲ್ಲಿ ವಾರ್ಷಿಕ ಉರುಸು ನಡೆಯುತ್ತದೆ.

**ಅಕ್ಕಿ ಆಲೂರು :** ಹಾನಗಲ್ ತಾಲೂಕಿನ ಅಕ್ಕಿಆಲೂರು (ಜನಸಂಖ್ಯೆ : 9,919) ಹಾನಗಲ್‌ನಿಂದ ಆಗ್ನೇಯಕ್ಕೆ ಹತ್ತು ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರವಾಗಿದೆ. ಅಕ್ಕಿ ಬೆಳೆಗೆ ಇದು ಪ್ರಸಿದ್ಧ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೆ, ಲಕ್ಷ್ಮೀದೇವ, ದ್ಯಾಮವ್ವ, ದುರ್ಗವ್ವ, ವೀರಭದ್ರ, ಕಲ್ಲೇಶ್ವರ, ಹನುಮಂತದೇವ, ಬಸವಣ್ಣ (ಗುಡಿ), ಉಳವಿ ಬಸವಣ್ಣ ಇತ್ಯಾದಿ. ಕಲ್ಲೇಶ್ವರ ದೇವಾಲಯದ ಸಮೀಪ ಎರಡು ವೀರಗಲ್ಲುಗಳಿದ್ದು, ಒಂದು ವಿಷ್ಣು ಪೀಠ ಹಾಗೂ ರಾಷ್ಟ್ರಕೂಟರ ಶೈಲಿಯನ್ನು ಹೋಲುವ ತ್ರಿಕೂಟಾಚಲ ದೇವಾಲಯದ ಅವಶೇಷಗಳು ಕಂಡುಬರುತ್ತವೆ. ಹೊರ ಮಂಟಪದಲ್ಲಿ ಸಪ್ತಮಾತೃಕೆಯರ ಪಟ್ಟಿಕೆಯ ಜೋಡು ಶಿಲ್ಪವಿದೆ. ಇಲ್ಲಿ ಒಟ್ಟು ನಾಲ್ಕು ಮಸೀದಿಗಳಿವೆ; ಅವುಗಳೆಂದರೆ, ಕುಂಬಾರ ಓಣಿಯಲ್ಲಿರುವ ಮೆಹಬೂಬಿಯಾ (ಸುನ್ನಿಮಸೀದಿ), ಜಾಮಿಯಾ ಮಸೀದಿ, ಅತ್ತಾರ್ ಓಣಿಯಲ್ಲಿರುವ ಅಹ್ಲೆಹದೀಸ್ ಮಸೀದಿ ಮತ್ತು ಮೇಲಿನ ಕೇರಿಯಲ್ಲಿರುವ ಅಹ್ಲೆಹದೀಸ್ ಮಸಿದಿ. ಊರಿನಲ್ಲಿರುವ ಅಮೀರ್‌ಷಾವಲಿ ದರ್ಗಾ ಇದೆ ಹಾಗೂ ಇಲ್ಲಿ ಶಾಬಾನ್ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಅಣ್ಣಿಗೇರಿ :** ನವಲಗುಂದ ತಾಲೂಕಿನ ಅಣ್ಣಿಗೇರಿಯು (ಜನ ಸಂಖ್ಯೆ : 25,239) ಹುಬ್ಬಳ್ಳಿ, ಗದಗು ರೈಲ್ವೇ (ಧಾರವಾಡದಿಂದ 55 ಕಿ.ಮೀ.) ಮಾರ್ಗದಲ್ಲಿರುವ ಅತ್ಯಂತ ಪ್ರಾಚೀನ ನಗರ ಪ್ರದೇಶವಾಗಿದೆ. ಸುಂದರ ಪ್ರಾಚೀನ ದೇವಾಲಯಗಳನ್ನು ಹೊಂದಿದೆ. ಅಣ್ಣಿಗೇರಿಯು ಕೆಲಕಾಲ ಬೆಳ್ವಲನಾಡಿನ ಕೇಂದ್ರವಾಗಿತ್ತು. ಬಾದಾಮಿ ಚಾಲುಕ್ಯರಿಂದ ಆರಂಭಿಸಿ ವಿಜಯನಗರ, ಆದಿಲ್ ಷಾಹಿಗಳ ಆಡಳಿತದ ಕುರುಹುಗಳು ಇಲ್ಲಿ ಇವೆ. ಚಾಳುಕ್ಯ ನಾಲ್ಕನೇಯ ಸೋಮೇಶ್ವರನ ರಾಜಧಾನಿ (1185-89) ಅಣ್ಣಿಗೇರಿಯೇ ಆಗಿತ್ತು. ಇದು ನಿಪ್ಪಾಣಿಯ ದೇಸಾಯಿಯ ಜಹಗೀರಿಗೂ ಹಲವು ಕಾಲ ಸೇರಿತ್ತು. ಪ್ರಾಚೀನ ಶಾಸನಗಳಲ್ಲಿ ದಕ್ಷಿಣ ವಾರಣಾಸಿ ಎಂದೇ ಉಲ್ಲೇಖಿಸಿರುವ ಈ ಊರಿನಲ್ಲಿ 25 ಕ್ಕೂ ಮೇಲ್ಪಟ್ಟು ಶಿಲಾಶಾಸನಗಳು ದೊರೆತಿವೆ. ಅವುಗಳಲ್ಲಿ ಅತ್ಯಂತ ಮೊದಲಿನದು ಬಾದಾಮಿ ಚಾಲುಕ್ಯ ಅರಸ ಎರಡನೇ ಕೀರ್ತಿವರ್ಮನ ಆಳ್ವಿಕೆಯ ಕಾಲದ್ದು (ಕ್ರಿ.ಶ. 750). ಅದರಲ್ಲಿ ಜೇಬುಳಗೇರಿಯ ಗೌಂಡಕಲಿಯಮ್ಮ ಜೈನ ಬಸದಿ ಮಾಡಿಸಿದ ಹಾಗೂ ಕುಪ್ಪನೆಂಬ ಅಧಿಕಾರಿಯು ಅದರ ಮುಂದೆ ಗೋಸಾಸ ಕಲ್ಲನ್ನು ನಿಲ್ಲಿಸಿದ ವಿವರಗಳು ತಿಳಿಸುತ್ತದೆ. ಅಣ್ಣಿಗೇರಿಯು ಮೊದಲಿನಿಂದಲೂ ವ್ಯಾಪಾರ ಕೇಂದ್ರವೂ ಆಗಿದೆ. ಹತ್ತಿ, ಜೋಳ, ಗೋದಿ, ಮೆಣಸಿಕಾಯಿ, ಕಾಳುಗಳು ಇಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತವೆ. ಎ.ಎಂ. ಅಣ್ಣಿಗೇರಿಯವರು ಹೇಳುವಂತೆ 'ಅಣ್ಣಿಗೇರಿಯಲ್ಲಿ ಮೊಣಕಾಲಮಟ್ಟ ಎಣ್ಣೆ' ಎಂಬ ನಾಣ್ನುಡಿ ಇತ್ತೆಂದು ಹಾಗೂ ಎಣ್ಣೆಗಾಣಗಳು ಊರಲ್ಲಿ ಅಧಿಕವಾಗಿದ್ದವೆಂಬುದು ಅವರ ಅಭಿಪ್ರಾಯವಾಗಿದೆ. ಇಲ್ಲಿ ಹತ್ತಿಬೆಳೆ, ಬಟ್ಟೆ ನೇಯ್ಗೆಯು ಪ್ರಸಿದ್ಧವಾಗಿದ್ದು, ಸಾಲೆಯಸಾಸಿರ್ವರೆಂಬ ನೇಕಾರರ ಶ್ರೇಣಿ ಇಲ್ಲಿ ಇತ್ತು. ಸವಣೂರು ನವಾಬರ ಕಾಲದಲ್ಲಿ ರುಸ್ತುಂಪೇಟೆಯೆಂಬ ಮಾರುಕಟ್ಟೆ ಸ್ಥಾಪಿಸಿದ ಸಂಗತಿ ಶಾಸನವೊಂದರಿಮದ ತಿಳಿದುಬರುತ್ತದೆ. ಪ್ರಾಚೀನ ಶಾಸನಗಳಲ್ಲಿ ಈ ಊರನ್ನು 'ಅಣ್ಣಿಗೇರಿ' 'ಅನ್ಯತಟಾಕ' ಎಂದು ಉಲ್ಲೇಖಗೊಂಡಿದ್ದು, ವಿಜಯನಗರದ ಅರಸು ಅಚ್ಯುತರಾಯನು ಕ್ರಿ.ಶ. 1539ರಲ್ಲಿ ಈ ಊರಿನಲ್ಲಿ ಆನಂದನಿಧಿ ಎಂಬ ವಿಧಿ ನಡೆಸಿದ ಉಲ್ಲೇಖವಿದೆ. ಈ ಪ್ರದೇಶವು ಬಿಜಾಪುರ ಸುಲ್ತಾನರ ಆಳ್ವಿಕೆಗೆ ಕ್ರಿ.ಶ. 1646 ರಲ್ಲಿ ಒಳಪಟ್ಟಿದ್ದು ರಣದುಲ್ಲಾಖಾನನ ಮಗ ರುಸ್ತುಂ ಜಮಾನನು ಇಲ್ಲಿಯೇ ಹಲವು ಕಾಲ ವಾಸವಾಗಿದ್ದನೆಂದು ಪ್ರತೀತಿಯಿದೆ. ಧೋಂಡಿಯಾವಾಗನು ಕರ್ನಲ್ ವೆಲ್ಲೆಸ್ಲಿಯ ದಾಳಿಯಿಂದ ತಪ್ಪಿಸಿಕೊಂಡಾಗ ಡಂಬಳದಿಂದ ಅಣ್ಣಿಗೇರಿಗೆ ಬಂದು ಹಲವು ಕಾಲ ತಂಗಿದ್ದ.

ಅಣ್ಣಿಗೇರಿಯ ಹೃದಯವೆಂದರೆ ಇಲ್ಲಿನ ಭವ್ಯ ಅಮೃತೇಶ್ವರ ದೇವಾಲಯ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಸಭಾ ಮಂಟಪ, ಹಾಗೂ ನಂದಿಮಂಟಪವನ್ನು ಹೊಂದಿದ್ದು ಎರಡು ಹಂತದಲ್ಲಿ ನಿರ್ಮಾಣವಾಗಿದೆ. ಈ ಗುಡಿಯನ್ನು ಪ್ರವೇಶಿಸಲು ದಕ್ಷಿಣದಿಂದ ಹಾಗೂ ಪೂರ್ವದಿಂದ ದ್ವಾರಗಳಿದ್ದು ದಕ್ಷಿಣ ದ್ವಾರಕ್ಕೆ ಮುಖಮಂಟಪವಿದೆ. ಈ

ದೇವಾಲಯದ ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ಒಳಗೆ ಸ್ವಯಂಭು ಲಿಂಗವಿದೆ. ಇದರ ಬಾಗಿಲುವಾಡದ ಲಲಾಟದ ಮೇಲ್ಭಾಗದಲ್ಲಿ ಸಪ್ತ ಶಿಖರಗಳ ಕಿರುಮಂಟಪಗಳಿದ್ದು ಒಳಗೆ ಸಮಭಂಗಿಯಲ್ಲಿ ನಿಂತಿರುವ ಸೂರ್ಯನನ್ನು ಕೆತ್ತಿದೆ. ಅಂತರಾಳದ ಬಾಗಿಲುವಾಡವು ಪಂಚ ಶಾಖೆಗಳನ್ನು ಹೊಂದಿದ್ದು ನಿರಾಡಂಬರವಾಗಿದ್ದು ನಡುವೆ ಗಜಲಕ್ಷ್ಮಿಯ ಶಿಲ್ಪವಿದೆ. ಈ ದ್ವಾರದ ಎರಡೂ ಪಕ್ಕದಲ್ಲಿ ಜಾಲಂದ್ರಗಳಿವೆ. ನವರಂಗದ ಮುಖ್ಯದ್ವಾರವು ದೇವಾಲಯದ ಅತ್ಯಾಕರ್ಷಕ ಭಾಗವೆನ್ನಬಹುದು. ಇಂದು ಭಾಗಶಃ ಹಾಳಾಗಿರುವ ಈ ದ್ವಾರಬಂಧವು ಸುಂದರವಾದ ನವಶಾಖಾಲಂಕಾರವನ್ನು ಹೊಂದಿದೆ. ಇಲ್ಲಿನ ಅಲಂಕಾರಿಕ ಚಿಕಣಿಯ ಸೂಕ್ಷ್ಮ ಕೆತ್ತನೆಗಳು ದರ್ಶಕರ ಮನಸ್ಸನ್ನು ಸೂರೆಗೊಳ್ಳುತ್ತದೆ. ಈ ದೇವಾಲಯದ ಮೂಲ ಕಟ್ಟಡಕ್ಕೆ ನಂತರದ ಸೇರ್ಪಡೆಯಾಗಿರಬಹುದಾದ ವಿಶಾಲ ಸಭಾಮಂಟಪವು ಮೂರು ದಿಕ್ಕುಗಳಲ್ಲೂ ಪ್ರವೇಶ ದ್ವಾರಗಳನ್ನು ಹೊಂದಿದೆ. ಇದರ ಎಲ್ಲಾ ಬಾಗಿಲುವಾಡಗಳೂ ಆಕರ್ಷಕ ಕೆತ್ತನೆಗಳನ್ನು ಹೊಂದಿವೆ. ನವರಂಗದ ಛಾವಣಿಯಲ್ಲಿ ಆರುದಳದ ಕಮಲದ ಅಲಂಕಾರವಿದ್ದರೆ ಸಭಾಮಂಟಪದ ಛಾವಣಿಯಲ್ಲಿ ವೃತ್ತಾಕಾರವಾದ ಕಮಲದಲ್ಲಿ ಹಲವಾರು ದಳಗಳನ್ನು ಒಳಗೊಳಗೆ ಬಿಡಿಸಲಾಗಿದೆ. ದೇವಾಲಯದ ಹೊರಭಿತ್ತಿಯ ಅಲಂಕಾರಿಕ ಕಿರು ಸ್ತಂಭಗಳು, ಕಿರುಶಿಖರ ಮಾದರಿಗಳು ಹಾಗೂ ದೇವದೇವತೆಗಳ ಸುಂದರ ಉಬ್ಬು ಶಿಲ್ಪಗಳಿವೆ. ಉಮಾಮಹೇಶ್ವರ, ನಟರಾಜ, ನೃತ್ಯ ಗಣಪತಿಯ ಶಿಲ್ಪಗಳು ಇಲ್ಲಿ ಉಲ್ಲೇಖಾರ್ಹವಾಗಿವೆ. ಹಲವಾರು ನರ್ತಕಿಯರು, ದರ್ಪಣ ಸುಂದರಿ ಹಾಗೂ ಸಂಗೀತ ವಾದಕರುಗಳ ಶಿಲ್ಪಗಳೂ ಗಮನಾರ್ಹವಾಗಿವೆ. ನವರಂಗದ ಮೂಲೆಯಲ್ಲಿ ಗೋಡೆಯಲ್ಲಿ ಕಟ್ಟಿರುವ ಶಿಲ್ಪಾವಶೇಷಗಳಿವೆ. ಅವುಗಳಲ್ಲಿ ಸುಮಾರು ನಾಲ್ಕು ಅಡಿ ಎತ್ತರವಿರುವ ಆಸೀನ ಗಣಪತಿಯ ಶಿಲ್ಪ ಆಕರ್ಷಕವಾಗಿದೆ. ಈ ದೇವಾಲಯದ ಗರ್ಭಗುಡಿಯ ಮೇಲ್ಭಾಗದಲ್ಲಿರುವ ಕದಂಬನಾಗರ ಶೈಲಿಯ ಶಿಖರದಲ್ಲಿ ಶೈವ ಪುರಾಣವನ್ನು ಪ್ರತಿನಿಧಿಸುವ ಅನೇಕ ಆಕರ್ಷಕ ಶಿಲಾಮೂರ್ತಿಗಳಿವೆ. ಶಿಖರದ ಮುಂಭಾಗದ ಕೀರ್ತಿಮುಖದಲ್ಲಿ ಮೊದಲು ಹೊಯ್ಸಳಲಾಂಛನವಿತ್ತೆಂದು ವ್ಯಕ್ತವಾಗುತ್ತದೆ. ಏಕೆಂದರೆ, ಮುರಿದುಬಿದ್ದಿರುವ ಸಿಂಹವು ಇತ್ತೀಚಿನವರೆಗೂ ದೇವಾಲಯದ ಆವರಣದಲ್ಲಿತ್ತೆಂದು ಎ.ಎಂ. ಅಣ್ಣಿಗೇರಿಯವರು ಹೇಳಿರುತ್ತಾರೆ. ಕ್ರಿ.ಶ. 1202ರ ಶಾಸನ ಇಮ್ಮಡಿ ಬಲ್ಲಾಳನ ದಂಡನಾಯಕ ಬಸವನೆಂಬುವನು ಅಮೃತೇಶ್ವರ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತಾ, ಖ್ಯಾತ ಹೊಯ್ಸಳ ಅಮೃತೇಶ ದಂಡನಾಯಕನನ್ನು ಉಲ್ಲೇಖಿಸುತ್ತದೆ. ಅಮೃತೇಶ್ವರ ದೇವಾಲಯದ ಮಂಟಪದಲ್ಲಿರುವ ಶಾಸನವು ಅಸ್ಪಷ್ಟವಾಗಿದ್ದು ಕ್ರಿ.ಶ. 12ನೇ ಶತಮಾನದ ಲಿಪಿಯಾಗಿದ್ದು ರಾಜಧಾನಿ ಅಣ್ಣಿಗೇರಿಯ ಅಮೃತೇಶ್ವರ ದೇವರ ದೇವ ಪುತ್ರಕನಾದ ನಾಕಿಮಯ್ಯನಿಂದ ವಿನಾಯಕ ವಿಗ್ರಹವು ನಿರ್ಮಾಣವಾಯಿತೆಂದು ತಿಳಿಸುತ್ತದೆ. ಇಲ್ಲಿರುವ ಹಲವಾರು ಶಾಸನಗಳಲ್ಲಿ ವಿಶಿಷ್ಟವಾದುದೆಂದರೆ ಕಲಚುರಿಯ ಕಾಲದ ಕ್ರಿ.ಶ. .1161ರ ಶಾಸನ. ಇದರಲ್ಲಿ ಶ್ರೀಧರಯ್ಯ ದಂಡನಾಯಕನಿಂದ ಅಮೃತೇಶ್ವರ ದೇವಾಲಯದಲ್ಲಿ ಪುರಾಣವಾಚನಕ್ಕಾಗಿ ಭೂದಾನವನ್ನು ನೀಡಲಾಗಿದೆ. ಊರಲ್ಲಿ ಪಂಚ ಬಸದಿಗಳು ಇದ್ದುವೆಂದು ಒಂದು ಶಾಸನ ಹೇಳಿದೆ.

ಈ ಊರಿನ ಇತರೆ ದೇವಾಲಯಗಳೆಂದರೆ ಬನಶಂಕರಿ, ಪಾವಡಿ ಬಸಪ್ಪ, ಗಚ್ಚಿನ ಬಸಪ್ಪ, ಹಿರೇ ಹನುಮಂತ, ಮೈಲಾರಪುರದ ವೀರಪ್ಪ ಮುಂತಾದವುಗಳು. ಮುನಿಸಿಪಾಲಿಟಿ ಹಿಂಭಾಗದಲ್ಲಿರುವ ಪುರದ ವೀರಭದ್ರ ದೇವಾಲಯವೂ ಚಾಳುಕ್ಯರ ಕಾಲದ ಕಟ್ಟಡವಾಗಿದೆ. ಆದರೆ ಇದು ನಂತರ ಜೀರ್ಣೋದ್ಧಾರವಾಗಿದೆ; ಪೂರ್ವಾಭಿಮುಖವಾಗಿರುವ ಈ ಗುಡಿಯಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಮೂಲತಃ ಹೊಂದಿದ್ದು ಇತ್ತೀಚೆಗೆ ವಿಶಾಲವಾದ ಸಭಾಮಂಟಪವನ್ನು ಇದಕ್ಕೆ ಸೇರಿಸಲಾಗಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರವಿರುವ ವಿಜಯನಗರ ಶೈಲಿಯ ವೀರಭದ್ರಮೂರ್ತಿ ಇದೆ. ಇದರ ಬಾಗಿಲುವಾಡವು ಸರಳ ದ್ವಿಶಾಖೆಯಿಂದ ಅಲಂಕೃತಗೊಂಡಿದೆ. ನವರಂಗದಲ್ಲಿರುವ ನಾಲ್ಕು ಕಂಬಗಳು ಆಕರ್ಷಕವಾಗಿದ್ದು ಈ ಗುಡಿಯ ನಿರ್ಮಾಣವು ಕ್ರಿ.ಶ. 11ನೇ ಶತಮಾನದ್ದೆಂದು ಊಹಿಸಬಹುದಾಗಿದೆ. ಕದಂಬನಾಗರ ಶಿಖರವನ್ನು ಹೊಂದಿರುವ ಈ ಗುಡಿಯ ಹೊರ ಭಿತ್ತಿಯ ತೊಲೆ ಭಾಗದಲ್ಲಿ ವಿಶಿಷ್ಟವಾದ 14 ಮಿಥುನ ಶಿಲ್ಪಗಳು ಕಾಲದ ದೃಷ್ಟಿಯಿಂದ ನಂತರದ್ದಾದರೂ ಗಮನಿಸಲೇಬೇಕಾದವು. ಊರ ಹೊರಗಿರುವ ಬನಶಂಕರಿ ದೇವಾಲಯವು ಚಾಳುಕ್ಯರ ಕಾಲದ ರಚನೆಯಾಗಿದ್ದು ತ್ರಿಕೂಟಾಚಲವಾಗಿದೆ. ಈ ದೇವಾಲಯವು ಮೂರು ಗರ್ಭಗುಡಿಗಳನ್ನು ಹೊಂದಿದ್ದು ಪ್ರಧಾನ ಗರ್ಭಗೃಹಕ್ಕೆ ಮಾತ್ರ ಅಂತರಾಳವಿದ್ದೂ ಮೂರಕ್ಕೂ ಸೇರಿದಂತೆ ಮಧ್ಯದಲ್ಲಿ ಒಂದೇ ನವರಂಗವಿದೆ. ಪ್ರಧಾನ ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲುವಾಡದ ರಚನೆಯು ಬ್ರಹ್ಮ ಮಹೇಶ್ವರ ಕೆತ್ತನೆಯಿರುವ ಮಕರ ತೋರಣವನ್ನು ಹೊಂದಿದೆ. ಉಳಿದೆರಡು ಗರ್ಭಗೃಹದ ಬಾಗಿಲುವಾಡಗಳ ಲಲಾಟದಲ್ಲಿ ಗಜಲಕ್ಷ್ಮಿಯ ಕೆತ್ತನೆ ಇದ್ದು ಒಂದರಲ್ಲಿ ಬ್ರಹ್ಮನಹಂಸ ಪೀಠವಷ್ಟೇ ಇದೆ ಹಾಗೂ ಇನ್ನೊಂದು ಬರಿದಾಗಿದೆ. ನವರಂಗದ ಕಂಬಗಳು ದುಂಡಾಗಿ ಚಾಳುಕ್ಯ ಶೈಲಿಯಲ್ಲಿದ್ದು ಅತ್ಯಂತ ಆಕರ್ಷಕವಾಗಿವೆ. ಕರ್ನಾಟಕದ ಅತ್ಯಂತ ಪ್ರಾಚೀನದ್ದೆಂದು ಹೇಳಲಾಗುವ ಗೋಸಾಸ ಕಲ್ಲು ಈ ಗುಡಿಯ ಮುಂಭಾಗದಲ್ಲಿದೆ.

ಅಣ್ಣಿಗೇರಿಯ ಶಾಸನಗಳಲ್ಲಿ ಚೇದಿ ಪಂಚಬಸದಿ, ಹೆಮ್ಮಾಡಿ ಬಸದಿಗಳ ಉಲ್ಲೇಖವಿದ್ದರೂ ಇಂದು ಊರಲ್ಲಿರುವುದು ಪಾರ್ಶ್ವನಾಥ ಬಸದಿಯೊಂದೇ. ಎತ್ತರವಾದ ದಿನ್ನೆಯ ಮೇಲೆ ರೈಲು ಬೋಗಿಯಂತೆ ನಿರ್ಮಾಣಗೊಂಡಿರುವ ಈ ಬಸದಿಯು ಇಂದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ಬಸದಿಯು ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ. ಇದರ ಸಭಾ ಮಂಟಪಕ್ಕೆ ಮೂರು ದಿಕ್ಕಿನಿಂದಲೂ ಪ್ರವೇಶದ್ವಾರಗಳಿವೆ. ಗರ್ಭಗೃಹದ ಬಾಗಿಲುವಾಡದ ಮೇಲೆ ಜಿನಬಿಂಬವಿದೆ ಹಾಗೂ ಒಳಗೆ ಪಾರ್ಶ್ವನಾಥನ ಪದ್ಮಾಸೀನ ಮೂರ್ತಿಯಿದೆ. ಈ ಬಸದಿಯಲ್ಲಿ ವೃತ್ತಾಕಾರದ ಅಡ್ಡ ಕೊಯ್ತದ ಚಾಳುಕ್ಯ ಕಂಬಗಳಿವೆ. ಇದರ ಮೂರು ಪ್ರವೇಶ ದ್ವಾರಗಳೂ ಆಕರ್ಷಕವಾದ ಬಾಗಿಲುವಾಡಗಳನ್ನು ಹೊಂದಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶಿಖರವಿದ್ದು ಬಸದಿಯ ಹೊರ ಭಿತ್ತಿಯು ನಿರಾಡಂಬರವಾಗಿದೆ. ಊರಿನಲ್ಲಿರುವ ಹನುಮಂತ ದೇವರ ಗುಡಿಯ ಮುಂಭಾಗದಲ್ಲಿರುವ ಶಾಸನವು ಬಿಜ್ಜಳನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1139) ಶ್ರೀಧರಯ್ಯನೆಂಬ ದಂಡನಾಯಕನು ಧೋರೇಶ್ವರ ದೇವರಗುಡಿಯ ಜೀರ್ಣೋದ್ಧಾರ ಮಾಡುವ ಸಲುವಾಗಿ ನೀಡಿದ ಭೂದಾನವನ್ನು ದಾಖಲಿಸುತ್ತದೆ. ಶಾಸನದಲ್ಲಿ ಉಲ್ಲೇಖವಾಗಿರುವ ಧೋರೇಶ್ವರ ಗುಡಿಯು ಬಹುಶಃ ರಾಷ್ಟ್ರಕೂಟ ಅರಸು ಧ್ರುವನ ನಿರ್ಮಾಣವಿದ್ದಿರಬಹುದು. ಪಾವಡಿ ಬಸಪ್ಪನ ದೇವಾಲಯದ ಎದುರಿಗೆ ಕಲಚುರಿಯ ಸೋವಿದೇವನ ಶಾಸನವಿದ್ದು (ಕ್ರಿ.ಶ.1173), ನಾಗಗಾವುಂಡನೆಂಬ ಅಧಿಕಾರಿಯು ನಾಗೇಶ್ವರ ದೇವಾಲಯವನ್ನು ನಿರ್ಮಿಸಿ ಭೂದಾನವನ್ನು ನೀಡಿದ ಬಗೆಗೆ ತಿಳಿಸುತ್ತದೆ. ಶಾಸನೋಕ್ತ ನಾಗೇಶ್ವರ ಗುಡಿಯು ಇದೇ ಆಗಿದೆ ಎನ್ನಬಹುದು. ಬ್ರಹ್ಮೇಶ್ವರ ದೇವಾಲಯದಲ್ಲಿರುವ ಶಾಸನವು ಯಾದವ ಸಿಂಘಣನಕಾಲದ್ದಾಗಿದ್ದು ರುದ್ರಯ್ಯ, ಚಂದ್ರಯ್ಯರೆಂಬ ಅಧಿಕಾರಿಗಳಿಂದ ಅಮೃತೇಶ್ವರ ದೇವಾಲಯದ ಆವರಣದಲ್ಲಿ ಧರ್ಮೇಶ್ವರ ದೇವಾಲಯದ ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತದೆ. ಅಮೃತೇಶ್ವರ ಗುಡಿಯ ಎಡಭಾಗದ ಕಿರುಗುಡಿ ಇದಾಗಿರಬೇಕೆಂದು ತೋರುತ್ತದೆ. ಊರ ಚಾವಡಿಯ ಹತ್ತಿರವಿಟ್ಟಿರುವ ರಾಷ್ಟ್ರಕೂಟರ ಕಾಲದ ವೀರಗಲ್ಲು ಮತ್ತು ಊರ ಹೊರಗೆ ಪೂರ್ವಕ್ಕಿರುವ ಮಸೂತಿಬಾವಿ ನೋಡತಕ್ಕಂಥ ಅವಶೇಷಗಳಾಗಿವೆ. ಆದಿಕವಿ ಪಂಪನ ತಾಯಿಯ ತವರೂರಾಗಿದ್ದ ಅಣ್ಣಿಗೇರಿಯಲ್ಲೇ ಬಹುಶಃ ಪಂಪನು ಜನಿಸಿರಬೇಕು. ಕವಿಯ ಸ್ಮರಣೆಗಾಗಿ ಇತ್ತೀಚೆಗೆ ಸ್ಥಾಪಿತವಾದ 'ಪಂಪ ಪ್ರತಿಷ್ಠಾನ'ವೆಂಬ ಸಂಸ್ಥೆಯು ಸಕ್ರಿಯವಾಗಿ ದುಡಿಯುತ್ತಿದೆ. ಈ ಭಾಗದ ಶಾಸನಗಳಲ್ಲಿ ಉಲ್ಲೇಖಿತವಾಗಿರುವ 'ಅಣ್ಣಿಗೇರಿಯ ಗಡಿಂಬ' ಎಂಬ ಅಳತೆಗೋಲು 33 ಗೇಣು ಉದ್ದವಿದ್ದು, ಈ ಬಗ್ಗೆ ಊರಲ್ಲಿ ಅದನ್ನು ರೇಖಿಸಿದ್ದರೇ ಎಂದು ಸಂಶೋಧಿಸಬೇಕಾಗಿದೆ. ಶಾಸನತಜ್ಞ ಎ.ಎಂ. ಅಣ್ಣಿಗೇರಿ ಇದೇ ಊರಿನವರು.

**ಅಂತರವಳ್ಳಿ :** ರಾಣೆಬೆನ್ನೂರು ತಾಲೂಕಿನ ಅಂತರವಳ್ಳಿ (ಜನಸಂಖ್ಯೆ : 2,580)ಯು ರಾಣೆಬೆನ್ನೂರಿನಿಂದ ದಕ್ಷಿಣಕ್ಕೆ 13 ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಅನ್ತರವಳ್ಳಿ' 'ಅಂತರವಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಇದು ರಟ್ಟೀಹಳ್ಳಿ ನೂರುಂಬಾಡಕ್ಕೆ ಸೇರಿದ ಗ್ರಾಮವಾಗಿತ್ತು. ಕ್ರಿ.ಶ. 17ನೇ ಶತಮಾನದಲ್ಲಿ ಇದಕ್ಕೆ ಗೌತಮಪುರ ಎಂಬ ಪರ್ಯಾಯ ಹೆಸರಿತ್ತೆಂಬ ಅಂಶ 'ಅಬಲೂರು ಚರಿತ್ರೆ'ಯಿಂದ ಗೊತ್ತಾಗುತ್ತದೆ. ಈ ಊರಲ್ಲಿ ಮೂರು ವೀರಗಲ್ಲು ಶಾಸನಗಳಿದ್ದು ಅವುಗಳಲ್ಲೊಂದು ಮಾಕನೂರ ಅಳಿವಿನಲ್ಲಿ ಮಡಿದ ಬೊಮ್ಮಣ್ಣನ ಬಗ್ಗೆ ಹೇಳಿದರೆ, ಉಳಿದೆರಡು 1234ರಲ್ಲಿ ನೆರೆಗ್ರಾಮಗಳಲ್ಲಿ ಜರುಗಿದ ಅಹಿತಕರ ಘಟನೆಗಳಲ್ಲಿ ಹೋರಾಡಿ ಮಡಿದ ಅಂತರವಳ್ಳಿಯ ಬಡಗಿ ರಾಮೋಜ ಹಾಗೂ ಕುರುಬರ ಬಮ್ಮಗೌಂಡರ ಸ್ಮಾರಕ ಶಿಲ್ಪಗಳಾಗಿವೆ. ಈ ಊರಲ್ಲಿ ಎರಡು ಪ್ರಾಚೀನ ಗುಡಿಗಳಿದ್ದರೂ ಈವರೆಗೆ ಇಲ್ಲಿ ಮೂರು ವೀರಗಲ್ಲುಗಳ ಶಾಸನಗಳಷ್ಟೇ ಲಭಿಸಿವೆ. ಊರ ಬಸ್‌ನಿಲ್ದಾಣದ ಬಳಿ ಕೆರೆಯ ಏರಿಯ ಮೇಲಿರುವ ಈಶ್ವರ ಗುಡಿ ಪೂರ್ವಾಭಿಮುಖವಾಗಿರುವ ತ್ರಿಕೂಟವಾಗಿದೆ. ಮಧ್ಯದ ಗರ್ಭಗೃಹಕ್ಕಷ್ಟೇ ಅಂತರಾಳವಿದ್ದು ಮೂರು ಗರ್ಭಗೃಹಗಳಿಗೆ ಒಂದೇ ನವರಂಗವಿದೆ. ಮುಖಮಂಟಪವು ಹಾಳಾಗಿದೆ. ಗರ್ಭಗೃಹದ ಬಾಗಿಲವಾಡಗಳು ಪಂಚಶಾಖೆಯವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದರೆ, ಅಂತರಾಳದ ಲಲಾಟದಲ್ಲಿ ಸರಸ್ವತಿಯ ಕೆತ್ತನೆಯಿರುವುದೊಂದು ವಿಶೇಷವಾಗಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗ, ನವರಂಗದಲ್ಲಿ ಬೃಹತ್ ಪ್ರಮಾಣದ ನಂದಿ ಇದ್ದು ಉಳಿದೆರಡು ಗರ್ಭಗೃಹಗಳು ಬರಿದಾಗಿವೆ. ನವರಂಗದಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ ಎರಡರಲ್ಲಿ ಸಪ್ತಮಾತೃಕಾ ಹಾಗೂ ನಾಗಬಂಧ ಶಿಲ್ಪಗಳಿದ್ದು ಉಳಿದೆರಡು ಬರಿದಾಗಿವೆ. ನವರಂಗ ನಾಲ್ಕೂ ಕಂಬಗಳು ಚಾಳುಕ್ಯ ಶೈಲಿಯ ವೃತ್ತ ಅಡ್ಡಕೊಯ್ತದವಾಗಿ ನುಣುಪಾಗಿ ಮಿಂಚುತ್ತವೆ. ನವರಂಗದ ನಡುವಣ ಛತ್ತು ಸರಳವಾದ ಕಮಲವನ್ನು ಹೊಂದಿದೆ. ಈ ಗುಡಿಯ ಪರಿಸರದಲ್ಲೇ ಮೇಲೆ ಚರ್ಚಿಸಿರುವ ಎಲ್ಲಾ ವೀರಗಲ್ಲುಗಳಿವೆ. ಗುಡಿ ಶಿಥಿಲಾವಸ್ಥೆಯಲ್ಲಿದೆ. ಊರ ಮೂಲೆಯಲ್ಲಿ ಇರುವ ಮತ್ತೊಂದು ಗುಡಿಯೆಂದರೆ ವೆಂಕಟೇಶ್ವರ ಗುಡಿ ಈ ದೇಗುಲದ ಗರ್ಭಗೃಹ ಹಾಗೂ ತೆರೆದ ಅರ್ಧಮಂಟಪದ ಭಾಗ ಸುಮಾರು ಕ್ರಿ.ಶ.10ನೇಯ ಶತಮಾನದ ರಚನೆಯಾಗಿದ್ದು ವಿಶಾಲವಾದ ತೆರೆದ ಸಭಾಮಂಟಪ ನಂತರದ ಕಾಲದ ಸೇರ್ಪಡೆ ಎಂದೆನಿಸುತ್ತದೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು, ಗಜಲಕ್ಷ್ಮಿಯನ್ನು ಹೊಂದಿದೆ.

ನವರಂಗದ ಬಲಬದಿಯಲ್ಲೊಂದು ಅಂಕಣವನ್ನು ಇತ್ತೀಚೆಗೆ ಗೋಡೆಕಟ್ಟಿ ಗರ್ಭಗೃಹದಂತೆ ಮಾಡಿ ವೆಂಕಟೇಶ್ವರನ ಮೂರ್ತಿಯನ್ನು ಇಟ್ಟಿದ್ದಾರೆ. ಈ ಗುಡಿಯ ಆವರಣದಲ್ಲಿ ಗಣಪತಿ, ಸೂರ್ಯ, ಹಾಗೂ ನಾಗಶಿಲ್ಪಗಳಿವೆ. ಸಭಾಂಗಣವನ್ನು 24 ಕಂಬಗಳು ಉತ್ತರ ದಕ್ಷಿಣವಾಗಿ ಹೊತ್ತು ನಿಂತಿವೆ. ಗುಡಿಯು ತೀರ ಶಿಥಿಲಾವಸ್ಥೆಯಲ್ಲಿದೆ.

ಸುಮಾರು ಕ್ರಿ.ಶ. 1650ರಲ್ಲಿ 'ಅಬ್ಬಲೂರು ಚರಿತ್ರೆ'ಯನ್ನು ರಚಿಸಿದ ಶಾಂತನಿರಂಜನ ಕವಿ ಈ ಗ್ರಾಮದವನು. ಅಬ್ಬಲೂರಿನ ಏಕಾಂತದ ರಾಮಯ್ಯನ ಸಮಕಾಲೀನ ವೀರಶೈವಯತಿ ಮೂರುಜಾವಿದೇವರು ಇಲ್ಲಿಯವರೆಂಬ ಅಭಿಪ್ರಾಯವಿದ್ದು ಇದನ್ನು 'ಅಬ್ಬಲೂರು ಚರಿತೆ'ಯೂ ಪುಷ್ಟೀಕರಿಸುತ್ತದೆ. ಶಾಸನದಲ್ಲಿ ಉಕ್ತವಾಗಿರುವ ಮೂವರು ಮೂರುಜಾವಿದೇವರಲ್ಲಿ 1274 ಕರಡಿಹಳ್ಳಿ ಶಾಸನದಲ್ಲಿನ ಮೂರುಜಾವಿದೇವರೇ ಇವರೆಂದು ಗುರುತಿಸಬಹುದಾಗಿದ್ದು, ಊರ ಹೊರಗೆ ಮೂರು ಜಾವಿದೇವರ ಮಠವಿದ್ದು ಇಲ್ಲಿ ಎರಡೂ ಕೈಯಲ್ಲಿ ದಂಡ ಹಿಡಿದು ನಿಂತಿರುವ ಮೂರು ಜಾವಿದೇವರ ಸುಂದರ ಶಿಲ್ಪವಿದೆ. ಇಂದು ಈ ಮಠವನ್ನು ಅಕ್ಕಸಾಲಿಗ ಪೂಜಾರಿ ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ ಊರಲ್ಲಿ ಹನುಮಂತ, ವೀರಭದ್ರ, ಬೀರೇದೇವರು ದ್ಯಾಮವ್ವ, ಮತ್ತು ಮಾಸ್ತವ್ವನ ಗುಡಿ ಹಾಗೂ ಮಸೀದಿ ಮತ್ತು ದರ್ಗಾ ಇವೆ.

**ಅಂತೂರು** : ಗದಗ ತಾಲೂಕಿನ ಅಂತೂರು (ಜನಸಂಖ್ಯೆ : 2,287) ಗದಗಿನಿಂದ ನೈಋತ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಈ ಊರು ಇತಿಹಾಸ ಪ್ರಸಿದ್ಧ ಬೆಂತೂರಿನ ನೆರೆಗ್ರಾಮವಾಗಿದ್ದು ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿತ್ತು. ಈ ಊರಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲದಿದ್ದರೂ, ಇಲ್ಲಿನ ಸೂರ್ಯ ನಾರಾಯಣ ಗುಡಿಯಿಂದಾಗಿ ಗಮನಾರ್ಹವಾಗಿದೆ. ಕಲ್ಯಾಣದ ಚಾಲುಕ್ಯರ ಕಾಲದ ರಚನೆಯಾಗಿರಬಹುದಾದ ಈ ಗುಡಿಯ ಗರ್ಭಗೃಹ ಮತ್ತು ಅಂತರಾಳ ಭಾಗವಷ್ಟೆ ಉಳಿದಿದ್ದು ಶಿಖರ, ನವರಂಗ ಭಾಗಗಳು ಪೂರ್ಣ ನಾಶವಾಗಿವೆ. ಗರ್ಭಗೃಹದ ಬಾಗಿಲವಾಡ ನಿರಾಡಂಬರ ಪಂಚಶಾಖೆಯನ್ನು ಹೊಂದಿದ್ದರೆ, ಅಂತರಾಳದ ಬಾಗಿಲವಾಡ ಸರಳ ತ್ರಿಶಾಖಾಲಂಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ಐದಡಿ ಎತ್ತರದ ತ್ರಿಭಂಗಿಯ ಸುಂದರ ನಾರಾಯಣನ ಶಿಲ್ಪವಿದ್ದು ಇದು ಶಂಖ, ಚಕ್ರ, ಗದಾ, ಪದ್ಮಧಾರಿಯಾಗಿದ್ದು ಎಡಬಲದಲ್ಲಿ ಶ್ರೀದೇವಿ ಭೂದೇವಿಯರನ್ನು ಹೊಂದಿದೆ. ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಿದ್ದು, ಇದರ ಪೀಠವು ಸಪ್ತಾಶ್ವ, ಸಾರಥಿ ಅರುಣನನ್ನು ಹೊಂದಿರುವ ಸೂರ್ಯನದಾಗಿದೆ. ಸುಮಾರು ಕ್ರಿ.ಶ. 11-12ನೇ ಶತಮಾನದ ಈ ಸುಂದರ ಶಿಲ್ಪವೇ ಇಲ್ಲಿನ ಆಕರ್ಷಣೆಯಾಗಿದೆ. ಊರಲ್ಲಿ ಬಸವಣ್ಣ, ಈಶ್ವರ, ಹನುಮಂತ, ಮೈಲಾರ, ದುರ್ಗಮ್ಮ ಹಾಗೂ ದ್ಯಾಮವ್ವನ ಸಾಧಾರಣ ಕಟ್ಟಡಗಳ ಗುಡಿಗಳಿವೆ. ಊರಲ್ಲಿ ಎರಡು ಮಸೀದಿ ಮತ್ತು ಒಂದು ದರ್ಗಾ ಇದೆ.

**ಅದರಗುಂಚಿ** : ಹುಬ್ಬಳ್ಳಿ ತಾಲೂಕಿನ ಅದರಗುಂಚಿಯು (ಜನಸಂಖ್ಯೆ : 5,309) ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಒಂಬತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿನ ದೊಡ್ಡಪ್ಪನ ಗುಡಿ ಪ್ರಸಿದ್ಧ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಹನುಮಂತನ ಗುಡಿ ಮುಂದಿರುವ ಕ್ರಿ.ಶ. 10ನೇ ಶತಮಾನದ ವೀರಗಲ್ಲಿಂದ, ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಸುಮಾರು 13ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಕಾನೂರಗಣಕ್ಕೆ ಸೇರಿದ ಉಚ್ಚಂಗಿ ಬಸದಿಯ ಹೊಲದ ಬಗ್ಗೆ ಪ್ರಸ್ತಾಪಿಸಿದರೆ, 14ನೇ ಶತಮಾನದ ವೀರಗಲ್ಲು ಶಾಸನ ಯುದ್ಧದಲ್ಲಿ ಮಡಿದ ಗಾವುಂಡನೊಬ್ಬನ ಬಗ್ಗೆ ಪ್ರಸ್ತಾಪಿಸುತ್ತದೆ. ಊರಲ್ಲಿರುವ ದೇವಾಲಯಗಳಲ್ಲಿ, ಊರ ಪ್ರವೇಶದಲ್ಲೇ ಇರುವ ದೊಡ್ಡಪ್ಪನ ಗುಡಿ ಜೈನ ಬಸದಿಯಾಗಿದ್ದರೂ, ಇಂದು ಊರಿನ ಎಲ್ಲಾ ಸಮಾಜದ ಆರಾಧ್ಯ ದೈವವಾಗಿ 'ದೊಡ್ಡಪ್ಪ' ಎಂದು ಪೂಜೆಗೊಳಪಟ್ಟಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಇದು ಸಂಪೂರ್ಣ ನವೀನ ಗುಡಿಯಾಗಿದ್ದು, ಗರ್ಭ ಗೃಹದಲ್ಲಿ ಸುಮಾರು ಎಂಟು ಅಡಿ ಎತ್ತರದ ಪದ್ಮಾಸೀನ ತೀರ್ಥಂಕರ ಮೂರ್ತಿಯ ಬಿಂಬವನ್ನು ಸಿಂಹಪೀಠದ ಮೇಲೆ ಪ್ರತಿಷ್ಠೆಮಾಡಲಾಗಿದ್ದು ಪೀಠದ ಮೇಲೆ ನಾಲ್ಕುಸಾಲಿನ ಅಪ್ರಕಟಿತ ಶಾಸನವಿದ್ದು ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ವಿವರ ನೀಡುತ್ತದೆ. ಈ ಗುಡಿಯ ಅಂತರಾಳದ ಬಾಗಿಲವಾಡ ಕಟ್ಟಿಗೆಯದಾಗಿದ್ದು ಆಕರ್ಷಕ ಕೆತ್ತನೆಯಿಂದಾಗಿ ಗಮನ ಸೆಳೆಯುತ್ತದೆ.

ಇದರ ಜೊತೆಗೆ ಊರಲ್ಲಿ ಕಲ್ಮೇಶ್ವರ, ಬಸವಣ್ಣ, ಹನುಮಂತ, ವೀರಭದ್ರ, ಮೈಲಾರ, ಭರಮಪ್ಪ, ಬೀರದೇವರು, ಈಶ್ವರ, ದ್ಯಾಮವ್ವ, ಉಡಚಮ್ಮ, ಕರಿಯಮ್ಮ ಮತ್ತು ಸಾತಮ್ಮನ ಗುಡಿಗಳಿವೆ. ಊರಲ್ಲಿ ಮೂರು ಮಸೀದಿ ಹಾಗೂ ಒಂದು ದರ್ಗಾ ಇವೆ. ಯುಗಾದಿಯಾದ ಒಂದು ತಿಂಗಳಿಗೆ ಇಲ್ಲಿ ಉರುಸು ನಡೆಯುತ್ತದೆ.

**ಅಬ್ಬಲೂರು** : ಶಾಸನಗಳಲ್ಲಿ ಉಕ್ತವಾಗಿರುವ ಹಿರೇಕೆರೂರು ತಾಲೂಕಿನ ಅಬ್ಬಲೂರು (ಜನಸಂಖ್ಯೆ : 1,543) (ಹಿರೇಕೆರೂರಿನಿಂದ ನಾಲ್ಕು ಕಿ.ಮೀ.) ಪ್ರಾಚೀನ ಕಾಲದಲ್ಲಿ ದೊಡ್ಡ ನಗರವಾಗಿತ್ತೆಂದು ತಿಳಿದುಬರುತ್ತದೆ. ಈ ಸ್ಥಳವು ಪ್ರಾರಂಭದಿಂದಲೂ ಪ್ರಸಿದ್ಧ ಜೈನ ಕೇಂದ್ರವಾಗಿದ್ದು ಕ್ರಿ.ಶ. 12ನೇ ಶತಮಾನದಲ್ಲಿ ಶೈವಧರ್ಮದ ಪ್ರತಿಪಾದಕನಾದ ಏಕಾಂತದ ರಾಮಯ್ಯನು ಆ ಕಾಲದಲ್ಲಿ ನಡೆಸಿದ ಧಾರ್ಮಿಕ ವಾಗ್ವಾದದಲ್ಲಿ ಜೈನರ ಪ್ರಾಬಲ್ಯವನ್ನು ಪ್ರಶ್ನಿಸಿ ತನ್ನ ಶಿರಸ್ಸನ್ನು ಕತ್ತರಿಸಿಕೊಂಡಾಗ ಶಿವನ ವರದಿಂದ ಪುನಃ ಜೀವಿತನಾದನೆಂದು ಪ್ರತೀತಿ ಇದೆ. ಸ್ಥಳೀಯ ಸೋಮೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 1200 ಶಾಸನ ಏಕಾಂತದ ರಾಮಯ್ಯ ಜೈನರೊಂದಿಗೆ ವಾದಕ್ಕೆ ನಿಂತು ಶಿರಸ್ಸು ಪವಾಡ ಮಾಡಿ ಮೆರೆದ ಘಟನೆಯನ್ನು ವಿವರಿಸುತ್ತದೆ. ಹಾಗೂ ಈ ದಾಖಲೆಯಲ್ಲಿ ಇತರ ಶಿವಶರಣರ ಹೆಸರುಗಳೂ ಇವೆ. (ಎಪಿಗ್ರಾಫಿಯಾ ಇಂಡಿಕಾ, 5, ಪು. 237-60). ಅಬ್ಬಲೂರಿನಲ್ಲಿರುವ ಬ್ರಹ್ಮೇಶ್ವರ ಹಾಗೂ ಸೋಮೇಸ್ವರ ದೇವಾಲಯಗಳು ಏಕಾಂತದ ರಾಮಯ್ಯನು ನಡೆಸಿದ ಶಿರಸ್ಸು ಪವಾಡಗಳಿಂದ ಪ್ರಸಿದ್ಧವಾಗಿವೆ. ಬ್ರಹ್ಮೇಶ್ವರ ದೇವಾಲಯವು ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದ್ದು ಸರಳ ಕಟ್ಟಡವಾಗಿದೆ. ಈ ದೇವಾಲಯವು ಪ್ರಾರಂಭದಲ್ಲಿ ಬ್ರಹ್ಮಜಿನಾಲಯವಾಗಿದ್ದು ಏಕಾಂತದ ರಾಮಯ್ಯನ ಕಾಲದಲ್ಲಿ ಜಿನಮೂರ್ತಿಯನ್ನು ಒಡೆದುಹಾಕಿ ಶಿವಲಿಂಗವನ್ನು ಸ್ಥಾಪಿಸಲಾಯಿತೆಂದು ಸೋಮೇಶ್ವರ ದೇವಾಲಯದ ಬಲಭಾಗದ ಗೋಡೆಯಲ್ಲಿರುವ ಶಾಸನವು ಉಲ್ಲೇಖಿಸುತ್ತದೆ. ಬ್ರಹ್ಮೇಶ್ವರ ದೇವಾಲಯದಲ್ಲಿ ಜಿನಬಿಂಬಕ್ಕೆ ಪ್ರತಿಯಾಗಿ ತಲೆಯನ್ನು ಪಣವಾಗಿಟ್ಟ ತಲೆಯನ್ನು ಕತ್ತರಿಸಿಕೊಂಡು ಮತ್ತೆ ಪಡೆದಾಗ ಸ್ಥಳೀಯ ಅಧಿಕಾರಿ ಸಂಕಗಾವುಂಡನು ಬಸದಿಯನ್ನು ಒಡೆಯಲು ಬಿಡದೆ ಸೈನ್ಯವನ್ನೊಡ್ಡಿದಾಗ ಕಾದು ಗೆದ್ದು ಲಿಂಗ ಪ್ರತಿಷ್ಠಾಪನೆ ಮಾಡಿದುದನ್ನು ಪ್ರತಿನಿಧಿಸುವ ಶಿಲ್ಪಾವಳಿಯು ಪ್ರಮುಖವಾದುದು. ಏಕಾಂತದ ರಾಮಯ್ಯನು ಮೊದಲು ಇದ್ದ ಜಿನಾಲಯದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿ ಶಿವಾಲಯವನ್ನು ನಿರ್ಮಿಸಿದನೆಂದು ದಾಖಲೆಗಳು ವಿವರಿಸುತ್ತವೆ.

ಅಬ್ಬಲೂರಿನ ಸೋಮೇಶ್ವರ ದೇವಾಲಯವು ತ್ರಿಕೂಟಚಾಲವಾಗಿದ್ದು ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ಕಟ್ಟಡವಾಗಿದೆ. ಮೂಲಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗದ ಭಾಗಗಳು ಏಕಾಂತದ ರಾಮಯ್ಯನು ನಿರ್ಮಿಸಿದನೆಂದು ಪ್ರತೀತಿ ಇದೆ. ದೇವಾಲಯದ ಉಳಿದ ಎರಡು ಗರ್ಭಗೃಹಗಳು ಹಾಗೂ ಇತರ ಭಾಗಗಳನ್ನು ನಂತರ ಸೇರಿಸಿರಬೇಕೆಂದು ಹೇಳಲಾಗುತ್ತದೆ. ಮೂರು ಗರ್ಭಗೃಹಗಳ ಮುಂಭಾಗದಲ್ಲಿ ಪ್ರತ್ಯೇಕ ಅರ್ಧಮಂಟಪಗಳಿದ್ದು ಮಧ್ಯದಲ್ಲಿ ವಿಶಾಲವಾದ ನವರಂಗವಿದೆ ಹಾಗೂ ಮುಂಭಾಗದಲ್ಲಿ ದೊಡ್ಡದಾದ ತೆರೆದ ಮುಖ ಮಂಟಪವಿದೆ. ಮುಖ ಮಂಟಪದ ಸುತ್ತಲೂ ಕಕ್ಷಾಸನವಿದೆ. ಈ ದೇವಾಲಯದ ಗೋಡೆಗಳ ಮೇಲೆ ಏಕಾಂತದ ರಾಮಯ್ಯನು ನಡೆಸಿದ ಪವಾಡಗಳನ್ನು ಶಿಲ್ಪಿಸಿರುವುದಲ್ಲದೆ ಅವುಗಳ ಕೆಳಗೆ ವಿವರಗಳನ್ನು ಕೊಡುವ ಶಾಸನಗಳಿವೆ. ಪ್ರವೇಶದ್ವಾರದ ಬಲಭಾಗದಲ್ಲಿ ಸಂಕಗಾವುಂಡನು ಏಕಾಂತದ ರಾಮಯ್ಯನಿಗೆ ಓಲೆ ಕೊಡುತ್ತಿರುವ ಶಿಲ್ಪ ಹಾಗೂ ಎಡಭಾಗದಲ್ಲಿ ರಾಮಯ್ಯನು ಜಿನಬಿಂಬವನ್ನೊಡೆದು ಶಿವಲಿಂಗವನ್ನು ಪ್ರತಿಷ್ಠೆ ಮಾಡುತ್ತಿರುವ ಶಿಲ್ಪಗಳು ಪ್ರಮುಖವಾದುವೆಂದು ಹೇಳಬಹುದು. ಇವುಗಳೊಂದಿಗೆ ಶಿವನಿಗೆ ಜೇಡರ ದಾಸಿಮಯ್ಯನು ವಸ್ತ್ರವನ್ನು ಕೊಡುತ್ತಿರುವ ಶಿಲ್ಪ, ಸಿರಿಯಾಳಸೆಟ್ಟಿ, ಶಿವ ಕುಂಬಾರ ಗುಂಡಯ್ಯನ ಮುಂದೆ ನಾಟ್ಯಮಾಡಿದ ಶಿಲ್ಪಗಳಿದ್ದು ಇವು ಶಿವಶರಣರ ವಿಷಯವಾಗಿ ದೊರೆತಿರುವ ಅತ್ಯಂತ ಪ್ರಾಚೀನ ಶಿಲ್ಪಗಳು ಹಾಗು ಶಾಸನಾಧಾರಗಳೆಂದು ಹೇಳಬಹುದಾಗಿದೆ. ಕ್ರಿ.ಶ. 16ನೇ ಶತಮಾನದಲ್ಲಿ ಜೀವಿಸಿದ್ದ ಸರ್ವಜ್ಞನು ಅಬಲೂರಿನಲ್ಲಿ ನೆಲೆಸಿದ್ದನೆಂದು ಪ್ರತೀತಿಯಿದೆ. ಮೂಲವಾಗಿ ಅಬ್ಬಲೂರು ಬಸವಣ್ಣನೆಂದು ಖ್ಯಾತಿ ಪಡೆದಿರುವ ಬ್ರಹ್ಮೇಶ್ವರ ದೇವಾಲಯದ ನಂದಿ ವಿಗ್ರಹವು ಅತ್ಯಂತ ಭವ್ಯವಾಗಿದೆ. ಪ್ರತಿವರ್ಷ ಬಸವಣ್ಣನ ಹೆಸರಿನಲ್ಲಿ ಭಾರಿ ಜಾತ್ರೆಯು ಜರಗುತ್ತದೆ. ಈ ಬಸವಣ್ಣನ ಹಿಂಬದಿಯಲ್ಲಿ ಸೂರ್ಯನ ಭವ್ಯವಾದ ಹಾಗೂ ಚೆಲುವಾದ ದ್ವಿಬಾಹು ವಿಗ್ರಹವಿದೆ. ಈ ಬ್ರಹ್ಮೇಶ್ವರ ದೇವಾಲಯದ ಪಕ್ಕದಲ್ಲಿಯೇ ಸರಸ್ವತಿಯ ದೇವಾಲಯವಿದೆ.

**ಅಬ್ಬಿಗೇರಿ** : ರೋಣ ತಾಲೂಕಿನ ಅಬ್ಬಿಗೇರಿ (ಜನಸಂಖ್ಯೆ : 7,525)ಯು ರೋಣದಿಂದ ದಕ್ಷಿಣಕ್ಕೆ ಸುಮಾರು 12 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಅಬ್ಬೆಯಗೆರೆ'. 'ಅಪ್ಪೆಗೇರಿ' ಎಂದು ಉಲ್ಲೇಖಿತಗೊಂಡಿದ್ದು, ಬೆಳ್ವೊಲ-300 ಒಳಗಣ ನರೇಗಲ್-12ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಹನ್ನೊಂದು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಕ್ರಿ.ಶ. 1113ರ ಶಾಸನ ಅತ್ಯಂತ ಹಳೆಯದಾಗಿದ್ದು ಮಹಾ ಮಂಡಲೇಶ್ವರ ಸಿಂಧ ಆಚರಸನು ಅಬ್ಬೆಯಗೆರೆಯ ದೇವಿಂಗೆರೆಗೆ 24ಮತ್ತರು ಭೂದಾನವನ್ನು ಅವನ ರಾಣಿ ದೇವುಲದೇವಿ ಚನ್ನಕೇಶವ ದೇವರಿಗೆ ಬೆಟ್ಟ, ಹೂತೋಟ, ಗಾಣದ ಮನೆಯನ್ನು ತಿಳಿಸುತ್ತದೆ. ಸುಟ್ಟ ಬಸಪ್ಪನ ಗುಡಿ ಮುಂದಿರುವ ಕ್ರಿ.ಶ. 1125ರ ಶಾಸನ ಸೋಮೇಶ್ವರ ದೇವರಿಗೆ ನೀಡಿದ ಭೂದಾನದ ಬಗ್ಗೆ ತಿಳಿಸಿದರೆ, 1174ರ ಶಾಸನ ಮಾಣಿಕೇಶ್ವರ, ಕುಪ್ಪೇಶ್ವರ ದೇವರಿಗೆ ಅಬ್ಬಿಗೇರಿಯ ಅರವತ್ತೊಕ್ಕಲು ನೀಡಿದ ದಾನವನ್ನು ದಾಖಲಿಸಿದೆ. ಕ್ರಿ.ಶ. 1186ರ ಮತ್ತೊಂದು ಶಾಸನ ಇದೇ

ಕುಪ್ಪೇಶ್ವರ ದೇವರಿಗೆ ಆರನೇಯ ವಿಕ್ರಮಾದಿತ್ಯ ದಾನ ಮಾಡಿದ ವಿಷಯ ತಿಳಿಸುತ್ತದೆ. ಕಲಚೂರಿ ಬಿಜ್ಜಳನ ಕಾಲದ ಶಾಸನ ಇಲ್ಲಿನ ಮೂಲಸ್ಥಾನ ದೇವರಿಗೆ ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1541ರ ಶಾಸನ ಹೊನ್ನಾಪುರದ ಯುದ್ಧದಲ್ಲಿ ಮಡಿದ ತಿಮ್ಮಣ್ಣನ ಸ್ಮಾರಕವಾದರೆ, ಸುಮಾರು ಕ್ರಿ.ಶ. 17ನೇ ಶತಮಾನದ ಶಾಸನವೊಂದು ಧರ್ಮ ವಿತಕ್ಕೆಂದು ಬರಿಗೆಯರ ಮಾದೇವನಾಯಕರು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ.

ಇಲ್ಲಿನ ಹೆಚ್ಚಿನ ಶಾಸನಗಳು ತ್ರುಟಿತಗೊಂಡಿದ್ದರೂ, ಹಲವಾರು ದೇವಾಲಯಗಳನ್ನು ಹೆಸರಿಸುತ್ತಿದ್ದರೂ ಹೆಚ್ಚಿನ ಗುಡಿಗಳು ಪೂರ್ಣ ಶಿಥಿಲಗೊಂಡಿದ್ದು, ಪುನರ್ ಜೀರ್ಣೋದ್ಧಾರಗೊಂಡಿವೆ. ಈಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳಿವೆ. ಉಳಿದಂತೆ ಇದು ಜೀರ್ಣೋದ್ಧಾರಗೊಂಡಿದೆ.

ಊರ ಹೊರಗಿರುವ ಜ್ಯೋತಿರ್ಲಿಂಗ ಗುಡಿಯು ಕಲ್ಯಾಣದ ಚಾಲುಕ್ಯರ ಕಾಲದ ಗುಡಿಯಾಗಿದ್ದು ಶಿಥಿಲಗೊಂಡಿದೆ. ಸುಟ್ಟ ಬಸಪ್ಪನ ಗುಡಿಯೂ ಪ್ರಾಚೀನ ಗುಡಿಯಾದರೂ ಇಂದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಉಡಚವ್ವನ ಗುಡಿ ಬಳಿ 10ನೇ ಶತಮಾನದ ಮುಕ್ಕಾದ ಚಾಮುಂಡಿಯ ಶಿಲ್ಪವಿದೆ. ಶವಾಸನದ ಮೇಲೆ ಲಲಿತಾಸನದಲ್ಲಿ ಕುಳಿತ ದೇವಿಯ ಕೆತ್ತನೆ ಆಕರ್ಷಕವಾಗಿದೆ. ಊರ ಉದ್ದಗಲಕ್ಕೂ ವೀರಗಲ್ಲುಗಳು ಭಗ್ನಾವಶೇಷಗಳೂ ಹರಡಿಕೊಂಡಿವೆ. ಊರಲ್ಲಿ, ಹನುಮಂತ, ಬಸವಣ್ಣ, ವೀರಭದ್ರ, ದುರ್ಗಮ್ಮ ಕಾಳಿಕಾಂಬ, ದ್ಯಾಮವ್ವ ಮತ್ತು ಕರಿಯಮ್ಮನ ಗುಡಿಗಳಿವೆ. ಊರಿನಲ್ಲಿ ಮಸೀದಿ, ಮತ್ತು ದರ್ಗಾಗಳಿವೆ. ಅಬ್ಬಿಗೇರಿಯ ನಾಟಕ ಕಂಪನಿಯು ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಸಿದ್ಧವಾಗಿತ್ತು.

**ಅಮರಗೋಳ** : ಹುಬ್ಬಳ್ಳಿ ತಾಲೂಕಿನ ಅಮರಗೋಳವು ಹುಬ್ಬಳ್ಳಿಯಿಂದ ವಾಯುವ್ಯಕ್ಕೆ 12 ಕಿ.ಮೀ. ದೂರದಲ್ಲಿ ಹುಬ್ಬಳ್ಳಿ ಧಾರವಾಡ ರಸ್ತೆಯಲ್ಲಿರುವ ಈ ಊರಿಗೆ ರೈಲ್ವೆ ನಿಲ್ದಾಣವಿದೆ. ಪ್ರಸ್ತುತ ಈ ಊರು ಹುಬ್ಬಳ್ಳಿ ನಗರದ ವ್ಯಾಪ್ತಿಗೊಳಪಟ್ಟಿದ್ದು ನವನಗರವೆಂದೇ ಕರೆಯಲ್ಪಡುತ್ತದೆ. ಪ್ರಾಚೀನ ಶಾಸನಗಳಲ್ಲಿ 'ಅಂಬರಗೋಳ' ಎಂದು ಉಲ್ಲೇಖಿತಗೊಂಡಿರುವ ಇದು ಹಿಂದೆ ಹಲಸಿಗೆ ನಾಡಿಗೆ ಸೇರಿದ ಉಣಕಲ್ಲು-30ರ ಕಂಪಣಕ್ಕೆ ಸೇರಿತ್ತು. ಇಲ್ಲಿನ ಒಂದೇ ಒಂದು ಶಾಸನ ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ (ಕ್ರಿ.ಶ.1120) ಸಾಧೋರೆ ಜಕ್ಕರಸನು ಅಂಬರಗೋಳದಲ್ಲಿ ಕೇಶವ ಹಾಗೂ ಭೈರವ ದೇವರ ಪ್ರತಿಷ್ಠೆಮಾಡಿ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಈ ಭಾಗದ ಇತರೆ ಕೆಲವು ಶಾಸನಗಳಲ್ಲಿ ಅಮರಗೋಳದ ಉಲ್ಲೇಖ ಕಂಡುಬಂದರೂ ಹೆಚ್ಚಿನ ವಿವರ ಲಭ್ಯವಿಲ್ಲ. ಮೇಲೆ ಹೇಳಿದ ಶಾಸನವಿರುವ ಬನಶಂಕರಿ ದೇವಾಲಯವು ಚಾಳುಕ್ಯ ಶೈಲಿಯ ದ್ವಿಕೂಟಾಚಲವಾಗಿದ್ದು, ಶಾಸನೋಕ್ತ ದೇವಾಲಯವು ಇದೇ ಆಗಿದೆ. ಕೇಂದ್ರ ಪುರಾತತ್ವ ಇಲಾಖೆ ಸಂರಕ್ಷಿತ ಸ್ಮಾರಕವಾಗಿರುವ ಈ ದೇವಾಲಯವು ಎರಡು ಗರ್ಭಗೃಹಗಳನ್ನು ಹೊಂದಿದ್ದು ಒಂದು ಪೂರ್ವಾಭಿಮುಖವಾಗಿದ್ದರೆ, ಮತ್ತೊಂದು ದಕ್ಷಿಣಾಭಿಮುಖವಾಗಿದ್ದು, ಎರಡಕ್ಕೂ ತೆರೆದ ಅರ್ಧಮಂಟಪವಿದ್ದು ಒಂದೇ ನವರಂಗವಿದೆ. ನವರಂಗಕ್ಕೆ ಎರಡು ಪ್ರವೇಶದ್ವಾರಗಳಿಗೆ ಹಿಂದೆ ಈ ಗರ್ಭಗೃಹಗಳಲ್ಲಿ ಕೇಶವ, ಭೈರವ ಮೂರ್ತಿಗಳಿದ್ದಿರಬೇಕು. ಆದುದರಿಂದ ಒಂದರಲ್ಲಿ ಬನಶಂಕರಿಯ ಮೂರ್ತಿಯಿದ್ದು ಮತ್ತೊಂದು ಬರಿದಾಗಿದೆ. ಈ ದೇವಾಲಯದ ಗರ್ಭಗೃಹಗಳ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು ಲಲಾಟಗಳಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಹೊಂದಿವೆ. ಲಲಾಟದ ಮೇಲ್ಭಾಗದ ತೊಲೆಯಲ್ಲಿ ಪಂಚಶಿಖರ, ಗಣಪತಿ, ಬ್ರಹ್ಮ ವಿಷ್ಣು ಮಹೇಶ್ವರ ಮತ್ತು ದೇವಿಯರ ಅಲಂಕಾರಿಕ ಕೆತ್ತನೆಯಿದ್ದು ಚಿತ್ತಾಕರ್ಷಕವಾಗಿವೆ. ದ್ವಾರಬಂಧದ ಕೆಳಭಾಗದಲ್ಲಿ ಚೌರಿಧಾರಿಗಳು ಮತ್ತು ರತಿ ಮನ್ಮಥರ ಕೆತ್ತನೆಯಿದೆ. ನವರಂಗದಲ್ಲಿ ಒಟ್ಟು 16 ಕಂಬಗಳಿದ್ದು ಮಧ್ಯದಲ್ಲಿರುವ ನಾಲ್ಕು ಕಂಬಗಳು ವೃತ್ತ ಅಡ್ಡಕೊಯ್ತದ ಚಾಳುಕ್ಯ ಸ್ತಂಭಗಳಾಗಿವೆ. ಇವುಗಳ ಮೇಲೆ ಲಕ್ಷ್ಮೀ, ಭೈರವ, ನಟರಾಜ, ಬ್ರಹ್ಮ ಶಿ ಸೂರ್ಯ, ಸರಸ್ವತಿ, ಮನ್ಮಥ, ಕೇಶವ, ಭೂವರಾಹ ನರಸಿಂಹ, ಉಗ್ರನರಸಿಂಹ, ಚಾಮುಂಡಿ ಮತ್ತು ಗಣಪತಿಯ ಸುಂದರವಾದ ಶಿಲ್ಪ ಕೆತ್ತನೆಗಳಿವೆ. ಈ ಶಿಲ್ಪಾಲಂಕೃತ ಸ್ತಂಭಗಳೇ ಈ ದೇವಾಲಯದ ಮುಖ್ಯ ಆಕರ್ಷಣೆಯಾಗಿದೆ. ಈ ದೇವಾಲಯದ ಹೊರ ಭಿತ್ತಿಗಳಲ್ಲಿ ಅಲಂಕಾರಿಕ ಗೋಡೆಗಂಬಗಳು, ಔತ್ತರೇಯ ದ್ರಾವಿಡ ಹಾಗೂ ವೇಸರ ಶೈಲಿಯ ಕಿರು ಶಿಖರ ಮಾದರಿಗಳು, ದೇವಕೋಷ್ಠಗಳಲ್ಲಿ ಕೀರ್ತಿಮುಖವುಳ್ಳ ಸೂರ್ಯ, ಕೇಶವ, ನಟರಾಜ ಮತ್ತಿತರ ಸುಂದರ ಬಿಡಿ ಶಿಲ್ಪಗಳಿವೆ. ಗರ್ಭಗೃಹದ ಮೇಲಿರುವ ಕದಂಬನಾಗರ ಶಿಖರವು ಕುಸಿದಿದೆ. ಅಮರಗೋಳದ ಇತರ ದೇವಾಲಯಗಳೆಂದರೆ ವೀರಭದ್ರ, ಹನುಮಂತ ಕಲ್ಮೇಶ್ವರ, ಶಂಕರಲಿಂಗ, ಬಸವಣ್ಣ, ಬೀರಪ್ಪ, ದ್ಯಾಮವ್ವ, ದುರ್ಗವ್ವ ಮತ್ತು ಕರಿಯಮ್ಮ. ಊರಲ್ಲಿ ಮೂರು ಮಸೀದಿಗಳು ಹಾಗೂ ಒಂದು ದರ್ಗಾಯಿದೆ. ಕರ್ನಾಟಕ ಕ್ಯಾನ್ಸರ್ ಥೆರಪಿ ಪರಿಶೋಧನಾ ಸಂಸ್ಥೆಯು ಈ ಊರಿನಲ್ಲಿ ಕಾರ್ಯತತ್ಪರವಾಗಿದೆ.

**ಅಮ್ಮಿನಬಾವಿ :** ಧಾರವಾಡ ತಾಲೂಕಿನ ಅಮ್ಮಿನಬಾವಿಯು (ಜನಸಂಖ್ಯೆ : 9,830) ಧಾರವಾಡದಿಂದ ಈಶಾನ್ಯಕ್ಕೆ ಒಂಭತ್ತು ಕಿ.ಮೀ. ದೂರದಲ್ಲಿದೆ. ಸೌಂದತ್ತಿ ರಸ್ತೆಯಲ್ಲಿರುವ ಈ ಸ್ಥಳವು ಅನೇಕ ಐತಿಹಾಸಿಕ ಅವಶೇಷಗಳಿಂದಾಗಿ ಪ್ರಸಿದ್ಧಿಪಡೆದಿದೆ. ಪ್ರಾಚೀನ ಶಾಸನಗಳಲ್ಲಿ ಅಮ್ಮಯ್ಯನಬಾವಿ ಎಂದೇ ಉಲ್ಲೇಖಗೊಂಡಿರುವ ಈ ಊರಿನಿಂದ ಈವರೆಗೆ ಹತ್ತು ಶಿಲಾ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕ್ರಿ.ಶ. 566ರ ಶಾಸನವು ಲಭ್ಯವಿರುವ ಅತ್ಯಂತ ಪ್ರಾಚೀನ ಶಾಸನವಾಗಿದ್ದು ಒಂದನೇ ಪುಲಕೇಶಿಯ ಆಳ್ವಿಕೆಯಲ್ಲಿ ಅಮ್ಮಯ್ಯನ ಬಾವಿಯ ಕಲಿದೇವರಿಗೆ ದಾನ ಬಿಟ್ಟ ವಿಷಯವನ್ನು ಹೇಳುತ್ತಾ, ಹಲಸಿಗೆ ನಾಡಿನ ಕುಂದೂರು-500ಕ್ಕೆ ಈ ಸ್ಥಳವು ಸೇರಿತ್ತೆಂಬ ವಿವರವನ್ನು ನೀಡುತ್ತದೆ. ಗೋವೆಯ ಕದಂಬ ಅರಸ ಜಯಕೇಶಿದೇವನ ಆಳ್ವಿಕೆಯಲ್ಲಿ (ಕ್ರಿ.ಶ. 1072) ಕುಂದೂರು-500ಕ್ಕೆ ಸೇರಿದ ಅಮ್ಮಯ್ಯನ ಬಾವಿಯ 400ಮಹಾಜನರ ಬಗೆಗೆ ಪ್ರಸ್ತಾಪಿಸುತ್ತಾ ಊರಲ್ಲಿ ನಿರ್ಮಾಣಗೊಂಡ ಶಿವದೇವಾಲಯಕ್ಕೆ ಸಾಲೆ-1000 (ನೇಕಾರರು) ಮತ್ತಿತರರು ನೀಡಿದ ವಿವರವನ್ನು ತಿಳಿಸುತ್ತದೆ. ಕ್ರಿ.ಶ. 1112ರ ಮತ್ತೊಂದು ಶಾಸನದಲ್ಲಿ ಆದಿತ್ಯ ದೇವಾಲಯಕ್ಕೆ ಸೇರಿದ ಛತ್ರಕ್ಕೆ ಉಣಕಲ್ಲ ಚಂದಿಕಬ್ಬೆ ದಾನನೀಡಿದ ಅಂಶವನ್ನು ತಿಳಿಸುತ್ತದೆ. ಇದೇ ರೀತಿ ಕ್ರಿ.ಶ. 1146ರ ಇನ್ನೊಂದು ಶಾಸನದಲ್ಲಿ ಬಮ್ಮಣಯ್ಯನು ಸ್ವಯಂಭೂ ದೇವರಿಗೆ ದಾನ ಬಿಟ್ಟ ವಿವರಗಳನ್ನು ತಿಳಿಸುತ್ತದೆ. ಇಲ್ಲೇ ಇರುವ ಕ್ರಿ.ಶ. 1163ರ ಶಾಸನದಲ್ಲಿ ಅಮ್ಮಿನಬಾವಿಯ ಮಲ್ಲಿಕಾರ್ಜುನ ದೇವರಿಗೆ ಮತ್ತು ಎರಡು ಮಠಕ್ಕೆ ಬೆಳವಾಡಿಗೇರಿಯ ನೂರ್ವರ ಸನ್ನಿಧಿಯಲ್ಲಿ ಬೊಪ್ಪನು ಪಾರ್ವಗೋಲಲ್ಲಿ ಮೂರು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಜೈನ ಬಸದಿಯ ವರ್ಧಮಾನ ಪೀಠದ ಮೇಲಿರುವ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನವು ಚಂದ್ರನಾಥ ತೀರ್ಥಂಕರ ವಿಗ್ರಹವನ್ನು ಬೊಮ್ಮಿಸೆಟ್ಟಿ ಎಂಬ ಅಧಿಕಾರಿಯು ಮಾಡಿಸಿದನೆಂದು ತಿಳಿಸುತ್ತದೆ. ಇಲ್ಲಿನ ಎರಡು ಲಿಖಿತವೀರಗಲ್ಲುಗಳು ಮಡಿವಾಳ ಮಾಚಿದೇವನು ವಿಗ್ರಹ ಪ್ರತಿಷ್ಠಾಪನೆ ಮಾಡಿಸಿದ್ದನ್ನು ಹೇಳುವ ಅಪೂರ್ವ ದಾಖಲೆಯಾಗಿದೆ. ಕ್ರಿ.ಶ. 1547ರ ಶಾಸನದಲ್ಲಿ ವಿಜಯನಗರದ ಸದಾಶಿವರಾಯನು ಕ್ಷೌರಿಕರಿಗೆ ನೀಡಿದ ತೆರಿಗೆ ವಿನಾಯ್ತಿಯನ್ನು ದಾಖಲಿಸಲಾಗಿದೆ. ಕ್ರಿ.ಶ. 1829ರ ಶಾಸನವು ಬಲ್ಲಾಳರಾವ ಒಡೆಯರು ದೇಸಾಯಿ ಎಂಬುವರು ನೇಮಿನಾಥ ವಿಗ್ರಹ ಪ್ರತಿಷ್ಠೆ ಮಾಡಿಸಿದ ವಿಷಯ ತಿಳಿಸುತ್ತದೆ. ಮೇಲಿನ ಶಾಸನಗಳಲ್ಲಿ ಉಕ್ತವಾಗಿರುವ ಜೈನಬಸದಿ, ಶಿವಾಲಯ, ಸ್ವಯಂಭು ಮೂಲಸ್ಥಾನ ದೇವರು, ಮಲ್ಲಿಕಾರ್ಜುನ ದೇವರು, ಆದಿತ್ಯ ದೇವಾಲಯಗಳಲ್ಲಿ ಇಂದು ಹೆಚ್ಚಿನವು ಹಾಳಾಗಿದ್ದು ಜೈನಬಸದಿ ಮತ್ತು ಕಲ್ಮೇಶ್ವರ ಗುಡಿಗಳಷ್ಟೆ ಉಳಿದು ಬಂದಿವೆ.

ಅಮ್ಮಿನಭಾವಿ ಪ್ರಾಚೀನವಾದ ಹಾಗೂ ವಿಶಾಲವಾದ ಪಾರ್ಶ್ವನಾಥ ಬಸದಿಗೆ ಹೆಸರುವಾಸಿಯಾಗಿದೆ. ಸುಮಾರು ಕ್ರಿ.ಶ. 11-12ನೇ ಶತಮಾನದ ರಚನೆಯಾಗಿರಬಹುದಾದ ಈ ಬಸದಿಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಶಾಸನಗಳಾವುವು ಈವರೆಗೆ ಲಭ್ಯವಿಲ್ಲ. ಇರುವ ಎರಡು ಜೈನ ಶಾಸನಗಳು ತೀರ್ಥಂಕರ ಪೀಠಶಾಸನಗಳಾಗಿದ್ದು ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ಪೂರ್ವ ಪಶ್ಚಿಮವಾಗಿ ಆಯಾತಾಕಾರದಲ್ಲಿದ್ದ ಈ ಜಿನಾಲಯಕ್ಕೆ ಈಗ ವಿಶಾಲವಾದ ಸಭಾಮಂಟಪವನ್ನು ಸೇರಿಸಲಾಗಿದೆ. ಪೂರ್ಣವಾಗಿ ಜೀರ್ಣೋದ್ಧಾರ ಗೊಂಡಿದ್ದರೂ ವಾಸ್ತುವಿನ ಮೂಲ ಸ್ವರೂಪವನ್ನು ಉಳಿಸಿಕೊಂಡಿರುವುದು ಗಮನಾರ್ಹವಾದ ಅಂಶ. ಈ ಜಿನಾಲಯದ ಕೇಂದ್ರ ಭಾಗದಲ್ಲಿ 1892ರಲ್ಲಿ ಪ್ರತಿಷ್ಠಿತಗೊಂಡಿರುವ ನೇಮಿನಾಥನ ಮೂರ್ತಿಯಿದೆ. ದೇವಾಲಯದ ನಡುವಿನ ಅಂಕಣದಲ್ಲಿ ಸುಪಾರ್ಶ್ವನಾಥ, ವೃಷಭನಾಥ ಹಾಗೂ ಮಹಾವೀರರ ಸುಂದರ ಶಿಲ್ಪಗಳಿವೆ. ಅದರಲ್ಲೂ ಪ್ರಭಾವಳಿಯಲ್ಲಿ ಚವ್ವೀಸ ತೀರ್ಥಂಕರರ ಸುಂದರ ಕಿರು ಶಿಲ್ಪಗಳ ಕೆತ್ತನೆಯನ್ನು ಹೊಂದಿರುವ ಪಾರ್ಶ್ವನಾಥನ ಬಿಳಿಯ ಶಿಲ್ಪ ಬಹಳ ಆಕರ್ಷಕವಾಗಿದೆ. ಈ ದೇವಾಲಯದ ಛಾವಣಿಯಲ್ಲಿ ಆರನೇಯ ವಿಕ್ರಮಾದಿತ್ಯನ ಕಾಲದ ಎರಡು ಶಾಸನಗಳಿವೆ. ಈ ಬಸದಿಯಲ್ಲಿರುವ ನವರಂಗದ ನವಿರಾದ ಸ್ತಂಭಗಳು ಯಾತ್ರಿಕರ ಗಮನವನ್ನು ವಿಶೇಷವಾಗಿ ಸೆಳೆಯುತ್ತವೆ. ಈ ಪರಿಸರದಲ್ಲಿ ಹಲವಾರು ಜೈನಾವಶೇಷಗಳು ಹರಡಿಕೊಂಡಿವೆ.

ಈ ಊರಿನ ಕಲ್ಮೇಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲದ ರಚನೆಯಾಗಿದ್ದು ಶಾಸನೋಕ್ತವಾದ ಸ್ವಯಂಭೂ ಮೂಲಸ್ಥಾನದ ಗುಡಿ ಇದೇ ಆಗಿರಬೇಕೆಂದು ಊಹಿಸಬಹುದಾಗಿದೆ. ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವ ಈ ದೇವಾಲಯವು ವಿಶಾಲವಾದ ನಿವೇಶನದಲ್ಲಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಹೊಂದಿದೆ. ಅಂತರಾಳದ ಬಾಗಿಲುವಾಡವು ತ್ರಿಶಾಖಾಲಂಕೃತ ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಮಕರ ತೋರಣವನ್ನು ಹೊಂದಿದೆ. ನವರಂಗದಲ್ಲಿರುವ ಎರಡು ದೇವಕೋಷ್ಠಗಳಲ್ಲಿ ಮೈಲಾರ ಹಾಗೂ ನಾರಾಯಣನ ಮೂರ್ತಿ ಶಿಲ್ಪಗಳಿವೆ. ಈ ದೇವಾಲಯವೂ ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಹಿಂದಿನ ಗ್ಯಾಸೆಟಿಯರ್ ವಿಠಲಪಂಥನೆಂಬ ಬಹಮನಿ ಸುಲ್ತಾನನ ಕಂದಾಯ ಅಧಿಕಾರಿಯ ಅಳತೆಗೋಲು ಇಲ್ಲಿ ರೇಖಿಸಲ್ಪಟ್ಟಿತ್ತೆಂದು ದಾಖಲಿಸಿದೆಯಾದರೂ, ಈಗ ಇಲ್ಲಿ ಅದು ಕಾಣೆಯಾಗಿದೆ.

ಎಂದಿದ್ದು, ಮುಂದೆ ಇದೇ ಆದಿಲ್‌ಷಾಹಿ ಪ್ರಭಾವದಿಂದಾಗಿ ಅಲ್ಲಾಪುರ ಎಂದಾಗಿರುವಂತೆ (ಉರ್ದುವಿನಲ್ಲಿ ಅಲ್ಲಾ ಎಂದರೆ ದೇವರು ಈಶ್ವರ ಎಂದರ್ಥ) ತೋರುತ್ತದೆ. ಕ್ರಿ.ಶ. 1399ರ ಒಂದು ಶಾಸನವು ಈ ಊರು ಕುಂದೂರು-30ಕ್ಕೆ ಸೇರಿತ್ತೆಂಬ ಅಂಶವನ್ನು ತಿಳಿಸುತ್ತ, ಸೋಮೆನಾಯಕಿತಿ,' ಈ ಊರನ್ನು ದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಪ್ರಾಚೀನ ದೇವಾಲಯಗಳು ಹಾಳಾಗಿದ್ದು, ಅವುಗಳ ಕಂಬಗಳು ಜಮ್ಮಾ ಮಸೀದಿ ಪರಿಸರದಲ್ಲಿ ಅಲ್ಲೊಂದು ಇಲ್ಲೊಂದು ಕಂಡು ಬರುತ್ತವೆ.

ಇಲ್ಲಿನ ಜಮ್ಮಾಮಸೀದಿ ಬಹಳ ಆಕರ್ಷಕವಾದ ರಚನೆಯಾಗಿದ್ದು, ಬಿಜಾಪುರದ ಆದಿಲ್‌ಷಾಹಿ ಅರಸರ ಕಾಲದ ನಿರ್ಮಾಣವಾಗಿದೆ. ಸುಂದರವಾದ ಗುಮ್ಮಟ, ಆಕರ್ಷಕವಾದ ಕಮಾನುಗಳು, ಎತ್ತರವಾದ ಮಿನಾರುಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಮಸೀದಿಯ ಒಳಭಾಗದಲ್ಲಿರುವ ನಾಲ್ಕು ಸಾಲಿನ ಶಾಸನ ಇದರ ನಿರ್ಮಾಣ ಕಾಲದ ಬಗ್ಗೆ ತಿಳಿಸುತ್ತದೆಯಾದರೂ, ವರದಿಯಾಗಿಲ್ಲ. ಅಷೂರ್‌ಖಾನಾ, ನಗರಖಾನಾ, ಮದ್ರಸಾ ಮಸೀದಿಯ ಆವರಣದಲ್ಲಿದ್ದು, ಮಸೀದಿಗೆ ವಿಶೇಷ ಶೋಭೆ ತಂದಿದೆ. ಮಸೀದಿಯನ್ನು ಒಳಾಂಗಣದಲ್ಲಿ ಬಿಳಿಯ ಪಟ್ಟಿಕೆಯಿಂದ ಅಲಂಕರಿಸಲಾಗಿದೆ. ಒಟ್ಟಾರೆ ಇದೊಂದು ಉತ್ತಮ ಮುಸ್ಲಿಂ ಸ್ಮಾರಕವಾಗಿದ್ದು ಸುಸ್ಥಿತಿಯಲ್ಲಿದೆ. ಊರಲ್ಲಿ ದಾವುದ್ ಹುಸೇನಿ, ಮಕ್ತುಮ್ ಹುಸೇನಿ, ದಿವಾನ್ ಷಾವಲಿ, ಜಹೀರುದ್ದೀನ್ ಷಾ ಖಾದ್ರಿ, ಮಹಮ್ಮದ್ ಷರೀಫ್ ಖಾದ್ರಿ ಮುಂತಾದ ಸಂತರ 8-10 ದರ್ಗಾಗಳಿದ್ದು, ಅನುಕೂಲ ಒದಗಿ ಬಂದಾಗ ಉರುಸು ಆಚರಿಸುತ್ತಾರೆ. ಈ ಊರಲ್ಲಿ ಹನುಮಂತ, ದುರ್ಗವ್ವ, ಬಸವಣ್ಣ ಮುಂತಾದ ಗುಡಿಗಳಿವೆ.

**ಅಸುಂಡಿ :** ಗದಗ ತಾಲೂಕಿನ ಅಸುಂಡಿಯು (ಜನಸಂಖ್ಯೆ : 2,569) ಗದಗಿನಿಂದ ನೈರುತ್ಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಪಸುಣ್ಡಿ' 'ಭತ್ತಗಾವೆ ಎಲೆಯ ಪಸುಣ್ಡಿ, ಹಸುಣ್ಡಿ ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ಹಿಂದೆ ಇದು ಬೆಳ್ವೊಲ - 300 ಕ್ಕೆ ಸೇರಿತ್ತು. ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ರಾಷ್ಟ್ರಕೂಟ ನಾಲ್ಕನೇಯ ಗೋವಿಂದನ ಕ್ರಿ.ಶ. 925ರ ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ಬಂಕಾಪುರದ ಧೋರಜಿನಾಲಯದ ಚಂದ್ರಪ್ರಭ ಭಟಾರರು ಪಸುಣ್ಡಿಯನ್ನಾಳುತ್ತಿದ್ದಾಗ, ಊರ ಗಾವುಂಡ ನಾಗಪುಲಿಗೌಂಡನ ಕೈಯಿಂದ 12 ಮತ್ತರು ಭೂಮಿಯನ್ನು ಖರೀದಿಸಿ, ತಾನು ನಿರ್ಮಿಸಿದ ದೇಗುಲಕ್ಕೆ ರಷ್ವರ ನಾಗಯ್ಯನು ದಾನ ಮಾಡಿದ ಅಂಶವನ್ನು ತಿಳಿಸಿದರೆ, ಈಶ್ವರಗುಡಿ ಮುಂದಿರುವ ಕ್ರಿ.ಶ. 1026, ಶಾಸನ ಶೌಚಯ ನಾಯಕನು ಭೋಗೇಶ್ವರ ದೇವರಿಗೆ, ಅಲ್ಲಿನ ತಪೋಧನರಿಗೆಂದು ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಹನುಮಂತನ ಗುಡಿ ಮುಂದಿರುವ ಕ್ರಿ.ಶ. 1053ರ ಶಾಸನ ಇದೇ ದಂಡನಾಯಕ ಸೋಮೇಶ್ವರ ದೇವರಿಗೆ (ಬ್ರಹ್ಮಚಾರಿಗಳಿಗೆ ಸತ್ರಕ್ಕೆಂದು) 28 ಗೇಣ ಗಳೆಯಲ್ಲಿ 12 ಮತ್ತರ್ ಭೂಮಿಯನ್ನು ದಾನ ಮಾಡಿದ ವಿಷಯವನ್ನು ತಿಳಿಸಿದರೆ ಮಲ್ಲಿದೇವಿಕಟ್ಟೆ ಬಳಿಯಿರುವ ಕ್ರಿ.ಶ. 1064ರ ಶಾಸನ ಮೂವತ್ತೂರು ಗೇಣಗಳೆಯಲ್ಲಿ ದೇವಸ್ಥಾನ ಒಂದಕ್ಕೆ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಈಶ್ವರ ಗುಡಿಯ ಗೋಡೆಯಲ್ಲಿರುವ ಕ್ರಿ.ಶ. 1289ರ ತ್ರುಟಿತ ಶಾಸನ ಮಹಿಳೆಯೊಬ್ಬಳು ತನ್ನ ತಂದೆಯ ಹೆಸರಲ್ಲಿ ದೇವರ ಪ್ರತಿಷ್ಠಾಪನೆ ಮಾಡಿ ಮಹಾಜನರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ಮೇಲಿನ ಶಾಸನೋಕ್ತ ಗುಡಿಗಳಲ್ಲಿ ಊರಲ್ಲಿ ಇಂದು ಭೋಗೇಶ್ವರ ದೇವಾಲಯವಷ್ಟೇ ಉಳಿದಿದ್ದು, ಅದನ್ನು ಇಂದು ಈಶ್ವರ ಗುಡಿಯೆಂದು ಸ್ಥಳೀಕರು ಕರೆಯುತ್ತಾರೆ. ಈ ಗುಡಿ ಇಂದು ಪೂರ್ಣ ಶಿಥಿಲಗೊಂಡಿದ್ದು, ಗರ್ಭಗೃಹ ಹಾಗೂ ಅಂತರಾಳವನ್ನಷ್ಟೇ ನೋಡಬಹುದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ಪಂಚಶಾಖೆಯನ್ನು ಹೊಂದಿದ್ದು, ನಿರಾಡಂಬರವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲವಾಡ ತ್ರಿಶಾಖೆಯೊಂದಿಗೆ, ಜಾಲಾಂಧ್ರವನ್ನು ಹೊಂದಿದ್ದು, ಮೇಲೆ ಬ್ರಹ್ಮ ಮಹೇಶ್ವರ, ವಿಷ್ಣುಮೂರ್ತಿಯಿರುವ ಸುಂದರ ಮಕರ ತೋರಣವಿದ್ದು, ಆಕರ್ಷಕವಾಗಿದೆ. ಈ ಗುಡಿ ಪರಿಸರದಲ್ಲೇ ಇರುವ ಶಾಸನ ಇದನ್ನು ಭೋಗೇಶ್ವರ ಗುಡಿಯೆಂದು ಕರೆದಿದೆ.

ಊರಲ್ಲಿರುವ ಮಲ್ಲದೇವಿಕಟ್ಟೆ, ಅಪರೂಪದ ದೇವಿಶಿಲ್ಪಗಳಿಂದಾಗಿ ಉಲ್ಲೇಖಾರ್ಹವಾಗಿದೆ. ಈ ಕಟ್ಟೆ ಮೇಲಿರುವ ಮೂರು ದೇವಿ ಶಿಲ್ಪಗಳು ಸುಮಾರು ಐದು ಅಡಿ ಎತ್ತರವಿರುವ ಆಸೀನ ಮೂರ್ತಿಗಳಾಗಿದ್ದು, ಸುಮಾರು ಕ್ರಿ.ಶ. 10-11ನೇ ಶತಮಾನದ ಕೃತಿಗಳಾಗಿವೆ. ಈ ಮೂರ್ತಿಗಳನ್ನು ಕ್ರಮವಾಗಿ ಬನದವ್ವ (ತೊಡೆಯ ಮೇಲೆ ಮಗುವನ್ನು ಕೂರಿಸಿಕೊಂಡು ಕುಳಿತಿರುವ ಭಂಗಿ), ವಿಶೇಷವಾಗಿ ಕಣ್ಣು ಸೆಳೆಯುವ ಉಡಚವ್ವ (ಖಡ್ಗ - ಕಪಾಲ ಹಿಡಿದು ಕುಳಿತ ದೇವಿಯ ಎರಡು ಕಾಲ ನಡುವೆ ಹೆಡೆ ಬಿಚ್ಚಿದ ಸರ್ಪವಿದೆ) ಹಾಗೂ ಮಾಚಕವ್ವೆ (ಖಡ್ಗ - ಕಪಾಲ ಹಿಡಿದು ಕುಳಿತಿರುವ ಭಂಗಿ)ಯದೆಂದು ಗುರುತಿಸಬಹುದಾಗಿದೆ. ಈ ದೇವಿಯರ

ಮುಖದಲ್ಲಿ ಕಾಣುವ ಉಗ್ರತೆ, ಬೃಹತ್ತಾದ ಸ್ತನಗಳು ವಿಶೇಷ ಸಂಗತಿಗಳು. ಊರ ನಡುವೆ ಇರುವ ಹನುಮಂತನ ಗುಡಿ ಮುಂದೆ ರಾಷ್ಟ್ರಕೂಟರ ಕಾಲದ ಮುಕ್ಕಾಗಿರುವ ಸಪ್ತಮಾತೃಕಾ ಶಿಲ್ಪ ಹಾಗೂ ಸೂರ್ಯನ ಮೂರ್ತಿಗಳಿವೆ. ಈ ಪರಿಸರದಲ್ಲೇ ಇರುವ ನೆಲದ ಮೇಲೆ ಹರಡಿದ ಕೋಣನ ತಲೆ ಶಿಲ್ಪ ಮತ್ತು ಪೀಠಸ್ಥ ಚತುರ್ಮುಖ ಬ್ರಹ್ಮಶಿರ ಶಿಲ್ಪ ('ಗೋಲಕವ್ವ') ಗಮನಾರ್ಹ ಶಿಲ್ಪಗಳಾಗಿವೆ. ಇವಿಷ್ಟೇ ಅಲ್ಲದೆ ಊರಲ್ಲಿ ಬಸವಣ್ಣ, ಬೀರಪ್ಪ, ಹನುಮಂತ, ಭರಮಪ್ಪ, ದುರ್ಗಮ್ಮ, ಗಾಳಿಯಮ್ಮ, ದ್ಯಾಮವ್ವನ ಗುಡಿಗಳಿವೆ. ಊರ ಬಳಿಯ ಗುಡ್ಡದಲ್ಲಿ ರಾಮಮಂದಿರ ಹಾಗೂ ಮಠವಿದೆ. ಊರಲ್ಲಿ ಒಂದು ಜುಮ್ಮಾಮಸೀದಿಯಿದೆ.

**ಅಸೂಟ** : ರೋಣ ತಾಲೂಕಿನ ಅಸೂಟಿ (ಜನಸಂಖ್ಯೆ : 3,262) ರೋಣದಿಂದ ವಾಯುವ್ಯಕ್ಕೆ 27 ಕಿ.ಮೀ.ದೂರದಲ್ಲಿದ್ದು ಹೊಳೆ ಆಲೂರಿಗೆ 10 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಅಸುಪಟ್ಟಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬೆಳ್ವೊಲ-300 ರ ಬೆಳ್ವಣಿಕೆ-12ಕ್ಕೆ ಸೇರಿದ ಗ್ರಾಮವಾಗಿದ್ದು, ಇಲ್ಲಿಂದ ಈವರೆಗೆ ರಾಷ್ಟ್ರಕೂಟರ ಕಾಲದ ಶಾಸನ ವರದಿಯಾಗಿದೆ. ರಾಷ್ಟ್ರಕೂಟ ಮುಮ್ಮಡಿ ಇಂದ್ರನ ಕಾಲಕ್ಕೆ ಸೇರಿದ ಶಾಸನ ಸಡಗರದ ತಿಲ್ಲಮನು ಗೋಸಹಸ್ರ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಈ ಗೋಸಾಸ ಕಲ್ಲು ಕಲ್ಲೇಶ್ವರ ದೇವಾಲಯದ ಮುಂದಿದೆ. ನೆರೆಯ ಕೌಜಗೇರಿ ಗ್ರಾಮದ ಕ್ರಿ.ಶ. 934 ಶಾಸನವೊಂದು ಅಸುಪಟ್ಟಿಯ ದೇಗುಲಕ್ಕೆ ದಾನ ಕೊಟ್ಟ ವಿಷಯ ತಿಳಿಸುವುದರೊಂದಿಗೆ ಆ ವೇಳೆಗಾಗಲೇ ಇಲ್ಲೊಂದು ಗುಡಿಯಿತ್ತೆಂಬ ಅಂಶವನ್ನು ಸೂಚಿಸುತ್ತದೆ. ಹನುಮಂತ ದೇವರ ಗುಡಿಯ ಗೋಡೆಯಲ್ಲಿ ಸೇರಿ ಹೋಗಿದ್ದ ಕಲ್ಯಾಣದ ಚಾಲುಕ್ಯರ ಕಾಲದ ತ್ರುಟಿತ ಆರನೇ ವಿಕ್ರಮಾದಿತ್ಯನ ಕಾಲದ ಶಾಸನವೊಂದನ್ನು 1991ರಲ್ಲಿ ಎಸ್.ರಾಜೇಂದ್ರಪ್ಪ ಪತ್ತೆ ಹಚ್ಚಿದ್ದಾರೆ. ಹೆಚ್ಚಿನ ವಿವರ ಲಭ್ಯವಾಗಿಲ್ಲ. ಊರ ನಿಲ್ದಾಣದ ಬಳಿ ಎತ್ತರವಾದ ಸ್ಥಳದಲ್ಲಿರುವ ಪಂಚಲಿಂಗೇಶ್ವರ ಗುಡಿ ಪೂರ್ಣ ಶಿಥಿಲಗೊಂಡಿವೆ. ಹಿಂದೆ ಗುಡಿಯಿತ್ತೆಂದು ಸೂಚಿಸುವ 3-4 ಬೃಹತ್ ಶಿವಲಿಂಗ ನಂದಿ ಮೂರ್ತಿಗಳಿವೆ. ಈ ಆವರಣದಲ್ಲಿರುವ ದುರ್ಗಿಯ ಮೂರ್ತಿ ಉಲ್ಲೇಖನೀಯ. ದ್ಯಾಮವ್ವನ ಗುಡಿಯ ಬಳಿಯಲ್ಲಿ ವಿಷ್ಣುವಿನ ಭಗ್ನ ಮೂರ್ತಿಯಿದೆ. ಕೆರೆಯವ್ವನ ಗುಡಿಯಲ್ಲಿರುವ ಮಹಿಷಮರ್ದಿನಿ ಶಿಲ್ಪವು ಉತ್ಕೃಷ್ಟ ಬಿಡಿಶಿಲ್ಪವಾಗಿದ್ದು, ಇಲ್ಲಿ ದೇವಿ ಎಡಗಾಲಲ್ಲಿ ಮಹಿಷನನ್ನು ಮೆಟ್ಟಿ ಬಲಗೈಯಿಂದ ಇರಿದು ಕೊಲ್ಲುತ್ತಿರುವ ದೃಶ್ಯ ಭೀಕರವಾಗಿದೆ.

ಇದಲ್ಲದೆ ಊರಲ್ಲಿ ರಾಮಲಿಂಗ, ಸಿದ್ಧಲಿಂಗ, ಕಾಡಸಿದ್ದೇಶ್ವರ, ಬಸವಣ್ಣ, ಹನುಮಂತ, ದುರ್ಗಮ್ಮ, ದ್ಯಾಮವ್ವ, ಟಾಕಮ್ಮ ಮತ್ತು ಕೆರೆಯಮ್ಮನ ಗುಡಿಗಳಿವೆ. ಊರಲ್ಲಿ 'ಮೂಲಫಲಹಾರೇಶ್ವರ ಮಠ'ವು 1983 ರಿಂದೀಚೆಗೆ ಸ್ಥಾಪನೆಗೊಂಡಿದ್ದು ಪ್ರೌಢಶಾಲೆಯನ್ನು ನಡೆಸುತ್ತಿದೆ. (ಅಧ್ಯಾಯ ಮೂರು ಜನತೆ ನೋಡಿ).

**ಅಸುಂಡಿ** : ರಾಣೆಬೆನ್ನೂರು ತಾಲೂಕಿನ ಅಸುಂಡಿಯು (ಜನಸಂಖ್ಯೆ : 3,243) ರಾಣೆಬೆನ್ನೂರಿನಿಂದ ಪಶ್ಚಿಮಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಕಾಲದಲ್ಲಿ ಸತ್ತಳಿಗೆ 70ಕ್ಕೆ ಸೇರಿದ್ದು ಶಾಸನಗಳಲ್ಲಿ 'ಪಶುಣ್ಡಿ', 'ಹಸುಣ್ಡಿ' 'ಹಸುಂಡಿ' ಎಂದೇ ಉಲ್ಲೇಖಿತಗೊಂಡಿದೆ. ಈವರೆಗೆ ಇಲ್ಲಿಂದ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ಮೂರು ಶಾಸನಗಳು ದೊರೆತಿದ್ದು ಅವು ಇಲ್ಲಿನ ಕಲಿದೇವ ಸ್ವಾಮಿಗೆ ನೀಡಿದ ದಾನಶಾಸನಗಳು. ಕ್ರಿ.ಶ. 1024ರ ಶಾಸನದಿಂದ ಊರ ಗೌಡ ಬೀರಗಾವುಂಡ ಕಲಿದೇವಸ್ವಾಮಿಯ ಶ್ರೀಕಾರ್ಯಕ್ಕೆಂದು ಊರ ಮೂಡಣ ಕರಿಯಂಗೆರೆ ಕೆಳಗೆ, ಪಿರಿಯಕೆರೆ ಕೆಳಗೆ ಭೂಮಿಯನ್ನೂ ಇತರ ಅಧಿಕಾರಿಗಳು ದಾನ ಮಾಡಿದ್ದನ್ನೂ ತಿಳಿಸುತ್ತದೆ. ಕ್ರಿ.ಶ. 1127ರ ಮತ್ತೊಂದು ಶಾಸನದಿಂದ, ಊರಗೌಡ ಬರ್ಮಗಾವುಂಡನು ದೇವರಿಗೆ, ಸಿಂಹಪರಿಷೆ ಮಠಕ್ಕೆ ಭೂದಾನ ನೀಡಿದ್ದು ಗೊತ್ತಾಗುತ್ತದೆ. ಕ್ರಿ.ಶ. 1141ರ ಇನ್ನೊಂದು ಶಾಸನದಿಂದ ಸುಂಕಾಧಿಕಾರಿಗಳು ಸುಂಕ ದಾನ ಬಿಟ್ಟ ವಿಷಯ ತಿಳಿಯುತ್ತದೆ. ಈಗ ಊರ ಹೊರಗಿರುವ ಗುಡಿಯನ್ನೇ ಇಲ್ಲಿ ಶಾಸನೋಕ್ತ ಕಲಿದೇವಸ್ವಾಮಿ ಗುಡಿಯೆಂದು ಗುರುತಿಸಬೇಕಾಗುತ್ತದೆ. ಪೂರ್ವಾಭಿಮುಖ ವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಸರಳ ರಚನೆಯಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಂದಿಯಿದೆ. ಈ ಗುಡಿಯ ಬಾಗಿಲವಾಡಗಳು ಸರಳವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಎಡಬದಿಯ ದೇವಕೊಷ್ಠದಲ್ಲಿ ಕಾಳಿ, ಭೈರವನ ಶಿಲ್ಪವಿದ್ದರೆ ಬಲಬದಿಯಲ್ಲಿ ಸಪ್ತಮಾತೃಕಾ ಶಿಲ್ಪವಿದೆ (ಇದು ಕ್ರಿ.ಪೂ. 1074ಕ್ಕೆ ಮೊದಲನೇ ನಿರ್ಮಾಣಗೊಂಡಿರಬೇಕು). ಈ ಗುಡಿಯ ಎಡಬದಿಯಲ್ಲಿ ಮತ್ತೊಂದು ಸಣ್ಣ ಗುಡಿಯಿದ್ದು ಇದು ಗರ್ಭಗೃಹ ಅರ್ಧಮಂಟಪವನ್ನಷ್ಟೆ ಹೊಂದಿದ್ದು ಇಲ್ಲೂ ಶಿವಲಿಂಗ, ನಂದಿ ಮತ್ತು ಭೈರವನ ಮೂರ್ತಿಗಳಿವೆ. ಈ ಗುಡಿಯ ಭಿತ್ತಿವರೆಗೆ ಪೂರ್ಣ ಮಣ್ಣಿಂದ ಮುಚ್ಚಿಹೋಗಿದ್ದು ಶಿಖರ ಉಳಿದಿಲ್ಲ. ಈ ಗುಡಿಯನ್ನು 1127ರಲ್ಲಿ ಬರ್ಮಗೌಂಡ ನಿರ್ಮಿಸಿದಂತೆ ತೋರುತ್ತದೆ. ಈ ಗುಡಿ ಪರಿಸರದಲ್ಲಿ ಸಿಂಹಪರಿಷೆ ಮಠವಿದ್ದ ಕುರುಹುಗಳಿವೆ.

ಅಸುಂಡಿಯ ಕೆರೆ ಸುಮಾರು 450 ಎಕರೆಯಷ್ಟು ವಿಶಾಲವಾಗಿದೆ. ಶಾಸನೋಕ್ತ ಪಿರಿಯಕೆರೆ ಇದೇ ಆಗಿದೆ. ಇದಲ್ಲದೆ ಊರಲ್ಲಿ ಚೆನ್ನಬಸವಣ್ಣನ ಗುಡಿ, ಕಾಳಮ್ಮನ ಗುಡಿ ಅಜ್ಜಯ್ಯನ ಗುಡಿ, ಹನುಮಂತನ ಗುಡಿ, ಮುಂತಾದ ಗುಡಿಗಳಿವೆ.

**ಅಳ್ನಾವರ :** ಧಾರವಾಡ ತಾಲೂಕಿನ ಅಳ್ನಾವರವು (ಜನಸಂಖ್ಯೆ : 14,485) ಬೆಂಗಳೂರು - ಮೀರಜ್ ರೈಲ್ವೇ (ಧಾರವಾಡದಿಂದ 32 ಕಿ.ಮೀ.) ಮಾರ್ಗದಲ್ಲಿರುವ ಧಾರವಾಡ ಜಿಲ್ಲೆಯ ಕೊನೆಯ ನಿಲ್ದಾಣವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಣಲಾಪುರ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಗೋವೆ ಕದಂಬರ ಉಪ ರಾಜಧಾನಿಯಾಗಿತ್ತೆಂಬ ಅಂಶ ಶಾಸನಗಳಿಂದ ಗೊತ್ತಾಗುತ್ತದೆ. ಗೋವೆ ಕದಂಬರ ಆಳ್ವಿಕೆಯ ಅವಧಿಯಲ್ಲಿ ಈ ಸ್ಥಳವು ಪ್ರಮುಖ ಜೈನ ಕೇಂದ್ರವಾಗಿರಬೇಕೆಂದು ಶಾಸನಾಧಾರಗಳಿಂದ ಹೇಳಬಹುದಾಗಿದೆ. ಆದರೆ, ಈಗ ಯಾವ ಅವಶೇಷಗಳು ಉಳಿದಿಲ್ಲ, ಇಲ್ಲಿನ ಪ್ಯಾಟಿ ಓಣಿಯಲ್ಲಿರುವ ಕ್ರಿ.ಶ. 1081ರ ಗೋವೆ ಕದಂಬ ದೊರೆ ಗೂವಲದೇವನ ಶಾಸನವು ಅಸ್ಪಷ್ಟವಾಗಿದ್ದು, ಪ್ರಧಾನ ಮಾಚಣ್ಣನು ರಾಜಧಾನಿ ಅಣಲಾಪುರದಲ್ಲಿ ನಿರ್ಮಿಸಿದ ಬಿಳಿಯ ಬಸದಿಗೆ ಕೋಣಕೆರ ನರಸಿಂಗಯ್ಯ ಸೆಟ್ಟಿಯೆಂಬ ವರ್ತಕನಿಂದ ಭೂದಾನ ಮಾಡಿದ ಸಂಗತಿ ಮಾತ್ರ ತಿಳಿಯುತ್ತದೆ. ಇದರ ಸಂಬಂಧವಾಗಿ ಇರುವ ಮತ್ತೊಂದು ಶಾಸನವು, ಸ್ಥಳೀಯ ಲಿಂಗಾಯತ ಮಠದ ಹೊಲದಲ್ಲಿ ಕಂಡು ಬರುತ್ತದೆ. ಇದು ಕ್ರಿ.ಶ. 1505ಕ್ಕೆ ಸೇರಿದ್ದು ಹುಬ್ಬಳ್ಳಿಯ ಚಿಕ್ಕಮಲ್ಲಿಶೆಟ್ಟಿ ಎಂಬ ಜಿನಭಕ್ತನು ಸಲ್ಲೇಖನ ಕೈಗೊಂಡ ವಿವರಗಳನ್ನು ಛಂದೋವಿಶೇಷ ರಗಳೆಯಲ್ಲಿ ನೀಡಲಾಗಿದೆ. ಊರಿನಲ್ಲಿ ಹಾಳಾಗಿ ಬಿದ್ದಿರುವ ಕಲ್ಲೇಶ್ವರ ಗುಡಿಯಿದೆ. ಇದು ಬಹುಶಃ ಕ್ರಿ.ಶ. 12 ನೇ ಶತಮಾನದಲ್ಲಿ ನಿರ್ಮಿತವಾಗಿರಬೇಕೆಂದು ಅಲ್ಲೇ ದೊರೆತಿರುವ (ಅಳಿಸಿಹೋಗಿರುವ) ಶಿಲಾಶಾಸನದಿಂದ ಹೇಳಬಹುದಾಗಿದೆ.

ಮೂಲತಃ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದ ಈ ಗುಡಿಯ ನವರಂಗ ಭಾಗ ಹಾಳಾಗಿದೆ. ಗರ್ಭಗೃಹದ ಬಾಗಿಲವಾಡದ ಲಲಾಟದಲ್ಲಿ ಲಕ್ಷ್ಮಿಯ ಕೆತ್ತನೆಯಿದ್ದು ಮೇಲೆ ಪಂಚಶಿಖರ ಕೆತ್ತನೆಯಿದೆ. ಅಂತರಾಳದ ಬಾಗಿಲವಾಡವು ಪಂಚಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಇದರ ಮೇಲೆ ತ್ರಿಮೂರ್ತಿಗಳ ಕೆತ್ತನೆಯಿರುವ ಮಕರ ತೋರಣದ ಅಲಂಕಾರವಿದೆ. ಈ ಗುಡಿಯ ಆವರಣದಲ್ಲಿ ಭಗ್ನವಾದ ಕೇಶವ, ಸೂರ್ಯ, ಗಣಪತಿ ಭೈರವ ಮಹಿಷಮರ್ದಿನಿ ಶಿಲ್ಪಗಳಿವೆ. ಇಲ್ಲಿ ಒಟ್ಟು ಐದು ವೀರಗಲ್ಲುಗಳಿದ್ದು, ಅವುಗಳಲ್ಲಿ ಎರಡು ಆತ್ಮ ಬಲಿದಾನದ ಕಲ್ಲುಗಳಾಗಿದ್ದು, ಉಳಿದವುಗಳಲ್ಲಿ ಇರುವ ಕೆತ್ತನೆ ವಿಶಿಷ್ಟವಾಗಿವೆ. ಒಂದು ಆತ್ಮ ಬಲಿದಾನಕಲ್ಲಿನಲ್ಲಿ ಮಹಿಳೆಯೊಬ್ಬಳು ಅತ್ಮಬಲಿದಾನಕ್ಕೆ ಸಿದ್ಧಳಾಗಿ ಕುಳಿತಿರುವ ಕೆತ್ತನೆಯಿದೆ.

ಇವುಗಳೊಂದಿಗೆ ಊರಲ್ಲಿ ಬಸವಣ್ಣ, ಮಾರುತಿ, ಮೈಲಾರ, ವೀರಭದ್ರ, ದುರ್ಗವ್ವ, ದ್ಯಾಮವ್ವ, ಮುಂತಾದ ದೇವತೆಗಳ ಗುಡಿಗಳಿವೆ. ಊರಲ್ಲಿ ಮೂರು ಮಸೀದಿಗಳಿದ್ದು, ಮಾರ್ಕೆಟ್ ಬಳಿಯಿರುವ ಜುಮ್ಮಾ ಮಸೀದಿ ವಿಶಾಲವಾದುದಾಗಿದೆ. ಹಜರತ್ ಚಮನ್‌ಷಾ ವಲಿ ಯ ದರ್ಗಾ ಇದ್ದು, ಏಪ್ರಿಲ್ - ಮೇ ತಿಂಗಳಲ್ಲಿ ಉರುಸು ನಡೆಯುತ್ತದೆ. ಈ ಊರಲ್ಲಿ 1894ರಲ್ಲಿ ಸ್ಥಾಪಿತಗೊಂಡ ಸೆಂಟ್ ಅನ್ನಿ ರೋಮನ್ ಕ್ಯಾಥೊಲಿಕ್ ಚರ್ಚ ಇದೆ. ಒಂದು ಪ್ರಾಟೆಸ್ಟಂಟ್ ಚರ್ಚ್ ಕೂಡ ಇದೆ.

**ಆಡೂರು :** ಹಾನಗಲ್ ತಾಲೂಕಿನ ಆಡೂರು (ಜನಸಂಖ್ಯೆ : 4,132) ಹಾವೇರಿ ರೈಲ್ವೇ ನಿಲ್ದಾಣದಿಂದ 16 ಕಿ.ಮೀ. ದೂರದಲ್ಲಿ ಇದ್ದು ಬಾದಾಮಿ ಚಾಳುಕ್ಯರ ಕೀರ್ತಿವರ್ಮನ ಕ್ರಿ.ಶ. 750 ಶಾಸನವನ್ನು ಹೊಂದಿದ ಪ್ರಾಚೀನ ಊರಾಗಿದೆ. 'ಪಾಂಡಿಯೂರು', 'ಪಾಂಡಿಪುರ' ಎಂದು ಶಾಸನಗಳು ಉಲ್ಲೇಖಿಸುವ ವರದಾ ನದಿ ದಂಡೆಯ, ಪಾನುಂಗಲ್ - 500ಕ್ಕೆ ಸೇರಿದ್ದ ಈ ಊರಲ್ಲಿ ಏಳು ಶಾಸನಗಳು ದೊರೆತಿವೆ. ಧರ್ಮಗಾವುಂಡನು ನಿರ್ಮಿಸಿದ ಬಸದಿಗೆ ಅವನ ಮೊಮ್ಮಗ 'ಶ್ರೀಪಾಲ ಹಾಗೂ ದ್ರೋಣ ಗಾವುಂಡ ದಾನವಿತ್ತ ಮಾಹಿತಿಯುಳ್ಳ ಚಾಳುಕ್ಯ ಕೀರ್ತಿವರ್ಮನ ಈ ಊರ ಶಾಸನ ಈಗ ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಇದೆ. ಬನಶಂಕರ ದೇವಾಲಯ ರಚನೆ ಹಾಗೂ ದಾನದ ವಿಚಾರ ಕ್ರಿ.ಶ. 1034ರ ಇಮ್ಮಡಿ ಜಯಸಿಂಹನ ಕಾಲದ ಶಾಸನದಲ್ಲಿದೆ. ದಂಡನಾಯಕ ಏಚಯ್ಯ ಪಾಂಡಿವೂರಲ್ಲಿ ಆಳುತ್ತಿದ್ದಾಗ ಕಾಳಿಗನು ಕಾಳೇಶ್ವರ ಗುಡಿ, ಕನ್ನೆಗೆರೆ ನಿರ್ಮಿಸಿದ ವಿಚಾರ ಕ್ರಿ.ಶ. 1044ರ ಶಾಸನದಲ್ಲಿದೆ. ಆಯ್ತವರ್ಮಗೌಡ ಮತ್ತು ಇತರರು ಇದೇ ಗುಡಿಗೆ ಕ್ರಿ.ಶ. 1067ರಲ್ಲಿ ದಾನ ನೀಡಿದ್ದಾರೆ. ಕಾಗಿನೆಲೆಯ ಸೋಮಗಾವುಂಡನ ವೀರಮರಣದ ವಿಚಾರವನ್ನು ಕ್ರಿ.ಶ. 12ನೇಯ ಶತಮಾನದ ಒಂದು ವೀರಗಲ್ಲು ಹೇಳಿದರೆ, ಮತ್ತೊಂದು, ಗೌಡನೊಬ್ಬನ ಮರಣದ ಸ್ಮಾರಕವಾಗಿದೆ.

ಈಗಿನ ಕಲ್ಲೇಶ್ವರ ಗುಡಿ ಬಳಿ ಕಾಳೇಶ್ವರ ಗುಡಿಯನ್ನು ಉಲ್ಲೇಖಿಸುವ ಶಾಸನಗಳಿರುವುದರಿಂದ ಅದೇ ಶಾಸನೋಕ್ತ ಗುಡಿಯೆಂದು ಭಾವಿಸಬಹುದು. ತೆರೆದ ಅರ್ಧಮಂಟಪ, ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದ ಈ ಗುಡಿಯಲ್ಲಿ ಶಿವಲಿಂಗದ ಹಿಂದೆ ವೀರಭದ್ರ ಮೂರ್ತಿಯಿದೆ. ಅಂತರಾಳದ ಕುಂಭಾಲಂಕೃತ ಕಂಬಗಳ ಮೇಲೆ ಮಕರ ತೋರಣವಿದ್ದು ಸುಂದರ ನಂದಿ, ಕಾರ್ತಿಕೇಯ ಮೂರ್ತಿಗಳಿವೆ. ನವರಂಗದಲ್ಲಿ ಎರಡು ಸೂರ್ಯಬಿಂಬಗಳಿದ್ದು ಒಂದು ರಾಷ್ಟ್ರಕೂಟ ಹಾಗೂ ಇನ್ನೊಂದು ಕಲ್ಯಾಣ ಚಾಳುಕ್ಯ ಶೈಲಿಯವು. ನವರಂಗವು ಆಕರ್ಷಕ ಚಾಳುಕ್ಯ ಕಂಬಗಳನ್ನು ಒಳಗೊಂಡಿದೆ. ಗುಡಿಯ ಪಕ್ಕದಲ್ಲಿ ಶಾಸನೋಕ್ತ ಕನ್ನೆಗೆರೆಯಿದೆ.

ಊರ ಪೂಜಾರಿ ಓಣಿಯಲ್ಲಿನ ರಾಮಲಿಂಗೇಶ್ವರ ಗುಡಿ ತೆರೆದ ಅರ್ಧಮಂಟಪ, ಗರ್ಭಗೃಹ, ನವರಂಗಗಳನ್ನು ಹೊಂದಿದ್ದು ಇದಕ್ಕೆ ಇತ್ತೀಚೆಗೆ ಮೊಗಸಾಲೆ ಸೇರಿಸಿದ್ದಾರೆ. ನವರಂಗದಲ್ಲಿ ಉಮಾಮಹೇಶ್ವರ ಹಾಗೂ ದೇವಿಯ ಮೂರ್ತಿಗಳಿದ್ದು ಇದರ ಕಂಬಗಳಲ್ಲಿ ರಾಷ್ಟ್ರಕೂಟರ ಪ್ರಭಾವದಿಂದ ಕುಂಭಗಳನ್ನು ಮೂಡಿಸಿದ್ದಾರೆ. ಬಹುಶಃ ಶಾಸನೋಕ್ತ ಬನಶಂಕರ ಗುಡಿ ಇದೇ ಇದ್ದು ಒಳಗೆ ಬೃಹತ್ ಶಿವಲಿಂಗವಿದೆ. ದೇವಾಲಯದ ಹಿಂದೆ ಗೋಸಾಸ ಕಲ್ಲು, ಮುಂದೆ ವೀರಗಲ್ಲುಗಳಿವೆ. ಈಶ್ವರ, ಬಸವಣ್ಣ, ಹನುಮಂತ, ದುರ್ಗಾ, ಬನಶಂಕರ, ಊರಬಳಿಯ ಗುಡ್ಡದಲ್ಲಿ ಮೈಲಾರನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಈ ಊರಲ್ಲಿವೆ.

**ಆಲದಗೇರಿ** : ಹಿರೇಕೆರೂರು ತಾಲೂಕಿನ ಆಲದಗೇರಿ (ಜನಸಂಖ್ಯೆ : 2,574) ಊರಿಗೆ ಸ್ಥಳನಾಮವು (ಹಿರೇಕೆರೂರಿನಿಂದ 16 ಕಿ.ಮೀ.) ಆಲದ ಮರದಿಂದ ಉತ್ಪತ್ತಿಯಾಗಿರುವುದೆಂದು ಸ್ಪಷ್ಟವಾಗುತ್ತದೆ. ಊರಿನಲ್ಲಿರುವ ಪ್ರಮುಖ ದೇವಾಲಯಗಳೆಂದರೆ ಮಾರುತಿ, ವೀರಭದ್ರ ಭರಮದೇವ, ದುರ್ಗವ್ವ, ಕೋಡಿಬರಮಪ್ಪ, ಈಶ್ವರ ಕರೆವ್ವ ಮುಂತಾದವುಗಳಿವೆ. ಮಾರುತಿ ಗುಡಿಯ ಎದುರಿನಲ್ಲಿ ಒಂದು ವಿಶಿಷ್ಟ ವೀರಗಲ್ಲಿನಲ್ಲಿ ಡೊಂಬರಾಟವನ್ನು ಪ್ರತಿನಿಧಿಸುವ ದೃಶ್ಯವಿರುವುದು ಕುತೂಹಲಕಾರಿಯಾಗಿದೆ. ಇದರ ಸಮೀಪವೇ ಇರುವ ಅಗಸೆ ಬಾಗಿಲ ಹತ್ತಿರ ಬೇವಿನ ಕಟ್ಟೆಯಲ್ಲಿರುವ ಯಾದವ ಸಿಂಘಣನ ಕಾಲದ ವೀರಗಲ್ಲಿನಲ್ಲಿ ಹುಲಿಯೊಡನೆ ಹೋರಾಡಿದ (ಕ್ರಿ.ಶ. 1247) ಬೊಪ್ಪನೆಂಬ ವೀರನ ಮರಣದ ದಾಖಲೆಯಿದೆ. ಇದರ ಪಕ್ಕದಲ್ಲೇ ಇರುವ ಇನ್ನೊಂದು ಕಲ್ಲಿನಲ್ಲಿ ವೀರನೊಬ್ಬನ (ಹೆಸರು ಅಸ್ಪ ಷ ) ಮರಣ ಹಾಗೂ ದಾನದ ಉಲ್ಲೇಖ. ಇದರ ಎದುರಿಗಿರುವ ನಿಷಿಧಿಕಲ್ಲಿನಲ್ಲಿ ಕ್ರಿ.ಶ13ನೇ ಶತಮಾನದ ಲಕ್ಷಣವನ್ನು ಹೊಂದಿರುವ ಶಾಸನವಿದ್ದು ಜೈನಧರ್ಮೀಯರಾದ ಮಾಣಿಕದೇವ ಹಾಗೂ ಮಲ್ಲಯ್ಯ ಇಬ್ಬರೂ ಸಲ್ಲೇಖನವ್ರತ ಕೈಗೊಂಡು ಮರಣ ಹೊಂದಿದ ಉಲ್ಲೇಖವಿದೆ. ಇದರ ಪಕ್ಕದಲ್ಲೆ ಇರುವ ಇದೇ ಕಾಲದ ಇನ್ನೊಂದು ನಿಷಿಧಿ ಕಲ್ಲಿನಲ್ಲಿ ಅಸ್ಪಷ್ಟ ಶಾಸನವಿದ್ದು ಅದರ ಪ್ರಕಾರ ನಂದಿಭಟಾರಕನ ಶಿಷ್ಯನೊಬ್ಬನ ಸಮಾಧಿ ಮರಣದ ವಿಚಾರವಿದೆ. ಇದೇ ಊರಿನ ಕರಿಯಮ್ಮನ ಗುಡಿ ಎದುರು ನಿಷಿಧಿಕಲ್ಲಿನಲ್ಲಿ ನಯಕೀರ್ತಿ ಭಟ್ಟಾರಕನ ಶಿಷ್ಯ ಸೋಮತ್ತೆಯ ಸಲ್ಲೇಖನ ವ್ರತದ ಬಗೆಗೆ ಉಲ್ಲೇಖವಿದೆ. ಹಾಗೂ ಇದರ ಪಕ್ಕದಲ್ಲಿರುವ ಇನ್ನೊಂದು ಕಲ್ಲಿನಲ್ಲಿ ನಯಕೀರ್ತಿಭಟ್ಟಾರಕನ ಶಿಷ್ಯೆ ಮಾಯಕ್ಕಳ ಸಮಾಧಿಮರಣದ ಬಗೆಗೆ ಉಲ್ಲೇಖವಿದೆ. ಊರಿನಲ್ಲಿ ಬಸದಿ ಬಣವೆಂಬ ಸ್ಥಳವಿದ್ದು ಅಲ್ಲಿ ಸಂಪೂರ್ಣವಾಗಿ ಬಿದ್ದುಹೋಗಿರುವಬಸದಿಯ ಅವಶೇಷಗಳಿದ್ದು ಒಂದು ಪಾರ್ಶ್ವನಾಥನ ಮುರಿದುಹೋದ ವಿಗ್ರಹವೂ ಬಿದ್ದಿದೆ. ವೀರಭದ್ರೇಶ್ವರ ಗುಡಿಯು ಇತ್ತೀಚೆಗೆ ನವೀಕರಿಸಲಾಗಿದ್ದು ಮೂಲ ವಿಗ್ರಹವು ವಿಜಯನಗರದ ಶೈಲಿಯಲ್ಲಿದೆ. ಇದರ ಪಕ್ಕದಲ್ಲಿ ಕುದುರೆ ಮೇಲೆ ಕುಳಿತು ಸಾಗುತ್ತಿರುವ ಇಬ್ಬರು ಖಡ್ಗಧಾರಿಗಳ ಶಿಲ್ಪವಿದೆ. ಇದರ ಸಮೀಪವೇ ಇರುವ ಕೋಡಿ ಭರಮಪ್ಪ ದೇವಾಲಯದಲ್ಲಿ ಚಾಳುಕ್ಯ ಶೈಲಿಯ ಶಿಲ್ಪಗಳಾದ ಮಹಿಷ ಮರ್ದಿನಿ, ಭೈರವ, ಒಬ್ಬ ವೀರನ ಶಿಲ್ಪ ಮುಂತಾದವುಗಳನ್ನು ಇರಿಸಲಾಗಿದೆ. ಊರಿನ ದೊಡ್ಡ ಕೇರಿಯಲ್ಲಿ ಕೆಲವು ದೇವಾಲಯದ ಅವಶೇಷಗಳು, ವಜ್ರಪಟ್ಟಿಕೆ ಅಲಂಕಾರ ಮುಂತಾದವುಗಳು ಅಲ್ಲಲ್ಲೆ ಬಿದ್ದಿರುವುದು ವ್ಯಕ್ತವಾಗುತ್ತದೆ. ದಾನಮ್ಮನ ಹೊಂಡದ ಬಳಿ ಹಂದಿಬೇಟೆಯ ದೃಶ್ಯವಿರುವ ಒಂದು ವೀರಗಲ್ಲಿದೆ. ಇದರ ಸಮೀಪವೇ ಈಶ್ವರ ದೇವಾಲಯವಿದ್ದು ಸಪ್ತಮಾತೃಕೆಯ ಪಟ್ಟಿಕೆ, ಒಂದು ವೀರಗಲ್ಲು ಹಾಗೂ ಒಂದು ಲಜ್ಜಾಗೌರಿಯ ಶಿಲ್ಪ ಫಲಕವಿದೆ. ಈ ದೇವಾಲಯವು ತ್ರಿಕೂಟಾಚಲವಾಗಿದ್ದು ಮೂರುಗರ್ಭಗೃಹಗಳು, ಒಂದು ಅರ್ಧಮಂಟಪ ಹಾಗೂ ನವರಂಗ ಮಾತ್ರ ಉಳಿದಿದೆ. ಮೂರೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಬಲಭಾಗದಲ್ಲಿರುವ ಶಿವಲಿಂಗಕ್ಕೆ ಗರುಡ ಪೀಠವಿದೆ. ಊರಿನಲ್ಲಿರುವ ವೀರಭದ್ರ ದೇವರ ಹೆಸರಿನಲ್ಲಿ ನಡೆಯುವ ಜಾತ್ರೆಯು ಸಾವಿರಾರು ಜನರನ್ನು ಆಕರ್ಷಿಸುತ್ತದೆ. ಆಲದಗೇರಿಯಲ್ಲಿ ಒಂದು ದರ್ಗಾಯಿದ್ದು ಇದು ಭರಪೂರ್ ಷಾ ವಲಿ ಎಂಬಾತನೆಂದು ಹೇಳಲಾಗುತ್ತದೆ. ಹಾಗೂ ರಜಬ್ ತಿಂಗಳಲ್ಲಿ ಉರುಸ್ ನಡೆಯುತ್ತದೆ.

**ಆಲೂರು** : ಮುಂಡರಗಿ ತಾಲೂಕಿನ ಆಲೂರು (ಜನಸಂಖ್ಯೆ : 3,251) ಮುಂಡರಗಿಯಿಂದ ವಾಯುವ್ಯಕ್ಕೆ 11 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಆಲೂರು' 'ಮಾಳದಾಲೂರು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು

ಮಾಸವಾಡಿ-140ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿದ್ದು, ಕ್ರಿ.ಶ. 1010ರ ಶಾಸನ ನೆರೆಯ ಸಿರಿವೂರ್ (ಶಿರೂರು) ಅಮರಾಚಾರಭಟ್ಟಾರಕರಿಗೆ ವೆಣ್ಣೆಯ ಭಟ್ಟರು ಆಲೂರಲ್ಲಿ ನೀಡಿದ ಭೂದಾನವನ್ನು ತಿಳಿಸಿದರೆ, ಕ್ರಿ.ಶ. 1068 ಶಾಸನದಿಂದ ಇದೊಂದು ಅಗ್ರಹಾರವಾಗಿದ್ದು 200 ಮಹಾಜನರನ್ನು ಹೊಂದಿತ್ತೆಂಬ ಅಂಶ ಗೊತ್ತಾಗುತ್ತದೆ. ಕ್ರಿ.ಶ. 1091ರ ಶಾಸನ ಲೆಂಕಸುರಿಗೆಯ ಮಹಾದೇವಯ್ಯ ಮಾಳದಾಲೂರಲ್ಲಿ ತಾನೇ ನಿರ್ಮಿಸಿದ ತ್ರೈಪುರುಷ ದೇವಾಲಯಕ್ಕೆಂದು ಬಿಟ್ಟ 200 ಮತ್ತರು ಭೂಮಿಯನ್ನು ದಾನ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 1124 ಇನ್ನೊಂದು ಶಾಸನ ದಂಡನಾಯಕ ಸುರಿಗೆಯ ನಾಗರಸರು 110 ಮತ್ತರು ಭೂಮಿಯನ್ನು ಸತ್ರಕ್ಕೆ, ಶಿಕ್ಷಣದ ವ್ಯವಸ್ಥೆಗೆ ಹಾಗೂ ಉಪಾಧ್ಯಾಯರಿಗೆ ವೇತನಕ್ಕೆಂದು 20 ಗದ್ಯಾಣವನ್ನು ವೃದ್ಧಿಪೊನ್ನಾಗಿ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1124ರ ಮತ್ತೊಂದು ಶಾಸನ ಸುರಿಗೆಯ ಪೆರ್ಮಾಡಿ ಅರಸರು ಮಂಟಪ ಕಟ್ಟಿಸಿ ದೇವಿಯ ಅಂಗರಂಗಭೋಗಕ್ಕೆ 50 ಮತ್ತರು ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 16ನೇ ಶತಮಾನದ ಮತ್ತೊಂದು ಶಾಸನ ಮಹಾಜನರು ದುರ್ಗಾಪರಮೇಶ್ವರಿಗೆ ಸುವರ್ಣದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ಮೇಲಿನ ಶಾಸನಗಳಿಂದ, ಇಲ್ಲಿ ಹಿಂದೆ ತ್ರೈಪುರುಷ, ಅಜ್ಜಮೇಶ್ವರ, ಹಾಗೂ ದೇವಿ ಗುಡಿ ಇತ್ತೆಂಬ ಅಂಶ ಸ್ಪಷ್ಟವಾಗುತ್ತಿದ್ದು, ಶಾಸನೋಕ್ತ ತ್ರೈಪುರುಷ ದೇವಾಲಯ ಇಂದಿನ ನಾಗೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ನಾಗೇಶ್ವರ ದೇವಾಲಯ ಪೂರ್ಣ ಆಯಾಕಾರದಲ್ಲಿದ್ದು ಗರ್ಭಗೃಹದಲ್ಲಿ ಮೂರು ಪ್ರತ್ಯೇಕ ಲಿಂಗಗಳಿದ್ದು, ಇವು ಕ್ರಮವಾಗಿ ಬ್ರಹ್ಮ ಶಿವ ಹಾಗೂ ವಿಷ್ಣುವನ್ನು ಪ್ರತಿನಿಧಿಸುತ್ತವೆ. ಗರ್ಭಗೃಹದ ಬಾಗಿಲವಾಡ ಪಂಚಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದ್ದು, ನಿರಾಡಂಬರವಾಗಿದೆ. ಇದರ ಮುಂದಿರುವ ತೆರೆದ ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕಿನಲ್ಲೂ ಮಾರ್ಗವಿದ್ದು, ಅರ್ಧಮಂಟಪವಿದೆ. ನವರಂಗದ ಅಂಚಲ್ಲಿ ಕಕ್ಷಾಸನವಿದೆ. ನವರಂಗದ ಬಲಬದಿಯಲ್ಲಿ ಸಪ್ತ ಮಾತೃಕಾ ಶಿಲ್ಪಪಟ್ಟಿಕೆಯಿದೆ. ಎಡಬದಿಯ ಕೋಷ್ಠದಲ್ಲಿ ಮಹಿಷಮರ್ದಿನಿಯ ಸುಂದರ ಬಿಡಿ ಶಿಲ್ಪವಿದೆ. ಸುಮಾರು ನಾಲ್ಕು ಅಡಿ ಎತ್ತರದ ಮಹಿಷನನ್ನು ಮರ್ದಿಸುತ್ತಿರುವ ದೇವಿಯ ಈ ಶಿಲ್ಪ ಉಗ್ರವಾಗಿದೆ. ನವರಂಗದ ನಡುವಣ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯ ವೃತ್ತ ಅಡ್ಡಕೊಯ್ತದ ರಚನೆಗಳಾಗಿದ್ದು ಛತ್ತಿನಲ್ಲಿ ನಾಲ್ಕು ದಳದ ಕಮಲವಿದೆ. ಇದು ದೇವಾಲಯವಷ್ಟೇ ಆಗಿರದೆ ಶಿಕ್ಷಣ ಕೇಂದ್ರವೂ ಆಗಿತ್ತೆಂಬ ಅಂಶವನ್ನು ಇಲ್ಲಿನ ಶಾಸನಗಳು ತಿಳಿಸುತ್ತವೆ. ಈ ಗುಡಿಯ ಶಿಖರ ಶಿಥಿಲವಾಗಿದೆ. ಈ ಗುಡಿಯ ಎಡಬದಿಯಲ್ಲಿ ಅನಂತಶಯನ ಗುಡಿಯಿದ್ದು, ಒಳಗೆ ಅನಂತಶಯನನ ಸುಂದರ ಶಿಲ್ಪವಿದೆ. ನಾಗೇಶ್ವರ ಗುಡಿಯ ಹಿಂಬದಿಯಲ್ಲಿ ವೀರಭದ್ರನ ಗುಡಿಯಿದ್ದು, ಗರ್ಭಗೃಹದಲ್ಲಿ ಆಳೆತ್ತರದ ವೀರಭದ್ರನ ಮೂರ್ತಿಯಿದೆ. ಗುಡಿಯ ಮುಂಬದಿಯಲ್ಲಿರುವ ಎತ್ತರವಾದ ಕಾಡುಕಲ್ಲು ನಿಲುವುಗಲ್ಲನ್ನು ನೆನಪಿಸುತ್ತದೆ. ಇದನ್ನು ಸ್ಥಳೀಕರು ನೆಟ್ಟಿಕಲ್ಲು ಭರಮಪ್ಪ ಎಂದು ಕರೆದು ಪೂಜಿಸುತ್ತಾರೆ. ಇವುಗಳ ಜೊತೆಗೆ ಊರಲ್ಲಿರುವ ಇತರ ಗುಡಿಗಳೆಂದರೆ ಹನುಮಂತ, ಈಶ್ವರ, ಬಸವಣ್ಣ, ಮೈಲಾರ, ದ್ಯಾಮವ್ವ, ಹೊನ್ನಂತ್ಯವ್ವ, ದುರ್ಗವ್ವ ಹಾಗೂ ಕರಿಯವ್ವ. ಇದಲ್ಲದೆ ಮಸೀದಿ, ಮೂರು ದರ್ಗಾಗಳೂ ಈ ಊರಲ್ಲಿ ಇವೆ.

**ಇಟಗಿ :** ರಾಣೆಬೆನ್ನೂರು ತಾಲೂಕಿನ ಇಟಗಿಯು (ಜನಸಂಖ್ಯೆ : 3,559) ರಾಣೆಬೆನ್ನೂರಿನಿಂದ ಆಗ್ನೇಯಕ್ಕೆ 14 ಕಿ.ಮೀ. ದೂರದಲ್ಲಿರುವ ಊರು. ಈ ಊರು ಶಾತವಾಹನರಷ್ಟು ಪ್ರಾಚೀನವಾದುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಪ್ರಾಚೀನ ಕಾಲದಲ್ಲಿ ಇಟಗಿ 30 ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು ಇಟ್ಟಿಗೆ-30 ಎಂದೇ ಪರಿಚಿತವಿದ್ದು ನಂತರದಲ್ಲಿ ನೂರುಂಬಾಡದಲ್ಲಿ (ರಟ್ಟಪಳ್ಳಿ-70ರ ಜೋಡಿ) ಐಕ್ಯವಾದ ಅಂಶವನ್ನು ಅನೇಕ ಶಾಸನಗಳು ತಿಳಿಸುತ್ತವೆ. ಈ ಊರಿಂದ ಒಂಭತ್ತು ಶಾಸನಗಳು ಈವರೆಗೆ ಪ್ರಕಟವಾಗಿದ್ದು, ಇವುಗಳಲ್ಲಿ ನಾಲ್ಕು ವೀರಗಲ್ಲು ಹಾಗೂ ನಾಲ್ಕು ದಾನ ಶಾಸನಗಳಿವೆ. ಉಳಿದುದೊಂದು ವೀರಮಾಸ್ತಿ ಶಾಸನವಾಗಿದೆ. ಇವುಗಳಲ್ಲಿ ಕ್ರಿ.ಶ. 916ರ ಶಾಸನ ವೀರನೊಬ್ಬನ ಮರಣ ದಾಖಲಿಸಿದ್ದರೆ, ಇದೇ ಕಾಲಕ್ಕೆ ಸೇರಿದ ಮತ್ತೊಂದು ವೀರಗಲ್ಲು ಶಾಸನ ಕೀಲ್ಗುಂಟೆಯಾದ ವೀರನಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಕ್ರಿ.ಶ. 1222ರ ಶಾಸನ ಊರಳಿವಿನಲ್ಲಿ ಮಡಿದ ಮಾದರಸನ ಬಗ್ಗೆ ಪ್ರಸ್ತಾಪಿಸುತ್ತದೆ. ಕ್ರಿ.ಶ. 1261ರ ಶಾಸನ ರಟ್ಟಿಹಳ್ಳಿ ಕಾಳಗದಲ್ಲಿ ಡಬ್ಬಿಣ ರಾಹುತನ ಸಂಬಂಧಿ ನಿಧನಗೊಂಡುದನ್ನು ಹೇಳಿದರೆ, ಕ್ರಿ.ಶ. 1268ರ ಶಾಸನ ಕುರುವ ವೈಧಯನ ವೀರ ಮರಣವನ್ನು ಸಾರುತ್ತದೆ. ಕ್ರಿ.ಶ. 1069ರ ಶಾಸನ ವಿರೂಪಾಕ್ಷ ದೇವರಿಗೆ ಭೂದಾನ ಮಾಡಿದ್ದನ್ನು ಹೇಳಿದರೆ, ಕಳಚೂರಿ ಸೋವಿದೇವನ ಶಾಸನ ಮಹಾಮಂಡಳೇಶ್ವರ ಗರುಡ ಪಾಂಡ್ಯದೇವರು ರಟ್ಟಿಪಳ್ಳಿಯಿಂದ ನೂರುಂಬಾಡವನ್ನು ಆಳುತ್ತಿರುವಾಗ ಮೂವರು ಅಧಿಕಾರಿಗಳು ಇಟಗಿಯಲ್ಲಿ ಕಟ್ಟಿಸಿದ ಕನ್ನರಗಟ್ಟಕ್ಕೆ ಹೆಗಡೆ ಕೇಶಿರಾಜ ಗಂಗಸಮುದ್ರದ ಕೆಳಗೆ ಭೂದಾನ ಮಾಡಿದನ್ನು ತಿಳಿಸುತ್ತದೆ. ಆ ಸಂದರ್ಭದಲ್ಲಿ ಪಾಂಡ್ಯದೇವನು ವಿರೂಪಾಕ್ಷ ದೇವರಿಗೆ ಭೂದಾನ ಮಾಡಿದ್ದನ್ನು ದಾಖಲಿಸಿದೆ. ಇವನ ಕಾಲದ ಮತ್ತೊಂದು ಶಾಸನದಿಂದ ಹೆಗಡೆ ಚೆನ್ನಯ್ಯ ಹಾಗೂ ಊರ ಗೌಡರು ಸೇರಿ ಅದೇ ದೇವರಿಗೆ ಎರಡು

ಮತ್ತರು ಭೂದಾನ ಮಾಡಿದ್ದನ್ನು ತಿಳಿಸಿದರೆ, ಸು.14ನೇ ಶತಮಾನದ ಮತ್ತೊಂದು ಶಾಸನ ಚೆಂಮಾಯಿ ಎಂಬಾಕೆ ಮಾಸ್ತಿಯಾದ ಅಂಶವನ್ನು ದಾಖಲಿಸಿದೆ.

ಮೇಲಿನ ಶಾಸನಗಳಲ್ಲಿ ಪ್ರಸ್ತಾಪಿಸಿರುವ ವಿರೂಪಾಕ್ಷ ಗುಡಿಯೇ ಊರ ಹೊರಗಿರುವ ವಿರೂಪಾಕ್ಷ ದೇವಾಲಯವಾಗಿದ್ದು ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ಬಾಗಿಲವಾಡಗಳು ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಗರ್ಭಗೃಹದಲ್ಲಿ ಶಿವಲಿಂಗ, ಮುಂದೆ ನಂದಿ ಮೂರ್ತಿಯಿದೆ. ನವರಂಗದ ದೇವಕೋಷ್ಠಗಳಲ್ಲಿದ್ದ ಮೂರ್ತಿಗಳು ಕಣ್ಮರೆಯಾಗಿವೆ. ನವರಂಗದ ನಡುವಣ ಛತ್ತನ್ನು ಸರಳವಾಗಿ ಕಮಲದಿಂದ ಅಲಂಕರಿಸಲಾಗಿದೆ. ಈ ಗುಡಿಗೆ ಪೂರ್ವ ಮತ್ತು ದಕ್ಷಿಣದಲ್ಲಿ ಎರಡು ದ್ವಾರಗಳಿವೆ. ಈ ಗುಡಿಯ ಭಿತ್ತಿ, ಶಿಖರ ಭಾಗಗಳು ಇತ್ತೀಚೆಗೆ ಜೀರ್ಣೋದ್ಧಾರವಾಗಿವೆ. ಈ ಗುಡಿ ಸುಮಾರು ಕ್ರಿ.ಶ. 10-11ನೇ ಶತಮಾನದ ನಿರ್ಮಾಣವಾಗಿದ್ದು ಊರಲ್ಲಿರುವ ಗುಡಿಗಳಲ್ಲಿ ಶಾಸನೋಕ್ತವಾಗಿರುವ ಏಕೈಕ ಗುಡಿಯಾಗಿದೆ.

ಊರ ನಡುವೆ ಇರುವ ಬಸವಣ್ಣನ ಗುಡಿಯೂ ದ್ವಿಕೂಟವಾಗಿದ್ದಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗವನ್ನು ಹೊಂದಿದ್ದು (ಮುಖಮಂಟಪ ಇತ್ತೀಚಿನ ಸೇರ್ಪಡೆಯಾಗಿದೆ) ಪ್ರವೇಶದ್ವಾರವು ದಕ್ಷಿಣ ಪಾರ್ಶ್ವದಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದರೆ ನವರಂಗದಲ್ಲಿ ನಂದಿಯಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದರೂ ಅವು ಬರಿದಾಗಿವೆ. ಅಂಗಾತ ಬಿದ್ದಿರುವ ರಾಕ್ಷಸ ದೇಹ ಕೋಣ ಶಿರದ ಮಹಿಷನನ್ನು ಎಡಗಾಲಲ್ಲಿ ಮೆಟ್ಟಿ ಎಡಗೈಲಿ ಕೋಡನ್ನು ಹಿಡಿದು ಬಲಗೈಯಿಂದ ತ್ರಿಶೂಲದಿಂದ ಇರಿಯುತ್ತಿರುವ ಷಡ್ಭುಜ ಮಹಿಷಮರ್ದಿನಿ ದೇವಿ ಮೂರ್ತಿ ಉಗ್ರವಾಗಿದೆ. ಈ ಗುಡಿಯ ಬದಿಯಲ್ಲೇ ಐದು ವೀರಗಲ್ಲುಗಳಿದ್ದು, ಇವುಗಳಲ್ಲೊಂದು ಅಪರೂಪದ ಕೀಲ್ಗುಂಟೆ ವೀರಗಲ್ಲಾಗಿದೆ.

ಈ ಗುಡಿಯ ಹಿಂಬದಿಯಲ್ಲೇ ಗರ್ಭಗೃಹ ಮತ್ತು ಅರ್ಧಮಂಟಪ ಹೊಂದಿರುವ ಕಲ್ಲೇಶ್ವರ ಗುಡಿಯಿದೆ. ಗರ್ಭಗೃಹದಲ್ಲಿ ಸುಮಾರು ಕ್ರಿ.ಶ. 8-9ನೇ ಶತಮಾನದ ಬೃಹತ್ತಾದ ಶಿವಲಿಂಗವಿದೆ. ಬಾಗಿಲವಾಡ ಹಾಗೂ ಅರ್ಧಮಂಟಪದ ಸ್ತಂಭ ರಾಷ್ಟ್ರಕೂಟರ ಲಕ್ಷಣವನ್ನು ಹೊಂದಿದ್ದು ಗುಡಿಯ ಮುಂಬದಿಯಲ್ಲಿ ಅದರ ಇಟ್ಟಿಗೆ ತಳಪಾಯವನ್ನು ಗುರುತಿಸಬಹುದಾಗಿದೆ. ಇಲ್ಲಿನ ಮತ್ತೊಂದು ಆಕರ್ಷಣೆಯೆಂದರೆ ರಾಮಲಿಂಗೇಶ್ವರ ಗುಡಿ. ಗರ್ಭಗೃಹ ಅಂತರಾಳ ಮತ್ತು ವಿಶಾಲವಾದ ಬಹುಸ್ತಂಭಗಳ ಸಭಾಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಗರ್ಭಗೃಹದಲ್ಲಿ ಸುಮಾರು ಕ್ರಿ.ಶ. 10-11ನೇ ಶತಮಾನದ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಜಾಲಂಧ್ರವನ್ನು ಹೊಂದಿದೆ. ಮೇಲ್ಭಾಗದಲ್ಲಿ ಮಕರ ತೋರಣದಲ್ಲಿ ನಡುವೆ ದ್ರಾವಿಡ ನಾಗರಶೈಲಿಯ ಪಂಚ ಶಿಖರಗಳಿವೆ. ಅಂತರಾಳದಲ್ಲಿ ದಶಭುಜ ದುರ್ಗಿಯ ಸುಂದರ ಶಿಲ್ಪವಿದೆ. ನವರಂಗದ ದಕ್ಷಿಣಮೂಲೆಯಲ್ಲಿ ಭವ್ಯವಾದ ವೀರಭದ್ರನ ಶಿಲ್ಪವಿದೆ. ವಿವಿಧ ಮಾದರಿಯ 30 ಕಂಬಗಳ ಮೇಲೆ ನಿಂತಿರುವ ತೆರೆದ ಸಭಾಮಂಟಪವಿದ್ದು ಮುಂದೆ ಮುಖಮಂಟಪವಿದೆ. ಸಭಾಮಂಟಪದ ನಡುವಣ ಛತ್ತಲ್ಲಿ ಸರಳವಾದ ಕಮಲದ ಕೆತ್ತನೆಯಿದೆ.

ಕರಿಯಮ್ಮನ ಗುಡಿ ಹನುಮಂತ ಗುಡಿಗಳ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಕರಿಯಮ್ಮನ ಗುಡಿ ಆವರಣದಲ್ಲಿ ವಿಜಯನಗರ ಕಾಲದ ಸೂರ್ಯನ ಮೂರ್ತಿ ಇದೆ. ಪೀಠಸ್ಥ ಚತುರ್ಮುಖ ಬ್ರಹ್ಮನ ಮೂರ್ತಿಯೂ ಇಲ್ಲೇ ಇದೆ. ಈ ಗುಡಿಯಲ್ಲಿ ಕರಿಯಮ್ಮ ಮತ್ತು ಗುತ್ತಮ್ಮನನ್ನು ಪೂಜಿಸುತ್ತಾರೆ. ಇವುಗಳ ಜೊತೆಗೆ ಊರಲ್ಲಿ, ವೀರಭದ್ರ ಮಾಲತೇಶ, ಮುಂತಾದ ಗುಡಿಗಳಿದ್ದು ಅಜ್ಜಯ್ಯನ ಗದ್ದುಗೆ ಹಗೂ ಹಾಲೇಶ್ವರ ಮಠಗಳಿವೆ. ಹಾಲೇಶ್ವರ ಮಠದ ಆವರಣದಲ್ಲಿ ರುಂಡವಿಲ್ಲದೆ ನಿಂತಿರುವ ಜಿನತೀರ್ಥಂಕರನ ಶಿಲ್ಪ ನಮ್ಮ ಗಮನ ಸೆಳೆಯುತ್ತದೆ. ಊರಲ್ಲಿ ಒಂದು ಮಸೀದಿ ಇದೆ.

**ಇಟಗಿ :** ರೋಣ ತಾಲೂಕಿನ ಇಟಗಿಯ (ಜನಸಂಖ್ಯೆ : 3,470) ರೋಣದಿಂದ ಈಶಾನ್ಯಕ್ಕೆ 13 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಯಿಟ್ಟಿಗೆ' 'ಇಟ್ಟಿಗೆ' ಎಂದೇ ಉಲ್ಲೇಖಗೊಂಡಿದ್ದು, ಹಿಂದೆ ಕಿಸುಕಾಡು - 70ಕ್ಕೆ ಸೇರಿದ ಮಹಾ ಅಗ್ರಹಾರವಾಗಿತ್ತು. ಈ ಊರಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಕ್ರಿ.ಶ. 1054ರ ಶಾಸನ ಮಹಾ ಅಗ್ರಹಾರ ಇಟ್ಟಿಗೆಯಲ್ಲಿ ಸ್ಥಳೀಕನಾದ ಶ್ರೀಪತಿ ಚಮೂಪನು ಶ್ರೀಸ್ವಯಂಭು ದೇವಾಲಯವನ್ನು ನಿರ್ಮಿಸಿ, ಅದಕ್ಕೆ ಭೂದಾನ ಮಾಡಿದ ಸಂದರ್ಭದಲ್ಲಿ, ನಾಡೊಡೆಯ ವಿಕ್ಕರಸ, ಗ್ರಾಮದ ಪೆರ್ಗಡೆ ಬಲ್ಲಯ್ಯ, ನೆರೆಯ ಹೊನ್ನಿಗನೂರ ಜನಗಳು ವಿವಿಧ ದಾನ ಮಾಡಿದ ಅಂಶವನ್ನು ತಿಳಿಸಿದರೆ, 1992ರಲ್ಲಿ ಎಸ್. ರಾಜೇಂದ್ರಪ್ಪ ಅವರು ಪತ್ತೆ ಹಚ್ಚಿ ವರದಿ ಮಾಡಿರುವ ಸುಮಾರು 11ನೇ ಶತಮಾನದ

ನಿಷಿಧಿ ಶಾಸನದಿಂದ, ಇದೊಂದು ಜೈನಕೇಂದ್ರವೂ ಆಗಿತ್ತೆಂಬ ಅಂಶ ಮೊದಲ ಬಾರಿಗೆ ಬೆಳಕಿಗೆ ಬಂದಂತಾಗಿದೆ. ಮೇಲೆ ಚರ್ಚಿಸಿರುವ ಶಾಸನಗಳಿಂದ ಇಟಗಿಯಲ್ಲಿ ಸ್ವಯಂಭು ಸಿದ್ಧೇಶ್ವರ ಮತ್ತು ರಾಜೇಶ್ವರ ದೇವಾಲಯಗಳಿದ್ದವೆಂಬ ಅಂಶ ಗೊತ್ತಾದರೂ ಇಂದು ಉಳಿದಿರುವುದು ಶಂಭುಲಿಂಗ ದೇವಾಲಯ ಒಂದೇ. ಶಾಸನದಲ್ಲಿ ಸ್ವಯಂಭು ದೇವಾಲಯವೆಂದೇ ಕರೆದಿರುವ ಇಂದಿನ ಶಂಭುಲಿಂಗ ದೇವಾಲಯ ಕ್ರಿ.ಶ. 1054ರಲ್ಲಿ ಶ್ರೀಧರ ದಂಡನಾಯಕನಿಂದ ನಿರ್ಮಾಣಗೊಂಡಿದ್ದು ಚಾಲುಕ್ಯ ಶೈಲಿಯ ಸುಂದರ ದೇವಾಲಯವಾಗಿದೆ. ಕೆರೆಯ ದಂಡೆಯ ಮೇಲಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭು ಲಿಂಗವಿದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ದ್ವಾರಬಂಧ ಪಂಚಶಾಖಾಲಂಕಾರವನ್ನು ಹೊಂದಿದ್ದು, ಇಕ್ಕೆಲದಲ್ಲಿ ಜಾಲಾಂಧ್ರವಿದೆ. ನವರಂಗದಲ್ಲಿರುವ ದೇವಕೋಷ್ಠಗಳಲ್ಲಿ ಶಿವಪಾರ್ವತಿ, ಮಹಿಷಮರ್ದಿನಿ, ಕಾರ್ತಿಕೇಯ ಮತ್ತು ಆದಿತ್ಯನ ಸುಂದರ ಬಿಡಿ ಶಿಲ್ಪಗಳಿವೆ. ನವರಂಗದ ಪ್ರವೇಶದ್ವಾರವು ಪಂಚಶಾಖಾಲಂಕೃತವಾಗಿದ್ದು, ಆಕರ್ಷಕವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನಕ್ಷತ್ರಾಕಾರದಲ್ಲಿರುವ ಈ ಗುಡಿಯ ಸಭಾಮಂಟಪವನ್ನು ಆರು ಮಾದರಿಯ ಸ್ತಂಭಗಳು ಹೊತ್ತು ನಿಂತಿದ್ದು, ಇಳಿಜಾರಾದ ಛಾವಣಿಯನ್ನು ಹೊಂದಿದೆ. ಸಭಾಮಂಟಪದ ಅಂಚಿನುದ್ದಕ್ಕೂ ಕಕ್ಷಾಸನವನ್ನು ರಚಿಸಲಾಗಿದ್ದು, ಸಭಾಮಂಟಪಕ್ಕೆ ಮೂರು ದಿಕ್ಕಿನಿಂದಲೂ ಮುಖಮಂಟಪವಿರುವ ಪ್ರವೇಶದ್ವಾರಗಳಿವೆ. ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು, ಗರ್ಭಗೃಹಕ್ಕೆ ಸುಂದರವಾದ ಕದಂಬನಾಗರ ಶಿಖರವಿದೆ.

ಭೀಮಮ್ಮ ಎಂಬ ಶರಣೆ 19ನೇ ಶತಮಾನದ ಕೊನೆಯಲ್ಲಿ ಪವಾಡ ಮೆರೆದು ಮಡಿದಿದ್ದು, ಅವಳ ಹೆಸರಿನಲ್ಲೇ ಭೀಮಾಂಬಿಕೆ ಗುಡಿ, ಧರ್ಮರ ಮಠಗಳಿದ್ದು ಪ್ರತೀ ಅಮಾವಾಸ್ಯೆಯಂದು ಸಾವಿರಾರು ಜನ ಈ ಗುಡಿಗೆ ಸಂದರ್ಶನ ನೀಡುತ್ತಾರೆ. ಇದರ ಜೊತೆಗೆ ಊರಲ್ಲಿ ರಾಮನಾಥ, ಬಸವಣ್ಣ, ವೆಂಕಟೇಶ್ವರ, ಗಣಪತಿ, ಹನುಮಂತ, ಮೈಲಾರ, ದುರ್ಗಮ್ಮ, ದ್ಯಾಮವ್ವ ಮತ್ತು ಕರಿಯಮ್ಮ ಗುಡಿಗಳಿವೆ. ಕೊಪ್ಪಳದ ಗವಿಮಠದ ಒಂದು ಶಾಖೆ ಇಲ್ಲಿದೆ. ಇಲ್ಲಿ ಎರಡು ಮಸೀದಿಗಳು ಹಾಗೂ ಒಂದು ದರ್ಗಾ ಇವೆ.

**ಉಕ್ಕುಂದ** : ರಾಣೆಬೆನ್ನೂರು ತಾಲೂಕಿಗೆ ಸೇರಿದ ಉಕ್ಕುಂದವು (ಜನಸಂಖ್ಯೆ : 2,209) ರಾಣೆಬೆನ್ನೂರಿನಿಂದ ನೈಋತ್ಯಕ್ಕೆ 15 ಕಿ.ಮೀ. ದೂರದಲ್ಲಿದೆ. ಈ ಊರು ರಾಷ್ಟ್ರಕೂಟರ ಕಾಲದಷ್ಟು ಪುರಾತನದ್ದಾಗಿದ್ದು, ಪ್ರಾಚೀನ ಶಾಸನಗಳಲ್ಲಿ 'ಒಕ್ಕುನ್ದ', 'ಒಕ್ಕುಂದ' ಎಂದೇ ಉಲ್ಲೇಖಿತಗೊಂಡಿದೆ. ಈ ಊರಲ್ಲಿ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ಎರಡು ಶಾಸನಗಳಿದ್ದು, ಇವು ಇಲ್ಲಿನ ಕಲಿದೇವರಿಗೆ ಹಾಗೂ ಮೂಲಸ್ಥಾನ ದೇವರಿಗೆ ಪಿರಿಯಕೆರೆಯ ಕೆಳಗಿನ ಭೂಮಿಯನ್ನೂ ಹಾಗೂ ಹಲವಾರು ತೆರಿಗೆ ಸುಂಕಗಳನ್ನು ಊರ ಗೌಡ ಹಾಗೂ ಅನೇಕ ಅಧಿಕಾರಿಗಳು ದಾನ ಮಾಡಿದ ಅಂಶವನ್ನು ತಿಳಿಸುತ್ತವೆ. ಊರ ನಡುವೆ ಇರುವ ಇಟ್ಟಿಗೆಯಿಂದ ಕಟ್ಟಿದ ಕಲ್ಲಪ್ಪನಗುಡಿ (ಶಾಸನೋಕ್ತ ಕಲಿದೇವರ ಗುಡಿ) ಸುಮಾರು ಕ್ರಿ.ಶ. 10-11ನೇ ಶತಮಾನದ ರಚನೆಯಾಗಿದೆ. ಪೂರ್ವಾಭಿಮುಕವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ನವರಂಗದ ಪೂರ್ವ ಮತ್ತು ಉತ್ತರ ಭಾಗದಲ್ಲಿ ಚೌಕಾಕಾರವಾದ ಅಂಕಣಗಳಿರುವುದೊಂದು ವಿಶೇಷವಾಗಿದೆ. ಇದು ಪಾರ್ಶ್ವದ್ವಾರವನ್ನು ಹೊಂದಿದೆ. ನವರಂಗವನ್ನು ದಕ್ಷಿಣದಲ್ಲಿರುವ ಪ್ರವೇಶದ್ವಾರದಿಂದ ಪ್ರವೇಶಿಸುತ್ತಿದ್ದಂತೆ ಎದುರಿನ ಅಂಕಣದಲ್ಲಿ ಪದ್ಮಾಸೀನ ಸರಸ್ವತಿ ಹಾಗೂ ಕೇಶವ ಶಿಲ್ಪಗಳಿದ್ದು ಪೂರ್ವದ ಅಂಕಣದಲ್ಲಿ ಸಮಭಂಗಿಯಲ್ಲಿ ನಿಂತಿರುವ ಆದಿತ್ಯ ಹಾಗೂ ಮಹಿಷನನ್ನು ಮೆಟ್ಟಿ ಭರ್ಜಿಯಿಂದ ರಾಕ್ಷಸನನ್ನು ಮುಗಿಲತ್ತ ಚಿಮ್ಮುತ್ತಿರುವ ಮಹಿಷಮರ್ದಿನಿಯ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಡುವೆ ನಂದಿ ಮೂರ್ತಿಯಿದೆ. ಈ ದೇವಾಲಯದ ಬಾಗಿಲವಾಡಗಳು ಸರಳವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿವೆ. ಈ ಗುಡಿಯ ಆವರಣದಲ್ಲಿ ರಾಷ್ಟ್ರಕೂಟರ ಕಾಲದ ಗಣಪತಿ ಮತ್ತು ಆದಿತ್ಯನ ಭಿನ್ನವಾದ ಶಿಲ್ಪಗಳಿವೆ.

ಊರ ಕೆರೆಯ ಬಳಿ, ಪಾರ್ವತಿ ಗುಡಿ ಹಾಗೂ ನಿಂತ ಬಸವಣ್ಣನ ಗುಡಿಗಳು ಒಂದೇ ಪ್ರಾಕಾರದಲ್ಲಿ ಅಕ್ಕಪಕ್ಕದಲ್ಲಿವೆ. ಈ ಎರಡೂ ಗುಡಿಗಳು ಇತ್ತೀಚಿನದ್ದಾಗಿವೆ. ಪಾರ್ವತಿ ಗುಡಿ ಜಾತ್ರೆಯು ಹೋಳಿ ಹುಣ್ಣಿಮೆ ಸಮಯಕ್ಕೆ ನಡೆಯುತ್ತದೆ. ಈ ಗುಡಿಯ ಹಿಂಬದಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲಿನ ತುಂಡು, ಪೀಠಸ್ಥ ಚತುರ್ಮುಖ ಬ್ರಹ್ಮ ಹಾಗೂ ಗಣಪತಿಯ ಮೂರ್ತಿಗಳು ಇವೆ. ಇದಲ್ಲದೆ ಊರಲ್ಲಿ ಹನುಮಂತ, ದ್ಯಾಮವ್ವ, ವೀರಭದ್ರ, ಭರಮಪ್ಪ, ಮಾತಂಗವ್ವ ಮುಂತಾದ ದೇವತೆಗಳ ಗುಡಿಗಳಿವೆ.

**ಉಣಕಲ್ಲು** : ಹುಬ್ಬಳ್ಳಿಯಿಂದ ವಾಯುವ್ಯಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿದ್ದ ಈ ಊರು ಇಂದು ಹುಬ್ಬಳ್ಳಿ ನಗರದೊಂದು ಬಡಾವಣೆಯಾಗಿ ಮಾರ್ಪಟ್ಟಿದೆ. ಪ್ರಾಚೀನ ಶಾಸನಗಳಲ್ಲಿ 'ಉಣಕಲ್ಲು' ಎಂದೇ ಉಲ್ಲೇಖಿತಗೊಂಡಿರುವ ಇದು,

ಹಿಂದೆ ಹಲಸಗಿ-12,000ಕ್ಕೆ ಸೇರಿದ್ದು ಮೂವತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಉಣಕಲ್ಲು-30 ಎಂದೇ ಪರಿಚಿತವಾಗಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಒಂದು ಉಗುರೇಶ್ವರದ ಕೇಶವ ದೇವರನ್ನು ವಾಮದೇವ ಪಂಡಿತನು ಪ್ರತಿಷ್ಠಾಪಿಸಿದ್ದನ್ನು ತಿಳಿಸಿದರೆ, ಇನ್ನೊಂದು ಶಾಸನ ಬಹಳ ಮುಸುಕಾಗಿದ್ದು ಯಾದವ ಮಲ್ಲಿದೇವನನ್ನು ಉಲ್ಲೇಖಿಸುತ್ತದೆ. ಈ ಊರಲ್ಲಿ ಚಾಳುಕ್ಯ ಚೋಳರ ನಡುವೆ ಒಂದು ಭಾರೀ ಯುದ್ಧ ನಡೆದ ಪ್ರಸಂಗ ಬೇರೊಂದು ಶಾಸನದಲ್ಲಿ ದಾಖಲಾಗಿದೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ಈ ಗುಡಿ ಒಂದು ಉತ್ಕೃಷ್ಟ ಕಲಾಕೃತಿಯಾಗಿದೆ. ಈ ದೇವಾಲಯದ ವಿನ್ಯಾಸ ವಿಶಿಷ್ಟವಾಗಿರುವುದೊಂದು ವಿಶೇಷ. ಗರ್ಭಗೃಹ, ಪ್ರದಕ್ಷಿಣಾಪಥ ಅಂತರಾಳ ಹಾಗೂ ನಾಲ್ಕು ದಿಕ್ಕಲ್ಲೂ ಮುಖಮಂಟಪವನ್ನು ಹೊಂದಿರುವ ಈ ಗುಡಿಯ ಮೂಲ ಗರ್ಭಗೃಹದಲ್ಲಿ ಈಗ ಶಿವಲಿಂಗವಿರುವ ಸ್ಥಳದಲ್ಲಿ, ಹಿಂದೆ ಚತುರ್ಮುಖ ಶಿವಲಿಂಗವಿದ್ದು, ಅದನ್ನಿಂದು ಪಶ್ಚಿಮದ ಮುಖಮಂಟಪದಲ್ಲಿ ಇಡಲಾಗಿದೆ. ಈ ಗರ್ಭಗೃಹದ ವಿಶೇಷವೆಂದರೆ ಇದಕ್ಕೆ ನಾಲ್ಕು ದಿಕ್ಕಿಂದಲೂ ಪ್ರವೇಶಿಸಲು ದ್ವಾರವಿದ್ದು ಪ್ರತಿಯೊಂದು ದ್ವಾರದ ಬಾಗಿಲವಾಡವೂ ಆಕರ್ಷಕವಾದ ಪಂಚಶಾಖಾಲಂಕೃತ ಕೆತ್ತನೆಯನ್ನು ಹೊಂದಿದ್ದು, ಬುಡದಲ್ಲಿ, ಚೌರಿಧಾರಿ, ರತಿ, ಮನ್ಮಥ, ದ್ವಾರಪಾಲಕರನ್ನು ಕೆತ್ತಿದ್ದಾರೆ. ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥವಿದ್ದು, ಇದೂ ಕೂಡ ನಾಲ್ಕು ದಿಕ್ಕಲ್ಲೂ ಪ್ರವೇಶದ್ವಾರವನ್ನು ಹೊಂದಿದ್ದು, ಇವುಗಳ ದ್ವಾರಬಂಧವೂ ಆಕರ್ಷಕವಾಗಿವೆ. ಇದಕ್ಕೆ ಪೂರಕವಾಗಿ ನಾಲ್ಕು ದಿಕ್ಕಲ್ಲೂ ಎರಡಂಕಣದ ಮುಖಮಂಟಪವಿದ್ದು, ಇವುಗಳಲ್ಲಿ ಪೂರ್ವದ್ವಾರದ ಬಾಗಿಲವಾಡವೊಂದನ್ನುಳಿದು ಉಳಿದ ಮೂರು ದ್ವಾರದ ಬಾಗಿಲವಾಡಗಳು ನಿರಾಡಂಬರವಾಗಿವೆ. ಇವುಗಳಿಗೆ ತ್ರಿಶಾಖಾ ಪಟ್ಟಿಕೆಯಷ್ಟೆ ಇದ್ದು, ಇಕ್ಕೆಲದಲ್ಲಿ ಕಮಲ, ಬಳ್ಳಿಯ ಆಲಂಕಾರಿಕ ಜಾಲಂಧ್ರಗಳಿವೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಪೂರ್ವದ ಪ್ರಧಾನ ದ್ವಾರ ತ್ರಿಶಾಖಾಲಂಕಾರವನ್ನು ಹೊಂದಿದ್ದು ಮೇಲೆ ಆಕರ್ಷಕವಾದ ಮಕರ ತೋರಣವಿದೆ. ಇದರ ಜಾಲಂಧ್ರವು ನರ್ತಕ, ನರ್ತಕಿ, ವಾದ್ಯಗಾರ, ವಾದ್ಯಗಾರ್ತಿಯರ ಕಿರುಕೆತ್ತನೆಯಿರುವ ವೃತ್ತಾಕಾರದ ಬಳ್ಳಿಯಿಂದ ಕೂಡಿದ್ದು, ಈ ಬಾಗಿಲವಾಡವೇ ಒಂದು ಶ್ರೇಷ್ಠ ಕಲಾಕೃತಿ ಎಂದರೆ ತಪ್ಪಾಗಲಾರದು. ದೇವಾಲಯದ ಗರ್ಭಗೃಹ, ಮುಖಮಂಟಪದ ಛತ್ತುಗಳಲ್ಲಿ ಕಮಲಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಪೂರ್ವದ್ವಾರದ ಇಕ್ಕೆಲದಲ್ಲಿ ದೇವಕೋಷ್ಠಗಳಿವೆ. ದೇವಾಲಯದ ಮುಂಬದಿಯಲ್ಲಿ ಸಭಾಮಂಟಪವಿದೆ. ಈ ಗುಡಿಯ ಅದಿಷ್ಠಾನವು ಬಳ್ಳಿ, ಕುದುರೆ, ಆನೆಗಳ ಸಾಲುಳ್ಳ ಪಟ್ಟಿಕೆಯನ್ನು ಹೊಂದಿದೆ. ಈ ದೇವಾಲಯದ ಹೊರುವ ಭಿತ್ತಿಯು ವೈವಿಧ್ಯಮಯವಾದ ಕಿರುಶಿಖರಗಳಿಂದ ಆಲಂಕಾರಿಕ ಕಂಬಗಳನ್ನು ಒಳಗೊಂಡಿದ್ದು, ನಡುವೆ ದೇವಾನುದೇವತೆಗಳ ಕೆತ್ತನೆಯನ್ನು ಹೊಂದಿದೆ. ಈ ದೇವಾಲಯದ ಶಿಖರದಲ್ಲಿ ನಟರಾಜ, ಉಗ್ರನರಸಿಂಹ, ಗಣಪತಿ, ಸರಸ್ವತಿ, ಮಹಿಷ ಮರ್ದಿನಿ, ಮುಂತಾದ ದೇವತೆಗಳ ಕೆತ್ತನೆಯಿದ್ದು, ಕಪೋತದ ಉದ್ದಕ್ಕೂ ವಿವಿಧ ದೇವತೆಗಳನ್ನು ಬಹಳ ನಯನಮನೋಹರವಾಗಿ ಕೆತ್ತಿದ್ದಾರೆ. ಸುಮಾರು 12ನೇ ಶತಮಾನದ ರಚನೆಯಾದ ಈ ಗುಡಿಯ ಮೇಲೆ ಹೊಯ್ಸಳ ವಾಸ್ತುಶಿಲ್ಪದ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ. ಈ ಗುಡಿಯು ಕೇಂದ್ರ ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದೆ. ಈ ಊರ ಬಳಿಯಿರುವ 'ಉಣಕಲ್ಲು ಗುಡ್ಡ'ಕ್ಕೆ 'ನೃಪತುಂಗ ಬೆಟ್ಟ' ಎಂದು ಕರೆದು ಸುಂದರ ಉಪವನವನ್ನು ಮಾಡಲಾಗಿದೆ. ಉಣಕಲ್ಲಿನ ವಿಶಾಲವಾದ ಕೆರೆ ಮತ್ತೊಂದು ಆಕರ್ಷಣೆಯಾಗಿದ್ದು ಕೆರೆಯಲ್ಲಿ ನೀರಿದ್ದಾಗ ಬೋಟಿಂಗ್ ಸೌಲಭ್ಯವೂ ಇರುವುದು. ಇವುಗಳ ಜೊತೆಗೆ ಕಲ್ಮೇಶ್ವರ, ವೀರಭದ್ರ, ಬಸವಣ್ಣ, ಸಿದ್ದಪ್ಪ, ಮೈಲಾರ, ಹನುಮಪ್ಪ, ಪಾಂಡುರಂಗ, ವಿಠೋಬ, ದ್ಯಾಮವ್ವ, ದುರ್ಗವ್ವ, ಹಾಗೂ ಕರಿಯಮ್ಮನ ದೇವಾಲಯಗಳಿವೆ. ಇಲ್ಲಿನ ಸಿದ್ಧಪ್ಪಾಜಿ ಮಠ ಪ್ರಸಿದ್ಧವಾಗಿದೆ.

ಈ ಊರಲ್ಲಿ ನಾಲ್ಕು ಮಸೀದಿಗಳು ಹಾಗೂ ಮೆಹಬೂಬು ಸುಬಾನಿಯ ಒಂದು ದರ್ಗಾ ಇದೆ. ಕ್ರೈಸ್ತರಿಗಾಗಿ ಎರಡು ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್ ಚರ್ಚ್‌ಗಳಿವೆ.

**ಉಪ್ಪುಣಸಿ** : ಹಾನಗಲ್ ತಾಲೂಕಿನ ಉಪ್ಪುಣಸಿ (ಜನಸಂಖ್ಯೆ : 2,693) ತಾಲೂಕಿನ ಗಡಿಗ್ರಾಮವಾಗಿದೆ. ಈ ಊರು ಹಾನಗಲ್‌ನಿಂದ ಆಗ್ನೇಯಕ್ಕೆ ಸುಮಾರು 35 ಕಿ.ಮೀ. ದೂರದಲ್ಲಿದೆ. ಹಾವೇರಿಯಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಈ ಊರಿಗೆ ಅಲ್ಲಿಂದ ರಸ್ತೆ ಇದೆ. ಸುಂದರ ದೇವಾಲಯ ಸಮುದಾಯವನ್ನು ಹೊಂದಿರುವ ಈ ಊರ ಕೆರೆ ಬಳಿಯ ಕಲ್ಮೇಶ್ವರ ಗುಡಿ ಮುಂದಿರುವ ಶಾಸನಗಳಲ್ಲಿ ಈ ಊರನ್ನು 'ಪುಣುಸೆ' 'ಒಪ್ಪುಣಸಿ' ಎಂದೇ ಕರೆದಿದ್ದು ಕ್ರಮೇಣ ಒರ್ಪುಣಸಿ, ಒಪುಣಿಸಿ, ಉಪ್ಪುಣಸಿ ಯಾಗಿ ರೂಪಾಂತರಗೊಂಡಿರುವಂತೆ ತೋರುತ್ತದೆ. ಇಮ್ಮಡಿ ಜಯಸಿಂಹನ ಕಾಲಕ್ಕೆ (ಕ್ರಿ.ಶ. 1028) ಸೇರಿದ ಶಾಸನವೊಂದು ಬನವಾಸಿ 12,000ದ ಮಾಂಡಲಿಕ ಕುಂದರಾಜನ ಮಹಾದೇವಿ ಕುಂದಬ್ಬರಸಿ ಕಲ್ಮೇಶ್ವರ ದೇವಾಲಯದ ಮಠಕ್ಕೆ ದಾನ ನೀಡಿದ್ದನ್ನು ತಿಳಿಸಿದರೆ, ಉಳಿದೆರಡು, ವೀರಗಲ್ಲು ಶಾಸನಗಳಾಗಿದ್ದು ಊರಳಿವಿನಲ್ಲಿ ಮಡಿದ ಬೊಮ್ಮೆಯನಾಯಕ ಮತ್ತು ದಾಸಣ್ಣನ ಸ್ಮಾರಕಗಳಾಗಿವೆ.

ಶಾಸನೋಕ್ತ ಕಲ್ಲೇಶ್ವರವೇ ಇಂದು ಕಲ್ಲೇಶ್ವರ ಗುಡಿಯೆಂದು ರೂಢಿಯಲ್ಲಿದ್ದು ಮೂಲದಲ್ಲಿ ಇದೊಂದು ತ್ರಿಕೂಟವಾಗಿದ್ದು ಇಂದು ನಂತರದ ಸೇರ್ಪಡೆಯಿಂದಾಗಿ ಪಂಚಕೂಟದಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇಕ್ಕೆಲದಲ್ಲಿ ನಂತರದಲ್ಲಿ ಸೇರ್ಪಡೆಯಾಗಿರುವ ಎರಡು ಗರ್ಭಗೃಹಗಳಲ್ಲಿ ಕ್ರಮವಾಗಿ, ಹರಿಹರ, ಪಾರ್ವತಿ-ಪರಮೇಶ್ವರ ಶಿಲ್ಪಗಳಿವೆ. ಉಳಿದೆರಡು ಗರ್ಭಗೃಹಗಳು ಎದುರುಬದುರಾಗಿದ್ದು ಒಂದರಲ್ಲಿ ಶಿವಲಿಂಗ ಮತ್ತೊಂದರಲ್ಲಿ ಸೂರ್ಯನ ಮೂರ್ತಿಯಿದೆ. ಮೂರು ಗರ್ಭಗೃಹಕ್ಕೂ ತೆರೆದ ಅರ್ಧಮಂಟಪವಿದ್ದು ಎಲ್ಲಕ್ಕೂ ಕೂಡಿ ಒಂದೇ ನವರಂಗವಿದೆ. ಗರ್ಭಗೃಹದ ಬಾಗಿಲವಾಡಗಳು ಹಲವಾರು ಶಾಖೆಗಳ ಅಲಂಕಾರ ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ನವರಂಗದ ಒಂದೇ ದೇವಕೋಷ್ಠದಲ್ಲಿ ದುರ್ಗಾ ಶಿಲ್ಪವಿದೆ. ನವರಂಗದ ತೊಲೆಯೊಂದರ ಮೇಲೆ ಶಾಸನವಿದ್ದು ಮಸುಕಾಗಿದೆ, ಈ ಗುಡಿಯ ಶಿಲ್ಪಗಳು ಸುಮಾರು ಮೂರು ಅಡಿ ಎತ್ತರವಿದ್ದು ಸುಂದರವಾಗಿದೆ. ಅದರಲ್ಲೂ ಹರಹರಿ ಶಿಲ್ಪ ಉತ್ಕೃಷ್ಟದ್ದಾಗಿದ್ದು ಹರಿ ಭಾಗದ ಪ್ರಭಾವಳಿಯ ಮೇಲೆ ಕ್ರಮವಾಗಿ ಬುದ್ಧ, ವರಾಹ, ಕೂರ್ಮ ಮತ್ಸ್ಯಾವತಾರಗಳನ್ನು ಕೆತ್ತಿದ್ದಾರೆ. ಈ ಗುಡಿಯು ಕ್ರಿ.ಶ. 10ನೇ ಶತಮಾನದ ಉತ್ತರಾರ್ಧದ ನಿರ್ಮಾಣವೆಂದು ನಿರ್ಣಯಿಸಬಹುದಾಗಿದೆ.

ಇದರ ಜೊತೆಗೇ ಊರಲ್ಲಿ ಹನುಮಂತ, ಊಡಚವ್ವ, ಬಸವಣ್ಣ, ಸಿದ್ಧಮ್ಮನ ಗುಡಿಗಳಿವೆ. ಉಡಚವ್ವನ ಗುಡಿ ಮುಂದೆ ಭೈರವ, ಚಾಮುಂಡಿಯರ ಮುರಿದ ಶಿಲ್ಪಗಳಿವೆ. 'ಗೋಳಕವ್ವ' ಎಂದು ಕರೆಯುವ ಚತುರ್ಮುಖ (ಪೀಠಸ್ಥ) ಬ್ರಹ್ಮನ ಶಿಲ್ಪವಿದೆ. ಊರಲ್ಲೊಂದು ಮಸೀದಿಯಿದೆ.

**ಎಲಿವಾಳ :** ಕುಂದಗೋಳ ತಾಲೂಕಿನ ಎಲಿವಾಳವು (ಜನಸಂಖ್ಯೆ : 4,878) ಕುಂದಗೋಳದಿಂದ ನೈರುತ್ಯಕ್ಕೆ ಸುಮಾರು 18 ಕಿ.ಮೀ. ದೂರದಲ್ಲಿದ್ದು ಹಿಂದೆ ಬೆಳ್ವೊಲ - 300 ಕ್ಕೆ ಇದು ಸೇರಿದ್ದು, ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಎರಡು ಕಲ್ಯಾಣದ ಚಾಲುಕ್ಯರ ಕಾಲಕ್ಕೂ ಮತ್ತೆರಡು ಯಾದವರ ಕಾಲಕ್ಕೂ ಉಳಿದೆರಡು ಕ್ರಿ.ಶ. 14ನೇ ಶತಮಾನಕ್ಕೂ ಸೇರಿದ ಶಾಸನಗಳಾಗಿವೆ. ಇವುಗಳಲ್ಲಿ ಎರಡು ದಾನ ಶಾಸನಗಳಾಗಿದ್ದು, ಉಳಿದ ನಾಲ್ಕು ವೀರಗಲ್ಲು ಶಾಸನಗಳಾಗಿವೆ. ಕ್ರಿ.ಶ. 1108ರ ಒಂದು ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ಅಗ್ರಹಾರ ಕುಂದುಗೋಳದ ಸಾವಿರ ಮಹಾಜನರ ತೊತ್ತು ಚಿಣ್ಣಮಯ್ಯಗಳ ಕೇರೆಯಣ್ಣ ಗಂಗೆಯಗೆರೆಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, 1191ರ ಶಾಸನ ಎರ್ಮೆಯರ ಮಾದಿಯಣ್ಣ ಬಾವಿಯನ್ನು ತೋಡಿಸಿದ ವಿಷಯವನ್ನು ತಿಳಿಸುತ್ತದೆ. ಕಲ್ಮೇಶ್ವರ ಗುಡಿ ಮುಂದಿರುವ ಎರಡು ವೀರಗಲ್ಲು ಶಾಸನಗಳು ಕ್ರಿ.ಶ. 1248ರಲ್ಲಿ ಹಲಸಿಗೆ ನಾಡ ಚಟ್ಟಯ್ಯನ ಸೂಚನೆಯಂತೆ ಗುತ್ತಲದ ಜೋಯಿದೇವನು ತುರುಗಳನ್ನು ಸೆರೆ ಹಿಡಿಯಲು, ಅವನೊಂದಿಗೆ ಹೋರಾಡುತ್ತಾ ಮಡಿದ ಕುಂದಗೋಳದ ಸಾವಿರ ಮಹಾಜನರ ಸೇವಕರಿಬ್ಬರ ಸ್ಮಾರಕಗಳು ಇವಾಗಿವೆ. ಇಲ್ಲಿನ ಎಲ್ಲಾ ಶಾಸನಗಳಲ್ಲಿ ಕುಂದುಗೋಳದ ಸಾಸಿರ್ವರ ಪ್ರಸ್ತಾಪ ಬರುವುದರಿಂದ, ಎಲಿವಾಳ ಅಂದಿನ ದಿನಗಳಲ್ಲಿ ಕುಂದಗೋಳದ ಉಪಗ್ರಾಮವಾಗಿತ್ತೆಂದು ತೋರುತ್ತದೆ. ಈ ಊರಿನ ಬಹುಪಾಲು ಶಾಸನಗಳಿರುವ ಕಲ್ಮೇಶ್ವರ ಗುಡಿ ಊರಿಂದ ಸುಮಾರು 1.5 ಕಿ.ಮೀ. ದೂರದಲ್ಲಿ ಹೊಲದಲ್ಲಿದೆ. ಗಾತ್ರದಲ್ಲಿ ಕಿರಿದಾಗಿದ್ದು ಸರಳವಾಗಿದ್ದರೂ ಆಕರ್ಷಕವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹ ಹಾಗೂ ತೆರೆದ ಅರ್ಧಮಂಟಪವನ್ನುಳ್ಳ ಈ ಗುಡಿಯ ಗರ್ಭಗೃಹದಲ್ಲಿ ಲಿಂಗವಿದ್ದು, ಇದರ ಬಾಗಿಲವಾಡ ಕಣ್ಸೆರೆಯಾಗಿದೆ. ಅರ್ಧಮಂಟಪದ ನೆಲವನ್ನು ಅಪ್ಪಿ ಮಲಗಿರುವ ಚಂದ್ರಶಿಲೆ ಆಕರ್ಷಕವಾದ ಕಮಲದ ಮೊಗ್ಗುಗಳ ಬಳ್ಳಿಯನ್ನು ಹೊಂದಿದೆ. ಸುಮಾರು ಕ್ರಿ.ಶ. 12ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ಗುಡಿಗೆ ಇತ್ತೀಚೆಗೆ ಸೋಪಾನ ಶಿಖರವನ್ನು ಸ್ಥಳೀಕರು ಕಟ್ಟಿಸಿದ್ದಾರೆ. ಈ ಗುಡಿಯ ಪರಿಸರದಲ್ಲೇ ನಾಲ್ಕು ವೀರಗಲ್ಲುಗಳಿವೆ. ಇದರ ಜೊತೆಗೆ ಊರಲ್ಲಿ ವೀರಭದ್ರ, ಹನುಮಂತ, ಬಸವಣ್ಣ, ಈಶ್ವರ, ದ್ಯಾಮವ್ವ ಹಾಗೂ ಕರಿಯಮ್ಮನ ಗುಡಿಗಳಿವೆ. ವೀರಭದ್ರನ ಜಾತ್ರೆ ಏಪ್ರಿಲ್ ತಿಂಗಳಲ್ಲಿ ಜರುಗುತ್ತಿದ್ದು, ಈ ಗುಡಿಯನ್ನು ಊರ ಹಿರಿಯರು ದೊಡ್ಡ ಪ್ರಮಾಣದಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ. ಊರಲ್ಲಿ ಎರಡು ಮಸೀದಿ ಹಾಗೂ ಮೆಹಬೂಬು ಸುಬಾನಿಯ ಒಂದು ದರ್ಗಾ ಇದೆ.

**ಎಲೆಶಿರೂರು :** ಗದಗು ತಾಲೂಕಿನ ಎಲೆಶಿರೂರು (ಜನಸಂಖ್ಯೆ : 2,353) ಶಾಸನಗಳಲ್ಲಿ ಉಕ್ತವಾಗಿರುವ 'ಎಲೆಯ ಸಿರಿವೂರ' (ಗದಗದಿಂದ 16 ಕಿ.ಮೀ.) ಆಗಿದ್ದು ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದಿರುವ ಸ್ಥಳವಾಗಿದೆ. ಇಲ್ಲಿರುವ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ಭೋಗೇಶ್ವರ ದೇವಾಲಯವು ದ್ವಿಕೂಟಾಚಲವಾಗಿದೆ. ಎರಡೂ ಗರ್ಭಗೃಹಗಳ ಮುಂಭಾಗದಲ್ಲಿ ಅರ್ಧಮಂಟಪ ಹಾಗೂ ಮಧ್ಯದಲ್ಲಿ ನವರಂಗ ಹಾಗೂ ಮುಖಮಂಟಪವಿದೆ. ಉತ್ತರ ದಿಕ್ಕಿಗೆ ಮುಖಮಾಡಿರುವ ಗರ್ಭಗೃಹದಲ್ಲಿ ಭೋಗೇಶ್ವರ ಲಿಂಗವಿದ್ದು ಎತ್ತರವಾದ ಚಾಳುಕ್ಯ ಪಾಣಿಪೀಠವಿದೆ. ಪೂರ್ವದಿಕ್ಕಿಗಿರುವ ಗರ್ಭಗೃಹದಲ್ಲಿ ರಾಮಲಿಂಗೇಶ್ವರ ಲಿಂಗವಿದೆ. ಎರಡೂ

ಶಾಸನೋಕ್ತ ಕಲ್ಲೇಶ್ವರವೇ ಇಂದು ಕಲ್ಲೇಶ್ವರ ಗುಡಿಯೆಂದು ರೂಢಿಯಲ್ಲಿದ್ದು ಮೂಲದಲ್ಲಿ ಇದೊಂದು ತ್ರಿಕೂಟವಾಗಿದ್ದು ಇಂದು ನಂತರದ ಸೇರ್ಪಡೆಯಿಂದಾಗಿ ಪಂಚಕೂಟದಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇಕ್ಕೆಲದಲ್ಲಿ ನಂತರದಲ್ಲಿ ಸೇರ್ಪಡೆಯಾಗಿರುವ ಎರಡು ಗರ್ಭಗೃಹಗಳಲ್ಲಿ ಕ್ರಮವಾಗಿ, ಹರಿಹರ, ಪಾರ್ವತಿ-ಪರಮೇಶ್ವರ ಶಿಲ್ಪಗಳಿವೆ. ಉಳಿದೆರಡು ಗರ್ಭಗೃಹಗಳು ಎದುರುಬದುರಾಗಿದ್ದು ಒಂದರಲ್ಲಿ ಶಿವಲಿಂಗ ಮತ್ತೊಂದರಲ್ಲಿ ಸೂರ್ಯನ ಮೂರ್ತಿಯಿದೆ. ಮೂರು ಗರ್ಭಗೃಹಕ್ಕೂ ತೆರೆದ ಅರ್ಧಮಂಟಪವಿದ್ದು ಎಲ್ಲಕ್ಕೂ ಕೂಡಿ ಒಂದೇ ನವರಂಗವಿದೆ. ಗರ್ಭಗೃಹದ ಬಾಗಿಲವಾಡಗಳು ಹಲವಾರು ಶಾಖೆಗಳ ಅಲಂಕಾರ ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ನವರಂಗದ ಒಂದೇ ದೇವಕೋಷ್ಠದಲ್ಲಿ ದುರ್ಗಾ ಶಿಲ್ಪವಿದೆ. ನವರಂಗದ ತೊಲೆಯೊಂದರ ಮೇಲೆ ಶಾಸನವಿದ್ದು ಮಸುಕಾಗಿದೆ, ಈ ಗುಡಿಯ ಶಿಲ್ಪಗಳು ಸುಮಾರು ಮೂರು ಅಡಿ ಎತ್ತರವಿದ್ದು ಸುಂದರವಾಗಿದೆ. ಅದರಲ್ಲೂ ಹರಹರಿ ಶಿಲ್ಪ ಉತ್ಕೃಷ್ಟವಾಗಿದ್ದು ಹರಿ ಭಾಗದ ಪ್ರಭಾವಳಿಯ ಮೇಲೆ ಕ್ರಮವಾಗಿ ಬುದ್ಧ, ವರಾಹ, ಕೂರ್ಮ ಮತ್ಸ್ಯಾವತಾರಗಳನ್ನು ಕೆತ್ತಿದ್ದಾರೆ. ಈ ಗುಡಿಯು ಕ್ರಿ.ಶ. 10ನೇ ಶತಮಾನದ ಉತ್ತರಾರ್ಧದ ನಿರ್ಮಾಣವೆಂದು ನಿರ್ಣಯಿಸಬಹುದಾಗಿದೆ.

ಇದರ ಜೊತೆಗೇ ಊರಲ್ಲಿ ಹನುಮಂತ, ಊಡಚವ್ವ, ಬಸವಣ್ಣ, ಸಿದ್ಧಮ್ಮವ್ವನ ಗುಡಿಗಳಿವೆ. ಉಡಚವ್ವನ ಗುಡಿ ಮುಂದೆ ಭೈರವ, ಚಾಮುಂಡಿಯರ ಮುರಿದ ಶಿಲ್ಪಗಳಿವೆ. 'ಗೋಳಕವ್ವ' ಎಂದು ಕರೆಯುವ ಚತುರ್ಮುಖ (ಪೀಠಸ್ಥ) ಬ್ರಹ್ಮನ ಶಿಲ್ಪವಿದೆ. ಊರಲ್ಲೊಂದು ಮಸೀದಿಯಿದೆ.

**ಎಲಿವಾಳ** : ಕುಂದಗೋಳ ತಾಲೂಕಿನ ಎಲಿವಾಳವು (ಜನಸಂಖ್ಯೆ : 4,878) ಕುಂದಗೋಳದಿಂದ ನೈರುತ್ಯಕ್ಕೆ ಸುಮಾರು 18 ಕಿ.ಮೀ. ದೂರದಲ್ಲಿದ್ದು ಹಿಂದೆ ಬೆಳ್ವೊಲ - 300 ಕ್ಕೆ ಇದು ಸೇರಿದ್ದು, ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಎರಡು ಕಲ್ಯಾಣದ ಚಾಲುಕ್ಯರ ಕಾಲಕ್ಕೂ ಮತ್ತೆರಡು ಯಾದವರ ಕಾಲಕ್ಕೂ ಉಳಿದೆರಡು ಕ್ರಿ.ಶ. 14ನೇ ಶತಮಾನಕ್ಕೂ ಸೇರಿದ ಶಾಸನಗಳಾಗಿವೆ. ಇವುಗಳಲ್ಲಿ ಎರಡು ದಾನ ಶಾಸನಗಳಾಗಿದ್ದು, ಉಳಿದ ನಾಲ್ಕು ವೀರಗಲ್ಲು ಶಾಸನಗಳಾಗಿವೆ. ಕ್ರಿ.ಶ. 1108ರ ಒಂದು ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ಅಗ್ರಹಾರ ಕುಂದುಗೋಳದ ಸಾವಿರ ಮಹಾಜನರ ತೊತ್ತು ಚಿಣ್ಣಮಯ್ಯಗಳ ಕೇರೆಯಣ್ಣ ಗಂಗೆಯಗೆರೆಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, 1191ರ ಶಾಸನ ಎರ್ಮೆಯರ ಮಾದಿಯಣ್ಣ ಬಾವಿಯನ್ನು ತೋಡಿಸಿದ ವಿಷಯವನ್ನು ತಿಳಿಸುತ್ತದೆ. ಕಲ್ಮೇಶ್ವರ ಗುಡಿ ಮುಂದಿರುವ ಎರಡು ವೀರಗಲ್ಲು ಶಾಸನಗಳು ಕ್ರಿ.ಶ. 1248ರಲ್ಲಿ ಹಲಸಿಗೆ ನಾಡ ಚಟ್ಟಯ್ಯನ ಸೂಚನೆಯಂತೆ ಗುತ್ತಲದ ಜೋಯಿದೇವನು ತುರುಗಳನ್ನು ಸೆರೆ ಹಿಡಿಯಲು, ಅವನೊಂದಿಗೆ ಹೋರಾಡುತ್ತಾ ಮಡಿದ ಕುಂದಗೋಳದ ಸಾವಿರ ಮಹಾಜನರ ಸೇವಕರಿಬ್ಬರ ಸ್ಮಾರಕಗಳು ಇವಾಗಿವೆ. ಇಲ್ಲಿನ ಎಲ್ಲಾ ಶಾಸನಗಳಲ್ಲಿ ಕುಂದುಗೋಳದ ಸಾಸಿರ್ವರ ಪ್ರಸ್ತಾಪ ಬರುವುದರಿಂದ, ಎಲಿವಾಳ ಅಂದಿನ ದಿನಗಳಲ್ಲಿ ಕುಂದಗೋಳದ ಉಪಗ್ರಾಮವಾಗಿತ್ತೆಂದು ತೋರುತ್ತದೆ. ಈ ಊರಿನ ಬಹುಪಾಲು ಶಾಸನಗಳಿರುವ ಕಲ್ಮೇಶ್ವರ ಗುಡಿ ಊರಿಂದ ಸುಮಾರು 1.5 ಕಿ.ಮೀ. ದೂರದಲ್ಲಿ ಹೊಲದಲ್ಲಿದೆ. ಗಾತ್ರದಲ್ಲಿ ಕಿರಿದಾಗಿದ್ದು ಸರಳವಾಗಿದ್ದರೂ ಆಕರ್ಷಕವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹ ಹಾಗೂ ತೆರೆದ ಅರ್ಧಮಂಟಪವನ್ನುಳ್ಳ ಈ ಗುಡಿಯ ಗರ್ಭಗೃಹದಲ್ಲಿ ಲಿಂಗವಿದ್ದು, ಇದರ ಬಾಗಿಲವಾಡ ಕಣ್ಸೆಳೆಯಾಗಿದೆ. ಅರ್ಧಮಂಟಪದ ನೆಲವನ್ನು ಅಪ್ಪಿ ಮಲಗಿರುವ ಚಂದ್ರಶಿಲೆ ಆಕರ್ಷಕವಾದ ಕಮಲದ ಮೊಗ್ಗುಗಳ ಬಳ್ಳಿಯನ್ನು ಹೊಂದಿದೆ. ಸುಮಾರು ಕ್ರಿ.ಶ. 12ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ಗುಡಿಗೆ ಇತ್ತೀಚೆಗೆ ಸೋಪಾನ ಶಿಖರವನ್ನು ಸ್ಥಳೀಕರು ಕಟ್ಟಿಸಿದ್ದಾರೆ. ಈ ಗುಡಿಯ ಪರಿಸರದಲ್ಲೇ ನಾಲ್ಕು ವೀರಗಲ್ಲುಗಳಿವೆ. ಇದರ ಜೊತೆಗೆ ಊರಲ್ಲಿ ವೀರಭದ್ರ, ಹನುಮಂತ, ಬಸವಣ್ಣ, ಈಶ್ವರ, ದ್ಯಾಮವ್ವ ಹಾಗೂ ಕರಿಯಮ್ಮನ ಗುಡಿಗಳಿವೆ. ವೀರಭದ್ರನ ಜಾತ್ರೆ ಏಪ್ರಿಲ್ ತಿಂಗಳಲ್ಲಿ ಜರುಗುತ್ತಿದ್ದು, ಈ ಗುಡಿಯನ್ನು ಊರ ಹಿರಿಯರು ದೊಡ್ಡ ಪ್ರಮಾಣದಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ. ಊರಲ್ಲಿ ಎರಡು ಮಸೀದಿ ಹಾಗೂ ಮೆಹಬೂಬು ಸುಬಾನಿಯ ಒಂದು ದರ್ಗಾ ಇದೆ.

**ಎಲೆಶಿರೂರು** : ಗದಗು ತಾಲೂಕಿನ ಎಲೆಶಿರೂರು (ಜನಸಂಖ್ಯೆ : 2,353) ಶಾಸನಗಳಲ್ಲಿ ಉಕ್ತವಾಗಿರುವ 'ಎಲೆಯ ಸಿರಿವೂರ' (ಗದಗದಿಂದ 16 ಕಿ.ಮೀ.) ಆಗಿದ್ದು ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದಿರುವ ಸ್ಥಳವಾಗಿದೆ. ಇಲ್ಲಿರುವ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ಭೋಗೇಶ್ವರ ದೇವಾಲಯವು ದ್ವಿಕೂಟಾಚಲವಾಗಿದೆ. ಎರಡೂ ಗರ್ಭಗೃಹಗಳ ಮುಂಭಾಗದಲ್ಲಿ ಅರ್ಧಮಂಟಪ ಹಾಗೂ ಮಧ್ಯದಲ್ಲಿ ನವರಂಗ ಹಾಗೂ ಮುಖಮಂಟಪವಿದೆ. ಉತ್ತರ ದಿಕ್ಕಿಗೆ ಮುಖಮಾಡಿರುವ ಗರ್ಭಗೃಹದಲ್ಲಿ ಭೋಗೇಶ್ವರ ಲಿಂಗವಿದ್ದು ಎತ್ತರವಾದ ಚಾಲುಕ್ಯ ಪಾಣಿಪೀಠವಿದೆ. ಪೂರ್ವದಿಕ್ಕಿಗಿರುವ ಗರ್ಭಗೃಹದಲ್ಲಿ ರಾಮಲಿಂಗೇಶ್ವರ ಲಿಂಗವಿದೆ. ಎರಡೂ

ಗರ್ಭಗೃಹಗಳ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಅತ್ಯಂತ ಅಲಂಕಾರಯುತವಾದ ಚಾಳುಕ್ಯ ಶೈಲಿಯ ವೃತ್ತಾಕಾರದ ಅಡ್ಡ ಕೊಯ್ದದ ಕಂಬಗಳಿವೆ. ಅರ್ಧಮಂಟಪದ ದ್ವಾರದ ಎರಡೂ ಪಕ್ಕದಲ್ಲಿ ಜಾಲಂದ್ರಗಳಿವೆ. ಎರಡೂ ಗರ್ಭಗೃಹಗಳ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರಗಳು ಸುಸ್ಥಿತಿಯಲ್ಲಿವೆ. ಮುಂಭಾಗದಲ್ಲಿರುವ ಮುಖಮಂಪವು ಹಲವಾರು ಕಂಬಗಳಿಂದ ಅಲಂಕೃತವಾಗಿವೆ. ಭೋಗಲಿಂಗೇಶ್ವರ ಗುಡಿಯ ಎದುರಿಗೆ ಚಾಳುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲದ ಶಾಸನವಿದ್ದು (ಕ್ರಿ.ಶ. 1118 ರಲ್ಲಿ ಎಲೆಯ ಸಿರೂರಿನ ಪ್ರತಿಷ್ಠಿತರಿಂದ ಭೋಗೇಶ್ವರ ದೇವಾಲಯಕ್ಕೆ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಭೋಗಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿರುವ ಗೋಡೆಯ ಶಾಸನವು ಅಸ್ಪಷ್ಟವಾಗಿದ್ದು ಕಲ್ಯಾಣ ಚಾಳುಕ್ಯ ಅರಸು ಎರಡನೇ ಜಗದೇಕಮಲ್ಲನ ಕಾಲಕ್ಕೆ ಸೇರಿದ್ದು ಕ್ರಿ.ಶ. 1167ರಲ್ಲಿ ಸೊರಟೂರ ಮಹಾಪ್ರಭು ದಾಸಿರಾಜಯ್ಯನಿಂದ ಭೋಗೇಶ್ವರ ದೇವರಿಗೆ ನೀಡಿದ ಹಲವು ದಾನಗಳ ಬಗೆಗೆ ತಿಳಿಸುತ್ತದೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಚಾಳುಕ್ಯ ಶೈಲಿಯ ಕ್ಯಾತೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ ಹಾಗೂ ಅರ್ಧಮಂಟಪಗಳು ಮಾತ್ರ ಉಳಿದಿವೆ. ಅರ್ಧಮಂಟಪದಲ್ಲಿ ಬಾದಾಮಿ ಚಾಲುಕ್ಯರ ಶೈಲಿಯ ಎರಡು ಕಂಬಗಳು ಗೋಡೆಯಲ್ಲಿ ಕಂಡು ಬರುತ್ತವೆ. ಈ ದೇವಾಲಯ ಸಮುಚ್ಚಯದಿಂದ ಎದುರಿಗೆ ಪ್ರತ್ಯೇಕವಾದ ಇತ್ತೀಚೆಗೆ ನಿರ್ಮಿತವಾಗಿರುವ ಶರಣ ಬಸಪ್ಪನ ಚಿಕ್ಕ ಗುಡಿ ಇದೆ. ಇಲ್ಲಿ ರಂಗಪಂಚಮಿಗೆ ಅಂದರೆ, ಗುಲ್ಬರ್ಗಾದಲ್ಲಿ ತೇರಾಗುವ ಸಮಯಕ್ಕೆ ವಿಶೇಷವಾದ ದಾಸೋಹ ನಡೆಯುತ್ತದೆ. ಇದು ಶರಣಬಸಪ್ಪ ಅಪ್ಪಾ ಅವರ ಶಾಖಾ ಮಠವಾಗಿದೆ.

ಎಲೆ ಶಿರೂರಿನಲ್ಲಿರುವ ಇತರ ದೇವಾಲಯಗಳೆಂದರೇ ದ್ಯಾಮವ್ವ, ದುರ್ಗವ್ವ, ಹನುಮಂತ ಮುಂತಾದವು. ಸಹಕಾರಿ ಸಂಘದ ಎದುರಿಗೆ ಎರಡು, ಹಾಗೂ ಹತ್ತಿರದ ಖಾಸಗಿ ಮನೆಯೊಂದರ ಪಕ್ಕದಲ್ಲಿ ಎರಡು ವೀರಗಲ್ಲುಗಳಿವೆ.

**ಐರಣಿ** : ರಾಣೆಬೆನ್ನೂರು ತಾಲೂಕಿನ ಐರಣಿಯು (ಜನಸಂಖ್ಯೆ : 3,053) ರಾಣೆಬೆನ್ನೂರಿನಿಂದ ಪಶ್ಚಿಮಕ್ಕೆ ಸುಮಾರು 22 ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ ವೀರಶೈವರ ಪವಿತ್ರ ಕ್ಷೇತ್ರ. ಬೆಂಗಳೂರು ಮೀರಜ್ ರೈಲ್ವೆ ಮಾರ್ಗದಲ್ಲಿರುವ ಚಳಗೇರಿನಿಲ್ದಾಣದಿಂದ (ಐದು ಕಿ.ಮೀ). ಐರಣಿಯನ್ನು ತಲುಪಬಹುದಾಗಿದೆ. ಹತ್ತಿ ಹಾಗೂ ಉಣ್ಣೆಯಿಂದ ತಯಾರಿಸಿದ ಬಟ್ಟೆಗಳನ್ನು ತಯಾರಿಸುವಲ್ಲಿ ಈ ಸ್ಥಳವು ಜನಪ್ರಿಯವಾಗಿದೆ. ಈ ಊರಿನಿಂದ ಹೊರ ಭಾಗದಲ್ಲಿ ಎತ್ತರವಾದ ನದಿಯ ದಂಡೆಯ ಮೇಲೆ ಪುರಾತನವಾದ ಕೋಟೆಯ ಅವಶೇಷಗಳಿವೆ. ಸುಮಾರು 250 X 100 ಚದುರ ಅಡಿಗಳಷ್ಟು ಆವರಣವನ್ನು ಈ ಕೋಟೆಯು ಹೊಂದಿದೆ. ಇದರ ಹೊರಭಾಗದ ಗೋಡೆಗಳು ಬಿದ್ದುಹೋಗಿದ್ದರೂ ಒಳಭಾಗದಲ್ಲಿ ವಿಶಾಲವಾದ ವಿಭಾಗಗಳನ್ನು ಒಳಗೊಂಡಿದೆ. ಮೂಲೆಗಳಲ್ಲಿ ಸುಮಾರು 25 ಅಡಿಗಳ ಸುತ್ತಳತೆಯ ಐದು ಕೊತ್ತಲಗಳನ್ನು ನಿರ್ಮಿಸಲಾಗಿದೆ. ಒಳಭಾಗದಲ್ಲಿ ನಾಲ್ಕು ವಿಶಾಲವಾದ ಗೋಡೆಗಳಿಂದ ಆವರಿಸಿರುವ ಅರಮನೆಯ ಅವಶೇಷ ಮಾತ್ರ ಉಳಿದಿದ್ದು ಕೋಟೆಯಲ್ಲಿ ಏನೂ ಉಳಿದಿಲ್ಲ. ಊರಿನಲ್ಲಿ ಕೊಟ್ಟೂರೇಶ್ವರ ದೇವಸ್ಥಾನ ಹಾಗೂ ವೀರಶೈವ ಯೋಗಿ ಮುಪ್ಪಿನಾರ್ಯರ ಮಠಗಳಿವೆ. ಸಿದ್ಧಾರೂಢಸ್ವಾಮಿಗಳ ಶಿಷ್ಯರಾದ ಮುಪ್ಪಿನಾರ್ಯರು ಪವಾಡಪುರುಷರೆಂದು ಪ್ರತೀತಿ ಇದೆ. ಈ ಕ್ಷೇತ್ರಕ್ಕೆ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಗಳಿಂದ ಭಕ್ತಾದಿಗಳು ಬರುತ್ತಾರೆ.

**ಕಂದಲಿ** : ಕಲಘಟಗಿ ತಾಲೂಕಿನ ಕಂದಲಿಯು (ಜನಸಂಖ್ಯೆ :341)ಕಲಘಟಗಿಯಿಂದ ನೈರುತ್ಯಕ್ಕೆ ಐದು ಕಿ.ಮೀ. ದೂರದಲ್ಲಿರುವ ಸಣ್ಣ ಗ್ರಾಮ. ಈ ಗ್ರಾಮದ ಬಳಿಯ ಹಳೇ ನಿವೇಶನದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಎರಡು ಶಾಸನಗಳಿವೆ. ಅವುಗಳಲ್ಲಿ ಗೋವೆ ಕದಂಬ ಅರಸ ಇಮ್ಮಡಿ ಚಟ್ಟಯದೇವನ ಕ್ರಿ.ಶ. 1050ರ ಶಾಸನದಲ್ಲಿ ಮಾರಯ್ಯನು ಬಾದುಬ್ಬೆ (ಬನಶಂಕರಿ) ವಿಗ್ರಹ ಪ್ರತಿಷ್ಠಾಪನೆ ಮಾಡಿದ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1152ರ ಮತ್ತೊಂದು ಶಾಸನ ಅಜ್ಜಿಗಾವೆಯ ತೈಲಯ ಸಾಮಂತನು ಕಿರುವತ್ತಿಯನ್ನು ಮುತ್ತಿದಾಗ ಅಹವಮಲ್ಲಯ್ಯ ನಾಯಕನು ಹೋರಾಡುತ್ತ ಮಡಿದ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿತಗೊಂಡಿರುವ ಕಿರುವತ್ತಿ, ಎಲ್ಲಾಪುರ (ಉ.ಕ.ಜಿಲ್ಲೆ) ತಾಲೂಕಿನಲ್ಲಿದ್ದು, ಕಂದಲಿಯಿಂದ ಸುಮಾರು ಆರು ಕಿ.ಮೀ. ದೂರದಲ್ಲಿದೆ. ಇದರಿಂದ ಇದು ಪ್ರಾಚೀನ ಕಿರುವತ್ತಿಯ ನಿವೇಶನವಿರಬೇಕೆಂಬ ಅನುಮಾನ ಮೂಡುತ್ತದೆ. ಊರ ಹೊರಗೆ ಹಾಳು ಜಾಗದಲ್ಲಿ (ರಣದೇವರಗುಡಿ) ದೊಡ್ಡ - ಚಿಕ್ಕ ಪ್ರಮಾಣದ ಸುಮಾರು 12 ವೀರಗಲ್ಲುಗಳು ಬಿದ್ದಿದ್ದು, ಇವುಗಳಲ್ಲಿ ಹೆಚ್ಚಿನವು ಗೋಗ್ರಹಣಕ್ಕೆ ಸಂಬಂಧಿಸಿದವಾಗಿವೆ. ಇವುಗಳು ಕ್ರಿ.ಶ. 1132ರ ಕಿರುವತ್ತಿ ಕಾಳಗದಲ್ಲಿ ಮಡಿದ ವೀರರ ಸ್ಮಾರಕಗಳಾಗಿರಬೇಕೆಂದು ತೋರುತ್ತದೆ. ಈ ವೀರಗಲ್ಲು ಸಮೂಹದಲ್ಲಿ ಒಂದು ಹುಲಿಬೇಟೆ ವಿರಗಲ್ಲು, ಮೂರು ವೀರಮಾಸ್ತಿಕಲ್ಲುಗಳೂ ಇವೆ. ಇವುಗಳಲ್ಲಿ ಕೆಲವು ವೀರಗಲ್ಲುಗಳು ಆಕರ್ಷಕವಾದ ಕೆತ್ತನೆಯನ್ನು ಹೊಂದಿರುವುದು ಗಮನಿಸಬೇಕಾದ ಅಂಶವಾಗಿದೆ.

ಊರ ಮತ್ತೊಂದು ಬದಿಯಲ್ಲಿ ಪಾಳು ಬಿದ್ದಿರುವ ಕಲ್ಮೇಶ್ವರ ಗುಡಿಯಿದೆ. ಸುಮಾರು ಕ್ರಿ.ಶ. 11ನೇ ಶತಮಾನದ ರಚನೆಯಾಗಿರಬಹುದಾದ ಈ ಗುಡಿಯು ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದ್ದಿರಬೇಕು. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಈ ಗುಡಿಯ ಆವರಣದಲ್ಲಿ ಕಲ್ಯಾಣದ ಚಾಲುಕ್ಯ ಶೈಲಿಯ ಸೂರ್ಯ, ಕಾರ್ತಿಕೇಯ, ಭೈರವ, ಮಹಿಷಮರ್ದಿನಿ ಹಾಗೂ ವಿಷ್ಣುವಿನ ಭಗ್ನಶಿಲ್ಪಗಳಿವೆ. ಈ ಗುಡಿಯ ಮುಂದೆ ಎಡಬದಿಯಲ್ಲಿರುವ ಲಕ್ಷ್ಮಿ ಗುಡಿಯ ಹಾಳಾದ ನಿವೇಶನದಲ್ಲಿ ಬಾದುಬ್ಬೆಯ ಸುಂದರ ಶಿಲ್ಪವಿದೆ. ಗಜಗಳಿಂದ ಕುಂಭಾಭಿಷಿಕ್ತಳಾಗುತ್ತಿರುವ ಲಕ್ಷ್ಮಿಯು ಈ ಶಿಲ್ಪವನ್ನು ಮಕರ ತೋರಣ ಅಲಂಕರಿಸಿದೆ. ಈ ಮೂರ್ತಿಯ ಪೀಠದ ಮೇಲೆ ಇದರ ಪ್ರತಿಷ್ಠಾಪನೆಯನ್ನು ಮಾರಯ್ಯ ಮಾಡಿಸಿದನೆಂದು ಹೇಳುವ ಶಾಸನವಿದೆ. ಈ ಮೂರ್ತಿಯ ಮುಂದೆ ಇರುವ ಕೋಣನ ತಲೆಯ ಉಬ್ಬು ಕೆತ್ತನೆಯ ಹಾಸುಗಲ್ಲು ಗಮನಾರ್ಹವಾಗಿದೆ. ಮಹಾರಾಷ್ಟ್ರದ ಕಾಗಲ್ ಕಡೆಯವರೆಂದು ಹೇಳುವ ಇಲ್ಲಿನ ಕೆಲವು ನಿವಾಸಿಗಳು ಮರಾಠಿಗರಾಗಿದ್ದು (ಆರೇರ್), ಈ ಊರಲ್ಲಿ ವಿಠಲನ ಗುಡಿ ಹಾಗೂ ಇತ್ತೀಚೆಗೆ ನಿರ್ಮಿಸಲಾಗಿರುವ ಒಂದು ಮಸೀದಿ ಇದೆ.

**ಕದರಮಂಡಲಗಿ :** ಬ್ಯಾಡಗಿ ತಾಲೂಕಿನ ಕದರಮಂಡಲಗಿ (ಜನಸಂಖ್ಯೆ : 4,967) ಶಾಸನೋಕ್ತ 'ಕದರವುಂಡಲಿಗೆ' ಆಗಿದ್ದು ಬ್ಯಾಡಗಿಯಿಂದ 10 ಕಿ.ಮೀ ದೂರದಲ್ಲಿದೆ. ಜಿಲ್ಲೆಯ ಕೆಲವೇ ಪ್ರಸಿದ್ಧ ಹನುಮಾನ್ ಕ್ಷೇತ್ರಗಳಲ್ಲಿ ಇದೂ ಒಂದು. ಊರಿನಲ್ಲಿ ಕಾಂತೇಶ, ರಾಮಲಿಂಗ, ಮಾಲತೇಶ, ಕಲ್ಮೇಶ್ವರ, ಗವಿಸಿದ್ಧೇಶ್ವರ, ಮುಕ್ಕಣ್ಣಪ್ಪ, ನೀಲಕಂಠೇಶ್ವರ, ತಿಮ್ಮಪ್ಪ, ದ್ಯಾವಮ್ಮ, ದುರ್ಗಮ್ಮ, ಬೀರಪ್ಪ ಮುಂತಾದ ದೇವಾಲಯಗಳೂ ಹಾಲಸ್ವಾಮಿ ಮಠವೂ ಇವೆ. ಕಾಂತೇಶ ದೇವಾಲಯವು ಇತ್ತೀಚೆಗೆ ಪೂರ್ಣ ಜೀರ್ಣೋದ್ಧಾರವಾಗಿದ್ದು ಸಿಮೆಂಟ್ ಇಟ್ಟಿಗೆಯ ಕಟ್ಟಡವಾಗಿದೆ. ದೇವಾಲಯದ ಪ್ರವೇಶ ಗೋಪುರವನ್ನು ಪ್ರಮಾಣಬದ್ಧವಲ್ಲದ ರೀತಿಯಲ್ಲಿ ಸಣ್ಣಗೆ ಉದ್ದವಾಗಿ ಕಟ್ಟಲಾಗಿದೆ. ದೇವಾಲಯದ ಆವರಣದಲ್ಲಿ ಕಲ್ಯಾಣದ ಚಾಲುಕ್ಯರ ಅವಶೇಷಗಳಲ್ಲದೆ, ಗುತ್ತಲ ಪಾಳೆಯಗಾರರ ಕಾಲದ ಅವಶೇಷಗಳಿವೆ. ಬನ್ನಿಮಂಟಪವು 17-18ನೇ ಶತಮಾನದ ಅನೇಕ ಉಬ್ಬು ಶಿಲ್ಪಗಳನ್ನು ಒಳಗೊಂಡಿದೆ. ಮಧ್ಯೆ ಇರುವ ಸರ್ಪಬಂಧ ಸುಂದರವಾಗಿದೆ. ರಾಮಲಿಂಗ ದೇವಾಲಯವು ಹೊಯ್ಸಳರ ಕಾಲದ್ದಾಗಿದ್ದು ಗರ್ಭಗೃಹ ಮತ್ತು ಅಂತರಾಳ ಮಾತ್ರ ಮೂಲ ರೂಪದಲ್ಲಿ ಉಳಿದಿವೆ. ಕಲ್ಮೇಶ್ವರ ದೇವಾಲಯವು ಉಳಿದಿರುವ ಶೈವ ದೇವಾಲಯಗಳಲ್ಲಿ ಪ್ರಮುಖವಾಗಿದ್ದು ಗರ್ಭಗೃಹ, ಅಂತರಾಳ, ನವರಂಗವಿದೆ. ಒಳಗಡೆ ದೇವಕೊಷ್ಠಗಳಿದ್ದು ಕೆಲವದರಲ್ಲಿ ಶಿಲ್ಪಗಳಿವೆ. ಕುಮಾರಸ್ವಾಮಿಯ ಎರಡು ಶಿಲ್ಪಗಳಿದ್ದು ಒಂದು ರಾಷ್ಟ್ರಕೂಟರ ಕಾಲಕ್ಕೆ ಸೇರಿದುದಾಗಿದೆ. ನವರಂಗದ ಬಸವ ಸುಮಾರು 4.5 ಅಡಿ ಎತ್ತರವಿದೆ. ದಕ್ಷಿಣಕ್ಕೆ ಮುಖಮಂಟಪ ಹಾಗೂ ಕಕ್ಷಾಸನವಿದೆ. ಗವಿಸಿದ್ಧೇಶ್ವರ ದೇವಾಲಯವು ಜೀರ್ಣೋದ್ಧಾರವಾಗಿದ್ದು ರಾಷ್ಟ್ರಕೂಟರ ಕಾಲದ ಕಂಬ ಹಾಗೂ ಬೋದಿಗೆಗಳನ್ನು ಬಳಸಿರುತ್ತಾರೆ. ಮುಕ್ಕಣ್ಣಪ್ಪನಗುಡಿಯು ಗರ್ಭಗೃಹ, ತೆರೆದ ಅಂತರಾಳ, ನವರಂಗವನ್ನು ಹೊಂದಿದ್ದು ಹಳೆಯದೇವಾಲಯವಾಗಿದ್ದು ಜೀರ್ಣೋದ್ಧಾರವಾಗಿದೆ. ಇದರಲ್ಲಿನ ರಂಗ ಹಾಗೂ ಬಸವ ಶಿಲ್ಪಗಳು ಸುಮಾರು 10ನೇಯ ಶತಮಾನಕ್ಕೆ ಸೇರಿರಬಹುದಾಗಿವೆ. ಕಲ್ಯಾಣದ ಚಾಲುಕ್ಯರ ಕಂಬಗಳನ್ನು ಇಲ್ಲಿ ಬಳಸಿರುತ್ತಾರೆ. ಪ್ರವೇಶದ್ವಾರದ ಚಂದ್ರಶಿಲೆ ಅಲಂಕಾರಿಕವಾಗಿದೆ. ಈ ದೇವಾಲಯದ ಎದುರಿಗೆ ರಾಷ್ಟ್ರಕೂಟರ ಕಾಲದ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದ ವೀರಗಲ್ಲುಗಳಿವೆ. ಕಾಂತೇಶ ದೇವಾಲಯದ ಗರುಡ ಕಂಬದ ಮೇಲಿರುವ ಕ್ರಿ.ಶ. 1582ರ ಶಾಸನ ಸಂತೆಯಬೆನ್ನೂರಿನ ಕೆಂಗಪ್ಪನಾಯಕನು ಹನುಮಂತ ದೇವರಿಗೆ ಕದುರವುಂಡಲಿಗೆ ಗ್ರಾಮವನ್ನು ದಾನ ಬಿಟ್ಟ ಬಗೆಗೆ ವಿವರಗಳನ್ನು ತಿಳಿಸುತ್ತದೆ. ಊರ ಹೊರಗೆ ಕೆರೆ ಏರಿಯಲ್ಲಿ ನೀಲಕಂಠೇಶ್ವರ ದೇವಾಲಯವಿದ್ದು ಕ್ರಿ.ಶ. 10-11ನೆಯ ಶತಮಾನಕ್ಕೆ ಸೇರಬಹುದಾದ ಲಕ್ಷಣ ಹೊಂದಿದೆ. ಒಳಗೆ ಸಪ್ತಮಾತೃಕೆ, ಬಸವ, ನಾಗರ ಶಿಲ್ಪಗಳಿವೆ. ಬಾಗಿಲವಾಡದಲ್ಲಿ ಲಕ್ಷ್ಮಿಯನ್ನು ಕಡಿದು ಲಿಂಗವನ್ನಾಗಿ ಮಾಡಿರುತ್ತಾರೆ. ಇಲ್ಲಿಗೆ ಸಮೀಪದಲ್ಲಿ ತಿಮ್ಮಪ್ಪನ ದೇವಾಲಯವಿದ್ದು ಕನಕದಾಸರು ಈ ದೇವಾಲಯದಲ್ಲಿದ್ದು 'ಮೋಹನತರಂಗಿಣಿ' ರಚಿಸಿದರೆಂದು ಪ್ರತೀತಿ ಇದೆ. ಇತ್ತೀಚೆಗೆ ಇದು ಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. 'ಮೋಹನತರಂಗಿಣಿ'ಯ ಒಂದು ಹಳೆಯ ಹಸ್ತಪ್ರತಿ ಕಾಂತೇಶ ದೇವಾಲಯದಲ್ಲಿ ಇದ್ದು ಇದನ್ನು ಕಟ್ಟಿದ ರಟ್ಟಿನ (ಹಲಗೆ) ಮೇಲೆ ಒಂದು ಸುಂದರ ವರ್ಣ ಚಿತ್ರವಿದೆ. ಇವಲ್ಲದೆ ದುರ್ಗಾ, ದ್ಯಾವಮ್ಮ, ಬೀರಪ್ಪ ದೇವಾಲಯಗಳು ಈ ಊರಿನಲ್ಲಿವೆ. ಊರಲ್ಲಿ ಹಳ್ಳವೊಂದಕ್ಕೆ ಅಡ್ಡಲಾಗಿ ಕಟ್ಟಿದ ಸೇತುವೆಯಲ್ಲಿ ಚಾಲುಕ್ಯರ ಕಂಬಗಳನ್ನು ಬಳಸಿದ್ದಾರೆ. ಇಲ್ಲಿ ಸೇತುವೆಯಲ್ಲಿನ ಕೆಳ ಮುಖವಾಗಿರುವ ಚಪ್ಪಡಿಯೊಂದರಲ್ಲಿ ಒಂದು ಕನ್ನಡ ಶಾಸನವಿದೆ. (ಇದು ಪ್ರಕಟವಾದಂತೆ ಇಲ್ಲ).

**ಕನಕೂರು :** ಧಾರವಾಡ ತಾಲೂಕಿನ ಕನಕೂರು (ಜನಸಂಖ್ಯೆ : 600) ಧಾರವಾಡದಿಂದ 17 ಕಿ.ಮೀ. ದೂರವಿರುವ ಹಾಗೂ ಅಮ್ಮಿನಭಾವಿಯಿಂದ ಐದು ಕಿ.ಮೀ. ದೂರವಿರುವ ಹಳ್ಳಿ. ಈ ಊರಿಂದ ಈವರೆಗೆ ಒಂದೇ ಒಂದು ಶಾಸನ ವರದಿಯಾಗಿದೆ.

ಕನಕಮ್ಮನ ಗುಡಿಯ ಹಿಂದಿರುವ ಈ ಶಾಸನ ಆರನೇಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಗೋವೆ ಕದಂಬ ಅರಸ ಜಯಕೇಶಿಯು ಕ್ರಿ.ಶ. 1104ರಲ್ಲಿ ವಾಮನಭಟ್ಟೋಪಾಧ್ಯಾಯನಿಗೆ 'ಕನಕಾಪುರ'ವನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಊರ ಹೊರಗಿರುವ ಕಲ್ಮೇಶ್ವರ ಮಠ ಹಾಗೂ ಊರಲ್ಲಿರುವ ರಾಮಲಿಂಗೇಶ್ವರ ಗುಡಿಯ ಮುಂದೆ ಕ್ರಿ.ಶ. 10-11ನೇ ಶತಮಾನದ ಒಂದೊಂದು ಶಾಸನ ಇದ್ದು ಸಂಪೂರ್ಣ ಹಾಳಾಗಿರುವುದರಿಂದ ವಿವರ ಲಭಿಸುವುದಿಲ್ಲ. ಈ ಎಲ್ಲಾ ಗುಡಿಗಳು ಶಿಥಿಲಗೊಂಡಿದ್ದು ಅವುಗಳಲ್ಲಿ ಕನಕಮ್ಮ ಹಾಗೂ ರಾಮಲಿಂಗೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿವೆ. ಕನಕಮ್ಮನ ಗುಡಿಯಲ್ಲಿ ಸುಮಾರು ಮೂರು ಅಡಿ ಎತ್ತರದ ಮಹಿಷಮರ್ದಿನಿ ಶಿಲ್ಪ, ಖಡ್ಗ ಕಪಾಲ ಹಿಡಿದ ದೇವಿಯರ ಎರಡು ಶಿಲ್ಪಗಳು, ಹಾಗೂ ಭೈರವನ ಶಿಲ್ಪಗಳಿದ್ದು, ಲಲಿತಾಸಾನದಲ್ಲಿರುವ ಭೈರವನ ಮೂರ್ತಿ ಕೀರ್ತಿಮುಖವುಳ್ಳ ಆಕರ್ಷಕ ಪ್ರಭಾವಳಿಯನ್ನು ಹೊಂದಿರುವ ಸುಂದರ ಶಿಲ್ಪವಾಗಿದೆ. ಪೂರ್ಣ ಜೀರ್ಣೋದ್ಧಾರಗೊಂಡಿರುವ ರಾಮಲಿಂಗೇಶ್ವರ ದೇವಾಲಯದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗವಿದ್ದು ಹೊರಗೆ ನಂದಿಯಿದೆ. ಮುಂಭಾಗದಲ್ಲಿ ಬಹಳ ಹಾಳಾಗಿರುವ ಕ್ರಿ.ಶ. 10ನೇ ಶತಮಾನದ ಶಾಸನ ಕಲ್ಲಿದೆ. ಊರ ನಡುವಿರುವ ವಿಠೋಬನ ಗುಡಿಯ ಮುಖಮಂಟಪದಲ್ಲಿರುವ ಸುಮಾರು ನಾಲ್ಕು ಅಡಿ ಎತ್ತರದ ಜೈನ ಅಂಬಿಕಾ ಯಕ್ಷಿಯ ಮೂರ್ತಿ ದೂರದಿಂದ ನೋಡಿದಾಗ ಕಟ್ಟಿಗೆ ಮೂರ್ತಿಯೆನಿಸುವಂತೆ ಆಕರ್ಷಕವಾಗಿ ಕೆತ್ತಲಾಗಿದೆ. ಸುಮಾರು ಕ್ರಿ.ಶ. 10-11ನೇ ಶತಮಾನದ ರಚನೆಯಾಗಿರಬಹುದಾದ ಈ ಮೂರ್ತಿಯು ಎಡಗೈಯಲ್ಲಿ ಶಿಶು, ಬಲಗೈಯಲ್ಲಿ ಫಲವನ್ನು ಹಿಡಿದಿದೆ. ಕುಳಿತಿರುವ ಈ ಮೂರ್ತಿಯ ಪ್ರಭಾವಳಿ ಮಾವಿನ ಬಳ್ಳಿ ನಡುವೆ ಪದ್ಮಾಸೀನ ತೀರ್ಥಂಕರ ಕೆತ್ತನೆಯನ್ನು ಹೊಂದಿರುವ ಅಪರೂಪದ ಶಿಲ್ಪವಾಗಿದೆ. ವಿಠೋಬನ ಗುಡಿಯಲ್ಲಿ 17ನೇ ಶತಮಾನದ ವಿಠೋಬ-ರುಕ್ಮಾಯಿಯ ಮೂರ್ತಿಗಳಿವೆ. ಊರ ಹೊರಗೆ ಹೊಲದಲ್ಲಿರುವ ಪೂರ್ಣ ಹಾಳಾದ ಕಲ್ಮೇಶ್ವರ ಗುಡಿಯಲ್ಲಿ ಶಿವಲಿಂಗವಿದೆ. ಕೈಯಲ್ಲಿ ಖಡ್ಗ ಹಿಡಿದು ಕುದುರೆ ಮೇಲೆ ಕುಳಿತಿರುವ ಏಳು ಮಂದಿ ಯೋಧರ ತುಂಡಾದ ಶಿಲಾಪಟ್ಟಿಕೆ ಇದೆ. ಇದು ಮೈಲಾರನ ಹಿಂಬಾಲಕರಾದ ಏಳ್ಕೋಟಿಗಳ ಪ್ರಾತಿನಿಧಿಕ ಕೆತ್ತನೆ ಇರಬೇಕೆಂದು ತೋರುತ್ತದೆ. ಇದೇ ಮಾದರಿಯ ಶಿಲ್ಪವೊಂದು ಹಾನಗಲ್ ತಾಲೂಕಿನ ಸಾವಿಕೇರಿಯಲ್ಲೂ ದೊರೆತಿದೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ಕರಿಯಮ್ಮ ಮತ್ತು ಸೆಟಗಮ್ಮನ ಗುಡಿಗಳಿವೆ. 'ಗೋಲಕವ್ವ' ಎಂದು ಕರೆಯಲ್ಪಡುವ ಪೀಠಸ್ಥ ಚತುರ್ಮುಖ ಬ್ರಹ್ಮ ಶಿರವಿರುವ ಶಿಲ್ಪವಿದ್ದು, ಆರಾಧಿಸಲ್ಪಡುತ್ತಿದೆ. ಈ ಊರಲ್ಲಿ ಒಂದು ಮಸೀದಿ ಹಾಗೂ ಮೆಹಬೂಬ್ ಸುಬಾನಿಯ ದರ್ಗಾವಿದ್ದು ಗ್ಯಾರವಿ ತಿಂಗಳಿನಲ್ಲಿ ಉರುಸು ಜರುಗುತ್ತದೆ.

**ಕನವಳ್ಳಿ** : ಹಾವೇರಿ ತಾಲೂಕಿನ ಕನವಳ್ಳಿಯು (ಜನಸಂಖ್ಯೆ : 5,246) ಹಾವೇರಿಯಿಂದ ಪೂರ್ವಕ್ಕೆ ಸುಮಾರು 15 ಕಿ.ಮೀ ದೂರದಲ್ಲಿದೆ. ಪ್ರಾಚೀನ ಕಾಲದ ಶಿಲಾಶಾಸನಗಳಲ್ಲಿ ಕನ್ನವಳ್ಳಿ, ಕಂನ್ನವಳ್ಳಿ, ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಐದು ಶಾಸನಗಳು ವರದಿಯಾಗಿದ್ದು ಕಲ್ಯಾಣದ ಚಾಳುಕ್ಯರು, ಗುತ್ತಲರು, ಹಾಗೂ ಗುತ್ತಲದ ದೇಸಾಯಿಗಳ ಕಾಲಕ್ಕೆ ಸೇರಿದ್ದಾಗಿದೆ. ಬೆಳುಹಿಗೆ-70ಕ್ಕೆ ಸೇರಿದ್ದ ಈ ಊರಿನಲ್ಲಿರುವ ಕ್ರಿ.ಶ. 1012ರ ಇಮ್ಮಡಿ ಜಯಸಿಂಹನ ಕಾಲದ ಶಾಸನವೊಂದು ಸಿರಿಯಗಾರರಸ ದಂಡನಾಯಕನು 'ಎರಡು ಎಪ್ಪತ್ತನ್ನು' 'ಐದು ಹನ್ನೆರಡ'ನ್ನು (200 ಗ್ರಾಮ) ಆಳುತ್ತಿದ್ದ ಅಂಶವನ್ನು ತಿಳಿಸುತ್ತದೆ. ಆರ್ಮಡಿ ವಿಕ್ರಮಾದಿತ್ಯನ (ಕ್ರಿ.ಶ. 1120) ಕಾಲದ ವೀರಗಲ್ಲು ಶಾಸನವೊಂದು ಎರಕಗೌಡನ ಮಗ ಎಡವ ಬಮ್ಮ ಜೋಳವಾಳಿಯಾಗಿ ಸತ್ತ ವಿಷಯವನ್ನು ತಿಳಿಸುತ್ತದೆ. ಇನ್ನೊಂದು ಶಾಸನವು ಕಳಚೂರಿ ಸೋವಿದೇವನ ಸಾಮಂತ ಗುತ್ತ ವೀರ ವಿಕ್ರಮಾದಿತ್ಯ ಬನವಾಸಿ-12000 ಆಳುವಾಗ ಕನ್ನವಳ್ಳಿಯ ಚೆನ್ನಗಾವುಂಡ ಮತ್ತು ಗುತ್ತೊಳಲ ಒಡೆಯ ವಿಕ್ರಮಾದಿತ್ಯರಿಬ್ಬರೂ ಕನವಳ್ಳಿಯ ಮೂಲಸ್ಥಾನದ ಶ್ರೀ ಕಲ್ಲಿನಾಥ ದೇವರ ಶ್ರೀಕಾರ್ಯಕ್ಕೆ ಭೂದಾನವನ್ನೊಳಗೊಂಡಂತೆ ಇತರ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಜೊತೆಗೆ ದಿಂಡೇಶ್ವರ ದೇವರ ಬಗ್ಗೆಯೂ ಪ್ರಸ್ತಾಪಿಸುತ್ತದೆ. ಕ್ರಿ.ಶ. 1716 ಶಾಸನವೊಂದು ಗುತ್ತಲದ ದೇಸಾಯಿ ಬಹದ್ದೂರ್ ಹನುಮಂತಗೌಡನು ಮೈಲಾರಲಿಂಗನ ರಥೋತ್ಸವದ ಕಾಲದಲ್ಲಿ ಕನವಳ್ಳಿ ನೀಲಕಂಠಯೋಗೀಶ್ವರಯ್ಯನವರಿಗೆ ಆರು ವರಾಹದ ಭೂಮಿಯನ್ನು ದಾನವಾಗಿ ಕೊಟ್ಟ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1868ರ ಸನ್ನದು ಕೂಡ ಕಲ್ಲಿನಾಥಗುಡಿ, ನೀಲಕಂಠೇಶ್ವರ ಗುಡಿಗೆ ಇದ್ದ ಉಂಬಳಿಯನ್ನು ಸಮರ್ಥಿಸುತ್ತದೆ.

ಊರಲ್ಲಿಂದು ಪರಮೇಶ್ವರ, ಕಲಿನಾಥ, ಭೋಗೇಶ್ವರ, ವೀರಭದ್ರ ಗುಡಿಗಳಿದ್ದು ಇವು ಇತಿಹಾಸ ದೃಷ್ಟಿಯಿಂದ ಮಹತ್ವದ್ದಾಗಿವೆ. ಊರ ಕೆರೆಯ ಬಳಿಯಿರುವ ಈ ಗುಡಿಯನ್ನು ಜೀರ್ಣೋದ್ಧಾರಕ್ಕೆಂದು ಕೆಡವಿದ್ದಾರೆ. ವಿಶಾಲವಾದ ಪ್ರಾಕಾರದೊಳಗೆ ಇಂದಿಲ್ಲಿ ಕೇವಲ ಎರಡು ಗರ್ಭಗೃಹವನ್ನಷ್ಟೆ ಉಳಿಸಿಕೊಂಡು ಮುಂಭಾಗದ ಪುನರ್ನಿರ್ಮಾಣ ಕಾರ್ಯ ನಡೆಸಿದ್ದಾರೆ. ಪರಮೇಶ್ವರನದೆನ್ನುವ 'ನಟರಾಜ'ನ ಮೂರ್ತಿ ಇರುವ ಗರ್ಭಗೃಹವು ತೆರೆದ ಅರ್ಧಮಂಟಪದ ರಚನೆ ಶೈಲಿಯ ದೃಷ್ಟಿಯಿಂದ ರಾಷ್ಟ್ರಕೂಟರದಾಗಿದ್ದು ಸುಮಾರು ಕ್ರಿ.ಶ. 10ನೇ ಶತಮಾನದ್ದಾಗಿದೆ. ಅಷ್ಟಭುಜ ನಟರಾಜನ ಈ ಶಿಲ್ಪ ಸುಮಾರು 4.5 ಅಡಿ ಎತ್ತರವಿದೆ. ನಟರಾಜನ ಬಳಿಯಲ್ಲೇ ಪಾರ್ವತಿಯು

ನಿಂತಿರುವುದು ಇಲ್ಲಿನ ವೈಶಿಷ್ಟ್ಯ. ಇಲ್ಲಿ ಮತ್ತೊಂದು ಗರ್ಭಗೃಹದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗವಿದ್ದು ಬಯಲಲ್ಲಿ ನಂದಿಯಿದೆ.

ಪರಮೇಶ್ವರ ಗುಡಿಯ ಎಡಭಾಗದಲ್ಲಿರುವುದೇ ಭೋಗೇಶ್ವರ ಗುಡಿ, ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತು ರಚನೆಯಾದ ಇದು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ನವರಂಗಕ್ಕೆ ಪೂರ್ವ ಹಾಗೂ ದಕ್ಷಿಣದಿಂದ ಪ್ರವೇಶವಿದೆ. ಸರಳ ಬಾಗಿಲವಾಡವನ್ನು ಹೊಂದಿರುವ ಈ ಗುಡಿಯ ಹೊರಭಿತ್ತಿಯಲ್ಲಿ ಕಿರು ಶಿಖರಗಳ ಅಲಂಕಾರವಿದೆ. ಗುಡಿಯ ಹೊರಗೆ ಸಪ್ತಮಾತೃಕೆಯರ ಶಿಲ್ಪವಿದ್ದರೆ ಒಳಗೆ ಭಿನ್ನವಾದ ಗಣಪತಿ ಮೂರ್ತಿ ಇದೆ. ಮೇಲೆ ಶಾಸನದಲ್ಲಿ ಹೇಳಿರುವ ಮೂಲಸ್ಥಾನ ಕಲ್ಲಿನಾಥನ ಗುಡಿ (ದುರ್ಗಗುಡಿ) ಹಿರೇಮಠದ ಬಳಿಯಿದೆ. ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿಯಿದ್ದು ಬಾಗಿಲವಾಡ ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ನವರಂಗದಲ್ಲಿರುವ ಐದು ದೇವಕೋಷ್ಠಗಳಲ್ಲಿ ಒಂದರಲ್ಲಿ ಗಜಲಕ್ಷ್ಮಿ, ಮತ್ತೊಂದರಲ್ಲಿ ಮಹಿಷಮರ್ದಿನಿ ಶಿಲ್ಪಗಳಿವೆ. ಸುಮಾರು ನಾಲ್ಕು ಅಡಿ ಎತ್ತರದ ಕೊನೆಯ ಶಿಲ್ಪ ಅಷ್ಟಭುಜೆಯಾಗಿದ್ದು ಸತ್ವಶಾಲಿ ನಿಲುವಿನದು. ಇಲ್ಲಿ ಭಾಗಶಃ ಭಿನ್ನವಾಗಿರುವ ಸೂರ್ಯನ ಶಿಲ್ಪವಿದೆ.

ವೀರಭದ್ರನ ಗುಡಿ ಜೀರ್ಣೋದ್ಧಾರಗೊಂಡಿದ್ದರೂ ನವರಂಗದ ನಾಲ್ಕು ಕಂಬಗಳು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿವೆ. ಊರ ಬಯಲಲ್ಲಿರುವ ಸಿಂಹಾಸನ ಕಟ್ಟೆ ಬಳಿ ಜಿನ ತೀರ್ಥಂಕರ ಮೂರ್ತಿಯ ಮುಕ್ಕೊಡೆಯಷ್ಟೆ ಉಳಿದಿದೆ. ಇತ್ತೀಚೆಗಷ್ಟೆ ಪತ್ತೆಯಾಗಿರುವ ಇಲ್ಲಿನ ನಿಷಿಧಿ ಕಲ್ಲು ಇಲ್ಲಿ ಜೈನರು ಇದ್ದಿರಬಹುದೆಂದು ಸೂಚಿಸುತ್ತದೆ. ಊರ ಹೊರಗಿರುವ ನೀಲಕಂಠೇಶ್ವರ ಗುಡಿ, ನೀಲಕಂಠಯೋಗಿಶ್ವರರ ಗದ್ದುಗೆಯಾಗಿದ್ದು ಗುತ್ತಲದ ದೇಸಾಯಿ ಭೂದಾನ ನೀಡಿದ್ದು ಇವರಿಗೆ ಎಂದು ತೋರುತ್ತದೆ. ಊರಲ್ಲಿರುವ ಹನುಮಂತ, ಬಸವಣ್ಣ ದ್ಯಾಮವ್ವ ಗುಡಿಗಳು ಇತ್ತೀಚಿನವು. ಊರಲ್ಲಿ ಹಿರೇಮಠ ಹಾಗೂ ಚರಂತಿಮಠವಿದೆ. ಊರಲ್ಲಿ ಬೃಹತ್ತಾದ ಮಸೀದಿಯೊಂದಿದೆ. ಅಲ್ಲದೆ 1945ರಲ್ಲಿ ಸ್ಥಾಪಿತವಾದ ಬಾಸಲ್ ಮಿಷನ್ ಚರ್ಚ್ ಇದೆ.

**ಕನ್ನೇಶ್ವರ** : ಹಾನಗಲ್ ತಾಲೂಕಿನ ಕನ್ನೇಶ್ವರವು (ಜನಸಂಖ್ಯೆ : 640) ಹಾನಗಲ್‌ನಿಂದ ಆಗ್ನೇಯಕ್ಕೆ 40 ಕಿ.ಮೀ. ದೂರದಲ್ಲಿದೆ. ಈ ಊರಲ್ಲಿ ಈವರೆಗೆ ಸುಮಾರು ಕ್ರಿ.ಶ. 11ನೇ ಶತಮಾನಕ್ಕೆ ಸೇರಿದ ಮೂರು ಶಾಸನಗಳು ಸಿಕ್ಕಿದ್ದು ಈ ಶಾಸನಗಳು ಪ್ರಕಟವಾಗಬೇಕಾಗಿದೆ. ಕನ್ನೇಶ್ವರ ರಾಷ್ಟ್ರಕೂಟ ಕನ್ನರನನ್ನು ಧ್ವನಿಸಿದರೂ, ಆಧಾರಗಳ ಕೊರತೆಯಿಂದ ಏನನ್ನೂ ಹೇಳಲು ಬಾರದಾಗಿದೆ. ಊರ ಶಾಲೆಯ ಬದಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಈಶ್ವರ ಗುಡಿ, ಸುಮಾರು ಕ್ರಿ.ಶ. 11-12ನೇ ಶತಮಾನಕ್ಕೆ ಸೇರಿದ ಚಾಳುಕ್ಯ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳವನ್ನು ಹೊಂದಿದ್ದು ಇಂದು ಗರ್ಭಗೃಹ, ಅಂತರಾಳವಷ್ಟೆ ಉಳಿದಿದೆ. ಗರ್ಭಗೃಹದಲ್ಲಿ ಬಲಹರಿ ಪಾಣಿಪೀಠದ ಮೇಲೆ ಶಿವಲಿಂಗವಿದ್ದು ಇದು ಲಲಾಟದಲ್ಲಿ ಗಜಲಕ್ಷ್ಮಿಯನ್ನುಳ್ಳ ಚತುರ್ಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದೆ. ಅಂತರಾಳದ ಬಾಗಿಲವಾಡ ತ್ರಿಶಾಖಾ ಜಾಲಾಂಧ್ರವನ್ನು ಹೊಂದಿದ್ದು ತ್ರಿಮೂರ್ತಿ ಕೆತ್ತನೆಯ ಮಕರತೋರಣದಿಂದ ಅಲಂಕರಿಸಲ್ಪಟ್ಟಿದೆ. ಹಾಳಾಗಿರುವ ನವರಂಗದ ಭಾಗದಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಈ ಗುಡಿಯ ಮುಂದಿರುವ ಶಾಸನ ಪೂರ್ಣ ತ್ರುಟಿತಗೊಂಡಿದೆ. ಊರ ಹೊರಗಿರುವ ಕನ್ನೇಶ್ವರ ಗುಡಿಯೂ ಕೂಡ ಸುಮಾರು ಕ್ರಿ.ಶ. 11ನೇ ಶತಮಾನದಲ್ಲಿ ನಿರ್ಮಾಣಗೊಂಡ ಚಾಲುಕ್ಯ ಶೈಲಿಯ ಸುಂದರ ಗುಡಿಯಾಗಿದೆ. ಗರ್ಭಗುಡಿ, ಅಂತರಾಳ, ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ತ್ರಿಶಾಖಾಲಂಕಾರದಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಸುಂದರವಾದ ಚಂದ್ರಶಿಲೆಯನ್ನು ಹೊಂದಿರುವ ಅಂತರಾಳದ ಬಾಗಿಲವಾಡವು ಬ್ರಹ್ಮ ಗಣಪತಿ, ಮಹೇಶ್ವರ, ಕಾರ್ತಿಕೇಯ ಹಾಗೂ ವಿಷ್ಣು ಕೆತ್ತನೆಯಿರುವ ಮಕರತೋರಣವನ್ನು ಹೊಂದಿದ್ದು ಈ ದ್ವಾರಬಂಧಕ್ಕೆ ಜಾಲಾಂಧ್ರವಿದೆ. ನವರಂಗದ ಇಕ್ಕೆಲಗಳಲ್ಲಿ ದೇವಕೋಷ್ಠವಿದ್ದು ಇವುಗಳಲ್ಲಿ ಕ್ರಮವಾಗಿ ಸುಮಾರು ಮೂರಡಿ ಎತ್ತರದ ಕಾರ್ತಿಕೇಯ ಹಾಗೂ ಗಣಪತಿಯ ಶಿಲ್ಪಗಳಿದ್ದು ಬಲಪಾರ್ಶ್ವದಲ್ಲಿ ಪ್ರಭಾವಳಿಯನ್ನುಳ್ಳ ಸಪ್ತಮಾತೃಕೆಯರ ಸುಂದರ ಶಿಲ್ಪವಿದೆ. ನವರಂಗದ ನಡುವಣ ನಾಲ್ಕು ಕಂಬಗಳೂ ಆಕರ್ಷಕವಾದ ಅಲಂಕಾರಿಕ ಕೆತ್ತನೆಯಿಂದ ಹೊಳೆಯುತ್ತಿದ್ದು ಗಮನ ಸೆಳೆಯುತ್ತವೆ. ನವರಂಗದ ಛತ್ತು ಚಪ್ಪಟೆಯಾಗಿದ್ದು ನಡುವೆ ಕಮಲವಿದೆ. ನವರಂಗದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ದೇವಾಲಯದ ಹೊರಭಿತ್ತಿ ನಿರಾಡಂಬರವಾಗಿದ್ದು, ಇದರ ಶಿಖರ ಹಾಳಾಗಿದೆ. ಗುಡಿಯ ಮುಂದೆ ನಂದಿ ಇದೆ. ದೇವಾಲಯದ ಎಡಬದಿಯಲ್ಲಿ ಹೊಂಡವಿದ್ದು ಅದನ್ನು ಸ್ಥಳೀಕರು ತಾವರೆ ಹೊಂಡವೆಂದು ಕರೆಯುತ್ತಾರೆ.

ಈ ಊರು ಹಿಂದೆ ಮಣ್ಣಿನ ಕೋಟೆ ಹೊಂದಿತ್ತು ಎನ್ನುವುದಕ್ಕೆ ಕೊತ್ತಲದ ಅವಶೇಷಗಳಿವೆ. ಸ್ಥಳೀಕರು ಕೋಟೆ ಚೌಡವ್ವ ಎಂದು ಪೂಜಿಸುವ ದೊಡ್ಡ ಬೋದಿಗೆಯೊಂದು ಅಲ್ಲಿ ಬಿದ್ದಿದೆ. ಊರಲ್ಲಿ ಹನುಮಂತ, ಮಾತಂಗಿ, ಮಾಸ್ತವ್ವನ ಗುಡಿಗಳಿವೆ. ಪೀಠಸ್ಥ ಚತುರ್ಮುಖ ಬ್ರಹ್ಮ ಶಿಲ್ಪವಿದ್ದು ಇದನ್ನು ಸ್ಥಳಿಕರು 'ಗೋಲಕವ್ವ' ಎಂದು ದೀಪಾವಳಿಯಲ್ಲಿ ವಿಶೇಷವಾಗಿ ಆರಾಧಿಸುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೊಲೆ, ಸುಲಿಗೆ, ದರೋಡೆ ನಡೆಸಿ ಜಾನಪದ ಸಾಹಿತ್ಯಕ್ಕೆ ಕೇಂದ್ರವಾಗಿದ್ದ ಕನ್ನೇಶ್ವರ ರಾಮ ಈ ಊರಿನವನು.

**ಕಬ್ಬೂರು:** ಹಾವೇರಿ ತಾಲೂಕಿನಲ್ಲಿರುವ ಕಬ್ಬೂರು (ಜನಸಂಖ್ಯೆ : 4,154) : ಹಾವೇರಿಯಿಂದ ನೈರುತ್ಯಕ್ಕೆ 11 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಕಬ್ಬೂರು, ಕಬುರು, ಕಬ್ಬೂರು ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ಹಿಂದೆ ಬಾಸವೂರು-140 ಕ್ಕೆ ಸೇರಿತ್ತು. ಕಬ್ಬನ್ನು ಬೆಳೆವ ಊರು ಕಬ್ಬೂರು ಎಂಬ ಹೆಸರು ಈ ಊರಿಗೆ ಬಂದಿರಬೇಕೆಂದು ತೋರುತ್ತದೆ. ಈ ಊರಲ್ಲಿ ಒಟ್ಟು ಐದು ಶಾಸನಗಳಿದ್ದು ಅವುಗಳಲ್ಲಿ ಎರಡು ವೀರಗಲ್ಲುಗಳಿವೆ. ಕ್ರಿ.ಶ. 1025ರ ಶಾಸನ ಬಾಸವೂರು-140ರ ನಾಡಗಾವುಂಡನಿಂದ ಕಬ್ಬೂರ ಗೌಡಿಕೆ ಪಡೆದ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1251 ರ ಮತ್ತೊಂದು ಶಾಸನ ಹಾವೇರಿಯ-400 ಮಹಾಜನರಿಂದ ಸೇನಬೋವ ಲಕ್ಕಿಸೆಟ್ಟಿ ಕಬ್ಬೂರ ಹೆಗ್ಗಡೆತನವನ್ನು ಪಡೆದ ವಿಷಯವನ್ನು ತಿಳಿಸುತ್ತದೆ. ಇದರಿಂದ ಕಬ್ಬೂರು, ಅಗ್ರಹಾರ ಹಾವೇರಿಯ ಆದ್ಯ ಗ್ರಾಮವಾಗಿರಬೇಕೆಂದು ತಿಳಿಯಬಹುದು. ಈ ಶಾಸನವು ಇಲ್ಲಿಯ ಕೆರೆಯನ್ನು ಗೌಂಡಗೆರೆಯೆಂದು ಹೆಸರಿಸಿದೆ. ಊರ ಕೆರೆಯ ಬದಿಯಲ್ಲಿರುವ ಕಲ್ಮೇಶ್ವರ ಗುಡಿ ಸುಮಾರು ಕ್ರಿ.ಶ. 10-11 ನೇ ಶತಮಾನದ ಇಟ್ಟಿಗೆಯ ರಚನೆಯಾಗಿದೆ. ಗರ್ಭಗೃಹ, ತೆರೆದ ಮಂಟಪ, ನವರಂಗ ಹಾಗೂ ಕಿರು ಮುಖಮಂಟಪವನ್ನು ಹೊಂದಿರುವ ಈ ಗುಡಿಗೆ ಪೂರ್ವ ಹಾಗೂ ದಕ್ಷಿಣದಿಂದ ಪ್ರವೇಶಿಸಲು ದ್ವಾರಗಳಿವೆ. ಇಂದು ಪೂರ್ಣ ಮಣ್ಣು ದಿಬ್ಬದಿಂದ ಆವೃತವಾಗಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಸರಳವಾದ ಬಾಗಿಲವಾಡದ ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯಿದೆ. 16 ಕಂಬಗಳನ್ನುಳ್ಳ ನವರಂಗದ ನಡುವಿನ ಛತ್ತು ಸರಳವಾದ ಕಮಲವನ್ನು ಹೊಂದಿದೆ. ನವರಂಗದಲ್ಲಿ ಸಪ್ತಮಾತೃಕೆ, ಭೈರವರ ಶಿಲ್ಪವಿದೆ. ನವರಂಗದ ಪ್ರವೇಶದ್ವಾರದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ನಡುವೆ ಗಜಲಕ್ಷ್ಮಿಯಿದೆ. ಊರಿಂದ ಸುಮಾರು 4-5 ಕಿಮೀ ದೂರದಲ್ಲಿರುವ ಗುಡ್ಡದ ಮೇಲೆ ಸಿದ್ದೇಶ್ವರ ದೇವಾಲಯವಿದೆ. ಈ ದೇವರ ಜಾತ್ರೆ ಶ್ರಾವಣಮಾಸದ ಎರಡನೇಯ ಸೋಮವಾರದಂದು ಜರುಗುತ್ತದೆ.

**ಕಮಡೊಳ್ಳಿ:** ಕುಂದಗೋಳ ತಾಲೂಕಿಗೆ ಸೇರಿದ ಕಮಡೊಳ್ಳಿ (ಜನಸಂಖ್ಯೆ : 6,789) ಕುಂದಗೋಳದಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿ ಇದೆ. ಈ ಊರಿಂದ ಈವರೆಗೆ ಸುಮಾರು ಕ್ರಿ.ಶ. 12 ರಿಂದ 16 ನೇ ಶತಮಾನಕ್ಕೆ ಸೇರಿದ ಐದು ಶಾಸನಗಳು ವರದಿಯಾಗಿವೆಯಾದರೂ ಬಹಳ ಹಾಳಾಗಿರುವುದರಿಂದ ಹೆಚ್ಚಿನ ವಿವರ ಸಿಗುವುದಿಲ್ಲ. ಆದರೂ ಊರಲ್ಲಿ ಚದುರಿಕೊಂಡಿರುವ ಅವಶೇಷಗಳ ಆಧಾರದ ಮೇಲೆ ಈ ಊರಿನ ಪ್ರಾಚೀನತೆಯನ್ನು ಕನಿಷ್ಟ ಕ್ರಿ.ಶ. 6-7ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸ ಬಹುದಾಗಿದೆ. ಊರಲ್ಲಿ ಪ್ರಾಚೀನ ಕಾಲದ 3-4 ದೇವಾಲಯಗಳಿದ್ದು ಅವುಗಳಲ್ಲಿ, ರಾಮೇಶ್ವರ, ಬಸವಣ್ಣ, ಕಲ್ಮೇಶ್ವರ ಹಾಗೂ ಸಿದ್ದಲಿಂಗೇಶ್ವರ ಗುಡಿಗಳು ಪ್ರಮುಖ ದೇವಾಲಯಗಳಾಗಿವೆ. ಊರಿನ ಕೇಂದ್ರಬಿಂದು, ಎತ್ತರದ ಸ್ಥಳದಲ್ಲಿರುವ ರಾಮೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯನ್ನು ಸ್ಥಳಿಕರು ಮೂಲಕ್ಕೆ ಧಕ್ಕೆಯಾಗದ ರೀತಿಯಲ್ಲಿ ಜೀರ್ಣೋದ್ಧಾರ ಗೊಳಿಸಿದ್ದಾರೆ. ಗರ್ಭಗೃಹ, ತೆರೆದ ಅರ್ಧಮಂಟಪ, ನವರಂಗ ಹಾಗೂ ನಂತರದ ಸೇರ್ಪಡೆಯಾದ ಸಭಾಮಂಟಪವಿರುವ ಈ ಗುಡಿಗೆ ಪಾರ್ಶ್ವದ್ವಾರವಿದ್ದು ನವರಂಗದ ಮೂಲಕ ಪ್ರವೇಶಿಸಲು ಬಾಗಿಲಿದೆ. ನಕ್ಷತ್ರಾಕಾರದಲ್ಲಿರುವ ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು, ಇದರ ಬಾಗಿಲವಾಡ ಚತುರ್‌ಶಾಖೆಗಳನ್ನು ಹೊಂದಿದೆ. ಅಂತರಾಳವನ್ನು ತ್ರಿಮೂರ್ತಿ ಕೆತ್ತನೆಯಿರುವ ಮಕರತೋರಣ ಅಲಂಕರಿಸಿದೆ. ನವರಂಗದಲ್ಲಿ ಸಪ್ತಮಾತೃಕಾ, ಕೇಶವ ಹಾಗೂ ದ್ವಿಬಾಹು ಗಣಪತಿಯ ಸುಂದರ ಶಿಲ್ಪಗಳಿವೆ. ನವರಂಗದ ಛತ್ತನ್ನು ಸುಂದರವಾದ ಕಮಲ ಅಲಂಕರಿಸಿದೆ. ಸಭಾಮಂಟಪದಲ್ಲಿ ರಾಮಲಕ್ಷ್ಮಣರ 4.5 ಅಡಿ ಎತ್ತರದ ಶಿಲ್ಪಗಳಿವೆ. ಗರ್ಭಗೃಹವನ್ನು ಕದಂಬ ನಾಗರ ಶಿಖರ ಅಲಂಕರಿಸಿದ್ದು ಗರ್ಭಗೃಹದ ಮೂರು ದಿಕ್ಕಲ್ಲಿರುವ ದೇವಕೋಷ್ಠಗಳು ದ್ರಾವಿಡ ಮಾದರಿಯ ಶಿಖರಗಳನ್ನು ಹೊಂದಿವೆ. ಈ ಗುಡಿಯ ಗರ್ಭಗೃಹದ ಅಂತರಾಳದ ಹೊರಭಿತ್ತಿಯನ್ನು ಆಲಂಕಾರಿಕ ಕಂಬಗಳು ಹಾಗು ಕಿರುಶಿಖರಗಳು ಅಲಂಕರಿಸಿವೆ. ಊರ ನಡುವೆ ಇರುವ ಬಸವಣ್ಣನ ಗುಡಿ, ಗರ್ಭಗುಡಿ, ತೆರೆದ ಅರ್ಧಮಂಟಪ, ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಇದರ ಬಾಗಿಲವಾಡ ತ್ರಿಶಾಖಾಲಂಕೃತವಾಗಿದ್ದು, ನಿರಾಡಂಬರವಾಗಿದೆ. ಅರ್ಧಮಂಟಪದಲ್ಲಿ ನಂದಿಯಿದ್ದು ನವರಂಗವನ್ನು ಹೊತ್ತು ನಿಂತಿರುವ ದುಂಡಾಕಾರದ ಅಡ್ಡ ಕೊಯ್ತದ ಹೊಳೆಯುವ ಚಾಲುಕ್ಯ ಕಂಬಗಳು ಆಕರ್ಷಕವಾಗಿದ್ದು ಇಲ್ಲಿ ವಿಷ್ಣುವಿನ ಸುಂದರ ಮೂರ್ತಿಯಿದೆ. ಸಿದ್ದಲಿಂಗೇಶ್ವರ ಗುಡಿಯು ಜೀರ್ಣಾವಸ್ಥೆಯಲ್ಲಿದ್ದು ಇಲ್ಲಿನ ಬೃಹತ್ತಾದ ಲಿಂಗ ರಾಷ್ಟ್ರಕೂಟರ ಕಾಲದಷ್ಟು

ಪ್ರಾಚೀನವಾಗಿದ್ದು ಇದರ ಪಾಣಿಪೀಠ ಆಕರ್ಷಕವಾಗಿದೆ. ಕಲ್ಮೇಶ್ವರ ಗುಡಿ ಹಿಂಬದಿಯಲ್ಲಿ ನಾಲ್ಕು ವೀರಗಲ್ಲುಗಳಿದ್ದು ಇವುಗಳಲ್ಲಿ ಒಂದು ರಾಷ್ಟ್ರಕೂಟರ ಕಾಲದ್ದಾಗಿದ್ದು, ಉಳಿದವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿವೆ. ಇಲ್ಲೇ ತೂಬಿನ ಲಕ್ಕವ್ವನ (ಗಜಲಕ್ಷ್ಮಿ) ಶಿಲ್ಪವಿದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ದ್ಯಾಮವ್ವ ಹಾಗೂ ದುರ್ಗಾದೇವಿಯ ಗುಡಿಗಳಿವೆ. ನಾಲ್ಕು ಮಸೀದಿ ಹಾಗೂ ರಾಜಾಬಾಗಸವಾರ್‌ನ ದರ್ಗಾ ಇದ್ದು ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಕರಮಡಿ:** ರೋಣ ತಾಲೂಕಿನ ಕರಮಡಿ (ಜನಸಂಖ್ಯೆ : 1551) ರೋಣದಿಂದ ವಾಯುವ್ಯಕ್ಕೆ 29 ಕಿ.ಮೀ. ದೂರದಲ್ಲಿದ್ದು ಹೊಳೆ ಆಲೂರಿನಿಂದ ನೈಋತ್ಯಕ್ಕೆ ಸುಮಾರು 12 ಕಿ.ಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕದಿರ್ಮಡಿ', 'ಕಾರೆಮಡಿ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ಹಿಂದೆ ಬೆಳ್ವೊಲ-300 ಕ್ಕೆ ಸೇರಿದ 'ಬೆಳ್ವಣಿಕೆ-12' ರ ಒಂದು ಗ್ರಾಮವಾಗಿತ್ತು. ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದು ರಾಷ್ಟ್ರಕೂಟ ಒಂದನೇಯ ಅಮೋಘವರ್ಷನ ಕಾಲಕ್ಕೆ ಸೇರಿದ ಶಾಸನವಾಗಿದ್ದರೆ ಕಲ್ಮೇಶ್ವರ ಗುಡಿ ಮುಂದಿರುವ ಸುಮಾರು ಒಂಬತ್ತನೇ ಶತಮಾನಕ್ಕೆ ಸೇರಿದ ಶಾಸನ ಕಾರೆಮಡಿ ಅಗ್ರಹಾರದ ಮಹಾಜನರು ಈಶಾನರಾಶಿ ಭಟಾರರ ದೇಗುಲಕ್ಕೆ ಭೂಮಿಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ. ಸೋಮೇಶ್ವರ ಗುಡಿ ಮುಂದಿರುವ ಕಲ್ಯಾಣ ಚಾಳುಕ್ಯ ಒಂದನೇಯ ಸೋಮೇಶ್ವರನ ಕಾಲಕ್ಕೆ ಸೇರಿದ ಕ್ರಿ.ಶ. 1059 ರ ಶಾಸನ ಬಬ್ಬಲೇಶ್ವರ ದೇವಾಲಯ ಹಾಗೂ ಸತ್ರಕ್ಕೆ ಗಂಗೆಯಜೀಯರು 152 ಗದ್ಯಾಣ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ನೆರೆಯ ಕೌಜಗೇರಿ ಗ್ರಾಮದ ಕ್ರಿ.ಶ. 934 ರ ಶಾಸನವು ಕೌಜಗೇರಿಯ ಬಳ್ಳಜ್ಜಗೌಡ ಕರಮಡಿಯ ಲಿಂಗವೊಂದಕ್ಕೆ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಹೀಗೆ ಕ್ರಿ.ಶ 8-12 ನೇ ಶತಮಾನದವಧಿಯಲ್ಲಿ ವಿದ್ಯಾಕೇಂದ್ರವಾಗಿ, ಅಗ್ರಹಾರವಾಗಿ ಮೆರೆದಿರುವ ಈ ಊರ ತುಂಬಾ ಹಲವಾರು ಚಾರಿತ್ರಿಕ ಅವಶೇಷಗಳು ಹರಡಿಕೊಂಡಿವೆ.

ಊರ ಹೊರಗೆ ಹೊಲದಲ್ಲಿ ಹಾಗೂ ರೈತರ ಹಿತ್ತಲಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಬಿದ್ದಿದ್ದು ಇದರಿಂದ ಸುಮಾರು ಒಂಭತ್ತನೇ ಶತಮಾನದಲ್ಲಿ ಇಲ್ಲೊಂದು ಮಹತ್ವದ ಕಾಳಗ ಜರುಗಿರಬೇಕೆಂದೆನಿಸುತ್ತದೆ. ಊರಂಚಿನಲ್ಲಿರುವ ಕಲ್ಮೇಶ್ವರ ದೇವಾಲಯ ಪ್ರಾಚೀನವಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉಳಿದಂತೆ ಎಲ್ಲವೂ ಜೀರ್ಣೋದ್ಧಾರಗೊಂಡಿದೆ. ಊರಲ್ಲಿರುವ ಸೋಮೇಶ್ವರ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಈ ಗುಡಿಯ ಆವರಣದಲ್ಲಿ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ, ನಂದಿ, ಸಪ್ತಮಾತೃಕಾ ಶಿಲ್ಪಗಳು ಇವೆ. ಊರ ನಡುವೆ ಇರುವ ಗ್ರಾಮದೇವತೆ (ದ್ಯಾಮವ್ವ) ಗುಡಿಯ ಮುಂದೆ ಸಪ್ತಮಾತೃಕಾ, ಮಹಿಷಮರ್ದಿನಿ ಶಿಲ್ಪಗಳಿವೆ. ಹನುಮಂತನ ಗುಡಿ ಮುಂದೆ ಕೂಡ ಭಗ್ನ ಶಿಲ್ಪಾವಶೇಷಗಳಿವೆ. ಊರಲ್ಲಿ, ಬಸವಣ್ಣ, ಈಶ್ವರ, ಬೀರೇದೇವರು, ಭರಮಪ್ಪ ಹಾಗೂ ಮರಿಯಮ್ಮನ ಗುಡಿಗಳಿವೆ. ಊರಲ್ಲಿ ಒಂದು ಮಸೀದಿ ಹಾಗೂ ದರ್ಗಾ ಇದೆ.

**ಕಲಕೇರಿ:** ಹಾನಗಲ್ ತಾಲೂಕಿನ ಕಲಕೇರಿ (ಜನಸಂಖ್ಯೆ : 1,026) ಹಾನಗಲ್‌ನಿಂದ ಆಗ್ನೇಯಕ್ಕೆ 35 ಕಿಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕಲುಕೆರೆ', 'ಕಲ್ಕೆರೆ' ಎಂದು ಪ್ರಸ್ತಾಪಿಸಲ್ಪಟ್ಟಿದೆ. ಪ್ರಾಚೀನ ಕಾಲದಲ್ಲಿ ಬಾಸವೂರು-140 ಕ್ಕೆ ಸೇರಿದ್ದ ಈ ಊರಲ್ಲಿ 32 ಶಾಸನಗಳಿದ್ದು ಹೆಚ್ಚಿನವು ಕಲ್ಯಾಣದ ಚಾಲುಕ್ಯ, ಯಾದವ, ಹೊಯ್ಸಳ, ವಿಜಯನಗರದರಸರ ಕಾಲದ ಶಾಸನಗಳಾಗಿವೆ. ಇದರಲ್ಲಿ ಸುಮಾರು ಒಂಬತ್ತು ಶಾಸನಗಳು ಕಲುಕೆರೆಯ ಸ್ವಯಂಭೂ ಸೋಮನಾಥ (ಸೋಮೇಶ್ವರ) ಗುಡಿಗೆ ಬೇರೆ ಬೇರೆ ಅರಸರ ಕಾಲದಲ್ಲಿ ನೀಡಿದ ದಾನ ಶಾಸನಗಳಾಗಿವೆ. ಕ್ರಿ.ಶ 1053 ರ ಒಂದನೇ ಸೋಮೇಶ್ವರನ ಕಾಲದ ಶಾಸನ ಬೆಂಗೇರಿಯ ಪ್ರಭು ಬರ್ಮಗಾವುಂಡ ಸೋಮೇಶ್ವರ ಗುಡಿಗೆಂದು ದಾನ ಮಾಡಿದರೆ ಇಮ್ಮಡಿ ಸೋಮೇಶ್ವರನ ಮಾಂಡಲಿಕ ಮುಮ್ಮುಡಿ ಜಯಕೇಶಿ ಹಾಗೂ ಅವನ ರಾಣಿ ಮೈಳಲದೇವಿ ಪುಲ್ಲವಲ (ಹಿರೇಹುಲ್ಲಾಳ) ಗ್ರಾಮ ದಾನ ಮಾಡಿದ್ದಾರೆ. ಆರ್ಮಡಿ ವಿಕ್ರಮಾದಿತ್ಯನ ಈರ್ವರು ಅಧಿಕಾರಿಗಳು ಇದೇ ಗುಡಿಗೆ ದಾನ ನೀಡಿದ್ದನ್ನು ಮತ್ತೆರಡು ಶಾಸನಗಳು ಹೇಳಿದರೆ, ಹೊಯ್ಸಳ ಇಮ್ಮಡಿ ಬಲ್ಲಾಳನ (1207) ನಾಳ್ಪ್ರಭು ಹರಿಯಮಸೆಟ್ಟಿ ಮೂರುಜಾವಿದೇವರ ಪಾದ ತೊಳೆದು ಭೂದಾನ ಕೊಟ್ಟಿದ್ದನ್ನು ದಾಖಲಿಸಿದೆ. ಯಾದವ ಅರಸ ಮಹಾದೇವನ (1270) ಕಾಲದ ಶಾಸನವೊಂದು ಸುಂಕದಾನ ಮಾಡಿದ್ದನ್ನು ದಾಖಲಿಸಿದೆ. ಕ್ರಿ.ಶ. 1243 ರ ಸಿಂಘಣನ ಶಾಸನ ಹಾನುಂಗಲ್ಲ ತೈಲಪ್ಪೇಶ್ವರ ದೇವರ ಆಚಾರ್ಯ (ತಾರಕೇಶ್ವರ) ರಾಜಗುರು ಅಮರೇಶ್ವರ ದೇವನು ತನ್ನ ಶಿಷ್ಯ ಮಲ್ಲಿಕಾರ್ಜುನ ಪಂಡಿಂತನಿಗೆ ಜಯಸಿಂಗೇಶ್ವರ ಗುಡಿಯ ಸ್ಥಾನಾಚಾರ್ಯನನ್ನಾಗಿ ಮಾಡಿ ಭೂದಾನ ಮಾಡಿದ್ದನ್ನು ತಿಳಿಸಿದರೆ, ಅದೇ ಗುಡಿಯ ಆದಿತ್ಯ ಪೀಠದ ಮೇಲಿನ ಶಾಸನ ರೂವಾರಿ ಮಲ್ಲೋಜ ಸೂರ್ಯದೇವರ ಶಿಲ್ಪ ಮಾಡಿದ್ದೆಂದು ತಿಳಿಸುತ್ತದೆ. ಸೋಮೇಶ್ವರ ಗುಡಿ ಆವರಣದಲ್ಲಿ

ಸುಮಾರು 10 ವೀರಗಲ್ಲುಗಳಿದ್ದು, ಇವು ಕ್ರಿ.ಶ. 1146 ಕಾಗಿನೆಲೆ ಕಾಳಗ, ಕ್ರಿ.ಶ. 1185 ರ ರಟ್ಟಿಹಳ್ಳಿ ಕಾಳಗದಲ್ಲಿ ಗೋಗ್ರಹಣದಲ್ಲಿ, ಕ್ರಿ.ಶ. 1186 ರ ಕುಂದಗೋಳ ಮುತ್ತಿಗೆಗಳಲ್ಲಿ ಮಡಿದ ವೀರರ ಸ್ಮಾರಕಶಿಲೆಗಳಾಗಿವೆ. ಕ್ರಿ.ಶ. 1286 ರ ನಿಷಿಧಿ ಶಾಸನವೊಂದು ಸಮಂತಭದ್ರರ ಶಿಷ್ಯ ಮಾದಯ್ಯ ಸಲ್ಲೇಖನ ಆಚರಿಸಿ ನಿರ್ವಾಣ ಹೊಂದಿದ್ದನ್ನು ಹೇಳುತ್ತದೆ.

ಉಪ್ಪುಣಸಿಗೆ ಹೋಗುವ ದಾರಿಯಲ್ಲಿ ಕಲಕೇರಿಯ ದೊಡ್ಡಕೆರೆಯ ಉತ್ತರ ದಂಡೆ ಮೇಲೆ ಮೂಲೆಬಸವಣ್ಣನ ಗುಡಿಯ ಗರ್ಭಗೃಹವಷ್ಟೇ ಈಗ ಉಳಿದಿದ್ದು ಅದರಲ್ಲಿ ಶಿವಲಿಂಗವಿದೆ. ಈ ಗುಡಿ ಬಳಿಯಿರುವ ಶಾಸನದಿಂದ ಬಾಸವೂರು-140 ಕ್ಕೆ ಸೇರಿದ ಬೆಂಗೇರಿಯ ಗಾವುಂಡ ಬರ್ಮಯ್ಯನು ಸೋಮೇಶ್ವರ ದೇವರಿಗೆ, ಭೋಗದ ಸೂಳೆಯರಿಗೆ, ಭೂಮಿ ಹಾಗೂ ಮನೆಗಳನ್ನು ದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಆದ್ದರಿಂದ ಶಾಸನೋಕ್ತ ಎರಡು ಸೋಮೇಶ್ವರ ಗುಡಿಗಳಲ್ಲಿ ಇದು ಒಂದೆಂದು ಹೇಳಬೇಕಾಗುತ್ತದೆ. ಇಲ್ಲಿ ಉಕ್ತವಾಗಿರುವ ಬೆಂಗೇರಿಯು ಕಲಕೇರಿಯ ನೆರೆಗ್ರಾಮವಾದ ಬ್ಯಾಗವಾಡಿಯಾಗಿರಬೇಕೆಂದು ತೋರುತ್ತದೆ. ಈ ಗುಡಿಯ ಬಳಿಯಲ್ಲಿ ನಾಲ್ಕು ಅಡಿ ಎತ್ತರದ ಅಷ್ಟಭುಜ ಮಹಿಷಮರ್ದಿನಿಯ ಸುಂದರ ಶಿಲ್ಪವಿದೆ.

ಊರ ಕೆರೆ ದಂಡೆ ಬಳಿಯಲ್ಲಿ ಒಂದೇ ಸಾಲಿನಲ್ಲಿರುವ ಐದು ಗುಡಿಗಳಲ್ಲಿ ಸ್ವಯಂಭು ಸೋಮೇಶ್ವರ ಗುಡಿ ವಿಶಾಲವಾಗಿದ್ದು ಆಕರ್ಷಕವಾಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಒಂದು ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದರೆ ಉಳಿದ ಗರ್ಭಗೃಹಗಳು ಖಾಲಿಯಿವೆ. ಎಲ್ಲಾ ಗರ್ಭಗೃಹದ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದರೆ ಅಂತರಾಳದ ಬಾಗಿಲವಾಡಗಳು, ಬ್ರಹ್ಮ ವಿಷ್ಣು ಕೆತ್ತನೆಯನ್ನು ಹೊಂದಿರುವ ಮಕರತೋರಣ ಮತ್ತು ಜಾಲಾಂಧ್ರವನ್ನು ಹೊಂದಿವೆ. 16 ಕಂಬಗಳನ್ನು ಹೊಂದಿರುವ ನವರಂಗದ ಅಂಚಿನಲ್ಲಿ ಕಕ್ಷಾಸನವಿದೆ. ಕಂಬಗಳು ಚಾಳುಕ್ಯ ಶೈಲಿಯ ವೃತ್ತ ಅಡ್ಡಕೊಯ್ತದವಾಗಿವೆ. ಗುಡಿಯ ಹೊರಭಿತ್ತಿ ಸರಳವಾಗಿದ್ದು ಗರ್ಭಗೃಹಗಳಿಗೆ ಕದಂಬ ನಾಗರ ಶಿಖರಗಳಿವೆ. ಈ ಗುಡಿಯ ನವರಂಗದ ಛಾವಣಿ ನಡುವೆ ಚಪ್ಪಟೆಯಿದ್ದು ಇಳಿಜಾರಾದ ಅಂಚನ್ನು ಹೊಂದಿದೆ. ಕ್ರಿ.ಶ. 11 ಶತಮಾನದ ಪೂರ್ವಾರ್ಧದ ರಚನೆಯಿದಾಗಿದ್ದು ಇಲ್ಲಿನ ಎರಡನೇ ಶಾಸನೋಕ್ತ ಸೋಮೇಶ್ವರ ಗುಡಿಯಾಗಿದೆ. ಈ ಗುಡಿಯ ಮುಂಬದಿಯಲ್ಲಿ ಎಡಕ್ಕೆ ಗರ್ಭಗೃಹ ಇರುವ ಸಣ್ಣ ಗುಡಿಯಿದೆ. ಈ ಗುಡಿಯ ಬಾಗಿಲವಾಡವು ಸರಳವಾಗಿದ್ದು ಅದರ ಲಲಾಟದಲ್ಲಿ ಗಜಲಕ್ಷ್ಮಿಯಿದೆ.

ಸೋಮೇಶ್ವರ ಗುಡಿಯ ಬಲಬದಿಗೆ ಉತ್ತರಾಭಿಮುಖವಾಗಿರುವ ಆಯಾಕಾರದ ರಚನೆಯಿದ್ದು, ಇದನ್ನು ಎರಡು ಭಾಗವಾಗಿ ವಿಭಜಿಸಿದ್ದು ಒಳಭಾಗದಲ್ಲಿ ಹಂಸಪೀಠವಿದೆ. ಮುಂದೆ ನಾಲ್ಕು ಕಂಬದ ನವರಂಗವಿದೆ. ಒಳಭಾಗದ ಬಾಗಿಲವಾಡ ಚತುರ್ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಛತ್ತಿನಲ್ಲಿ ಸುಂದರವಾದ ಕಮಲವಿದೆ. ಇದು ಬಹುಶಃ ಸೋಮೇಶ್ವರ ಗುಡಿಗೆ ಸೇರಿದ ಮಠವಾಗಿದ್ದು, ಶಿಕ್ಷಣ ನೀಡಲು ಬಳಕೆಯಾಗಿದ್ದಿರಬೇಕೆಂದು ತೋರುತ್ತದೆ. ದಕ್ಷಿಣ ಗರ್ಭಗೃಹದ ಬಾಗಿಲವಾಡದಲ್ಲಿ ಸುಂದರವಾದ ನಾಗಬಂಧ ಪಟ್ಟಿಕೆಯಿದೆ. ಈ ಗುಡಿಯ ಹಿಂಬದಿಯಲ್ಲಿರುವುದೇ ಈಶ್ವರಗುಡಿ. ಗರ್ಭಗೃಹ ಅರ್ಧಮಂಟಪವನ್ನಷ್ಟೆ ಹೊಂದಿರುವ ಈ ಗುಡಿಗೆ ದ್ರಾವಿಡ ಶಿಖರವಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಸರಳ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅರ್ಧಮಂಟಪದ ಬಾಗಿಲವಾಡವನ್ನು ಮಕರತೋರಣ ಅಲಂಕರಿಸಿದ್ದು ನಡುವೆ ಬ್ರಹ್ಮ ಮಹೇಶ್ವರ, ವಿಷ್ಣು ಮೂರ್ತಿಗಳಿದ್ದು, ಇದರ ಜಾಲಾಂಧ್ರ ಸುಂದರವಾಗಿದೆ.

ಈ ದೇಗುಲ ಸಂಕಿರಣದ ಆವರಣದಲ್ಲಿ 10 ಕ್ಕೂ ಹೆಚ್ಚು ವೀರಗಲ್ಲುಗಳಿವೆ. ಈ ವೀರಗಲ್ಲುಗಳು ಕಾಗಿನೆಲೆ, ಕುಂದಗೋಳ ಯುದ್ಧಗಳ ಬಗ್ಗೆ ಪ್ರಸ್ತಾಪಿಸುತ್ತವೆ. ಅದರಲ್ಲೂ ಮುಮ್ಮಡಿ ಸೋಮೇಶ್ವರ (ಕ್ರಿ.ಶ. 1186) ನ ಕಾಲದ ವೀರಗಲ್ಲು ಥಲದಂಕಮಲ್ಲ ಮಾದಿಸೆಟ್ಟಿ ಕಲಕೇರಿ ಪಟ್ಟಣವನ್ನಾಳುವಾಗ ನಡೆದ ಕುಂದಗೋಳ ಮುತ್ತಿಗೆ ಬಗ್ಗೆ ವಿವರವಾದ ಮಾಹಿತಿ ನೀಡುತ್ತದೆ. ಊರೊಳಗಿರುವ ಸೂರ್ಯನಾರಾಯಣ ದೇವರ ಗುಡಿಯೆ ಶಾಸನೋಕ್ತ ಜಯಸಿಂಗೇಶ್ವರ ದೇವಾಲಯವಾಗಿದೆ. ಇದು ಚತುರ್ಕೂಟ ದೇವಾಲಯವಾಗಿದ್ದು ನಾಲ್ಕು ದಿಕ್ಕಲ್ಲೂ ಗರ್ಭಗೃಹವನ್ನು ಹೊಂದಿವೆ. ಪೂರ್ವಪಶ್ಚಿಮದ ಗರ್ಭಗೃಹಗಳಿಗೆ ಅಂತರಾಳವಿದ್ದು ಉತ್ತರ ದಕ್ಷಿಣ ಗರ್ಭಗೃಹಗಳಿಗೆ ಅಂತರಾಳವಿಲ್ಲ. ಪೂರ್ವಪಶ್ಚಿಮ ಗರ್ಭಗೃಹಗಳಲ್ಲಿ ಸುಂದರವಾದ ಆದಿತ್ಯನ ಶಿಲ್ಪ ಹಾಗೂ ಶಿವಲಿಂಗಗಳಿದ್ದರೆ ದಕ್ಷಿಣದಲ್ಲಿ ಹಂಸಪೀಠದ ಮೇಲೆ ನಾಗ-ನಾಗಿಣಿ ಶಿಲ್ಪ, ಉತ್ತರ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಆದಿತ್ಯನ ಮೂರ್ತಿ ಇದೆ. ಇವುಗಳ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲವಾಡಗಳಿಗೆ ಬ್ರಹ್ಮವಿಷ್ಣು ಮಹೇಶ್ವರ ಕೆತ್ತನೆಯಿರುವ ಮಕರತೋರಣವಿದ್ದು ಬಾಗಿಲಿಗೆ ಜಾಲಂಧ್ರಗಳಿವೆ. ನವರಂಗದಲ್ಲಿರುವ ಐದು ದೇವಕೋಷ್ಠಗಳಲ್ಲಿ ಮೂರರಲ್ಲಿ ಕ್ರಮವಾಗಿ ಸಪ್ತಮಾತೃಕೆ

ಸರಸ್ವತಿ ಮತ್ತು ವಿಷ್ಣುಮೂರ್ತಿಗಳಿವೆ. ಸಪ್ತಮಾತೃಕೆಯರ ಶಿಲ್ಪವೊಂದನ್ನು ಬಿಟ್ಟು ಉಳಿದ ಶಿಲ್ಪಗಳು ಆಳೆತ್ತರವಿದೆ. ಅದರಲ್ಲೂ ಪೂರ್ವಗರ್ಭಗೃಹದಲ್ಲಿರುವ ಸೂರ್ಯನ ಬಿಂಬ ಬಹಳ ಆಕರ್ಷಕವಾಗಿದ್ದು ಪ್ರಭಾವಳಿಯಲ್ಲಿ ದ್ವಾದಶ ಸೂರ್ಯರನ್ನು ಕೆತ್ತಲಾಗಿದ್ದು ಇದು ರೂವಾರಿ ಮಲ್ಲೋಜನ ಕೃತಿಯೆಂದು ಪೀಠದ ಮೇಲಿರುವ ಶಾಸನ ತಿಳಿಸುತ್ತದೆ. ಚಾಳುಕ್ಯ ಶೈಲಿಯ ವೃತ್ತಾಕಾರದ ಅಡ್ಡಕೊಯ್ತದ ನಾಲ್ಕು ಕಂಬಗಳನ್ನುಳ್ಳ ನವರಂಗದ ಛತ್ತು ಸರಳವಾಗಿದೆ. ಈ ಗುಡಿಯ ಪ್ರವೇಶದ್ವಾರದ ಬಲಭಾಗದ ಹೊರಭಿತ್ತಿಯ ಮೇಲೆ ಸುಮಾರು 170ಸೆಂ.ಮೀ ಉದ್ದದ ಅಳತೆಗೋಲಿನ ಪ್ರಾತಿನಿಧಿಕ ಗುರುತನ್ನು ಪತ್ತೆ ಹಚ್ಚಲಾಗಿದೆ. ಇದನ್ನು ಎರಡು ಭಾಗಗಳನ್ನಾಗಿಯೂ, ಅದರಲ್ಲೊಂದನ್ನು ಮತ್ತೆ ಎರಡು ಭಾಗಗಳನ್ನಾಗಿ ವಿಭಜಿಸಿದ್ದು, ಇದು ಸುಮಾರು 5.5 ಅಡಿ ಉದ್ದವಿದೆ. ಇದರ ಬಳಿಯಲ್ಲಿ ಸೂರ್ಯ ಚಂದ್ರರ ಕೆತ್ತನೆಯಿದೆ. ಊರ ಬಸ್‌ಸ್ಟಾಂಡ್ ಬಳಿ ಲಕ್ಕಮ್ಮನ ಗುಡಿಯಿದೆ. ಈ ಗುಡಿಯಲ್ಲಿ ಸುಮಾರು 4.5 ಅಡಿ ಎತ್ತರದ ಆಸೀನ ಭೈರವ ಭೈರವಿಯರ ಶಿಲ್ಪಗಳಿವೆ. ಈ ಗುಡಿ ಮುಂದಿರುವ ಮಂಟಪದ ಕಂಬದಲ್ಲಿ ಯಾದವ ಸಿಂಘಣನ ಶಾಸನವೊಂದಿದೆ. ಕೆರೆಹೊಂಡದ ಮೇಲೆ ಸೂರ್ಯ ಗ್ರಹಣದಂದು ಆತ್ಮಾರ್ಪಣೆ ಮಾಡಿಕೊಂಡ ಸೂರ್ಯವಂಶಿಯ ಸ್ಮಾರಕಶಿಲೆ, ನಿಷಿದಿ ಶಾಸನ, ಹುಲಿಬೇಟೆ ವೀರಗಲ್ಲುಗಳಿವೆ. ಮಾಸ್ತಿಕಟ್ಟೆ ಬಯಲಲ್ಲಿ ಮಾಸ್ತಿಕಲ್ಲುಗಳು, ಚಾಳುಕ್ಯ ಕಂಬಗಳು, ಮುಕ್ಕಾದ ಗಣಪತಿ ಶಿಲ್ಪವಿದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ವೀರಭದ್ರ, ಬಸವಣ್ಣ, ಮಾಯವ್ವ, ಮೈಲಾರಲಿಂಗ ಮುಂತಾದ ಗುಡಿಗಳಿವೆ. ಊರ ಹೊರಗೆ ಹೊಲದಲ್ಲಿ ಜಿನಬಿಂಬದ ಪ್ರಭಾವಳಿಯಿದ್ದು ಇದನ್ನು ಸ್ಥಳಿಕರು 'ಕೊಡಗೂಸು' ಎಂದು ಕರೆಯುತ್ತಾರೆ. ಶಾಲೆಯ ಬಳಿ ತೂಬನ್ನು ಅಲಂಕರಿಸುವ ಗಜಲಕ್ಷ್ಮಿ ಮಕರತೋರಣವಿದೆ. ಊರಲ್ಲಿ ಒಂದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಯಿದೆ.

**ಕಲಘಟಗಿ:** ತಾಲೂಕು ಕೇಂದ್ರವಾದ ಕಲಘಟಗಿ (ಜನಸಂಖ್ಯೆ : 99,507) : ಧಾರವಾಡದಿಂದ ದಕ್ಷಿಣಕ್ಕೆ ಸುಮಾರು 36 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕಲ್ಲುಕುಟಿಗೆ' ಎಂದೇ ಉಲ್ಲೇಖಿಸಲ್ಪಟ್ಟಿದ್ದು ಈವರೆಗೆ ಇಲ್ಲಿಂದ ಐದು ತ್ರುಟಿತ ಶಾಸನಗಳು ವರದಿಯಾಗಿದ್ದು ವಿಷಯ ಅಸ್ಪಷ್ಟವಾಗಿದೆ. ಇವುಗಳಲ್ಲಿ ಆರ್ಮಡಿ ವಿಕ್ರಮಾದಿತ್ಯನ (ಕ್ರಿ.ಶ. 1080) ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ಗುವಲದೇವನು ಉಣಕಲ್ಲು-30 ಮತ್ತು ಸಬ್ಬಿ-30 ಅನ್ನು ಇದನ್ನು ಆಳುತ್ತಿದ್ದ ಪ್ರಸ್ತಾಪವಿದ್ದು, ಇದರಿಂದ ಕಲಘಟಗಿ ಹಿಂದೆ ಸಬ್ಬಿ-30 ಕ್ಕೆ ಸೇರಿದ ಗ್ರಾಮವಾಗಿತ್ತೇನೋ ಎಂಬ ಅನುಮಾನ ಮೂಡುತ್ತದೆ. ಉಳಿದ ನಾಲ್ಕು ಶಾಸನಗಳು ಬ್ರಾಹ್ಮಣರಿಗೆ, ಜೈನರಿಗೆ ನೀಡಿದ ದಾನ ಶಾಸನಗಳಾಗಿವೆ. ಇಂದು 'ಕಲ್ಲುಕುಟಿಕೆ' ಹಾಗೂ ಮರದ ತೊಟ್ಟಿಲು, ಮೂರ್ತಿಗಳ ಉತ್ಪಾದನೆಗೆ ಹೆಸರಾಗಿರುವ ಈ ಊರಲ್ಲಿದ್ದ ಪ್ರಾಚೀನ ದೇವಾಲಯಗಳೆಲ್ಲಾ ನಾಶವಾಗಿದ್ದು ಕೆಲವು ಮೂರ್ತಿ ಶಿಲ್ಪಗಳಷ್ಟೆ ಉಳಿದಿವೆ. ಊರಲ್ಲಿ ಎರಡು ಜೈನ ಬಸದಿಗಳಿದ್ದು ದೊಡ್ಡ ಬಸ್ತಿಯಲ್ಲಿ ಸುಮಾರು 11-12 ನೇ ಶತಮಾನದ ಸುಂದರ ಜಿನ ತೀರ್ಥಂಕರರ ಮೂರ್ತಿಗಳಿವೆ. ಶಾಂತಿನಾಥ ಬಸದಿ ಎಂದು ಕರೆಯಲ್ಪಡುವ ಈ ಗುಡಿ ಇತ್ತೀಚಿನ ರಚನೆಯಾಗಿದ್ದು ಒಳಗಿರುವ ಎರಡು ತೀರ್ಥಂಕರ ಮೂರ್ತಿಗಳಲ್ಲಿ ಒಂದು ಪದ್ಮಾಸೀನ ಶಾಂತಿನಾಥ ತೀರ್ಥಂಕರ ಮತ್ತೊಂದು ಕಾಯಸ್ತಭಂಗಿಯ ನಿಂತ ಪಾರ್ಶ್ವನಾಥನ ಮೂರ್ತಿಯಾಗಿದೆ. ಇವು ಕಲ್ಯಾಣದ ಚಾಳುಕ್ಯ ಶಿಲ್ಪಗಳಾಗಿವೆ. ಜೈನರ ಓಣಿಯಲ್ಲಿ ಸಣ್ಣ ಬಸದಿಯಿದ್ದು ಅಲ್ಲಿ ನಿಂತ ಭೈರವನ ಸುಂದರ ಮೂರ್ತಿಯಿದೆ. ಇವುಗಳ ಜೊತೆಯಲ್ಲಿ ಹನುಮಂತ, ಗ್ರಾಮದೇವತೆ, ವೀರಣ್ಣ, ಕಾಳಮ್ಮ, ದ್ಯಾಮವ್ವ ಮತ್ತು ಬಸವಣ್ಣನ ಇತ್ತೀಚಿನ ಗುಡಿಗಳಿವೆ. ಇಲ್ಲಿ ರುಸ್ತುಂಸಾಹೆಬ್ ದರ್ಗಾ ಬಹಳ ಪ್ರಸಿದ್ಧವಾಗಿದ್ದು ಯುಗಾದಿಯಾಗಿ ಐದು ದಿನಕ್ಕೆ ನಡೆಯುವ ಉರುಸಿನಲ್ಲಿ ಸಾವಿರಾರು ಜನ ಪಾಲ್ಗೊಳ್ಳುತ್ತಾರೆ. ದುರ್ಗವ್ವನ ಜಾತ್ರೆ ಪ್ರತಿ ಮೂರು ವರ್ಷಕ್ಕೊಮ್ಮೆ ಫೆಬ್ರವರಿ ತಿಂಗಳಲ್ಲಿ ಜರುಗುತ್ತದೆ. ಮರದ ತೊಟ್ಟಿಲುಗಳ ನಿರ್ಮಾಣಕ್ಕೆ ಪ್ರಖ್ಯಾತವಾಗಿರುವ ಈ ಊರಲ್ಲಿ ಇದನ್ನೇ ವೃತ್ತಿಯನ್ನಾಗಿಸಿಕೊಂಡಿರುವ ನಾಲ್ಕಾರು ಮನೆತನಗಳಿವೆ. ಸುಮಾರು 800 ರಿಂದ 1200 ರೂ ಬೆಲೆ ಬಾಳುವ ಈ ತೊಟ್ಟಿಲುಗಳು ಕಲಾತ್ಮಕತೆಗೆ ಹೆಸರಾಗಿದ್ದು ಹೆಚ್ಚು ಜನಪ್ರಿಯವಾಗಿದೆ. ಕಲಘಟಗಿಯಿಂದ ನೈಋತ್ಯಕ್ಕೆ ಯಲ್ಲಾಪುರ ರಸ್ತೆಯಲ್ಲಿ ಬಲಕ್ಕೆ 10 ಕಿಮೀ ದೂರದಲ್ಲಿರುವ 'ಸಾತುಸಹೀದ್' ಎಂಬ ಸ್ಥಳ ಏಳು ಮಂದಿ ಶಹೀದ್ (ಹುತಾತ್ಮ)ರ ಸಮಾಧಿಗಳಿಂದಾಗಿ ಪ್ರಸಿದ್ಧವಾಗಿದೆ. ಸುಮಾರು 340 ವರ್ಷಗಳ ಹಿಂದೆ ಬಿಜಾಪುರದ ಸೂಫೀಸಂತ ಹಾಶಿಮ್‌ಪೀರ್‌ನ ಅನುಯಾಯಿಗಳೂ, ಹವಳದ ಹಿಂಡಸಗೇರಿಯ ನಿವಾಸಿಗಳೂ ಆದ ಏಳು ಮಂದಿ (ಸಹೋದರರು?) ಮಹಮದ್ ಆದಿಲ್ ಷಾನಿಂದ ಸನ್ನದು ಪಡೆದು ಇಲ್ಲಿಗೆ ಬಂದು ಕಾಡು ಕಡಿದು ನೆಲೆ ನಿಲ್ಲುವ ಯತ್ನದಲ್ಲಿ ಪ್ರಾಣತ್ಯಾಗ ಮಾಡಿ ಹುತಾತ್ಮರಾದರಂತೆ. ಬಹುಶಃ ಇದು ಸೇನಾಪಾಳಯವಾಗಿದ್ದು ಆಗ ಸತ್ತವರಲ್ಲಿ ಇವರು ಅಗ್ರಗಣ್ಯರಿದ್ದಿರಬೇಕು. ಅವರ ಸಮಾಧಿಗಳೇ ಈ ಸಾತ್‌ಸಹೀದ್ ಎಂದು ಬರೆದಿದೆ. ಈ ಏಳೂ ಮಂದಿಯ ಸಮಾಧಿಗಳು ಒಂದೇ ಆವರಣದಲ್ಲಿದ್ದು ಇಲ್ಲಿಗೆ ಗುರುವಾರ, ಭಾನುವಾರಗಳಂದು ಅಧಿಕ ಸಂಖ್ಯೆಯಲ್ಲಿ ಜನ ಬಂದು ಹೋಗುತ್ತಾರೆ.

**ಕಲ್ಲೇದೇವರು:** ಬ್ಯಾಡಗಿ ತಾಲೂಕಿಗೆ ಸೇರಿದ ಕಲ್ಲೇದೇವರು (ಜನಸಂಖ್ಯೆ : 3,193) ಬ್ಯಾಡಗಿಯಿಂದ ಈಶಾನ್ಯಕ್ಕೆ ಸುಮಾರು 20 ಕಿಮೀ ದೂರದಲ್ಲಿದೆ. ಈ ಊರು ಅಲ್ಲಿನ ಕಲ್ಲೇಶ್ವರ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ಕ್ರಿ.ಶ. 12-14 ನೇ ಶತಮಾನಕ್ಕೆ ಸೇರಿದ ಮೂರು ಶಾಸನಗಳು ಗುಡಿಯ ಆವರಣದಲ್ಲಿವೆ. ಇವು ಬಹಳ ತ್ರುಟಿತವಾಗಿರುವುದರಿಂದ ವಿವರ ತಿಳಿಯಲು ಕಷ್ಟ ಸಾಧ್ಯವಾಗಿದೆ. ಈ ಗುಡಿಯಲ್ಲಿ ಸುಮಾರು 3.5 ಅಡಿ ಎತ್ತರದ ವಿಷ್ಣು ಹಾಗೂ ಭೈರವನ ಶಿಲ್ಪಗಳು ಆಕರ್ಷಕವಾಗಿದ್ದು ಸುಮಾರು ಕ್ರಿ.ಶ. 13 ನೇಯ ಶತಮಾನಕ್ಕೆ ಸೇರಿದ್ದಾಗಿವೆ. ಇಲ್ಲಿನ ವೀರಭದ್ರನ ಮೂರ್ತಿ ಇತ್ತೀಚಿನದಾದರೂ ಆಕರ್ಷಕವಾಗಿದೆ. ಗುಡಿಯ ಬದಿಯಲ್ಲಿರುವ ಆತ್ಮ ಬಲಿದಾನಕಲ್ಲು ಅಪೂರ್ವದಾಗಿದ್ದು, ಇದರಲ್ಲಿ ದೇಹದಿಂದ ತಮ್ಮ ಶಿರವನ್ನು ಕತ್ತರಿಸಿ ತಟ್ಟೆಯಲ್ಲಿಟ್ಟು ಕೊಂಡು ಪೀಠದ ಬದಿಯಲ್ಲಿ ನಿಂತಿರುವ ರುಂಡ ರಹಿತ ಸ್ತ್ರೀಯರು, ಬಲಗೈಲಿ ಚಾಕು, ಎಡಗೈಲಿ ಲಿಂಗ ಹಿಡಿದು ನಿಂತಿರುವ ಯೋಧರ ಕೆತ್ತನೆ ಗಮನಿಸಬೇಕಾದ ವಿಶಿಷ್ಟ ಅಂಶವಾಗಿದೆ. ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯವಾಗಿರುವ ಇದು ಇಂದು ಪೂರ್ಣ ಜೀರ್ಣೋದ್ಧಾರ ಹೊಂದಿದ್ದರೂ ಮೂಲ ಕಟ್ಟಡದ ಸಾಮಗ್ರಿಗಳನ್ನು ಬಳಸಿಕೊಂಡಿದ್ದಾರೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಸಭಾಮಂಟಪವನ್ನು ಹೊಂದಿರುವ ಈ ಗುಡಿ ದೇವಾಲಯದ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿ ಗರ್ಭಗುಡಿಗಳಿದ್ದು ಶಿವಲಿಂಗ ಮತ್ತು ವೀರಭದ್ರನ ಮೂರ್ತಿಗಳಿವೆ. ದ್ವಾರಬಂಧದಲ್ಲಿ ತ್ರಿಶಾಖಾಲಂಕಾರವಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ. ನವರಂಗದ ಇಕ್ಕೆಲದಲ್ಲಿ ದ್ವಾರಪಾಲಕರಿದ್ದಾರೆ. ಇದಲ್ಲದೇ ಊರಲ್ಲಿ ಉಡಚವ್ವ, ರಾಮಲಿಂಗ, ದ್ಯಾಮವ್ವ, ದುರ್ಗಾ, ಬಸವಣ್ಣ, ಹನುಮಂತರ ಗುಡಿಗಳಿವೆ. ಉಡಚವ್ವನ ಗುಡಿಯಲ್ಲಿ ಕೋಣವನ್ನು ಕೊಲ್ಲುತ್ತಿರುವ ಚಾಮುಂಡಿಯ ಶಿಲ್ಪವಿದೆ. ಇವುಗಳಲ್ಲಿ ಒಂದು ಶಾಸನ ಗುತ್ತ ಅರಸ ವಿಕ್ರಮಾದಿತ್ಯನ ಕಾಲದ್ದಾಗಿದ್ದು ರಾಮಲಿಂಗಪ್ಪನ ಗುಡಿಯ ಬಳಿ ಇರುವ ಶಿಲ್ಪ ಕುದುರೆ ಸವಾರನದ್ದಾಗಿದ್ದು, ಕುಮಾರ ರಾಮನ ಶಿಲ್ಪವಾಗಿರಬೇಕೆಂದು ತೋರುತ್ತದೆ. ಊರಲ್ಲೊಂದು ಮಸೀದಿ ಇದೆ. ಈ ಊರಲ್ಲಿ ಉತ್ತಮವಾದ ಬಾಗಿಲವಾಡ ಹಾಗೂ ಮೂರ್ತಿ ಶಿಲ್ಪಗಳನ್ನು ಮಾಡುವ ಎರಡು ಪತ್ತಾರ್ ಮನೆತನಗಳಿವೆ.

**ಕಳ್ಳಿಹಾಳ :** ಹಾವೇರಿ ತಾಲೂಕಿನ ಕಳ್ಳಿಹಾಳ ಗ್ರಾಮವು (ಜನಸಂಖ್ಯೆ : 2,646) ಹಾವೇರಿಯಿಂದ ಆಗ್ನೇಯಕ್ಕೆ ಐದು ಕಿ.ಮೀ. ದೂರದಲ್ಲಿವೆ. ಈ ಊರಲ್ಲಿ ಮೂರು ಶಾಸನಗಳು, ಆರು ವೀರಗಲ್ಲು ಶಾಸನಗಳು ಇವೆ. ಕ್ರಿ.ಶ. 11-12 ನೇ ಶತಮಾನಕ್ಕೆ ಸೇರಿದ ಈ ಶಾಸನಗಳಲ್ಲಿ ಊರ ಹೆಸರು 'ಅಜ್ಜಡಿ' ಎಂದೇ ಉಲ್ಲೇಖಿತಗೊಂಡಿರುವುದರಿಂದ ಇದೇ ಈ ಊರಿನ ಪ್ರಾಚೀನ ಹೆಸರಾಗಿತ್ತೆಂದು ಹೇಳಬಹುದಾಗಿದೆ. ಈ ಶಾಸನಗಳು ಕಲ್ಯಾಣದ ಚಾಲುಕ್ಯ, ಯಾದವ ಅರಸು ಮನೆತನಕ್ಕೆ ಸೇರಿದ ಶಾಸನಗಳಾಗಿವೆ. ಕ್ರಿ.ಶ. 1019 ರ ಇಮ್ಮಡಿ ಜಯಸಿಂಹನ ಶಾಸನ ಕುಂದ ರಾಜನು ಬನವಾಸಿ-12000 ವನ್ನಾಳುತ್ತಿದ್ದಾಗ ಅವನ ರಾಣಿ ಜೋಗಬ್ಬೆ ಅಜ್ಜಡಿಯನಾಳುತ್ತಿರಲು ಅಜ್ಜಡಿಯ ಗಾವುಂಡನಾಗಿದ್ದ ಸಹದೇವಯ್ಯ ಮತ್ತು ಆತನ ಸೋದರ ರಾಚಮಲ್ಲನ ಬೇಡಿಕೆಯಂತೆ ಸಹದೇವೇಶ್ವರ ದೇವಾಲಯಕ್ಕೆ ಕುಂದರಾಜನ ರಾಣಿ ಜೋಗಬ್ಬರಸಿ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಈ ಗುಡಿಗೆ ನಾಲ್ವರು ನರ್ತಕಿ (ಸೂಳೆ)ಯರನ್ನು ಒದಗಿಸಿದ ಅಂಶದೊಂದಿಗೆ ಈ ದೇಗುಲ ಮಾಡಿದ ಶಿಲ್ಪಿ ಆಯ್ಯೋಜನಿಗೆ ಎರಡು ಮತ್ತರು ಭೂಮಿಯನ್ನೂ ದಾನಕೊಟ್ಟ ಅಂಶವನ್ನು ತಿಳಿಸುತ್ತದೆ. ಈ ಗುಡಿಯನ್ನು ಈಗ ಪಾರ್ವತಿ ಪರಮೇಶ್ವರ ಗುಡಿಯೆಂದು ಕರೆಯುತ್ತಾರೆ. ಉಳಿದ ಎರಡೂ ಶಾಸನಗಳು ಇದೇ ದೇವಾಲಯಕ್ಕೆ ನೀಡಿದ ದಾನಶಾಸನಗಳಾಗಿವೆ. ಕ್ರಿ.ಶ. 1236 ಕ್ಕೆ ಸೇರಿದ ಯಾದವ ಸಿಂಘಣನ ಕಾಲಕ್ಕೆ ಸೇರಿದ ಐದು ವೀರಗಲ್ಲು ಶಾಸನಗಳಿದ್ದು, ಪಾಂಡ್ಯ ದೇವನು ಅಜ್ಜಡಿಯ ಮೇಲೆ ದಾಳಿ ಮಾಡಿದಾಗ ಊರಳಿವಿನಲ್ಲಿ ಹೋರಾಡಿ ಮಡಿದ ಹರಿಪ, ಅಡಿಗ ಲಕ್ಕೋಜ, ಮಸಣ, ಸೋವಬೋವ ಹಾಗೂ ಕರಗೆಯ ಸೋವಬೋವರ ವೀರರ ಸ್ಮಾರಕಗಳಾಗಿವೆ. ಮತ್ತೊಂದು (ಕ್ರಿ.ಶ. 1270) ಹುಲಿಯನ್ನಿರಿದು ಸತ್ತ ಕುರುಬ ಹೊಲ್ಲನ ಸ್ಮಾರಕವಾಗಿದೆ.

ಇಲ್ಲಿನ ಪಾರ್ವತಿ ಪರಮೇಶ್ವರ ಗುಡಿ ಸಾಕಷ್ಟು ಮಾರ್ಪಾಟಾಗಿರುವುದರಿಂದ ಮೂಲದಲ್ಲಿ ಹೇಗಿತ್ತೆಂದು ಗುರುತಿಸಲಾಗದಿದ್ದರೂ, ತ್ರಿಕೂಟವಾಗಿತ್ತೇನೋ ಎಂಬ ಅನುಮಾನ ಮೂಡುತ್ತದೆ. ಇದರಲ್ಲಿ ನಾಲ್ಕು ಗರ್ಭಗೃಹ, ಅದಕ್ಕೆ ಸೇರಿದಂತೆ ಒಂದೇ ಸಭಾಮಂಟಪವಿದ್ದು ಇವುಗಳಲ್ಲಿ ಕ್ರಮವಾಗಿ ಶಿವಲಿಂಗ, ನಂದಿ, ಪಾರ್ವತಿ ಪರಮೇಶ್ವರ, ಮಹಿಷಾಸುರ ಮರ್ದಿನಿ ಹಾಗೂ ಸೂರ್ಯಪೀಠಗಳಿದೆ. ಇವುಗಳ ಬಾಗಿಲವಾಡ ತ್ರಿಶಾಖ, ಚತುರ್‌ಶಾಖ, ಪಂಚಶಾಖಾಲಂಕೃತವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ, ಸಭಾಮಂಟಪದಲ್ಲಿ ಎರಡು ಮೂರು ಬಗೆಯ ಸರಳ ಸುಂದರ ಕಂಬಗಳಿವೆ. ಈ ದೇವಾಲಯದ ವಿಶೇಷ ಆಕರ್ಷಣೆಯೆಂದರೆ ಇಲ್ಲಿನ ಶಿಲ್ಪಗಳು. ಸುಮಾರು 4.5 ಅಡಿ ಎತ್ತರವಿರುವ ತ್ರಿಭಂಗಿಯಲ್ಲಿ ನಿಂತಿರುವ ಪಾರ್ವತಿ ಪರಮೇಶ್ವರರದು ಪಾರ್ವತಿಯ ಭುಜದ ಮೇಲೆ ಕೈಹಾಕಿ ಅಭಯ ಮುದ್ರೆಯಲ್ಲಿ ನಿಂತ ಶಿವ, ಬಲಗೈಯಲ್ಲಿ ಶಿವನನ್ನು ಆಲಂಗಿಸಿ ನಿಂತ ಪಾರ್ವತಿ, ಇವರ ಕಾಲ ಬಳಿ ನಿಂತ ಗಣಪತಿ,

ಷಣ್ಮುಖ, ಎಲ್ಲಾ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ. ಅಷ್ಟೇ ಸುಂದರವಾದ ಇಲ್ಲಿನ ಮತ್ತೊಂದು ಶಿಲ್ಪವೆಂದರೆ ಮಹಿಷಮರ್ದಿನಿಯದು. ಇದೂ ಕೂಡ ನಾಲ್ಕು ಅಡಿ ಎತ್ತರವಿದೆ. ಇಲ್ಲಿನ ವೀರಗಲ್ಲುಗಳಲ್ಲಿ ಹುಲಿಬೇಟೆ ವೀರಗಲ್ಲು ಕೂಡ ಆಕರ್ಷಕವಾಗಿದೆ. ಇದಷ್ಟೆ ಅಲ್ಲದೆ ಇತ್ತೀಚಿನದಾದ ಬಸವಣ್ಣ, ಹನುಮಂತ, ದ್ಯಾಮವ್ವ, ಈಶ್ವರ ಗುಡಿಗಳಿವೆ. ಇವುಗಳಲ್ಲಿ ಬಸವಣ್ಣನ ಗುಡಿಯಲ್ಲಿರುವ ಸುಮಾರು ಮೂರುವರೆ ಅಡಿ ಎತ್ತರದ ಸರಸ್ವತಿ, ಹಂಸ ಪೀಠದ ಮೇಲೆ ಧ್ಯಾನಮುದ್ರೆಯಲ್ಲಿ ಕುಳಿತಿರುವ ಶಿಲ್ಪ ಉತ್ಕೃಷ್ಟ ಕಲಾಕೃತಿಯಾಗಿದೆ. ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆಯಾದರೂ ಕಲ್ಯಾಣದ ಚಾಲುಕ್ಯರ ಶೈಲಿಯ ಕಂಬಗಳನ್ನಿಲ್ಲಿ ನೋಡಬಹುದಾಗಿದೆ.

**ಕಾಗಿನೆಲೆ:** ಬ್ಯಾಡಗಿ ತಾಲೂಕಿನ ಕಾಗಿನೆಲೆಯು (ಜನಸಂಖ್ಯೆ: 4,095) ಹಾವೇರಿಯಿಂದ 14 ಕಿ.ಮೀ. ದೂರವಿರುವ ಕನಕದಾಸರ ಮುಕ್ತಿಕ್ಷೇತ್ರ. ಅವರ ಇಷ್ಟ ದೈವ ಆದಿಕೇಶವನ ಗ್ರಾಮ. ಈ ಊರ ಹೊರಗೆ ಸಂಗಮೇಶ್ವರ, ಮಲ್ಲೇಶ್ವರ, ಸೋಮೇಶ್ವರ, ಕಾಳಹಸ್ತೀಶ್ವರ, ವೀರಭದ್ರ, ಊರಿನಲ್ಲಿ ಲಕ್ಷ್ಮೀನರಸಿಂಹ, ಆದಿಕೇಶವ, ಕಲ್ಮೇಶ್ವರ ದೇವಾಲಯಗಳಿವೆ. ಕನಕದಾಸರ ಬೃಂದಾವನ ಮತ್ತು ಇತ್ತೀಚೆಗೆ ಸ್ಥಾಪಿಸಲಾದ ಕನಕಗುರುಪೀಠ ಇಲ್ಲಿದೆ. ಊರ ಹೊರಗೆ ಇರುವ ಸಂಗಮೇಶ್ವರ ದೇವಾಲಯವು ಹಿಂದೂ ಮುಸಲ್ಮಾನರಿಬ್ಬರಿಗೂ ಪವಿತ್ರವಾಗಿದೆ. ಮುಸ್ಲಿಂ ವಾಸ್ತು ಶೈಲಿಯಲ್ಲಿ ರಚಿತವಾಗಿರುವ ಈ ದೇವಾಲಯದಲ್ಲಿ ಗದ್ದುಗೆಯಿದ್ದು ಹಿಂದೂಗಳು ಸಂಗಮೇಶ್ವರನ ಗದ್ದುಗೆಯೆಂದೂ ಮುಸಲ್ಮಾನರು ಆದಂಷಿಫಿ ದರ್ಗಾ ಎಂದೂ ಕರೆಯುತ್ತಾರೆ. ಬಸವನ ಬಾಗೇವಾಡಿ, ಸುರಪುರ, ಕೊಡೇಕಲ್ ಕಡೆಯ ಜನ ಶಿವರಾತ್ರಿ ದಿನ ಇಲ್ಲಿಗೆ ಬಂದು ಜಾತ್ರೆ ನಡೆಸುತ್ತಾರೆ. ಇವರ ಪೂಜೆ ಆದ ಮೇಲೆ ಮಧ್ಯಾಹ್ನ ಮುಸಲ್ಮಾನರು ಸಕ್ಕರೆ ಹಂಚುತ್ತಾರೆ. ಕೆರೆಯ ಸಮೀಪ ಇರುವ ಮಲ್ಲೇಶ್ವರ ದೇವಾಲಯವು ಕಲ್ಯಾಣದ ಚಾಲುಕ್ಯರ ಕಾಲದ್ದು. ಗರ್ಭಗೃಹ, ಅರ್ಧಮಂಟಪ ಮಾತ್ರ ಉಳಿದಿದೆ. ಉಳಿದ ಭಾಗ ನಾಶವಾಗಿದೆ. ಸೋಮನಾಥೇಶ್ವರ ದೇವಾಲಯದಲ್ಲಿ ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿದೆ. ಕಲ್ಯಾಣದ ಚಾಲುಕ್ಯರ ಕಾಲದ ಈ ದೇವಾಲಯ ಈಗ ಶಿಥಿಲವಾಗಿದೆ. ಕಾಳಹಸ್ತೀಶ್ವರ ಮತ್ತು ವೀರಭದ್ರ ದೇವಾಲಯಗಳು ಎದುರುಬದುರಾಗಿವೆ. ಕಾಳ ಹಸ್ತೀಶ್ವರವು ರಾಷ್ಟ್ರಕೂಟರ ಕಾಲದ ದೇವಾಲಯ. ಹೊರಬಾಗಿಲವಾಡದಲ್ಲಿ ಪಂಚಶಾಖೆಗಳಿದ್ದು ಮೇಲೆ ಕಪೋತವನ್ನು ಹೊಂದಿದೆ; ಗರ್ಭಗೃಹ, ತೆರೆದ ಅಂತರಾಳ, •ನವರಂಗವನ್ನು ಒಳಗೊಂಡಿದ್ದು ಕಂಬಗಳಲ್ಲಿ ಚಿಕಣಿ ಶಿಲ್ಪಗಳನ್ನು ಬಿಡಿಸಿದೆ. ಈ ದೇವಾಲಯ ದ್ವಿತಳವನ್ನು ಹೊಂದಿದ್ದು ಇತ್ತೀಚೆಗೆ ಜೀರ್ಣೋದ್ಧಾರವಾಗಿದೆ. ಈ ದೇವಾಲಯದ ಎಡಕ್ಕೆ ಕಲ್ಯಾಣದ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಿವೆ. ಇಟ್ಟಿಗೆಯ ನಿರ್ಮಾಣದ ಕುರುಹುಗಳು ಕಾಣಬರುತ್ತವೆ. ವೀರಭದ್ರೇಶ್ವರವು ರಾಷ್ಟ್ರಕೂಟರ ದೇವಾಲಯವಾಗಿದ್ದು ಬಹಳಷ್ಟು ಬದಲಾವಣೆಗೆ ಒಳಗಾಗಿವೆ. ಗರ್ಭಗೃಹ, ವಿಶಾಲವಾದ ನವರಂಗ ಹಾಗೂ ಕೈಸಾಲೆಯನ್ನು ಹೊಂದಿದೆ. ಬಾಗಿಲ ಲಲಾಟದ ಗಜಲಕ್ಷ್ಮಿ ಬಹು ಸುಂದರವಾಗಿದೆ. ಕೈಸಾಲೆಯಲ್ಲಿ ಆತ್ಮಬಲಿಕಲ್ಲು, ಗಣಪತಿ, ಸಪ್ತಮಾತೃಕಾ ಪಟ್ಟಿಕೆ ಮುಂತಾದ ಬಿಡಿ ಶಿಲ್ಪಗಳಿವೆ. ಈ ದೇವಾಲಯದ ಪ್ರದೇಶದಲ್ಲಿ ಎತ್ತರವಾದ ಶಾಸನಗಳು ಇವೆ. ಮೇಟಿ (ಗೊಸಾಸ) ಕಲ್ಲು ಸಹ ಕಾಣಬರುತ್ತದೆ. ಊರ ಮಧ್ಯೆ ಇರುವ ಲಕ್ಷ್ಮೀನರಸಿಂಹ ದೇವಾಲಯ ಸಂಕೀರ್ಣದಲ್ಲಿ ರಾಷ್ಟ್ರಕೂಟ ಹಾಗೂ ಕಲ್ಯಾಣದ ಚಾಲುಕ್ಯರ ದೇವಾಲಯಗಳ ಅವಶೇಷಗಳು ಕಾಣಬರುತ್ತವೆ. ನರಸಿಂಹ ಶಿಲ್ಪವು ಸುಮಾರು ಒಂದೂವರೆ ಅಡಿ ಎತ್ತರವಿದ್ದು ಹಿರಣ್ಯಕಶಿಪುವನ್ನು ಸೀಳುತ್ತಿರುವಂತೆ ಮೂಡಿಸಿದೆ. ಸುಮಾರು ಕ್ರಿ.ಶ. 15-16 ನೇ ಶತಮಾನದಲ್ಲಿ ಇದು ಜೀರ್ಣೋದ್ಧಾರವಾಗಿದೆ. ಈ ದೇವಾಲಯದ ಎಡಪಕ್ಕಕ್ಕೆ ಆದಿಕೇಶವನ ದೇವಾಲಯವಿದ್ದು ಇದನ್ನು ಕನಕದಾಸರು ಬಾಡದಿಂದ ತಂದರೆಂದು ಪ್ರತೀತಿ. ಇದು ಸುಮಾರು ಒಂದೂವರೆ ಅಡಿ ಎತ್ತರವಿದ್ದು, ಶಂಖ ಚಕ್ರ ಗದಾ ಪದ್ಮಧಾರಿಯಾಗಿದೆ. ಈ ದೇವಾಲಯವು ರಾಷ್ಟ್ರಕೂಟರ ದೇವಾಲಯದ ಅವಶೇಷಗಳಿಂದ ನಿರ್ಮಿತವಾಗಿದೆ. 1962 ರಲ್ಲಿ ಒಂದು ಕನಕಬಿಂಬವನ್ನು ಇಲ್ಲಿ ಇರಿಸಿರುತ್ತಾರೆ. ಈ ದೇವಾಲಯದ ಮುಂದೆ ಇರುವ ಮಠದ ಕಟ್ಟಡದ ನಾಲ್ಕು ಮೂಲೆಕಂಬಗಳನ್ನು ಬಹಳ ಅಲಂಕಾರದಿಂದ ಕೆತ್ತಿದ್ದು ಯೋಗನಾರಾಯಣ, ನಟರಾಜ, ನರಸಿಂಹ, ಯಕ್ಷ, ಜಿನಬಿಂಬ ಮುಂತಾದುವುಗಳನ್ನು ಕಾಣಬಹುದು. ಇವನ್ನು ಕೆತ್ತಿದ ರೂವಾರಿಗಳ ಹೆಸರುಗಳಿವೆ. ಕಲ್ಯಾಣದ ಚಾಲುಕ್ಯರ ಕಂಬಗಳನ್ನು ಬಳಸಿ ಕಟ್ಟಿದ ಉತ್ಸವ ಮಂಟಪವಿದೆ. ಊರ ಹಿಂಬದಿಯಲ್ಲಿರುವ ಕಲ್ಮೇಶ್ವರ ದೇವಾಲಯವು ಎತ್ತರವಾದ ದಿಣ್ಣೆಯಲ್ಲಿದ್ದು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದ್ದೂ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಲಿಂಗದ ಪಾಣೀಪೀಠ ವೃತ್ತಾಕಾರವಾಗಿದ್ದು ಭಿನ್ನವಾದ ಸಪ್ತಮಾತೃಕಾ ಪಟ್ಟಿಕೆ ಇದೆ. ನವರಂಗದ ಕಂಬಗಳು ವೃತ್ತಾಕಾರವಾಗಿವೆ.

ಊರಿನಲ್ಲಿ ಜೈನ ಬಸದಿಯಿದ್ದ ಕುರುಹಾಗಿ ಎರಡು ಜಿನಮೂರ್ತಿಗಳ ಜೈನ ಪೀಠಗಳು ಕಾಣಬರುತ್ತವೆ. ಒಂದು ಸಂಗಮೇಶ್ವರ ದೇವಾಲಯದ ಬಳಿಯ ಪೀಠದಲ್ಲಿ ಮೂಲಸಂಘಕ್ಕೆ ಸೇರಿದ ಬಸದಿಯನ್ನು ಉಲ್ಲೇಖಿಸಿದೆ. ಊರ ಕೆರೆಯ ಬಳಿ ಇದ್ದ ಕನಕದಾಸರ ಬೃಂದಾವನವನ್ನು ಪುನರ್‌ರೂಪಿಸಿ ಕನಕದಾಸರ ವಿಗ್ರಹವನ್ನು 1982 ರಲ್ಲಿ ಇಟ್ಟಿರುತ್ತಾರೆ. ಬೆಂಗಳೂರಿನ ಓಂ ಕಾರ್ ಬೆಟ್ಟದಲ್ಲಿರುವ

ಶಿವಪುರಿ ಸ್ವಾಮಿಗಳು ಈ ಕನಕಗುರು ಪೀಠ(ಮಠ)ವನ್ನು 1992 ಪುನರ್ಘಟನ ಮಾಡಿದರು. ಇದು ವಿವಿಧ ಚಟುವಟಿಕೆಗಳನ್ನು ಹಮ್ಮಿಕ್ಕೊಂಡಿವೆ.

**ಕಾಮಧೇನು:** ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮವು (ಜನಸಂಖ್ಯೆ : 1,431) ಕಲಘಟಗಿಯಿಂದ ಈಶಾನ್ಯಕ್ಕೆ 10 ಕಿಮೀ ದೂರದಲ್ಲಿದೆ. ಈ ಊರಿಗೆ ಹೋಗಲು ಮಿಶ್ರಿಕೋಟೆಯಿಂದ ಒಳ್ಳೆಯ ರಸ್ತೆ ಇದೆ. ಪ್ರಾಚೀನ ಶಾಸನಗಳಲ್ಲಿ 'ಸಾಸಲು' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಗೆ ಕಾಮಧೇನು ಎಂಬ ಹೆಸರು ಹೇಗೆ ಬಂತೆಂದು ವಿವರಿಸುವಲ್ಲಿ ದಾಖಲೆಗಳು ಲಭ್ಯವಿಲ್ಲ. ಸ್ಥಳೀಕರು ಇದಕ್ಕೆ ಪೌರಾಣಿಕ ಹಿನ್ನಲೆಯನ್ನು ನೀಡುತ್ತಾರಾದರೂ ಸಮರ್ಥಕವೆನಿಸುವುದಿಲ್ಲ. ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಈ ಎಲ್ಲಾ ಶಾಸನಗಳೂ ಊರ ದಕ್ಷಿಣಕ್ಕಿರುವ ಕಲ್ಲೇಶ್ವರ ದೇವಾಲಯದ ಆವರಣದಲ್ಲೇ ಇವೆ. ಇವುಗಳಲ್ಲಿ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಗೋವೆ ಕದಂಬ ಅರಸನ ಕ್ರಿ.ಶ. 1129 ರ ಶಾಸನ ಹಲಸಿಗೆ ನಾಡಿನ ಸಾಸಲು ಗ್ರಾಮದ ಸೌಂದರ್ಯ ಸಮೃದ್ಧಿಯನ್ನು ವರ್ಣಿಸುತ್ತ, ಸಾಸಲ ತೆಂಕಣದಲ್ಲಿ ಬಂದು ನೆಲೆಸಿದ ಕಪಾಳಿ ಕಲಿದೇವೇಶನ ಸ್ವಯಂಭು ಶ್ರೀ ಕಲಿದೇವಸ್ವಾಮಿ ಗುಡಿ ಹಾಗೂ ಸತ್ರಕ್ಕೆಂದು ಹುಲಿವರದ ಮಲ್ಲಸೆಟ್ಟಿಯು ಭೂಮಿಯನ್ನೂ ಹಣವನ್ನೂ ದಾನ ಮಾಡಿದ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1171 ರ ಮತ್ತೊಂದು ಶಾಸನ, ಕುಮಾರ ಮಲ್ಲಯ್ಯನು ಕಲಿದೇವರಿಗೆ ದಾನ ಕೊಟ್ಟುದನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 13 ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಮಾಂಡಲಿಕ ಮಾದಿಗನನ್ನು ಉಲ್ಲೇಖಿಸುತ್ತದೆ. ಇಲ್ಲಿನ ಶಾಸನೋಕ್ತ ಸ್ವಯಂಭೂ ಕಲಿದೇವಸ್ವಾಮಿ ಗುಡಿ, ಇಂದಿನ ಕಲ್ಲೇಶ್ವರ ಗುಡಿಯಾಗಿದ್ದು, ಸುಮಾರು ಕ್ರಿ.ಶ. 11 ನೇಯ ಶತಮಾನದ ಆರಂಭದಲ್ಲಿ ನಿರ್ಮಾಣಗೊಂಡಿರುವ ಚಾಲುಕ್ಯಶೈಲಿಯ ಸುಂದರ ದೇವಾಲಯವಾಗಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ತೆರೆದ ಸಭಾಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹ ನಕ್ಷತ್ರಾಕಾರದ ತಳವಿನ್ಯಾಸದಲ್ಲಿದೆ. ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಶಾಸನ ಇದನ್ನು ಸ್ವಯಂಭೂಕಲಿದೇವನೆಂದು ಕರೆದಿದೆ. ಇದರ ಬಾಗಿಲವಾಡ ತ್ರಿಶಾಖಾಲಂಕೃತವಾಗಿದ್ದು ಜಾಲಂದ್ರವನ್ನು ಹೊಂದಿದೆ. ಅಂತರಾಳದ ಬಾಗಿಲವಾಡವು ಆಕರ್ಷಕ ಮಕರ ತೋರಣವನ್ನು ಹೊಂದಿದ್ದು ಮೇಲೆ ಬ್ರಹ್ಮ ಮಹೇಶ್ವರ ವಿಷ್ಣು ಮೂರ್ತಿಗಳಿದ್ದು ಇಕ್ಕೆಲದಲ್ಲಿ ಉಮಾಮಹೇಶ್ವರ ಕೆತ್ತನೆಯಿದೆ. ದ್ವಾರಬಂಧಕ್ಕೆ ಕಮಲಾಲಂಕೃತ ಜಾಲಾಂದ್ರವನ್ನು ಒದಗಿಸಲಾಗಿದೆ. ವಿಶಾಲವಾದ ಸಭಾ ಮಂಟಪದ ಒಂದಂಕಣವನ್ನು ಜಾಲಂದ್ರ, ದ್ವಾರಬಂಧಗಳನ್ನು ಒದಗಿಸುವುದರ ಮೂಲಕ ಬೇರ್ಪಡಿಸಿ ಅಲ್ಲಿರುವ ನಾಲ್ಕು ದೇವಕೋಷ್ಠಗಳಿಗೂ ಪ್ರತ್ಯೇಕತೆಯನ್ನು ಕಲ್ಪಿಸಿರುವಂತೆ ತೋರುತ್ತದೆ. ಈ ದೇವಕೋಷ್ಠಗಳಲ್ಲಿ ನಾಲ್ಕು ಅಡಿ ಅಗಲದ ಸಪ್ತಮಾತೃಕಾ ಪಟ್ಟಿಕೆ, ಗಣಪತಿ, ಮಹಿಷಮರ್ದಿನಿ ಹಾಗೂ ಕೇಶವರ ಸುಂದರ ಬಿಡಿ ಶಿಲ್ಪಗಳಿವೆ. ತೆರೆದ ಸಭಾಮಂಟಪವನ್ನು ಪ್ರವೇಶಿಸಲು ಮೂರು ದಿಕ್ಕಿಂದಲೂ ಮಾರ್ಗವಿದ್ದು, ಸಭಾಮಂಟಪದ ಅಂಚಿನುದ್ದಕ್ಕೂ ಕಕ್ಷಾಸನವಿದೆ. ದೇವಾಲಯದ ಹೊರಭಿತ್ತಿಯಲ್ಲಿ ಆಲಂಕಾರಿಕ ಕಂಬ, ಶಿಖರಗಳ ಮಾದರಿಗಳನ್ನು ಕೆತ್ತಲಾಗಿದ್ದು ಗರ್ಭಗೃಹದ ಹೊರಭಿತ್ತಿಯಲ್ಲಿರುವ ದೇವಕೋಷ್ಠಗಳಿಗೆ ದ್ರಾವಿಡ ಶಿಖರಗಳನ್ನು ಒದಗಿಸಲಾಗಿದೆ. ಕಕ್ಷಾಸನದ ಹೊರಭಿತ್ತಿಯನ್ನು ವಿವಿಧ ಶೈಲಿಯ ಕಿರು ಶಿಖರಗಳಿಂದ ಅಲಂಕರಿಸಲಾಗಿದೆ. ಈ ಗುಡಿಯ ಗರ್ಭಗೃಹದ ಶಿಖರ ಜೀರ್ಣೋದ್ಧಾರಗೊಂಡಿದ್ದು ಸೋಪಾನದ ಮಾದರಿಯಲ್ಲಿದೆ. ಗುಡಿ ಆವರಣದಲ್ಲಿ ಕಾರ್ತಿಕೇಯ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. ಈ ದೇವರ ಜಾತ್ರೆ ಧವನದ ಹುಣ್ಣಿಮೆಯಂದು ಜರುಗುತ್ತಿದ್ದು ಮೂರು ದಿನ ನಡೆಯುತ್ತದೆ. ಇದರ ಜೊತೆಗೆ ಊರಲ್ಲಿ ಭೀಮದೇವರು, ಹನುಮಂತ, ಬಸವಣ್ಣ, ಗಾಳಿಯವ್ವ ಹಾಗೂ ದ್ಯಾಮವ್ವನ ಗುಡಿಗಳಿವೆ. ಊರಲ್ಲೊಂದು ಮಸೀದಿ ಹಾಗೂ ದರ್ಗಾಗಳಿವೆ.

**ಕಿತ್ತೂರು:** ಹಾವೇರಿ ತಾಲೂಕಿನ ಗ್ರಾಮವಾದ ಕಿತ್ತೂರು (ಜನಸಂಖ್ಯೆ: 1,922) ವರದಾ ನದಿ ದಂಡೆ ಮೇಲಿದೆ. ಈ ಊರು ಹಾವೇರಿಯಿಂದ ಈಶಾನ್ಯಕ್ಕೆ 32 ಕಿಮೀ ದೂರದಲ್ಲಿದೆ. ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದ ಈ ಊರಲ್ಲಿ ರಾಷ್ಟ್ರಕೂಟರ ಕಾಲದ ಗೋಸಾಸ ಕಲ್ಲು, ವೀರಗಲ್ಲು ಹಾಗೂ ಹೊಳೆದಂಡೆಯ ಮೇಲೆ ಸಂಗಮೇಶ್ವರ ದೇವಾಲಯಗಳಿವೆ. ಇಲ್ಲಿನ ಎರಡು ರಾಷ್ಟ್ರಕೂಟ ಶಾಸನಗಳಲ್ಲಿ ಒಂದು ಅಸ್ಪಷ್ಟವಾಗಿ ಮತ್ತೊಂದು ವೀರಗಲ್ಲು ಶಾಸನವಾಗಿದ್ದು (ಕ್ರಿ.ಶ. 971) ಕುಣ್ಣೂರ ಎರೆಯಮ್ಮನ ಇಬ್ಬರು ಮಕ್ಕಳಾದ ನಾಗಿಯಣ ಮತ್ತು ವರೆವಿಟರು ಊರಳಿವಿನಲ್ಲಿ ಹೋರಾಡಿ ಸತ್ತ ಅಂಶವನ್ನು ತಿಳಿಸುತ್ತದೆ. ಇದರಿಂದ ಈ ಊರಿನ ಪ್ರಾಚೀನ ಹೆಸರು ಕುಣ್ಣೂರು ಆಗಿರಬೇಕೆಂದು ತೋರುತ್ತದೆ. ಆದರೆ ಕ್ರಿ.ಶ. 1287 ರ ಮತ್ತೊಂದು ಶಾಸನದಲ್ಲಿ ಹಿಚಗೆಯ (ಇಂದಿನ ಇಚ್ಚಂಗಿ) ನಾಡೊಳಗಣ ಹಿರಿಯ ಕಿತ್ತೂರ ಶ್ರೀ ಕಲಿನಾಥ ದೇವರು, ಮೂಲಸ್ಥಾನ ಜಕ್ಕೇಶ್ವರ ದೇವರಿಗೆ ಹಾಗೂ ಭೈರವ ದೇವರಿಗೆ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಇದರಿಂದ 300 ವರ್ಷಗಳ ಅವಧಿಯಲ್ಲಿ ಕುಣ್ಣೂರು ಕಿತ್ತೂರು ಆಗಿರುವ ಅಂಶ ಗೊತ್ತಾಗುತ್ತದೆ.

ಕ್ರಿ.ಶ. 13 ನೇ ಶತಮಾನದ ಇನ್ನೊಂದು ಶಾಸನದಿಂದ ಇದೊಂದು ಮಹಾಅಗ್ರಹಾರವಾಗಿತ್ತೆಂದು ಊಹಿಸಲು ಅವಕಾಶವಿದೆ. ಇಲ್ಲಿನ ಶಾಸನೋಕ್ತ ಗುಡಿಗಳಲ್ಲಿ ಶಾಸನಕಲ್ಲು ಇರುವ ಸಂಗಮೇಶ್ವರ ಗುಡಿಯನ್ನು ಮೂಲಸ್ಥಾನ ಜಕ್ಕೇಶ್ವರ ದೇವಾಲಯವೆಂದೂ ಊರಲ್ಲಿರುವ ಶಿಥಿಲವಾಗಿರುವ ಜಗನ್ನಾಥ ಗುಡಿಯನ್ನು ಕಲಿನಾಥ ದೇವರದೆಂದೂ ಗುರುತಿಸಬೇಕಾಗುತ್ತದೆ. ಊರ ಹೊರಗೆ ವರದಾನದಿ ದಂಡೆ ಮೇಲೆ ಪೂರ್ವಾಭಿಮುಖವಾಗಿರುವ ಸಂಗಮೇಶ್ವರ ಗುಡಿ ಮೂಲತಃ ಇಟ್ಟಿಗೆಯ ರಚನೆಯಾಗಿದ್ದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿನ ಗಜಲಕ್ಷ್ಮಿಯೊಂದಿಗೆ ಆಕರ್ಷಕವಾಗಿದೆ. ಅಂತರಾಳವನ್ನು ಸುಂದರವಾದ ಮಕರತೋರಣ ಅಲಂಕರಿಸಿದ್ದು ನವರಂಗದಲ್ಲಿ ವೈವಿಧ್ಯಮಯವಾದ ಕಂಬಗಳು ರಾಷ್ಟ್ರಕೂಟರ ಕಾಲದ ರಚನೆಗಳಾಗಿವೆ (ಕ್ರಿ.ಶ. 10 ನೇ ಶತಮಾನ). ನಡುವಿನ ಛತ್ತು ಸರಳವಾದ ಕಮಲವನ್ನು ಹೊಂದಿದೆ. ಈ ದೇವಾಲಯದ ನವರಂಗ ಹಾಗೂ ಅರ್ಧಮಂಟಪ ಕಲ್ಯಾಣದ ಚಾಲುಕ್ಯರ ಕಾಲದ ಸೇರ್ಪಡೆಯೆಂದು ತೋರುತ್ತದೆ. ಈ ಗುಡಿಯ ಮುಂಭಾಗದಲ್ಲಿರುವ ಶೈವ ದ್ವಾರಪಾಲಕರು, ಹೊಳೆಯಲ್ಲಿ ಲಭಿಸಿದ್ದು, ಇವೂ ರಾಷ್ಟ್ರಕೂಟರ ಕಾಲದ್ದೇ ಆಗಿವೆ. ಅದೇ ರೀತಿ ಇಲ್ಲಿ ಮುಕ್ಕಾದ ಗಣಪತಿ, ಭೈರವ ಹಾಗೂ ಸೂರ್ಯನ ಎರಡು ಸೂರ್ಯ ಶಿಲ್ಪಗಳಿದ್ದು, ಅವುಗಳಲ್ಲಿ ಚಂದ್ರಶಿಲೆಯ ಸೂರ್ಯನ ಮೂರ್ತಿ ಆಕರ್ಷಕವಾಗಿದೆ. ಇಲ್ಲಿನ ಮೂರು ವೀರಗಲ್ಲುಗಳಲ್ಲಿ ಒಂದು ಆಕರ್ಷಕವಾದ ಹುಲಿಬೇಟೆ ವೀರಗಲ್ಲಾಗಿದೆ. ಊರ ನಡುವಿರುವ ಜಗನ್ನಾಥ ಗುಡಿ ದಿನ್ನೆಯ ಮೇಲಿದ್ದು ಇಂದು ಪೂರ್ಣ ಹಾಳಾಗಿದೆ. ಇಲ್ಲಿ ಶಿವಲಿಂಗ ಗಣಪತಿ ಹಾಗೂ ಚಾಲುಕ್ಯ ಶೈಲಿಯ ಕಂಬಗಳಿವೆ. ಅರಳಿಕಟ್ಟೆ ಬಳಿ ಪೀಠಸ್ಥ ಚತುರ್ಮುಖ ಬ್ರಹ್ಮ ಹಾಗೂ ಬಾಣಂತಿಕಲ್ಲೆಂದು ಕರೆಯುವ ಗಜಲಕ್ಷ್ಮಿ ಶಿಲ್ಪ ಹಾಗೂ ಯಂತ್ರದಕಲ್ಲಿದೆ.

**ಕುಂಚೂರು:** ಹಿರೇಕೆರೂರು ತಾಲೂಕಿನ ಕುಂಚೂರು (ಜನಸಂಖ್ಯೆ : 1,957) ಹಿರೇಕೆರೂರಿನಿಂದ 16 ಕಿ.ಮೀ. ದೂರದಲ್ಲಿದೆ. ಏಳೆಂಟು ನೂರು ವರ್ಷಗಳಷ್ಟು ಪ್ರಾಚೀನವಾದ ಈ ಸ್ಥಳದಲ್ಲಿರುವ ವೀರಭದ್ರ ಗುಡಿಯು ಚಾಲುಕ್ಯರ ಶೈಲಿಯ ಕಟ್ಟಡವಾಗಿದ್ದು ತ್ರಿಕೂಟಾಚಲವಾಗಿದೆ. ಪ್ರತಿಯೊಂದು ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವಿದ್ದು ಕೇಂದ್ರ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಎಡಭಾಗದಲ್ಲಿರುವ ಗರ್ಭಗೃಹದಲ್ಲೂ ಶಿವಲಿಂಗವಿದೆ ಹಾಗೂ ಬಲಭಾಗದ ಗರ್ಭಗೃಹದಲ್ಲಿ ವೀರಭದ್ರನ ಶಿಲಾಮೂರ್ತಿಯಿದೆ. ವೀರಭದ್ರಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು 15 ನೇ ಶತಮಾನದ ಶಿಲ್ಪ ಲಕ್ಷಣವನ್ನು ಹೊಂದಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಚಾಲುಕ್ಯರ ಶೈಲಿಯ ಕಂಬಗಳಿವೆ. ನವರಂಗದಲ್ಲಿ ಒಂದು ಸಪ್ತಮಾತೃಕೆಯರ ಜೋಡು ಶಿಲ್ಪ ಮತ್ತು ಆಸೀನವಾಗಿರುವ ಭೈರವನ ಮೂರ್ತಿ ಇವೆ. ಭೈರವಮೂರ್ತಿಯು ರಾಷ್ಟ್ರಕೂಟರ ಲಕ್ಷಣಗಳನ್ನು ಹೋಲುತ್ತದೆ. ದೇವಾಲಯದ ಹೊರಗೆ ಎರಡು ಭಿನ್ನವಾಗಿರುವ ತೀರ್ಥಂಕರ ಪ್ರತಿಮೆಗಳಿವೆ. ಇವುಗಳಲ್ಲಿ ಒಂದು ಸುಮಾರು ಒಂದು ಮೀಟರ್ ಎತ್ತರವಿರುವ ಪಾರ್ಶ್ವನಾಥ ತೀರ್ಥಂಕರ ಮೂರ್ತಿಯಾಗಿದೆ. ಎರಡೂ ಜಿನವಿಗ್ರಹದ ಪೀಠಗಳ ಮೇಲೆ ಶಾಸನಗಳಿದ್ದು ಎರಡೂ ಅಸ್ಪಷ್ಟವಾಗಿದ್ದು, ಒಂದರಲ್ಲಿ ಮಾತ್ರ ಜೋಗಿಸೆಟ್ಟಿಯ ಮಗ ಬೊಮ್ಮಯನಿಂದ ಜಿನವಿಗ್ರಹದ ಪ್ರತಿಷ್ಠಾಪನೆಯಾಯಿತೆಂದು ತಿಳಿಯುತ್ತದೆ. ಇವೆರಡೂ ಶಾಸನಗಳು ಕ್ರಿ.ಶ. 12ನೇ ಶತಮಾನದ ಲಿಪಿಯನ್ನು ಹೊಂದಿವೆ. ಊರಿನಲ್ಲಿರುವ ಬರ್ಮದೇವನಗುಡಿ (ಸಾಧಾರಣ ಕಟ್ಟಡ)ಯಲ್ಲಿರುವ ಶಾಸನವೂ ಅಸ್ಪಷ್ಟವಾಗಿದ್ದು ಈಚಿನ ಅಕ್ಷರವನ್ನು ಹೊಂದಿದ್ದು ಹನುಮಂತ ದೇವರಿಗೆ ನೀಡಿದ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ವೀರಭದ್ರಗುಡಿಯ ಮಗ್ಗುಲಲ್ಲಿ ಎರಡು ವೀರಗಲ್ಲುಗಳಿದ್ದು ಭಾರಿ ಯುದ್ಧದ ದೃಶ್ಯವನ್ನು ಪರಿಣಾಮಕಾರಿಯಾಗಿ ಮೂಡಿಸಿವೆ. ಈ ವೀರಗಲ್ಲು ಶಾಸನವು ಹೊಯ್ಸಳ ಎರಡನೇ ಬಲ್ಲಾಳನ (ಕ್ರಿ.ಶ. 1193) ಕಾಲದಲ್ಲಿ ಗೌಡನೊಬ್ಬನು ಕುಂಚೂರ ಮೇಲೆ ದಾಳಿ ಮಾಡಿದಾಗ ಯುದ್ಧದಲ್ಲಿ ಗಂಗಕುಲದ ವೀರನಾದ ಚಿಕಸೆಟ್ಟಿಯ ಮರಣದ ಬಗೆಗೆ ತಿಳಿಸುತ್ತದೆ. ಇದನ್ನು ಹಲವಾರು ಹಂತಗಳಲ್ಲಿ ಕೆತ್ತಲಾಗಿದ್ದು ವೀರನ ಸುತ್ತಲೂ ಅನೇಕ ಅಪ್ಸರೆಯರು, ವಾದಕರು, ಹೀಗೆ ಎಲ್ಲಾ ವಿವರಗಳನ್ನೂ ಬಿಡಿಸಲಾಗಿದೆ. ಊರಿನಲ್ಲಿ ಚೈತ್ರಪೂರ್ಣಿಮೆಯಂದು ಹನುಮಂತದೇವರ ಜಾತ್ರೆ ನಡೆಯುತ್ತದೆ.

**ಕೆಂಗೊಂಡ:** ಬ್ಯಾಡಗಿ ತಾಲೂಕಿನ ಕೆಂಗೊಂಡವು (ಜನಸಂಖ್ಯೆ : 1,001) ಬ್ಯಾಡಗಿಯಿಂದ 14 ಕಿ.ಮೀ. ದೂರದಲ್ಲಿದ್ದು, ಹಿಂದೆ ಕೋಟೆಯನ್ನು ಹೊಂದಿತ್ತು. ಈಗ ಅದರ ಅವಶೇಷಗಳೂ ಕಾಣಸಿದಿದ್ದರೂ ಕೆಂಗೊಂಡ ಹಲವು ಯುದ್ಧಗಳು ನಡೆದ ಪ್ರಾಚೀನ ಗ್ರಾಮ. ಈ ಊರಿನಲ್ಲಿ ಚಾಲುಕ್ಯ ಶೈಲಿಯಲ್ಲಿ ನಿರ್ಮಿತವಾಗಿರುವ ಕಲ್ಲೇಶ್ವರ ದೇವಾಲಯ ಮುಖ್ಯ ಆಕರ್ಷಣೆ. ಶಾಸನದಲ್ಲಿ ಉಕ್ತವಾಗಿರುವ ಮೂಲಸ್ಥಾನದ ಮಲ್ಲಿಕಾರ್ಜುನ ದೇವರ ಗುಡಿಯು ಇದೇ ಎಂಬುದು ಸ್ಪಷ್ಟವಾಗಿದೆ. ಈ ದೇವಾಲಯವು ತ್ರಿಕೂಟಾಚಲವಾಗಿದ್ದು, ಮೂರು ಗರ್ಭಗೃಹಗಳು, ಒಂದು ಅಂತರಾಳ ಹಾಗೂ ಮಧ್ಯದಲ್ಲಿ ಒಂದು ನವರಂಗ ಮಂಟಪವನ್ನು

ಹೊಂದಿದೆ. ಗರ್ಭಗೃಹದಲ್ಲಿ ಚಾಳುಕ್ಯ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಅಲಂಕಾರಯುತವಾದ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳದ ದ್ವಾರಬಂಧವೂ ಅಲಂಕಾರಯುತವಾಗಿದ್ದು ಮಧ್ಯದ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ನಾಲ್ಕು ಕಂಬಗಳು ಸಾಂಪ್ರದಾಯಿಕ ಕಲ್ಯಾಣದ ಚಾಳುಕ್ಯರ ಶೈಲಿಯ ಲಕ್ಷಣಗಳನ್ನು ಹೊಂದಿವೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ಬಲಭಾಗದಲ್ಲಿ ಭಗ್ನವಾದ ವಿಷ್ಣು ಹಾಗೂ ಎಡಭಾಗದಲ್ಲಿ ಭಗ್ನವಾದ ಸೂರ್ಯನ ಶಿಲ್ಪಗಳಿವೆ. ಹೊರಗೆ ಶಾಸನವಿದ್ದು ಕ್ರಿ.ಶ. 1179 ರಲ್ಲಿ ಗುತ್ತ ಜೋಯಿದೇವನ ಆಳ್ವಿಕೆಯಲ್ಲಿ ಪ್ರಭು ದಾಸಗಾವುಂಡ ಮತ್ತು ಆತನ ಮಗ ಹರಿಯಮಗಾವುಂಡರಿಂದ ಮೂಲಸ್ಥಾನ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ಭೂದಾನದ ವಿವರಗಳನ್ನು ತಿಳಿಸುತ್ತದೆ. ಅದರ ಹತ್ತಿರವೇ ಇರುವ ವೀರಗಲ್ಲು ಶಾಸನವು ಯಾದವ ಕನ್ನರನ ಕಾಲದಲ್ಲಿ (ಕ್ರಿ.ಶ. 1259) ಮನ್ನೆಯ ಜೋಯಿದೇವನು ಹೊನುಗಲಿ ಮೇಲೆ ದಾಳಿಮಾಡಿದಾಗ ಕೇತೋಜನೆಂಬ ವೀರನ ಮರಣವನ್ನು ದಾಖಲಿಸುತ್ತದೆ. ಕೆಂಗೊಂಡದ ಇತರೆ ದೇವಾಲಯಗಳೆಂದರೆ ದುರ್ಗಮ್ಮ, ಬಸವಣ್ಣ, ಹನುಮಂತ, ದ್ಯಾಮವ್ವ, ಚೌಡವ್ವ, ಉಡುಚವ್ವ, ದಂಡಿನ ದುರ್ಗವ್ವ, ಮಾಯವ್ವ, ಬಸಪ್ಪ, ಬಸವಣ್ಣ ಮುಂತಾದವುಗಳು. ದುರ್ಗವ್ವನ ಜಾತ್ರೆಯು ಬನದ ಹುಣ್ಣಿಮೆಗೆ ಸುಮಾರು ಒಂಭತ್ತು ದಿನಗಳ ಕಾಲ ನಡೆಯುತ್ತದೆ.

**ಕಚ್ಚವಿ:** ಹಿರೇಕೆರೂರು ತಾಲೂಕಿನ ಕಚವಿ ಗ್ರಾಮವು (ಜನಸಂಖ್ಯೆ : 2,122) ಹಿರೇಕೆರೂರಿನಿಂದ ವಾಯುವ್ಯಕ್ಕೆ 18 ಕಿ.ಮೀ. ದೂರದಲ್ಲಿದೆ. ಈ ಊರಿಗೆ ಹೋಗಲು ತಿಳುವಳ್ಳಿಯಿಂದ ಸಾಕಷ್ಟು ವಾಹನ ಸೌಕರ್ಯವಿದೆ. ಪ್ರಾಚೀನ ಶಾಸನಗಳಲ್ಲಿ 'ಕಚ್ಚವಿ' 'ಕತ್ತವಿ' ಎಂದೇ ಉಲ್ಲೇಖಗೊಂಡಿರುವ ಈ ಊರು ನಾಗರಖಂಡ-70 ಕ್ಕೆ ಸೇರಿದ ಗ್ರಾಮವಾಗಿತ್ತು. (ಕಚ್ಛಪಿ ಅಥವಾ ಲಕ್ಷ್ಮಿ ಎಂಬ ಹೆಸರಿನಿಂದ ಈ ಶಬ್ದ ಹುಟ್ಟಿರಬೇಕು) ಕ್ರಿ.ಶ. ಎಂಟನೇ ಶತಮಾನದಿಂದ - ಕ್ರಿ.ಶ. 16 ನೇ ಶತಮಾನದವರೆಗಿನ ಆರು ಶಾಸನಗಳು ಈವರೆಗೆ ಇಲ್ಲಿಂದ ವರದಿಯಾಗಿವೆ. ಇತ್ತೀಚೆಗೆ ಕಲ್ಯಾಣದ ಚಾಳುಕ್ಯರ ಕಾಲದ ಎರಡು ಶಾಸನಗಳು ಹಾಗೂ ಹೊಯ್ಸಳರ ಎರಡು ವೀರಗಲ್ಲು ಶಾಸನಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ ಕ್ರಿ.ಶ. 994 ಕ್ಕೆ ಸೇರಿದ ಶಾಸನ ದೇವಾಲಯ ನಿರ್ಮಾಣವನ್ನು ಹೇಳಿದರೆ, ಭೂಲೋಕಮಲ್ಲನ ಕಾಲಕ್ಕೆ ಸೇರಿದ ಮತ್ತೊಂದು ಶಾಸನದಿಂದ ಕಚ್ಚವಿ ಅನಾದಿ ಅಗ್ರಹಾರವಾಗಿತ್ತೆಂಬ ಅಂಶ ಮೊದಲ ಬಾರಿಗೆ ಬೆಳಕಿಗೆ ಬರುತ್ತಿದೆ. ಹೊಯ್ಸಳ ಬಲ್ಲಾಳನ ಕಾಲದ ವೀರಗಲ್ಲುಗಳು ಯಾದವ ಹೊಯ್ಸಳ ಹೋರಾಟದ ಸಾಕ್ಷಿಗಳಾಗಿವೆ. ಇವುಗಳಲ್ಲಿ ರಾಷ್ಟ್ರಕೂಟ ಧ್ರುವನ ಕಾಲಕ್ಕೆ ಸೇರಿದ ಶಾಸನವು ಮದೆಯೂರ ಮಾರ ಬನವಾಸಿ-12,000 ವನ್ನಾಳುವಾಗ ಮಳೆ ಅರಸು ಮಾರಬ್ಬೆದೇವಿಗೆ ತುಪ್ಪದರೆ ಬಿಟ್ಟ ದಾನ ಶಾಸನವಾಗಿದ್ದರೆ, 16 ನೇ ಶತಮಾನದ ಶಾಸನ ಸಂಕಿಗಾವುಂಡಿ ಹಾಗೂ ನಾಗಪ್ಪರು ವಿಗ್ರಹ ಮಾಡಿಸಿದರೆಂದು ಹೇಳುತ್ತದೆ. ಊರಲ್ಲಿ ಬಸ್‌ನಿಲ್ದಾಣದ ಬಳಿ ಎತ್ತರದಲ್ಲಿ ರಾಮಲಿಂಗೇಶ್ವರ ಗುಡಿಯಿದೆ. ಈ ಗುಡಿ ಮಣ್ಣಿನಿಂದ ಮುಚ್ಚಲ್ಪಟ್ಟಿದ್ದು, ಇತ್ತೀಚೆಗೆ ಹಾಳು ಮಣ್ಣನ್ನು ಸ್ಥಳೀಕರು ತೆಗೆದಿರುವುದರಿಂದ, ಗುಡಿಯ ರೂಪುರೇಷೆಯನ್ನು ಗುರುತಿಸಬಹುದಾಗಿದ್ದು, ನಾಲ್ಕು ಹೊಸ ಶಾಸನಗಳು ಲಭಿಸಿರುವುದು ಈ ಪರಿಸರದಲ್ಲೇ. ಈ ಗುಡಿ ಗರ್ಭಗೃಹ, ಅಂತರಾಳ, ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದ್ದಂತೆ ತೋರುತ್ತದೆ. ಗರ್ಭಗೃಹದಲ್ಲಿ ಶಿವಲಿಂಗ ನವರಂಗದಲ್ಲಿ ನಂದಿಯಿದೆ. ಬಾಗಿಲವಾಡ ಸುಂದರವಾದ ಜಾಲಂಧ್ರವನ್ನು ಹೊಂದಿದೆ. ನವರಂಗದಲ್ಲಿ ಸುಂದರವಾದ ಎರಡು ಮಹಿಷಮರ್ದಿನಿ ಶಿಲ್ಪ, ಸಪ್ತಮಾತೃಕಾ ಶಿಲ್ಪ ಮತ್ತು ಆದಿತ್ಯ ಪೀಠಗಳಿವೆ. ಈ ಗುಡಿ ಕ್ರಿ.ಶ. 10 ನೇ ಶತಮಾನದ ಕೊನೆಯ ಭಾಗದ ರಚನೆಯೆಂದು ಹೇಳಬಹುದಾದ ಶಾಸನವೂ ಅಲ್ಲೇ ಇದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ನವರಂಗದ ಸ್ತಂಭಗಳು ಚಾಳುಕ್ಯ ಶೈಲಿಯ ಕಂಬಗಳಾಗಿವೆ. ಈ ಗುಡಿಯ ಶಿಖರ ಹಾಳಾಗಿದೆ. ಅಲ್ಲಿರುವ ಎರಡೂ ಕೈಯಲ್ಲಿ ಕಮಲ ಹಿಡಿದು ಕುಳಿತಿರುವ ಗಣಪತಿಯ ದ್ವಿಬಾಹು ಶಿಲ್ಪವು ಸುಂದರವಾಗಿದೆ. ಊರ ಹೊಂಡದ ತಗ್ಗಲ್ಲಿ ದೇವಿ ಗುಡಿಯಿದೆ. ಗರ್ಭಗೃಹ ಅರ್ಧಮಂಟಪವಷ್ಟೇ ಉಳಿದಿರುವ ಈ ಗುಡಿಯ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ರಾಷ್ಟ್ರಕೂಟರ ಕಾಲದ ಮಾರಬ್ಬೆ ದೇವಿ ಗುಡಿ ಇದೇ ಎಂದು ತೋರುತ್ತದೆ. ಈ ಗುಡಿಯ ಬಳಿಯೇ ಇರುವ ವೀರಭದ್ರನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ ಗರ್ಭಗೃಹದ ದ್ವಾರಬಂಧ ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು ಸುಂದರವಾದ ಚತುರ್‌ಶಾಖಾಲಂಕೃತವಾಗಿದೆ. ಊರ ಹೊರಗೆ ಚಿಕ್ಕೆರೂರು ವಿರಕ್ತ ಮಠದ ಶಾಖಾಮಠವಿದೆ. ಈ ಮಠದ ರಚನೆಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಲಾಗಿದೆ. ಊರ ಅಗಸೆ ಬಳಿ ಕೋಣನ ತಲೆಯ ಎರಡು ಸುಂದರ ಉಬ್ಬುಶಿಲ್ಪಗಳಿವೆ. ಕೋಣನ ತಲೆಯನ್ನು ಶಕ್ತಿದೇವಿಯ ಪ್ರತೀಕವೆಂದು ಪೂಜಿಸುತ್ತಿದ್ದಿರಬಹುದು. ಗ್ರಾಮದ ಹೊಲದಲ್ಲಿ ರೇವಂತ ಕಲ್ಲೆಂದು ಹೇಳುವ ಕುದುರೆ ಸವಾರನ ಉಬ್ಬುಶಿಲ್ಪವಿದ್ದು ಇದು ಕುಮಾರರಾಮನ ಶಿಲ್ಪವಾಗಿರಬಹುದು. ಮನೆಯೊಂದರ ಹಿತ್ತಲಲ್ಲಿರುವ ಬೃಹತ್ತಾದ ಬಂದೂಕುಧಾರಿ ವೀರನ ವೀರಗಲ್ಲೊಂದು ಉಲ್ಲೇಖನಾರ್ಹವಾದುದಾಗಿದೆ. ಸುಮಾರು 50 ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ "ಕಚ್ಛ(ತ್ರ)ವಿಗಳೆ" (ಭೂಮಾಪನ)ಯ ಪ್ರಾತಿನಿಧಿಕ ರೇಖಾ ಕೆತ್ತನೆ ಈ ಊರಿನ

ದೇಗುಲವೊಂದರ ಮೇಲೆ ಕೆತ್ತಲ್ಪಟ್ಟಿದ್ದು ಆದರಿಂದಲೇ ಗಳಿಗೆ ಈ ಹೆಸರು ಬಂದಿರಬೇಕೆಂದು ತೋರುತ್ತದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ದ್ಯಾಮವ್ವ, ಬಸವಣ್ಣ, ಗುತ್ತವ್ವ, ಮಾತಂಗವ್ವ ಮುಂತಾದ ದೇವತೆಗಳ ಗುಡಿಗಳಿವೆ. ಊರಲ್ಲೊಂದು ಮಸೀದಿ ಹಾಗೂ ಎರಡು ದರ್ಗಾಗಳಿವೆ. ಸ್ವಾತಂತ್ರ್ಯಯೋಧ ಸರ್ದಾರ್ ವೀರನಗೌಡ ಪಾಟೀಲರು ಈ ಊರಿನವರು.

**ಕರ್ಜಗಿ :** ಹಾವೇರಿ ತಾಲೂಕಿನ ಊರಾದ ಕರ್ಜಗಿ (ಜನಸಂಖ್ಯೆ : 7,014) 1905 ರವರೆಗೆ ತಾಲೂಕು ಕೇಂದ್ರವಾಗಿತ್ತು. ಈ ಊರು ಹಾವೇರಿಯಿಂದ ಸುಮಾರು 12 ಕಿಮೀ. ದೂರದಲ್ಲಿದೆ. ವರದಾ ನದಿಯ ಎಡದಂಡೆಯ ಮೇಲಿರುವ ಈ ಊರಿನಲ್ಲಿ ನಾಲ್ಕು ಶಾಸನಗಳಿದ್ದು, ಅವುಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಯಸಿಂಹನ ಸಾಮಂತ ಕದಂಬ ಕಾಮದೇವನ ಪ್ರಶಸ್ತಿಯನ್ನೊಳಗೊಂಡಿರುವ ಶಾಸನವೊಂದು ಕನ್ನಡ ಶಾಲೆಯ ಹಿಂದಿನ ಕೋಟೆಗೋಡೆಯಲ್ಲಿದೆ. ಕ್ರಿ.ಶ. 1637 ರ ಮತ್ತೊಂದು ಶಾಸನ 'ಕರ್ಜಗಿ'ಯ ದೇಸಾಯಿ ಕುಕನೂರ ಚನ್ನಬಸವೇಶ್ವರ ದೇವರಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ಹನುಮಂತನ ಗುಡಿಯ ಮುಂದಿರುವ ವೀರಗಲ್ಲು ಶಾಸನವೊಂದು ಹಾವೇರಿಯಲ್ಲಿ ಮಡಿದ ಮಾಚಯನಾಯಕನಿಗಾಗಿ ನಿಲ್ಲಿಸಿದ ಸ್ಮಾರಕವಾಗಿದೆ. ಊರ ಸುತ್ತ ಕೋಟೆ ಇದ್ದ ಅಂಶ ಅಳಿದುಳಿದಿರುವ ಅವಶೇಷಗಳಿಂದ ಗೊತ್ತಾಗುತ್ತದೆ. ಏಳನೇಯ ಶತಮಾನದ ಹರಿಹರ ತಾಮ್ರ ಶಾಸನ ಉಲ್ಲೇಖಿಸುವ 'ಕರಂಜಪತ್ರ' ಎಂಬ ಊರೇ ಕರಜಗಿ ಎಂದು ಆರ್.ಎಸ್. ಪಂಚಮುಖಿಯವರ ಅಭಿಪ್ರಾಯವಾಗಿದೆ. 'ಕರಜಗಿ' ಭರಮಪ್ಪನ ಗುಡಿಯಿಂದಾಗಿ ಈ ಭಾಗದಲ್ಲಿ ಪ್ರಸಿದ್ಧವಾಗಿದೆ. 14 ಮೂಲೆಗಳಿಂದ ಕೂಡಿದ ಆಳುದ್ದದ ಬಯಲು ಗುಡಿಯ ನಡುವೆ ಬೇರೆ ಬೇರೆ ಪ್ರಮಾಣದ ಎರಡು ದುಂಡುಕಲ್ಲುಗಳಿದ್ದು ಭಕ್ತರು ಇದನ್ನೇ ಸ್ವಯಂಭು ಬ್ರಹ್ಮನೆಂದು ನಂಬಿ ಆರಾಧಿಸುತ್ತಾರೆ. ಜೂನ್ ತಿಂಗಳ ಕಾರಹುಣ್ಣಿಮೆಯಲ್ಲಿ ಮೂರು ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ಊರಿನ 14 ವೀರಗಾರರು ಮಹತ್ವದ ಧಾರ್ಮಿಕ ಪಾತ್ರ ವಹಿಸುವ ಈ ಜಾತ್ರೆಯಲ್ಲಿ ಜಾತ್ರೆಯ ಅಂಗವಾಗಿ ಓಡಿಸುವ ಬಂಡಿಗಳಿಗೆ (ಎರಡು ಪೇಟೆ ಬಂಡಿ, ಎರಡು ರೈತರ ಬಂಡಿ) ರೈತರು ತಮ್ಮ ತಮ್ಮ ಎತ್ತುಗಳನ್ನು ಹೂಡುವ ಸಂಪ್ರದಾಯ ಮೊದಲಿನಿಂದ ಬಂದಿದೆ. ಹೊನ್ನುಗ್ಗಿಯಿಂದ ಆರಂಭವಾಗುವ ಈ ಜಾತ್ರೆ, ವೀರಗಾರರು ವೇಷ ಹಾಕುವುದು, ಕುಣಿಯುವುದು, ಬಂಡಿ ಓಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಒಳಗೊಂಡಿದ್ದು ಕೊನೆ ದಿನ ರಾತ್ರಿ ದೇವರಿಗೆ ಹೂರಣ ಉಣಿಸುವುದರೊಂದಿಗೆ ಅಂತ್ಯವಾಗುತ್ತದೆ. ಕೊನೇ ದಿನ ರಾತ್ರಿ ದೇವರಿಗೆ ಹೂರಣ ಉಣಿಸುವಾಗ 14 ಮಂದಿ ವೀರಗಾರರು 14 ಮೂಲೆಗಳತ್ತ ಮುಖಮಾಡಿ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ನಿಂತು ಉಫ್ ಉಫ್ ಎನ್ನುತ್ತಿದ್ದಾಗ ಜೋಯಿಸರು ಮಂತ್ರ ಪಠಿಸುತ್ತಾ, ದೇವರಿಗೆ ತುಪ್ಪ ಹೂರಣ ಉಣಬಡಿಸುತ್ತಾರೆ. ಈ ದೇವಾಲಯದ ಪ್ರವೇಶದಲ್ಲಿ ರಾಷ್ಟ್ರಕೂಟರ ಕಾಲದ ಗೋಸಾಸ ಕಂಬವನ್ನು ಬೇರೆಡೆಯಿಂದ ಸ್ಥಳಾಂತರಿಸಿ ತಂದು ನೆಟ್ಟಿದ್ದಾರೆ. ಈ ಗುಡಿಯ ಬಳಿಯಲ್ಲೇ ಇರುವ ವೀರಭದ್ರನ ಗುಡಿಯನ್ನು 1896 ರಲ್ಲಿ ಮಲ್ಲಪ್ಪ ಬೆನ್ನೂರರ ಮಗ ಮಲ್ಲಾರೆಪ್ಪ ಕಟ್ಟಿಸಿದ್ದೆಂದು ತಿಳಿದು ಬರುತ್ತದೆ. ಇದಲ್ಲದೆ ಊರಲ್ಲಿ ಹನುಮಂತ, ವೀರಭದ್ರ, ವೆಂಕಟರಮಣ, ಬಸವಣ್ಣ ದುರ್ಗಮ್ಮ, ದ್ಯಾಮವ್ವ, ಹೊಳೆಮುರುಗವ್ವ ಮುಂತಾದ ಗುಡಿಗಳಿವೆ. ಊರ ಹೊರಗಿರುವ ಪಾಳುಮಠದ ಬಳಿ ಮುನೇಶ್ವರ ಗುಡಿಯ ಸಾಧಾರಣ ಕಟ್ಟಡ ಕಂಡುಬರುತ್ತದೆ.

**ಕಟ್ನೂರು:** ಹುಬ್ಬಳ್ಳಿ ತಾಲೂಕಿನ ಹಳ್ಳಿ ಕಟ್ನೂರು (ಜನಸಂಖ್ಯೆ : 1,191 - 1981ರಲ್ಲಿದ್ದಂತೆ) ಹುಬ್ಬಳ್ಳಿಯಿಂದ ದಕ್ಷಿಣಕ್ಕೆ 10 ಕಿಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕಟ್ಟನೂರು' ಎಂದೇ ಉಲ್ಲೇಖಿತಗೊಂಡಿದ್ದು, ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಹೊಲದಲ್ಲಿರುವ ಸುಮಾರು ಒಂಬತ್ತನೆ ಶತಮಾನದ ವೀರಗಲ್ಲು ಶಾಸನ ಗೋಗ್ರಹಣದಲ್ಲಿ ಕಟ್ಟಳಿತಾಣಗನ ಮರಣವನ್ನು ತಿಳಿಸುತ್ತದೆ. ಆದರೆ ಈ ವೀರಗಲ್ಲಿನ ಕೆಳಪಟ್ಟಿಕೆಯಲ್ಲಿ ನಾಲ್ಕಾರು ಎಮ್ಮೆಗಳನ್ನು ಕೆತ್ತಿರುವುದು ಗಮನಾರ್ಹವಾಗಿದೆ. ಕಲ್ಮೇಶ್ವರ ಗುಡಿ ಮುಂದಿರುವ ಕ್ರಿ.ಶ. 1242 ರ ಗೋವೆ ಕದಂಬ ಅರಸ ತ್ರಿಭುವನಮಲ್ಲನ ಶಾಸನ ಕಟ್ಟನೂರ ಮೂಲಸ್ಥಾನ ದೇವರಿಗೆ ಇಂದೆಯ ಸಾಹಣಿಯು ಭೂದಾನ ಮಾಡಿದ ವಿಷಯ ತಿಳಿಸುವುದರಿಂದ, ಇಂದಿನ ಕಲ್ಮೇಶ್ವರ ಗುಡಿಯೇ ಶಾಸನೋಕ್ತ ಮೂಲಸ್ಥಾನದೇವರ ಗುಡಿ ಎಂದು ಪರಿಗಣಿಸಬಹುದಾಗಿದೆ. ಈ ಗುಡಿಯ ಮುಂದಿರುವ ನಿಂತ ಬಸವಣ್ಣನ ಗುಡಿಯ ನಂದಿಸ್ತಂಭದ ಮೇಲಿನ ಶಾಸನ ಯಾದವ ರಾಮಚಂದ್ರನ ಕಾಲದ್ದಾಗಿದ್ದು, ಸೊನ್ನಲಿಗೆಯ ಕಪಿಲ ಸಿದ್ಧಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದಾನದ ಬಗ್ಗೆ ಹೇಳುತ್ತದೆ. ಊರ ಹೊರ ಅಂಚಲ್ಲಿರುವ ಕಲ್ಮೇಶ್ವರ ಗುಡಿ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ರಚನೆಯಾಗಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಸ್ಥಳೀಕರು ಮೂಲ ಸ್ವರೂಪಕ್ಕೆ ಕುಂದಾಗದಂತೆ ಎಚ್ಚರ ವಹಿಸಿದ್ದಾರೆ. ಎತ್ತರದ ದಿನ್ನೆಯ ಮೇಲೆ ಪೂರ್ವಾಭಿಮುಖವಾಗಿರುವ ಈ ಗುಡಿ, ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗವನ್ನು ಹೊಂದಿದ್ದು, ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕಿಂದಲೂ ಸೌಲಭ್ಯವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ದ್ವಿಶಾಖಾಲಂಕೃತವಾಗಿದ್ದು,

ನಡುವೆ ಗಣಪತಿ ಇದ್ದರೆ ಅಂತರಾಳದ ಬಾಗಿಲವಾಡವೂ ದ್ವಿಶಾಖೆ ಹೊಂದಿದ್ದು ನಡುವೆ ಲಕ್ಷ್ಮಿಯಿದ್ದು ಮೇಲೆ ಪಂಚಶಿಖರ, ಇಕ್ಕೆಲದಲ್ಲಿ ಜಾಲಾಂಧ್ರಗಳಿವೆ. ಇವುಗಳ ಛತ್ತನ್ನು ಸರಳವಾದ ಕಮಲಗಳು ಅಲಂಕರಿಸಿವೆ. ನವರಂಗದ ನಡುವೆ ನಾಲ್ಕು ಚಾಲುಕ್ಯ ಶೈಲಿ ಕಂಬಗಳಿದ್ದು ಛತ್ತಲ್ಲಿ ಕಮಲವಿದೆ. ನವರಂಗದ ಅಂಚಿನಲ್ಲಿ ಕಕ್ಷಾಸನವಿದೆ. ಹೊಸ ಶಿಖರ ಈಗ ಗರ್ಭಗೃಹವನ್ನು ಅಲಂಕರಿಸಿದೆ. ಈ ಗುಡಿಯ ಪರಿಸರದಲ್ಲೇ ವೀರಗಲ್ಲು, ವೀರಮಾಸ್ತಿಕಲ್ಲು, ಪೀಠಸ್ಥ ಚತುರ್ಮುಖ ಬ್ರಹ್ಮಶಿರಗಳಿವೆ. ಕಪಿಲ ಸಿದ್ಧಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ವಿಷಯವನ್ನು ತಿಳಿಸುವ ಯಾದವ ರಾಮಚಂದ್ರನ ಶಾಸನವಿರುವ ನಂದಿಸ್ತಂಭಕ್ಕೆ ಗುಡಿಯನ್ನು ಕಟ್ಟಿರುವ ಅಂಶವನ್ನಿಲ್ಲಿ ನೋಡಬಹುದಾಗಿದ್ದು ಇದೂ ಶಿಥಿಲಾವಸ್ಥೆಯಲ್ಲಿದೆ. ಇದಲ್ಲದೆ ಊರಲ್ಲಿ ಮೈಲಾರ, ಹನುಮಂತ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿದ್ದು, ಜುಮ್ಮಾ ಮಸೀದಿ ಹಾಗೂ ಮೆಹಬೂಬ್ ಸುಬಾನಿ ದರ್ಗಾ ಕೂಡ ಇವೆ.

**ಕಣಗಿನಹಾಳ:** ಗದಗ ತಾಲೂಕಿನ ಕಣಗಿನಹಾಳವು (ಜನಸಂಖ್ಯೆ : 3,258) ಗದಗಿನಿಂದ ಈಶಾನ್ಯಕ್ಕೆ ಒಂಬತ್ತು ಕಿಮೀ ದೂರದಲ್ಲಿದೆ. ಈ ಊರಿಂದ ತ್ರುಟಿತ ಶಾಸನವೊಂದು ವರದಿಯಾಗಿದ್ದು ಸಿಂಧವಂಶದ ಪೆರ್ಮಾಡಿಯ ಉಲ್ಲೇಖವಷ್ಟೇ ಇದ್ದು ಹೆಚ್ಚಿನ ವಿವರ ಲಭ್ಯವಿಲ್ಲವಾದರೂ, ಊರಲ್ಲಿಂದು ಅಳಿದುಳಿದಿರುವ ದೇವಾಲಯ, ಮೂರ್ತಿಶಿಲ್ಪಾವಶೇಷಗಳಿಂದ, ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ದೇಶದಲ್ಲೇ ಪ್ರಥಮ (1905) ಸಹಕಾರ ಸಂಘ ಸ್ಥಾಪಿಸಿದ ಕೀರ್ತಿ ಈ ಊರಿಗೆ ಇದೆ. ಇಲ್ಲಿ ಸುಮಾರು ಕ್ರಿ.ಶ. 10 ನೇ ಶತಮಾನದ ಬಸವಣ್ಣನ ಗುಡಿ, ಕ್ರಿ.ಶ. 12 ನೇ ಶತಮಾನಕ್ಕೆ ಸೇರಿದ ಕಲ್ಮೇಶ್ವರ ಹಾಗೂ ನಾರಾಯಣ ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ಊರ ಹೊರಗಿರುವ ಬಸವಣ್ಣನ ಗುಡಿ ಪೂರ್ಣ ಜೀರ್ಣಾವಸ್ಥೆಯಲ್ಲಿದ್ದು, ಗರ್ಭಗೃಹ ಮತ್ತು ಅಂತರಾಳದ ಭಾಗದಲ್ಲಿ ರಾಷ್ಟ್ರಕೂಟರ ಕಾಲದ ಬಾಗಿಲವಾಡದ ತುಂಡು ಹಾಗೂ ಸ್ತಂಭಗಳಿವೆ. ಊರ ಅಗಸೆ ಬಳಿಯಿರುವ ಕಲ್ಮೇಶ್ವರ ಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಶಿವಲಿಂಗ, ನಂದಿ ಹಾಗೂ ದುಂಡಾಗಿ ಕೊರೆದ ಕಲ್ಯಾಣದ ಚಾಲುಕ್ಯರ ಕಾಲದ ಕಂಬಗಳಷ್ಟೇ ಉಳಿದಿವೆ. ಈ ಗುಡಿಯಲ್ಲಿರುವ ಪಾಶಾಂಕುಶ, ಫಲ, ಕಮಲಧಾರಿ ಆಸೀನ ಧರಣೇಂದ್ರಯಕ್ಷಮೂರ್ತಿ ಹಾಗೂ ನಾಗದಂಪತಿ ಶಿಲ್ಪ ಉಲ್ಲೇಖಾರ್ಹವಾದುದಾಗಿದೆ. ಊರ ನಡುವೆ ಇರುವ ನಾರಾಯಣದೇವರ ಗುಡಿ ಸುಮಾರು ಕ್ರಿ.ಶ. 12 ನೇ ಶತಮಾನದಲ್ಲಿ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಗುಡಿಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದ ಮೂಲೆಯಲ್ಲಿ ಕಿರು ಪ್ರಮಾಣದ ಉಮಾಮಹೇಶ್ವರ ಶಿಲ್ಪವಿದ್ದು, ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲವಾಡ ಚತುರ್‌ಶಾಖೆಯನ್ನು ಹೊಂದಿದ್ದು ನಿರಾಡಂಬರವಾಗಿದ್ದು ಗಜಲಕ್ಷ್ಮಿ ಇದೆ. ದುಂಡಾದ ಅಡ್ಡ ಕೊಯ್ತದ ನಾಲ್ಕು ಸ್ಥಂಭಗಳು ನವರಂಗವನ್ನು ಹೊತ್ತು ನಿಂತಿದ್ದು, ನಡುವಿನ ಛತ್ತನ್ನು ಸುಂದರವಾಗಿ ಬಿಡಿಸಿದ ಕಮಲದ ಮೊಗ್ಗು ಅಲಂಕರಿಸಿದೆ. ಹನುಮಂತನ ಗುಡಿ ಮುಂದೆ ಭೈರವನ ಮುರಿದ ಶಿಲ್ಪವಿದೆ. ಮತ್ತೊಂದು ರೇವಂತ ಅಥವಾ ಕುಮಾರ ರಾಮನ ಶಿಲ್ಪವಿರಬೇಕೆಂದು ತೋರುತ್ತದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ಮೈಲಾರ, ಶರಣಬಸವೇಶ್ವರ, ವೀರಣ್ಣ, ಭರಮಪ್ಪ, ಗಣಪತಿ, ದ್ಯಾಮವ್ವ, ಕೆಂಚಮ್ಮ ಹಾಗೂ ದುರ್ಗವ್ವನ ಗುಡಿಗಳಿದ್ದು ಶರಣಬಸವೇಶ್ವರ ಮಠ ಹಾಗೂ ಧರ್ಮರ ಮಠಗಳೂ ಪ್ರಸಿದ್ಧವಾಗಿವೆ. ಮುಸ್ಲಿಮರಿಗಾಗಿ ಒಂದು ಮಸೀದಿ ಹಾಗೂ ದರ್ಗಾ ಇದೆ.

**ಕಣವಿ:** ಗದಗು ತಾಲೂಕಿನ ಕಣವಿಯು (ಜನಸಂಖ್ಯೆ : 2,589) ಗದಗಿನಿಂದ 13 ಕಿಮೀ ದೂರದಲ್ಲಿದೆ. ನಿಸರ್ಗ ಸುಂದರ ಕಣಿವೆಯ ಪ್ರದೇಶವಾದುದರಿಂದ ಸಹಜವಾಗಿಯೇ ಈ ಊರಿಗೆ ಕಣವಿ ಎಂದು ಹೆಸರು ಬಂದಿದೆ. ಊರ ಮುಂಭಾಗದಲ್ಲಿರುವ ಈಶ್ವರ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ. 1105 ರ ಶಾಸನದಲ್ಲಿ ಈ ಸ್ಥಳವನ್ನು 'ಕಣಿಯ' ಎಂದು ಉಲ್ಲೇಖಿಸಲಾಗಿದೆ. ಈಶ್ವರ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ಕಕ್ಷಾಸನದಿಂದ ಕೂಡಿರುವ ತೆರೆದ ಮುಖಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ ಹಾಗೂ ಬಾಗಿಲುವಾಡವು ಪಂಚಶಾಖಾಲಂಕೃತವಾಗಿದೆ. ಇದರ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಮುಂಭಾಗದಲ್ಲಿರುವ ಅಂತರಾಳದ ಬಾಗಿಲುವಾಡವೂ ಸೂಕ್ಷ್ಮಕೆತ್ತನೆಗಳ ಅಲಂಕಾರವನ್ನು ಹೊಂದಿದೆ. ಮುಖಮಂಟಪದಲ್ಲಿ ಪೂರ್ವಕ್ಕೆ ಹಾಗೂ ಉತ್ತರಕ್ಕೆ ಎರಡು ಕಂಬಗಳಿಂದ ಅಲಂಕೃತವಾದ ಆಕರ್ಷಕ ಪ್ರವೇಶ ದ್ವಾರಗಳಿವೆ. ಕಕ್ಷಾಸನವು ಸುತ್ತುವರಿದಂತೆ ಮುಖಮಂಟಪದ ಸುತ್ತಲೂ ಇದೆ. ಮಧ್ಯದಲ್ಲಿರುವ ಚಾಲುಕ್ಯ ಶೈಲಿಯ ಕಂಬಗಳು ನವಿರಾದ ಹೊಳಪುಳ್ಳವಾಗಿವೆ. ಮೇಲೆ ಹೇಳಿರುವ ಶಾಸನವು ಮುಖಮಂಟಪದ ಎಡಭಾಗದ ಗೋಡೆಯಲ್ಲಿದ್ದು ಕ್ರಿ.ಶ. 1105 ರಲ್ಲಿ 'ಕಣಿಯ' ಅಜ್ಜಗಾವುಂಡನು ಮೂಲಸ್ಥಾನ ದೇವರಿಗೆ ಭೂದಾನ ಬಿಟ್ಟ ಬಗೆಗೆ ತಿಳಿಸುತ್ತದೆ. ಈ ದೇವಾಲಯದ ಮುಖಮಂಟಪದ ಛಾವಣಿಯ ಮುಂಭಾಗದಲ್ಲಿ ಎರಡೂ ಕಡೆ ಬಾಗಿರುವ

ಛಪ್ಪಾಗಳಿವೆ. ಬಹುಶಃ ಈ ಮಂಟಪವು ಅನಂತರ ಜೀರ್ಣೋದ್ಧಾರ ಮಾಡುವಾಗ ಸೇರಿಸಿರಬಹುದು. ಗರ್ಭಗೃಹದ ಮೇಲ್ಭಾಗದಲ್ಲಿ ದುರಸ್ತಿಗೊಂಡಿರುವ ಕದಂಬನಾಗರ ಶಿಖರವಿದೆ. ಈ ದೇವಾಲಯದಿಂದ ಸ್ವಲ್ಪ ದೂರದಲ್ಲೆ ಮೈಲಾರಲಿಂಗನ ಗುಡಿಯಿದ್ದು ಇದೂ ಸಹ ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿಯೇ ನಿರ್ಮಿತವಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ಮುಂಭಾಗದಲ್ಲಿ ತೆರೆದ ಮಂಟಪ ಮಾತ್ರ ಇವೆ. ಈ ದೇವಾಲಯದಲ್ಲಿರುವ ಶಾಸನವು ಕ್ರಿ.ಶ. 1142 ರಲ್ಲಿ ಚಾಳುಕ್ಯ ದೊರೆ ಎರಡನೇ ಜಗದೇಕಮಲ್ಲನ ಕಾಲದಲ್ಲಿ ಮೂಲಸ್ಥಾನದೇವರಿಗೆ ತೋಟದ ಪೆರ್ಜುಂಕ ಮತ್ತು ವಡ್ಡರಾವುಳಗಳನ್ನು ಬಿಟ್ಟ ದಾನದ ಬಗೆಗೆ ಉಲ್ಲೇಖಿಸುತ್ತದೆ. ಕಣವಿಯಲ್ಲಿರುವ ಇತರೆ ದೇವಾಲಯಗಳೆಂದರೇ ಹನುಮಂತ, ದ್ಯಾಮವ್ವ, ದುರ್ಗವ್ವ, ಕಲ್ಮೇಶ್ವರ (ಖಾಸಗಿ ಭೂಮಿಯಲ್ಲಿದೆ) ಮುಂತಾದವು. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾದ ಮಸೀದಿ ಇದೆ. ಪ್ರಸಿದ್ಧ ನಿಸರ್ಗ ಕವಿಯೆಂದೇ ಜನಪ್ರಿಯವಾಗಿರುವ ಚನ್ನವೀರ ಕಣವಿಯವರು ಇದೇ ಸ್ಥಳದವರು.

**ಕಣಿವೆ ಸಿದ್ಗೇರಿ:** ಹಿರೇಕೆರೂರು ತಾಲೂಕಿನ ಈ ಗ್ರಾಮವು (ಜನಸಂಖ್ಯೆ: 1,230) ರಾಣೆಬೆನ್ನೂರಿನಿಂದ ಎರಡು ಕಿಮೀ ದೂರದಲ್ಲಿದೆ. ಪಶ್ಚಿಮ ಘಟ್ಟಗಳ ದೀರ್ಘ ಬೆಟ್ಟದ ಸಾಲಿನ ನಡುವೆ ಇರುವ ಸುಂದರ ಕಣಿವೆಯ ಸ್ಥಳದಲ್ಲಿ ಬಲದ ಘಟ್ಟದ ತಪ್ಪಲಲ್ಲಿ ಒಂದು ದೇವಾಲಯವಿದೆ. ಯಾದವರ (ಕ್ರಿ.ಶ. 1265) ಶಾಸನದಲ್ಲಿ ಈ ಊರನ್ನು ರಟ್ಟಿಹಳ್ಳಿ ರಾಜ್ಯಕ್ಕೆ ಸೇರಿದ ನೂರುಂಬಾಡ ಆಡಳಿತ ವಿಭಾಗದಲ್ಲಿದ್ದ ಪರ್ವತಗಳಿಂದ ಕೂಡಿರುವ ಪ್ರಮುಖ ಸ್ಥಳವಾಗಿತ್ತೆಂದು ವರ್ಣಿಸಲಾಗಿದೆ. ಕ್ರಿ.ಶ. 12ನೇ ಶತಮಾನದ ಒಂದು ಶಾಸನದಲ್ಲಿ ಈ ಸ್ಥಳವನ್ನು ಭಗವತಿ ಘಟ್ಟ ಎಂದು ಕರೆದಿದ್ದು ಇಲ್ಲಿನ ದೇವಾಲಯವನ್ನು 'ಜಮದಗ್ನಿ ರಾಮೇಶ್ವರ ದೇವ'ರದೆಂದು (ಪರಶುರಾಮನ ಹೆಸರಿನ ಲಿಂಗ) ಕರೆದಿದೆ. ಬೆಟ್ಟದ ಮಗ್ಗುಲಲ್ಲೇ ಒಂದು ಗವಿಯಿದ್ದು ಒಳಗೆ ಮಹಿಷಮರ್ದಿನಿಯ ವಿಗ್ರಹವಿದೆ. ಇಲ್ಲಿ ಭಕ್ತಾದಿಗಳು ಪ್ರಸಾದ ಕೇಳಲು ಬರುತ್ತಾರೆ. ಆದುದರಿಂದ ಈ ಮೂರ್ತಿಗೆ ತುಂಬಾ ಹೂವಿನಿಂದ ಅಲಂಕಾರ ಮಾಡಿರುತ್ತಾರೆ. ಇದಕ್ಕೆ ಮೊದಲು ಉಪ್ಪಿನ ಮಾಳವ್ವ ಹಾಗೂ ಭೈರವರ ಚಿಕ್ಕ ಗುಡಿಗಳಿವೆ. ಹೊರಗಿನ ಕಟ್ಟೆಯಲ್ಲಿ ಕಲ್ಯಾಣದ ಚಾಳುಕ್ಯರ ಕೊನೆಯ ಕಾಲದ್ದೆಂದು ಹೇಳಬಹುದಾದ ಸೂರ್ಯನಪೀಠವಿದೆ. ಈ ದೇವಾಲಯದ ಮುಂಭಾಗದಲ್ಲಿ ಕಣಿವೆಯಿಂದ ಹಾಯುವ ರಸ್ತೆಯಿಂದಾಚೆಗೆ ಹರಿಯುತ್ತಿರುವ ಚಿಕ್ಕ ತೊರೆಯಿದೆ. ಇದಕ್ಕೆ ಕುಮದ್ವತಿ ಎಂದು ಕರೆಯುತ್ತಾರೆ. ಎದುರಿನ ಗುಡ್ಡದಲ್ಲಿ ಎತ್ತರವಾದ ಮರದ ದೀಪಮಾಲೆ ಕಂಬವಿದೆ. ಇಲ್ಲಿಂದ ಮೇಲ್ಭಾಗದಲ್ಲಿ ಬೆಟ್ಟದ ಮೇಲೆ ಹತ್ತಿ ಹೋದರೆ ಬೆಟ್ಟದ ಮರೆಯಲ್ಲಿ ಚಾಳುಕ್ಯರ ಶೈಲಿಯ ದೇವಾಲಯವಿದೆ. ಈಗ ಈ ಮಂದಿರವನ್ನು ನವ್ಯರೀತಿಯಲ್ಲಿ ಜೀರ್ಣೋದ್ಧಾರ ಮಾಡಿದ್ದರೂ ಹಿಂದಣ ಗವಿಯಲ್ಲಿ ಶಿವಲಿಂಗ ಹಾಗೂ ಮುಂಭಾಗದಲ್ಲಿ ನವರಂಗ ಮತ್ತು ಅದಕ್ಕೂ ಮುಂದೆ ವಿಶಾಲವಾದ ತೆರೆದ ಮಂಟಪವಿದೆ. ಬಹುಶಃ ನಾಥಪಂಥದವರು ಈ ದೇವಾಲಯವನ್ನು ತಮ್ಮದಾಗಿಸಿಕೊಂಡಿದ್ದರು. ಒಂದು ಗೋಡೆಯಲ್ಲಿ ಮತ್ಸ್ಯೇಂದ್ರನಾಥನ ಉಬ್ಬುಶಿಲ್ಪ ಕೆತ್ತಲಾಗಿದೆ. ನವರಂಗದಲ್ಲಿ ನಾಲ್ಕು ಚಾಳುಕ್ಯ ಶೈಲಿಯ ವೃತ್ತ ಅಡ್ಡಕೊಯ್ತದ ಕಂಬಗಳಿದ್ದು ಮಧ್ಯದಲ್ಲಿ ನಂದಿಯ ಶಿಲಾಕೃತಿಯಿದೆ. ಇಲ್ಲೇ ಚಂಡಿಕೇಶ್ವರ ಹಾಗೂ ಪರಶುರಾಮನ ವಿಗ್ರಹಗಳಿವೆ. ರಟ್ಟೀಹಳ್ಳಿ ನೂರುಂಬಾಡದ ಕದಂಬ ವಂಶದ ಬೀರದೇವನು ಹಿಂದೆ ನೀಡಿದ್ದ ದಾನವನ್ನು ಅವನ ವಂಶಸ್ಥನಾದ ಪಾಂಡ್ಯದೇವನ ಗರುಡ ಪಡೆವಳ ಚೌಂಡನು ನವೀಕರಿಸಿದನೆಂದು ಕ್ರಿ.ಶ. 12 ನೇಯ ಶತಮಾನದ ಇಲ್ಲಿನ ಶಾಸನ ಹೇಳುತ್ತದೆ. ದಾನವು 12 ಮತ್ತರ ಭೂಮಿ, 12 ಮನೆಯ ನಿವೇಶನ ಮತ್ತು ಒಂದು ತಾಣವನ್ನು ಒಳಗೊಂಡಿದ್ದು ಅದು ಜಮದಗ್ನಿ ರಾಮೇಶ್ವರ ದೇವರ ಪರವಾಗಿ ರಾಮಶಕ್ತಿ ದೇವರೆಂಬ ಸ್ಥಾನಪತಿಗೆ ಸಂದಿತು. ಈ ದೇವಾಲಯದಿಂದ ಎಡಭಾಗದಲ್ಲಿ ಮೇಲೆ ಹತ್ತಿ ಹೋದರೆ ಇನ್ನೊಂದು ಗವಿ ಹಾಗೂ ಬೆಟ್ಟದ ಮೇಲೆ ಅಕ್ಕಮಹಾದೇವಿಯ ಆಧುನಿಕ ಮೂರ್ತಿಯೂ ಆಸೀನ ಭಂಗಿಯಲ್ಲಿದೆ. ಹೊರಗಡೆ ಒಂದು ಭಿನ್ನ ಶ್ರೀನಿವಾಸ ಹಾಗೂ ಆಸೀನಳಾದ ಸರಸ್ವತಿ ವಿಗ್ರಹಗಳಿವೆ. ಪ್ರಾಕಾರದ ಗೋಡೆಯಲ್ಲಿ ಮರಾಠಾ ಶೈಲಿಯ ಗರುಡ, ಆಂಜನೇಯ, ರಾಮಲಕ್ಷ್ಮಣ, ಬೇಟೆ ದೃಶ್ಯಗಳ ಉತ್ತಮ ಕೆತ್ತನೆಯ ರೇಖಾಚಿತ್ರಗಳಿವೆ. ಬೆಟ್ಟದ ಕೆಳಗೆ ಸಿದ್ಗೇರಿ ಊರಿನಲ್ಲಿ ಸಿದ್ದೇಶ್ವರ, ಬೀರಪ್ಪ, ದುರ್ಗವ್ವ, ಗುಡಿಗಳು ಹಾಗೂ ಸಿದ್ಧಾರೂಢ ಮಠ ಇವೆಲ್ಲ ಇವೆ. ಈ ನಿಸರ್ಗ ರಮಣೀಯ ಸ್ಥಳವನ್ನು ಉತ್ತಮ ವಿಹಾರ ಸ್ಥಳವನ್ನಾಗಿ ಮಾಡಬಹುದಾಗಿದೆ.

**ಕುಂದಗೋಳ:** ತಾಲೂಕು ಕೇಂದ್ರವಾದ ಕುಂದಗೋಳ (ಜನಸಂಖ್ಯೆ : 14,709) ಧಾರವಾಡದಿಂದ ಆಗ್ನೇಯಕ್ಕೆ 26 ಕಿಮೀ ದೂರದಲ್ಲಿದ್ದು ಹುಬ್ಬಳ್ಳಿಗೆ ಸಮೀಪವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಕುಂದಗೋಳ', 'ಕುಂದಗೋಳ್', 'ಕುಂಧಾಗಲ್ಲ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ರಾಮದತ್ತ ಅನಾದಿ ಅಗ್ರಹಾರವಾಗಿದ್ದು ಸಾವಿರ ಮಹಾಜನರನ್ನು ಹೊಂದಿದ್ದು ಹಿಂದೆ ಬೆಳ್ವೊಲ-300ಕ್ಕೆ ಸೇರಿತ್ತೆಂದು ಶಾಸನಗಳು ತಿಳಿಸುತ್ತವೆ. ಈವರೆಗೆ ಇಲ್ಲಿಂದ 10 ಶಾಸನಗಳು ವರದಿಯಾಗಿದ್ದು ಇವು ಬಾಳಚಂದ್ರೇಶ್ವರ, ಸ್ವಯಂಭೂದೇವ, ದುರ್ಗಾ, ಜಿನ, ಹಾಗು ಹನುಮಂತ ದೇವರಿಗೆ ಸಂಬಂಧಿಸಿದಂತಹ ದಾನ ಶಾಸನಗಳಾಗಿವೆ. ಕ್ರಿ.ಶ. 1044 ರ

ಶಾಸನ ಬಾಳಚಂದ್ರೇಶ್ವರ ದೇವರಿಗೆ ಮಹಾಜನರು ನೀಡಿದ ದಾನದ ಬಗ್ಗೆ ತಿಳಿಸಿದರೆ, ಆರನೆಯ ವಿಕ್ರಮಾದಿತ್ಯನ ಕಾಲದ ಸುಮಾರು ಕ್ರಿ.ಶ. 1100 ರ ಶಾಸನ ಸ್ವಯಂಭೂದೇವರ ಸೂತ್ರಧಾರಿ ಬರ್ಮೋಜನ ಮಗ ಕಾಳೋಜನಿಗೆ ಕೊಟ್ಟ ದಾನದ ಬಗ್ಗೆ ತಿಳಿಸುತ್ತದೆ. ಇದರಿಂದ ಸ್ವಯಂಭೂ ದೇವಾಲಯ (ಶಂಭುಲಿಂಗ)ದ ನಿರ್ಮಾಣ ಕ್ರಿ.ಶ. 11 ನೇ ಶತಮಾನದಲ್ಲಾಗಿರಬೇಕೆಂದು ಭಾವಿಸಬಹುದು. ಕ್ರಿ.ಶ. 1240 ರ ಶಾಸನ ತಳಿಯರ ಮಲ್ಲಯ್ಯನು ದುರ್ಗಾ ದೇವಿಗೆ ಭೂದಾನ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 13 ನೇ ಶತಮಾನದ ಶಾಸನವೊಂದು ಮೂಲಸಂಘದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. 1444ರ ಶಾಸನ ವಲಭರಾಜನಿಂದ ಹನುಮಂತದೇವರ ಪ್ರತಿಷ್ಠಾಪನೆಯಾದ ವಿಷಯ ತಿಳಿಸುತ್ತದೆ.

ಮೇಲಿನ ಶಾಸನೋಕ್ತ ದೇವಾಲಯಗಳಲ್ಲಿ ಸ್ವಯಂಭೂಲಿಂಗ (ಇಂದಿನ ಶಂಭುಲಿಂಗ) ದೇವಾಲಯ ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತುಶಿಲ್ಪಕ್ಕೆ ಉತ್ತಮ ನಿದರ್ಶನವಾಗಿದ್ದು ಬಹಳ ಸುಂದರವಾಗಿದೆ. ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ಸಭಾಮಂಟಪವನ್ನು ಹೊಂದಿರುವ ಈ ಗುಡಿ ನಯನ ಮನೋಹರವಾಗಿದ್ದು ನೋಟಕರಿಗೆ ಮುದನೀಡುತ್ತದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ನಡುವೆ ಗಜಲಕ್ಷ್ಮಿ ಮೇಲೆ ಪಂಚ ಶಿಖರಗಳನ್ನು ಹೊಂದಿದೆ. ಗರ್ಭಗೃಹದ ಮುಂಬದಿಯ ಅಂತರಾಳ ಅಗಲವಾಗಿದ್ದು, ಇಕ್ಕೆಲದಲ್ಲಿ ಎರಡು ದೇವಕೋಷ್ಠಗಳನ್ನು ಹೊಂದಿದ್ದು ಇವುಗಳಲ್ಲಿ ಗಣಪತಿ ಲಕ್ಷ್ಮಿಯ ಶಿಲ್ಪಗಳಿವೆ. ಇದರ ದ್ವಾರಬಂಧ ಚತುರ್‌ಶಾಖಾಲಂಕೃತವಾಗಿದ್ದು ಮೇಲೆ ಮಕರತೋರಣವಿದ್ದು ಇಕ್ಕೆಲದಲ್ಲಿ ಜಾಲಾಂಧ್ರವಿದೆ. ಇದರ ಒಳ ಛಾವಣಿ ಸರಳವಾಗಿರುವ ಕಮಲದ ಕೆತ್ತನೆಯನ್ನು ಹೊಂದಿದೆ. ಇದರ ಮುಂಬದಿಯಲ್ಲಿ ವಿಶಾಲವಾದ ತೆರೆದ ಸಭಾಮಂಟಪವಿದ್ದು, ಇದರ ಅಂಚಿನುದ್ದಕ್ಕೂ ಕಕ್ಷಾಸನವಿದೆ. ವಿವಿಧ ಮಾದರಿಯ ಕಂಬಗಳಿಂದ ಕೂಡಿದ ಈ ಮಂಟಪದ ನಡುವಿನ ಛತ್ತಿನಲ್ಲಿರುವ ಭುವನೇಶ್ವರದ ನಡುವೆ ಅಪಸ್ಮಾರನ ಮೇಲೆ ನರ್ತಿಸುತ್ತಿರುವ ನಟರಾಜನ ಕೆತ್ತನೆಯಿದ್ದು ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಉಳಿದ ಅಂಕಣಗಳಲ್ಲಿ ವೃತ್ತಾಕಾರದ ಕಮಲ ವಿನ್ಯಾಸವಿದೆ. ಕಕ್ಷಾಸನದ ಹೊರಭಿತ್ತಿಯುದ್ದಕ್ಕೂ ರತಿಮನ್ಮಥ-ವಿಷ್ಣುವಿನ ವಿವಿಧ ರೂಪಗಳು, ದಶಾವತಾರ, ಮಹಿಷಮರ್ದಿನಿ, ಬ್ರಹ್ಮ ಗಣಪತಿ, ಹಾಗೂ ಶಿವನ ಸುಂದರ ಕೆತ್ತನೆಗಳಿವೆ. ಸಭಾಮಂಟಪದ ಛಾವಣಿ ಚಪ್ಪಟೆಯಾಗಿದ್ದು ಇಳಿಜಾರಾದ ಅಂಚನ್ನು ಹೊಂದಿದೆ. ಈ ಗುಡಿಯ ಶಿಖರ ಇತ್ತೀಚಿನದ್ದಾಗಿದೆ. ಈ ದೇವಾಲಯದ ಪ್ರಾಕಾರದ ಬಾಗಿಲವಾಡವೂ ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದೆ. ಇದರ ಬುಡದಲ್ಲಿರುವ ಮರಾಠಿ ಶಾಸನ ಈ ಗುಡಿಯ ಜೀರ್ಣೋದ್ಧಾರವನ್ನು ಕ್ರಿ.ಶ. 1867ರಲ್ಲಿ ಮಾಡಿದ ವಿಷಯವನ್ನು ತಿಳಿಸುತ್ತದೆ. ಈ ಗುಡಿಯು ಸಂರಕ್ಷಿತ ಸ್ಮಾರಕವಾಗಿದೆ.

ಇದರ ಜೊತೆಗೆ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ಗುಡಿಗಳಾದ ಗಂಗಾಧರೇಶ್ವರ, ಬ್ರಹ್ಮೇಶ್ವರ, ಭೂತೇಶ್ವರ, ನಂದಿಕೇಶವ, ಕಲ್ಮೇಶ್ವರ, ಹರಿಹರೇಶ್ವರ ಮತ್ತು ಹನುಮಂತ ಗುಡಿಗಳಿದ್ದು ಇವುಗಳ ಪರಿಸರದಲ್ಲಿ ಕಲ್ಯಾಣದ ಚಾಳುಕ್ಯರ ಕಂಬ, ಬಾಗಿಲವಾಡ, ಮಕರತೋರಣ, ಲಿಂಗ, ನಂದಿ, ಭೈರವ, ಜಿನ ಮುಂತಾದ ಅವಶೇಷಗಳು ಕಂಡು ಬರುತ್ತವೆ. ಇವುಗಳ ಜೊತೆಗೆ ಊರಲ್ಲಿ ದ್ಯಾಮವ್ವ, ದುರ್ಗವ್ವ, ದತ್ತಾತ್ರೇಯ, ವೀರಭದ್ರ, ಸೋಮೇಶ್ವರ, ವಿಠೋಬ, ಎಲ್ಲಮ್ಮ ಮೈಲಾರಲಿಂಗ, ಮೂಕಬಸಪ್ಪ, ವೆಂಕಟೇಶ, ಬೀರದೇವರು ಮತ್ತು ಮಾರಮ್ಮನ ಗುಡಿಗಳಲ್ಲದೆ ಪಂಚಗೃಹಮಠ, ಚೌಕಿಮಠ, ಕೂಡ್ಲಿ ಶಂಕರಮಠಗಳಿವೆ. ಊರಲ್ಲಿ ಕಾರಹುಣ್ಣಿಮೆಯಂದು ಬ್ರಹ್ಮದೇವರ ಜಾತ್ರೆ, ಹನುಮಜಯಂತಿಯಂದು ಹನುಮಂತನ ಜಾತ್ರೆ ಮತ್ತು ಮಲ್ಲಿಕಾರ್ಜುನ ರಥೋತ್ಸವ ಜರುಗುತ್ತವೆ. ಹೈದರಾಲಿ ಕಾಲದ ಸುಂದರವಾದ ಜುಮ್ಮಾ ಮಸೀದಿ ಇದೆ. ಇದಕ್ಕೆ ಸೇರಿದಂತೆ ಎರಡು ಮಸೀದಿಗಳೂ ಹಾಗೂ ಎರಡು ದರ್ಗಾಗಳೂ ಇದ್ದು, ರಜಬ್ ತಿಂಗಳಲ್ಲಿ ಉರುಸು ನಡೆಯುತ್ತದೆ. ಕುಂದಗೋಳದ ಪುರಸಭೆ 1877ರಷ್ಟು ಪ್ರಾಚೀನದ್ದಾಗಿದ್ದು 1948 ರವರೆಗೆ ಜಮಖಂಡಿ ಪಟವರ್ಧನರ ಸಂಸ್ಥಾನಕ್ಕೆ ಸೇರಿತ್ತು.

**ಕುಳೇನೂರು:** ಹಾವೇರಿ ತಾಲೂಕಿನ ಕುಳೇನೂರು (ಜನಸಂಖ್ಯೆ : 1,906) ಹಾವೇರಿಯಿಂದ ನೈರುತ್ಯಕ್ಕೆ 14 ಕಿಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕುಳುವನೂರು' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಬಾಸವೂರು-140 ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕ್ರಿ.ಶ. 1028ರ ಶಾಸನ ಕುಂದರಾಜನು ಬನವಾಸಿ-12,000 ನಾಡನ್ನಾಳುತ್ತಿದ್ದಾಗ ಅವನ ಮಡದಿ ಕುಂದಲದೇವಿ ದೇವಾಲಯಕ್ಕೆ ಭೂದಾನ ಮಾಡಿದ ಅಂಶವನ್ನು ತಿಳಿಸಿದರೆ, ಕ್ರಿ.ಶ. 14-15 ನೇ ಶತಮಾನದ ಮತ್ತೊಂದು ಶಾಸನ ಕುಳುವನೂರ ಬಾರಿಕ (ಅಂಬಿಗ) ಕಾಸೆಬೋವನ ಹೆಂಡತಿ ಬನದ ಬೋವತಿ ಪ್ರತಿಷ್ಠಾಪನೆಯ ರಾಮಯ ದೇವರ ನಿಲಿಸಿದಳೆಂದು ಹೇಳುತ್ತಿದ್ದು, ಇದರಲ್ಲಿ ಕುಮಾರ ರಾಮನಾಥನ ಉಬ್ಬುಶಿಲ್ಪವನ್ನು ಮೇಲುಪಟ್ಟಿಕೆಯಲ್ಲಿ ಕೆತ್ತಿರುವುದು ಮಹತ್ವದ ಅಂಶವಾಗಿದೆ. ಮೇಲಿನ ಶಾಸನದಲ್ಲಿ ಉಕ್ತವಾಗಿರುವ ಗುಡಿ, ಇಂದಿನ ಈಶ್ವರ ಗುಡಿಯಾಗಿದೆ. ಗರ್ಭಗೃಹ, ಅರ್ಧಮಂಟಪ

ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ಮಂಟಪವಿದ್ದು ನಡುವೆ ಜಾಲಂಧ್ರವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯಕ್ಕೆ ನವರಂಗದ ದಕ್ಷಿಣದಲ್ಲಿ ಪ್ರವೇಶ ದ್ವಾರವಿದೆ. ಇಟ್ಟಿಗೆಯ ರಚನೆಯಾಗಿರುವ ಇದರ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡ ನಿರಾಡಂಬರವಾದ ತ್ರಿಶಾಖಾಪಟ್ಟಿಕೆ ಹೊಂದಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ಅರ್ಧಮಂಟಪದ ವೃತ್ತಾಕಾರದ ಛತ್ತಿನಲ್ಲಿ ಕಮಲವನ್ನು ಬಿಡಿಸಿದ್ದಾರೆ. ನವರಂಗದಲ್ಲಿ ಸಪ್ತಮಾತೃಕಾ, ನಾಗದಂಪತಿ, ಉಮಾಮಹೇಶ್ವರ ಹಾಗೂ ರತಿ-ಮನ್ಮಥರ ಸುಂದರ ಶಿಲ್ಪಗಳಿವೆ. ನವರಂಗದ ಪ್ರವೇಶ ದ್ವಾರದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿದೆ. ಈ ಬಾಗಿಲವಾಡದ ಮೇಲೆ ಮೂರು ಕಿರು ಮಂಟಪಗಳಲ್ಲಿ ಗಣಪತಿ, ಶಿವಲಿಂಗ ಮತ್ತು ಲಕ್ಷ್ಮಿಯನ್ನು ಕೆತ್ತಿದ್ದಾರೆ. ಆಸೀನ ಮೈಲಾರ - ಮಾಳಚಿಯರ ಸುಂದರ ಶಿಲ್ಪವಿದೆ. ಗುಡಿಯ ಪೂರ್ವ ದಿಕ್ಕಿನಲ್ಲಿ ಸೂರ್ಯನ ಸಂಕೇತವಾದ ಕಿರಣಸ್ತಂಭವಿದೆ. ಈ ದೇವಾಲಯದ ಶಿಖರ ಜೀರ್ಣಾವಸ್ಥೆಯಲ್ಲಿದೆ. ಇಲ್ಲಿರುವ ಸಂಗೂರು ಸಕ್ಕರೆ ಕಾರ್ಖಾನೆ ಬಳಿ ಬೈಲು ಬಸವೇಶ್ವರ ಗುಡಿಯಿದೆ. ಈ ಗುಡಿಯ ಗರ್ಭಗೃಹ ಮತ್ತು ಅರ್ಧಮಂಟಪ ಕಲ್ಯಾಣದ ಚಾಲುಕ್ಯರ ಕಾಲದ ರಚನೆಯಾಗಿದ್ದು ಉಳಿದೆಲ್ಲವೂ ನಂತರದ ಸೇರ್ಪಡೆಯಾಗಿದೆ. ಇದರ ದ್ವಾರಬಂಧಗಳು ತ್ರಿಶಾಖೆಯನ್ನು ಹೊಂದಿದ್ದು ಗಜಲಕ್ಷ್ಮಿ ಕೆತ್ತನೆಯಿದೆ. ಗರ್ಭಗೃಹದಲ್ಲಿ ಸ್ವಯಂಭೂ ಬಸವಣ್ಣನ ಶಿಲೆಗಳಿವೆ. ಅರ್ಧಮಂಟಪದ ಛತ್ತು ಗಜಚರ್ಮಾಂಬರಧಾರಿ ನಟರಾಜನ ಶಿಲ್ಪದ ಜೊತೆಗೆ ಅಷ್ಟದಿಕ್ಪಾಲಕರನ್ನೂ ಹೊಂದಿದೆ. ಊರಲ್ಲಿ ಹನುಮಂತ, ಬಸವಣ್ಣ, ವೀರಭದ್ರ, ದುರ್ಗ, ಮೈಲಾರ ಮುಂತಾದ ದೇವಾಲಯಗಳಿವೆ.

**ಕುರ್ತಕೋಟಿ:** ಗದಗ ತಾಲೂಕಿನ ಪ್ರಾಚೀನ ಸ್ಥಳವಾದ ಕುರ್ತಕೋಟಿಯು (ಜನಸಂಖ್ಯೆ : 9,150) ಗದಗಿನಿಂದ ನೈರುತ್ಯಕ್ಕೆ 16 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ ಕುರತ್ತಕುಂಟೆ, 'ಕುರುತ್ತಕೊಟ್ಟೆ', 'ಅಗ್ರಹಾರ ಕುರುತ್ತಕೊಂಟೆ', ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ಹಿಂದೆ ಬೆಳ್ವೊಲ-300 ಕ್ಕೆ ಸೇರಿತ್ತು. ಈ ಊರಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ಕಲ್ಮೇಶ್ವರ ಗುಡಿ ಹಿಂದಿರುವ ಶಾಸನ ಬಾದಾಮಿ ಚಾಲುಕ್ಯ ಅರಸ ವಿಜಯಾದಿತ್ಯನ ಕಾಲದ್ದಾಗಿದ್ದು, ಲೋಕತಿನಿಮಡ್ಡಿ ಕುರುತ್ತಕುಂಟೆಯನ್ನಾಳುತ್ತಿದ್ದಾಗ, ಮುಪಣನೆಂಬಾತನು ಮಾಡಿಸಿದ ಮಹಾದೇಗುಲಕ್ಕೆ ದಾನ ಕೊಟ್ಟ ಅಂಶವನ್ನು ತಿಳಿಸಿದರೆ, ವೀರಭದ್ರ ಗುಡಿಯಲ್ಲಿರುವ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕ್ರಿ.ಶ. 946ರ ಶಾಸನ ನನ್ನಿಯ ಗಂಗ ಬೂತಯ್ಯನು ಪುಲಿಗೆರೆ-300, ಬೆಳ್ವೊಲ-300 ಆಳುತ್ತಿದ್ದಾಗ, ಕುರುತ್ತಕುಂಟೆಯ ಗೌಡ ಲೋಕಯ್ಯನು ಭುಜಂಗಭಟಾರರಿಗೆ ವಂದಿಸಿ, ಮೂಲಸ್ಥಾನ ದೇವರಿಗೆ ಹಾಗೂ ಆದಿತ್ಯ ದೇವರಿಗೆ ತಲಾ ಹನ್ನೆರಡು ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಂದಿನ ವೀರಭದ್ರಗುಡಿಯೇ ಶಾಸನೋಕ್ತ ಆದಿತ್ಯಗುಡಿಯಾಗಿದ್ದು, ಇದರ ಮುಂದಿರುವ ಈಶ್ವರ ಗುಡಿಯೇ ಶಾಸನೋಕ್ತ ಮೂಲಸ್ಥಾನ ದೇವರ ಗುಡಿ ಇರಬೇಕೆಂದು ತರ್ಕಿಸಬಹುದಾಗಿದೆ. ಸವಳು ನೀರಬಾವಿ ಬಳಿಯಿರುವ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1082 ರ ಶಾಸನ ಯುವರಾಜ ಜಯಸಿಂಗದೇವನ ಆಳ್ವಿಕೆಯನ್ನು ಪ್ರಸ್ತಾಪಿಸುತ್ತ ಅಗ್ರಹಾರ ಕುರುತ್ತಕುಂಟೆಯ 200 ಮಹಾಜನರಿಗೆ ಮಹಾಪ್ರಧಾನ ವಾಮದೇವಯ್ಯನು ತಪ್ಪುದಂಡವಾಗಿ ಬರುವ 'ಇರಿದಡೆ 12 ಪಣ, ಬೈದರೆ ಆರು ಪಣ, ನೆರೆ ಬೈದರೆ ಮೂರು ಪಣ, ದಂಡವನ್ನು ಕಡಲೆಗೆರೆಗೆ' ವಿನಿಯೋಗಿಸುವಂತೆ ಕೋರಿ ದಾನ ಬಿಟ್ಟ ಸಂದರ್ಭದಲ್ಲಿ, ಕೆರೆಯ ನಿರ್ವಹಣೆಗೆಂದು ಊರ 200ಮಹಾಜನರು ಹಾಗು ಶಂಕಿಮಯ್ಯನು ಒಟ್ಟು 16 ಮತ್ತರು ಭೂಮಿಯನ್ನು 24 ಗೇಣಿನ ಕೋಲಲ್ಲಿ ಅಳೆದು ದಾನ ಕೊಟ್ಟ ಅಂಶವನ್ನೂ ತಿಳಿಸುತ್ತದೆ. ಜೊತೆಗೆ ಅಣುವೇಶ್ವರ ದೇವರಿಗೆ ಕೂಡ ಮಹಾಜನರು ದಾನ ಕೊಟ್ಟ ವಿಷಯವನ್ನೂ ತಿಳಿಸುತ್ತದೆ. ಇದನ್ನು ರಚಿಸಿದ ಕವಿ ಪೊಂಬೊಳಲ (ಹೊಂಬಳ) ನಾಗದೇವ ಬುಧನೆಂದು ಹೇಳುತ್ತದೆ.

ವೀರೂಪಾಕ್ಷ ದೇವಾಲಯದ ಗೋಡೆಯಲ್ಲಿ ಸೇರಿ ಹೋಗಿರುವ ಕ್ರಿ.ಶ. 1087ರ ಶಾಸನ ನಾವಿದ ದಾಸಿಮಯ್ಯ ನಿರ್ಮಿಸಿದ ದಾಸೇಶ್ವರ ದೇವಾಲಯಕ್ಕೆ ಜರಗರ ದೋಣಿ ಸಾಸಿರ್ವರು, ತೆಲ್ಲಿಗರು, ಮಹಾಜನ ಇನ್ನೂರ್ವರು ಹಾಗೂ ದಾಸಿಮಯ್ಯ ನಾನಾ ರೀತಿಯ ದಾನಗಳನ್ನು ನೀಡಿದ ಅಂಶವನ್ನು ತಿಳಿಸುತ್ತದೆ. ಕೆರೆದಂಡೆ ಮೇಲಿರುವ ಕ್ರಿ.ಶ. 1087ರ ಮತ್ತೊಂದು ಶಾಸನ ಎರ್ಮೆಗನೂರ ಬಳಿಯ ಕುರುಪಟ್ಟಿಯಲ್ಲಿ ಸುಂದರವಾದ ಸರಸ್ವತಿ ದೇವಾಲಯವನ್ನು ನಿರ್ಮಿಸಿ ಸಿರಿಗುಪ್ಪೆಯಲ್ಲಿ ಮರಕಟ್ಟಿನ ದೊಡ್ಡಬಾವಿ ಹಾಗೂ ಕೆರೆಯನ್ನು ಕಟ್ಟಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ ಬೆಳ್ಳಿಯರ ಎರೆಯಮ್ಮನು ಕುರುತ್ತಕುಂಟೆಯಲ್ಲಿ ಎರೆವಿಷ್ಣುಕೇಶವ ದೇವರ ಗುಡಿ ನಿರ್ಮಿಸಿ, ದೇವರ ಪೂಜಾವಿಧಿಗೆಂದು 20 ಮತ್ತರು ಭೂಮಿಯನ್ನೂ, ಅಗ್ನಿಷ್ಟಗೆಯ ಮಠಕ್ಕೆಂದು ನಾಲ್ಕುಮತ್ತರು ಭೂಮಿಯನ್ನೂ

ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನವನ್ನು ರಚಿಸಿದವನೂ ಹೊಂಬಳದ ನಾಗದೇವನೇ. ಇಲ್ಲಿ ವಿರೂಪಾಕ್ಷ ದೇವಾಲಯದ ಕಂಬದ ಮೇಲಿರುವ ಕ್ರಿ.ಶ. 1126ರ ಶಾಸನ ದಾಸೇಶ್ವರ ದೇವರ ಅಂಗಭೋಗಕ್ಕೆಂದು ಜರಗಿನ ತೆರೆಯನ್ನು ಕೇಶರಾಜನು ಬಿಟ್ಟಿದ್ದನ್ನು ದೋಣಿ ಸಾಸಿರ್ವರು ಹಾಗೂ 200 ಮಹಾಜನರು ನಡೆಸುವುದಾಗಿ ಪಡೆದ ಅಂಶವನ್ನು ತಿಳಿಸುತ್ತದೆ. ಇದರಿಂದ ಶಾಸನೋಕ್ತ ದಾಸೇಶ್ವರ ಗುಡಿ, ಇಂದಿನ ವಿರೂಪಾಕ್ಷ ಗುಡಿ ಇರಬೇಕೆಂಬ ಅಭಿಪ್ರಾಯಕ್ಕೆ ಬರಬಹುದೆಂದು ತೋರುತ್ತದೆ. ನರಸಿಂಹಸ್ವಾಮಿ ಗುಡಿಯ ಮುಂದಿರುವ ಕ್ರಿ.ಶ. 1138 ರ ಶಾಸನ ತಳಾರ ಬೊಪ್ಪನಾಯಕನು ನರಸಿಂಹದೇವರ ನಂದಾದೀಪಕ್ಕೆಂದು ಮಹಾಜನರ ಒಪ್ಪಿಗೆ ಪಡೆದು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಲ್ಲಿ ಉಕ್ತವಾಗಿರುವ ಗುಡಿಗಳೆಲ್ಲವನ್ನೂ ಕುರ್ತಕೋಟಿಯಲ್ಲಿ ನಾವಿಂದು ನೋಡಬಹುದಾಗಿದೆ. ಊರ ನಡುವೆ ಎತ್ತರವಾದ ಸ್ಥಳದಲ್ಲಿರುವ ವೀರಭದ್ರ ಗುಡಿಯೇ ಶಾಸನೋಕ್ತ ಆದಿತ್ಯ ಗುಡಿಯಾಗಿರಬೇಕು. ಏಕೆಂದರೆ ಇದು ಪಶ್ಚಿಮಾಭಿಮುಖವಾಗಿದ್ದು, ಈಶ್ವರ (ಶಾಸನೋಕ್ತ ಮೂಲಸ್ಥಾನ ದೇವರು) ಗುಡಿಗೆ ಎದುರಾಗಿರುವುದರಿಂದ ಆ ರೀತಿ ಊಹಿಸಬಹುದಾಗಿದೆ. ಗರ್ಭಗೃಹ, ಅರ್ಧಮಂಟಪ, ನವರಂಗವನ್ನು ಹೊಂದಿದ್ದ ಈ ಗುಡಿಯ ಕೆಲವುಭಾಗ ಹಾಳಾಗಿದ್ದು ಜೀರ್ಣೋದ್ಧಾರ ಸಮಯದಲ್ಲಿ ಅದನ್ನು ಕೈಬಿಟ್ಟಿರುವಂತೆ ತೋರುತ್ತದೆ. ಗರ್ಭಗೃಹದಲ್ಲಿ ಇಂದು ತೀರ್ಥಂಕರ ಪೀಠದ ಮೇಲೆ ವೀರಭದ್ರನ ಮೂರ್ತಿ ಇರುವುದರಿಂದ ಜೈನ ಬಸದಿ ಇದ್ದಿರಬಹುದೆಂದು ಹೇಳಬಹುದು. ಗರ್ಭಗೃಹದ ಬಾಗಿಲವಾಡ ಅಲಂಕಾರಿಕ ಪಂಚಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ಇಕ್ಕೆಲದಲ್ಲಿ ದ್ವಾರಪಾಲಕರನ್ನೂ ರತಿ-ಮನ್ಮಥರನ್ನೂ ಕೆತ್ತಿದ್ದಾರೆ. ಈ ದೇವಾಲಯದ ಮುಂಬದಿಯ ತೆರೆದ ಮಂಟಪವನ್ನು ಹೊತ್ತು ನಿಂತಿರುವ ಕಂಬಗಳಲ್ಲಿ ರಾಷ್ಟ್ರಕೂಟ ಪ್ರಭಾವ ಇನ್ನೂ ಉಳಿದಿರುವ ಅಂಶವನ್ನು ಗಮನಿಸಬಹುದಾಗಿದೆ. ಗರ್ಭಗೃಹವನ್ನು ಕದಂಬನಾಗರ ಶಿಖರ ಅಲಂಕರಿಸಿದೆ. ಈ ಗುಡಿಯ ಮುಂದಿರುವ ಈಶ್ವರಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಬೃಹತ್ತಾದ ಲಿಂಗವಿದೆ. ಈ ಗುಡಿಗಳ ಆವರಣದಲ್ಲೇ ಸುಮಾರು 4.5 ಅಡಿ ಎತ್ತರದ ಗಣಪತಿ ಹಾಗೂ ಉಮಾಮಹೇಶ್ವರ, ಕೇಶವ, ಮಹಿಷಮರ್ದಿನಿ ಹಾಗೂ ದಕ್ಷನ ಚಿಕ್ಕ ಸುಂದರ ಶಿಲ್ಪಗಳಿವೆ. ಇಲ್ಲಿನ ಕ್ರಿ.ಶ. 10 ನೇಯ ಶತಮಾನದ ವೀರಗಲ್ಲೊಂದು ಬಹಳ ವಿಶಿಷ್ಟವಾದ ಗೋಪುರ ಕೆತ್ತನೆಯನ್ನು ಹೊಂದಿದ್ದು ಹಿಂಬದಿಯಲ್ಲಿ ಶಾಸನವಿದೆ. ಈಶ್ವರಗುಡಿಯ ಹಿಂಬದಿಯಲ್ಲಿ ಸಪ್ತಮಾತೃಕಾ ಶಿಲ್ಪವಿದ್ದು ಬಹಳ ಚೆನ್ನಾಗಿ ಕಂಡರಿಸಿದ್ದಾರೆ. ಈ ಪರಿಸರದಲ್ಲೇ ಜೋಡಿ ಆನೆಗಳು ಕುಂಭಾಭಿಷೇಕ ಮಾಡುತ್ತಿರುವ ಗಜಲಕ್ಷ್ಮಿ (ಬಾದುಬ್ಬೆ, ಗಜಗೌರಿ)ಯ ಆಕರ್ಷಕ ಶಿಲ್ಪವಿದೆ. ಕೆರೆ ದಂಡೆಯಲ್ಲಿರುವ ಉಗ್ರನರಸಿಂಹ ದೇವಾಲಯ ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ ಗರ್ಭಗೃಹ ಹಾಗು ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಸುಮಾರು ಮೂರಡಿ ಎತ್ತರದ ಸುಂದರ ಉಗ್ರನರಸಿಂಹ ಶಿಲ್ಪವಿದೆ. ನವರಂಗದ ಕಂಬದ ಮೇಲೆ ಆನೆ, ಕುದುರೆ, ಸಿಂಹ, ಟಗರು ಕಾಳಗ, ಕುಬ್ಜ, ಹಾಗೂ ನರ್ತಕಿಯರನ್ನು ಕೆತ್ತಲಾಗಿದೆ. ಚಕ್ರ, ಶಂಖ, ಖಡ್ಗ, ಗುರಾಣಿ ಧರಿಸಿ ತೊಡೆಯ ಮೇಲೆ ರಾಕ್ಷಸನನ್ನು ಅಡ್ಡಲಾಗಿ ಕೆಡವಿಕೊಂಡು ಎರಡು ಕೈಯಿಂದಲೂ ಕರುಳು ಬಗೆಯುತ್ತಿರುವ ಷಡ್ಭುಜ ನರಸಿಂಹನ ಉಗ್ರತೆಯನ್ನು ಶಿಲ್ಪಿ ನೈಜವಾಗಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಇದರ ಮುಂದಿರುವ ಶಂಕರಲಿಂಗದೇವರ (ಈಶ್ವರ) ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು ಜೀರ್ಣೋದ್ಧಾರಗೊಂಡಿದ್ದರೂ, ಮೂಲ ಸ್ವರೂಪ ಕೆಟ್ಟಿಲ್ಲ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಗೂಡೊಂದರಲ್ಲಿ ಸುಂದರವಾದ ಮಹಿಷಮರ್ದಿನಿ ಶಿಲ್ಪವಿದೆ. ಊರಲ್ಲಿ ಮಂಕಮ್ಮ (ಗಜಗೌರಿ)ನ ಗುಡಿ ಮುಂದೆ ಮುದ್ದಾದ ರಾಷ್ಟ್ರಕೂಟ ಕಾಲದ ಸಪ್ತಮಾತೃಕಾ, ಮುಕ್ಕಾದ ವಿಷ್ಣು, ಕಲ್ಯಾಣದ ಚಾಲುಕ್ಯರ ಕಾಲದ ಚಾಮುಂಡಿ, ಗಣಪತಿ ಶಿಲ್ಪಗಳಿವೆ. ಇವುಗಳೊಂದಿಗೆ ಊರಲ್ಲಿರುವ ವಿರೂಪಾಕ್ಷ, ಪರ್ತುಮಲ್ಲಿಕಾರ್ಜುನ, ಕಲ್ಮೇಶ್ವರ, ಬೀರದೇವರು, ಹನುಮಂತ, ಪ್ರಭುದೇವರು, ಬಸವಣ್ಣ, ವಿಠಲ, ಮೈಲಾರ, ಈಶ್ವರ, ದ್ಯಾಮವ್ವ, ದುರ್ಗವ್ವ, ಕನಕವ್ವ ಹಾಗೂ ಮಾಯವ್ವನ ಗುಡಿಗಳನ್ನೂ ಹೆಸರಿಸಬಹುದಾಗಿದೆ. ಪ್ರಭು ದೇವರ ಜಾತ್ರೆ ದವನದ ಹುಣ್ಣಿಮೆಯಂದೂ, ವೀರಭದ್ರನ ಗುಗ್ಗಳ ಶ್ರಾವಣದಲ್ಲೂ, ಬೀರದೇವರ ಜಾತ್ರೆ 12 ವರ್ಷಕ್ಕೆ ಒಮ್ಮೆ ನಡೆಯುತ್ತದೆ. ಊರಲ್ಲಿ ಎರಡು ಮಸೀದಿಗಳೂ ಹಾಗೂ ಮೆಹಬೂಬು ಸುಬಾನಿಯ ದರ್ಗಾವಿದ್ದು ಜನವರಿ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಕುಮ್ಮೂರು:** ಬ್ಯಾಡಗಿ ತಾಲೂಕಿನ ಕುಮ್ಮೂರು (ಜನಸಂಖ್ಯೆ : 1,320) ಬ್ಯಾಡಗಿಯಿಂದ 16 ಕಿಮೀ ದೂರದಲ್ಲಿದೆ. ಈ ಊರಿನಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ರಾಮಲಿಂಗೇಶ್ವರ ದೇವಾಲಯವಿದೆ. ಈ ಸ್ಥಳವು ಕ್ರಿ.ಶ. 1195ರ ಶಾಸನದಲ್ಲಿ ಕುಮ್ಮೂರು ಗ್ರಾಮವೆಂದೇ ಉಲ್ಲೇಖಗೊಂಡಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿದೆ. ಗರ್ಭಗೃಹದ ದ್ವಾರಬಂಧವು ಚಾಲುಕ್ಯ ಶೈಲಿಯ ಅಲಂಕಾರವನ್ನು ಹಾಗೂ ಒಳಗೆ ಚಾಲುಕ್ಯ ಪಾಣಿಪೀಠದ ಮೇಲೆ

ಎತ್ತರವಾದ ಲಿಂಗವನ್ನು ಹೊಂದಿದೆ. ಅರ್ಧಮಂಟಪದ ದ್ವಾರದ ಲಲಾಟದ ಮೇಲ್ಭಾಗದಲ್ಲಿ ಆಕರ್ಷಕ ಮಕರತೋರಣವನ್ನು ಹಾಗೂ ಎರಡು ಪಕ್ಕಗಳಲ್ಲಿ ಅಲಂಕೃತ ಜಾಲಂಧ್ರಗಳನ್ನು ಕೊರೆಯಲಾಗಿದೆ. ನವರಂಗದ ಮಧ್ಯದಲ್ಲಿ ಚಾಳುಕ್ಯರ ಶೈಲಿಯ ನಾಲ್ಕು ಬಹುಕೋನಾಕಾರವಾದ ಕಂಬಗಳಿವೆ. ನವರಂಗದ ಬಲಭಾಗದಲ್ಲಿ ಇನ್ನೊಂದು ಗರ್ಭಗೃಹ (ಕೊಠಡಿ)ವಿದ್ದು ಬರಿದಾಗಿದೆ. ಇಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ ಹಾಗೂ ಇನ್ನೊಂದು ಚಾಳುಕ್ಯ ಲಕ್ಷಣವುಳ್ಳ ಶಿವಲಿಂಗವಿದೆ. ಈ ದೇವಾಲಯವು ವಿಶಾಲವಾದ ಕಟ್ಟಡವಾಗಿದ್ದು ಗರ್ಭಗೃಹದ ಮೇಲಿರುವ ಕದಂಬ ನಾಗರ ಶಿಖರವೂ ಸೇರಿದಂತೆ ಅನಂತರ ಜೀರ್ಣೋದ್ಧಾರಗೊಂಡಿದೆ. ಹೊರಗಡೆ ಭಿತ್ತಿಗಳು ಬರಿದಾಗಿವೆ. ಆದರೆ ಅಲ್ಲಲ್ಲಿ ದೇವಾಲಯದ ಶಿಖರಗಳ ಕಿರುಮಾದರಿಗಳನ್ನು ಕೆತ್ತಲಾಗಿದೆ. ದೇವಾಲಯದಲ್ಲಿ ಒಂದು ಶಾಸನವಿದ್ದು ಅಸ್ಪಷ್ಟವಾಗಿದೆ. ಊರಿನಲ್ಲಿ ಕೆರೆ ದಂಡೆಯಲ್ಲಿ ಒಂದು ಮಾರುತಿ ಗುಡಿ, ಒಂದು ವೀರಗಲ್ಲು, ಎದುರಿಗೆ ಬಿದ್ದ ಪ್ರಾಚೀನ ಅವಶೇಷವಿದೆ. ಬಲಗಡೆ ಇನ್ನೊಂದು ಶಿಥಿಲವಾದ ಬಸವಣ್ಣ ಗುಡಿಯ ಅವಶೇಷವಿದೆ. ರಾಮಲಿಂಗ ದೇವಾಲಯದ ಹಿಂಭಾಗದಲ್ಲಿರುವ ಶಾಸನವು ಚಾಳುಕ್ಯ ನಾಲ್ಕನೇ ಸೋಮೇಶ್ವರನ ಕಾಲದ್ದು (ಕ್ರಿ.ಶ. 1195). ಮಂಡಲೇಶ್ವರ ಜಗದಳ ಚಟ್ಟಮ ದೇವರಸನು, ಮಹಾಪಸಾಯಿತ ಬಾಗಗಾವುಂಡನಿಂದ 200 ಗದ್ಯಾಣ ಪಡೆದು ಕುಮ್ಮೂರು ಗ್ರಾಮಕೊಟ್ಟ ಬಗೆಗೆ ಉಲ್ಲೇಖಿಸುತ್ತದೆ. ಸ್ಥಳೀಯ ಹನುಮಂತದೇವರ ಗುಡಿಯ ಎದುರಿಗಿರುವ ವೀರಗಲ್ಲು ಶಾಸನವು ಅಸ್ಪಷ್ಟವಾಗಿದ್ದು ಚಂದ್ರಗುತ್ತಿಯ ಮಲ್ಲರಸ ಒಡೆಯನು ಬಾಚಯನಾಯಕನ ಮೇಲೆ ದಾಳಿಮಾಡಿದ ವಿವರವನ್ನು ತಿಳಿಸುತ್ತದೆ. ಊರಿನ ಸಮೀಪವಿರುವ ಗುಡ್ಡದ ಮೇಲೆ ಸಾಧಾರಣವಾದ ಚೆನ್ನಕೇಶವ ಗುಡಿ ಇದೆ. ಊರಿನ ಇತರ ದೇವಾಲಯಗಳೆಂದರೆ ದ್ಯಾಮವ್ವ, ಮೈಲಾರಲಿಂಗ, ಕಲ್ಮೇಶ್ವರ (ಹಳೆಯದು, ಆದರೆ ಜೀರ್ಣೋದ್ಧಾರವಾಗಿದೆ), ವೀರಭದ್ರ, ದುರ್ಗಮ್ಮ ಮಾತಂಗಿಯಮ್ಮ ಉಡಸಲಮ್ಮ ಮತ್ತು ಚೌಡಮ್ಮ

**ಕೂಡಲ:** ಹಾನಗಲ್‌ನಿಂದ ಈಶಾನ್ಯಕ್ಕೆ 28 ಕಿಮೀ ದೂರದಲ್ಲಿರುವ ಹಾನಗಲ್ ತಾಲೂಕಿನ ಈ ಊರು (ಜನಸಂಖ್ಯೆ : 1,532) ವರದಾ ಮತ್ತು ಧರ್ಮಾನದಿಗಳ ಕೂಡು ಸ್ಥಳದಲ್ಲಿರುವುದರಿಂದ ಇದಕ್ಕೆ 'ಕೂಡಲ' ಎಂಬ ಹೆಸರು ಬಂದಿದ್ದು ಇಲ್ಲಿನ ಗುರುನಂಜೇಶ್ವರ ಮಠ ಬಹಳ ಪ್ರಸಿದ್ಧವಾಗಿದೆ. ಹೊಳೆ ದಂಡೆಯ ಮೇಲೆ ಮಠದ ಎದುರು ಸಂಗಮೇಶ್ವರ ಗುಡಿಯಿದೆ. ಈ ಗುಡಿ ಗರ್ಭಗೃಹ ಹಾಗೂ ವಿಶಾಲವಾದ ಮುಖಮಂಟಪವನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮುಖಮಂಟಪದಲ್ಲಿ ನಂದಿಯಿದೆ. 16 ಕಂಬಗಳ ಮೇಲೆ ನಿಂತಿರುವ ಈ ಸಭಾಮಂಟಪವು ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಹೊಂದಿದೆ. ಇದರ ಶಿಖರ ಇತ್ತೀಚಿನದಾಗಿದೆ. ಇದರ ಮುಖ್ಯ ಪ್ರವೇಶದ್ವಾರ ಹಲವಾರು ಶಾಖೆಯ ಕೆತ್ತನೆಯನ್ನು ಹೊಂದಿದೆ. ಇದರ ಬಳಿಯಲ್ಲೇ ಹಾಳಾದ ಗುಡಿಯ ತಳಪಾಯವಿದೆ. ಇಲ್ಲಿನ ಏಕೈಕ ವೀರಗಲ್ಲು ಶಾಸನ ಗುಡಿಯ ಬಳಿಯಲ್ಲೇ ಇದ್ದು ಕ್ರಿ.ಶ. 12 ನೇ ಶತಮಾನದಲ್ಲಾದ ಕೋಟೆ ಕಾಳಗದಲ್ಲಿ ಮಡಿದ ವೀರನ ಸ್ಮಾರಕ ಶಿಲ್ಪವಾಗಿದೆ. ಗುರುನಂಜೇಶ್ವರ ಮಠದ ಬಳಿಯಲ್ಲೇ ನೀಲಮ್ಮನ ಗುಡಿಯಿದೆ. ಮಠದ ಆವರಣದಲ್ಲಿ ಅಗಸೆ ಬಳಿಯಲ್ಲಿ ಪೀಠಸ್ಥ ಚತುರ್ಮುಖ ಬ್ರಹ್ಮನ ಮೂರ್ತಿಯಿದೆ. ಇದು ಪ್ರಶಾಂತವಾದ ನೈಸರ್ಗಿಕ ಸೌಂದರ್ಯದ ತಾಣ. **ವರ್ದಿ :** ಹಾನಗಲ್‌ನಿಂದ ಈಶಾನ್ಯಕ್ಕೆ 26 ಕಿಮೀ (ಜನಸಂಖ್ಯೆ : 2,417) ದೂರದಲ್ಲಿರುವ ವರ್ದಿ ರಾಷ್ಟ್ರಕೂಟರಷ್ಟು ಪ್ರಾಚೀನವಾದ ಊರೆಂದು ಇಲ್ಲಿನ ಹೊನ್ನಮ್ಮನ ಗುಡಿ ಮುಂದೆ ಇರುವ ನಾಲ್ಕು ಮೇಟಿಕಲ್ಲುಗಳು ಸೂಚಿಸಿದರೆ, ಊರಲ್ಲಿರುವ ಕ್ರಿ.ಶ. 1190ರ ಶಾಸನವು ನಾರಾಯಣದೇವರಿಗೆ ಬಿಟ್ಟ ಭೂದಾನದ ಬಗ್ಗೆ ತಿಳಿಸುತ್ತದೆ. ಇದರಿಂದ ನೆರೆಯ ನರೇಗಲ್‌ನ ಇತಿಹಾಸದೊಂದಿಗೆ ಇದೂ ಹಾಸುಹೊಕ್ಕಾಗಿ ಬೆಳೆದು ಬಂದಿದೆಯೆಂದು ಅಭಿಪ್ರಾಯಪಡಬಹುದು. ಊರ ಪ್ರವೇಶದಲ್ಲೇ ಇರುವ ಕಲ್ಮೇಶ್ವರ ಗುಡಿ ಕಲ್ಯಾಣದ ಚಾಲುಕ್ಯರ ಕಾಲದ ರಚನೆಯಾಗಿತ್ತೆಂದು ತೋರುತ್ತಿದ್ದು ಅದನ್ನಿಂದು ಸ್ಥಳೀಯರು ಜೀರ್ಣೋದ್ಧಾರದ ಸಲುವಾಗಿ ಪೂರ್ಣ ಕೆಡವಿದ್ದಾರೆ. ಇಲ್ಲಿ ಕ್ರಿ.ಶ. 11-12 ನೇ ಶತಮಾನದ ಶಿವಲಿಂಗ ನಂದಿಗಳಿವೆ. ಊರ ಹೊರಗೆ ಹೊಲದಲ್ಲಿ ಪ್ರಾಚೀನ ಕಾಲದ ಈಶ್ವರ ಗುಡಿಯಿದೆ, ಗರ್ಭಗೃಹ, ಅಂತರಾಳ ಹಾಗೂ 16 ಕಂಬದ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದ ಬಾಗಿಲವಾಡವು ಅಲಂಕೃತವಾಗಿದ್ದು ಗಜಲಕ್ಷ್ಮಿಯನ್ನು ಹೊಂದಿದೆ. ಒಳಗೆ ಶಿವಲಿಂಗವಿದೆ. ಅಂತರಾಳದಲ್ಲಿ ನಂದಿಯಿದೆ. ಕಲ್ಯಾಣದ ಚಾಲುಕ್ಯ ಕಂಬಗಳನ್ನು ಹೊಂದಿರುವ ನವರಂಗದ ಮುಂಭಾಗ ಪೂರ್ಣ ತೆರೆದಿದ್ದು, ನಡುವಿನ ಛತ್ತಲ್ಲಿ ಸರಳವಾದ ಕಮಲದ ಕೆತ್ತನೆಯಿದೆ. ಈ ಗುಡಿಯ ಶಿಖರ ಹಾಳಾಗಿದ್ದು, ಹೊರಭಾಗವು ಮಣ್ಣಿಂದ ಪೂರ್ಣಮುಚ್ಚಿದೆ. ಊರ ನಡುವೆ ಇರುವ ಹೊನ್ನಮ್ಮನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಒಳಗೆ ಪದ್ಮಾಸೀನ ದೇವಿಯ ಶಿಲ್ಪವಿದೆ. ರಾಷ್ಟ್ರಕೂಟರ ಕಾಲದ ಮೇಟಿಕಲ್ಲು ಇರುವುದು ಈ ಪರಿಸರದಲ್ಲೇ. ಈ ದೇವಿಯ ಕಂಚಿನ ಉತ್ಸವ ಮೂರ್ತಿಗಳಿದ್ದು ಬನದಹುಣ್ಣಿಮೆಯಲ್ಲಿ ಅದ್ದೂರಿಯಿಂದ ಜಾತ್ರೆಯಾಗುತ್ತದೆ. ಊರಲ್ಲಿ ಒಂದು ಮಸೀದಿ ಹಾಗೂ ಎರಡು ದರ್ಗಾಗಳಿವೆ. ಉರುಸು ರಜಬ್ ತಿಂಗಳಲ್ಲಿ ಜರುಗುತ್ತದೆ. ಐತಿಹಾಸಿಕ ಸ್ಥಳವಾದ ನರೇಗಲ್ ಇದರ ನೆರೆಗ್ರಾಮವಾಗಿದ್ದು ಎರಡು ಕಿಮೀ ದೂರದಲ್ಲಿದೆ.

**ಕೌಜಗೇರಿ:** ರೋಣ ತಾಲೂಕಿನ ಕೌಜಗೇರಿಯು (ಜನಸಂಖ್ಯೆ : 2,502) ರೋಣದಿಂದ ಪಶ್ಚಿಮಕ್ಕೆ 20 ಕಿಮೀ ದೂರದಲ್ಲಿ ರೋಣ-ನರಗುಂದ ರಸ್ತೆಯಲ್ಲಿ, ಬೆಳವಣಕಿಯಿಂದ ಉತ್ತರಕ್ಕೆ 2.5 ಕಿ.ಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಕೊವುಜಗೆರೆ', 'ಕಉಜಗೆರೆ', 'ಕವಜಗೇರಿ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಬೆಳ್ವೊಲ-300 ಕ್ಕೆ ಸೇರಿದ ಬೆಳವಣಿಕೆ-12 ರ ಒಂದು ಗ್ರಾಮವಾಗಿತ್ತೆಂಬ ಅಂಶವನ್ನು ರಾಷ್ಟ್ರಕೂಟರ ಕಾಲದ ಕ್ರಿ.ಶ. 912 ರ ಕೌಜಗೇರಿ ಶಾಸನ ತಿಳಿಸುತ್ತದೆ. ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಒಂದು ಬೆಳ್ವಣಿಕೆ-12 ರ ಬಗ್ಗೆ ಹೇಳುವ ಗೋಸಾಸ ನೀಡಿದ ಗೋಸಾಸ ಕಲ್ಲಾದರೆ, ಮತ್ತೊಂದು, ರಾಷ್ಟ್ರಕೂಟ ನಾಲ್ಕನೇಯ ಗೋವಿಂದನ ಕ್ರಿ.ಶ. 934 ಶಾಸನವಾಗಿದ್ದು ಕೌಜಗೇರಿಯ ಗೌಡ ಬಳ್ಳಜ್ಜ, ಸತ್ತ ತನ್ನಿಬ್ಬರು ಮಕ್ಕಳು ಮತ್ತು ದಂಡನಾಯಕನಿಗಾಗಿ ವೀರಗಲ್ಲುಗಳನ್ನೂ, ತನಗಾಗಿ ಗವಿಕಲ್ಲನ್ನೂ ಮಾಡಿಸಿ ಕೌಜಗೇರಿಯಲ್ಲಿ ಬಟರಿ, ವಿನಾಯಕ, ಕೇಶವ, ಆದಿತ್ಯ, ಮಟವರ್ಮದೇವರ ಗುಡಿಯನ್ನು ನಿರ್ಮಿಸಿ, ನೆರೆಯ ಗ್ರಾಮಗಳಾದ ಬೆಳ್ವಣಿಕೆ, ಯಾವಂಗಲ್ಲು, ಪಡಂಗಲಿ (ಹಡಗಲಿ) ಪಳ್ದಿಲ (ಹದಲಿ), ಅಸುಪಟ್ಟಿ (ಅಸೂಟಿ)ಗಳಲ್ಲಿದ್ದ ದೇಗುಲಗಳಿಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಅಪರೂಪದ ಶಿಲ್ಪ ಕೆತ್ತನೆಯನ್ನು ನಾಲ್ಕು ಪಟ್ಟಿಕೆಗಳಲ್ಲಿ ಹೊಂದಿರುವ ಈ ಶಾಸನ ಕುತೂಹಲವಾಗಿದೆ. ಸಿದ್ದಲಿಂಗೇಶ್ವರ ಗುಡಿ ಮುಂದಿರುವ ಆತ್ಮಬಲಿದಾನದ ಕಲ್ಲು ಉರಿ ಉಯ್ಯಾಲೆಯ ಅಪೂರ್ವ ಕೆತ್ತನೆಯನ್ನು ಹೊಂದಿದ್ದು ಸೂರ್ಯಗ್ರಹಣದಂದು ಆತ್ಮಾರ್ಪಣೆ ಮಾಡಿಕೊಂಡ ಯೋಧನ ಅಪೂರ್ವ ಸ್ಮಾರಕವಾಗಿದೆ. ಇದರ ಶಾಸನ ಬಹಳ ಹಾಳಾಗಿದೆಯಾದರೂ ಇದರ ಕಾಲವನ್ನು ಕ್ರಿ.ಶ. 12 ನೇ ಶತಮಾನಕ್ಕೆ ಗುರುತಿಸ ಬಹುದಾಗಿದೆ. ಮೇಲೆ ಹೇಳಿರುವ ಶಾಸನೋಕ್ತ ದೇವಾಲಯಗಳಾವುವು ಇಂದು ಉಳಿದಿಲ್ಲ, ಆದರೆ ಹನುಮಂತನ ಗುಡಿ ಆವರಣದಲ್ಲಿ ರಾಷ್ಟ್ರಕೂಟರ ಕಾಲದ ಶಾಸನೋಕ್ತ ಭಟರಿ, ಬೆನಕ, ಕೇಶವ, ಆದಿತ್ಯ ಹಾಗೂ ಸಪ್ತಮಾತೃಕಾ ಶಿಲ್ಪಗಳು ಭಗ್ನ ಸ್ಥಿತಿಯಲ್ಲಿ ಉಳಿದಿವೆ. ಅದರಲ್ಲೂ ಶವ, ನರಿ, ಗೂಗೆಯ ಕೆತ್ತನೆಯನ್ನುಳ್ಳ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿರುವ ಚತುರ್ಭುಜಧಾರಿ ದುರ್ಗಿಯ ಶಿಲ್ಪ ಬಹಳ ಬೀಭತ್ಸವಾಗಿದ್ದು ಶಾಸನ ಇದನ್ನು ಭಟರಿ ಎಂದು ಕರೆದಿದೆ. ಈ ಗುಡಿ ಆವರಣದಲ್ಲೇ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಿವೆ. ತೊಡೆಯ ಮೇಲೆ ಉಡವನ್ನುಳ್ಳ ಉಡಚಾದೇವಿಯ ಶಿಲ್ಪ, ಪೀಠಸ್ಥ ಚತುರ್ಮುಖ ಬ್ರಹ್ಮ ಶಿರದ ಶಿಲ್ಪ ಹಾಗೂ 'ಬಾಣಂತಿಕಲ್ಲು' (ಗಜಲಕ್ಷ್ಮಿ) ಹೆಸರಿಸಬಹುದಾದ ಶಿಲ್ಪಗಳಾಗಿವೆ. ಪ್ರಾಚೀನ ಶಿವಲಿಂಗ, ನಂದಿಯನ್ನು ಹೊಂದಿರುವ ಸಿದ್ದಲಿಂಗೇಶ್ವರ ಗುಡಿ, ಈಶ್ವರ ಗುಡಿ ಮತ್ತು ಹೊಲ್ಲೇಶ್ವರ ಗುಡಿಗಳು ಶಿಥಿಲಾವಸ್ಥೆಯಲ್ಲಿವೆ. ಅದರಲ್ಲೂ ಹೊಲ್ಲೇಶ್ವರ ಗುಡಿ ಬಳಿಯಿರುವ ಸಪ್ತಮಾತೃಕಾ ಶಿಲ್ಪ ಬಹಳ ಸುಂದರವಾದ ಬಿಡಿ ಶಿಲ್ಪವಾಗಿದೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ಶಂಕರಲಿಂಗದೇವರು, ಹನುಮಂತ ದ್ಯಾಮವ್ವ ಹಾಗೂ ಕರಿಯಮ್ಮನ ಗುಡಿಗಳಿವೆ. ಹನುಮಂತನ ಜಾತ್ರೆಯು ಡಿಸೆಂಬರ್ ತಿಂಗಳಲ್ಲಿ ಜರುಗುತ್ತದೆ. ಊರಲ್ಲಿ ಒಂದು ಮಸೀದಿ ಹಾಗೂ ದರ್ಗಾ ಇದೆ.

**ಕೋಟುಮಚಗಿ:** ಗದಗ ತಾಲೂಕಿನ ಕೋಟುಮಚಗಿಯು (ಜನಸಂಖ್ಯೆ : 6,310) ಗದಗಿನಿಂದ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿ, ಗದಗ-ರೋಣ ರಸ್ತೆಯಲ್ಲಿದ್ದು, ಕ್ರಿ.ಶ. 16 ನೇ ಶತಮಾನದ ಶಾಸನಗಳಲ್ಲೂ 'ಉಮಚಗಿ' ಎಂದಷ್ಟೆ ಉಲ್ಲೇಖಿತಗೊಂಡಿದ್ದು ನಂತರದಲ್ಲಿ 'ಕೋಟೆ' ಕೂಡಿಕೊಂಡು 'ಕೋಟುಮಚಗಿ' ಎಂದು ರೂಢಿಗೆ ಬಂದಿರುವುದು ವ್ಯಕ್ತವಾಗುತ್ತದೆ. ಉಂಚಗೆಯ್, ಉಮಚಗೆಯ್, ಉಮಚಗಿ ಆಗಿರುವಂತೆ ತೋರುತ್ತದೆ. 'ಉಂಚಗೆಯ್' ಎಂದರೆ ಎತ್ತರವಾದ ಸ್ಥಳ ಎಂದರ್ಥ. ಈ ಗ್ರಾಮ ಎತ್ತರವಾದ ಸ್ಥಳದಲ್ಲೇ ಇದೆ. ಪ್ರಾಚೀನ ಕಾಲದಲ್ಲಿ ನರೆಯಂಗಲ್-12 ಕ್ಕೆ ಸೇರಿದ ಈ ಊರು 104 ಮಹಾಜನರನ್ನೊಳಗೊಂಡಿದ್ದ ಅಗ್ರಹಾರವಾಗಿದ್ದು ಪ್ರಮುಖ ವಿದ್ಯಾಕೇಂದ್ರವಾಗಿತ್ತೆಂಬ ಅಂಶವನ್ನು ಅನೇಕ ಶಾಸನಗಳು ತಿಳಿಸುತ್ತವೆ. ಈವರೆಗೆ ಇಲ್ಲಿಂದ ಆರು ಶಾಸನಗಳು ವರದಿಯಾಗಿದ್ದು, ಕಲ್ಲೇಶ್ವರ ಗುಡಿ ಮುಂದಿರುವ ಐದನೇಯ ವಿಕ್ರಮಾದಿತ್ಯನ ಕ್ರಿ.ಶ. 1012 ರ ಶಾಸನ ದಂಡನಾಯಕ ಕೇಶವಯ್ಯನ ಮೌನರ ಶ್ರೀಧರಭಟ್ಟನಿಗೆ, 'ವುಮಚಗಿ' ಗ್ರಾಮವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಸೋಮೇಶ್ವರ ಗುಡಿ ಮುಂದಿರುವ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1099 ರ ಶಾಸನ ಮಹಾಸಾಮಂತ ಅನಂತಪಾಳರಸನು ಸ್ವಯಂಭು ಸೋಮೇಶ್ವರ ದೇವರಿಗೆ ದಾನ ನೀಡಿದ ವಿಷಯ ತಿಳಿಸುತ್ತದೆ. ಇಲ್ಲೇ ಇರುವ ಕ್ರಿ.ಶ. 1142 ರ ಮತ್ತೊಂದು ಶಾಸನ ದಂಡನಾಯಕ ಕೇಸಿರಾಜಯ್ಯನು ಸ್ವಯಂಭು ಸೋಮೇಶ್ವರ ದೇವರಿಗೆ ಸ್ಥಳದ ಸುಂಕವನ್ನು ದಾನ ಬಿಟ್ಟ ಅಂಶವನ್ನು ಹೇಳುತ್ತ, ಆ ಸಂದರ್ಭದಲ್ಲಿ ಮಹಾಜನರೊಂದಿಗೆ ಮೂವತ್ತೊಕ್ಕಲೂ ಇದ್ದ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಬಸದಿಯ ಮುಂದೆ ದೇವನಾಗರಿ ಲಿಪಿಯಲ್ಲಿರುವ ಸುಮಾರು ಕ್ರಿ.ಶ. 16 ನೇಯ ಶತಮಾನದ ಶಾಸನವೊಂದು ಉಮಚಗಿ ಗ್ರಾಮಕ್ಕೆ 'ಸದಾಶಿವರಾಯ ಸಮುದ್ರ' ಎಂದು ಪುನರ್‌ನಾಮಕರಣ ಮಾಡಿದ ವಿಷಯವನ್ನು ತಿಳಿಸುತ್ತದೆ. ಇದು ವಿಜಯನಗರದ ಚಕ್ರವರ್ತಿಯ ಹೆಸರಾಗಿದೆ. ಊರ ಹೊರಗಿರುವ ಸೋಮೇಶ್ವರ ಗುಡಿಯೇ

ಶಾಸನೋಕ್ತ ಸ್ವಯಂಭು ಸೋಮೇಶ್ವರ ಗುಡಿಯಾಗಿದ್ದು ಸುಮಾರು ಕ್ರಿ.ಶ. 11 ನೇ ಶತಮಾನದಲ್ಲಿ ನಿರ್ಮಾಣಗೊಂಡ ಚಾಳುಕ್ಯ ಶೈಲಿಯ ಗುಡಿ ಇದಾಗಿದೆ. ಬಿಜಾಪುರದ ಅರಸರ ಆಳ್ವಿಕೆಯಲ್ಲಿ ಇದು ಜೀರ್ಣೋದ್ಧಾರಗೊಂಡಿದೆಯೆಂದು ಸ್ಥಳೀಕರು ಹೇಳುತ್ತಾರೆ. ಈ ಅಂಶವನ್ನು ಗುಡಿಯ ನವರಂಗ ಭಾಗದಲ್ಲಿರುವ ಕಮಾನುಗಳನ್ನು ಹೊಂದಿರುವ ಸ್ತಂಭಗಳು ಪ್ರತಿಬಿಂಬಿಸುತ್ತವೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ನಂತರದಲ್ಲಿ ಸೇರಿರುವ ತೆರೆದ ಮುಖ ಮಂಟಪವನ್ನು ಹೊಂದಿರುವ ಈ ಗುಡಿಯನ್ನು ಬಳಸಿ ಎತ್ತರವಾದ ಪ್ರಾಕಾರವನ್ನು ಹಿಂದಿನ ತಲೆಮಾರಲ್ಲಿ ನಿರ್ಮಿಸಿದ್ದಾರೆ. ಪ್ರಾಕಾರದ ಪ್ರವೇಶದ್ವಾರ ಕರಿಯ ಅಮೃತಶಿಲೆಯಿಂದ ರಚಿಸಲಾಗಿದ್ದು ಲಲಾಟದಲ್ಲಿ ಇರುವ ಉಮಾಮಹೇಶ್ವರ ಕೆತ್ತನೆ ಚಿತ್ತಾಕರ್ಷಕವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಂದಿಯಿದೆ. ನವರಂಗದ ನಡುವಿನ ಒಳಛಾವಣಿಯಲ್ಲಿ ಕಮಲವಿದೆ. ಈ ಗುಡಿಯ ಆವರಣದಲ್ಲಿ, ಅಪೂರ್ಣವಾದ ವೀರಭದ್ರನ ಶಿಲ್ಪವಿದ್ದು ಮುಂಭಾಗದಲ್ಲಿ ರಾಕ್ಷಸ ಸಂಹಾರದಲ್ಲಿ ನಿರತನಾಗಿರುವ ಕಾರ್ತಿಕೇಯನ ಇತ್ತೀಚಿನ ಶಿಲ್ಪವಿದೆ. ಹೊರ ಭಿತ್ತಿಯನ್ನು ಕಿರು ಶಿಖರಗಳು ಹಾಗೂ ಅಲಂಕಾರಿಕ ಕಂಬಗಳಿಂದ ಅಲಂಕರಿಸಿದ್ದು, ಗುಡಿಯನ್ನು ಆಕರ್ಷಕವಾದ ದ್ರಾವಿಡ ಶಿಖರ ಶೋಭಿಸಿದೆ. ಶಿಖರದ ವಿವಿಧ ಭಾಗಗಳಲ್ಲಿ ಸರಸ್ವತಿ, ಶಿವ, ಭೈರವ, ಹಾಗೂ ನಟರಾಜನ ಸುಂದರ ಉಬ್ಬು ಕೆತ್ತನೆಗಳಿವೆ. ಗುಡಿಯ ಮುಂದೆ ವಿಶಾಲವಾದ ಕೆರೆಯಿದ್ದು ಇಂದು ಹೂಳು ತುಂಬಿ ಹಾಳಾಗುತ್ತಿದೆ.

ಊರಲ್ಲಿ ಜೈನರ ಬಸದಿ ಇದ್ದು, ಪೂರ್ಣ ಶಿಥಿಲಗೊಂಡಿದ್ದು ಇಂದು ಒಂದಂಕಣದಷ್ಟೆ ಖೋಲಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ತೀರ್ಥಂಕರ ಮೂರ್ತಿಯಿದೆ. ಇದರ ಜೊತೆಗೆ ಊರಲ್ಲಿ ಕಲ್ಮೇಶ್ವರ, ಬಸವಣ್ಣ, ಈಶ್ವರ, ಹನುಮಂತ, ವೀರಭದ್ರ, ಬೀರೇದೇವರು, ಗ್ರಾಮದೇವತೆ, ದುರ್ಗಮ್ಮ ಹಾಗೂ ಕರಿಯಮ್ಮನ ಗುಡಿಗಳಿವೆ. ಊರಲ್ಲಿ ಎರಡು ಮಸೀದಿಗಳಿವೆ. ಊರ ಹೊರಗೆ ಸೋಮೇಶ್ವರ ಗುಡಿ ಬಳಿ ಒಂದು ದರ್ಗಾ ಇದೆ.

**ಕೋಡಿಕೊಪ್ಪ:** ರೋಣ ತಾಲೂಕಿನ ಕೋಡಿಕೊಪ್ಪವು ರೋಣದಿಂದ ಆಗ್ನೇಯಕ್ಕೆ ಸುಮಾರು 15 ಕಿಮೀ ದೂರದಲ್ಲಿ ನರೇಗಲ್‌ನಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿ, ಅಬ್ಬಿಗೇರಿ ರಸ್ತೆಯಲ್ಲಿದೆ. ಇದು ನರೇಗಲ್‌ನ ಉಪಗ್ರಾಮವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಕಿರುನರೆಯಂಗಲ್' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಕಿಸುಕಾಡು-70 ಕ್ಕೆ ಸೇರಿತ್ತು. ಈವರೆಗೆ ಇಲ್ಲಿಂದ ಮೂರು ಶಾಸನಗಳು ವರದಿಯಾಗಿದ್ದು ಇವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿವೆ. ಮೂಲಬ್ರಹ್ಮೇಶ್ವರ ಗುಡಿಯೊಳಗಿರುವ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1121 ರ ಶಾಸನ ಕಿರಿನರೆಯಂಗಲ್ಲ ಮೊಲ್ಲೇಶ್ವರ ದೇವರಿಗೆ ದಂಡನಾಯಕ ಅಚರಸನು 12 ಮತ್ತರು ಭೂಮಿಯನ್ನು ದಾನ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 1144 ರ ಮತ್ತೊಂದು ಶಾಸನ ಇಲ್ಲಿನ ಮೂಲಸ್ಥಾನ ಬ್ರಹ್ಮೇಶ್ವರ ದೇವರಿಗೆ ಉಗುರ-300, ಎಲೆಯಬೋಜಂಗ 504, ಹಾಗೂ ತಂಬುಲಿಗ ಸಾಸಿರ್ವರ ಸಂಘಗಳು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಇನ್ನೊಂದು ಶಾಸನ ನಾಲ್ಕನೇಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು ಯಲ್ಬುರ್ಗಿಯ ಸಿಂಧರ ಬಗ್ಗೆ ಉಲ್ಲೇಖಿಸಿದ್ದರೂ ಬಹಳ ತ್ರುಟಿತವಾಗಿರುವುದರಿಂದ ವಿವರ ಲಭಿಸುವುದಿಲ್ಲ. ಮೇಲಿನ ಮೂರೂ ಶಾಸನಗಳಿರುವ ಮೂಲಬ್ರಹ್ಮೇಶ್ವರ (ಮಲ್ಲಿಕಾರ್ಜುನ) ಗುಡಿ ಊರ ನಡುವೆ ಎತ್ತರವಾದ ಸ್ಥಳದಲ್ಲಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಲಿಂಗವಿದೆ. ಅಂತರಾಳದಲ್ಲಿ ನಂದಿಯಿದ್ದು ಜಾಲಾಂಧ್ರವಿರುವ ದ್ವಿಶಾಖ ಬಾಗಿಲವಾಡವನ್ನು ಹೊಂದಿದೆ. ನವರಂಗದಲ್ಲಿರುವ ಆರು ದೇವಕೋಷ್ಠಗಳಲ್ಲಿ ಒಂದರಲ್ಲಿ ಮಾತ್ರ ಆಸೀನ ಭೈರವನ ಶಿಲ್ಪವಿದೆ. ನವರಂಗದ ಪ್ರವೇಶದ್ವಾರ ಆಕರ್ಷಕ ಕೆತ್ತನೆಯ ಪಂಚಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದ್ದು ಲಲಾಟದಲ್ಲಿ ಲಕ್ಷ್ಮಿಯನ್ನಷ್ಟೆ ಕೆತ್ತಲಾಗಿದೆ. ತೆರೆದ ಅರ್ಧಮಂಟಪದ ಅಂಚಿನಲ್ಲಿ ಕಕ್ಷಾಸನಗಳಿವೆ. ಈ ಗುಡಿಯ ಕಂಬಗಳು ಚಾಲುಕ್ಯ ಮಾದರಿಯವಾಗಿವೆ. ಈ ದೇವಾಲಯದ ಹೊರಭಿತ್ತಿ ನಿರಾಡಂಬರವಾಗಿದ್ದು ಕದಂಬ ನಾಗರ ಶಿಖರವನ್ನು ಹೊಂದಿದೆ. ಈ ದೇವಾಲಯಕ್ಕಿರುವ ಪ್ರಾಕಾರ ಇತ್ತೀಚಿನದಾಗಿದೆ. ಈ ಗುಡಿಯನ್ನು ಮೊಲ್ಲೆಯ ಬ್ರಹ್ಮಣ್ಣನು ನಿರ್ಮಿಸಿರುವ ವಿಷಯ ಕೋಡಿಕೊಪ್ಪದ ಕ್ರಿ.ಶ. 1144 ರ ಶಾಸನದಿಂದ ವ್ಯಕ್ತವಾಗುತ್ತದೆ.

ಊರ ಹೊರಗೆ ಹೊಲದಲ್ಲಿರುವ ಚಂದ್ರಶಾಲಿ ಗುಡಿ ಗರ್ಭಗೃಹ, ಅರ್ಧಮಂಟಪವನ್ನುಳ್ಳ ಸರಳ ರಚನೆಯಾಗಿದ್ದು ಮೇಲೆ ಹೇಳಿರುವ ಶಾಸನೋಕ್ತ ಮೊಲ್ಲೆದೇವರ ಗುಡಿ ಇದೇ ಇರಬೇಕೆಂದೆನಿಸುತ್ತದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ಆಕರ್ಷಕವಾದ ಪಂಚಶಾಖಾಲಂಕಾರ ಪಟ್ಟಿಕೆಯನ್ನು ಹೊಂದಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅರ್ಧಮಂಟಪದಲ್ಲಿ ಎರಡು ಕಿರು ದುಂಡು ಕಂಬಗಳು ಸುಂದರವಾದ ಮಕರತೋರಣವನ್ನು ಹೊತ್ತು ನಿಂತಿವೆ. ಮಕರ ತೋರಣದ ನಡುವೆ ಬ್ರಹ್ಮ ನಟರಾಜ ಹಾಗೂ ವಿಷ್ಣುವಿನ ಕಿರು ಕೆತ್ತನೆಯಿದ್ದು ಆಕರ್ಷಕವಾಗಿದೆ. ಗುಡಿಯ ಶಿಖರ ಹಾಳಾಗಿದ್ದು ಭಿತ್ತಿಭಾಗದ ಹೊರಮೈ ಭಾಗಶಃ ಹಾಳಾಗಿವೆ.

ಆದರೂ ಗುಡಿಯ ಎಡಭಾಗದ ಹೊರಭಿತ್ತಿಯ ಹೊರಮೈಯಲ್ಲಿರುವ ಕಿರುಶಿಖರ, ಅಲಂಕಾರಿಕ ಸ್ತಂಭಗಳು, ಗುಡಿಯ ಹೊರಭಾಗ ಅಲಂಕಾರವಾಗಿತ್ತೆಂಬುದರ ಬಗ್ಗೆ ಸುಳಿವು ನೀಡುತ್ತದೆ. ಗರ್ಭಗುಡಿಯ ಹಿಂಬದಿಯಲ್ಲಿ ಸೂರ್ಯನ ಕೆತ್ತನೆಯಿದೆ. ಇದರ ಜೊತೆಗೆ ಊರಲ್ಲಿ ಬಸವಣ್ಣ, ಹನುಮಂತ, ದ್ಯಾಮವ್ವ ಮುಂತಾದ ಗುಡಿಗಳಿವೆ. ಊರ ಹೊರಗೆ ಹುಚ್ಚೀರಪ್ಪಜ್ಜನ ಗದ್ದುಗೆ-ಮಠಗಳಿವೆ.

**ಕೊಣ್ಣೂರು:** ನರಗುಂದ ತಾಲೂಕಿನ ಪ್ರಾಚೀನ ಪಟ್ಟಣ ಕೊಣ್ಣೂರು (ಜನಸಂಖ್ಯೆ : 7,957) ನರಗುಂದದಿಂದ ಈಶಾನ್ಯಕ್ಕೆ 18 ಕಿ.ಮೀ. ದೂರದಲ್ಲಿ ಮಲಪ್ರಭಾ ನದಿಯ ಬಲದಂಡೆ ಮೇಲಿದೆ. ಈ ಊರು ನರಗುಂದ-ಬಾಗಲಕೋಟೆ ರಸ್ತೆಯಲ್ಲಿರುವ ಜಿಲ್ಲೆಯ ಗಡಿ ಗ್ರಾಮವಾಗಿದ್ದು ಈ ಊರಿನ ಪ್ರಾಚೀನತೆಯನ್ನು ಬೃಹತ್ ಶಿಲಾಯುಗದ ಮಾನವರಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಇಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಕ್ಕೆ ಸೇರಿದ ಸಮಾಧಿಗಳು ಲಭಿಸಿವೆ. ಪ್ರಾಚೀನ ಶಾಸನಗಳಲ್ಲಿ ಕೊಳನೂರು ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಬೆಳ್ವೊಲ-300 ಕ್ಕೆ ಸೇರಿದ್ದು, 30 ಹಳ್ಳಿಗಳ ಆಡಳಿತ ಕೇಂದ್ರವಾಗಿ ಕೊಳನೂರು-30 ಎಂದೇ ಪರಿಚಿತವಾಗಿದ್ದ ಅಂಶವನ್ನು ಶಾಸನಗಳು ದೃಢಪಡಿಸಿವೆ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ರಾಷ್ಟ್ರಕೂಟ ಒಂದನೇಯ ಅಮೋಘವರ್ಷನ ಕ್ರಿ.ಶ. 860 ರ ಶಾಸನ ಕೊಳನೂರ ಬಸದಿಗೆ ಅರಸನು ಗ್ರಾಮದಾನ ಮಾಡಿದ ವಿಷಯವನ್ನು ತಿಳಿಸಿದರೆ, ಇಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಮತ್ತೊಂದು ಶಾಸನ ಮಾಂಡಳಿಕರ ಬಗ್ಗೆ ಉಲ್ಲೇಖಿಸುತ್ತದೆ. ಹಳೆಯ ಮಠದ ಬಳಿಯಿರುವ ವಿಜಯನಗರದರಸ ಸದಾಶಿವರಾಯನ ಕ್ರಿ.ಶ. 1547 ರ ಶಾಸನ ನಾವಿದ ತಿಮ್ಮೋಜಾದಿಗಳಿಗೆ ಅರಸನು ಸುಂಕ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಊರ ನಡುವೆ ಇರುವ ಪರಮೇಶ್ವರ ಗುಡಿಯಿಂದಾಗಿ ಕೊಣ್ಣೂರು ಪ್ರಸಿದ್ಧವಾಗಿದೆ. ರಾಜ್ಯದಲ್ಲೇ ನಕ್ಷತ್ರಾಕಾರದ ತಳವಿನ್ಯಾಸವನ್ನುಳ್ಳ ಅತ್ಯಂತ ಪ್ರಾಚೀನ ಉದಾಹರಣೆಯಾಗಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದೆ. ರಾಷ್ಟ್ರಕೂಟರ ಕಾಲದಲ್ಲಿ ಮೂಲತಃ ಪಾರ್ಶ್ವನಾಥ ಬಸದಿಯಾಗಿದ್ದ ಇದನ್ನು ಅಮೋಘವರ್ಷನ ಖ್ಯಾತ ಸೇನಾನಿ ಬಂಕೆಯನು ಕಟ್ಟಿಸಿದನು. ನಂತರ ಶೈವರ ಪ್ರಭಾವದಿಂದಾಗಿ ಇದು ಪರಮೇಶ್ವರ ಗುಡಿಯಾಗಿ ಮಾರ್ಪಟ್ಟಿದೆ. ಗರ್ಭಗೃಹದ ಮೇಲಿರುವ ಶಿಖರದ ಕೋಷ್ಠದಲ್ಲಿ ಜೈನತೀರ್ಥಂಕರ ಮೂರ್ತಿಯನ್ನು ನೋಡಬಹುದಾಗಿದೆ. ಮೇಲಾಗಿ ಗರ್ಭಗುಡಿಯ ಪಂಚಶಾಖಾಲಂಕೃತ ಬಾಗಿಲವಾಡದ ಲಲಾಟದ ಮೇಲೆ ಮುಕ್ಕೊಡೆ ಹಾಗೂ ಪದ್ಮಾಸೀನ ತೀರ್ಥಂಕರನ ಕೆತ್ತನೆಯಿದೆ. ಹಿಂದೆ ಜೈನ ತೀರ್ಥಂಕರ ಮೂರ್ತಿಯಿದ್ದ ಗರ್ಭಗೃಹದಲ್ಲಿಂದು ಶಿವಲಿಂಗವಿದ್ದು ಸಿಂಹಪೀಠವಿದೆ. ಗರ್ಭಗೃಹದ ಒಳಭಾಗ ಚೌಕಾಕಾರದಲ್ಲಿದ್ದು ಇದರ ಹೊರಭಾಗ ಹಲವಾರು ಕೋನದಿಂದ ಕೂಡಿದ ನಕ್ಷತ್ರಾಕಾರದಲ್ಲಿದೆ. ಅರ್ಧಮಂಟಪದಲ್ಲಿ ನಂದಿಯಿದ್ದು ನಂತರದಲ್ಲಿ ಅಂತರಾಳದ ತೊಲೆಗೆ ಎರಡು ಕಂಬಗಳನ್ನು ಊರೆ ಕೊಟ್ಟಿರುವಂತೆ ತೋರುತ್ತದೆ. ನವರಂಗದ ನಡುವಿನ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯ ವೃತ್ತಾಕಾರದ ಅಡ್ಡಕೊಯ್ತದ ಕಂಬಗಳಾಗಿದ್ದು, ನಂತರದಲ್ಲಿ ಛಾವಣಿಯ ಹೊರೆ ಹೆಚ್ಚಾದ ಕಾರಣ ಇದ್ದ ಕಂಬಗಳ ನಡುವೆ ಎರಡೆರಡರಂತೆ ಎಂಟು ಕಂಬಗಳನ್ನು ಸೇರಿಸಿದ್ದಾರೆ. ಈ ದೇವಾಲಯದ ಹೊರಭಿತ್ತಿ ಸರಳವಾಗಿದ್ದು ಮರಳು ಮಿಶ್ರಿತ ಕೆಂಪುಕಲ್ಲನ್ನು ಬಳಸಿ ಈ ಗುಡಿಯನ್ನು ನಿರ್ಮಿಸಲಾಗಿದೆ. ಈ ಗುಡಿಯ ಪರಿಸರದಲ್ಲಿ ಭಗ್ನ ಮೂರ್ತಿಗಳು ಚದುರಿಕೊಂಡಿವೆ. ಈ ಗುಡಿಯ ಗರ್ಭಗೃಹದ ಭಾಗ ತೀರ ಶಿಥಿಲಾವಸ್ಥೆಯಲ್ಲಿದ್ದು ಕುಸಿದು ಬೀಳುವ ಸ್ಥಿತಿಯಲ್ಲಿ ಇದೆ. ಇದರ ಜೊತೆಯಲ್ಲಿ ಊರಲ್ಲಿ ಬಸವಣ್ಣ, ವೀರಭದ್ರ, ರಾಮಲಿಂಗ, ಬೀರಪ್ಪ, ಸಾವಲಿಂಗೇಶ್ವರ, ಬಂಕೆದೇವರು, ಹನುಮಂತ, ದ್ಯಾಮವ್ವ, ದುರ್ಗವ್ವ, ಹಾಗೂ ರಾಮೇಶ್ವರ ಗುಡಿಗಳಿವೆ. ಅದರಲ್ಲೂ ಹೊಳೆಯ ದಂಡೆ ಮೇಲಿರುವ ರಾಮೇಶ್ವರ ಗುಡಿ ವಿಹಾರಧಾಮಕ್ಕೆ ಪ್ರಶಸ್ತವಾಗಿದೆ. ಇಲ್ಲಿ ಫಲಾಹಾರೇಶ್ವರ, ಮೌನೇಶ್ವರ ಮಠ, ಚಿಕ್ಕಮಠ, ಕಲ್ಮಠ, ವಿರಕ್ತಮಠ ಹಾಗೂ ಹಿರೇಮಠಗಳಿವೆ. ಮೂರು ಮಸೀದಿಗಳು ಹಾಗೂ ಒಂದು ದರ್ಗಾ ಕೂಡ ಇವೆ.

**ಕೋಳೂರು:** ಹಾವೇರಿ ತಾಲೂಕಿನ ಕೋಳೂರು (ಜನಸಂಖ್ಯೆ : 2,649) ಹಾವೇರಿಯಿಂದ ಉತ್ತರಕ್ಕೆ ಸುಮಾರು 16 ಕಿ.ಮೀ. ದೂರದಲ್ಲಿದೆ. ಈ ಊರು ವರದಾ ನದಿಯ ದಂಡೆಯ ಮೇಲಿದ್ದು ಕರ್ಜಗಿ ಹಾಗೂ ದೇವಗಿರಿಗಳು ನೆರೆಯ ಗ್ರಾಮಗಳಾಗಿವೆ. ಕ್ರಿ.ಶ. 9-10 ನೇ ಶತಮಾನದಲ್ಲಿ ಬಾಸವೂರು-140 ಕ್ಕೆ ಸೇರಿದ್ದ ಈ ಊರಲ್ಲಿ ಎರಡು ಶಾಸನಗಳಿವೆ. ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕ್ರಿ.ಶ. 1045 ರ ಶಾಸನ ಕಲಿಯಮ್ಮರಸನು ಬಾಸವೂರು-140 ಆಳುವಾಗ ರಾಜ ಗುರುದೇವನೊಂದಿಗೆ ಜಂಟಿಯಾಗಿ ಕೋಳೂರ ಕಲಿದೇವೇಶ್ವರ ದೇಗುಲಕ್ಕೆ ನೀಡಿದ ಭೂದಾನದ ಬಗ್ಗೆ ಹೇಳಿದರೆ, ಆರ್ಮಡಿ ವಿಕ್ರಮಾದಿತ್ಯನ ಕಾಲದ ಶಾಸನ ಗ್ರಾಮೇಶ್ವರ ದೇವರಿಗೆ ನೀಡಿದ ಸುಂಕಗಳ ದಾನದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1085 ರ ಮತ್ತೊಂದು ಶಾಸನ ಕಲಿಯಮ್ಮರಸನು ಬಾಸವೂರನ್ನಾಳುವಾಗ ಬಿಟ್ಟ ಭೂದಾನದ ಬಗ್ಗೆ ಹೇಳುತ್ತದೆ. ಊರುಳಿವಿಗಾಗಿ ಹೋರಾಡಿ ಮಡಿದ ಬೀರಬೋವನಿಗೆ ತ್ರಿಭುವನಸಿಂಗಿ

ಮತ್ತು ಊರಗೌಡ ದಾನಕೊಟ್ಟ ವಿಷಯವನ್ನು ವೀರಗಲ್ಲು ಶಾಸನವೊಂದು ಹೇಳುತ್ತದೆ. ಯಾದವ ಸಿಂಘಣನ ಕಾಲಕ್ಕೆ ಸೇರಿದ ಶಾಸನ ದೇವಂಗೇರಿಯ 1000 ಪರಿವಾರದಿಂದ ಕೋಳೂರ ಕ್ಷೇತ್ರಪಾಳನಿಗೆ ಭೂದಾನ ಮಾಡಿದನ್ನು ದಾಖಲಿಸಿದೆ. ಈ ಶಾಸನ ಬಂಕಾಪುರದ ಇಂದ್ರೇಶ್ವರ ದೇವರಿಗೆ ಸೇರಿದ 12 ಬಾಡಗಳ ಬಗ್ಗೆ ಉಲ್ಲೇಖಿಸುತ್ತ ಅದರ ಆಚಾರ್ಯ ರಾಜಗುರು ದೇವರ ಪ್ರಸ್ತಾಪವನ್ನೂ ಒಳಗೊಂಡಿದೆ. ಕೋಳೂರು 'ಕೊಡಗೂಸಿ'ನಿಂದಾಗಿ ಜನಪ್ರಿಯವಾಗಿದೆ. ಹಸುಳೆಯೊಂದರ ಅನನ್ಯ ಭಕ್ತಿಯನ್ನು ಮೆಚ್ಚಿ ಕೃಪೆ ತೋರಿದ ಶಿವನು ಕೂಸನ್ನು ತನ್ನಲ್ಲೇ ಐಕ್ಯಮಾಡಿಕೊಂಡ ಘಟನೆಯಿಂದಾಗಿ ಕೋಳೂರು ಕೂಡಗೂಸ ಬಸವಣ್ಣನ ಗುಡಿ ಪ್ರಸಿದ್ಧವಾಗಿದೆ. ಈ ಜನಪದ ನಂಬಿಕೆ ಈ ಭಾಗದಲ್ಲಿ ಪ್ರಚಲಿತವಿದೆ. ಎತ್ತರವಾದ ಸ್ಥಳದ ಮೇಲಿರುವ ಈ ಗುಡಿ ನವರಂಗವನ್ನು ಹೊಂದಿದ್ದು ಒಳಹೋಗುತ್ತಿದ್ದಂತೆ ಎಡಭಾಗದಲ್ಲಿ ಎರಡು ಕಿರು ಗರ್ಭಗೃಹಗಳಿವೆ. ಒಂದರಲ್ಲಿ ಶಿವಲಿಂಗ, ಮತ್ತೊಂದರಲ್ಲಿ ಈಶ್ವರ, ಪೂರ್ವಾಭಿಮುಖವಾಗಿ ಸಾಲಾಗಿ ನಿಲ್ಲಿಸಿರುವ ಕೇಶವ, ವಿಷ್ಣು, ವೀರಭದ್ರ ಮತ್ತು ಪಾರ್ವತೀ-ಪರಮೇಶ್ವರ ಶಿಲ್ಪಗಳು, ಇವುಗಳ ಎಡಕ್ಕೆ ಸೂರ್ಯನ ಮೂರ್ತಿಗಳಿವೆ. ನವರಂಗದಲ್ಲಿ ನಂದಿಯಿದೆ. ಗುಡಿಯ ಹೊರಗೆ ಆಳುದ್ದದ ಮುಕ್ಕಾದ ವಿಷ್ಣು ಶಿಲ್ಪವಿದೆ. ಈ ಗುಡಿಯಲ್ಲಿರುವ ಎಲ್ಲಾ ಶಿಲ್ಪಗಳು ಸುಮಾರು 4.5 ಅಡಿ ಎತ್ತರವಿದ್ದು ಆಕರ್ಷಕವಾಗಿದೆ. ಚತುರ್ಭುಜ ವಿಷ್ಣು ಮೂರ್ತಿಯ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಆಲಿಂಗನ ಮುದ್ರೆಯಲ್ಲಿರುವ ಇಲ್ಲಿನ ಪಾರ್ವತೀ-ಪರಮೇಶ್ವರ ಮೂರ್ತಿ ಬಹಳ ಸುಂದರ ಕಲಾಕೃತಿಯಾಗಿದ್ದು ಶಿವ ಪಾರ್ವತಿ, ಗಣಪತಿ, ಷಣ್ಮುಖ, ದಿಕ್ಪಾಲಕರುಗಳ ಸುಂದರ ಸಮ್ಮಿಲನವಾಗಿದೆ. ಅದೇ ರೀತಿ ಸಮಭಂಗಿಯಲ್ಲಿ ನಿಂತ ಸೂರ್ಯನ ಮೂರ್ತಿಯು ಗಮನ ಸೆಳೆಯುತ್ತದೆ. ಈ ಗುಡಿಯ ಲಕ್ಷಣಗಳನ್ನು ಗಮನಿಸಿದಾಗ ಇದು ತ್ರಿಕೂಟವಾಗಿದ್ದಿರಬೇಕೆಂದು ಹೇಳಬೇಕಾಗುತ್ತದೆ. ಊರ ಹೊರಗೆ ಗರ್ಭಗೃಹ, ಅಂತರಾಳವಷ್ಟೆ ಉಳಿದಿರುವ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ಶಿಥಿಲವಾಗಿರುವ ಡೊಳ್ಳೇಶ್ವರ ಗುಡಿಯಿದೆ. ಈ ಗುಡಿಯ ಪರಿಸರದಲ್ಲಿ ಒಂದೆರಡು ವೀರಗಲ್ಲುಗಳು ನಿಂತಿವೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ದ್ಯಾಮವ್ವ, ಮೈಲಾರಲಿಂಗ, ಗಣಪತಿ ಮತ್ತು ಹುಲ್ಲಪ್ಪನ ಗುಡಿಗಳಿವೆ. ದ್ಯಾಮವ್ವನ ಗುಡಿಯಲ್ಲಿ ಕಟ್ಟಿಗೆಯ ದುರ್ಗಾಮೂರ್ತಿ ಉಗ್ರವಾಗಿದ್ದರೂ ಚೆನ್ನಾಗಿದೆ. ಹುಲ್ಲಪ್ಪನ ಜಾತ್ರೆ ಮೇ ತಿಂಗಳಲ್ಲಿ ನಡೆಯುತ್ತದೆ. ಊರಲ್ಲಿ ಒಂದು ಮಸೀದಿ ಹಾಗೂ ಎರಡು ದರ್ಗಾಗಳಿದ್ದು, ಅದರಲ್ಲೊಂದು ಮೆಹಬೂಬ ಸುಬಾನಿಯದಾಗಿದ್ದು, ಅನುಕೂಲವಾದಾಗ ಉರುಸು ಆಚರಿಸುತ್ತಾರೆ. ದೇವಗಿರಿ ರಸ್ತೆಯಲ್ಲಿರುವ ಮುಸ್ಲಿಂ ಸ್ಮಶಾನದಲ್ಲಿ ಆದಿಲ್‌ಷಾಹಿ ಕಾಲದ ಸುಂದರವಾದ ಕಟ್ಟಡವಿದ್ದು ಅದನ್ನು ಸುಂದರವಾದ ಕಮಾನುಗಳು, ಆಕರ್ಷಕವಾದ ಮಿನಾರೆಟ್‌ಗಳು ಅಲಂಕರಿಸಿದ್ದು ಒಳಗೆ ಐದು ಸಾಲಿನ ಪರ್ಷಿಯನ್ ಶಾಸನವಿದೆ. ಅದೇ ರೀತಿ ಹೊಳೆ ದಂಡೆಯಲ್ಲಿ ಆದಿಲ್‌ಷಾಹಿ ಕಾಲಕ್ಕೆ ಸೇರಿದ ಕಲಾತ್ಮಕವಾದ ಮಸೀದಿಯಿದೆ.

**ಕೋಳಿವಾಡ:** ಹುಬ್ಬಳ್ಳಿ ತಾಲೂಕಿನ ಕೋಳಿವಾಡವು (ಜನಸಂಖ್ಯೆ : 4,323) ಹುಬ್ಬಳ್ಳಿಯಿಂದ ಪೂರ್ವಕ್ಕೆ 29 ಕಿ.ಮೀ. ದೂರದಲ್ಲಿ ಹುಬ್ಬಳ್ಳಿ-ಗದಗ ರಸ್ತೆಯಲ್ಲಿ ಸ್ವಲ್ಪ ಒಳಕ್ಕೆ ಇರುವ ಊರು. ಪ್ರಾಚೀನ ಶಾಸನಗಳಲ್ಲೂ 'ಕೋಳಿವಾಡ' ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ಕ್ರಿ.ಶ. 10 ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಖೊಟ್ಟಿಗನ ಶಾಸನ ಪ್ರಾಚೀನವಾಗಿದ್ದು, ಇದು ಗಂಗ ಸತ್ಯವಾಕ್ಯ ಕೊಂಗುಣಿ ವರ್ಮನನ್ನು ಉಲ್ಲೇಖಿಸಿದರೆ, ಕಲ್ಮೇಶ್ವರ ಗುಡಿ ಆವರಣದಲ್ಲಿರುವ ಕ್ರಿ.ಶ. 12 ನೇ ಶತಮಾನದ ಶಾಸನವೊಂದರಿಂದ ಕೋಳಿವಾಡವು 200 ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿತ್ತೆಂಬ ಅಂಶ ಗೊತ್ತಾಗುತ್ತದೆ. ಇದೇ ಗುಡಿಯ ಆವರಣದಲ್ಲಿದ್ದ ತಾರಾಭಗವತಿ ಪಾದಪೀಠದ ಮೇಲಿನ ನಾಗರಿ ಶಾಸನ ಆರ್ಯ ತಾರಾಭಗವತಿಯ ಪ್ರಾರ್ಥನೆಯನ್ನು ಹೊಂದಿದ್ದು, ಇದು ಈಗ ಧಾರವಾಡದ ಕರ್ನಾಟಕ ಸಂಶೋಧನಾ ಸಂಸ್ಥೆಯಲ್ಲಿದೆ. ಇದರಿಂದ ಕೋಳಿವಾಡವೂ ಕೂಡ ಡಂಬಳದಂತೆ ಒಂದು ಬೌದ್ಧ ಕೇಂದ್ರವಾಗಿತ್ತೆಂಬ ಅಂಶ ವೇದ್ಯವಾಗುತ್ತದೆ. ನಾರಾಯಣ ದೇವರ ಗುಡಿ ಮುಂದಿರುವ ಕ್ರಿ.ಶ. 1563 ರ ಸ್ತಂಭ ಶಾಸನ ಸೂರಪ್ಪನು ಮಾಧವ, ಜನಾರ್ಧನ ದೇವರ ಗುಡಿಗೆ ಪಾತ್ರಕ್ಕೆಂದು ತಿರುಮಲ ಬೋವನ ಮಗಳು ಸೂರಿಯ ಮಾಣಿಕಿ ಎಂಬ ಹೆಣ್ಣನ್ನು ಕಾಣಾಚಿಯ ಪಾತ್ರವಾಗಿ ಬಿಟ್ಟ ಅಪರೂಪದ ವಿಷಯವನ್ನು ತಿಳಿಸುತ್ತದೆ. ಇಂದು ಊರಲ್ಲಿ ಪ್ರಾಚೀನವೆನ್ನಬಹುದಾದ ನಾರಾಯಣ ಗುಡಿ, ಊರ ನಡುವೆ ಎತ್ತರವಾದ ವೇದಿಕೆಯ ಮೇಲಿದೆ. ಗರ್ಭಗೃಹ ಹಾಗೂ ಅಂತರಾಳವಷ್ಟೆ ಉಳಿದಿರುವ ಈ ಗುಡಿಯ ಗರ್ಭಗೃಹದಲ್ಲಿ ಸಿಂಹ ಪೀಠದ ಮೇಲೆ ಗರುಡ ಪೀಠ ಹೊಂದಿರುವ ನಾರಾಯಣನ ಮೂರ್ತಿಯಿದೆ. ಎರಡೂ ದ್ವಾರಗಳ ಬಾಗಿಲವಾಡ ತ್ರಿಶಾಖಾಲಂಕಾರ ಹೊಂದಿದ್ದು ಲಲಾಟದಲ್ಲಿ ಕಮಲವಿದೆ. ಇದರೊಂದಿಗೆ ಊರಲ್ಲಿ ಕಲ್ಮೇಶ್ವರ, ಶಂಕರಲಿಂಗ, ಬಸವಣ್ಣ, ಮೈಲಾರ ಹನುಮಂತ, ಪೇಟೆ ಬಸವಣ್ಣ, ವೀರಪ್ಪ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿವೆ. ಕಲ್ಮೇಶ್ವರ ಗುಡಿ ಆವರಣದಲ್ಲಿರುವ ಕಲ್ಲೊಂದು ಕೆಳಪಟ್ಟಿಕೆಯಲ್ಲಿ ಪಂಚ ಮಂಗಳ ಚಿಹ್ನೆಯನ್ನೂ ನಡುವಿನ ಪಟ್ಟಿಕೆಯಲ್ಲಿ ಹೋರಾಡುತ್ತಿರುವ ವೀರನನ್ನೂ ಮೇಲು ಪಟ್ಟಿಕೆಯಲ್ಲಿ ಲಲಿತಾಸನದ ಯೋಧನ ಅಪೂರ್ವ ಕೆತ್ತನೆಯನ್ನೂ ಹೊಂದಿದ್ದು ಗಮನಾರ್ಹವಾಗಿದೆ. ಇಲ್ಲೇ

ಸೂರ್ಯ, ಗಣಪತಿಗಳ ಮುಕ್ಕಾದ ಶಿಲ್ಪಗಳಿವೆ. ಊರಲ್ಲಿ ಹೊರಗಿನಮಠ ಹಾಗೂ ಶರಣಬಸಪ್ಪನ ಮಠಗಳಿವೆ. ಒಂದೇ ಒಂದು ಮಸೀದಿ ಇದೆ.

**ಕಿರೇಸೂರು:** ಹುಬ್ಬಳ್ಳಿ ತಾಲೂಕಿನ ಕಿರೇಸೂರು (ಜನಸಂಖ್ಯೆ : 3,287) ಹುಬ್ಬಳ್ಳಿಯಿಂದ ವಾಯುವ್ಯಕ್ಕೆ 20 ಕಿಮೀ ದೂರದಲ್ಲಿ ಹೆಬ್ಬಸೂರಿನಿಂದ ಸುಮಾರು ಒಂದು ಕಿಮೀ ದೂರದಲ್ಲಿದೆ. ಈ ಊರಿಂದ ಈವರೆಗೆ ಕ್ರಿ.ಶ. 1623ರ ಒಂದು ಶಾಸನ ವರದಿಯಾಗಿದ್ದು, ಗುಡಿಗೆ ಸಂಕನಗೌಡನ ಮಗ ಲಿಂಗನಗೌಡ ಬಾಗಿಲು ನಿರ್ಮಾಣ ಮಾಡಿದ ವಿಷಯ ತಿಳಿಸುತ್ತದೆಯಾದರೂ ಊರ ಕೆರೆ ಬಳಿ ಹರಡಿಕೊಂಡಿರುವ ಗೋಸಾಸ ಕಲ್ಲುಗಳಿಂದ ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಕೆರೆಯ ದಂಡೆಯ ಮೇಲಿರುವ ಕಲ್ಮೇಶ್ವರ ಗುಡಿ ಆವರಣದಲ್ಲಿ ಸ್ಥಳೀಕರು ಬೋರಗಲ್ಲೆಂದೇ ಕರೆಯುವ ರಾಷ್ಟ್ರಕೂಟರ ಕಾಲದ ಏಳು ಗೋಸಾಸ ಕಲ್ಲುಗಳು ಚದುರಿಕೊಂಡು ನಿಂತಿವೆ. ಸ್ವಲ್ಪ ತೆಳುವಾಗಿರುವ ಈ ಕಲ್ಲುಗಳು ಸುಮಾರು ಐದು ಅಡಿ ಎತ್ತರವಿದ್ದು ಅರ್ಧದಷ್ಟು ಹೂಳಲ್ಪಟ್ಟಿದ್ದು, ಯಾವುದೇ ಬಗೆಯ ಕೆತ್ತನೆಯನ್ನು ಹೊಂದಿರದೆ ಸರಳವಾಗಿದ್ದು ಇವುಗಳನ್ನು ಸುಮಾರು ಕ್ರಿ.ಶ. 10 ನೇ ಶತಮಾನಕ್ಕೆ ಗುರುತಿಸಬಹುದಾಗಿದೆ. ಕೆರೆಗೆ ಹೋಗುವ ಹಾದಿಯಲ್ಲೇ ಬಲಬದಿಯಲ್ಲಿ ಪೀಠವನ್ನೂ ಹೊಂದಿರುವ ಆಕರ್ಷಕವಾದ 4.5 ಅಡಿ ಎತ್ತರದ ಬಾದುಬ್ಬೆಯ ಶಿಲ್ಪವಿದೆ. ನಡುವೆ ಎರಡೂ ಕೈಯಲ್ಲಿ ಕಮಲ ಹಿಡಿದು ಕುಳಿತ ಲಕ್ಷ್ಮಿಗೆ ಸೊಂಡಿಲಿಂದ ಕುಂಭಾಭಿಷೇಕ ಮಾಡುತ್ತಿರುವ ಆನೆಗಳು ಬಹಳ ಸುಂದರವಾಗಿ ಕೆತ್ತಲ್ಪಟ್ಟಿದ್ದು ಕೆಳಭಾಗದಲ್ಲಿ ವಾದ್ಯವೃಂದದ ನಡುವೆ ಮಂಟಪದಲ್ಲಿರುವ ಒಂದರ ಮೇಲೊಂದರಂತೆ ಇಟ್ಟ ಕುಂಭಗಳು ಗಮನಾರ್ಹವಾಗಿವೆ. ಉತ್ತಮ ಕಲಾಕೃತಿಯಾದ ಇದು ಬೆಣ್ಣೆಹಳ್ಳದಲ್ಲಿ ಲಭಿಸಿದ್ದೆಂದು ಸ್ಥಳೀಕರು ಅಭಿಪ್ರಾಯಪಡುತ್ತಾರೆ. ಇದು ಸುಮಾರು ಕ್ರಿ.ಶ. 10 ನೇ ಶತಮಾನದ ಅಪರೂಪದ ಶಿಲ್ಪವಾಗಿದೆ. ಇಲ್ಲಿನ ಸಿದ್ಧಲಿಂಗೇಶ್ವರ ಗುಡಿ ಮುಂದೆ ಸುಮಾರು ನಾಲ್ಕು ಅಡಿ ಎತ್ತರದ ಪದ್ಮಾಸೀನ ಪಾರ್ಶ್ವನಾಥ ತೀರ್ಥಂಕರ ಮೂರ್ತಿಯಿದ್ದು ಇದರ ಸಿಂಹಪೀಠದ ಮೇಲೆ ಸುಮಾರು ಕ್ರಿ.ಶ. 11 ನೇ ಶತಮಾನದ ಎರಡು ಸಾಲಿನ ಶಾಸನವಿದ್ದು, ಮೂರ್ತಿ ಪ್ರತಿಷ್ಠೆಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತದೆ. ಇದೂ ಕೂಡ ಬೆಣ್ಣೆಹಳ್ಳದಲ್ಲಿ ದೊರೆತ ಮೂರ್ತಿಯೆಂದು ಊರವರು ಹೇಳುತ್ತಾರೆ. ಗುಡಿಯ ಆವರಣದಲ್ಲಿ ಸುಂದರವಾದ ಸಪ್ತಮಾತೃಕಾ ಶಿಲ್ಪವಿದೆ.

ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ಕಲ್ಮೇಶ್ವರ, ಬಯಲ ಬಸಪ್ಪ, ಹನುಮಂತ, ಮೈಲಾರ, ಚಂಡಿಕೇಶ್ವರ, ತಾಯಮ್ಮ, ದ್ಯಾಮವ್ವ, ಹಾಗೂ ಕೊರಮ್ಮನ ಗುಡಿಗಳಿವೆ. ಹರಿಜನರ ಓಣಿಯಲ್ಲಿರುವ ಮೈಲಾರನ ಗುಡಿಯಲ್ಲಿ ಸುಮಾರು ಕ್ರಿ.ಶ. 13 ನೇಯ ಶತಮಾನದ ಮೈಲಾರ-ಮಾಳಚಿ ದೇವಿಯ ಸುಂದರವಾದ ಶಿಲ್ಪವಿದ್ದು ಈ ಶಿಲ್ಪದಲ್ಲಿ ಮೈಲಾರನಿಗೆ ಕುದುರೆ, ಮಾಳಚಿಗೆ ಉಡವನ್ನು ವಾಹನವಾಗಿ ಕೆತ್ತಿದ್ದು ಗಣಪತಿ ಹಾಗೂ ಕಾರ್ತಿಕೇಯನನ್ನೂ ಕೆತ್ತಿರುವುದು ಗಮನಾರ್ಹವಾಗಿದೆ. ಊರ ಅಂಚಿನಲ್ಲಿ ಇತ್ತೀಚೆಗೆ ನಿರ್ಮಾಣಗೊಂಡಿರುವ ಪ್ರಭುದೇವರ ಮಠ ವಿಶಾಲವಾಗಿದ್ದು ಕಲ್ಯಾಣಮಂಟಪವನ್ನೂ ಹೊಂದಿದೆ. ಊರಲ್ಲೊಂದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾ ಇವೆ.

**ಕೆಲವರಕೊಪ್ಪ:** ಹಾನಗಲ್ ತಾಲೂಕಿನ ಕೆಲವರಕೊಪ್ಪ (ಜನಸಂಖ್ಯೆ : 1,500) ಅಥವಾ ಶಾಸನೋಕ್ತ 'ಕೆಲವೂರು' (ಹಾನಗಲ್‌ನಿಂದ 38 ಕಿ.ಮೀ.) ಅನೇಕ ಅವಶೇಷಗಳನ್ನು ಹೊಂದಿರುವ ಸ್ಥಳವಾಗಿದೆ. ಈ ಊರಿನಲ್ಲಿ ಕಲ್ಲೇಶ್ವರ (ಬಸ್‌ಸ್ಟ್ಯಾಂಡ್ ಹತ್ತಿರ), ರಾಮಲಿಂಗೇಶ್ವರ, ಮಳಿಮಲ್ಲಪ್ಪ (ಗುಡ್ಡದಲ್ಲಿ), ಭರಮ, ದುರ್ಗವ್ವ, ಮಾತಂಗಿ, ಮೈಲಾರಲಿಂಗ, ಹನುಮಂತ, ಬಸವಣ್ಣ ಮತ್ತು ವೀರಭದ್ರ ದೇವಾಲಯಗಳಿವೆ. ರಾಮಲಿಂಗೇಶ್ವರ ದೇವಾಲಯವು ಚಾಲುಕ್ಯಶೈಲಿಯ ಕಿರು ಕಟ್ಟಡವಾಗಿದೆ. ಇದರ ಸಮೀಪ ಒಂದು ವೀರಗಲ್ಲು ಹಾಗೂ ಮಾಸ್ತಿಕಲ್ಲಿದೆ. ಊರಹೊರಗೆ ಕೆರೆಯ ದಂಡೆಯಲ್ಲಿರುವ ಈಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹವು ಇಟ್ಟಿಗೆಯ ಒಳಗೋಡೆಯನ್ನು ಹೊಂದಿದೆ. ನವರಂಗದಲ್ಲಿ ರಾಷ್ಟ್ರಕೂಟ ಶೈಲಿಯ ಕಂಬಗಳಿವೆ. ಇಲ್ಲಿ ಭೈರವ, ಉಮಾಮಹೇಶ್ವರ, ಒಂದು ಚಿಕ್ಕ ಸ್ತ್ರೀ ವಿಗ್ರಹ (ಭಗ್ನವಾಗಿದೆ), ಕೇಶವ, ಮಹಿಷಮರ್ದಿನಿ, ಸೂರ್ಯ ಮುಂತಾದ ಬಿಡಿ ಶಿಲ್ಪಗಳು ಹಾಗೂ ಶಾಸನದ ಭಾಗವನ್ನು ಇರಿಸಲಾಗಿದೆ. ಕಲ್ಲೇಶ್ವರ ಗುಡಿಯು ಪೂರ್ಣವಾಗಿ ಕುಸಿದಿದ್ದು ಕೇವಲ ಮರದ ಕೆತ್ತನೆಯುಳ್ಳ ಬಾಗಿಲುವಾಡ ಹಾಗೂ ಮಹಿಷಮರ್ದಿನಿಯ ವಿಗ್ರಹವಿದೆ. ವೀರಭದ್ರಗುಡಿಯ ಹತ್ತಿರದ ಮಾಸ್ತಿಕಲ್ಲು ಶಾಸನವು (ಸುಮಾರು ಕ್ರಿ.ಶ. 13 ನೇಯ ಶತಮಾನ) ಕಲವೂರಿನ ಬೊಮ್ಮದೇವನ ಹೆಂಡತಿ ಬೊಮಕವ್ವನ ಸಹಗಮನವನ್ನು ದಾಖಲಿಸುತ್ತದೆ. ಈಶ್ವರ ದೇವಾಲಯದ ಹತ್ತಿರವಿರುವ ಆರನೇಯ ವಿಕ್ರಮಾದಿತ್ಯನ ಕಾಲದ ಶಾಸನವು ಅಸ್ಪಷ್ಟವಾಗಿದ್ದು ಬನವಾಸಿನಾಡನ್ನಾಳುವ ಪನ್ನಮರಸನ ಹೆಸರನ್ನು ಮಾತ್ರ

ಉಲ್ಲೇಖಿಸುತ್ತದೆ. ಈ ಊರಿನ ಸಮೀಪ ಗುಡ್ಡದಲ್ಲಿರುವ ಮೈಲಾರಲಿಂಗನ ದೇವಾಲಯದಲ್ಲಿ ಭಾರತ ಹುಣ್ಣಿಮೆಯಂದು ಜಾತ್ರೆ ಜರುಗುತ್ತದೆ.

**ಕೊರಲಹಳ್ಳಿ:** ಮುಂಡರಗಿ ತಾಲೂಕಿನ ಕೊರಲಹಳ್ಳಿಯು (ಜನಸಂಖ್ಯೆ : 2,694) ಮುಂಡರಗಿಯಿಂದ 10 ಕಿಮೀ ದೂರದಲ್ಲಿ ತುಂಗಭದ್ರಾ ತೀರದ ಎಡದಂಡೆಯಲ್ಲಿದೆ. ಈ ಊರು ಹಿಂದೆ ಮಾಸವಾಡಿ-140 ಕ್ಕೆ ಸೇರಿತ್ತು. ಮಾಧ್ವಮತದ ಅನುಯಾಯಿಗಳಿಗೆ ಪವಿತ್ರ ಸ್ಥಳವಾಗಿದೆ. ಕೊರಲಹಳ್ಳಿಯಲ್ಲಿ ಕಲ್ಲಿನ ಸೇತುವೆಯನ್ನು ತುಂಗಭದ್ರಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಈ ಸೇತುವೆಯು ಮೂಲತಃ ವಿಜಯನಗರದ ಅರಸರು ಕಟ್ಟಿಸಿದ್ದರೆಂಬ ಪ್ರತೀತಿಯಿದೆ. ಈ ಸೇತುವೆಗೆ ಸೇರಿರುವ ಚಾಳುಕ್ಯ ಮೊದಲನೇ ಸೋಮೇಶ್ವರನ ಕಾಲದ ಕ್ರಿ.ಶ. 1050ರ ಶಾಸನ ಕಿಸುಕಾಡು-70, ಬಾಗಡಗೆ-70, ತೊರಗಲೆ ಮತ್ತು ಮಾಸವಾಡಿ-140ನ್ನು ಆಳುತ್ತಿದ್ದ ಅಕ್ಕಾದೇವಿಯು ಭೂದಾನ ಮಾಡಿದ ವಿಚಾರ ಉಲ್ಲೇಖಿಸುತ್ತದೆ. ತುಂಗಭದ್ರಾ ದಂಡೆಯ ಮೇಲಿರುವ ಕಲ್ಲೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ ಚಾಳುಕ್ಯ ಶೈಲಿಯ ಕಟ್ಟಡವಾಗಿದೆ. ಈ ದೇವಾಲಯದ ಬಾಗಿಲವಾಡಗಳು 2-3-5 ಶಾಖೆಯ ಅಲಂಕಾರವನ್ನು ಹೊಂದಿದೆ. ಈ ದೇವಾಲಯದ ಹತ್ತಿರವೇ ಸತ್ಯವೀರತೀರ್ಥರ ಮಠವಿದೆ. ಸತ್ಯವೀರ ತೀರ್ಥರು ಉತ್ತರಾಧಿಮಠದ ಗುರುಪರಂಪರೆಯಲ್ಲಿ ಬಹಳ ಮುಖ್ಯರಾದ ಯತಿಗಳು. ಅವರು ಪಾಂಡಿತ್ಯ ಪೂರ್ಣವಾದ ಶಾಸ್ತ್ರಗ್ರಂಥಗಳಿಗೆ ತಮ್ಮ ಭಾಷ್ಯವನ್ನು ರಚಿಸಿರುವರು. ಯತಿಗಳು ರಚಿಸಿರುವ 'ತಪ್ತಚಕ್ರಭೂಷಣ' ಗ್ರಂಥವು ಮಧ್ವತತ್ವ ಅನುಷ್ಠಾನದ ಬಗೆಗೆ ರಚಿಸಿರುವ ದಾರ್ಶನಿಕ ಕೃತಿಯಾಗಿದೆ. ಪ್ರಸ್ತುತ ಮಠದಲ್ಲಿ ಸತ್ಯವೀರ ತೀರ್ಥರ ಬೃಂದಾವನವೂ ಇದೆ; ಕಾರ್ತಿಕ ಶುದ್ಧ ದಶಮಿಯಂದು ಸತ್ಯವೀರತೀರ್ಥರ ಆರಾಧನೆಯು ಮೂರು ದಿನಗಳು ನಡೆಯುತ್ತದೆ. ಊರಲ್ಲಿ ಹನುಮಂತ, ಬಸವಣ್ಣ, ಗ್ರಾಮದೇವತೆಗಳಿದ್ದು ಮಸೀದಿ ಮತ್ತು ದರ್ಗಾಗಳಿವೆ.

**ಗಂಜೀಗಟ್ಟಿ:** ಶಿಗ್ಗಾಂವಿ ತಾಲೂಕಿನ ಗಂಜೀಗಟ್ಟಿಯು (ಜನಸಂಖ್ಯೆ : 1,334) ಶಿಗ್ಗಾಂವಿಯಿಂದ ಎರಡು ಕಿ.ಮೀ. ದೂರದಲ್ಲಿದೆ. ಈ ಊರಿನಲ್ಲಿ ಹಲವಾರು ಐತಿಹಾಸಿಕ ಅವಶೇಷಗಳು ಕಂಡುಬರುತ್ತವೆ. ಈ ಊರಿನ ಪ್ರಮುಖ ದೇವಾಲಯಗಳೆಂದರೆ ವೀರಭದ್ರ, ಕರೆವ್ವ, ಕಲ್ಲೇಶ್ವರ, ಮಾರುತಿ ಮುಂತಾದವುಗಳು. ಇತ್ತೀಚೆಗೆ ನಿರ್ಮಿಸಲಾಗಿರುವ ಮಾರುತಿ ದೇವಾಲಯದ ಪರಿಸರದಲ್ಲಿ ಹಲವಾರು ಚಾಳುಕ್ಯ ಅವಶೇಷಗಳು ಕಂಡುಬರುತ್ತವೆ. ಈ ಗುಡಿಯ ಹಿಂಭಾಗದಲ್ಲಿ ಕಲ್ಮೇಶ್ವರ ದೇವಾಲಯದ್ದೆಂದು ಹೇಳಲಾಗುವ ಬೃಹದಾಕಾರವಾದ (8' x 8') ಛಾವಣಿಯಲ್ಲಿದ್ದಿರಬಹುದಾದ ಅಖಂಡ ಶಿಲ್ಪವಿದೆ. ಇದರಲ್ಲಿ ನಟರಾಜನ (ಗಜಚರ್ಮಧಾರಿ) ಮತ್ತು ಅಷ್ಟದಿಕ್ಪಾಲಕರ ಉಬ್ಬು ಶಿಲ್ಪಗಳಿದ್ದು, ಫಲಕವನ್ನು ಒಂದು ಕಟ್ಟೆಗೆ ಅನಿಸಿಡಲಾಗಿದೆ. ಈ ಸುಂದರ ಛಾವಣಿಯ ಶಿಲ್ಪವು ಚಾಳುಕ್ಯ ಶೈಲಿಯ ಉತ್ತಮ ಕಲಾಕೃತಿಯಾಗಿದೆ. ಇದರ ಪಕ್ಕದಲ್ಲಿಯೇ ಇನ್ನೊಂದು ಆರು ಕಮಲಗಳುಳ್ಳ ಫಲಕವಿದ್ದು ಭಾಗಶಃ ಒಡೆದಿದ್ದು ಇದೂ ಸಹ ಛಾವಣಿಯ ಶಿಲ್ಪವಾಗಿದೆ. ಗುಡಿ ಬಳಿ ಒಂದು ಮಹಾಸತಿ ಕಲ್ಲು ಹಾಗೂ ಇಬ್ಬರು ವೀರರು ಧನಸ್ಸು ಹಿಡಿದು ನಿಂತಿರುವ ಒಂದು ವೀರಗಲ್ಲಿದೆ. ಇದರ ಸಮೀಪವೇ ಚಾಳುಕ್ಯ ಶೈಲಿಯ ಕಂಬದ ಒಂದು ತುಣುಕು ಇದೆ. ಕಲ್ಮೇಶ್ವರ ದೇವಾಲಯದ ಗರ್ಭಗೃಹ ಮಾತ್ರ ಉಳಿದಿದ್ದು ಒಳಗೆ ಪ್ರಾಚೀನ ವೃತ್ತಾಕಾರದ ಕುಬ್ಜ ಪೀಠದ ಮೇಲೆ ಲಿಂಗವಿದೆ. ಈಗ ದೇವಾಲಯವನ್ನು ಸಂಪೂರ್ಣವಾಗಿ ದುರಸ್ತಿಗೊಳಿಸಲಾಗಿದೆ. ಕಲ್ಮೇಶ್ವರದ ರಥೋತ್ಸವವು ದವನದ ಹುಣ್ಣಿಮೆಗೆ ಜರಗುತ್ತದೆ. ಊರಿನಲ್ಲಿ ವೀರಶೈವ ಸಂಪ್ರದಾಯದ ಚರಮೂರ್ತೀಶ್ವರ ಮಠವಿದೆ. ಈ ಕಟ್ಟಡದಲ್ಲೂ ಚಾಳುಕ್ಯ ಕಂಬಗಳನ್ನು ಬಳಸಲಾಗಿದೆ. ಒಳಗೆ ಶಂಭುಲಿಂಗ ಚರಮೂರ್ತೀಶ್ವರ ಸ್ವಾಮಿಗಳ (ಕ್ರಿ.ಶ. 1927) ಗದ್ದುಗೆಯಿದೆ. ಈಗ ಚರಮೂರ್ತೀಶ್ವರರ ಗದ್ದುಗೆಯನ್ನು ಜೀರ್ಣೋದ್ಧಾರಗೊಳಿಸಲಾಗುತ್ತಿದ್ದು ಶಿವಲಿಂಗ ಚರಮೂರ್ತಿ ಸ್ವಾಮಿಗಳು ಈ ಮಠದ ಪೀಠವನ್ನು ಅಲಂಕರಿಸಿರುವರು. ಇಲ್ಲಿ ಶಿವರಾತ್ರಿಗೆ ತೇರು ಎಳೆಯುತ್ತಾರೆ; ಹಾಗೂ ಕಾರ್ತೀಕ ಮಾಸದಲ್ಲಿ ದೇವಾರಾಧನೆ ಮಾಡುತ್ತಾರೆ.

**ಗಂಜೀಗಟ್ಟಿ:** ಕಲಘಟಗಿ ತಾಲೂಕಿನ ಗಂಜೀಗಟ್ಟಿಯು (ಜನಸಂಖ್ಯೆ : 3,107) ಕಲಘಟಗಿಗೆ 12 ಕಿಮೀ ದೂರದಲ್ಲಿದ್ದು ಮಿಶ್ರಿಕೋಟೆಯ ನೆರೆಯ ಗ್ರಾಮವಾಗಿದೆ. ಈ ಊರಿಂದ ಈವರೆಗೆ ಯಾವುದೇ ಶಾಸನಗಳು ವರದಿಯಾಗಿಲ್ಲ. ಊರ ಹೊರಗೆ ಎತ್ತರವಾದ ಗುಡ್ಡದ ಮೇಲೆ ಸುಮಾರು ಕ್ರಿ.ಶ. 12 ನೇ ಶತಮಾನದ ನಾಗಲಿಂಗೇಶ್ವರ ಗುಡಿಯಿದೆ. ಈ ಗುಡಿ ಬಳಿ ಸುಮಾರು ಕ್ರಿ.ಶ. 12 ನೇಯ ಶತಮಾನಕ್ಕೆ ಸೇರಿದ ಶಾಸನವೊಂದನ್ನು ಇತ್ತೀಚೆಗೆ ಗಮನಿಸಲಾಗಿದ್ದು ಬಹಳ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಬಾಗಿಲುವಾಡಗಳು ಸರಳವಾಗಿದ್ದು ಅಂತರಾಳದ ದ್ವಾರಬಂಧಕ್ಕೆ ಜಾಲಂಧ್ರಗಳಿವೆ. ನವರಂಗದಲ್ಲಿರುವ

ಎರಡು ದೇವಕೋಷ್ಠಗಳಲ್ಲಿ ಕ್ರಮವಾಗಿ ಗಣಪತಿ ಹಾಗೂ ಆದಿತ್ಯನ ಕಂಬಗಳಿವೆ. ನವರಂಗದ ಮುಂಭಾಗ ಹಾಳಾಗಿದ್ದು ಇಲ್ಲಿ ನಂದಿಯಿದೆ. ಈ ಗುಡಿಯ ಗರ್ಭಗೃಹವನ್ನು ಕದಂಬ ನಾಗರ ಶಿಖರವು ಅಲಂಕರಿಸಿದೆ. ಭಿತ್ತಿಯನ್ನು ವೈವಿಧ್ಯಮಯವಾದ ಕಿರುಶಿಖರಗಳು ಹಾಗೂ ಅಲಂಕಾರಿಕ ಸ್ತಂಭಗಳಿಂದ ಸಿಂಗರಿಸಿದ್ದು ನಡುವೆ ಭೈರವ ಮುಂತಾದ ದೇವತಾ ಮೂರ್ತಿಗಳನ್ನು ಕೆತ್ತಿದ್ದಾರೆ. ಈ ಗುಡಿಯ ಬದಿಯಲ್ಲೇ ವಿಜಯನಗರ ಕಾಲದ ವೀರಭದ್ರನ ಮೂರ್ತಿಯನ್ನು ಹೊಂದಿರುವ ಇತ್ತೀಚಿನ ಕಟ್ಟಡವಿದೆ. ಊರ ಆರಂಭದಲ್ಲಿರುವ ರಾಮಲಿಂಗ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ ಹಾಗೂ ನಂದಿಗಳಿವೆ. ದುರ್ಗಾ ಗುಡಿ ಬಳಿ ಒಂದೂವರೆ ಅಡಿ ಎತ್ತರದ ಉಮಾಮಹೇಶ್ವರ, ಹಾಗೂ ಕಾಳಿಕಾದೇವಿಯ ಶಿಲ್ಪಗಳಿವೆ. ಸುಣ್ಣದ ಭಟ್ಟಿ, ಇಟ್ಟಿಗೆಯ ಭಟ್ಟಿಗಳಿಗೆ ಹೆಸರಾಗಿರುವ ಈ ಊರಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಗದಗು-ಬೆಟಗೇರಿ** (ಜನಸಂಖ್ಯೆ : 1,34,051) ಧಾರವಾಡದಿಂದ 76 ಕಿಮೀ ದೂರದಲ್ಲಿರುವ ಕಂದಾಯ ಉಪವಿಭಾಗದ ಕೇಂದ್ರ ಹಾಗೂ ತಾಲೂಕು ಕೇಂದ್ರವಾಗಿರುವ ಗದಗ ಮತ್ತು ಬೆಟಗೇರಿ ಎಂಬ ಎರಡು ಊರುಗಳಿಂದ ಅಸ್ತಿತ್ವಕ್ಕೆ ಬಂದ ಒಂದೇ ನಗರ ಸಭೆ ಇರುವ ಅತ್ಯಂತ ಪುರಾತನ ಸ್ಥಳವಾಗಿದೆ. ಉತ್ತಮ ಪ್ರವಾಸಿ ಕೇಂದ್ರವಾಗಲು ಎಲ್ಲ ವಿಧವಾದ ಅರ್ಹತೆ ಪಡೆದಿದ್ದು ಕಲ್ಯಾಣದ ಚಾಳುಕ್ಯ ಶಿಲ್ಪದ ಉತ್ತಮ ಮಾದರಿಗಳನ್ನು ಹೊಂದಿದೆ. ಗದುಗಿನ ನಾರಾಯಣಪ್ಪ ಇದೇ ಸ್ಥಳದಲ್ಲಿ ತನ್ನ ಪ್ರಮುಖ ಗ್ರಂಥವಾದ 'ಕರ್ನಾಟಕ ಭಾರತ ಕಥಾಮಂಜರಿ' ಅಥವಾ ಕುಮಾರವ್ಯಾಸ ಭಾರತವನ್ನು ರಚಿಸಿದನೆಂದು ನಂಬಲಾಗಿದೆ. ಕರ್ನಾಟಕದ ಏಕೀಕರಣದ ಸ್ಫೂರ್ತಿದಾಯಕ ಗೀತೆಯಾದ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ನಾಡಗೀತೆಯನ್ನು ರಚಿಸಿದ ಹುಯಿಲಗೋಳ ನಾರಾಯಣರಾಯರು ಇದೇ ಸ್ಥಳದವರು. ಈ ಊರಿನ ಸ್ಥಳ ನಾಮದ ಬಗೆಗೆ ಹಲವಾರು ವಿಶ್ಲೇಷಣೆಗಳಿವೆ. ಹಲವಾರು ಶಾಸನಗಳಲ್ಲಿ ಈ ಊರನ್ನು 'ಗಲದುಗ, 'ಕಲ್‌ದುಗು', 'ಗರದುಗ', 'ಕರದುಗ', 'ಕರ್ತುಕ', 'ಕೃತಪುರ', 'ಕರದುಗು', 'ಗದುಗು', ಎಂದು ವಿಧವಿಧವಾಗಿ ಉಲ್ಲೇಖಿಸಲಾಗಿದೆ. ಆದರೆ ಕ್ರಿ.ಶ. 1002 ರ ಅಹವಮಲ್ಲನ ತ್ರಿಕೂಟೇಶ್ವರ ದೇವಾಲಯದಲ್ಲಿನ ಶಾಸನದಲ್ಲಿ 'ಕರ್ದುಗಿನ' ಎಂದು ಗದುಗಿಗೆ ಉಲ್ಲೇಖಿಸಿರುವುದು ಕಂಡುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದಿಂದಲೇ ಈ ಸ್ಥಳವು ಪ್ರಸಿದ್ಧಿ ಪಡೆದಿತ್ತೆಂದು ತಿಳಿದು ಬರುತ್ತದೆ. ರಾಷ್ಟ್ರಕೂಟ ಇಂದ್ರನ ಕ್ರಿ.ಶ. 918ರ ಶಾಸನದಲ್ಲಿ ಈಗ ಗದುಗಿನ ಪಟ್ಟಣದ ಭಾಗವಾಗಿರುವ ಬೆಟಗೇರಿಯು 'ಬಟ್ಟಕೆರೆ' ಎಂದು ಉಲ್ಲೇಖಗೊಂಡಿದೆ. ('ವಟ್ಟಕೇರ' ಎಂಬ ಪ್ರಾಕೃತ ಲೇಖಕ ಇದೇ ಊರವನೆಂದು ಅಭಿಪ್ರಾಯ) ಈ ಶಾಸನದ ಕಲ್ಲು ಈಗ ಗದುಗಿನ ವೀರನಾರಾಯಣ ದೇವಾಲಯದ ಉತ್ತರ ಪ್ರಾಕಾರದ ಗೋಡೆಯಲ್ಲಿ ಕಂಡು ಬರುತ್ತದೆ. ಚಾಳುಕ್ಯ ಇರಿವ ಬೆಡಂಗ ಸತ್ಯಾಶ್ರಯನ ಕ್ರಿ.ಶ. 1008 ರ ಶಾಸನದಲ್ಲಿ ಈ ಸ್ಥಳವನ್ನು 'ಕಲದುಗು' ಅಗ್ರಹಾರವೆಂದು ಉಲ್ಲೇಖಿಸಲಾಗಿದೆ. ಡಾ: ಸುಂದರ ಅವರು ಇಲ್ಲಿರುವ ತ್ರಿಕೂಟೇಶ್ವರ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾಗಿರಬಹುದೆಂದು ಅನಂತರ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವಿಸ್ತರಿಸಲಾಯಿತೆಂದೂ ಅಭಿಪ್ರಾಯಪಡುತ್ತಾರೆ. ಗದುಗು ಬೆಳವೊಳ-300 ಎಂಬ ಆಡಳಿತ ವಿಭಾಗದ ಒಂದು ಪ್ರಮುಖ ಪಟ್ಟಣವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ದೇವಗಿರಿ (ದೌಲತಾಬಾದ) ಸೇವುಣರಿಗೂ ಹಾಗೂ ಹೊಯ್ಸಳರಿಗೂ ನಡುವೆ ನಡೆದ ಸೆಣಸಾಟದಲ್ಲಿ ಬೆಳವೊಲ-300 ಒಂದು ಮುಖ್ಯ ಪ್ರದೇಶವಾಗಿತ್ತು. ಈ ಸ್ಥಳವು ಜನಮೇಜಯನಿಂದ ಸ್ಥಾಪಿತವಾದ ಮಹಾಗ್ರಹಾರವೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ಊರಿನಲ್ಲಿ ಒಟ್ಟು 34 ಶಾಸನಗಳಿದ್ದು ಬಹುತೇಕವಾಗಿ ತ್ರಿಕೂಟೇಶ್ವರ ಮತ್ತು ವೀರನಾರಾಯಣ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಹಲವು ಶಾಸನಗಳು ಬೆಟಗೇರಿ ಮತ್ತು ಲಕ್ಕುಂಡಿಗಳಿಂದ ತರಲಾಗಿವೆ. ಗದುಗಿನ ಜೊತೆಯಲ್ಲೇ ಉಚ್ಛರಿಸುವ ಬೆಟಗೇರಿಯನ್ನು 'ಬಟ್ಟಕೆರೆ' ಎಂದು ಕ್ರಿ.ಶ. 893 ರ ರಾಷ್ಟ್ರಕೂಟ ಎರಡನೇ ಕೃಷ್ಣನ ಕಾಲದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಬಟ್ಟಕೆರೆ ಎಂದರೆ ವೃತ್ತಾಕಾರವಾದ ಕೆರೆ ಎಂದು ಅರ್ಥೈಸಬಹುದಾಗಿದೆ. ಬೆಟಗೇರಿಯು 200 ಮಹಾಜನರು ಇದ್ದ ಅಗ್ರಹಾರವಾಗಿತ್ತೆಂದು ಹಲವಾರು ಶಾಸನಗಳಿಂದ ತಿಳಿದು ಬರುತ್ತದೆ. ಇದೇ ರೀತಿ ಗದಗಿನಲ್ಲೂ 72 ಮಹಾಜನರುಳ್ಳ ಅಗ್ರಹಾರವಿತ್ತೆಂದು ತಿಳಿದು ಬರುತ್ತದೆ. ಗದಗಿನ ಹೊರವಲಯದಲ್ಲಿ ಕಂಡು ಬರುವ ಕ್ರಿ.ಶ. 1072ರ ಶಾಸನವು ಮುಳಗುಂದದಲ್ಲಿ ಕಲ್ಯಾಣದ ಚಾಳುಕ್ಯ ಅರಸ ಎರಡನೇ ಸೋಮೇಶ್ವರನ ರಾಣಿ ಕಾಂಚಲಾದೇವಿ ಈ ಆಡಳಿತ ವಿಭಾಗದಲ್ಲಿ ಆಡಳಿತ ನಿರ್ವಹಣೆ ಮಾಡುತ್ತಿದ್ದಳೆಂದು ತಿಳಿಸುತ್ತದೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಗದಗ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು. ಚಾಳುಕ್ಯ ವಂಶದ ನಾಲ್ಕನೆಯ ಸೋಮೇಶ್ವರನು (ಕ್ರಿ.ಶ. 1185) ಕಳಚೂರಿಯ ಸಾಮ್ರಾಜ್ಯಕ್ಕೆ ಸಿಂಹಾಸನಗ್ರಹಣ ಮಾಡಲು ಪ್ರಯತ್ನಿಸಿದ ಯಾದವ ಭಿಲ್ಲಮನನ್ನೂ ಮತ್ತು ಹೊಯ್ಸಳರ ಎರಡನೇಯ ಬಲ್ಲಾಳನನ್ನೂ ಯಶಸ್ವಿಯಾಗಿ ತಡೆಗಟ್ಟಿದನು. ವಿಜಯನಗರದ ಎರಡನೇಯ ಹರಿಹರನ ತಾಮ್ರ ಶಾಸನ (ಕ್ರಿ.ಶ. 1379) ತೋರಗಲ್ಲು ನಾಡಿನ ವ್ಯಾಪ್ತಿಯಲ್ಲಿರುವ ಗದುಗು ದೇಶದ ತ್ರಿಕೂಟೇಶ್ವರ ಮತ್ತು

ವೀರನಾರಾಯಣ ದೇವಾಲಯಗಳಿಗೆ 66 ಗ್ರಾಮಗಳನ್ನು ದಾನವಾಗಿ ನೀಡಿದುದರ ಬಗೆಗೆ ಉಲ್ಲೇಖವಿದೆ. ಕೃಷ್ಣದೇವರಾಯನ ಕಾಲದ ಕ್ರಿ.ಶ. 1519 ರ ಶಾಸನದಲ್ಲಿ ವೀರನಾರಾಯಣ ದೇವರಿಗೆ ನೀಡಿದ ಹಲವಾರು ದಾನಗಳ ಬಗೆಗೆ ಉಲ್ಲೇಖವಿದೆ. ವಿಜಯನಗರದ ಕಾಲದ ಮತ್ತೊಂದು ಶಾಸನದಲ್ಲಿ (ಕ್ರಿ.ಶ. 1539) ವೀರನಾರಾಯಣ ದೇವಾಲಯದ ದೇವರು ಕುಮಾರವ್ಯಾಸನಿಗೆ ಒಲಿದವನೆಂದು, ಇಲ್ಲಿ ವಿಜಯನಗರದ ಅಚ್ಯುತರಾಯನು ಆನಂದನಿಧಿ ವಿಧಿಯನ್ನು ನೆರವೇರಿಸಿದನೆಂದೂ ಹೇಳುತ್ತದೆ. ಕುಮಾರವ್ಯಾಸನ ಬಗೆಗೆ ಉಲ್ಲೇಖವಿರುವ ಪ್ರಥಮ ಶಿಲಾಶಾಸನವಾಗಿದೆ. ಕ್ರಿ.ಶ. 1763 ರಲ್ಲಿ ಗದಗು ಬಿಜಾಪುರದ ವಶವಾಯಿತು. ಅಬ್ದುಲ್ ಖಾಸಿಂ ಖಾನ್ ಇದರ ಅಧಿಕಾರಿಯಾಗಿದ್ದನು; ಧಾರವಾಡ, ಬಂಕಾಪುರಗಳೂ ಅವನ ವಶವಿದ್ದವು. ವೆಲ್ಲೆಸ್ಲಿಯು ಕ್ರಿ.ಶ. 1799ರಲ್ಲಿ ಧೊಂಡಿಯಾ ವಾಗನ ಬೆನ್ನಟ್ಟಿ ಡಂಬಳ ಕೋಟೆಯನ್ನು ವಶಪಡಿಸಿಕೊಂಡಾಗ ಡಂಬಳ ಮತ್ತು ಗದಗ ಪ್ರದೇಶಗಳು ಆತನ ಆಳ್ವಿಕೆಗೆ ಒಳಪಟ್ಟವು. ಆದರೆ, ವೆಲ್ಲೆಸ್ಲಿಯು ಈ ಎರಡೂ ಸ್ಥಳಗಳಲ್ಲಿದ್ದ ಕೋಟೆಗಳ ಆಡಳಿತವನ್ನು ಆಗ ಗದಗಿನಲ್ಲಿ ಧೋಂಡಿಯಾ ಸೆರೆಹಿಡಿದಿದ್ದ ಪೇಶ್ವೆಯ ದಂಡಾಧಿಕಾರಿಯ ವಶಕ್ಕೆ ತಿರುಗಿಕೊಟ್ಟನು. ಕೊನೆಯ ಮರಾಠ ಯುದ್ಧದಲ್ಲಿ ಸರ್ ಥಾಮಸ್ ಮನ್ರೋ ಕ್ರಿ.ಶ. 1818 ರಲ್ಲಿ ಗದಗಿನ ಮೇಲೆ ಎರಗಿದಾಗ ಅಲ್ಲಿಯ ಕೋಟೆಯು ಆತನ ವಶವಾಯಿತು. ಅನಂತರ ಈ ಪ್ರದೇಶವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು.

ಗದುಗಿನ ಪ್ರಮುಖ ದೇವಾಲಯವೆಂದರೆ ತ್ರಿಕೂಟೇಶ್ವರ ಮತ್ತು ಸರಸ್ವತಿ. ತ್ರಿಕೂಟೇಶ್ವರ ದೇವಾಲಯವು ಮೂಲತಃ ರಾಷ್ಟ್ರಕೂಟರ ಶೈಲಿಯ ಗರ್ಭಗೃಹ ಹಾಗೂ ಅಂತರಾಳವನ್ನು ಹೊಂದಿದ್ದು ಅನಂತರ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ನವರಂಗ ಹಾಗೂ ಇತರ ಮಂಟಪಗಳನ್ನು ಸೇರಿಸಲಾಗಿದೆ. ವಿಜಯನಗರದ ಕಾಲದಲ್ಲೂ ದೇವಾಲಯದ ದುರಸ್ಥಿಯು ನಡೆದಿದೆ ಎಂದು ಹೇಳಲಾಗುತ್ತದೆ. ಪಶ್ಚಿಮಕ್ಕಿರುವ ಗರ್ಭಗೃಹವು ಚೌರಸ್ರ ತಳ ವಿನ್ಯಾಸವನ್ನು ಹೊಂದಿದ್ದು ಎತ್ತರವಾದ ಪಾಣಿಪೀಠದ ಮೇಲೆ ಮೂರು ಲಿಂಗಗಳು ಕಂಡುಬರುತ್ತವೆ. ಆದುದರಿಂದ ಈ ದೇವಾಲಯಕ್ಕೆ ತ್ರಿಕೂಟೇಶ್ವರ ದೇವಾಲಯವೆಂದು ಕರೆಯಲಾಗಿದೆ. ವೀರನಾರಾಯಣ ದೇವಾಲಯದಲ್ಲಿ ಕಂಡು ಬರುವ ಕ್ರಿ.ಶ. 1037 ರ ಶಾಸನದಲ್ಲಿ ತ್ರೈಪುರುಷ ದೇವಾಲಯದ ಉಲ್ಲೇಖ ಬರುತ್ತದೆ. ಡಾ|| ಅ. ಸುಂದರ ಅವರು ಶಿವ, ಸೂರ್ಯನಾರಾಯಣ ಮತ್ತು ಬ್ರಹ್ಮನನ್ನು ಹೊಂದಿರುವ ತ್ರಿಕೂಟೇಶ್ವರ ದೇವಾಲಯವೇ ಆಗಿನ ತ್ರೈಪುರುಷ ದೇವಾಲಯವಿರಬಹುದೆಂದು ಅಭಿಪ್ರಾಯಪಡುತ್ತಾರೆ. ಈಗ ಬೆಟಗೇರಿಯಲ್ಲಿ ಕಂಡುಬರುವ ಭಿನ್ನವಾದ ಬ್ರಹ್ಮನ ವಿಗ್ರಹವು ಈ ದೇವಾಲಯದಿದ್ದಿರಬಹುದೆಂದೂ ಡಾ|| ಅ. ಸುಂದರ ತಿಳಿಸುತ್ತಾರೆ. ನವರಂಗದ ಮುಂಭಾಗದಲ್ಲಿ 42 ಸ್ತಂಭಗಳಿಂದ ಅಲಂಕಾರಗೊಂಡಿರುವ ವಿಶಾಲವಾದ ರಂಗಮಂಟಪವಿದೆ. ಇವೆರಡೂ ಮಂಟಪಗಳ ನಡುವೆ ಒಂದು ಕಿರಿದಾದ ಸ್ಥಳದಲ್ಲಿ ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ಒಂದೊಂದು ಬಾಗಿಲುಗಳಿವೆ. ಉತ್ತರದ ಬಾಗಿಲಿನಿಂದ ಒಳಭಾಗಕ್ಕೆ ಹೋದರೆ ಒಂದು ಚಿಕ್ಕದಾದ ಗರ್ಭಗೃಹವು ಕಂಡುಬರುತ್ತದೆ. ಇಲ್ಲಿ ಒಂದೇ ಪಾಣಿಪೀಠದ ಮೇಲೆ ಸಾಲಾಗಿ ಮೂರು ಶಿವಲಿಂಗಗಳನ್ನು ಇರಿಸಲಾಗಿದೆ. ಈ ಗರ್ಭಗೃಹವನ್ನು ಅನಂತರದಲ್ಲಿ ಮುಖ್ಯ ದೇವಾಲಯದ ಸಮುಚ್ಚಯಕ್ಕೆ ಸೇರಿಸಿರುವುದು ವ್ಯಕ್ತವಾಗುತ್ತದೆ. ವಿಶಾಲವಾದ ನವರಂಗದ ಪೂರ್ವದ ಅಂಚಿನಲ್ಲಿ ಇನ್ನೊಂದು ಗರ್ಭಗೃಹವು ಇದ್ದು ಒಳಗಿರುವ ಪಾಣಿಪೀಠದಲ್ಲಿ ಸಪ್ತಾಶ್ವಗಳಿದ್ದು ಯಾವುದೇ ವಿಗ್ರಹವಿಲ್ಲ; ಇದನ್ನು ಡಾ|| ಅ.ಸುಂದರ ಅವರು ಸೂರ್ಯನಾರಾಯಣ ಗುಡಿ ಇದ್ದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಪೂರ್ವ ದಿಕ್ಕಿನಲ್ಲಿರುವ ಮಂಟಪದಲ್ಲಿ ಹಲವಾರು ಸುಂದರ ಶಿಲಾಕೃತಿಗಳು ಕಂಡುಬರುತ್ತವೆ. ಮಂಟಪದ ಕಕ್ಷಾಸನದ ಹೊರಭಾಗದ ಗೋಡೆಗಳಲ್ಲಿರುವ ದೇವಕೋಷ್ಠಗಳಲ್ಲಿ ಪೌರಾಣಿಕ ಕಥೆಗಳನ್ನು ಪ್ರತಿನಿಧಿಸುವ ಹಲವಾರು ಸುಂದರ ಬಿಡಿಶಿಲ್ಪಗಳಿವೆ. ಇವುಗಳು ಉಬ್ಬುಶಿಲೆಗಳಾಗಿದ್ದು ಆಕರ್ಷಕ ವಿನ್ಯಾಸಗಳನ್ನು ವ್ಯಕ್ತಪಡಿಸುತ್ತವೆ. ಕಕ್ಷಾಸನದ ಮೇಲ್ಭಾಗದಲ್ಲಿ ಚಾಳುಕ್ಯ ಶೈಲಿಯ ಸಣ್ಣ ಸಣ್ಣ ಸ್ತಂಭಗಳಿವೆ. ದಕ್ಷಿಣಕ್ಕಿರುವ ಬಾಗಿಲುವಾಡವು ಸೂಕ್ಷ್ಮವಾದ ಕೆತ್ತನೆಗಳಿಂದ ಅಲಂಕೃತಗೊಂಡಿದೆ. ಛಾವಣಿಯಿಂದ ಇಳಿಜಾರಾಗಿ ಚಾಚಿಕೊಂಡಿರುವ ಛಜ್ಜಾದ ಕೆಳಭಾಗದಲ್ಲಿರುವ ಹಲವಾರು ಬೋದಿಗೆಗಳಲ್ಲಿ ಶಿವ ಮತ್ತು ಪಾರ್ವತಿ, ಕೈಲಾಸ ಪರ್ವತವನ್ನು ಎತ್ತಿ ಹಿಡಿದಿರುವ ರಾವಣ, ಗಜಲಕ್ಷ್ಮಿ, ಸೂರ್ಯ, ಪಾರ್ವತಿ, ಭೈರವಿ, ವಿಷ್ಣು, ನರ್ತನ ಭಂಗಿಯಲ್ಲಿರುವ ಸ್ತ್ರೀ, ಮಾವಿನಹಣ್ಣು ಹಿಡಿದಿರುವ ಸ್ತ್ರೀ, ಮಾದಕ ಪಾನೀಯವನ್ನು ಸೇವಿಸುತ್ತಿರುವ ಪತಿ-ಪತ್ನಿಯರು, ಅಂಗರಕ್ಷಕರಿಂದ ಸುತ್ತುವರೆಯಲ್ಪಟ್ಟ ಒಬ್ಬ ರಾಜಾಧಿಕಾರಿ, ದರ್ಪಣ ಹಿಡಿದಿರುವ ಸ್ತ್ರೀ, ಶುಕಭಾಷಿಣಿ ಮುಂತಾದ ಶಿಲ್ಪಗಳನ್ನು ಕಾಣಬಹುದಾಗಿದೆ. ಗರ್ಭಗೃಹದ ಹೊರಭಾಗದ ಗೋಡೆಯಲ್ಲಿ ದಿಕ್ಪಾಲಕರುಗಳ ಹಾಗೂ ಒಂದು ದೇವಕೋಷ್ಠದಲ್ಲಿ ಸುಂದರವಾದ ವಿಷ್ಣು ವಿಗ್ರಹವು ಕಾಣಸಿಗುತ್ತವೆ. ತ್ರಿಕೂಟೇಶ್ವರ ಸಮುಚ್ಚಯದಲ್ಲಿ ಕಂಡುಬರುವ ಆಕರ್ಷಕ ಬಿಡಿಶಿಲ್ಪಗಳು ಚಾಳುಕ್ಯರ ಕಲಾ ಶೈಲಿಯ ಪ್ರೌಢಿಮೆಯ ಪ್ರತೀಕಗಳಾಗಿವೆ. ಪ್ರಸಿದ್ಧ ಕಲಾತಜ್ಞ ಜೇಮ್ಸ್ ಫರ್ಗುಸನ್ 1870 ರಲ್ಲಿ ಗದಗಿನ ದೇವಾಲಯವನ್ನು ದರ್ಶಿಸಿದ ಮೇಲೆ ಹೀಗೆ ನುಡಿಯುತ್ತಾನೆ "ಚಾಳುಕ್ಯರ ಶೈಲಿಯ ಕೆತ್ತನೆಗಳು ಪ್ರಾವೀಣ್ಯ ಕರಕುಶಲವಾಗಿದ್ದರೂ ಅವುಗಳಿಗೆ ಆಗಿಂದಾಗ್ಗೆ ಬಳಿಯಲಾಗುವ ಸುಣ್ಣದ ಪರಿಣಾಮವಾಗಿ ಈ ಶಿಲ್ಪಗಳು ಬಹಳ ಮಂಕಾಗಿ ಕಾಣುತ್ತವೆ." ತ್ರಿಕೂಟೇಶ್ವರ ದೇವಾಲಯಕ್ಕೆ ಹಲವಾರು ದಾನಶಾಸನಗಳನ್ನು

ನೀಡಲಾಗಿದ್ದು ಕ್ರಿ.ಶ. 11 ರಿಂದ 16 ನೇಯ ಶತಮಾನಗಳ ನಡುವೆ ದೇವಾಲಯ ಸಮುಚ್ಚಯಕ್ಕೆ ವಿಜಯನಗರದ ಕಾಲದವರೆಗೂ ಮಾಡಿದ ಹಲವಾರು ದುರಸ್ತಿ ಕಾರ್ಯಗಳ ಬಗೆಗೆ ಉಲ್ಲೇಖಗಳಿವೆ.

ಈ ದೇವಾಲಯದ ಪಕ್ಕದಲ್ಲೇ ಇರುವ ಸರಸ್ವತಿ ದೇವಾಲಯವು ಚಾಳುಕ್ಯ ಕಲಾಶೈಲಿಯ ಉತ್ತಮ ನಿದರ್ಶನವಾಗಿದೆ. ಎರಡೂ ದೇವಾಲಯಗಳು ಕೋಟೆಯ (ಪ್ರಾಚೀನ ಅಗ್ರಹಾರದ) ಒಳಭಾಗದಲ್ಲಿರುವುದರಿಂದ ಸಾಂಪ್ರದಾಯಿಕ ಅಧ್ಯಯನದ ಮೂಲ ಆರಾಧನಾ ದೇವಿಯಾಗಿ ಸರಸ್ವತಿಯ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ತ್ರೈಪುರುಷ ಮಂದಿರ ಘಟಿಕಾಸ್ಥಾನವೂ ಆಗಿರಬಹುದು. ಹೀಗಾಗಿ ಇಲ್ಲಿ ವಿದ್ಯೆಯ ಅದಿದೇವತೆಯಾದ ಸರಸ್ವತಿ ದೇವಾಲಯವೂ ಇದೆ. ಉತ್ತರ ದಿಕ್ಕಿಗೆ ಮಹಾದ್ವಾರವಿರುವ ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ನವರಂಗವು ಪೂರ್ಣವಾಗಿ ಗೋಡೆಗಳಿಂದ ಆವರಿಸದೇ ತೆರೆದ ಮಂಟಪದ ರೀತಿಯಲ್ಲಿ ನಿರ್ಮಿತವಾಗಿರುವುದು ವ್ಯಕ್ತವಾಗುತ್ತದೆ. ಈ ನವರಂಗದ ಪಶ್ಚಿಮಕ್ಕೆ ಎರಡು ವಿಶಾಲವಾದ ಪಡಸಾಲೆಗಳಿದ್ದು ಬಹುಶಃ ವಿದ್ಯಾರ್ಥಿಗಳ ಅಧ್ಯಯನಕ್ಕೆ ಉಪಯೋಗವಾಗುತ್ತಿರಬೇಕೆಂದು ಹೇಳಬಹುದಾಗಿದೆ. ಪ್ರಸಿದ್ಧ ಕಲಾತಜ್ಞ ಫರ್ಗುಸನ್‌ನ ಅಭಿಪ್ರಾಯದಂತೆ "ಈ ದೇವಾಲಯದ ಶಿಲ್ಪ ಕಲಾಕೃತಿಗಳು ಆ ಕಾಲದ ಕಲಾ ನೈಪುಣ್ಯತೆಗೆ ಉತ್ತಮ ನಿದರ್ಶನಗಳಾಗಿವೆ." ದೇವಾಲಯದಲ್ಲಿ ಬಳಸಲಾಗಿರುವ ಕಂಬಗಳು ಚಾಳುಕ್ಯ ಶೈಲಿಯಲ್ಲೇ ಶ್ರೇಷ್ಠವಾದ ಸೂಕ್ಷ್ಮ ಹಾಗೂ ನವಿರಾದ ಕೆತ್ತನೆಗಳುಳ್ಳ ಕಂಬಗಳಾಗಿವೆ. ಗೋಡೆಗಳಲ್ಲಿ ಲಂಬರೇಖಾ ವಿಭಜನೆಗಳಿದ್ದು ಚಾಚಿಕೊಂಡಿರುವ ಕೋನಾಕಾರದ ಮೂಲೆಗಳಲ್ಲಿ ಉಬ್ಬುತಗ್ಗುಗಳ ಕೆತ್ತನೆಗಳಿಂದಾಗಿ ನೆರಳು-ಬೆಳಕಿನ ಸಮ್ಮಿಶ್ರಣವಾಗುತ್ತದೆ ಹಾಗೂ ಇದರಿಂದಾಗಿ ಕಟ್ಟಡದ ಹೊರಾಂಗಣ ಸೌಂದರ್ಯವು ಇಮ್ಮಡಿಯಾಗಿರುತ್ತದೆ. ಹೊರಭಾಗದ ಗೋಡೆಗಳಲ್ಲಿರುವ ಬೋದಿಗೆಗಳು, ಗೋಡೆಯಲ್ಲಿ ಹುದುಗಿರುವ ಸಣ್ಣ ಸಣ್ಣ ಕಂಬಗಳ ಹಿನ್ನಲೆಯಲ್ಲಿರುವ ಕಿರಿದಾದ ಶಿಖರ ವಿನ್ಯಾಸಗಳು ಆಕರ್ಷಕವಾಗಿ ಕಂಡು ಬರುತ್ತವೆ. ಈ ದೇವಾಲಯದ ಮತ್ತೊಂದು ವಿಶೇಷತೆ ಎಂದರೇ ಗೋಡೆಗಳಲ್ಲಿ ಕಂಡು ಬರುವ ವೃತ್ತಾಕಾರವಾದ ಸೂಕ್ಷ್ಮ ಕೆತ್ತನೆಗಳಿಂದ ಅಸಾಧಾರಣ ಸೌಂದರ್ಯದಿಂದ ಕೂಡಿದ ಪದಕಗಳು. ನವರಂಗದ ನಾಟ್ಯಮಂಟಪದ ಛಾವಣಿಯಲ್ಲಿರುವ ಭುವನೇಶ್ವರಿಯು ಅತ್ಯುತ್ತಮ ಕೆತ್ತನೆಗಳಿಂದ ಕೂಡಿದೆ. ಇದರ ಮೂಲೆಗಳಲ್ಲಿರುವ ಚೌಕಾಕಾರವಾದ ಆಧಾರ ಸ್ತಂಭಗಳ ಮೇಲ್ಭಾಗದಲ್ಲಿ ಪೀಠದ ಕೋನಾಕಾರವಾದ ಮೂಲೆಗಳಲ್ಲಿ ಆಕರ್ಷಕ ಕೆತ್ತನೆಗಳಿವೆ. ಈ ರೀತಿಯ ಶಿಲ್ಪಕಲಾ ಚಾತುರ್ಯವು ಈ ಭಾಗದಲ್ಲಿ ತುಂಬಾ ಅಪರೂಪದ್ದೆಂದು ಕ್ಯಾಂಬೆಲ್ ಅಭಿಪ್ರಾಯ ಪಡುತ್ತಾರೆ. ಆಧಾರ ಸ್ತಂಭಗಳಲ್ಲಿ ಕಂಡು ಬರುವ ಕೆತ್ತನೆಗಳು ಹಾಗೂ ದೇವಕೋಷ್ಠಗಳಲ್ಲಿ ಪ್ರತ್ಯೇಕಿಸಲ್ಪಟ್ಟ ಕಿರಿದಾದ ಕಂಬಗಳು ಸುಂದರ ಉಬ್ಬು ಶಿಲ್ಪಗಳಿಂದ ಆಕರ್ಷಕವಾಗಿ ರೂಪುಗೊಂಡಿವೆ. ಕಿರಿದಾದ (ಸುಮಾರು 8 ರಿಂದ 10 ಸೆಂ.ಮೀ. ಎತ್ತರವಿರುವ) ಬಿಡಿ ಶಿಲ್ಪಗಳು ಈ ಸಣ್ಣ ಸಣ್ಣ ಆಧಾರ ಸ್ತಂಭಗಳ ಮೇಲೆ ಅತ್ಯಂತ ಜಾಣ್ಮೆಯಿಂದ ಕೆತ್ತಲಾಗಿರುವುದು ಚಾಳುಕ್ಯರ ಶಿಲ್ಪ ಕಲಾ ಪ್ರೌಢಿಮೆಯ ಉತ್ತಮ ಪ್ರತೀಕಗಳಾಗಿವೆ. ಈ ಕಂಬಗಳ ಮೇಲ್ಭಾಗದಲ್ಲಿ ದೇವಾಲಯದ ಕಿರಿದಾದ ಶಿಖರ ವಿನ್ಯಾಸಗಳು ಕಂಡುಬರುತ್ತವೆ. ಛಾವಣಿಯ ತೊಲೆಗಳಿಂದ ಚಾಚಿಕೊಂಡಿರುವ ಕಂಬಗಳ ಆವರಣಗಳಲ್ಲಿಯೂ ಸೂಕ್ಷ್ಮಾತಿಸೂಕ್ಷ್ಮ ಸಸ್ಯದ ಮಾದರಿಗಳ ಶಿಲ್ಪಕಲಾ ರಚನೆಯನ್ನು ಕಾಣಬಹುದಾಗಿದೆ. ಹೊರಭಾಗದ ಗೋಡೆಗಳ ದೇವಕೋಷ್ಠಗಳಲ್ಲಿ ಅಲಂಕೃತಗೊಂಡಿರುವ ಚಿಕ್ಕಚಿಕ್ಕ ಆಧಾರಸ್ತಂಭಗಳ ಮೇಲ್ಭಾಗದಲ್ಲೂ ಸುಂದರ ಉಬ್ಬು ಶಿಲ್ಪಗಳಾದ ನರ್ತನೆ ಮಾಡುತ್ತಿರುವ ಸ್ತ್ರೀಯರು, ಹಾರುತ್ತಿರುವ ಕುದುರೆಗಳು ಮುಂತಾದವುಗಳನ್ನು ಆಕರ್ಷಕವಾಗಿ ಕೆತ್ತಲಾಗಿವೆ. ಗರ್ಭಗೃಹದ ದ್ವಾರವನ್ನು ಅನೇಕ ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತಗೊಳಿಸಲಾಗಿದೆ. ಗರ್ಭಗೃಹದಲ್ಲಿರುವ ಸರಸ್ವತಿಯ ವಿಗ್ರಹವು ಚಾಳುಕ್ಯ ಕಲಾಶೈಲಿಯ ಅತ್ಯುತ್ತಮ ಶಿಲಾಮೂರ್ತಿಯಾಗಿದೆ. ಈ ವಿಗ್ರಹವು ಭಿನ್ನವಾಗಿದ್ದರೂ (ನಾಲ್ಕು ಕೈಗಳು ಮುರಿದಿವೆ) ಸರಸ್ವತಿಯ ಪ್ರಸನ್ನ ಮುಖ ಭಾವವು ಚಿತ್ತಾಕರ್ಷಕವಾಗಿದೆ. ಪದ್ಮಾಸಿನ ಭಂಗಿಯಲ್ಲಿ ಕುಳಿತಿರುವ ಸರಸ್ವತಿಯು ಧರಿಸಿರುವ ಉಡುಪು ವಿನ್ಯಾಸ, ಸೀರೆಯ ನೆರಿಗೆಗಳ ಸೂಕ್ಷ್ಮವಿಂಗಡನೆ ಹಾಗೂ ಅದರ ಅಂಚಿಗೆ ಮೂಡಿಸಲಾಗಿರುವ ರೇಖಾವಿನ್ಯಾಸದ ಸೂಕ್ಷ್ಮಕೆತ್ತನೆಗಳು ಬಹುಶಃ ಈ ಕಾಲದ ಬೇರೆ ಯಾವುದೇ ಶಿಲ್ಪಗಳಲ್ಲೂ ಕಂಡುಬಂದಿಲ್ಲವೆಂಬುದು ಕಲಾತಜ್ಞರ ಅಭಿಪ್ರಾಯವಾಗಿದೆ. ತಲೆಯ ಗುಂಗುರಾದ ಮತ್ತು ನವಿರಾದ ಕೂದಲುಗಳು, ತೋಳ್‌ಬಂಧಿಗಳು, ಅಷ್ಟಕೋನಾಕಾರವಾದ ವಿನ್ಯಾಸಗಳಿರುವ ಕೈಗಡಗಗಳು, ಅಲಂಕೃತವಾದ ಕಿರೀಟ ಮುಂತಾದ ಆಭರಣಗಳ ಅಲಂಕಾರಗಳನ್ನು ಹೊಂದಿರುವ ಸರಸ್ವತಿಯ ಸುಂದರ ಶಿಲಾಕೃತಿಯು ಅಂದಿನ ಭವ್ಯ ಕಲಾಪ್ರೌಢಿಮೆಗೆ ಉತ್ತಮ ನಿದರ್ಶನವಾಗಿದೆ. ಈ ವಿಗ್ರಹದ ಪಾಣಿಪೀಠದ ಮೇಲೆ ಸುಂದರವಾದ ನರ್ತಕಿಯರ ಆಕರ್ಷಕ ಭಂಗಿಗಳನ್ನು ವ್ಯಕ್ತಪಡಿಸುವ ಉಬ್ಬು ಶಿಲ್ಪಗಳಿವೆ. "ಧಾರವಾಡ ಜಿಲ್ಲೆಯ ಎಲ್ಲಾ ದೇವಾಲಯಗಳಿಗಿಂತಲೂ ಗದುಗಿನ ಸರಸ್ವತಿ ದೇವಾಲಯವು ಉತ್ತಮ ವಾಸ್ತುಶಿಲ್ಪ ಕೌಶಲ್ಯದ ಪ್ರತೀಕವಾಗಿದೆ. ಏಕೆಂದರೆ, ಇಲ್ಲಿ ಮೂಡಿಬಂದಿರುವ ಕಲಾಸೂಕ್ಷ್ಮತೆ, ಆಕರ್ಷಕ ಶಿಲ್ಪ ಪ್ರೌಢಿಮೆ ಮತ್ತು ಚಾಳುಕ್ಯರ ಕಲಾಪ್ರಾವೀಣ್ಯತೆಗೆ ಹಾಗೂ ಸಮಕಾಲೀನ ಬೇರೆ ದೇವಾಲಯಗಳಿಗಿಂತಲೂ ಗದುಗಿನ ಸರಸ್ವತಿ ದೇವಾಲಯವು ವಾಸ್ತುಶಿಲ್ಪ ಪರಿಪಕ್ವತೆಗೆ

ಪ್ರಥಮವಾಗಿದೆ" ಎಂದು ಹೆನ್ರಿ ಕಸಿನ್ಸ್ ಅಭಿಪ್ರಾಯ ಪಡುತ್ತಾರೆ. ಪ್ರಸ್ತುತವಾಗಿ ಭಿನ್ನವಾಗಿರುವ ಸರಸ್ವತಿಯ ವಿಗ್ರಹಕ್ಕೆ ಬದಲಾಗಿ ಗದುಗಿನ ಹೆಸರಾಂತ ಕಲಾವಿದ ಸೋಮಣ್ಣ ಶಿಲ್ಪಿ ಅವರು ಕೆತ್ತಿರುವ ಸರಸ್ವತಿಯ ನವೀನ ವಿಗ್ರಹವನ್ನು ಪ್ರತಿಷ್ಠಾಪಿಸಲು ಸ್ಥಳೀಯ ಜನರು ನಿಶ್ಚಯಿಸಿರುತ್ತಾರೆ. ಈ ವಿಗ್ರಹವೂ ಸಹ ಕಪ್ಪು ಶಿಲೆಯಲ್ಲಿ ಮಾಡಲಾಗಿದ್ದು ಧ್ಯಾನಮುದ್ರೆಯಲ್ಲಿರುವ ಪದ್ಮಾಸೀನ ಶಾರದೆಯನ್ನು ಮೂಡಿಸಲಾಗಿದೆ. ಈ ವಿಗ್ರಹವೂ ಸಹ ಉತ್ತಮ ಕಲಾಪ್ರೌಢಿಮೆಯ ಪ್ರತೀಕವಾಗಿದೆ.

ಗದುಗಿನ ಇತರೆ ದೇವಾಲಯಗಳಲ್ಲಿ ಪ್ರಮುಖವಾದುದೆಂದರೆ ಸೋಮೇಶ್ವರ ದೇವಾಲಯ. ಈ ದೇವಾಲಯವು ನಗರದ ಮಧ್ಯದಲ್ಲಿದ್ದು ಚಾಳುಕ್ಯ ಶೈಲಿಯಲ್ಲಿ ನಿರ್ಮಿತವಾಗಿದೆ. ದೇವಾಲಯದಲ್ಲಿ ಒಂದು ಗರ್ಭಗೃಹ ಒಂದು ಅರ್ಧಮಂಟಪ, ನವರಂಗ ಮತ್ತು ದಕ್ಷಿಣಕ್ಕೆ ಮುಖಮಾಡಿರುವ ಮುಖಮಂಟಪವಿದೆ. ಇದೇ ರೀತಿ ಪೂರ್ವದ ಮಹಾದ್ವಾರದ ಮುಂದೆಯೂ ಒಂದು ಮುಖಮಂಟಪವಿದ್ದು ಈಗ ಇಲ್ಲವಾಗಿದೆ. ಎರಡೂ ಮುಖಮಂಟಪಗಳಿಂದ ಪ್ರವೇಶವಿರುವ ನವರಂಗದ ದ್ವಾರಗಳು ಅತ್ಯಂತ ವಿಪುಲವಾದ ಕೆತ್ತನೆಗಳಿಂದ ಹಾಗೂ ದ್ವಾರಪಾಲಕರುಗಳಿಂದ ಅಲಂಕೃತವಾಗಿವೆ. ದೇವಾಲಯದ ಅಧಿಷ್ಠಾನದಲ್ಲಿ ಹಲವಾರು ಶಿಲ್ಪಗಳ ಸಾಲುಗಳಿದ್ದು ಪ್ರಮುಖವಾಗಿ ಆನೆಗಳು, ಯಾಳಿಗಳು ಹಾಗೂ ಇತರೆ ಹೂಬಳ್ಳಿಗಳ ಅಲಂಕಾರವಿದೆ. ಹೊರಭಾಗದ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ವರಾಹ, ಸೂರ್ಯ, ಕಾಳಿ, ಶಿವ, ನಾಟ್ಯಗಣಪತಿ, ಪಾರ್ವತಿ, ವೀರಭದ್ರ, ಭೈರವ ಮತ್ತು ಗೋವರ್ಧನಧಾರಿ ಕೃಷ್ಣ ಮುಂತಾದ ಶಿಲಾಮೂರ್ತಿಗಳು ಕಂಡು ಬರುತ್ತವೆ. ಈ ದೇವಾಲಯದಲ್ಲಿ ಕಂಡು ಬರುವ ವಿಶೇಷ ಲಕ್ಷಣವೆಂದರೆ ನವರಂಗದ ದ್ವಾರಲಲಾಟದಲ್ಲಿರುವ ಧ್ಯಾನಾಸಕ್ತನಾದ ಶಿವನ ಬಿಂಬವೆಂದು ಹೇಳಬಹುದು. ಈ ರೀತಿಯ ಶಿವನ ಬಿಂಬವನ್ನು ಬೇರೆ ಯಾವ ದೇವಾಲಯದಲ್ಲೂ ಕಾಣಲಾಗುವುದಿಲ್ಲವೆಂದು ಡಾ। ಅ. ಸುಂದರ ಅವರು ಅಭಿಪ್ರಾಯಪಡುತ್ತಾರೆ. ಅವರು ಮುಂದುವರೆಯುತ್ತ ಬಹುಶಃ ಈ ದೇವಾಲಯವು ಕಾಳಾಮುಖ ಸಂಪ್ರದಾಯಕ್ಕೆ ಸೇರಿರಬೇಕೆಂದೂ ಅಭಿಪ್ರಾಯ ಪಡುತ್ತಾರೆ.

ಸೋಮೇಶ್ವರ ದೇವಾಲಯದ ದಕ್ಷಿಣಕ್ಕೆ ಚಾಳುಕ್ಯ ಶೈಲಿಯಲ್ಲೇ ನಿರ್ಮಿತವಾಗಿರುವ ರಾಮೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗವಿದೆ. ನವರಂಗದ ಛಾವಣಿಯಲ್ಲಿ ಅರ್ಧ ಗೋಳಾಕಾರವಾದ ಭುವನೇಶ್ವರಿ ಇದ್ದು ಅದರಲ್ಲಿ ಕೆಳಮುಖವಾಗಿರುವ ಕಮಲದ ಪದಕವನ್ನು ಕೆತ್ತಲಾಗಿದೆ. ನವರಂಗದಲ್ಲಿ ನಾಲ್ಕು ಮುಖ್ಯ ಚಾಳಕ್ಯ ಕಂಬಗಳಿದ್ದು ಅವುಗಳಲ್ಲಿ ಒಂದು ಕಂಬದ ಮೇಲೆ ನಾಲ್ಕು ಕಿರಿದಾದ ರೇಖಾವಿನ್ಯಾಸಗಳಿವೆ. ಪ್ರಸ್ತುತ ಈ ದೇವಾಲಯವು ಶಿಥಿಲವಾಗಿದ್ದು ಹೆಚ್ಚು ಭಾಗಗಳು ಬಿದ್ದುಹೋಗಿವೆ. ಬೇರೆ ಬೇರೆ ಸ್ಥಳಗಳಿಂದ ಗದುಗಿಗೆ ತಂದಿದೆ ಎಂದು ಹೇಳಲಾಗುವ ಅನೇಕ ಶಿಲಾಮೂರ್ತಿಗಳು ಹಾಗೂ ಇತರೆ ಪ್ರಾಚ್ಯ ಅವಶೇಷಗಳು ಮುಂತಾದವುಗಳನ್ನು ಈ ದೇವಾಲಯದ ಒಂದು ಕೊಠಡಿಯಲ್ಲಿ ಇರಿಸಲಾಗಿದೆ.

ಗದುಗಿನ ವೀರನಾರಾಯಣ ದೇವಾಲಯವು ಸುಮಾರು ಕ್ರಿ.ಶ. 10 ನೇಯ ಶತಮಾನದಲ್ಲಿ ನಿರ್ಮಿತವಾಗಿರಬಹುದೆಂದು ಡಾ: ಸುಂದರ ಅವರು ಅಭಿಪ್ರಾಯ ಪಡುತ್ತಾರೆ. ಈ ದೇವಾಲಯದಲ್ಲಿರುವ ಕ್ರಿ.ಶ. 1037 ರ ಶಾಸನದಲ್ಲಿ ದೋಯಿಯಪ್ಪ ಪೆರ್ಗಡೆ ಎಂಬ ಅಧಿಕಾರಿಯು ನಿರ್ಮಿಸಿದ ಬಾರನಾರಾಯಣ ದೇವಾಲಯದ ಬಗೆಗೆ ಉಲ್ಲೇಖವಿದೆ. ಆದರೆ, ಡಾ|| ಸುಂದರ ಅವರು ಈ ಶಾಸನದಲ್ಲಿ ಉಲ್ಲೇಖವಾಗಿರುವ ಬಾರನಾರಾಯಣ ದೇವಾಲಯವೇ ಪ್ರಸ್ತುತ ವೀರನಾರಾಯಣ ಆಗಿದ್ದು ಮೂಲತಃ ಕ್ರಿ.ಶ. 10 ನೇಯ ಶತಮಾನದಲ್ಲಿ ನಿರ್ಮಿತವಾಗಿರಬೇಕು ಹಾಗೂ ಅನಂತರ ವಿಜಯನಗರ ಕಾಲದಲ್ಲಿ ಮುಂಭಾಗದ ರಂಗಮಂಟಪ ಹೊರಪ್ರಾಕಾರ ಹಾಗೂ ರಾಯಗೋಪುರಗಳನ್ನು ನಿರ್ಮಿಸುವ ಮೂಲಕ ದೇವಾಲಯ ಕಟ್ಟಡದ ವಿಸ್ತರಣೆಯಾಯಿತೆಂದು ಅಭಿಪ್ರಾಯ ಪಡುತ್ತಾರೆ. ರಾಯಗೋಪುರವನ್ನು ಇತ್ತೀಚೆಗೆ ಅಂದರೆ, 1962 ರಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಜೀರ್ಣೋದ್ಧಾರವಾಗಿರುವುದು ವ್ಯಕ್ತವಾಗುತ್ತದೆ. ಇದರಲ್ಲಿ ನಮ್ಮ ರಾಷ್ಟ್ರೀಯ ಲಾಂಛನವಾದ ಮೂರು ಸಿಂಹಗಳ ಕಲಾಕೃತಿಯನ್ನೂ ಸೇರಿಸಿದ್ದಾರೆ. ಗೋಪುರದಲ್ಲಿ ಹಿಂದೆ ಇದ್ದಂತೆ ಹಲವಾರು ಮಿಥುನ ಶಿಲ್ಪಗಳನ್ನು ರಚಿಸಲಾಗಿದೆ. ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಈ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನು ನಿರ್ಮಿಸಿದನೆಂದು ಪ್ರತಿಪಾದಿಸಿದರೆ, ಎ.ಎಂ. ಅಣ್ಣಿಗೇರಿಯವರು ಈ ದೇವಾಲಯವು ಎರಡನೇ ಬಲ್ಲಾಳನಿಂದ ನಿರ್ಮಿತವಾಯಿತೆಂದು ಅಭಿಪ್ರಾಯ ಪಡುತ್ತಾರೆ. ವಿಜಯನಗರಕಾಲದಲ್ಲಿ ದೇವಾಲಯದ ವಿಸ್ತರಣೆಯಾಗಿದ್ದು ಮಾತ್ರವಲ್ಲದೇ ಗರ್ಭಗೃಹದಲ್ಲಿರುವ ಮೂಲವಿಗ್ರಹವೂ ಸಹ ವಿಜಯನಗರ ಶೈಲಿಯಲ್ಲಿದೆ ಎಂದು ಡಾ|| ಅ. ಸುಂದರ ಅವರು ಅಭಿಪ್ರಾಯ ಪಡುತ್ತಾರೆ. ಗರ್ಭಗೃಹದ ಮೇಲ್ಭಾಗದಲ್ಲಿ ಹಂತಹಂತವಾಗಿ ಮೇಲೇರುವ ಕದಂಬನಾಗರಶೈಲಿಯ ದುರಸ್ತಿಗೊಂಡ ಶಿಖರವಿದ್ದು ಮುಂಭಾಗದಲ್ಲಿ ಶುಕನಾಸವಿದೆ. ಗರ್ಭಗೃಹದ ಮುಂಭಾಗದಲ್ಲಿ ಅರ್ಧಮಂಟಪ, ನವರಂಗ ಹಾಗೂ ರಂಗಮಂಟಪಗಳಿವೆ. ನವರಂಗದಲ್ಲಿ ಚಾಳುಕ್ಯ ಶೈಲಿಯ ನಾಲ್ಕು ಕೇಂದ್ರ ಸ್ಥಂಭಗಳಿದ್ದು ರಂಗಮಂಟಪದಲ್ಲಿ ವಿಜಯನಗರ ಶೈಲಿಯ ಸ್ಥಂಭಗಳಿವೆ. ರಂಗಮಂಟಪ,

ಹೊರಪ್ರಾಕಾರದ ಎತ್ತರವಾದ ಗೋಡೆ ಮತ್ತು ಮಹಾದ್ವಾರದ ಮೇಲ್ಭಾಗದಲ್ಲಿರುವ ರಾಯಗೋಪುರಗಳು ವಿಜಯನಗರ ಅರಸರಿಂದ ನಂತರ ಮುಖ್ಯ ಕಟ್ಟಡಕ್ಕೆ ಸೇರಿಸಲಾಯಿತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ರಂಗಮಂಟಪದ ಕಂಬಗಳ ಮೇಲೆ ದಶಾವತಾರವನ್ನು ಪ್ರತಿನಿಧಿಸುವ ಹಲವಾರು ಉಬ್ಬುಶಿಲ್ಪಗಳಿವೆ. ಈ ಕಂಬಗಳಲ್ಲಿ ಒಂದರ ಮುಂಭಾಗದಲ್ಲಿ ಕುಳಿತು ಗದುಗಿನ ನಾರಾಯಣಪ್ಪನು (ಕುಮಾರವ್ಯಾಸ) ತನ್ನ ಜಗತ್‌ಪ್ರಸಿದ್ಧ ಕರ್ನಾಟಕ ಭಾರತ ಕಥಾಮಂಜರಿ ಅಥವಾ 'ಗದುಗಿನ ಭಾರತ' ಮಹಾಕಾವ್ಯವನ್ನು ರಚಿಸಿದನೆಂದು ಸ್ಥಳೀಯ ಐತಿಹ್ಯವು ತಿಳಿಸುತ್ತದೆ. ಈ ದೇವಾಲಯದ ಪರಿಸರದಲ್ಲಿ ಅನೇಕ ಗುಡಿಗಳಿದ್ದು ರಾಘವೇಂದ್ರ ವೃಂದಾವನ, ಆಂಜನೇಯ ಗುಡಿ ಇವೆಲ್ಲ ಇವೆ.

ಗದುಗಿನಲ್ಲಿರುವ ವೀರಶೈವ ಮಠಗಳಲ್ಲಿ ಪ್ರಸಿದ್ಧ ಹಾಗೂ ಪುರಾತನವಾದುದೆಂದರೆ ತೋಂಟದಾರ್ಯ ಸಿದ್ದಲಿಂಗೇಶ್ವರ ಮಠ. ಈ ಮಠದ ಮೂಲ ಕೇಂದ್ರಸ್ಥಾನವು ಮುಂಡರಗಿ ತಾಲೂಕಿನ ಡಂಬಳವಾಗಿದ್ದು ಗದುಗಿನಲ್ಲಿ ವಿಶಾಲವಾದ ನಿವೇಶನವನ್ನು ಹೊಂದಿದೆ. ಮಠದ ಕಟ್ಟಡಗಳಲ್ಲಿ ಮುಖ್ಯವಾದುದೆಂದರೆ ಬೃಹದಾಕಾರವಾದ ಬಾಗಿಲುಗಳಿರುವ ಮಠದ ಮೂಲ ಕಟ್ಟಡ ಹಾಗೂ ಇತ್ತೀಚೆಗೆ ನಿರ್ಮಿಸಲಾಗಿರುವ ದೊಡ್ಡದಾದ ಕಲ್ಯಾಣ ಮಂಟಪ. ತೋಂಟದಾರ್ಯಮಠದ ಪ್ರಮುಖ ಚಟುವಟಿಕೆಗಳೆಂದರೇ ವೀರಶೈವ ಸಾಹಿತ್ಯದ ವಿವಿಧ ಆಯಾಮಗಳ ಸಂಪಾದನೆ ಹಾಗೂ ಪ್ರಕಟಣೆಯಾಗಿದೆ. ಮಠದಲ್ಲಿರುವ ಪುರಾತನವಾದ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿ ಪ್ರಕಟಿಸುವ ಪ್ರಯತ್ನವು ಈಗ ಸದ್ಯದಲ್ಲಿ ಜಾರಿಯಲ್ಲಿದೆ. ಮಠದ ವತಿಯಿಂದ ಅನೇಕ ಶಿಕ್ಷಣ ಸಂಸ್ಥೆಗಳು ಕಾರ್ಯ ರೂಪಗೊಂಡಿವೆ. ಈ ಮಠದಲ್ಲಿ ಪ್ರತೀ ಸೋಮವಾರದಂದು ನಡೆಯುವ ಜನಪ್ರಿಯ 'ಶಿವಾನುಭವ' ಕಾರ್ಯಕ್ರಮವು ಸಾವಿರಕ್ಕೂ ದಾಟಿ ಲಕ್ಷಾಂತರ ಜನ ಇದರಲ್ಲಿ ಭಾಗವಹಿಸಿದ್ದಾರೆ.

ವಿಜಾಪುರದವರ ಆಡಳಿತಕ್ಕೆ ಒಳಪಟ್ಟ ಈ ನಗರದಲ್ಲಿ ಅನೇಕ ಮಸೀದಿಗಳೂ ದರ್ಗಾಗಳೂ, ಇದ್ದು ದಿಲೇರ್‌ಹಾನ್ ಎಂಬ ಔರಂಗಜೇಬನ ಸೇವಾನಿ ಕಟ್ಟಿಸಿದನೆಂದು ಹೇಳಲಾಗುವ ಒಂದು ಕರಿಕಲ್ಲಿನ ಆಕರ್ಷಕ ಮಸೀದಿ ಇದೆ. ಜಾಮೀಮಸೀದಿ ಹಾಗೂ ದರ್ಗಾಗಳೂ ಇವೆ. ಇಲ್ಲಿ ಬಾಸೆಲ್ ಮಿಶನ್ ಹಾಗೂ ಕ್ಯಾಥಲಿಕರ ಚರ್ಚ್‌ಗಳಿವೆ.

ಗದಗು ಒಂದು ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರವಾಗಿದ್ದಂತೆ ಒಳ್ಳೆಯ ವ್ಯಾಪಾರ ಹಾಗೂ ವಾಣಿಜ್ಯ ಕೇಂದ್ರವೂ ಆಗಿದೆ. ಪ್ರಸಿದ್ಧ ವ್ಯಕ್ತಿಗಳಾದ ಭೀಮಸೇನ ಜೋಶಿ, ಎನ್ಕೆ (ಎನ್. ಕುಲಕರ್ಣಿ), ಹುಯಿಲಗೋಳ ನಾರಾಯಣರಾಯರು, ಪಂಚಾಕ್ಷರಿ ಗವಾಯಿಗಳು, ಟಿ.ಪಿ. ಅಕ್ಕಿ ಎಂ.ಎ. ಚೆಟ್ಟಿ ಇನ್ನೂ ಮುಂತಾದವರುಗಳು ನೆಲೆಸಿ ಪ್ರಾಮುಖ್ಯತೆಯನ್ನು ಗಳಿಸಿದ ಕೀರ್ತಿ ಗದುಗಿಗೆ ಸಲ್ಲುತ್ತದೆ. ಇದು ಪ್ರಸಿದ್ಧ ಹತ್ತಿ ವಾಣಿಜ್ಯದ ಕೇಂದ್ರವೂ ಹೌದು. **ಬೆಟಗೇರಿ** : ಶಾಸನೋಕ್ತ ಬಟ್ಟಕೆರೆ ಬೆಳ್ವೊಲನಾಡಿನ ಕೇಂದ್ರಸ್ಥಾನವಾಗಿದ್ದು ರಾಷ್ಟ್ರಕೂಟ ಇಮ್ಮಡಿಕೃಷ್ಣನ ಆಳ್ವಿಕೆಯಲ್ಲಿ ತುಂಗತೋರಣನೆಂಬ ಅಧಿಕಾರಿ ಆಡಳಿತ ನಡೆಸುತ್ತಿದ್ದಾಗ ಕಲೆಗಳ್ಳನೆಂಬ ವೀರನು ನಾಗಘೋರನೆಂಬ ವೈರಿಯೊಡನೆ ಹೋರಾಡಿ (ಕ್ರಿ.ಶ.893) ಮಡಿದ ಸ್ಮಾರಕವಾಗಿದೆ. ಊರಿನ ನಡುವೆ ಹಲವಾರು ಆಕರ್ಷಕ ವೀರಗಲ್ಲುಗಳಿವೆ. ಈ ಜಾಗಕ್ಕೆ ಈಗ ಮಲ್ಲಯ್ಯನ ಕಟ್ಟೆಯೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಇಲ್ಲಿ ಒಟ್ಟು 15 ವೀರಗಲ್ಲುಗಳಿದ್ದು ಅವುಗಳಲ್ಲಿ 14 ವೀರಗಲ್ಲುಗಳು ಸುಮಾರು 12-13 ಅಡಿ ಎತ್ತರ, ನಾಲ್ಕು ಅಡಿ ಅಗಲ ಹಾಗೂ ಆರು ಅಂಗುಲ ದಪ್ಪವಿದೆ. ಇವುಗಳ ಮೇಲ್ಭಾಗವು ದ್ರಾವಿಡ ಗೋಪುರಗಳ ಆಕಾರದಲ್ಲಿದ್ದು ಹಲವಾರು ಹಂತಗಳಲ್ಲಿ ಯುದ್ಧದ ಭೀಕರ ದೃಶ್ಯಗಳನ್ನು ಬಿಡಿಸಲಾಗಿದೆ. ವೀರಗಲ್ಲುಗಳಲ್ಲಿ ಕೆಲವು ಶೈವ ಸಂಪ್ರದಾಯಕ್ಕೂ ಮತ್ತೆ ಕೆಲವು ವೈಷ್ಣವ ಸಂಪ್ರದಾಯಕ್ಕೂ ಸೇರಿದವುಗಳಾಗಿವೆ. ಇವುಗಳಲ್ಲಿರುವ ಒಂದು ವಿಶೇಷ ಲಕ್ಷಣವೆಂದರೆ ಒಂದರಲ್ಲಿ ಆನೆಯ ಹಾಗೂ ಇನ್ನೊಂದರಲ್ಲಿ ನಂದಿಯ ಪ್ರತಿಕೃತಿಗಳನ್ನು ಹೊತ್ತು ಸಾಗಿಸುತ್ತಿರುವಂತೆ ಚೈತನ್ಯ ಪೂರ್ಣವಾಗಿ ಕೆತ್ತಲಾಗಿದೆ. ರಾಷ್ಟ್ರಕೂಟರ ಕಾಲದಿಂದಲೂ ಗದುಗಿನ ಜೊತೆಯಲ್ಲಿ ಬೆಟ್ಟಗೇರಿಯು ಪ್ರತ್ಯೇಕ ರಾಜಕೀಯ ಹಾಗೂ ವಾಣಿಜ್ಯ ಕೇಂದ್ರವಾಗಿ ಬೆಳೆದು ಬಂದಿರುವುದು ಗಮನೀಯವಾಗಿದೆ. ಈಗ ಎರಡೂ ಪಟ್ಟಣಗಳಿಗೆ ಸೇರಿದಂತೆ ಏಕೈಕ ನಗರಸಭೆಯು ಆಡಳಿತವನ್ನು ನಿರ್ವಹಿಸುತ್ತಿದೆ. ಪ್ರಸ್ತುತ ಬೆಟಗೇರಿ ನಗರದಲ್ಲಿ ಬಾಸೆಲ್ ಕ್ರೈಸ್ತ ಸಂಸ್ಥೆಯವರ ಚರ್ಚ್ ಹಾಗೂ ಅವರು ನಡೆಸುತ್ತಿರುವ ಶಾಲೆಗಳು ಕಾರ್ಯೋನ್ಮುಖವಾಗಿವೆ. ಬೆಟಗೇರಿ ನೇಯ್ಗೆಗೆ ಖ್ಯಾತವಾದ ಊರು.

**ಗಜೇಂದ್ರಗಡ** : ರೋಣ ತಾಲೂಕಿನ ಗಜೇಂದ್ರಗಡವು (ಜನಸಂಖ್ಯೆ : 24,154) ಆನೆಗಳ ರಾಜನಂಥಹ (ರೋಣದಿಂದ 29 ಕಿ.ಮೀ.) ಕೋಟೆಯುಳ್ಳ ಊರೆಂದು ಅನ್ವರ್ಥನಾಮ ಪಡೆದಿದೆ. ಇದು ಜಿಲ್ಲೆಯ ಪ್ರಮುಖ ಗಡಿ ಪ್ರದೇಶವಾಗಿದೆ. ಇಲ್ಲಿರುವ ಕೋಟೆಯನ್ನು ಛತ್ರಪತಿ ಶಿವಾಜಿಯು ಕಟ್ಟಿಸಿದನೆಂದು ಪ್ರತೀತಿಯಿದೆ. ಕ್ರಿ.ಶ. 17ನೇ ಶತಮಾನದ ಶಾಸನವು ಈ ಕೋಟೆಯ

ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತದೆ. ಇದು ಹಿಂದುರಾವ್ ದೌಲತ್‌ರಾವ್ ಘೋರ್ಪಡೆಯವರಿಗೆ ಮುಂದೆ ಸೇರಿತು (ಇವರು ಖ್ಯಾತ ಮರಾಠಾ ಸೇನಾನಿ ಸಂತಾಜಿ ಘೋರ್ಪಡೆಯವರ ವಂಶಸ್ಥರು). ಕ್ರಿ.ಶ. 17ನೇ ಶತಮಾನದಿಂದ 1947ರವರೆಗೆ ಈ ಪ್ರದೇಶದ ಅಧಿಕಾರವು ಘೋರ್ಪಡೆ ಮನೆತನಕ್ಕೆ ಇನಾಂ ಆಗಿತ್ತು. ನಿಜಾಮನು ಇದನ್ನು ಗೆದ್ದು (ಕ್ರಿ.ಶ. 1775)ರಲ್ಲಿ ಆದ ಗಜೇಂದ್ರಗಡ ಒಪ್ಪಂದದಂತೆ ಅದು ಪೇಶ್ವೆಗೆ ಸಂದು ಮತ್ತೆ ಘೋರ್ಪಡೆಯವರ ವಶಕ್ಕೆ ಈ ಊರು ಬಂತು. ಮಹಿಷಾಸುರನ ಮಗ ಗಜಾಸುರನೆಂಬುವನು ಈ ಕೋಟೆಯಲ್ಲಿ ವಾಸವಾಗಿದ್ದುದರಿಂದ ಈ ಕೋಟೆಗೆ ಗಜೆಂದ್ರಗಡ ಎಂದು ಹೆಸರು ಬಂದಿತೆಂದು ಹಾಗೂ ಕೋಟೆಯ ಮೇಲೆ ನಿಂತು ವೀಕ್ಷಿಸಿದಾಗ ಪೂರ್ವಭಾಗದ ಗುಡ್ಡ ಆನೆಯ ತಲೆಯ ಹಾಗೆ ಗೋಚರಿಸುವುದರಿಂದ ಹಾಗೂ ಅದರ ಮುಂದಿನ ಭಾಗ ಸೊಂಡಿಲ ಹಾಗೆ ಕಾಣುವುದರಿಂದ ಇದಕ್ಕೆ ಗಜೇಂದ್ರಗಡವೆಂದು ಹೆಸರು ಬಂದಿತೆಂದು ಹೇಳಲಾಗುತ್ತದೆ.

ಊರಿನಲ್ಲಿ ಶಿಥಿಲವಾದ ಹಾಗೂ ಅಪೂರ್ಣವಾದ ವಿರೂಪಾಕ್ಷ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ದೇವಾಲಯದ ಗರ್ಭಗೃಹದ ಲಲಾಟದಲ್ಲಿ ಸರಸ್ವತಿಯ ಶಿಲ್ಪವಿರುವುದು ಕುತೂಹಲಕಾರಿಯಾಗಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣಾ ಅಲಂಕಾರವನ್ನು ಹೊಂದಿದೆ. ಊರ ಹೊರ ಭಾಗದಲ್ಲಿ ಗೋಲಾಕಾರವಾದ ಗೋಪುರ ಹಾಗೂ ಚಾಳುಕ್ಯ ಶೈಲಿಯ ವೃತ್ತಾಕಾರವಾದ ಕಂಬಗಳಿರುವ ದುರ್ಗಾದೇವಿಯ ದೇವಾಲಯವಿದೆ. ರುದ್ರಭೂಮಿಯ ಹತ್ತಿರವಿರುವ ಬಯಲಿನಲ್ಲಿ ರಾಮಲಿಂಗ ದೇವಾಲಯವಿದೆ. ಇದರ ಗರ್ಭಗೃಹ ಹಾಗೂ ಮುಖಮಂಟಪ ಮಾತ್ರ ಉಳಿದಿದೆ. ಈ ಊರಿನ ನೇಯ್ಗೆಯವರ ನಿವಾಸಗಳ ಬಳಿ ರಾಮದೇವರ ಚಿಕ್ಕ ಗುಡಿ ಇದೆ. ಗರ್ಭಗೃಹದಲ್ಲಿ ರಾಮ ಮತ್ತು ಸೀತೆಯರ ಶಿಲಾ ಮೂರ್ತಿಗಳಿದ್ದು, ಬಾಗಿಲುವಾಡದ ಲಲಾಟದಲ್ಲಿ ಗಣಪತಿಯ ಶಿಲ್ಪವಿದೆ. ಎಲ್ಲಾ ದೇವಾಲಯಗಳೂ ವಿಜಯನಗರೋತ್ತರ ಶೈಲಿಯಲ್ಲಿದೆ. ಮರಾಠರ ಶೈಲಿಯಲ್ಲಿ ನಿರ್ಮಿತವಾಗಿರುವ ಪಾಂಡುರಂಗದೇವರ ದೇವಾಲಯವಿದೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾದ ಮಸೀದಿ ಇದೆ. ಈ ಊರು ನೇಯ್ಗೆ ಉದ್ಯಮಕ್ಕೆ ಪ್ರಸಿದ್ಧವಾಗಿದೆ. **ಕಾಳಕಾಳೇಶ್ವರ ಕ್ಷೇತ್ರ** : ಗಜೇಂದ್ರಗಡದಿಂದ ಐದು ಕಿ.ಮೀ. ದೂರದಲ್ಲಿರುವ ಪುರಾತನವಾದ ಪುಣ್ಯಕ್ಷೇತ್ರವಾಗಿದೆ. ಎತ್ತರವಾದ ಗುಡ್ಡದಲ್ಲಿ (300 ಅಡಿಗಳು) ಕಾಲಕಾಳೇಶ್ವರ ಗವಿ ದೇವಾಲಯವಿದೆ. ಈ ಗುಡ್ಡಕ್ಕೆ ಜಾಲೇಂದ್ರ ಪರ್ವತವೆಂದೂ ಕರೆಯಲಾಗುತ್ತದೆ. ಕಾಳಕಾಳೇಶ್ವರದ ವಿಸ್ತಾರ ವರ್ಣನೆಯು ಸ್ಕಾಂದ ಪುರಾಣದ ಮಾಹೇಶ್ವರ ಖಂಡ ಹಾಗೂ ಕುಮಾರಿಯ ಖಂಡದಲ್ಲಿ ವಿವರಿಸಲ್ಪಟ್ಟಿದೆ. ಮಹಾವಿಷ್ಣುವು ದಶಾವತಾರಗಳನ್ನು ತಳೆದಂತೆ ಶಂಭೂಶಂಕರನೂ ದಶಾವತಾರವನ್ನು ತಳೆದುದು ಪ್ರತೀತಿಯಿದೆ. ಅದರಂತೆ ಕಾಲಕಾಲೇಶ, ತಾರಬಾಲಭೂವನೇಶ, ಷೋಡಶ, ಶ್ರೀವಿದ್ಯೇಶ, ಭೈರವ ಮುಂತಾದವು ಶಿವನ ದಶಾವತಾರಗಳೆಂದು ನಂಬಿಕೆಯಿದೆ. ಅವುಗಳಲ್ಲಿ ಪ್ರಥಮ ಅವತಾರವೇ ಮಹಾಕಾಳ ಅಥವಾ ಕಾಲಾತೀತ ಕಾಲಕಾಲೇಶ್ವರ ಅವತಾರ ಎಂದು ಶಿವಪುರಾಣದಲ್ಲಿ ವಿವರಿಸಲಾಗಿದೆ. ಕಲ್ಯಾಣದ ಚಾಳುಕ್ಯರಿಂದ ಪ್ರಾರಂಭವಾಗಿ ಯಾದವ ಸಿಂಘಣಾ ಮತ್ತು ವಿಜಯನಗರದ ಇಮ್ಮಡಿ ಹರಿಹರನ ಕಾಲದವರೆಗೂ ಈ ದೇವಾಲಯದಲ್ಲಿ ಶಾಸನಾಧಾರಗಳು ದೊರೆಯುತ್ತವೆ. ಗವಿಯ ಒಳಗೆ ವಿಶಾಲವಾದ ಪಡಸಾಲೆಯಿದ್ದು ಅದನ್ನೇ ಗರ್ಭಗುಡಿಯನ್ನಾಗಿ ಪರಿವರ್ತಿಸಲಾಗಿದೆ. ಇದರ ಎದುರಿಗೆ ಎರಡು ಚಿಕ್ಕದಾದ ಪುಷ್ಕರಣಿಗಳಿವೆ. ದೀರ್ಘ ಬಿಸಿಲುಕಾಲದಲ್ಲೂ ಬತ್ತದೇ ಇರುವುದೇ ಇವುಗಳ ವಿಶೇಷವಾಗಿದೆ. ಈ ಗವಿಯಿಂದ ಉತ್ತರಕ್ಕೆ ಇನ್ನೊಂದು ಗವಿಯ ಬಾಯಿ ತೆರೆದಿದ್ದು ಒಳಗೆ ಅಂತರಗಂಗೆ ಎಂದು ಕರೆಯಲಾಗುವ ಎರಡು ತೀರ್ಥಗಳಿವೆ. ಇವುಗಳನ್ನು ಎಣ್ಣೆಗೊಂಡ (ಕುಂಡ) ಮತ್ತು ಅರಸರಗೊಂಡ (ಕುಂಡ)ವೆಂದೂ ಸ್ಥಳೀಯವಾಗಿ ಕರೆಯಲಾಗುತ್ತದೆ. ಕಾಳಕಾಳೇಶ್ವರ ಲಿಂಗ ಹಾಗೂ ಗರ್ಭಗುಡಿಯ ಲಲಾಟವೆಲ್ಲ ಬೆಳ್ಳಿಯ ಹೊದಿಕೆ ಹೊಂದಿವೆ. ಈ ದೇವಾಲಯದ ಮುಂಭಾಗದಲ್ಲಿ ಇರುವ ನಂದಿಯು ಕಾಲಕಾಲಕ್ಕೆ ಬೆಳೆಯುತ್ತಿದೆ ಎಂದು ನಂಬಿ ಬಂಜೆ ಹೆಂಗಸರುಗಳು ಇದನ್ನು ವಿಶೇಷವಾಗಿ ಭಕ್ತಿಭಾವದಿಂದ ಪೂಜಿಸುವುದು ರೂಢಿಯಲ್ಲಿದೆ. ಕಾಳಕಾಳೇಶ್ವರ ದೇವಾಲಯದಲ್ಲಿರುವ ನಾಲ್ಕನೇ ಸೋಮೇಶ್ವರನ ಕಾಲದ ಶಾಸನವು (ಕ್ರಿ.ಶ. 1194)ಯಲಬುರ್ಗಿಯ ಸಿಂಧವಂಶದ ಆಚಿದೇವರಸನಿಂದ ಕಾಳಕಾಳೇಶ್ವರ ದೇವರಿಗೆ ಬಿಟ್ಟ ಭೂದಾನವನ್ನು ತಿಳಿಸುತ್ತದೆ. ಅದೇ ಕಲ್ಲಿನ ಹಿಂಭಾಗದಲ್ಲಿ ಯಾದವ ಸಿಂಘಣನ (ಕ್ರಿ.ಶ. 1220) ರಾಜೂರ ಶಾಸನ ಗ್ರಾಮದ ಸಾಯಿಮಗಾವುಂಡ ಮತ್ತು ಉಗುರ ಮುನ್ನೂರ್ವರಿಂದ ಕಾಳಕಾಳೇಶ್ವರ ದೇವರಿಗೆ ನೀಡಿದ ದಾನವನ್ನು ದಾಖಲಿಸುತ್ತದೆ. ಮೂಲಲಿಂಗದ ಪ್ರಭಾವಳಿಯಲ್ಲಿರುವ ಶಾಸನವು (ಕಾಲಗೊತ್ತಿಲ್ಲ) ಮಹಾದೇವನ ಮಗ ನಾರಾಯಣದಾತೆಯನಿಂದ ಕಾಳಕಾಳೇಶ್ವರನಿಗೆ ನೀಡಿದ ಪ್ರಭಾವಳಿಯ ಕಾಣಿಕೆಯ ಬಗೆಗೆ ತಿಳಿಸುತ್ತದೆ.

**ಗಳಗನಾಥ** : ಹಾವೇರಿ ತಾಲೂಕಿನ (ಜನಸಂಖ್ಯೆ : 1,044) ಹಾವೇರಿಯಿಂದ 40 ಕಿ.ಮೀ. ದೂರದಲ್ಲಿ ವರದಾ ಹಾಗೂ ತುಂಗಭದ್ರಾ ನದಿಗಳ ಸಂಗಮಸ್ಥಳದಲ್ಲಿರುವ ಒಂದು ಪುಣ್ಯಕ್ಷೇತ್ರ. ಇದು ಪ್ರಾಚೀನ ಶಾಸನಗಳಲ್ಲಿ 'ಪುಲ್ಲುಣಿ' ಎಂದೇ

ಉಲ್ಲೇಖಿತಗೊಂಡಿರುವಂತೆ ತೋರುತ್ತದೆ. ಊರ ಹೊರಗೆ ನದಿದಂಡೆಯಲ್ಲಿ ಗಳಗೇಶ್ವರ ದೇವಾಲಯವಿದ್ದು ಇದು ಒಂದು ಸಂಕೀರ್ಣ ಕಟ್ಟಡವಾಗಿದೆ. ಗಳಗೇಶ್ವರ ದೇವಾಲಯ ಒಂದುಳಿದು ಬೇರೆ ಎಲ್ಲಾ ದೇವಾಲಯಗಳೂ ಶಿಥಿಲವಾಗಿವೆ. ಭವ್ಯ, ಸುಂದರ ವಿಶಾಲ ಹಾಗೂ ಶಿಲ್ಪ ವೈಭವದಿಂದ ತುಂಬಿದ ಗಳಗೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ನದಿಯ ಮಹಾಪೂರದಿಂದ ಹಾನಿಯಾಗದಿರಲೆಂದು ಗಳಗೇಶ್ವರ ದೇವಾಲಯದಲ್ಲಿ ವಿಶಿಷ್ಟವಾದ ಹಾಗೂ ಅತಿ ಎತ್ತರವಾದ ಅಧಿಷ್ಠಾನವು ಕಂಡುಬರುತ್ತದೆ. ಅಧಿಷ್ಠಾನವು ನಕ್ಷತ್ರಾಕಾರವಾಗಿದ್ದು ತಳಹದಿಯಲ್ಲಿ (ಪಿರಮಿಡ್ ಆಕಾರದಲ್ಲಿದ್ದು) ವಿಶಾಲವಾಗಿದ್ದು ಮೇಲಕ್ಕೆ ಹೋದಂತೆ ಹಂತಹಂತವಾಗಿ ಕಿರಿದಾಗುತ್ತಾ ಹೋಗುತ್ತದೆ. ಭಿತ್ತಿಭಾಗವನ್ನು ಈ ಅದಿಷ್ಠಾನವೇ ಆಕ್ರಮಿಸಿಕೊಂಡಿದ್ದು ಮುಂದೆ ವಲ್ಲಭಿ ಭಾಗದಿಂದ ಕಲ್ಯಾಣದ ಚಾಳುಕ್ಯರ ದೇವಾಲಯ ಮಾದರಿಯನ್ನು ಅನುಸರಿಸಲಾಗಿದೆ. ಗರ್ಭಗೃಹದ ಬಾಗಿಲುವಾಡವು (12 ಅಡಿ ಎತ್ತರವಾಗಿದೆ) ವಿಪುಲವಾದ ಕೆತ್ತನೆಗಳಿಂದ ಅಲಂಕೃತವಾಗಿದ್ದು ಒಳಗೆ ಎತ್ತರವಾದ ಶಿವಲಿಂಗವಿದೆ. ದೇವಾಲಯದ ಗರ್ಭಗುಡಿಯಲ್ಲಿ ಅರ್ಚಿತಲಿಂಗವೇ ಅಲ್ಲದೆ ಒಂದೂವರೆ ಅಡಿ ಎತ್ತರದ ಸಪ್ತಮಾತೃಕೆಯರ ಕೆಲವು ಮೂರ್ತಿಗಳಿದ್ದು ಅವುಗಳಲ್ಲಿ ಇಂದ್ರಾಣಿ, ವೈಷ್ಣವಿ, ಮಾಹೇಶ್ವರಿ, ವಾರಾಹಿ ಇದ್ದಾರೆ. ಇದಲ್ಲದೆ ವಿಷ್ಣು ಭೈರವ, ಕಾಳಿ, ಶಿವಪಾರ್ವತಿ, ಅಷ್ಟಭುಜ ಕಾಳಿ ಮುಂತಾದ ಮೂರ್ತಿಗಳಿವೆ. ಅಂತರಾಳದಲ್ಲಿ ಜನಾರ್ಧನ ಹಾಗೂ ಸರಸ್ವತಿಯ ವಿಗ್ರಹಗಳನ್ನು ಇರಿಸಲಾಗಿದೆ. ನವರಂಗದ ದೇವಕೋಷ್ಠಗಳಲ್ಲಿ ಸುಮಾರು ಐದು ಅಡಿ ಎತ್ತರವಿರುವ ವಿಷ್ಣು, ಮಹಿಷಮರ್ದಿನಿ, ಗಣಪತಿ ಹಾಗೂ ಸೂರ್ಯನ ಚಾಳುಕ್ಯಶೈಲಿಯ ಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿ ನಾಲ್ಕು ಭಾರೀ ಗಾತ್ರದ ಚಾಳುಕ್ಯ ಕಂಬಗಳಿದ್ದು ನಡುವೆ ಬೃಹದಾಕಾರವಾದ ನಂದಿಯ ಶಿಲಾಮೂರ್ತಿ ಇದೆ. ಇಲ್ಲಿನ ಕೆಲವು ಶಾಸನಗಳಲ್ಲಿ ನದಿಯ ರೇಖಾಚಿತ್ರವನ್ನು ಕೆತ್ತಲಾಗಿದೆ. ಈ ದೇವಾಲಯದ ರಚನೆಯ ಕಾಲವನ್ನು ಕ್ರಿ.ಶ. 11ನೇ ಶತಮಾನದ ಆರಂಭದ ಕಾಲವೆನ್ನಬಹುದು. ಇದನ್ನು ಚಾಳುಕ್ಯ ಶೈಲಿಯ ವಿಶಿಷ್ಟ ಸುಂದರ ದೇವಾಲಯವೆನ್ನಬಹುದು. ಗಳಗೇಶ್ವರ ದೇವಾಲಯದಲ್ಲಿರುವ ಮೊದಲನೇ ಶಾಸನವು ಚಾಳುಕ್ಯ ಸೋಮೇಶ್ವರ (ಕ್ರಿ.ಶ. 1056)ನ ಕಾಲಕ್ಕೆ ಸೇರಿದ್ದು ಅಸ್ಪಷ್ಟವಾಗಿದೆ ಹಾಗೂ ಬನವಾಸಿಪುರವರಾಧೀಶ್ವರ ಎಂಬ ಬಿರುದಿನ ಮಾಂಡಲಿಕನೊಬ್ಬನನ್ನು ಉಲ್ಲೇಖಿಸುತ್ತದೆ. ಎರಡನೇ ಶಾಸನವು ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಕ್ರಿ.ಶ. 1079ರಲ್ಲಿ ಮೋಕರಿ ಬೊಮ್ಮಯ್ಯನಿಂದ ಗಳಗೇಶ್ವರ ದೇವಾಲಯದ ಮಂಟಪ ನಿರ್ಮಾಣಕ್ಕಾಗಿ ಬಿಟ್ಟ ಸುವರ್ಣದಾನದ ಬಗೆಗೆ ತಿಳಿಸುತ್ತದೆ. ಮೂರನೇ ಶಾಸನವು ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1080) ಯುವರಾಜ ಜಯಸಿಂಹದೇವನ ಅಧೀನವಾದ ಮಹಾಮಂಡಳೇಶ್ವರ ಚನ್ನರಸನಿಂದ ಗಳಗೇಶ್ವರ ದೇವಾಲಯಕ್ಕೆ ಪುಲ್ಲುಣಿ ಗ್ರಾಮದ ಪುನರ್ದತ್ತಿಯನ್ನು ನೀಡಿದ ಬಗೆಗೆ ತಿಳಿಸುತ್ತದೆ.

ಗಳಗೇಶ್ವರ ದೇವಾಲಯದ ಎಡಭಾಗದಲ್ಲಿ ಮಲ್ಲೇಶ್ವರ ದೇವಾಲಯವಿದ್ದು ರಾಷ್ಟ್ರಕೂಟರ ಕಾಲದ ಸುಂದರ ಬಾಗಿಲುವಾಡವನ್ನು ಹೊಂದಿದೆ. ಇದರ ಹಿಂಭಾಗದಲ್ಲಿ ರಾಷ್ಟ್ರಕೂಟರ ಕಾಲದ ಭಿನ್ನವಾದ ವೀರಗಲ್ಲಿದೆ. ಇದು ಮೂಲತಃ ಇಟ್ಟಿಗೆಯ ದೇವಾಲಯವಾಗಿದ್ದಂತೆ ಕಂಡು ಬರುತ್ತದೆ. ಇದೇ ದೇವಾಲಯದ ಹಿಂಬದಿಯಲ್ಲಿ ಹೊನ್ನೇಶ್ವರ ದೇವಾಲಯವಿದ್ದು ಹೆಚ್ಚಿನ ಅಲಂಕಾರಗಳಿಲ್ಲ. ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ನವರಂಗದಲ್ಲಿ ಗಣಪತಿಯ ಎರಡು ಶಿಲ್ಪಗಳಿವೆ. ಗಳಗೇಶ್ವರ ದೇವಾಲಯದ ಬಲಭಾಗದ ಹಿಂಬದಿಯಲ್ಲಿರುವ ದತ್ತಾತ್ರೇಯ ಗುಡಿಯು ರಾಷ್ಟ್ರಕೂಟರ ಉತ್ತರಾರ್ಧಭಾಗದ ರಚನೆಯಾಗಿದ್ದು ಇದರ ನವರಂಗದ ಛಾವಣಿಯಲ್ಲಿ ಅಷ್ಟದಿಕ್ಪಾಲಕರು ಪರಿವಾರ ಸಮೇತ ಸಾಗುತ್ತಿರುವ ಸುಂದರ ಶಿಲ್ಪಗಳಿವೆ. ಇದಲ್ಲದೇ ಈ ದೇವಾಲಯದ ಆವರಣದಲ್ಲಿ ಬಿಡಿಲಿಂಗಗಳು ಹಾಗೂ ಶಿಲ್ಪಗಳನ್ನು ಇಟ್ಟಿರುತ್ತಾರೆ. ಇದೇ ಊರಿನ ಆಂಜನೇಯ ದೇವಾಲಯವು ಕಲ್ಯಾಣದ ಚಾಳುಕ್ಯರ ದೇವಾಲಯವೊಂದರ ಅವಶೇಷಗಳಿಂದ ನಿರ್ಮಾಣಗೊಂಡಿರುವ ದೇವಾಲಯವಾಗಿದೆ. ಇತ್ತೀಚೆಗೆ ನೆರೆಹಾವಳಿಯಿಂದ ಹೆಚ್ಚು ಹಾನಿಗೊಳಗಾಗಿರುವುದರಿಂದ ಈಗಿನ ಊರಿನಿಂದ ಸ್ವಲ್ಪ ದೂರದಲ್ಲಿ ಹೊಸ ಊರು ನಿರ್ಮಾಣಗೊಂಡಿದೆ. ಈ ಗ್ರಾಮದ ಸಮೀಪದಲ್ಲಿ ಅನೇಕ ಬೃಹತ್ ಶಿಲಾಯುಗದ ಕಲ್ಲಿನ ಗೋರಿಗಳು ಬೆಳಕಿಗೆ ಬಂದಿವೆ. ಇಲ್ಲಿಗೆ ಒಂದು ಕಿ.ಮೀ. ದೂರದಲ್ಲಿ ನದಿಯ ನಡುಗಡ್ಡೆಯಲ್ಲಿ ಇದೇ ಗ್ರಾಮಕ್ಕೆ ಸೇರಿದ, ಆದರೆ ಮೇವುಂಡಿಗೆ ಸಮೀಪವಾದ ಸ್ಥಳದಲ್ಲಿ ಪಂಚಲಿಂಗೇಶ್ವರ ಗುಡಿಯಿದ್ದು ಒಂದೇ ಪೀಠದ ಮೇಲೆ ಐದು ಲಿಂಗಗಳಿವೆ. ಮಕರ ಸಂಕ್ರಮಣದ ಕಾಲಕ್ಕೆ ಗಳಗೇಶ್ವರ ಹಾಗೂ ಪಂಚಲಿಂಗೇಶ್ವರ ದೇವಾಲಯಗಳ ಜಾತ್ರೆ ಕೂಡಿಯೇ ಆಗುತ್ತದೆ.

**ಗಬ್ಬೂರು :** ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿ ಬೆಂಗಳೂರು-ಪುಣೆ ರಸ್ತೆಯ ಬದಿಯಲ್ಲಿ ಸ್ವಲ್ಪ ಒಳಕ್ಕೆ ಇರುವ ಹಳೆಯ ಗಬ್ಬೂರಲ್ಲಿ ಚಾರಿತ್ರಿಕ ಅವಶೇಷಗಳಿವೆ. ಪ್ರಾಚೀನ ಶಾಸನಗಳಲ್ಲಿ 'ಗೊಬ್ಬನೂರು' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ರಾಷ್ಟ್ರಕೂಟರ ಕಾಲದ ಕ್ರಿ.ಶ.

909ರ ವೀರಗಲ್ಲು ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ಗೊಬ್ಬನೂರ ಕೊಂತದ ನಾಗನ ಮರಣವನ್ನು ಉಲ್ಲೇಖಿಸಿದರೆ, ಅಲ್ಲೇ ಇರುವ ಮತ್ತೊಂದು ವೀರಗಲ್ಲು ಶಾಸನ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದ್ದು ಗೋಗ್ರಹಣ ಪ್ರಸಂಗದಲ್ಲಿ ಸಿರಿವೆಗೆ ಎಂಬುವನು ನಿಧನ ಹೊಂದಿದ ವಿಷಯವನ್ನು ತಿಳಿಸುತ್ತದೆ. ಈ ಎರಡೂ ವೀರಗಲ್ಲುಗಳ ಶಿಲ್ಪ ಬಹಳ ಆಕರ್ಷಕವಾಗಿದೆ. ಮೊದಲ ಶಾಸನವಿರುವ ವೀರಗಲ್ಲಿನ ಕೆಳಪಟ್ಟಿಕೆಯಲ್ಲಿ ಯೋಧ ಶತ್ರುಸೈನಿಕನನ್ನು ಭರ್ಜಿಯಲ್ಲಿ ತಿವಿದು ಆಕಾಶಕ್ಕೆ ಚಿಮ್ಮಲು ವಿದ್ಯುಕ್ತನಾಗಿರುವಂತೆ ತೋರಿಸಿ, ಶಿರೋ ಪಟ್ಟಿಕೆಯಲ್ಲಿ ಖಡ್ಗ ಕಪಾಲ ಹಿಡಿದಿರುವ ದೇವಿಯನ್ನು ಕೆತ್ತಿದ್ದಾರೆ. ಎರಡನೇಯದರಲ್ಲಿ ಎಮ್ಮೆಗಳನ್ನೇ ತೋರಿಸಿದ್ದು, ಶತ್ರುಪಾಳಯದ ಯೋಧರನ್ನು ಎಡಗೈ ಯೋಧರಂತೆ ಕೆತ್ತಿರುವುದು ಕುತೂಹಲಕರವಾಗಿದ್ದು ಈ ಮಾದರಿಯ ವೀರಗಲ್ಲುಗಳು ಅಪಾರ ಸಂಖ್ಯೆಯಲ್ಲಿ ಗಮನಕ್ಕೆ ಬಂದಿದ್ದು, ಶಿಲ್ಪ ದೌರ್ಬಲ್ಯದಿಂದಾಗಿ ಇದು ಅನಿವಾರ್ಯವಾಗಿರುವಂತೆ ತೋರುತ್ತದೆ. ಊರ ಹೊರಗೆ ಹನುಮಂತನ ಗುಡಿ ಆವರಣದಲ್ಲಿರುವ ಈ ವೀರಗಲ್ಲುಗಳ ಬಳಿಯಲ್ಲೇ ಆಕರ್ಷಕವಾದ ಸಪ್ತಮಾತೃಕಾ ಶಿಲ್ಪವಿದೆ. ಈ ಗುಡಿಯ ಸಮೀಪದಲ್ಲೇ ಇರುವ ಪಾಳು ಬಿದ್ದಿರುವ ಕಲ್ಮೇಶ್ವರ ಹಾಗೂ ಬಸವಣ್ಣನ ಗುಡಿ ಬಳಿ ಕಲ್ಯಾಣದ ಚಾಲುಕ್ಯರ ಕಾಲದ ಶಿವಲಿಂಗ, ನಂದಿ ಶಿಲ್ಪಗಳಿವೆ. ಹನುಮಂತನ ಗುಡಿ ಹಿಂದೆ ಹೊಲದಲ್ಲಿ ಬೇವಿನ ಮರದ ಬುಡದಲ್ಲಿರುವ ಬನಶಂಕರಿ ಶಿಲ್ಪ ವಿಶಿಷ್ಟವಾಗಿದೆ. ಚತುರ್ಭುಜಧಾರಿಯಾಗಿರುವ ದೇವಿ, ರಾಕ್ಷಸನ ಸಂಹಾರ ಮಾಡಿ ಕುಳಿತು ವಿಶ್ರಮಿಸುತ್ತಿರುವಳೇನೋ ಎಂಬಂತೆ ಚಿತ್ರಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ. ಊರಲ್ಲಿ ದ್ಯಾಮವ್ವ ಹಾಗೂ ಈಶ್ವರ ಗುಡಿಗಳಿದ್ದು, ಒಂದು ಮಸೀದಿ ಹಾಗೂ ದರ್ಗಾಗಳಿವೆ.

**ಗರಗ** : ಧಾರವಾಡ ತಾಲೂಕಿನ (ಜನಸಂಖ್ಯೆ : 7,916) ಇದು ಧಾರವಾಡದಿಂದ ವಾಯುವ್ಯಕ್ಕೆ 14 ಕಿ.ಮೀ. ದೂರದಲ್ಲಿದ್ದು ಇಲ್ಲಿಂದ ಈವರೆಗೆ ಸುಮಾರು 13ನೇ ಶತಮಾನಕ್ಕೆ ಸೇರಿದ ನಾಲ್ಕು ಶಾಸನಗಳು ವರದಿಯಾಗಿದ್ದು ಕ್ರಿ.ಶ. 1230ರ ಶಾಸನ ಯಾಪನೀಯ ಸಂಘದ ಕುಂಮಡಿ ಗಣದ ಆಚಾರ್ಯ ಶಾಂತಿವೀರದೇವರು ಸಮಾಧಿ ಮರಣ ಹೊಂದಿದ ವಿಷಯ ತಿಳಿಸಿದೆ. ಕ್ರಿ.ಶ. 1287ರ ಶಾಸನ ಮಹಾಮಂಡಳೇಶ್ವರನಿಂದ ಪಡೆದ ದಾನವನ್ನು ಬೆಳ್ಗಟ್ಟಿಗೆಯ ಮಹಾಪ್ರಭು ಪುನರ್ದಾನ ಮಾಡಿದ ವಿಷಯವನ್ನು ತಿಳಿಸುತ್ತಿದ್ದು, ಇದರಿಂದ ಹಿಂದೆ ಗರಗ ಪ್ರಮುಖ ಜೈನಕೇಂದ್ರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿ ಪ್ರಾಚೀನ ಕಾಲದ ಜೈನ ಬಸದಿ ಯಾವುದು ಇಲ್ಲ. ಜೈನ ಸಮಾಜದವರು ಇತ್ತೀಚೆಗೆ ಧಾರವಾಡ ರಸ್ತೆಯಲ್ಲಿ ಕಾಲೇಜಿನ ಹಿಂಬದಿಯಲ್ಲಿ ಜೈನ ಬಸದಿಯನ್ನು ನಿರ್ಮಿಸಿದ್ದಾರೆ. ಇಲ್ಲಿನ ವಿಶೇಷ ಆಕರ್ಷಣೆ ಎಂದರೆ, ಮಡಿವಾಳಜ್ಜನ ಗದ್ದುಗೆ ಹಾಗೂ ಮಠ. ಕಡಕೋಳದಿಂದ ಬಂದ ಮಡಿವಾಳಪ್ಪಜ್ಜನ ಗದ್ದುಗೆಯ ಗುಡಿ ವಿಶಾಲವಾಗಿದ್ದು ಬಹಳ ಸುಂದರವಾಗಿದೆ. ಇದರ ಬಳಿಯಲ್ಲೇ ಇರುವ ಮಡಿವಾಳಜ್ಜನಮಠ ಬಹಳ ವಿಶಾಲವಾಗಿದ್ದು, ವಿದ್ಯಾಪೀಠವನ್ನೂ ಹೊಂದಿದೆ. ಪ್ರತೀವರ್ಷ ಮಾಘ ಬಹುಳ ತದಿಗೆಯೆಂದು ನಡೆಯುವ ಮಡಿವಾಳಜ್ಜನ ರಥೋತ್ಸವಕ್ಕೆ ಸಾವಿರಾರು ಜನ ಬಂದು ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಈ ಊರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಣ್ಯಪಾತ್ರ ವಹಿಸಿದ್ದು ಖಾದಿ ಉತ್ಪಾದನೆಯ ಗಣ್ಯಕೇಂದ್ರ. ರಾಷ್ಟ್ರಧ್ವಜಗಳನ್ನು ಇಲ್ಲಿ ತಯಾರಿಸುತ್ತಾರೆ.

**ಗಾವರವಾಡ** : ಗದಗ ತಾಲೂಕಿನ ಗಾವರವಾಡವು (ಜನಸಂಖ್ಯೆ : 1,273) ಗದಗಿನಿಂದ ಉತ್ತರಕ್ಕೆ 15 ಕಿ.ಮೀ. ದೂರದಲ್ಲಿ ಹಾಗೂ ಹೊಂಬಳದಿಂದ ವಾಯುವ್ಯಕ್ಕೆ 16 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ ಗಾವಡಿವಾಡ ಎಂದೇ ಉಲ್ಲೇಖಿತಗೊಂಡಿದ್ದು ಈವರೆಗೆ ಎರಡು ಶಾಸನಗಳು ವರದಿಯಾಗಿದೆ. ನಾರಾಯಣ ಗುಡಿಯ ಪಾಳು ನಿವೇಶನದಲ್ಲಿರುವ ರಾಷ್ಟ್ರಕೂಟ ಒಂದನೆ ಅಮೋಘವರ್ಷನ ಕ್ರಿ.ಶ. 869ರ ಶಾಸನ ದೇವಣ್ಣಯ್ಯನು ಬೆಳ್ವೊಲ 300 ಆಳುತ್ತಿದ್ದಾಗ, ಬಲದೇವ ಹಾಗೂ ಇತರರು ಗಾವಡಿವಾಡದ 50 ಮಹಾಜನರಿಗೆ ತುಪ್ಪದ ತೆರೆಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಇದರ ಹಿಂಬದಿಯಲ್ಲಿರುವ ಕ್ರಿ.ಶ. 1071ರ ಮತ್ತೊಂದು ಶಾಸನ ಮಹಾಮಂಡಳೇಶ್ವರ ಲಕ್ಕೀರಸನು ಅಣ್ಣಿಗೆರೆಯ ಜಿನಾಲಯಕ್ಕೆ ಪೂರ್ವದತ್ತಿಯನ್ನು ಪುನರ್ಭರಣ ಮಾಡಿದ ಅಂಶವನ್ನು ತಿಳಿಸುತ್ತದೆ. ನಾರಾಯಣದೇವರ ಗುಡಿಯಿದ್ದ ಸ್ಥಳ ಇಂದು ಪೂರ್ಣ ಹಾಳಾಗಿದ್ದು ಅಲ್ಲಿ ತೀರ್ಥಂಕರ ಪಾದ ಪೀಠವಿದೆ. ಇದರೊಂದಿಗೆ ಊರಲ್ಲಿ ಕಲ್ಮೇಶ್ವರ, ರಾಮಲಿಂಗ, ಬಸವಣ್ಣ, ಲಿಂಗದೇವರು, ಹನುಮಂತ, ದ್ಯಾಮವ್ವ, ದುರ್ಗವ್ವ ಹುಡೇದ ಲಕ್ಷವ್ವ (ಬಹುಶಃ ಇಲ್ಲಿ ಕೋಟೆ ಇದ್ದು ಅದರ ಮುಖ್ಯದೇವಿ ಇವಳಿರಬೇಕು) ಹಾಗೂ ಕರಿಯಮ್ಮನ ದೇವಾಲಯಗಳಿವೆ; ಮಳೆಯಜ್ಜನ ಮಠವಿದೆ. ಊರಲ್ಲೊಂದು ಮಸೀದಿ ಇದೆ.

**ಗುಡಗೇರಿ** : ಕುಂದಗೋಳ ತಾಲೂಕಿನ ಗುಡಗೇರಿಯು (ಜನಸಂಖ್ಯೆ : 8,828) ಕುಂದಗೋಳದಿಂದ ಆಗ್ನೇಯಕ್ಕೆ 26 ಕಿ.ಮೀ. ದೂರ ಹಾಗೂ ಲಕ್ಷ್ಮೇಶ್ವರದಿಂದ ಪಶ್ಚಿಮಕ್ಕೆ ಸುಮಾರು 12 ಕಿ.ಮೀ. ದೂರದಲ್ಲಿರುವ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಗುಡ್ಡಗೆರೆ' ಎಂದೇ ಉಲ್ಲೇಖಿತಗೊಂಡಿದ್ದು ಶಾಸನಗಳಲ್ಲಿ 'ಗುಪ್ತತಟಾಕ' ಎಂದೂ ಸಂಸ್ಕೃತೀಕರಣವಾಗಿದೆ. ಇಲ್ಲಿಂದ ಈವರೆಗೆ ಎಂಟು ಶಾಸನಗಳು

ವರದಿಯಾಗಿವೆ. ಪುಲಿಗೆರೆ (ಲಕ್ಷ್ಮೇಶ್ವರ)ಯ ಆನೆಸೆಜ್ಜೆ ಬಸದಿಗೆ ಬಾದಾಮಿ ಚಾಳುಕ್ಯ ಅರಸ ವಿಜಯಾದಿತ್ಯನ ತಂಗಿ ಕುಂಕುಮ ಮಹಾದೇವಿ ಗುಡಿಗೆರೆಯ ಕೆಲವು ಜಮೀನನ್ನು ಬಿಟ್ಟಿದ್ದು ಅದನ್ನು ಪುನರ್ಭರಣ ಮಾಡಿದ ಅಂಶವನ್ನು ಕ್ರಿ.ಶ. 1072ರ ಶಾಸನ ಹೇಳುವುದರೊಂದಿಗೆ, ಗುಡಿಗೆರೆ ಬಾದಾಮಿ ಚಾಳುಕ್ಯರಷ್ಟು ಪ್ರಾಚೀನ ಊರೆಂಬ ಅಂಶವನ್ನು ಹೊರಗೆಡಹುತ್ತದೆ. ಬಾದಾಮಿ ಚಾಳುಕ್ಯರ ಶಿಗ್ಗಾಂವಿಯ ತಾಮ್ರ ಶಾಸನದಲ್ಲಿ ಲಕ್ಷ್ಮೇಶ್ವರದ ಬಸದಿಗೆ ಗುಡಿಗೇರಿ ಊರನ್ನು ದಾನಬಿಟ್ಟಿದ್ದು ಊರಲ್ಲಿ 14 ಕೆರೆಗಳಿರುವ ಸಂಗತೀ ಅದರಿಂದ ತಿಳಿಯುತ್ತದೆ. ಇನ್ನೊಂದು ಶಾಸನವು ರಾಷ್ಟ್ರಕೂಟ ಅಮೋಘವರ್ಷನು ಗೋಸಾಸ ದಾನ ಮಾಡಿದ ಅಂಶವನ್ನು ತಿಳಿಸಿದರೆ, ಕ್ರಿ.ಶ. 1139ರ ಮತ್ತೊಂದು ಶಾಸನ ನಾಗೇಶ್ವರ ದೇವರಿಗೆ 32 ಗೇಣ ಗಳೆಯಲ್ಲಿ ಅಳೆದು ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಕಲ್ಮಠದಲ್ಲಿರುವ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನ ಕೆಂಡೆಯರ ಕಲ್ಲಿಮಯ್ಯ, ತನ್ನ ಹೆಸರಲ್ಲಿ ಕಲಿದೇವ ಲಿಂಗ ಪ್ರತಿಷ್ಠಾಪಿಸಿ ಮಾಡಿ ಭೂಮಿಯನ್ನೂ, ನಗದು ಹಣವನ್ನೂ ದಾನ ನೀಡಿ ಅದೇ ರೀತಿ ಕಾಳೇಶ್ವರ ದೇವರಿಗೂ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಅಲ್ಲೇ ಇರುವ ಯಾದವ ಸಿಂಘಣನ ಕ್ರಿ.ಶ. 1217ರ ಶಾಸನ ಕಾಳೇಶ್ವರ ದೇವರಿಗೆ ತೆಲ್ಲಿಗ-50 ನಂದಾದೀಪಕ್ಕೆಂದು ತೈಲ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಜೈನಬಸದಿ ಮುಂದಿರುವ 13ನೇಯ ಶತಮಾನದ ಶಾಸನ ಗುಡಿಗೆರೆಯ ಮುರೆಯ ಬಸದಿಗೆ ಕೆಂಪಯ್ಯನು ಗ್ರಾಮದ ಸಕಲ ಗಾಣದಲ್ಲೂ ಎಣ್ಣೆ ದಾನ ಬಿಟ್ಟ ವಿಷಯ ತಿಳಿಸುತ್ತದೆ.

ಮೇಲಿನ ಶಾಸನಗಳಲ್ಲಿ ಉಕ್ತವಾಗಿರುವ ನಾಗೇಶ್ವರ, ಕಾಳೇಶ್ವರ, ಕಲಿದೇವ, ಹಾಗೂ ಮುರೆಯ ಬಸದಿಗಳಲ್ಲಿ, ಗುಡಿಗಳೆಲ್ಲ ಹಾಳಾಗಿದ್ದು ಬಸದಿಯೊಂದು ಮಾತ್ರ ಸುಸ್ಥಿತಿಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ಬಸದಿ ರೈಲ್ವೆಬೋಗಿಯಂತೆ ಮೂರು ಭಾಗ ಹೊಂದಿದ್ದು, ಗರ್ಭಗೃಹ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಪದ್ಮಾಸೀನ ಮಹಾವೀರ ತೀರ್ಥಂಕರ ಶಿಲ್ಪವಿದೆ ಇದರ ಅಲಂಕಾರಿಕ ಬಾಗಿಲವಾಡ ಸರಳವಾದ ನಾಲ್ಕು ಶಾಖೆಗಳನ್ನು ಹೊಂದಿದೆ ಅಲ್ಲೇ ಮೂಲೆಯಲ್ಲಿ ಪದ್ಮಾವತಿ ಯಕ್ಷಿ, ನಾಗಯಕ್ಷಿ ಹಾಗೂ ಕ್ಷೇತ್ರಪಾಲ (ಭೈರವ)ರ ಸುಂದರ ಶಿಲ್ಪಗಳಿವೆ. ನವರಂಗದ ನಾಲ್ಕು ಕಂಬಗಳು ಕಲ್ಯಾಣದ ಚಾಳುಕ್ಯ ಕಂಬಗಳಾಗಿದ್ದು ಒಳಛಾವಣಿಯಲ್ಲಿ ಸರಳ ಕಮಲವಿದೆ. ನವರಂಗದ ದ್ವಾರವು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿರುವ ತ್ರಿಶಾಖೆಗಳ ನಿರಾಡಂಬರ ರಚನೆ. ಇದರ ಇಕ್ಕೆಲದಲ್ಲಿ ದ್ವಾರಪಾಲರಿದ್ದಾರೆ. ಸುಮಾರು ಕ್ರಿ.ಶ. 10-11ನೇ ಶತಮಾನಕ್ಕೆ ಸೇರಿರಬಹುದಾದ ಈ ಗುಡಿ ಜೀರ್ಣೋದ್ಧಾರಗೊಂಡಿದೆ.

ಇದರ ಜೊತೆಗೆ ಊರಲ್ಲಿ ಬಸವಣ್ಣ, ಈಶ್ವರ, ಕಲ್ಲಪ್ಪ, ಮೈಲಾರ, ಬೀರಣ್ಣ, ಹನುಮಂತ, ದ್ಯಾಮವ್ವ ಮತ್ತು ಕರಿಯವ್ವನ ಗುಡಿಗಳಿವೆ. ಗುಡ್ಡದ ಮೇಲೆ ಕಲ್ಮಠವಿದೆ. ಊರಲ್ಲೊಂದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾವಿದೆ. ಗುಡಿಗೇರಿಯ ನಾಟಕ ಕಂಪೆನಿ ಪ್ರಸಿದ್ಧವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಈ ಊರು ಕಿರಿಯ ಮಿರ್ಜಿ (ಬುದ್‌ಗಾಂವ್) ಸಂಸ್ಥಾನಕ್ಕೆ ಸೇರಿತ್ತು.

**ಗುಡ್ಡ ಗುಡ್ಡಾಪುರ (ದೇವರಗುಡ್ಡ)** : ರಾಣೆಬೆನ್ನೂರು ತಾಲೂಕಿನ ಈ ಪುಣ್ಯಕ್ಷೇತ್ರ (ಜನಸಂಖ್ಯೆ : 3,619) ರಾಣೆಬೆನ್ನೂರಿನಿಂದ ಉತ್ತರಕ್ಕೆ 10 ಕಿ.ಮೀ. ದೂರದಲ್ಲಿದೆ. ಗುಡ್ಡಗಳ ನಡುವಿರುವುದರಿಂದ ಗುಡ್ಡ ಗುಡ್ಡಾಪುರ ಎಂದೂ, ಮಾಲತೇಶನ ಗುಡಿ ಗುಡ್ಡದ ಮೇಲಿರುವುದರಿಂದ ದೇವರಗುಡ್ಡ ಎಂದೂ ಇದಕ್ಕೆ ಹೆಸರು ಬರಲು ಕಾರಣವಾಗಿದೆ. ಮಲ್ಲಯ್ಯ, ಮಲ್ಲಾರಿ, ಮೈಲಾರ, ಮಾರ್ತಾಂಡ, ಖಂಡೋಬ, ಖಂಡೇರಾಯ, ಮಾಲತೇಶ ಎಂದೆಲ್ಲಾ ಕರೆಯಲ್ಪಟ್ಟಿರುವ ಈ ದೇವರು ಉತ್ತರ ಕರ್ನಾಟಕದ ಅತ್ಯಂತ ಜನಪ್ರಿಯ ಜನಪದ ದೇವತೆಯಾಗಿದ್ದು, ಮೈಲಾರನ ಒಕ್ಕಲಿನವರು ಉತ್ತರ ಕರ್ನಾಟಕದಲ್ಲಿ ಹೇರಳವಾಗಿ ನೆಲೆಸಿದ್ದಾರೆ. ಇಷ್ಟೇ ಪ್ರಸಿದ್ಧವಾದುದು ನೆರೆಯ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನಲ್ಲಿರುವ 'ಮೈಲಾರ'

'ಏಳ್ಕೋಟಿ, ಏಳ್ಕೋಟಿ' ಎಂದು ಭಕ್ತರಿಂದ ಸ್ತುತಿಸಲ್ಪಡುವ ಮೈಲಾರನಿರುವ ದೇವರಗುಡ್ಡದ ಮಾಲತೇಶನ ಗುಡಿ ಆವರಣ ಆಕರ್ಷಕವಾಗಿದ್ದು, ವಿಶಾಲವಾಗಿದೆ. ಬೃಹತ್ತಾದ ಪ್ರವೇಶದ್ವಾರವುಳ್ಳ ವಿಶಾಲವಾದ ಪ್ರಾಕಾರದೊಳಗೆ ಮಾಲತೇಶ, ಮಾರಿಕಾಂಬಾ, ತುಪ್ಪದ ಮಾರಮ್ಮ, ಉಪ್ಪಿನ ಮಾಳವ್ವ ಹಾಗೂ ಕೆಂಚಪ್ಪನ ಗುಡಿಗಳಿದ್ದು, ಇವುಗಳಲ್ಲಿ ಮಾಲತೇಶನ ಗುಡಿ ವಿಶಾಲವಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಸ್ವಯಂಭೂಲಿಂಗವಿದ್ದು, ಇದನ್ನೇ ಮಾಲತೇಶನೆಂದು ಭಕ್ತರು ಆರಾಧಿಸುತ್ತಾರೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಆಕರ್ಷಕವಾಗಿದೆ. ನವರಂಗದ ನಡುವಣ ನಾಲ್ಕು ಕಂಬಗಳೂ ಚಾಳುಕ್ಯ ಶೈಲಿಯ ಸರಳ ಕಂಬಗಳಾಗಿವೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ಅವುಗಳಲ್ಲಿ ಕಾರ್ತಿಕೇಯ (ಚಿಕ್ಕಯ್ಯ) ಹಾಗೂ ಗಣಪತಿ (ದೊಡ್ಡಯ್ಯ)ಯ ಶಿಲ್ಪಗಳಿವೆ. ನವರಂಗದ ನಡುವಣ ಛತ್ತನ್ನು ಸುಂದರವಾದ ನಾಗಬಂಧ

ಅಲಂಕರಿಸಿದೆ. ನವರಂಗದ ಪೂರ್ವದಿಕ್ಕಿನ ಬಾಗಿಲವಾಡಕ್ಕೆ ತ್ರಿಶಾಖಾಲಂಕಾರವಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಉತ್ತರ - ದಕ್ಷಿಣ ಬದಿಯಲ್ಲೂ ಪ್ರವೇಶದ್ವಾರವಿದೆ. ಸಭಾಮಂಟಪಕ್ಕೆ ಮೂರು ದಿಕ್ಕಿನಿಂದಲೂ ಪ್ರವೇಶವಿದ್ದು, ಉತ್ತರದ ದ್ವಾರಬದಿಯಲ್ಲಿ ವಿಶಾಲವಾದ ಮೊಗಸಾಲೆಯಿದ್ದು, ಇದೇ ಗುಡಿಯ ಪ್ರಧಾನ ದ್ವಾರವಾಗಿದೆ. ಸಭಾಮಂಟಪದಲ್ಲಿ ಪಲ್ಲಕಿ ಕಟ್ಟೆ ಹಾಗೂ ಕುದುರೆಪ್ಪನ ಕಟ್ಟೆಗಳಿದ್ದು, ಒಂದರಲ್ಲಿ ಪಲ್ಲಕ್ಕಿ, ಮೈಲಾರನ ಉತ್ಸವಮೂರ್ತಿ ಹಾಗೂ ಪಾದುಕೆಗಳಿದ್ದು, ಮತ್ತೊಂದರಲ್ಲಿ ಮೈಲಾರನ ವಾಹನವಾದ ಕುದುರೆಗಳಿವೆ. ಕಾರಣಿಕೋತ್ಸವದಲ್ಲಿ 'ಕಾರಣ' ಹೇಳಲು ಬಳಸುವ ಬಿಲ್ಲಿರುವುದು ಇಲ್ಲೇ. ಈ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ್ದೆಂದು ಭಾವಿಸಬಹುದಾದರೂ ಶಾಸನಗಳಾವುವು ಈವರೆಗೆ ಇಲ್ಲಿ ಪತ್ತೆಯಾಗಿಲ್ಲ, ಇದೇ ಆವರಣದಲ್ಲಿ ಮಾರಿಕಾಂಬಾ, ಕೆಂಚಪ್ಪ (ದುರ್ಗಾಶಿಲ್ಪವಿದೆ), ತುಪ್ಪದ ಮಾಳವ್ವ ಹಾಗೂ ಉಪ್ಪಿನ ಮಾಳಪ್ಪನ ಗುಡಿಗಳಿದ್ದು, ಭಕ್ತರು ಈ ದೇವತೆಗಳಿಗೆ ತುಪ್ಪ ಹಾಗೂ ಉಪ್ಪಿನ ಸೇವೆ ಮಾಡುತ್ತಾರೆ. ಮಾರಿಕಾಂಬಾ ದೇಗುಲವು, ಗರ್ಭಗೃಹ, ಸಭಾಮಂಟಪವನ್ನು ಹೊಂದಿದ್ದು, ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟವು ಮುಂಚಾಚಿದ್ದು, ಆಕರ್ಷಕವಾಗಿದ್ದು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದೆ. ಇದರ ಶಿಖರದಲ್ಲಿ, ನಾನಾ ದೇವತೆಗಳ ಕೆತ್ತನೆಯಿದ್ದು ಮಿಥುನ ಶಿಲ್ಪ ಕೆತ್ತನೆಯೂ ಇದೆ. ಮಾಲತೇಶನ ಗುಡಿಯ ಹಿಂಬದಿಯಲ್ಲಿಯೇ ಇರುವ ಬಿಲ್ಲೇಶ್ವರ ಗುಡಿಯೂ ವಿಶಿಷ್ಟವಾದುದೇ. ಇಲ್ಲಿ ಸುಮಾರು 25 ಅಡಿ ಉದ್ದವಿರುವ ತಾವರಿಕೆ ಬೇರಿನಿಂದ ಮಾಡಿದ ಬಿಲ್ಲನ್ನು ಇಟ್ಟಿದ್ದು, ಜನ ಇದಕ್ಕೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಪ್ರತೀ ರವಿವಾರ ಹಾಗೂ ಎಲ್ಲಾ ಹುಣ್ಣಿಮೆಗಳಂದು ದೇವರ ಪಲ್ಲಕ್ಕಿ ಉತ್ಸವ ಜರುಗುವ ಇಲ್ಲಿ ಜೇಷ್ಠಮಾಸದ ಕಾರಹುಣ್ಣಿಮೆಯಲ್ಲಿ ಮೂರು ದಿನ; ಆಶ್ವಯುಜಮಾಸದ ಭಾರತ ಹುಣ್ಣಿಮೆಯಲ್ಲಿ ನಾಲ್ಕು ದಿನ ನಡೆಯುವ ಜಾತ್ರೆಗಳಲ್ಲಿ, ನಂತರದ್ದೇ ದೊಡ್ಡ ಜಾತ್ರೆಯಾಗಿದ್ದು ಆ ಸಂದರ್ಭದಲ್ಲಿ ಒಂದು ತಿಂಗಳ ಕಾಲ ದನಗಳ ಭಾರಿ ಜಾತ್ರೆಯಾಗುತ್ತದೆ. ಭಾರತ ಹುಣ್ಣಿಮೆಯಂದು ಗುಡಿಯ ಆವರಣದಲ್ಲಿರುವ ದ್ಯಾಮವ್ವನ ಕಟ್ಟೆ ಬಳಿ ಮೂರು ಆಳೆತ್ತರದ ಬಿಲ್ಲಿನ ಮೇಲೆ ನಿಂತು 'ಕಾರಣ' ಹೇಳುವ ವಗ್ಗಯ್ಯನ 'ಸಂದೇಶ' ಕೇಳಲು ನಾಡ ಮೂಲೆ ಮೂಲೆಯಿಂದ ಲಕ್ಷಾಂತರ ಜನ ಬಂದು ಸೇರುತ್ತಾರೆ. ಜಾತ್ರೆಗೆಂದು ಬರುವ ಜನರ ಸಡಗರ, ಎತ್ತು - ಚಕ್ಕಡಿಗಳ ಶೃಂಗಾರ ಸಂತೆಯಲ್ಲಿ ನಡೆಯುವ ವ್ಯಾಪಾರ, ಎಲ್ಲವೂ ಆಕರ್ಷಕ. ಮೈಲಾರನ ಒಕ್ಕಲಿನವರು ದೀವಟಿಗೆ ಸೇವೆ, ಕುದುರೆಯಂತೆ ಕೆನೆಯುವುದು, ನಾಯಿಯಂತೆ ಬೊಗಳುವುದು, ಕಾಲಿಗೆ ಚಾವಟಿಯಿಂದ ಬಡಿದುಕೊಳ್ಳುವುದೇ ಮುಂತಾದ ಹರಕೆಗಳನ್ನು ಜಾತ್ರೆ ಸಂದರ್ಭದಲ್ಲಿ ದೇವರಿಗೆ ಸಲ್ಲಿಸುತ್ತಾರೆ. ವಗ್ಗಯ್ಯಗಳು 'ಸರಪಣಿ ಹರಿಯೋದು;' ಹಿಮ್ಮಡಿಗೆ ಕಬ್ಬಿಣದ ಸಲಾಕಿ ಚುಚ್ಚಿಕೊಳ್ಳುವುದೇ ಮುಂತಾದ ಪವಾಡಗಳನ್ನು ಮೆರೆಯುತ್ತಾರೆ. ಈ ಗುಡಿಯ ಹೊರಭಾಗದಲ್ಲಿ ಎಡಮಗ್ಗುಲಲ್ಲಿ, ಹೆಗ್ಗಪ್ಪ (ಹೆಗ್ಗಡೆ) ದೇವರ ಗುಡಿಯಿದೆ. ಈ ಗುಡಿಯಿಂದ ಸ್ವಲ್ಪ ಮುಂದೆ ಬಂದರೆ ಎಡಬದಿಯಲ್ಲಿ ಗೋಚರಿಸುವ ಮಂಟಪವೇ ಸಿಬಾರ ಕಟ್ಟೆ. ಕಲ್ಯಾಣದ ಚಾಳುಕ್ಯರ ಕಾಲದ ದುಂಡಾದ ಅಡ್ಡಕೊಯ್ತದ ಕಂಬಗಳನ್ನುಳ್ಳ ಈ ಮಂಟಪದಲ್ಲಿ ಮೈಲಾರನ ಸಿಬಾರವಿದೆ. ಮೈಲಾರನ ಒಕ್ಕಲಿರುವ ಗ್ರಾಮಗಳಲ್ಲೆಲ್ಲಾ, ಸಿಬಾರ ಕಟ್ಟೆಯನ್ನು ಕಾಣಬಹುದಾಗಿದ್ದು, ಈ ಭಾಗದಲ್ಲಿ ಇದು ತೀರ ಸಾಮಾನ್ಯವಾಗಿದ್ದು, ಮೈಲಾರನ ಜನಪ್ರಿಯತೆಗಿದು ಕೈಗನ್ನಡಿಯಾಗಿದೆ.

ದೇವರಗುಡ್ಡದ ಈ ದೇವಾಲಯಕ್ಕೆ ಹೈದರಾಬಾದ್ ನಿಜಾಮ, ಹಾವನೂರ ಹನುಮಂತಗೌಡ ಬಹದ್ದೂರ್ ದೇಸಾಯಿಗಳು ದೊಡ್ಡ ಪ್ರಮಾಣದಲ್ಲಿ ಹಳ್ಳಿಹಳ್ಳಿಗಳನ್ನೇ ದಾನ ಮಾಡಿದ್ದಾರೆ. ಕ್ರಿ.ಶ. 1864ರಲ್ಲಿ ಈ ಗುಡಿಗೆ ಸುಮಾರು 635 ಎಕರೆ ಇನಾಂ ಭೂಮಿ ಇತ್ತು. ಇಂದು ಈ ಗುಡಿಯನ್ನು ವಿಶ್ವಸ್ಥ ಸಮಿತಿಯೊಂದು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುತ್ತಿದೆ. ಇಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ನೀರು ನೆರಳಿನ ವ್ಯವಸ್ಥೆ ಇದೆ.

**ಗುಡಗೂರು** : ರಾಣೆಬೆನ್ನೂರು ತಾಲೂಕಿನ ಗುಡಗೂರು (ಜನಸಂಖ್ಯೆ : 1,800) ರಾಣೆಬೆನ್ನೂರಿನಿಂದ ಉತ್ತರಕ್ಕೆ 18 ಕಿ.ಮೀ. ದೂರದಲ್ಲಿದೆ. ಈ ಊರಲ್ಲಿರುವ ಸುಮಾರು ಕ್ರಿ.ಶ. ಒಂಭತ್ತನೇಯ ಶತಮಾನದ ಎರಡು ಶಾಸನಗಳಲ್ಲಿ ಒಂದು ಆನೆಸೆಟ್ಟಿಯ ಮರಣವನ್ನು ದಾಖಲಿಸಿದರೆ ಮತ್ತೊಂದು ಪುಣ್ಣಮಂತಿಯ ನಾಡನ್ನು ರಾಜಸಿಂಗ ಆಳುತ್ತಿದ್ದಾಗ, ವ್ಯಕ್ತಿಯೊಬ್ಬ ಗೋಸಾಸ ನಿಲ್ಲಿಸಿದ್ದನ್ನು ದಾಖಲಿಸಿದೆ. ಇದರಿಂದ ಗುಡಗೂರು, ಪೊನ್ನತ್ತಿ-12ಕ್ಕೆ ಸೇರಿತ್ತೆಂದು ಭಾವಿಸಬಹುದಾಗಿದೆ. ಶಾಸನವಿರುವ ಕಲ್ಲುಗಳು ಗೋಸಾಸಕಲ್ಲು ಗಳಾಗಿರುವುದರಿಂದ, ರಾಷ್ಟ್ರಕೂಟರ ಕಾಲಕ್ಕಾಗಲೇ ಇದೊಂದು ಪ್ರಮುಖ ಜನವಸತಿ ಕೇಂದ್ರವಾಗಿತ್ತೆಂದು ಭಾವಿಸಬಹುದಾಗಿದೆ. ಸರ್ವೆ ನಂ. 39ರಲ್ಲಿ ಎರಡು ಸಾಲುಗಳಲ್ಲಿರುವ ಗೋಸಾಸ ಕಲ್ಲುಗಳನ್ನು ಊರವರು 'ಕುದುರೆ ಕಲ್ಲು'ಗಳೆಂದು ಕರೆಯುತ್ತ ಪಾಂಡವರು ಇಲ್ಲಿ ಕುದುರೆ ಕಟ್ಟುತ್ತಿದ್ದರೆಂದು ಹೇಳುತ್ತಾರೆ. ಈ ದಾನ ಪರೋಕ್ಷವಾಗಿ ಹೈನುಗಾರಿಕೆ ಬೇಸಾಯಗಳ ಬೆಳವಣಿಗೆಗೆ ಸಹಕಾರಿಯಾಗುತ್ತಿದ್ದವು.

ಊರಲ್ಲಿ ಪ್ರಾಚೀನ ಕಾಲದ ಕಲ್ಲೇಶ್ವರ, ಸೋಮಲಿಂಗೇಶ್ವರ, ಬಸವಣ್ಣ ಮತ್ತು ಹನುಮಂತನ ಗುಡಿಗಳಿವೆ. ಊರ ಪ್ರವೇಶದಲ್ಲೇ ಕಾಣುವ ಕಲ್ಲೇಶ್ವರ ಗುಡಿಯು ತ್ರಿಕೂಟವಾಗಿದೆ. ಸುಮಾರು ಕ್ರಿ.ಶ. 11ನೇಯ ಶತಮಾನದಲ್ಲಿ ನಿರ್ಮಾಣವಾಗಿರುವ ಈ ಗುಡಿ, ಇಂದು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ ಸ್ಥಳಿಕರು ಮೂಲ ರೂಪ ಉಳಿಸಿಕೊಂಡಿದ್ದಾರೆ. ಪೂರ್ವಾಭಿಮುಖವಾಗಿರುವ ಈ ಗುಡಿಗೆ ಮೂರು ಗರ್ಭಗೃಹಗಳಿದ್ದು, ಮೂರಕ್ಕೂ ಪ್ರತ್ಯೇಕ ಅಂತರಾಳಗಳಿದ್ದರೂ ನವರಂಗ ಮಾತ್ರ ಒಂದೇ ಇದ್ದು ಮುಖಮಂಟಪವೂ ಇದೆ. ಸರಳವಾದ ಬಾಗಿಲುವಾಡಗಳನ್ನು ಹೊಂದಿರುವ ಇಲ್ಲಿನ ಎರಡು ಗರ್ಭಗೃಹಗಳಲ್ಲಿ ಶಿವಲಿಂಗವಿದ್ದು ಉಳಿದೊಂದು ಬರಿದಾಗಿದೆ. ನವರಂಗದ ಛತ್ತಿನಲ್ಲಿ ಸರಳವಾದ ಕಮಲ, ಮುಖಮಂಟಪದಲ್ಲಿ ಕಕ್ಷಾಸನವಿದ್ದು, ಇದರ ಛತ್ತಲ್ಲಿರುವ ಭುವನೇಶ್ವರಿ ಚಿತ್ತಾಕರ್ಷಕವಾದ ಹೂಬಳ್ಳಿಯ ಕುಸುರಿ ಕೆಲಸವನ್ನು ಹೊಂದಿದ್ದು ಭವ್ಯವಾಗಿದೆ. ಈ ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು ಗರ್ಭಗೃಹಗಳಿಗೆ ಇತ್ತೀಚಿನ ಶಿಖರಗಳಿವೆ. ಈ ಗುಡಿ ಆವರಣದಲ್ಲಿ ಗೋಸಾಸ ಕಲ್ಲು ಹಾಗೂ ಸುಮಾರು 13ನೇ ಶತಮಾನದ, ಶಾಸನರಹಿತ ವೀರಗಲ್ಲಿದೆ. ಈ ಗುಡಿಯ ಹಿಂಬದಿಯಲ್ಲಿ ಅಲಂಕೃತವಾದ ಕೋಣನ ತಲೆ ಶಿಲ್ಪವಿದೆ. ಈ ಗುಡಿಯ ನೈರುತ್ಯಕ್ಕೆ ಕಲ್ಯಾಣದ ಚಾಳುಕ್ಯರ ಕಾಲದ ಸೋಮಲಿಂಗೇಶ್ವರ ಗುಡಿಯಿದೆ. ಗರ್ಭಗೃಹ, ಅಂತರಾಳ ನವರಂಗವನ್ನು ಹೊಂದಿರುವ ಈ ಗುಡಿಯ ನವರಂಗವು ಈಗ ಹಾಳಾಗಿದ್ದು ಉಳಿದ ಭಾಗಗಳು ಶಿಥಿಲಾವಸ್ಥೆಯಲ್ಲಿವೆ. ಊರ ನಡುವಿರುವ ಬಸವಣ್ಣನ ಗುಡಿಯ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಕಲ್ಯಾಣದ ಚಾಳುಕ್ಯರ ಕಂಬಗಳು, ಬಾಗಿಲವಾಡಗಳು ಚದುರಿ ಬಿದ್ದಿವೆ. ಊರ ಹೊರಗಿರುವ ಹನುಮಂತನ ಗುಡಿ ಇತ್ತೀಚಿನದಾದರೂ ವಿವಿಧ ಆಭರಣಗಳನ್ನು ಧರಿಸಿರುವ ಈ ಹನುಮಂತ ಅಭಯ ಭಂಗಿಯಲ್ಲಿದ್ದು ಎಡಗೈಲಿ ಗದೆ ಹಿಡಿದಿದ್ದು ಭವ್ಯವಾಗಿದೆ. ಇವುಗಳ ಜೊತೆಗೆ ಊರಲ್ಲಿ ಮಾಸ್ತಮ್ಮ, ದ್ಯಾಮವ್ವ, ದುರ್ಗವ್ವ, ಹಾಗೂ ಚೌಡವ್ವನ ಗುಡಿಗಳಿವೆ.

**ಗುಡ್ಡದಾನವೇರಿ** : ರಾಣೆಬೆನ್ನೂರು ತಾಲೂಕಿನ ಗುಡ್ಡದಾನವೇರಿ (ಜನಸಂಖ್ಯೆ : 1,110) ರಾಣೆಬೆನ್ನೂರಿನಿಂದ ಉತ್ತರಕ್ಕೆ ಎರಡು ಕಿ.ಮೀ. ದೂರದಲ್ಲಿದೆ. ಈ ಊರಲ್ಲಿ ಕಳಚೂರಿ ಅಹವಮಲ್ಲನ ಕಾಲದ ಎರಡು ದಾನ ಶಾಸನ ಮತ್ತು ಯಾದವ ಸಿಂಘಣನ ಕಾಲದ ಒಂದು ವೀರಗಲ್ಲು ಶಾಸನ ಲಭಿಸಿವೆ. ಶಾಸನಗಳಲ್ಲಿ ಈ ಊರನ್ನು 'ಬಾಡದಾಲೂರು' 'ಆಲೂರು' ಎಂದೇ ಕರೆಯಲಾಗಿದೆಯಾದರೂ ಇಂದು ಈ ಹೆಸರು ಕಣ್ಮರೆಯಾಗಿದೆ. ಗುಡ್ಡದ ಬುಡದಲ್ಲಿಂದು ಈ ಊರಿರುವುದರಿಂದ ಇದಕ್ಕೆ ಗುಡ್ಡದಾನವೇರಿ ಎಂಬ ಹೆಸರು ಬಂದಿದೆಯಾದರೂ ಆಲೂರು ಅನವೇರಿಯಾಗಲು ಕಾರಣವೇನೆಂದು ಅರ್ಥೈಸಲು ಅಸಾಧ್ಯವಾಗಿದೆ. ಕಲ್ಲೇಶ್ವರಗುಡಿ ಮುಂದಿರುವ ಶಾಸನ ಕ್ರಿ.ಶ. 1183ರಲ್ಲಿ ಬಿನ್ನವೂರ-12ಕ್ಕೆ (ರಾಣೆಬೆನ್ನೂರು) ಸೇರಿದ ಆಲೂರಿನ ಮಲ್ಲಿಕಾರ್ಜುನ ದೇವಾಲಯಕ್ಕೆ ಆಲೂರ ಗ್ರಾಮವನ್ನು ಗುತ್ತ ವಿಕ್ರಮಾದಿತ್ಯ ಮತ್ತು ಜೋಯಿದೇವರಸರು ದಾನ ಬಿಟ್ಟು ಅದೇ ರೀತಿ ಊರಲ್ಲಿ ಮೂಲಸ್ಥಾನದ ಕಲಿದೇವರಿಗೆ ಹಾಗೂ ಕೇಶವದೇವರಿಗೆ ಕೂಡ ಭೂದಾನ ಮಾಡಿದ ಅಂಶವನ್ನು ಹೇಳುತ್ತದೆ. ಕಲ್ಲೇಶ್ವರ ಗುಡಿಯ ಅಂತರಾಳದ ಬಾಗಿಲುವಾಡದ ಮೇಲಿರುವ ಶಾಸನ (ಕ್ರಿ.ಶ. 1183) ಆಲೂರ ಮಲ್ಲಿಕಾರ್ಜುನ ಹಾಗೂ ಬ್ರಹ್ಮಪುರಿಯ ಯೋಗೇಶ್ವರ ದೇವರಿಗೆ ವಿವಿಧ ಅಧಿಕಾರಿಗಳು ಪ್ರತ್ಯೇಕವಾಗಿ ಮೂರು ದಾನಗಳನ್ನು ಮಾಡಿದ ಅಂಶವನ್ನು ತಿಳಿಸುತ್ತದೆ. ಇದರಿಂದ ಇಂದಿನ ಕಲ್ಲೇಶ್ವರ ಗುಡಿಯೇ ಶಾಸನೋಕ್ತ ಮಲ್ಲಕಾರ್ಜುನ ಗುಡಿ ಎಂದು ಗೊತ್ತಾಗುತ್ತದೆ. ಊರಲ್ಲಿ ಪಾಳು ಬಿದ್ದಿರುವ ಮತ್ತೊಂದು ಗುಡಿ ಪ್ರಾಯಶಃ ಶಾಸನೋಕ್ತ ಬ್ರಹ್ಮಪುರಿಯ ಯೋಗೇಶ್ವರ ಗುಡಿಯಾಗಿರುವ ಸಾಧ್ಯತೆ ಇದೆ. ಊರ ಪ್ರವೇಶದ ಎತ್ತರವಾದ ಸ್ಥಳದಲ್ಲಿ ತ್ರಿಕೂಟಾಚಲ ಕಲ್ಲೇಶ್ವರ ಗುಡಿಯಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹಕ್ಕೆ ಅಂತರಾಳವಿದ್ದು, ಉತ್ತರ ದಕ್ಷಿಣದ ಗರ್ಭಗೃಹಗಳಿಗೆ ಅಂತರಾಳವಿಲ್ಲ. ಮೂರಕ್ಕೂ ಸೇರಿದಂತೆ ಒಂದೇ ನವರಂಗವಿದೆ. ನಾಲ್ಕು ಚಾಳುಕ್ಯ ಶೈಲಿಯ ದುಂಡನೆ ಅಡ್ಡಕೊಯ್ತದ ಕಂಬಗಳನ್ನು ಹೊಂದಿರುವ ನವರಂಗದ ಛತ್ತಿನಲ್ಲಿ ಕಮಲವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಂದಿಯಿದೆ. ಉಳಿದ ಎರಡು ಗರ್ಭಗೃಹಗಳು ಖಾಲಿಯಿದ್ದು, ಬಹುಶಃ ಶಾಸನೋಕ್ತ, ಮೂಲಸ್ಥಾನದ ಕಲಿದೇವರು ಹಾಗೂ ಕೇಶವ ಶಿಲ್ಪಗಳು ಹಿಂದೆ ಇಲ್ಲೇ ಇದ್ದಿರಬಹುದೆನಿಸುತ್ತವೆ. ಈ ಗುಡಿಯ ಆವರಣದಲ್ಲಿ ಗರುಡ ಪೀಠವಿದೆ. ನವರಂಗದಲ್ಲಿರುವ ಆರು ದೇವಕೋಷ್ಠಗಳಲ್ಲಿ ಮೂರರಲ್ಲಿ ಮಾತ್ರ ಕ್ರಮವಾಗಿ ಗಣಪತಿ, ಮಹಿಷಮರ್ದಿನಿ ಹಾಗೂ ಸಪ್ತಮಾತೃಕಾ ಶಿಲ್ಪಗಳಿದ್ದು ಉಳಿದವು ಬರಿದಾಗಿವೆ. ಪ್ರಧಾನ ಗರ್ಭಗೃಹದ ಶಿಖರ ಕದಂಬನಾಗರ ಶೈಲಿಯದಾಗಿದ್ದು ಉಳಿದೆರಡರ ಶಿಖರಗಳು ಹಾಳಾಗಿವೆ. ಗುಡಿಯ ಮುಂಬದಿಯಲ್ಲಿ ಸುಂದರವಾದ ಕೋಣನ ತಲೆ ಶಿಲ್ಪವುಳ್ಳ ಹಾಸುಗಲ್ಲಿದೆ. ದುರ್ಗಿ ಆರಾಧನೆಗೆ ಸಂಬಂಧಿಸಿದ ಬಲಿಪೀಠವಿದಾಗಿರಬೇಕು. ಈ ಗುಡಿಯ ಮುಂದೆ ನಾಲ್ಕು ವೀರಗಲ್ಲುಗಳಿದ್ದು, ಅವುಗಳಲ್ಲೊಂದು ಕ್ರಿ.ಶ. 1246 ರಲ್ಲಿ ಜರುಗಿದ ತುರುಗಳಿಗಾಗಿ ನಡೆದ ಹೋರಾಟದಲ್ಲಿ ಮಡಿದ ರಾಹುತ ಕೇಶವ ಹಾಗೂ ಅವನ ಲೆಂಕ ಗಂಗೆಯನ ಸ್ಮಾರಕ ಶಿಲ್ಪವಾಗಿದ್ದು, ಉಳಿದವು ಇದೇ ಕಾಲಕ್ಕೆ ಸೇರಿದವಾಗಿವೆ. ಇಲ್ಲಿನ ಹನುಮಂತನ ಗುಡಿ ಹಾಳಾಗಿದ್ದರೂ ಗರ್ಭಗೃಹವಷ್ಟೆ ಉಳಿದಿದ್ದು, ಗರ್ಭಗೃಹವು ಸುಂದರವಾದ ಕಟ್ಟಿಗೆಯ ಬಾಗಿಲವಾಡವನ್ನು ಹೊಂದಿದ್ದು ಕಮಲ,

ಸಿಂಹ, ಹಂಸಗಳ ಕೆತ್ತನೆಯಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ಭರಮಪ್ಪ, ಮಾಸ್ತಮ್ಮ, ಮಾತಂಗ್ಯವ್ವನ ಗುಡಿಗಳಿದ್ದು ಮಾಸ್ತಮ್ಮನ ಗುಡಿಯಲ್ಲಿ ಕ್ರಿ.ಶ. 13ನೇ ಶತಮಾನದ ಮಾಸ್ತಿಯ ಕೆತ್ತನೆಯಿದೆ. ಊರಲ್ಲಿ ಮಸೀದಿ ಹಾಗೂ ದರ್ಗಾ ಮುಂತಾದ ಮುಸ್ಲಿಂ ಸ್ಮಾರಕಗಳಿವೆ.

**ಗುತ್ತಲ** : ಹಾವೇರಿ ತಾಲೂಕಿನ ಗುತ್ತಲವು (ಜನಸಂಖ್ಯೆ : 12,786) ಹಾವೇರಿಯಿಂದ ಪೂರ್ವಕ್ಕೆ 26 ಕಿ.ಮೀ. ದೂರದಲ್ಲಿರುವ ಇದು ಪ್ರಾಚೀನ ಕಾಲದಲ್ಲಿ ಬೆಳಹುಗೆ-70ರ ರಾಜಧಾನಿ ಪಟ್ಟಣವಾಗಿದ್ದು ಗುತ್ತ ವಂಶದ ರಾಜಧಾನಿಯಾಗಿತ್ತು. ಪ್ರಾಚೀನ ಶಾಸನಗಳಲ್ಲಿ 'ಗುತ್ತವೊಲಲು' ಎಂದೇ ಉಲ್ಲೇಖಿಸಲ್ಪಟ್ಟಿದ್ದು 'ಗುತ್ತರವೊಲಲು' 'ಗುತ್ತವೊಳಲು' 'ಗುತ್ತವೊಳಲು' 'ಗುತ್ತಲ' ಎಂದು ರೂಪಾಂತರಗೊಂಡಿದೆ. ರಾಜಧಾನಿ ಪಟ್ಟಣವಾಗಿದ್ದ ಈ ಊರ ಕೋಟೆ ಕೊತ್ತಲಗಳಿಂದು ಹೇಳಹೆಸರಿಲ್ಲದಂತೆ ಹಾಳಾಗಿವೆಯಾದರೂ ಕ್ರಿ.ಶ. 12 ರಿಂದ 18ನೇಯ ಶತಮಾನಕ್ಕೆ ಸೇರಿದ ಗುತ್ತ, ವಿಜಯನಗರ ಹಾಗೂ ಹಾವನೂರು ದೇಸಾಯಿಗಳ ಕಾಲಕ್ಕೆ ಸೇರಿದ ಶಾಸನಗಳಿವೆ. ಕ್ರಿ.ಶ. 1163ರ ಒಂದು ಶಾಸನ, ಮಹಾವಡ್ಡ ವ್ಯವಹಾರಿ ಕೇತಿಸೆಟ್ಟಿಯು ಗುತ್ತವೊಳಲಲ್ಲಿ ನಿರ್ಮಿಸಿದ ಪಾರ್ಶ್ವನಾಥ ಬಸದಿಗೆ ಗುತ್ತರಸ ಒಂದನೇ ವಿಕ್ರಮಾದಿತ್ಯನು ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1193ರ ಮತ್ತೊಂದು ಶಾಸನ, ಗುತ್ತಲದ ಇಮ್ಮಡಿ ವಿಕ್ರಮಾದಿತ್ಯನು ತನ್ನ ತಾಯಿ ಪದ್ಮಲದೇವಿಗಾಗಿ, ಪದುಮೇಶ್ವರ ಗುಡಿ ನಿರ್ಮಿಸಿ, ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1192ರ ವೀರಗಲ್ಲುಶಾಸನ ಊರುಳಿವಿನಲ್ಲಿ ಮಡಿದ ಬೊಮ್ಮಯ್ಯನಾಯಕನನ್ನು, ಕ್ರಿ.ಶ. 12ನೇ ಶತಮಾನದ ಮತ್ತೊಂದು ಶಾಸನ ಹೊಲೆಯನಾಯಕನನ್ನು ಸ್ಮರಿಸುತ್ತದೆ. ಕ್ರಿ.ಶ. 1542ರ ವಿಜಯನಗರದ ಸದಾಶಿವರಾಯನ ಶಾಸನ ನಾವಿದರಿಗೆ ಅರಸ ರಾಜ್ಯಾದ್ಯಂತ ನೀಡಿದ ರಿಯಾಯಿತಿಯ ದಾಖಲೆಯಾಗಿದ್ದು, ಇದರಲ್ಲಿ ನಾವಿದರ ವೃತ್ತಿ ಸಾಧನಗಳನ್ನೂ ರೇಖಿಸಿರುವುದು ವಿಶೇಷವಾಗಿದೆ. ಚಂದ್ರಶೇಖರಗುಡಿ ಮುಂದೆ ಇರುವ ಶಿಲ್ಪ ವಿಶಿಷ್ಟವಾಗಿದ್ದು ಶವಗಳೆರಡನ್ನು ಅಡ್ಡಡ್ಡಲಾಗಿ ಬುಟ್ಟಿಯಲ್ಲಿಟ್ಟು ತಲೆಯಲ್ಲಿ ಹೊತ್ತು ಎಡಗೈಲ್ಲಿ ಚೌರಿ ಹಿಡಿದ ಪುರುಷನ ಕೆತ್ತನೆಯೊಂದಿಗೆ, ಸುಮಾರು 17ನೇ ಶತಮಾನದ ಶಾಸನವಿರುವ ಈ ಕಲ್ಲು ಉಲ್ಲೇಖಾರ್ಹವಾಗಿದೆ. ಅದೇ ರೀತಿ ಹನುಮಂತನ ಗುಡಿಯ ಗರ್ಭಗೃಹದ ಬಾಗಿಲುವಾಡದ ಮೇಲ್ಗಡೆ, ಕ್ರಿ.ಶ. 1726ರಲ್ಲಿ ಲಿಂಗಪ್ಪಗೌಡನು ಗುಡಿ ಕಟ್ಟಿಸಿದನೆಂದು ಹೇಳುವ ಶಾಸನವಿದ್ದು ಇವೆರಡನ್ನೂ ಇತ್ತಿಚೆಗೆ ಪತ್ತೆಹಚ್ಚಲಾಗಿದೆ. ಶಾಸನೋಕ್ತವಾದ ಗುತ್ತೇಶ್ವರ, ಕುಂಭೇಶ್ವರ, ವಿಕ್ರಮೇಶ್ವರ, ಎಂಬ ಗುಡಿಗಳಿದ್ದ ಅಂಶ ತಿಳಿದರೂ, ಇಂದು ಈ ಗುಡಿಗಳು ಗುರುತಿಸಲಾಗದಷ್ಟು ಹಾಳಾಗಿವೆ. ಊರ ನಡುವೆ ಹಳೆಕೋಟೆ ಎನ್ನುವ ಪ್ರದೇಶದಲ್ಲಿ ನಡುವೆ ದಿಬ್ಬದ ಮೇಲೆ ಇರುವ ಗುಡಿಯ ಗರ್ಭಗೃಹ ಪೂರ್ಣ ಹಾಳಾಗಿದೆ. ಮುಖಮಂಟಪವಷ್ಟೆ ಇದ್ದು, ಇದನ್ನು ಕೋಟೆ ವೀರಭದ್ರ ಎಂದು ಕರೆಯುತ್ತಾರೆ. ಮುಸ್ಲೀಮರು ಇದನ್ನೂ ಮಸೀದಿ ಎಂದರೂ ವಾಸ್ತು ರಚನೆಯನ್ನು ನೋಡಿದಾಗ ಹಿಂದೂ ದೇವಾಲಯವೆಂಬ ಅಂಶ ಸ್ಪಷ್ಟವಾಗುತ್ತದೆ. ಅಜ್ಜನಮಠದ ಓಣಿಯಲ್ಲಿರುವ ಈಶ್ವರನ ಗುಡಿಯ ಜೀರ್ಣೋದ್ಧಾರ ನಡೆದಿದ್ದು ಶಿವಲಿಂಗ, ನಂದಿಯಷ್ಟೆ ಉಳಿದಿದೆ. ಊರ ಹೊರಗೆ ಚಂದ್ರಶೇಖರ ಗುಡಿಯಿದೆ. ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವ ಇದರ ಗರ್ಭಗೃಹದ ಬಾಗಿಲವಾಡ ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಪದ್ಮಾಂಬಿಕೆಯಿದ್ದಾಳೆ. ಇದೇ ಶಾಸನೋಕ್ತ ಪದ್ಮೇಶ್ವರ ಗುಡಿಯಿರಬಹುದೆಂದು ತೋರುತ್ತದೆ. ಅಂತರಾಳದ ಪ್ರವೇಶದ್ವಾರ ಜಾಲಾಂಧ್ರವನ್ನು ಹೊಂದಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದರೂ ಖಾಲಿ ಇವೆ. ಚನ್ನಬಸವಣ್ಣನ ಗುಡಿಯಲ್ಲಿ ಸುಮಾರು 3.5 ಅಡಿ ಎತ್ತರದ ಪಾರ್ಶ್ವನಾಥನ ಹಾಳಾದ ಶಿಲ್ಪವಿದೆ. ಕೇತಿಸೆಟ್ಟಿ ಕಟ್ಟಿಸಿದ ಪಾರ್ಶ್ವನಾಥ ಬಸದಿಯ ಶಿಲ್ಪವಿದಾಗಿದ್ದಿರಬೇಕೆಂದು ತೋರುತ್ತದೆ. ದುರ್ಗವ್ವನ ಗುಡಿಯ ಸುತ್ತ ಕಲ್ಯಾಣದ ಚಾಳುಕ್ಯರ ಕಂಬಗಳು ಚದುರಿಕೊಂಡಿವೆ. ಗುಡಿ ಮುಂದೆ ಕಾರ್ತಿಕ, ಭೈರವ ಶಿಲ್ಪಗಳಿವೆ. ಹಿಂಬದಿಯಲ್ಲಿ ಬಂದೂಕುಧಾರಿ ಯೋಧರ ವೀರಗಲ್ಲುಗಳಿವೆ. ಊರಲ್ಲಿ ಹೇಮಗಿರಿ ಚನ್ನಬಸವೇಶ್ವರ ಮಠವಿದೆ. ಇಲ್ಲಿ ಇಬ್ಬರು ಶಿವಶರಣರ ಗದ್ದುಗೆಗಳಿವೆ. ಇಲ್ಲಿನ ಕಲಮಠವು ಅಗಡಿ ಮಠದ ಶಾಖೆಯಾಗಿದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ದ್ಯಾಮವ್ವ, ಬನಶಂಕರಿ, ಕರಿಯಪ್ಪ, ಬಸವಣ್ಣನ ಗುಡಿಗಳಿವೆ. ಊರಲ್ಲಿ ನಾಲ್ಕು ಮಸೀದಿಗಳಿವೆ. ಹಜರತ್ ಜಮಾಲ್‌ವಲಿ, ಮೆಹಬೂಬ ಸುಬಾನಿಯರ ದರ್ಗಾಗಳಿದ್ದು ಹಜರತ್ ಜಮಾಲ್‌ವಲಿ ಅದೋನಿಯಿಂದ ಬಂದವರೆಂಬ ನಂಬಿಕೆಯಿದ್ದು ಮೊಹರಮ್ ಆದ 10 ದಿನಕ್ಕೆ ಇಲ್ಲಿ ಉರುಸು ನಡೆಯುತ್ತದೆ.

**ಗುಮ್ಮಗೋಳ** : ಮುಂಡರಗಿ ತಾಲೂಕಿನ ಗುಮ್ಮಗೋಳವು (ಜನಸಂಖ್ಯೆ : 509) ಮುಂಡರಗಿಯಿಂದ ಆಗ್ನೇಯಕ್ಕೆ 33 ಕಿ.ಮೀ. ದೂರದಲ್ಲಿ ಹಾಗೂ ಸಿಂಗಟಾಲೂರಿಂದ ಪಶ್ಚಿಮಕ್ಕೆ 18 ಕಿ.ಮೀ. ದೂರದಲ್ಲಿದೆ. ಗೋಣಿ ಬಸವೇಶ್ವರ ಮಠದಿಂದಾಗಿ ಇದು ಪ್ರಸಿದ್ಧಿಯಲ್ಲಿದೆ. ಗಾರೆಯನ್ನು ಬಳಸಿ ನಿರ್ಮಿಸಿರುವ ಈ ಮಠ ಬಹಳ ವಿಶಾಲವಾಗಿದ್ದು ಸುಮಾರು 50 ಮೀಟರ್ ಉದ್ದವಿದ್ದು

ಎಂಟು ಮೀಟರ್ ಅಗಲವಿದೆ. ಗರ್ಭಗೃಹ, ತೆರೆದ ಅಂತರಾಳ, ಅರ್ಧಮಂಟಪ, ಕಲ್ಯಾಣಿ, ಸಭಾಮಂಟಪ ನಡುವೆ ಕಲ್ಯಾಣಿ ಹಾಗೂ ಸುಂದರವಾದ ಪ್ರವೇಶದ್ವಾರ ಹಾಗೂ ಗೋಪುರವನ್ನೂ ಹೊಂದಿದೆ. ಪೂರ್ಣ ಇಟ್ಟಿಗೆ, ಗಾರೆ ಬಳಸಿ ನಿರ್ಮಿಸಿರುವ ಈ ಮಠದ ಒಳ ಆವರಣದಲ್ಲಿರುವ ಕಂಬಗಳು ವೈವಿಧ್ಯಮಯವಾಗಿದ್ದು ಪ್ರಾಣಿಗಳ ಆಕರ್ಷಕ ಕೆತ್ತನೆಯನ್ನು ಹೊಂದಿವೆ. 63 ಪುರಾತನರಲ್ಲಿ ಕೆಲವರನ್ನು ಇಲ್ಲಿ ರೂಪಿಸಲಾಗಿದೆ. ಗರ್ಭಗೃಹದಲ್ಲಿ ಅಜ್ಜನ ಗದ್ದುಗೆ ಇದ್ದು ಇದರ ಶಿಖರ ಸುಂದರವಾಗಿದೆ. ಅದಕ್ಕೆ ಅಂಟಿಕೊಂಡಂತೆ ಈಶ್ವರ ಗುಡಿ ಇದ್ದು ಶಿವಲಿಂಗ, ನಂದಿಗಳು ಇವೆ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾ॥ ನ ಕೋಲಹಳ್ಳಿಯಿಂದ ಗೋಣಿಬಸವೇಶ್ವರರು ಇಲ್ಲಿಗೆ ಬಂದವರೆಂದು ಹೇಳಲಾಗುತ್ತದೆ. ಪ್ರತೀ ವರ್ಷ ಚೈತ್ರ ದಶಮಿಯಂದು ಇಲ್ಲಿ ಜಾತ್ರೆ ಜರುಗುತ್ತದೆ. ಊರ ಹೊರಗೆ ಗುಮ್ಮಿಲಿಂಗಪ್ಪನ ಗುಡಿ ಪಾಳು ಬಿದ್ದಿದ್ದು, ಇದರಲ್ಲಿ ಕ್ರಿ.ಶ. 14-15ನೇ ಶತಮಾನದ ಮೈಲಾರಲಿಂಗನ ಪೀಠವಿದೆ. ಮುಂದೆ ಶಾಸನರಹಿತ ವೀರಗಲ್ಲಿದೆ. ಇದರ ಜೊತೆಗೆ ಕಲ್ಮೇಶ್ವರ, ಹನುಮಂತ, ದುರ್ಗಾ ಹಾಗೂ ದ್ಯಾಮವ್ವನ ಗುಡಿಗಳಿದ್ದು ಮಸೀದಿಯು ಆಧುನಿಕ ಶೈಲಿಯ ಕಟ್ಟಡವಾಗಿದೆ.

**ಚಿಂಚಲಿ :** ಗದಗ ತಾಲೂಕಿನ ಚಿಂಚಲಿಯು (ಜನಸಂಖ್ಯೆ : 3,008) ಗದಗಿನಿಂದ ನೈರುತ್ಯಕ್ಕೆ 23 ಕಿ.ಮೀ. ದೂರದಲ್ಲಿ ಮುಳುಗುಂದದಿಂದ ಎಂಟು ಕಿ.ಮೀ. ದೂರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ 'ಚಿಂಚಿಲ' ಎಂದು ಉಲ್ಲೇಖಿಸಲ್ಪಟ್ಟಿದ್ದು, ಹಿಂದೆ ಬೆಳ್ವೊಲ-300ಕ್ಕೆ ಸೇರಿದ್ದು, 56 ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿತ್ತು. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ರಾಷ್ಟ್ರಕೂಟ ಅಮೋಘವರ್ಷನ ಕ್ರಿ.ಶ. 873ರ ಶಾಸನ ಗೋಸಹಸ್ರದಾನದ ಬಗ್ಗೆ ತಿಳಿಸಿದರೆ, ಕ್ರಿ.ಶ. 897ರ ವೀರಗಲ್ಲು ಶಾಸನ ಗೊಲ್ಲೆಯರ ಮಗಳು ಕಾಳಬ್ಬೆ, ವೀರಗಲ್ಲು ನಿಲ್ಲಿಸಿದ ವಿಷಯವನ್ನು ತಿಳಿಸುತ್ತದೆ. ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಕ್ರಿ.ಶ. 904ರ ಶಾಸನ ಬೆಳ್ವೊಲ-300ರನ್ನು ಆಳುತ್ತಿದ್ದಾಗ, ದೇವಾಲಯ ಒಂದಕ್ಕೆ ದಾನ ಬಿಟ್ಟ ಅಂಶ ಹೇಳಿದರೆ ಕರಿದೇವರ ಗುಡಿ ಮುಂದಿರುವ ಕ್ರಿ.ಶ. 1069ರ ಶಾಸನ ಮಣಸಂದರ ದೇವಣ್ಣನು ನಾಗೇಶ್ವರ ದೇವರಿಗೆ ತೋಟವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮಲ್ಲಿಕಾರ್ಜುನ ದೇವಾಲಯದ ಗೋಡೆಯ ಮೇಲಿರುವ ಕ್ರಿ.ಶ. 1185ರ ಶಾಸನ ಶ್ರೀಧರ ದಂಡನಾಯಕ ಮತ್ತವನ ಮಡದಿ ಜಾಕಿಯಕ್ಕ ಚಿಂಚ (ಹುಣಿಸೆ ಎಂದು ಅರ್ಥ) ಕ್ಷೇತ್ರದ ಸ್ವಯಂಭೂತೀರ್ಥ (ಗಂಗಾತೀರ್ಥ)ದ ಮಲ್ಲಿಕಾರ್ಜುನ ದೇವರಿಗೆ ಹಾರುವ ಗೋಲಲ್ಲಿ (ಪಾರ್ವಗೋಲು) ಆರು ಮತ್ತರು, ಊರ 56 ಮಹಾಜನರು ನಾಲ್ಕು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದೇ ಶಾಸನದಲ್ಲಿ ಮೂಲಸ್ಥಾನದೇವರ ಬಗೆಗೂ ಉಲ್ಲೇಖವಿದೆ. ಶಾಸನೋಕ್ತ ಗುಡಿಗಳಲ್ಲಿ ಇಂದು ಊರ ಗುಡ್ಡದ ಬಳಿಯ ಮಲ್ಲಿಕಾರ್ಜುನಗುಡಿ ಶಾಸನೋಕ್ತ ಮಲ್ಲಿಕಾರ್ಜುನಗುಡಿಯಾಗಿದೆ. ಇದು ಜೀರ್ಣೋದ್ಧಾರಗೊಂಡಿದೆ. ಶಾಸನೋಕ್ತ ನಾಗೇಶ್ವರಗುಡಿ ಇಂದಿನ ಕರಿದೇವರ ಗುಡಿಯಾಗಿದೆ. ಶಾಸನದಲ್ಲಿ ಉಲ್ಲೇಖಿತಗೊಂಡಿರುವ ಮೂಲಸ್ಥಾನದೇವರ ಗುಡಿಯೇ, ಊರಲ್ಲಿಂದು ಪಾಳು ಬಿದ್ದಿರುವ ಈಶ್ವರ ಗುಡಿಯಾಗಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ ಮತ್ತು ದ್ಯಾಮವ್ವರ ಗುಡಿಗಳಿದ್ದು, ದರ್ಗಾ ಮಸೀದಿಗಳಿವೆ.

**ಚಿಕ್ಕಬಾಸೂರು :** ಬ್ಯಾಡಗಿ ತಾಲೂಕಿನ ಚಿಕ್ಕಬಾಸೂರು (ಜನಸಂಖ್ಯೆ : 2,553) ಬ್ಯಾಡಗಿಯಿಂದ ನೈರುತ್ಯಕ್ಕೆ ಸುಮಾರು 20 ಕಿ.ಮೀ. ದೂರದಲ್ಲಿದೆ. ಈ ಊರಿಗೆ ಹಾವೇರಿಯಿಂದಲೂ ಹೋಗಲು ವಾಹನ ಸೌಕರ್ಯವಿದೆ. ಈ ಊರಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಅಲ್ಲೆ ಊರಲ್ಲಿ 3/4 ವೀರಗಲ್ಲು ಮಾಸ್ತಿ ಕಲ್ಲುಗಳಿವೆಯಾದರೂ ಶಾಸನ ಕಂಡರಿಸಿಲ್ಲ. ಊರ ಹೊರಗಿರುವ ಸಿದ್ದರಾಮೇಶ್ವರ ಮಠದ ಎಡ ಹಿಂಬದಿಯಲ್ಲಿ ನೆಲಮಟ್ಟದಲ್ಲಿ ತಗ್ಗಿನಲ್ಲೊಂದು ಇಕ್ಕಟ್ಟಾದ ಈಶ್ವರ ಗುಡಿಯಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅಂತರಾಳದಲ್ಲಿ ನಂದಿಯಿದೆ. ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳಿವೆ. ಇದರ ಮುಂಭಾಗದಲ್ಲಿ ಲಿಂಗಮುದ್ರೆ ಕಲ್ಲುಗಳಿದ್ದು ಇತ್ತೀಚಿನ ಬರಹವನ್ನು ಹೊಂದಿವೆ. ಬಳಿಯಲ್ಲೇ ಇರುವ ಸಿದ್ದರಾಮೇಶ್ವರ ಗುಡಿಯ ಗರ್ಭಗೃಹ ಸೋದೆ ಅರಸರ ಕಾಲಕ್ಕೆ ಸೇರಿದ್ದೆಂದು ಹೇಳುವ ವಾಡಿಕೆಯಿದ್ದು ಭಿತ್ತಿಯ ಹೊರಭಾಗದಲ್ಲಿ ಮಿಥುನ ಶಿಲ್ಪವಿದೆ. ಇಲ್ಲಿರುವ ಸೂರ್ಯನ ಮೂರ್ತಿ ಮುಕ್ಕಾಗಿದೆ. ಊರ ನಡುವೆ ಪ್ರಾಚೀನ ಕಾಲದ ಅತ್ಯಂತ ಭವ್ಯವಾದ ರಾಮಲಿಂಗೇಶ್ವರ ಗುಡಿ ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ರಾಷ್ಟ್ರಕೂಟರ ಕಾಲದ ರಚನೆಯಾಗಿದೆ. ತೊಲೆಯವರೆಗೆ ಮಣ್ಣಿನಿಂದ ಮುಚ್ಚಿ ಹೋಗಿರುವ ಈ ಗುಡಿಯ ಬೃಹತ್ ಪ್ರಮಾಣದ ಸ್ತಂಭಗಳು ಗಮನಿಸಬೇಕಾದ ಅಂಶ. ಗರ್ಭಗೃಹದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಸೂಕ್ಷ್ಮ ಚಿಕಣಿ ಕೆತ್ತನೆಯನ್ನು ಹೊಂದಿದ್ದು, ಇದರಲ್ಲಿ ಕೆಲವು ಮಿಥುನ ಶಿಲ್ಪಗಳಿವೆ. ನವರಂಗದಲ್ಲಿರುವ ಒಂದೇ ದೇವಕೋಷ್ಠದಲ್ಲಿ ಮೂರಡಿ ಎತ್ತರದ ಪಾರ್ವತಿ ಪರಮೇಶ್ವರ ಶಿಲ್ಪವಿದೆ. ಒಂದು ವೀರಗಲ್ಲು, ಇಕ್ಕೆ ಮಾಸ್ತಿಕಲ್ಲು ಹಾಗೂ

ಸಪ್ತಮಾತೃಕಾ ಶಿಲ್ಪವಿದೆ. ನವರಂಗದ ನಡುವಿನ ಛತ್ತಿನಲ್ಲಿ ನಾಲ್ಕು ದಳದ ಕಮಲವಿದೆ. ಇಲ್ಲಿನ ಮತ್ತೊಂದು ಆಕರ್ಷಕ ಶಿಲ್ಪವೆಂದರೆ ಮುಮ್ಮುಖವಾಗಿ ನಿಂತ ನವಿಲಿನ ಮೇಲೆ ಕುಳಿತಿರುವ ಕಾರ್ತಿಕೇಯನದಾಗಿದೆ. ಈ ಗುಡಿಯ ಶಿಖರ ಶಿಥಿಲವಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ವೀರಭದ್ರ, ಉಡಚವ್ವ, ಬಸವಣ್ಣ ಹಾಗೂ ದ್ಯಾಮವ್ವನ ಗುಡಿಗಳಿವೆ. ಊರಲ್ಲೊಂದು ಮಸಿದಿ ಹಾಗೂ ಮೆಹಬೂಬ್ ಸುಬಾನಿಯ ದರ್ಗಾಯಿದ್ದು ನವೆಂಬರ್ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಚಿಕ್ಕೆರೂರು** : ಹಿರೇಕೆರೂರು ತಾಲೂಕಿನ ಚಿಕ್ಕೆರೂರು (ಜನಸಂಖ್ಯೆ : 6,376) ಅಥವಾ ಶಾಸನೋಕ್ತ 'ಕೆರೆವೂರು', 'ಚಿಕ್ಕಕೆರೆ ಊರು' ಹಿರೇಕೆರೂರಿನಿಂದ ವಾಯುವ್ಯಕ್ಕೆ 12 ಕಿ.ಮೀ. ದೂರದಲ್ಲಿದೆ. ಇದು ಒಂದು ಐತಿಹಾಸಿಕ ಸ್ಥಳ ಹಾಗೂ ಕ್ರಿ.ಶ. 12-13ನೇ ಶತಮಾನಗಳಲ್ಲಿ ಪ್ರಸಿದ್ಧವಾದ ಅಗ್ರಹಾರವಾಗಿತ್ತು. ಈಗ ಒಂದು ಕಿರುಪಟ್ಟಣವಾಗಿದೆ. ಈ ಊರಿನ ಆಳ್ವಿಕೆಯನ್ನು ಮಾಡುತ್ತಿದ್ದ ಶಂಭುದೇವನು ಪ್ರಚಂಡ ಪಂಡಿತನಾಗಿದ್ದನು. ಈ ಊರಿನಲ್ಲಿರುವ ದೇವಾಲಯಗಳೆಂದರೆ ಬನದವ್ವ ಅಥವಾ ಬನಶಂಕರಿ, ಕಾಶಿವಿಶ್ವೇಶ್ವರ, ಬಸವಣ್ಣ, ಮುಳ್ಳಬಸವೇಶ್ವರ, ಮುಂತಾದವುಗಳು. ಬನಶಂಕರಿ ದೇವಾಲಯವು ಕಲ್ಯಾಣದ ಚಾಳುಕ್ಯರ ಶೈಲಿಯ ಕಟ್ಟಡವಾಗಿದ್ದು ಈಗ ಜೀರ್ಣೋದ್ಧಾರವಾಗಿದೆ. ಗರ್ಭಗೃಹದಲ್ಲಿರುವ ಮೂರ್ತಿಯು ಸುಮಾರು ಎರಡು ಮೀಟರ್ ಎತ್ತರವಿರುವ ಚಾಳುಕ್ಯ ಲಕ್ಷಣವುಳ್ಳ ಶಿಲಾಕೃತಿಯಾಗಿದೆ. ಚತುರ್ಭುಜ ಮೂರ್ತಿಯ ಕೈಗಳಲ್ಲಿ ಢಮರು, ತ್ರಿಶೂಲ, ಖಡ್ಗ, ಪಾನಪಾತ್ರೆಗಳನ್ನು ಹೊಂದಿರುವ ಈ ಮೂರ್ತಿಯನ್ನು ಶಾಸನಗಳಲ್ಲಿ ಬಳರಿ ದೇವತೆಯೆಂದು ಉಲ್ಲೇಖಿಸಲಾಗಿದೆ. ಹಳೆಯ ವಿಗ್ರಹವು ಭಿನ್ನವಾಗಿದ್ದುದರಿಂದ ಇತ್ತೀಚೆಗೆ ಅದನ್ನೇ ಸರಿಪಡಿಸಿ ಪುನರ್ ಪ್ರತಿಷ್ಠಾಪಿಸಲಾಗಿದೆ ಎಂದು ತಿಳಿದು ಬರುತ್ತದೆ. ಕ್ರಿ.ಶ 995ರಲ್ಲಿ ಪಳ್ಳಿಗ ಮತ್ತು ಅವನ ಪತ್ನಿ ಅರಸಕ್ಕ ಬಳರಿ ದೇವತೆಯನ್ನು ಪ್ರತಿಷ್ಠಾಪಿಸಿದರೆಂದು ಬನಶಂಕರಿ ಗುಡಿಯ ಎದುರಿಗಿರುವ ಶಾಸನದಿಂದ ತಿಳಿದು ಬರುತ್ತದೆ. ಪೂರ್ಣ ಜೀರ್ಣೋದ್ಧಾರಗೊಂಡಿರುವ ಈ ಗುಡಿಯು ಗರ್ಭಗೃಹವನಷ್ಟೆ ಹೊಂದಿದ್ದು, ಇದನ್ನು ನಿರ್ಮಿಸುವಲ್ಲಿ ಹಳೆಯ ಕಂಬಗಳನ್ನೇ ಬಳಸಿದ್ದಾರೆ. ಹೊರಗಡೆ ಆನೆಹೊಂಡದ ಆಚೆ ಒರಟಾಗಿರುವ ಕಲ್ಯಾಣದ ಚಾಳುಕ್ಯರ ಕಾಲದ ವೀರಗಲ್ಲಿದ್ದು ಅದು ಕ್ರಿ.ಶ. 1092ರಲ್ಲಿ ಕಿರಿಯ ಕೆರೆವೂರಿನಲ್ಲಿ ಗೋಗ್ರಹಣದಲ್ಲಿ ವೀರನೊಬ್ಬನ ಮರಣವನ್ನು ದಾಖಲಿಸುತ್ತದೆ. ಇದರ ಸಮೀಪವಿರುವ ಪೇಟೆ ಬೀದಿಯ ಬಸವಣ್ಣನ ಗುಡಿಯೂ ಚಾಳುಕ್ಯ ಶೈಲಿಯ ಕಟ್ಟಡವಾಗಿದೆ. ಈ ದೇವಾಲಯವನ್ನು ಕ್ರಿ.ಶ. 1082ರಲ್ಲಿ ಚಾಳುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಬಿಯಪಸೆಟ್ಟಿಯೆಂಬ ವರ್ತಕನು 'ಬಿಪೇಶ್ವರ' ದೇವಾಲಯದ ನಿರ್ಮಾಣ ಮಾಡಿ ಭೂದಾನ ಬಿಟ್ಟ ಅಂಶವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತದೆ. ಆದರೆ ಈಗ ಈ ದೇವಾಲಯಕ್ಕೆ ಬಸವಣ್ಣ ಗುಡಿಯೆಂದು ಕರೆಯಲಾಗುತ್ತದೆ. ಇದರಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಂಭಾಗದಲ್ಲಿ ತೆರೆದ ಮುಖಮಂಟಪವಿದೆ. ಅಂತರಾಳದ ಬಾಗಿಲುವಾಡವು ಅಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದ್ದು ಮೇಲ್ಭಾಗದ ಬೋದಿಗೆಯಲ್ಲಿ ಮಕರತೋರಣದ ಅಲಂಕಾರವಿದೆ. ನವರಂಗದ ಮಧ್ಯದಲ್ಲಿರುವ ಚಾಳುಕ್ಯ ಶೈಲಿಯ ಕಂಬಗಳು ಆಕರ್ಷಕವಾಗಿವೆ. ಮುಖಮಂಟಪವು ಸುತ್ತಲೂ ಗೋಡೆಯಿಲ್ಲದೇ ಚಾಳುಕ್ಯ ಶೈಲಿಯ ಕಂಬಗಳಿಂದ ಅಲಂಕೃತವಾಗಿದೆ. ನವರಂಗದ ಪ್ರವೇಶ ದ್ವಾರದ ಬಾಗಿಲುವಾಡದ ಇಕ್ಕೆಲಗಳಲ್ಲಿ ದ್ವಾರಪಾಲಕರ ರೀತಿಯಲ್ಲಿ ಚೌರಿ ಹಿಡಿದಿರುವ ಬಾಲಕಿಯರ ಸುಂದರ ಶಿಲಾಮೂರ್ತಿಗಳನ್ನು ಕೆತ್ತಲಾಗಿದೆ. ಬಸವಣ್ಣನ ಗುಡಿಯ ಎದುರಿಗಿರುವ ಶಾಸನವು ವಿಜಯನಗರದ ಕುಮಾರ ವಿರೂಪಣ ಒಡೆಯನ ಕಾಲಕ್ಕೆ ಸೇರಿದ್ದು ಮಾದರಸನೆಂಬ ಅಧಿಕಾರಿಯು ಮಾಡಿಸಿದ ಭೈರವ ದೇವಾಲಯಕ್ಕೆ ಬಿಟ್ಟ ಭೂದಾನವನ್ನು ತಿಳಿಸುತ್ತದೆ.

ಈ ದೇವಾಲಯದ ಸಮೀಪವೇ ಆಧುನಿಕವಾಗಿ ಜೀರ್ಣೋದ್ಧಾರ ಮಾಡಲಾಗಿರುವ ಹನುಮಂತದೇವರ ಗುಡಿಯಿದೆ. ಇದರ ಸಮೀಪವೇ ಇರುವ ವೀರಭದ್ರ ಗುಡಿಯನ್ನು ದುರಸ್ತಿಗೊಳಿಸಿರುವುದು ವ್ಯಕ್ತವಾಗುತ್ತದೆ. ಆದರೆ, ಇದರ ಗರ್ಭಗೃಹದ ಬಾಗಿಲುವಾಡವು ಷಷ್ಠ ಶಾಖಾಲಂಕಾರವನ್ನು ಹೊಂದಿದ್ದು ರಾಷ್ಟ್ರಕೂಟರ ಶೈಲಿಯಲ್ಲಿದೆ. ಈ ದೇವಾಲಯದ ಪರಿಸರದಲ್ಲಿ ಅನೇಕ ರಾಷ್ಟ್ರಕೂಟರ ಕಾಲದ ದೇವಾಲಯ ಕಂಬಗಳು, ಲಲಾಟದ ಭಾಗ, ಕಕ್ಷಾಸನದ ಭಾಗ ಇನ್ನೂ ಮುಂತಾದವುಗಳು ಕಂಡು ಬರುತ್ತವೆ. ಜೋಡಿ ದೇವಾಸ್ಥಾನವೆಂದು ಕರೆಯಲಾಗುವ ಕಾಳಿಕಾ ಹಾಗೂ ಮೌನೇಶ್ವರ ಗುಡಿಗಳಿವೆ. ಕಾಳಿಕಾಮೂರ್ತಿಯು ಮರದ ಮೂರ್ತಿಯಾಗಿದ್ದು ಇದರ ಪ್ರಭಾವಳಿಯಲ್ಲಿ ಅಷ್ಟದಿಕ್ಪಾಲಕರು ಹಾಗೂ ಮೌನೇಶ್ವರದ ಪ್ರಭಾವಳಿಯಲ್ಲಿ ದಿಕ್ಪಾಲರ ವರ್ಣಚಿತ್ರಗಳಿವೆ. ಇದಲ್ಲದೇ ದೋಣ್ಣೆಪ್ಪಾ ಸುವರಪ್ಪಾ ಎಂಬ ಸೇವಕರ ಮೂರ್ತಿಗಳಿವೆ. ಊರಿನಲ್ಲಿ ಇನ್ನೊಂದು ಹನುಮಂತ ದೇವರಗುಡಿಯಿದ್ದು ರಾಷ್ಟ್ರಕೂಟರ ಕಾಲದ ಕಟ್ಟಡದಲ್ಲಿ ಸುಮಾರು ಕ್ರಿ.ಶ. 14ನೇ ಶತಮಾನದ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ಗುಡಿಯಲ್ಲಿ ರಾಷ್ಟ್ರಕೂಟ ಶೈಲಿಯ ಕಂಬಗಳಿವೆ. ಈ ಗುಡಿಯ ಪಕ್ಕದಲ್ಲಿ ಕಿರಿದಾದ ನಾರಾಯಣ ಗುಡಿಯಿದ್ದು ಒಳಗೆ ಚಾಳುಕ್ಯ ಶೈಲಿಯ ನಾರಾಯಣನ ವಿಗ್ರಹವಿದ್ದು

1.5 ಮೀಟರ್ ಎತ್ತರದ ಈ ಮೂರ್ತಿಯು ಅಭಯಹಸ್ತ ಹಾಗೂ ಪ್ರಭಾವಳಿಯಲ್ಲಿ ಮಕರತೋರಣಗಳನ್ನು ಹೊಂದಿದೆ. ಇದರಲ್ಲಿ ಆಕರ್ಷಕ ಉಬ್ಬುಶಿಲ್ಪಗಳನ್ನು ಹೊಂದಿರುವ ವಿಜಯನಗರ ಕಾಲದ ಕಂಬವಿದೆ. ಇದರ ಸಮೀಪವೇ ಇನ್ನೊಂದು ಚಿಕ್ಕ ಶಿವನ ಗುಡಿಯಿದ್ದು ಹೊರಗೆ ರಾಷ್ಟ್ರಕೂಟರ ಕಾಲದ ದೇವಾಲಯದ ಅವಶೇಷಗಳು ಕಂಡುಬರುತ್ತವೆ.

ಊರ ಹೊರಗೆ ಗದ್ದೆಗಳ ನಡುವೆ ಕಲ್ಲೇಶ್ವರ ದೇವಾಲಯವಿದ್ದು ಗರ್ಭಗೃಹದಲ್ಲಿ ಐದು ಅಡಿ ಎತ್ತರದ ನಂದಿ ಇದೆ. ನವರಂಗದಲ್ಲಿ ಚಾಳುಕ್ಯ ಶೈಲಿಯ ಕಂಬಗಳಿವೆ. ಛಾವಣಿಯಲ್ಲಿ ಗಜಚರ್ಮಧಾರಿ ನಟರಾಜ ಹಾಗೂ ಅವನ ಸುತ್ತಲೂ ಅಷ್ಟದಿಕ್ಪಾಲರುಗಳ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಚೌಕಾಕಾರದ ಪಾಣಿಪೀಠದ ಮೇಲೆ ಎತ್ತರವಾದ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಬಹುಶಃ ಪಂಚಾಯತಿ ಕಛೇರಿ ಎದುರಿಗಿರುವ ಶಾಸನದಲ್ಲಿ ಕ್ರಿ.ಶ. 1129(ಚಾಳುಕ್ಯ ಮೂರನೇ ಸೋಮೇಶ್ವರ)ರಲ್ಲಿ ಚಿನ್ನಸೆಟ್ಟಿಯಿಂದ ಚಿನ್ನೇಶ್ವರ ದೇವಾಲಯದ ನಿರ್ಮಾಣ ಹಾಗೂ ಬಿಟ್ಟ ಭೂದಾನದ ಬಗೆಗೆ ತಿಳಿಸಿರುವುದು ಇದೇ ದೇವಾಲಯದ ಬಗೆಗೆ ಇರಬೇಕು. ನವರಂಗದ ಪ್ರವೇಶದ್ವಾರದಲ್ಲಿ ಸುಂದರ ಅಲಂಕಾರವಿದೆ. ಇದರ ಸಮೀಪವೇ ರಸ್ತೆಯ ಪಕ್ಕದಲ್ಲಿ ಕೆರೆದಂಡೆಯಲ್ಲಿ ವಿಜಯನಗರ ಶೈಲಿಯ ಆರು ಅಡಿ ಎತ್ತರದ ಗಣಪತಿಯ ವಿಗ್ರಹವಿದೆ. ಮಾರಿಕಟ್ಟೆಯ ಬಳಿ ನಾಲ್ಕು ವೀರಗಲ್ಲುಗಳಿವೆ ಹಾಗೂ ಒಂದು ಮಹಾಸತಿ ಕಲ್ಲಿದೆ. ಇಲ್ಲಿಂದ ಸ್ವಲ್ಪ ದೂರದಲ್ಲೇ ಮುಖ್ಯರಸ್ತೆಯಲ್ಲಿ ಇರುವ ಕನ್ನಿಕಾಪರಮೇಶ್ವರಿ ದೇವಾಲಯವು ಶಿಬಾರವಾಗಿದ್ದು ಇಲ್ಲಿ ಮೈಲಾರ ಹಾಗೂ ಕನ್ನಿಕಾಪರಮೇಶ್ವರಿ ಮೂರ್ತಿಗಳನ್ನು ಸಾಲಾಗಿ ಪ್ರತಿಷ್ಠಾಪಿಸಿದ್ದಾರೆ. ಶಿಬಾರದ ಕಂಬಗಳು ಚಾಳುಕ್ಯ ಶೈಲಿಯಲ್ಲಿವೆ. ಇಲ್ಲಿನ ವಿಠಲಮಂದಿರವು 1936ರಲ್ಲಿ ಕಟ್ಟಿದ್ದು, ಕಲ್ಯಾಣಮಂಟಪ ಮುಂತಾದ ಅನುಕೂಲ ಹೊಂದಿದೆ. ಊರಿನಲ್ಲಿರುವ ವಿಶ್ವನಾಥ ದೇವಾಲಯವು ಸ್ಥಳೀಯವಾಗಿ ಕಾಶಿವಿಶ್ವೇಶ್ವರ ದೇವಾಲಯವೆಂದೇ ಕರೆಯಲ್ಪಡುತ್ತದೆ. ಇದರಲ್ಲಿ ದುರಸ್ತಿಗೊಳಿಸಿರುವ ಚಾಳುಕ್ಯ ಶೈಲಿಯ ಕಂಬಗಳಿವೆ (ಆಧುನಿಕ). ಚಿಕ್ಕೆರೂರಿನಲ್ಲಿ ಎರಡು ಮಸೀದಿಗಳು ಹಾಗೂ ಒಂದು ದರ್ಗಾಯಿದೆ. ಜಾಮಿಯಾ ಮಸೀದಿ ಹಾಗೂ ರೋಷನ್ ಮಸೀದಿಗಳು ಹಳೆಯ ಕಟ್ಟಡಗಳೆಂದು ಹೇಳಲಾಗುತ್ತದೆ. ಸಮೀಪದ ಯಲ್ಲಾಪುರದಲ್ಲಿ ಮೆಹಬೂಬ್ ಸುಬಾನಿ ದರ್ಗಾ (ಚಿಲ್ಲಾ)ದಲ್ಲಿ ದಸ್ತಗೀರ್ ತಿಂಗಳಲ್ಲಿ ಎರಡು ದಿನಗಳ ಕಾಲ ಉರುಸ್ ನಡೆಯುತ್ತದೆ. ಊರಲ್ಲಿ ನಂಗೇಷಾವಲಿ ಹಾಗೂ ಸಯ್ಯದ್ ಷಾ ಬಾತ್‌ಮ ದರ್ಗಾಗಳಿವೆ. ಇದಲ್ಲದೆ ವಾಸಿಲ್‌ಷಾವಲಿ ಮಕಾನ್ ಹಾಗೂ ಸಮೀಪದ ಯಲ್ಲಾಪುರದಲ್ಲಿ ಚಮನ್ ಷಾ ವಲಿ ಮಕಾನ್ ಇದೆ. ಈ ಊರಿನ ಅನೇಕ ಶಾಸನಗಳನ್ನು ಧಾರವಾಡಕ್ಕೆ ಸಾಗಿಸಲಾಗಿದೆಯೆಂದು ಹೇಳಲಾಗುತ್ತದೆ.

**ಚಿಕ್ಕೋಣತಿ :** ಹಿರೇಕೆರೂರು ತಾಲೂಕಿನ ಹಳ್ಳಿ ಚಿಕ್ಕೋಣತಿ (ಜನಸಂಖ್ಯೆ : 1,602) ಹಿರೇಕೆರೂರಿನಿಂದ ವಾಯುವ್ಯಕ್ಕೆ 15 ಕಿ.ಮೀ. ದೂರದಲ್ಲಿದೆ. ಈ ಊರು, ಪ್ರಾಚೀನ ಶಾಸನಗಳಲ್ಲಿ 'ಕೋಣಂಗೇರಿ' ಎಂದೇ ಉಲ್ಲೇಖಿತಗೊಂಡಿದ್ದು ನಾಗರಖಂಡ - 70ಕ್ಕೆ ಸೇರಿತ್ತು. ಕೆರೆಯ ಕಾಲುವೆ ಬಳಿ ಇರುವ ಮೂರು ಮೇಟಿ (ಗೋಸಾಸ) ಕಲ್ಲುಗಳಿಂದ ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬೇಕಾಗುತ್ತದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಕೋಣತವ್ವನ ಗುಡಿ ಬಾಗಿಲ ಮೇಲೇರುವ ಕ್ರಿ.ಶ. 1143ರ ಶಾಸನದಿಂದ ಕೋಣಂಗೇರಿ (ಚಿಕ್ಕೋಣತಿ) 1000 ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿದ್ದು, ಇಲ್ಲಿನ ಐನೂರ್ವರು (ಐಹೊಳೆ-500) ದುರ್ಗೇಶ್ವರ ದೇವರ್ಗೆ ಭೂದಾನ ಮಾಡಿದ ವಿಷಯ ಗೊತ್ತಾದರೆ ಹೊಲದಲ್ಲಿರುವ ಕ್ರಿ.ಶ. 1718ರ ಶಾಸನದಿಂದ ಪುರೋಹಿತನಿಗೆ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಊರ ನಡುವೆ ಎತ್ತರವಾದ ಸ್ಥಳದಲ್ಲಿ ಕೋಟೆ ಬುರುಜುಗಳ ನಡುವೆ ಇರುವ ಕೋಣಂತವ್ವನ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಸರಳ ನವೀನ ಗುಡಿಯಾಗಿದೆ. ಗರ್ಭಗೃಹದಲ್ಲಿ ಒಡೆದು ಮೂಡಿದ ಸ್ವಯಂಭೂದೇವಿ ಇದ್ದಾಳೆ. ನವರಂಗದಲ್ಲಿ ಸುಮಾರು ಆರಡಿ ಎತ್ತರದ ನಾಗ ಶಿಲ್ಪವಿದ್ದು, ಇದನ್ನು ಸ್ಥಳೀಕರು ತೋಳನಾಗಪ್ಪ ಎಂದು ಕರೆಯುತ್ತಾರೆ. ಇದರ ಬಳಿಯಲ್ಲೇ ಪರಶುರಾಮ ಗುಡಿ ಇದ್ದು ಹಾಳಾಗಿದೆ. ಊರ ಪ್ರವೇಶದಲ್ಲೇ ಇರುವ ಬಸವಣ್ಣನ ಗುಡಿಯು ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹದ ಬಾಗಿಲವಾಡದ ಶಿರೋಭಾಗದಲ್ಲಿ ಸುಮಾರು ಕ್ರಿ.ಶ. 12ನೇ ಶತಮಾನದ ಶಂಭು ಸ್ತುತಿ ಇದೆ. ಉಳಿದಂತೆ ಊರಲ್ಲಿ ಬೀರಲಿಂಗೇಶ್ವರ, ಹನುಮಂತ ದೇವರ ಗುಡಿ ಹಾಗೂ ಮಾತಂಗಿ ಕಟ್ಟೆಗಳಿವೆ. ಊರ ಹೊರಗೆ ಪುರದಕೊಂಡಿಕೊಪ್ಪಕ್ಕೆ ಹೋಗುವ ದಾರಿಯಲ್ಲಿ ಏಳು ಮುಖದ ಚೌಡವ್ವ (ಸಪ್ತಮಾತೃಕಾ) ನ ಚಾಳುಕ್ಯರ ಕಾಲದ ಶಿಲ್ಪವಿದೆ. ಮಸೀದಿ ಹಾಗೂ ದರ್ಗಾಗಳಿವೆ.

**ಚಿಕ್ಕಲಿಂಗದಹಳ್ಳಿ :** ಹಾವೇರಿ ತಾಲೂಕಿನ ಚಿಕ್ಕಲಿಂಗದಹಳ್ಳಿಯು (ಜನಸಂಖ್ಯೆ 2,160) ಹಾವೇರಿಯಿಂದ ದಕ್ಷಿಣಕ್ಕೆ ಐದು ಕಿ.ಮೀ. ದೂರದಲ್ಲಿದ್ದು ಇಲ್ಲಿ ಶಾಸನಗಳಿವೆ. ಇವುಗಳಲ್ಲೊಂದು ಊರಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಶಿವಪುರದ ಈಶ್ವರ ಗುಡಿಯ ಮುಂದಿದ್ದು ಕ್ರಿ.ಶ. 1498ರಲ್ಲಿ ದಾನ ನೀಡಿದ ಅಂಶವನ್ನು ತಿಳಿಸಿದರೆ, ಕನ್ನಡ ಶಾಲೆ ಬಳಿಯಿರುವ ನಾರಾಯಣದೇವರ

ಗುಡಿಯ ಮುಂದಿನ ದೀಪಮಾಲೆ ಸ್ತಂಭದ ಮೇಲಿನ ಶಾಸನ ಕ್ರಿ.ಶ. 1629ರಲ್ಲಿ ಲಿಂಗನಗೌಡನು ದೀಪಮಾಲೆ ಕಂಬ ನಿಲ್ಲಿಸಿದ್ದ ಅಂಶವನ್ನು ತಿಳಿಸುತ್ತದೆ. ಊರಾಚೆಯಿರುವ ಶಿವಪುರದ ಈಶ್ವರಗುಡಿ ಗರ್ಭಗೃಹ, ತೆರೆದ ಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಸರಳವಾಗಿದ್ದು ನಡುವೆ ಗಜಲಕ್ಷ್ಮಿಯಿದೆ. ಇದೊಂದು ಇಟ್ಟಿಗೆ ಕಟ್ಟಡವಾಗಿದ್ದು ರಾಷ್ಟ್ರಕೂಟರ ಕಾಲದ ರಚನೆಯಾಗಿದೆ. ಊರಲ್ಲಿರುವ ನಾರಾಯಣದೇವರಗುಡಿ ಪ್ರಾಚೀನ ಗುಡಿಯ ಅವಶೇಷಗಳ ನೆರವಿನಿಂದ ಪೂರ್ಣ ಜೀರ್ಣೋದ್ಧಾರಗೊಂಡಿದೆ. ನವರಂಗದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ಕಂಬಗಳಿವೆ. ಬಾಗಿಲವಾಡಗಳೂ ಕಲ್ಯಾಣದ ಚಾಳುಕ್ಯರ ಕಾಲದವೇ. ಇವುಗಳ ಜೊತೆಗೆ ಊರಲ್ಲಿ ದುರ್ಗಮ್ಮ, ವೀರಭದ್ರ, ಬಸವಣ್ಣ, ಹನುಮಂತ ಮುಂತಾದ ಗುಡಿಗಳೂ ಹಾಗೂ ಮಸೀದಿಯೂ ಇವೆ. **ಹೀರೇಲಿಂಗದಹಳ್ಳಿ** (ಜನಸಂಖ್ಯೆ : 1,457) ಹಾವೇರಿಯಿಂದ ನೈಋತ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಆಲೂರು' ಎಂದೇ ಉಲ್ಲೇಖಿತಗೊಂಡಿರುವ ಅಂಶವನ್ನು ಇಲ್ಲಿನ ಎರಡು ಶಾಸನಗಳನ್ನು ತಿಳಿಸುತ್ತವೆ. ಈವರೆಗೆ ಇಲ್ಲಿಂದ ಮೂರು ಶಾಸನಗಳು ವರದಿಯಾಗಿದ್ದು, ಊರಿಂದ ನಾಲ್ಕು ಕಿ.ಮೀ. ದೂರದ ಗೋಮಾಳದಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಕಲ್ಲೇಶ್ವರ ಗುಡಿ ಮುಂದಿರುವ ಆರ್ಮಡಿ ವಿಕ್ರಮಾದಿತ್ಯನ ಕಾಲದ ಶಾಸನವೊಂದು ಆಲೂರ ಸ್ವಯಂಭು ದೇವರಿಗೆ ದಾಸಗಾಮುಣ್ದ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1259ರ ಮತ್ತೊಂದು ಶಾಸನ ಹಾವೇರಿಯ ಮಹಾಜನ ಚೆಂದಿಸೆಟ್ಟಿಗೆ ಆಲೂರ ಹೆಗಡೆತನ ಕೊಟ್ಟ ವಿಷಯ ತಿಳಿಸುತ್ತದೆ. ಅಲ್ಲೇ ಇರುವ ಕ್ರಿ.ಶ. 1280ರ ವೀರಗಲ್ಲು ಶಾಸನ ತಿಳುವಳ್ಳಿ ಕೋಟೆ ಕಾಳಗದಲ್ಲಿ ಹೋರಾಡುತ್ತ ಮಡಿದ 18 ಸಮಯಗಳ ಶಿಶು ಆಲೂರ ಮಲ್ಲಯ್ಯ ನಾಯ್ಕನ ಸ್ಮಾರಕವಾಗಿದೆ. ಈ ಶಾಸನಗಳಿರುವ ಕಲ್ಲೇಶ್ವರ ಗುಡಿಯೇ ಶಾಸನೋಕ್ತ ಸ್ವಯಂಭುದೇವರಾಗಿದ್ದು ಗರ್ಭಗೃಹ ಹಾಗೂ ಅರ್ಧ ಮಂಟಪವನ್ನು ಹೊಂದಿದೆ. ಇದರ ಬಳಿಯಲ್ಲೇ ಕೆರೆಯಿದ್ದು ಇದು ಹಾಳಾಗಿದೆ. ಇಲ್ಲಿ ನವಿಲುಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತವೆ.

**ಚಿನ್ನಮುಳಗುಂದ** : ಹಿರೇಕೆರೂರು ತಾಲೂಕಿನ ಚಿನ್ನಮುಳಗುಂದವು (ಜನಸಂಖ್ಯೆ : 3,709) ರಾಣೆಬೆನ್ನೂರಿನಿಂದ ಪಶ್ಚಿಮಕ್ಕೆ 16 ಕಿ.ಮೀ. ದೂರದಲ್ಲಿದ್ದು ಶಾಸನಗಳಲ್ಲಿ 'ಮುಗದ' ಅಥವಾ 'ಮುನಿಗುಂದ' ಎಂದು ಉಲ್ಲೇಖವಾಗಿರುವ ಮುಗುಂದ-12ರ ಕಂಪಣದ ರಾಜಧಾನಿಯಾಗಿತ್ತು. ಬೆಂಗಳೂರು-ಮೀರಜ್ ರೈಲುಮಾರ್ಗದಲ್ಲಿ ಬ್ಯಾಡಗಿ ರೈಲು ನಿಲ್ದಾಣದಿಂದ (ಸು.12 ಕಿ.ಮೀ.)ಲೂ ಈ ಸ್ಥಳವನ್ನು ತಲುಪಬಹುದಾಗಿದೆ. ಈ ಪ್ರದೇಶವನ್ನು 1895ರಲ್ಲಿ ಹಾವನೂರ ಹನುಮಂತರಾಯರಿಗೆ ಬ್ರಿಟೀಷ್ ಸರಕಾರವು ಉಂಬಳಿ ಗ್ರಾಮವನ್ನಾಗಿ ನೀಡಿತ್ತು. ಊರ ಹೊರಗೆ ಗದ್ದೆಗಳ ನಡುವೆ ಇರುವ ಚಿಕ್ಕೇಶ್ವರ ದೇವಾಲಯವು ಚಾಳುಕ್ಯರ ಶೈಲಿಯ ಸುಂದರ ಶಿವಾಲಯವಾಗಿದೆ. ಇದು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿದೆ. ನವರಂಗದಲ್ಲಿ ಮೂರು ಮಾದರಿಯ 16 ಕಂಬಗಳಿದ್ದು ನಡುವಿನ ನಾಲ್ಕು ಕಂಬಗಳು ಆಕರ್ಷಕವಾಗಿವೆ. ಅಂತರಾಳದ್ವಾರದ ಇಕ್ಕೆಡೆಗಳಲ್ಲಿ ದೇವಕೋಷ್ಠಗಳಿದ್ದು ಬರಿದಾಗಿವೆ. ನವರಂಗದ ಛಾವಣಿಯಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಸರಳ ಅಲಂಕಾರವಿದೆ. ಹೊರಭಾಗದ ಭಿತ್ತಿಗಳಲ್ಲಿ ನವಿಲುಗಳ ಹಾಗೂ ಹಂಸಗಳ ಸಾಲನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಅಪೂರ್ಣವಾದ ಕದಂಬನಾಗರ ಶೈಲಿಯ ಶಿಖರವಿದೆ. ದೇವಾಲಯದ ಒಳಗಿರುವ ಅಸ್ಪಷ್ಟ ಶಾಸನವು ಕ್ರಿ.ಶ. 1319 ರದ್ದಾಗಿದ್ದು ಚಂಡಭೂಪಾಳನಿಂದ ಚಿಕ್ಕನಾಥ ದೇವರಿಗೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಚಿಕ್ಕೇಶ್ವರದಿಂದ ಊರಿಗೆ ಬರುವಾಗ ರಸ್ತೆಯ ಪಕ್ಕದ ಬೇಲಿಯಲ್ಲಿ ಒಂದು ಅಪ್ರಕಟಿತ ಶಾಸನವಿದ್ದು ಅಸ್ಪಷ್ಟವಾಗಿದ್ದು 'ಮುನಿಗುಂದ' ಎಂದು ಮಾತ್ರ ಓದಲು ಸಾಧ್ಯವಾಗುತ್ತದೆ.

ಊರಲ್ಲಿರುವ ಇತರ ಗುಡಿಗಳೆಂದರೆ ಕಲ್ಲೇಶ್ವರ, ಹನುಮಂತ (ಕೆರೆದಂಡೆಯಲ್ಲಿ), ಈಶ್ವರ (ಕೆರೆಬಳಿ), ಮೈಲಾರಲಿಂಗೇಶ್ವರ, ದ್ಯಾಮವ್ವ ಮುಂತಾದವುಗಳು. ಕಲ್ಲೇಶ್ವರ ದೇವಾಲಯವು ಶಿಥಿಲವಾಗಿದ್ದು ಬರಿದಾಗಿರುವ ಗರ್ಭಗೃಹ ಹಾಗೂ ಚಾಳುಕ್ಯ ಕಂಬಗಳಿರುವ ಕುಸಿದ ನವರಂಗವಿದೆ. ಈ ದೇವಾಲಯದ ಎಡಗೋಡೆಯಲ್ಲಿ ಶಾಸನವಿದ್ದು ಕಲ್ಯಾಣದ ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1123 ದಂಡನಾಯಕ ಮಲ್ಲರಸ ಮತ್ತು ಮಹಾದೇವರಸರಿಂದ ಸಾದೇಶ್ವರ ದೇವರಿಗೆ ಎಣ್ಣೆಗಾಣವನ್ನು ದಾನಬಿಟ್ಟಿದ್ದನ್ನು ತಿಳಿಸುತ್ತದೆ. ಇದೇ ದೇವಾಲಯದ ಬಲಗೋಡೆಯಲ್ಲಿರುವ ಶಾಸನವು ಎರಡನೇಯ ಜಗದೇಕಮಲ್ಲನ ಕಾಲದಲ್ಲಿ (ಕ್ರಿ.ಶ. 1142) ದಂಡನಾಯಕ ದೇವಧರನಿಂದ ಸೋಮೇಶ್ವರ ದೇವರಿಗೆ ಮುಗದ ಗ್ರಾಮದಲ್ಲಿ ಮಾಡಲಾದ ಪನ್ನಾಯ ಮತ್ತು ಬೀರವಣ ಸುಂಕಗಳ ದಾನವನ್ನು ದಾಖಲಿಸುತ್ತದೆ. ಇದರ ಸಮೀಪವೇ ಕೆರೆಯಿದ್ದು ಅದರ ಅಂಗಳದಲ್ಲಿ ಅಪ್ರಕಟಿತ ಶಾಸನವೊಂದಿದೆ. ಕೆರೆದಂಡೆಯ ಬಳಿ ದೊಡ್ಡದಾದ ವಿಜಯನಗರ ಶೈಲಿಯಲ್ಲಿ ಕಟ್ಟಲಾಗಿರುವ ಕಟ್ಟಡವಿದೆ. ನವರಂಗದಲ್ಲಿ ಸುಮಾರು ಒಂದು ಮೀಟರ್ ಎತ್ತರವಿರುವ ವಿಜಯನಗರ ಶೈಲಿಯ ಕೇಶವದೇವರ ಮೂರ್ತಿ ಇದೆ. ದೇವಾಲಯದ ಎದುರಿಗೆ ದೀಪಸ್ತಂಭವಿದೆ, ಹಾಗೂ ಇದರ ಬಳಿ ಹುಲಿಬೇಟೆಯ ವೀರಗಲ್ಲಿದ್ದು

ಯಾದವ ರಾಮಚಂದ್ರನ ಕಾಲದ ಅಸ್ಪಷ್ಟ ಶಾಸನವಿದ್ದು ಕೇವಲ ಬಾಯಿರ ನಾಯಕನ ಉಲ್ಲೇಖವಿದೆ. ಇದರ ಸಮೀಪವೇ ಇನ್ನೊಂದು ಮಹಾಸತಿ ಕಲ್ಲಿದ್ದು ಕ್ರಿ.ಶ. 1520ರಲ್ಲಿ ಸ್ತ್ರೀಯೊಬ್ಬಳ ಸಹಗಮನದ ಬಗೆಗೆ ದಾಖಲಿಸುತ್ತದೆ. ಹನುಮಂತನ ಗುಡಿಯ ಪರಿಸರದಲ್ಲಿ ಅನೇಕ ಅವಶೇಷಗಳಾದ ಬ್ರಹ್ಮಶಿರ, ದೇವಿಶಿರ, ಭಗ್ನವಿಷ್ಣು, ವಿಷ್ಣುಪೀಠ ಇನ್ನೂ ಮುಂತಾದವುಗಳು ಕಂಡು ಬರುತ್ತವೆ.

ಹನುಮಂತ ಗುಡಿಯ ಓಣಿಯಲ್ಲಿ ಚಾಳುಕ್ಯ ಶೈಲಿಯ ಇನ್ನೊಂದು ಈಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ ಹಾಗೂ ಅರ್ಧಮಂಟಪ ಮಾತ್ರ ಉಳಿದಿವೆ. ಹೊರಗೆ ಒಂದು ವೀರಗಲ್ಲಿನ ತುಂಡು ಒಂದು ತೀರ್ಥಂಕರ ಪ್ರತಿಮೆಯಿರುವ ಕಂಬದ ತುಂಡಿನ ಭಾಗ (ಇದು ಮೂಲಸಂಘದ ಶಾಸನ) ಇದರ ಸಮೀಪವೇ ಮೈಲಾರಲಿಂಗೇಶ್ವರ ಗುಡಿಯ ಕೇವಲ ತೆರೆದ ಗರ್ಭಗೃಹವಿದೆ. ಒಳಗೆ ಚಾಳುಕ್ಯ ಶೈಲಿಯ ಉಮಾಮಹೇಶ್ವರ, ಭೈರವ ಹಾಗೂ ಇನ್ನೂ ಕೆಲವು ವಿಜಯನಗರದ ಕಾಲದ ಅವಶೇಷಗಳನ್ನು ಇರಿಸಲಾಗಿದೆ.

ಈ ಊರಿನ ಮುಂಭಾಗದಲ್ಲಿ ಕೋಟೆಯ ಅವಶೇಷಗಳು ಇದ್ದು, ಸುಮಾರು ಒಂದು ಕಿ.ಮೀ. ನಡೆದು ಹೋಗಬೇಕು. ಕೇವಲ ಬುರುಜುಗಳು ಮಾತ್ರ ಉಳಿದಿವೆ. ಸ್ವಾಭಾವಿಕವಾಗಿರುವ ಗುಡ್ಡಗಳನ್ನೇ ಬುರುಜಗಳನ್ನು ನಿರ್ಮಿಸಲು ಬಳಸಿಕೊಳ್ಳಲಾಗಿದೆ. ಒಂದು ಬರುಜಿನ ಮೇಲ್ಭಾಗದಲ್ಲಿ ಪ್ರಾಚೀನ ಗದ್ದಿಗೆ ಇದ್ದು ಈಗ ಬಾಬಾ ಕಲಂದರ್ ದರ್ಗಾ ಆಗಿದೆ. ಇಲ್ಲಿ ಪ್ರತೀ ವರ್ಷ ಉರುಸ್ ನಡೆಯುತ್ತದೆ; ಹಾಗೂ ಅಮಾನುಷವೆನಿಸುವ ಹಲವಾರು ಪವಾಡಗಳನ್ನು ಆ ಸಂದರ್ಭದಲ್ಲಿ ಪ್ರದರ್ಶಿಸಲಾಗುವುದೆಂದು ಹೇಳುವರು. ಇದರ ಹಿಂಭಾಗದಲ್ಲಿ ದೊಡ್ಡ ಹೊಂಡವಿದ್ದು ಅದರಲ್ಲಿ ಗವಿಯಿದೆ. ಕೋಟೆಯ ಸುತ್ತಲೂ ಸಣ್ಣಪುಟ್ಟ ಗುಡ್ಡಗಳು ಆವರಿಸಿಕೊಂಡಿವೆ. ಇದರ ದಕ್ಷಿಣದ ಆವರಣವು ಸು. 7-8 ಎಕರೆಯಷ್ಟಿದ್ದು ಇದರಲ್ಲೂ ಒಂದು ಹೊಂಡವಿದ್ದು ಒಂದು ಗವಿ ಇದೆ. ಹಿಂಭಾಗದಲ್ಲಿ ಕಣಿವೆಗಳು ಹಾಗೂ ಚಿನ್ನದಗಣಿಗಳಿದ್ದಿರಬಹುದಾದ ಸ್ಥಳವಿದೆ. ಕೋಟೆಯ ದಕ್ಷಿಣಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿ ಕಣಿವೆಯಲ್ಲಿ ಇನ್ನೊಂದು ಗವಿಯಿದ್ದು ಅದರಲ್ಲಿ ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಇದರ ಆಚೆ ಕರಡಿಗುಡ್ಡ ಹಾಗೂ ನಡುವೆ ಅನೇಕ ಕೃತಕ ದಿಬ್ಬಗಳು, ಹೊಂಡಗಳು, ಗೋಚರವಾಗುತ್ತವೆ. ಸಿದ್ದೇಶ್ವರ ದೇವಾಲಯದ ಎಡಗಡೆ ಕ್ರಮಿಸಿದರೆ ನೆಲಮಾಳಿಗೆ ಇದ್ದು ಇಳಿಯಲು ಮೆಟ್ಟಿಲುಗಳಿವೆ. ಬಹುಶಃ ಇವುಗಳು ಇಲ್ಲಿದ್ದಿರಬಹುದಾದ ಮುನಿಗಳ ತಪಸ್ಸಿನ ಏಕಾಂತದ ಸ್ಥಳಗಳಿರಬಹುದು. ಕೋಟೆಯ ಒಳಗೆ ವೀರಭದ್ರನ ಗುಡಿಯಿದ್ದು ಮೂಲ ವಿಗ್ರಹವು ಭಿನ್ನವಾಗಿದೆ. ಗರ್ಭಗೃಹ ಮಾತ್ರ ಉಳಿದಿದ್ದು ಮುಂಭಾಗದ ಮಂಟಪವು ಬಿದ್ದುಹೋಗಿದೆ. ಕೋಟೆಯ ಭಾಗಗಳು ಸುತ್ತಲೂ ಬೆಟ್ಟಗುಡ್ಡಗಳಿಂದ ಕೂಡಿದ್ದು ಸುಂದರವಾದ ರಮಣೀಯ ದೃಶ್ಯವನ್ನು ಒದಗಿಸುತ್ತದೆ. ಈ ಗುಡ್ಡದ ಪರಿಸರದಲ್ಲಿ ಚಿನ್ನದ ಗಣಿ ಅನ್ವೇಷಣಾ ಕಾರ್ಯವು ಭರದಿಂದ ನಡೆಯುತ್ತಿದೆ. ಅಲ್ಲಲ್ಲಿ ಅನೇಕ ಕೃತಕ ಗುಹೆಗಳು ಈ ಅನ್ವೇಷಣೆಯಿಂದ ಉಂಟಾಗಿದ್ದು ಈ ಊರನ್ನು 'ಚಿನ್ನ' ಮುಳಗುಂದ ಎಂದು ಇದೇ ಕಾರಣದಿಂದ ಕರೆಯುತ್ತಾರೆಂದು ಅಭಿಪ್ರಾಯಪಡಲಾಗಿದೆ.

**ಚಿಲ್ಲೂರು** : ಸವಣೂರು ತಾಲೂಕಿನ ಚಿಲ್ಲೂರು (ಜನಸಂಖ್ಯೆ 861)ಸವಣೂರಿನಿಂದ ಉತ್ತರಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಹುಲಗೂರು ರಸ್ತೆಯಲ್ಲಿರುವ ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ರಾಷ್ಟ್ರಕೂಟ ಒಂದನೇ ಅಮೋಘವರ್ಷನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನ ಪರಿಶಿಷ್ಟ ಜಾತಿಯವರ ಓಣಿಯಲ್ಲಿದ್ದು ಗೋಗ್ರಹಣದಲ್ಲಿ ಮಡಿದ ಮಾಚ ಹಾಗೂ ಚಟ್ಟರ ಸ್ಮಾರಕವಾಗಿದೆ. ನೆರೆಯ ಚಿಲ್ಲೂರ ಬಡ್ನಿಯಲ್ಲಿ ಬಾವಿ ಬಳಿಯಿರುವ ಕ್ರಿ.ಶ. 1062ರ ಶಾಸನ ಊರೊಡೆಯ ನಾಯಿಮಯ್ಯನು ರಾಮೇಶ್ವರ ದೇವಾಲಯವನ್ನು ನಿರ್ಮಿಸಿ ಅದರ ಸ್ಥಾನಾಚಾರ್ಯರಾದ ಸಿಂಹಪರಿಷೆಯ ಸೋವರಾಸಿ ಪಂಡಿತರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರಲ್ಲಿಂದು ಇರುವ ಕಲ್ಮೇಶ್ವರ ಗುಡಿ ಜೋಪಡಿಯಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಈ ಗುಡಿ ಪರಿಸರದಲ್ಲೇ ಶಾಸನವಿದ್ದು, ತ್ರುಟಿತವಾಗಿರುವ ಇನ್ನೆರಡು ವೀರಗಲ್ಲುಗಳಿವೆ. ಊರ ಪ್ರವೇಶದಲ್ಲೇ ಇರುವ ಗಾಳಿಯವ್ವನ ಗುಡಿಯ ಮುಂದೆ ರಾಷ್ಟ್ರಕೂಟರ ಕಾಲದ ಶಾಸನವಿರುವ ನಾಗಬಂಧವಿರುವ ಸಿದ್ಧರ ಪಾದಗಟ್ಟಿ ಇದೆ. ಇಲ್ಲೇ ಶಾಸನವಿರುವ ನಿಷಿಧಿಕದಲ್ಲಿದ್ದು, ಶಾಸನ ಬಹಳ ಮಸುಕಾಗಿದೆ. ಆತ್ಮಾಹುತಿಯ ಶಿಲ್ಪ ಕೆತ್ತನೆಯುಳ್ಳ ಆತ್ಮ ಬಲಿದಾನದ ಸ್ಮಾರಕ ಶಿಲ್ಪವೊಂದು ಇಲ್ಲಿದೆ. ಊರ ಹರಿಜನ ಓಣಿಯಲ್ಲಿರುವ ಬಾದುಬ್ಬೆ ಶಿಲ್ಪ, ಉಡಚವ್ವನ ಮೂರ್ತಿಗಳು ಉಲ್ಲೇಖಾರ್ಹವಾಗಿವೆ. ಕಿರುವೇದಿಕೆಯ ಮೇಲೆ ಕಮಲ ಪೀಠದ ಮೇಲೆ ಆಸೀನಳಾಗಿರುವ ಗಜಲಕ್ಷ್ಮಿ ಶಿಲ್ಪವಿದೆ. ದೇವಿಯ ಪದತಲದಲ್ಲಿ ಇಕ್ಕೆಲದಲ್ಲಿ ರತಿಕ್ರೀಡೆಯಲ್ಲಿ ತೊಡಗಿರುವ ಮಿಥುನ ಶಿಲ್ಪಗಳಿವೆ. ಇದರ ಬದಿಯಲ್ಲೇ ಇರುವ ಉಡಚವ್ವನ ಮೂರ್ತಿ ಬಹಳ ಸುಂದರವಾಗಿದ್ದು, ಖಡ್ಗ - ಗುರಾಣಿಗಳನ್ನು ಹೊಂದಿರುವ ದೇವಿಯ ಬುಡದಲ್ಲಿ ಮಂಗಚೇಷ್ಟೆಯ ಮಿಥುನ ಶಿಲ್ಪಗಳಿವೆ. ಬೃಹತ್ತಾದ ಮುಂಚಾಚಿದ ಮೊಲೆಗಳುಳ್ಳ ಈ ದೇವಿಯನ್ನು ಕರ್ಣಕುಂಡಲ, ಕಂಠೀಹಾರ, ಕಿರೀಟಗಳಿಂದ ಅಲಂಕರಿಸಲಾಗಿದೆ. ದೇವಿಯ ಮುಂದೆ ಸುಂದರವಾದ ಕೋಣನ ತಲೆಯ ಉಬ್ಬು ಶಿಲ್ಪವಿರುವ

ಹಾಸುಗಲ್ಲಿದೆ. ಇದರ ಬದಿಯಲ್ಲೇ 'ಪೂರ್ಣಕುಂಭ'ದ ಕೆತ್ತನೆಯಿರುವ ಆಕರ್ಷಕವಾದ ರಾಷ್ಟ್ರಕೂಟ ಸ್ತಂಭಭಾಗವಿದೆ. ಬಾದುಬ್ಬೆ ಉಡಚವ್ವನ ಮೂರ್ತಿಗಳೂ ಕೂಡ ರಾಷ್ಟ್ರಕೂಟರ ಕಾಲದ್ದಾಗಿದೆ.

ಊರ ಹೊರಗಿರುವ ಹನುಮಂತನ ಗುಡಿಯಲ್ಲಿ ಕ್ರಿ.ಶ. 10-11ನೇ ಶತಮಾನದ ಗಣಪತಿ, ಭೈರವ ಹಾಗೂ ವಿಷ್ಣುವಿನ ಮುಕ್ಕಾದ ಶಿಲ್ಪಗಳಿವೆ. ಹೊರಗೆ, ಪೀಠಸ್ಥ ಚತುರ್ಮುಖ ಬ್ರಹ್ಮಶಿರ ಶಿಲ್ಪವಿದ್ದು, ಇದನ್ನು ಸ್ಥಳಿಕರು 'ಗೋಲಕವ್ವ'ನೆಂದು ಪೂಜಿಸುತ್ತಾರೆ. ರಾಮೇಶ್ವರ ಗುಡಿಯ ಅವಶೇಷಗಳನ್ನು 1960ರಷ್ಟು ಹಿಂದೆಯೇ ಧಾರವಾಡಕ್ಕೆ ಕೊಂಡೊಯ್ದಿದ್ದಾರೆಂದು ಸ್ಥಳೀಕರು ಹೇಳುತ್ತಾರೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ಭರಮಪ್ಪ, ದ್ಯಾಮವ್ವ ಹಾಗೂ ಕರಿಯವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಇವೆ.

**ಚೌಡದಾನಪುರ** : ರಾಣೆಬೆನ್ನೂರು ತಾಲೂಕಿನ ಚೌಡದಾನಪುರ (ಜನಸಂಖ್ಯೆ : 1,283) ಅಥವಾ ಚೌಡಯ್ಯ ದಾನಪುರವು ರಾಣೆಬೆನ್ನೂರಿನಿಂದ 22 ಕಿ.ಮೀ. ದೂರದಲ್ಲಿದೆ. ತುಂಗಭದ್ರಾ ನದಿಯ ದಕ್ಷಿಣ ತೀರದಲ್ಲಿರುವ ಭವ್ಯ ಧಾರ್ಮಿಕ ಕೇಂದ್ರವಾಗಿದೆ. ಈ ಸ್ಥಳವು ವೀರಶೈವರಿಗೆ ಪುಣ್ಯಕ್ಷೇತ್ರ, ಶಿವಶರಣ ಅಂಬಿಗರ ಚೌಡಯ್ಯ (ಕ್ರಿ.ಶ. 12-13ನೇ ಶತಮಾನ) ಈ ಊರಿನಲ್ಲಿ ನೆಲೆಸಿದ್ದು, ಇಲ್ಲೇ ಲಿಂಗೈಕ್ಯನಾದನೆಂದು ಸಾಂಪ್ರದಾಯಿಕ ನಂಬಿಕೆಯಿದೆ. ತುಂಗಭದ್ರಾ ನದಿ ತೀರದಲ್ಲಿ, ಎತ್ತರವಾದ ಜಗತಿಯ ಮೇಲೆ ನಾಲ್ಕು ಕಂಬಗಳೊಂದಿಗೆ ಛಾವಣಿ ಇರುವ ಮಂಟಪವನ್ನು ಚೌಡಯ್ಯನ ಗದ್ದುಗೆಯೆಂದು ಕರೆಯಲಾಗುತ್ತದೆ. ಕಾಳಮುಖ ಪಂಥದ ಹಾಗೂ ಗುತ್ತರ ಸರ ಗುರುವಾಗಿದ್ದ ಶಿವದೇವ ಮುನಿಗಳಿಗೆ (ಅಂಬಿಗರ) ಚೌಡಯ್ಯನು (ಯಾರೆಂಬುದು ವಾದವಿದೆ) ಈ ಸ್ಥಳವನ್ನು ದಾನವಾಗಿ ಕೊಟ್ಟಿದ್ದರಿಂದ ಈ ಊರಿಗೆ ಚೌಡಯ್ಯ ದಾನಪುರವೆಂಬ ಹೆಸರು ಬಂದಿದೆ ಎಂದು 'ಶಿವದೇವ ವಿಜಯ' ಗ್ರಂಥವನ್ನು ಸಂಪಾದಿಸಿದ ಎಂ.ಜಿ. ನಂಜುಂಡಾರಾಧ್ಯರು ಅಭಿಪ್ರಾಯಪಡುತ್ತಾರೆ. ಈ ಗ್ರಂಥದ ಮೂಲಕರ್ತೃ ಶರೀಫಕವಿ ಎಂಬುದು ತಿಳಿದು ಬರುತ್ತದೆ. ಇದಲ್ಲದೆ ಚೌಡದಾನ ಪುರಕ್ಕೆ 'ಕೊರ್ತಗಿ ಶಿವಪುರ', 'ಶಿವಗಿರಿ', 'ಮುಕ್ತಿಕ್ಷೇತ್ರ' ಎಂಬ ವಿವಿಧ ಹೆಸರುಗಳಿರುವುದು ವ್ಯಕ್ತವಾಗುತ್ತದೆ. ಆದರೆ, ಕಲ್ಯಾಣದ ಚಾಳುಕ್ಯರ ಶಾಸನಗಳಲ್ಲಿ ಈ ಊರನ್ನು ತುಂಗಭದ್ರಾ ದಕ್ಷಿಣ ದಂಡೆಯಲ್ಲಿರುವ 'ಕಂನಾಡಗುತ್ತೊಳಲದೇಶೀ ಗೋಪೆ' ಎಂದು ಉಲ್ಲೇಖಿಸಲಾಗಿದ್ದು, ಇದು ಹೊನ್ನವರ್ತಿ-12ರ ಆಡಳಿತ ವಿಭಾಗದಲ್ಲಿ ಸೇರಿದ್ದ ಗ್ರಾಮವಾಗಿರಬೇಕು. 'ಚೌಡದಾನಪುರ' ಅಥವಾ 'ಚೌಡಯ್ಯ ದಾನಪುರ'ವೆಂದು ಹೆಸರು ಶಾಸನಗಳಲ್ಲಿ ಇಲ್ಲ. ಈಗಲೂ, ಈ ಊರಿನಲ್ಲಿ ಪ್ರತೀವರ್ಷ ಸಂಕ್ರಮಣದಂದು ಚೌಡಯ್ಯನವರ ತೆಪ್ಪೋತ್ಸವವನ್ನು ನಡೆಸುತ್ತಾರೆ. ಆ ಸಂದರ್ಭದಲ್ಲಿ ಹಾಗೂ ಮುಕ್ತೇಶ್ವರನ ಉತ್ಸವಗಳಲ್ಲೂ ಅಂಬಿಗರು ಈಗಲೂ ಸಕ್ರಿಯವಾಗಿ ಭಾಗವಹಿಸುತ್ತಾರೆಂದು ಡಾ॥ ವಸುಂಧರಾ ಫಿಲಿಯೋಜಾ ತಿಳಿಸುತ್ತಾರೆ.

ಚೌಡದಾನಪುರದ ಹೃದಯದಂತಿರುವ ಚಾಳುಕ್ಯ ಶಿಲ್ಪಾಲಂಕೃತವಾದ ಸುಂದರ ಭವ್ಯ ಮುಕ್ತೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ಒಂದು ಸಂಕೀರ್ಣ ಕಟ್ಟಡವಾಗಿದೆ. ಈ ದೇವಾಲಯದ ಶಾಸನಗಳನ್ನು ಗಮನಿಸಿದಾಗ ಇದನ್ನು ಜಟಾಚೋಳವಂಶದ ಗುತ್ತರಸರ ಮಾಂಡಳಿಕನಾಗಿದ್ದ ಮಲ್ಲ ಅಥವಾ ಮಲ್ಲುಗಿ ಕ್ರಿ.ಶ. 1115-1120ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಆ ಸಮಯದಲ್ಲಿ ಗೋವಿಂದರಸನು ಬನವಾಸಿಯ ರಾಜ್ಯಪಾಲನಾಗಿದ್ದನು. ಅನಂತರ ಕಾಳಮುಖ ಸಂಪ್ರದಾಯದ ಗುರುಗಳು ಗುತ್ತರಸರ ರಾಜಗುರುವಾಗಿದ್ದ ಶಿವದೇವರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರೆಂದು ತಿಳಿದುಬರುತ್ತದೆ. ಇದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಂಭಾಗದಲ್ಲಿ ಎರಡು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಬಹುಕೋನಾಕಾರವಾದ ತಳ ವಿನ್ಯಾಸವನ್ನು ಹೊಂದಿದ್ದು ಒಳಗೆ ಎತ್ತರವಾದ ಪಾಣಿಪೀಠದ ಮೇಲೆ ವೃತ್ತಾಕಾರದ ಲಿಂಗವಿದೆ. ಗರ್ಭಗೃಹ ಹಾಗೂ ಅಂತರಾಳದ ಲಲಾಟಗಳಲ್ಲಿ ಯಾವುದೇ ಶಿಲ್ಪಗಳೂ ಇಲ್ಲ. ನವರಂಗಕ್ಕೆ ಎರಡು ಪ್ರವೇಶ ದ್ವಾರಗಳಿದ್ದು ಪೂರ್ವದ ಬಾಗಿಲುವಾಡವು ಅಲಂಕೃತವಾಗಿದೆ. ದಕ್ಷಿಣಕ್ಕಿರುವ ಪ್ರವೇಶದ್ವಾರದ ಮುಂಭಾಗದಲ್ಲಿ ಕಕ್ಷಾಸನ ಸಹಿತ ತೆರೆದ ಮಂಟಪವಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ಒಂದರಲ್ಲಿ ಮಹಿಷಮರ್ದಿನಿ ಹಾಗೂ ಇನ್ನೊಂದರಲ್ಲಿ ಗಣಪತಿಯ ಶಿಲ್ಪಗಳಿವೆ. ಇವಲ್ಲದೇ ಸಪ್ತ ಮಾತೃಕೆಯರು, ಪಾರ್ವತಿ ಮತ್ತು ತಲೆಯ ಮೇಲ್ಭಾಗದಲ್ಲಿ ಏಳು ಹೆಡೆ ಸರ್ಪವುಳ್ಳ ಸೂರ್ಯನ ಶಿಲ್ಪಗಳನ್ನು ಇರಿಸಲಾಗಿದೆ. ಪಾರ್ವತಿ ಹಾಗೂ ಸೂರ್ಯನ ಶಿಲ್ಪಗಳನ್ನು ಸಮೀಪದ ನರಸೀಪುರ ದೇವಾಲಯದಿಂದ ತಂದಿಡಲಾಗಿದೆಯೆಂದು ಹೇಳಲಾಗುತ್ತದೆ. ನವರಂಗದ ಮಧ್ಯದಲ್ಲಿ ನಾಲ್ಕು ಚಾಳುಕ್ಯ ಶೈಲಿಯ ಹೊಳಪಿರುವ ಕಂಬಗಳು ನಮ್ಮ ಗಮನವನ್ನು ಸೆಳೆಯುತ್ತವೆ.

ಈ ದೇವಾಲಯದ ಮುಖ್ಯ ಆಕರ್ಷಣೆಯೆಂದರೆ ಎತ್ತರವಾದ ಅದಿಷ್ಠಾನ ಹಾಗೂ ಹೊರಭಿತ್ತಿಗಳು. ನವರಂಗದ ಪೂರ್ವ ಪ್ರವೇಶದ್ವಾರದ ಎರಡೂ ಕಡೆಗಳಲ್ಲಿ ದ್ವಾರಪಾಲಕರ ಮೂರ್ತಿಗಳಿವೆ. ಎಡಭಾಗದಿಂದ ಪ್ರದಕ್ಷಿಣಾಪಥದಲ್ಲಿ ಮುಂದುವರೆದಂತೆ ಭಕ್ತ, ಶಿವದೇವಯೋಗಿ, ದ್ವಾರಪಾಲಕಿಯರು (ದಕ್ಷಿಣ ಪ್ರವೇಶದ್ವಾರ) ಗಣೇಶ, ಮಹೇಶ್ವರ, ನೃತ್ಯಗಾರ್ತಿಯರು, ಯಕ್ಷ, ವೀರಭದ್ರ, ಯಕ್ಷ, ಸರಸ್ವತಿ, ವಿಷ್ಣು, ವೇಣುಗೋಪಾಲ, ಯಕ್ಷ, ವೀರಭದ್ರ, ಇನ್ನೊಂದು ಸರಸ್ವತಿ, ನೃತ್ಯಗಣಪತಿ, ವೀರಭದ್ರ, ಯಕ್ಷ, ಮಹೇಶ್ವರ, ಯೋಗಿ, ಮಹೇಶ್ವರ (ಇನ್ನೊಂದು) ಯಕ್ಷ ಮತ್ತು ಸೂರ್ಯರ ಸುಂದರ ಶಿಲ್ಪಗಳನ್ನು ಬಿಡಲಾಗಿದೆ, ಎಂದು ಡಾ: ವಸುಂಧರಾ ಫಿಲಿಯೋಜಾ ದಾಖಲಿಸಿದ್ದಾರೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶಿಖರವು ಎತ್ತರವಾದ ವಿಮಾನ ರಚನೆಯನ್ನು ಹೊಂದಿದೆ. ಶಿಖರದ ಮುಂಭಾಗದಲ್ಲಿ ಶುಕನಾಸವಿದ್ದು ಮುಂಚಾಚಿದ ಕೀರ್ತಿಮುಖವನ್ನು ಹೊಂದಿದೆ. ಇದರಲ್ಲಿ ಶಿಲ್ಪವಿಲ್ಲ. ಶಿಖರದಲ್ಲಿ ಅಲಂಕಾರಿಕವಾಗಿ ನಗ್ನ ಸರ್ಪಕನ್ಯೆ, ಗಣೇಶ, ಸೂರ್ಯ, ವೀರಭದ್ರ, ಯಕ್ಷ, ಕಾಮ, ಮುಂತಾದ ಬಿಡಿಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಹೊರಗಡೆ ಮಹಾಯೋಗಿ ಶಿವದೇವರಗದ್ದುಗೆ ಇದೆ. ಇದಕ್ಕೆ ಪೂರಕವಾಗಿ ಶಾಸನವಿದ್ದು ಕ್ರಿ.ಶ. 1263ರಲ್ಲಿ ಶಿವದೇವನು ಲಿಂಗವನಪ್ಪಿದ ಬಗೆಗೆ ಉಲ್ಲೇಖವಿದೆ. ಈ ಶಾಸನವು ಶಿವದೇವ ಯೋಗಿಗಳು ಇಲ್ಲೇ ಜನಿಸಿದರೆಂದು ದಾಖಲಿಸುತ್ತದೆ. ಇದಲ್ಲದೇ ಗೋಮುನೇಶ್ವರ ಗದ್ದುಗೆಯೂ ಇದರ ಪಕ್ಕದಲ್ಲಿದೆ. ದಕ್ಷಿಣಭಾಗದಲ್ಲಿ ಮಲ್ಲಿಕಾರ್ಜುನ, ಈಶ್ವರ, ವೀರಭದ್ರ ಮತ್ತು ಕಾಳಿಯ ಗುಡಿಗಳಿವೆ. ವೀರಭದ್ರನ ದೇವಾಲಯದ ವೀರಭದ್ರನ ಶಿಲ್ಪವು ಸು. 13-14ನೇ ಶತಮಾನದ ಶೈಲಿಯಲ್ಲಿದೆ. ಶಿಲಾಮೂರ್ತಿಯಾಗಿದೆ. ಕಾಳಿಯ ವಿಗ್ರಹವು ಸುಂದರ ಚಾಳುಕ್ಯ ರಚನೆಯಾಗಿದ್ದು ಎಂಟು ಕೈಗಳನ್ನು ಹೊಂದಿದೆ. ಈ ದೇವಾಲಯದಲ್ಲಿ ಹಲವಾರು ಶಾಸನಗಳಿವೆ. ಊರಿನಲ್ಲಿ ಶಿವದೇವ ಯೋಗಿಗಳ ಮಠವಿದೆ; ಹಾಗೂ ಈ ಮಠದ ಸ್ವಾಮಿಗಳು ಅಂಬಿಗರ ಗುರುಗಳು. ಈ ಮಠದಲ್ಲಿ ಹೋಳಿಹುಣ್ಣಿಮೆಯಂದು ಜಾತ್ರೆ ನಡೆಯುತ್ತದೆ.

**ಛಬ್ಬಿ:** ಹುಬ್ಬಳ್ಳಿ ತಾಲೂಕಿನಲ್ಲಿರುವ ಊರಾದ ಛಬ್ಬಿಯು (ಜನಸಂಖ್ಯೆ : 3,508) ಹುಬ್ಬಳ್ಳಿಯಿಂದ ಆಗ್ನೇಯಕ್ಕೆ 16 ಕಿಮೀ ದೂರದಲ್ಲಿ ಪುಣೆ-ಬೆಂಗಳೂರು ಹೆದ್ದಾರಿಯಲ್ಲಿದೆ. ಈ ಊರು,ಪ್ರಾಚೀನ ಶಾಸನಗಳಲ್ಲಿ 'ಸಬ್ಬಿ', ಚಬ್ಬಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಹಲಸಿಗೆ - 12000 ಕ್ಕೆ ಸೇರಿದ್ದ ಮೂವತ್ತು ಗ್ರಾಮಗಳ ಕೇಂದ್ರವಾಗಿದ್ದು, 'ಸಬ್ಬಿ-30' ಎಂದೇ ಚಿರಪರಿಚಿತವಾಗಿತ್ತು. ಬಾದಾಮಿ ಚಾಲುಕ್ಯರಷ್ಟು ಪ್ರಾಚೀನವಾದ ಈ ಊರಿಂದ ಈವರೆಗೆ ಹನ್ನೊಂದು ಶಾಸನಗಳು ವರದಿಯಾಗಿದ್ದು, ಅವುಗಳ ಶಾಸನಪಾಠ ಪ್ರಕಟವಾಗಬೇಕಿದೆ. ಬಹಳ ಹಾಳಾಗಿರುವ ಈ ಶಾಸನಗಳಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ. ಇಲ್ಲಿನ ಕ್ರಿ.ಶ. 1061 ರ ಶಾಸನ ಸಬ್ಬಿಯ ಧೋರಜಿನಾಲಯದ ಕನಕನಂದಿಯ ನಿಷಿಧಿಗೆಯನ್ನು ಉಲ್ಲೇಖಿಸಿದರೆ, ಕ್ರಿ.ಶ. 12ನೇ ಶತಮಾನದ ತೀರ್ಥಂಕರ ಪಾದಪೀಠದ ಶಾಸನ ತೀರ್ಥಂಕರ ಪ್ರತಿಷ್ಠಾಪನೆ ಬಗ್ಗೆ ಸುಳಿವು ನೀಡುತ್ತದೆ. ನಂದಿಕಂಬದ ಮೇಲಿರುವ ಹಾನಗಲ್ಲು ಕದಂಬ ಕಾಮದೇವನ ಕಾಲದ ಶಾಸನವು ಕಾಲಡಿಯ ಧವಳೇಶ್ವರದೇವರ ಅರ್ಚಕ ರಾಜಗುರು ಲಕ್ಷ್ಮಿದೇವರಿಗೆ ದಾನಬಿಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 15 ನೇ ಶತಮಾನದ ವೀರಗಲ್ಲು ಶಾಸನವೊಂದು ಸೋಮಣ್ಣ ಹೆಗ್ಗಡೆ ಯುದ್ಧದಲ್ಲಿ ಹೋರಾಡುತ್ತ ಮಡಿದ ವಿಷಯವನ್ನು ತಿಳಿಸುತ್ತದೆ.

ಇಂದು ಊರಲ್ಲಿರುವ ಜೈನಬಸದಿ ಪೂರ್ಣ ಜೀರ್ಣೋದ್ಧಾರಗೊಂಡಿರುವ ಕಟ್ಟಿಗೆಯ ಕಟ್ಟಡವಾಗಿದ್ದು, ತೀರ್ಥಂಕರ ಮೂರ್ತಿಗಳನ್ನುಳಿದು ಉಳಿದೆಲ್ಲವೂ ನವೀನವೇ ಆಗಿವೆ. ಗರ್ಭಗೃಹ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿರುವ ಈ ಗುಡಿಯ ಮುಖಮಂಟಪ ಎರಡಂತಸ್ತಿನ ಆಕರ್ಷಕ ರಚನೆಯಾಗಿದೆ.

ಊರ ಬಸವಣ್ಣನ ಗುಡಿ ಮುಂದೆ ಹಂಸಪೀಠದ ಮೇಲೆ ಐದಡಿ ಎತ್ತರದ ಹನುಮಂತನ ಮೂರ್ತಿಯಿದೆ. ಇದರ ಬಳಿಯಲ್ಲೇ ನಾಥ ಪಂಥಕ್ಕೆ ಸೇರಿದ ಸರ್ಪಬಂಧವಿರುವ ಪಾದಗಟ್ಟೆಯಿದೆ. ಇಲ್ಲೇ ಯಕ್ಷ, ಮೈಲಾರ, ಭೈರವ ಮತ್ತು ಚಾಮುಂಡಿ ಶಿಲ್ಪದ ಭಗ್ನಾವಶೇಷಗಳು ಹರಡಿಕೊಂಡಿವೆ. ಸುಮಾರು ಕ್ರಿ.ಶ. 12-13 ನೇ ಶತಮಾನದ ಎರಡು ವೀರಗಲ್ಲುಗಳಿವೆ. ಇದರೊಂದಿಗೆ ಊರಲ್ಲಿ ಕಲ್ಮೇಶ್ವರ, ನಾರಾಯಣ, ಕರಿಮಲ್ಲೇಶ್ವರ, ವೀರಭದ್ರ, ಕಾಳಮ್ಮ ಗ್ರಾಮದೇವತೆ ಹಾಗೂ ಕರಿಯಮ್ಮನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳಿವೆ.

**ಜಕ್ಕಲಿ:** ರೋಣ ತಾಲೂಕಿನ ಊರಾದ ಜಕ್ಕಲಿಯು (ಜನಸಂಖ್ಯೆ :4,400)ರೋಣದಿಂದ ಆಗ್ನೇಯಕ್ಕೆ 10ಕಿಮೀ ದೂರದಲ್ಲಿದೆ. ನರೇಗಲ್‌ನಿಂದ ವಾಯುವ್ಯಕ್ಕೆ ಐದು ಕಿಮೀ ದೂರದಲ್ಲಿ ರೋಣ-ನರೇಗಲ್ ರಸ್ತೆಯಲ್ಲಿರುವ ಈ ಊರು, ಪ್ರಾಚೀನ ಶಾಸನಗಳಲ್ಲಿ 'ಜಕ್ಕಲಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬೆಳ್ವೊಲ-300 ಕ್ಕೆ ಸೇರಿದ ನರೆಯಂಗಲ್-12 ಕ್ಕೆ ಸೇರಿದ್ದು, 200

ಮಹಾಜನರಿದ್ದ ಅಗ್ರಹಾರವಾಗಿತ್ತು. ಚಾರಿತ್ರಿಕವಾಗಿ ಬಾದಾಮಿ ಚಾಲುಕ್ಯರಷ್ಟು ಪ್ರಾಚೀನವಾದ ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಬಾದಾಮಿ ಚಾಲುಕ್ಯ ಅರಸು ವಿಜಯಾದಿತ್ಯನ ಕಾಲದ ಸುಮಾರು ಕ್ರಿ.ಶ. ಎಂಟನೇಯ ಶತಮಾನದ ವೀರಗಲ್ಲು ಶಾಸನವೇ ಪ್ರಾಚೀನದ್ದಾಗಿದೆ. ಕಲ್ಲೇಶ್ವರ ಗುಡಿ ಮುಂದಿರುವ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1117 ರ ಶಾಸನ ಬಹಳ ಹಾಳಾಗಿದ್ದು, ಉಳಿದಿರುವ ಭಾಗದಿಂದ ಜೀನಾಲಯಕ್ಕೆ ದಾನಬಿಟ್ಟ ವಿಷಯ ತಿಳಿಸುತ್ತ, ಕೇಶವದೇವರ ಉಲ್ಲೇಖವನ್ನೂ ಹೊಂದಿದೆ. ಸಂಗಮೇಶ್ವರ ಗುಡಿ ಮುಂದಿರುವ ಕ್ರಿ.ಶ. 1120 ರ ಶಾಸನ, ಕುಮಾರ ಚಾಲುಕ್ಯ ಸೋವಿದೇವರಸ (ಮುಮ್ಮಡಿ ಸೋಮೇಶ್ವರ) ಊರ ಹೊರಗಣ ಮಠದ ಶ್ರೀ ಸೋಮೇಶ್ವರದೇವರಿಗೆ ಸಂಬಂಧಿಸಿದ ಭೂಮಿಯ 'ಆರುವಣ' ತೆರಿಗೆಯನ್ನು, ಊರ 200 ಮಹಾಜನರಿಗೆ ದತ್ತಿಬಿಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1139 ರ ಮತ್ತೊಂದು ಶಾಸನ ದಂಡನಾಯಕ ಮಹಾದೇವಯ್ಯನು, ಜಕ್ಕಲಿಯ ಕೆರೆಗೆ 'ಬಣ್ಣಿಗದೆರೆ'ಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಮೇಲಿನ ಶಾಸನೋಕ್ತ ಗುಡಿಗಳಿಂದು ಪೂರ್ಣ ಜೀರ್ಣೋದ್ಧಾರಗೊಂಡಿವೆ. ಇಂದು ಊರಲ್ಲಿರುವ ಕಲ್ಲೇಶ್ವರ ಹಾಗೂ ಸಂಗಮೇಶ್ವರ ಗುಡಿಗಳು ಪ್ರಾಚೀನ ದೇಗುಲಗಳಾಗಿದ್ದು, ಸ್ಥಳೀಕರು ಜೀರ್ಣೋದ್ಧಾರ ಮಾಡಿದ್ದಾರೆ. ಈ ಗುಡಿಗಳ ಬಾಗಿಲವಾಡಗಳು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದೆ. ಈ ಗುಡಿ ಪರಿಸರದಲ್ಲೇ ಮಹಿಷಮರ್ದಿನಿ, ಸಪ್ತಮಾತೃಕಾ ಹಾಗೂ ಗಣಪತಿಯ ಬಿಡಿ ಶಿಲ್ಪಗಳಿದ್ದು, ಕೋಣ ತಲೆಯಿರುವ ಉಬ್ಬು ಶಿಲ್ಪವಿದೆ. ಇಲ್ಲಿನ ವೀರಭದ್ರಗುಡಿ ಸಮೀಪದಲ್ಲಿನ ತೀರ್ಥಂಕರ ಪೀಠವಿದ್ದು ಮೇಲಿನ ಶಾಸನ ಹೇಳುವ ಜೈನ ಬಸದಿಯೇ ಇಂದು ವೀರಭದ್ರ ಗುಡಿಯಾಗಿ ಮಾರ್ಪಟ್ಟಿರುವಂತೆ ತೋರುತ್ತದೆ. ಇದರೊಂದಿಗೆ, ಊರಲ್ಲಿ, ಹನುಮಂತ, ದ್ಯಾಮವ್ವ, ದುರ್ಗವ್ವ, ಈಶ್ವರ ಮುಂತಾದ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ. ಸ್ವಾತಂತ್ರ್ಯ ಹೋರಾಟಗಾರ, ಏಕೀಕೃತ ಕರ್ನಾಟಕದ ಕನಸು ಕಂಡು ಅದಕ್ಕಾಗಿ ದುಡಿದವರಲ್ಲಿ ಅಗ್ರಗಣ್ಯರಾಗಿದ್ದ ಅಂದಾನಪ್ಪ ದೊಡ್ಡಮೇಟಿಯವರು ಈ ಊರಿನವರೇ.

**ಜೋಯಿಸರ ಹರಳಹಳ್ಳಿ:** ರಾಣೆಬೆನ್ನೂರು ತಾಲೂಕಿನಲ್ಲಿ (ಜನಸಂಖ್ಯೆ : 3,263) ಹರಳಹಳ್ಳಿ ಎಂಬ ಹೆಸರಿನ ಎರಡು ಊರುಗಳಿದ್ದು ಒಂದು ನದಿ ಹರಳಹಳ್ಳಿಯಾದರೆ ಮತ್ತೊಂದು ಜೋಯಿಸರ ಹರಳಹಳ್ಳಿಯಾಗಿದೆ. ಜೋಯಿಸರ ಹರಳಹಳ್ಳಿ ರಾಣೆಬೆನ್ನೂರಿನಿಂದ ನೈಋತ್ಯಕ್ಕೆ 10 ಕಿಮೀ ದೂರದಲ್ಲಿದ್ದು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದುದೆಂಬ ಅಂಶವನ್ನು ಊರಲ್ಲಿ ಹರಡಿಕೊಂಡಿರುವ ಆ ಕಾಲದ ಗೋಸಾಸ ಕಲ್ಲುಗಳು ಸೂಚಿಸುತ್ತವೆ. ಇಲ್ಲಿನ ಮಳೇಶ್ವರ ಮಠದ ಓಣಿಯಲ್ಲಿ ನಾಲ್ಕು ಗೋಸಾಸ ಕಲ್ಲುಗಳಿದ್ದು, ಇವನ್ನು ಕ್ರಿ.ಶ. 9-10ನೇ ಶತಮಾನಕ್ಕೆ ಗುರುತಿಸಬಹುದು. ಊರ ಹೊಂಡದ ದಂಡೆಯ ಮೇಲೆ ಕಲ್ಲೇಶ್ವರ ಗುಡಿಯಿದೆ. ಇದು ಗರ್ಭಗೃಹ ಮತ್ತು ಅರ್ಧಮಂಟಪವನ್ನಷ್ಟೇ ಹೊಂದಿದ್ದು, ಗರ್ಭಗೃಹದಲ್ಲಿ ಲಿಂಗ, ಹೊರಗಡೆ ನಂದಿ ಇದೆ. ಅರ್ಧಮಂಟಪದಲ್ಲಿ ಸೂರ್ಯ ಹಾಗೂ ಮಹಿಷಾಸುರ ಮರ್ದಿನಿಯರ ಸುಂದರ ಶಿಲ್ಪಗಳಿವೆ. ಇಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಈ ಗುಡಿಯ ಮುಂಬದಿಯಲ್ಲಿ ಎರಡು ವೀರಗಲ್ಲುಗಳಿದ್ದು, ಒಂದರಲ್ಲಿ ಕ್ರಿ.ಶ. 12ನೇ ಶತಮಾನದ ಶಾಸನವಿದೆ. ಕೆರೆಯಲ್ಲಿರುವ ಗಜಲಕ್ಷ್ಮಿ ಶಿಲ್ಪವನ್ನು 'ಹೊಳೆಗಂಗಮ್ಮ', 'ಬಾಣಂತಿ ಕಲ್ಲು' ಎಂದು ಪೂಜಿಸುತ್ತಾರೆ. ಊರ ನಡುವೆ ಇರುವ ಹನುಮಂತನ ಗುಡಿಯ ಆವರಣದಲ್ಲಿ ಮೂರು ಮಾಸ್ತಿಕಲ್ಲುಗಳಿದ್ದು, ಒಂದರಲ್ಲಿ ಶಾಸನವಿದೆಯಾದರೂ ಹಾಳಾಗಿದೆ. ಗುಡಿಯ ಮುಂದೆ ಪೀಠಸ್ಥ ಬ್ರಹ್ಮ ಶಿರದ ಶಿಲ್ಪವಿದೆ. ಇವುಗಳ ಜೊತೆಗೆ ಊರಲ್ಲಿ, ಬೀರಲಿಂಗೇಶ್ವರ, ಗಾಳಮ್ಮ ಮಾಸ್ತಿದೇವಿ ಮತ್ತು ಬಸವಣ್ಣನ ಗುಡಿಗಳಿವೆ. ಇದು ಹಾನಗಲ್ ಕುಮಾರಸ್ವಾಮಿಗಳ ಹುಟ್ಟೂರು ಎಂಬುದು ವಿಶೇಷ ಸಂಗತಿಯಾಗಿದೆ. ಊರಲ್ಲಿ ಒಂದು ಮಸೀದಿ ಇದೆ.

**ಡಂಬಳ :** ಮುಂಡರಗಿ ತಾಲೂಕಿನ ಐತಿಹಾಸಿಕ ಊರಾದ ಡಂಬಳ (ಜನಸಂಖ್ಯೆ : 8,998) ಅಥವಾ ಶಾಸನಗಳಲ್ಲಿ ಉಲ್ಲೇಖಗೊಂಡಿರುವ 'ಧರ್ಮವೊಳಲು', 'ಧರ್ಮಪುರ' ಕರ್ನಾಟಕದಲ್ಲಿರುವ ಪ್ರಮುಖ ಬೌದ್ಧ ಕೇಂದ್ರಗಳಲ್ಲಿ ಒಂದು. ಇತ್ತೀಚಿನವರೆಗೂ ಮುಂಡರಗಿ ಪೇಟಾದ ಮುಖ್ಯಸ್ಥಾನವು ಡಂಬಳದಲ್ಲಿ ಇತ್ತು. ಈ ಸ್ಥಳವು ಮಾಸವಾಡಿನಾಡು-140 ರಲ್ಲಿತ್ತು. ಕರ್ನಾಟಕದಲ್ಲಿ ಕಂಡು ಬರುವ ಹಲವೇ ತಾರಾಭಗವತಿ ವಿಹಾರವಿದ್ದ ಸ್ಥಳಗಳಲ್ಲಿ ಇದೂ ಒಂದೆಂದು ಡಾ: ಎಚ್.ಆರ್. ರಘುನಾಥಭಟ್ ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. 1095 ರ ಡಂಬಳ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ಆರನೇ ವಿಕ್ರಮಾದಿತ್ಯನ ಹಿರಿಯರಸಿ ಲಕ್ಷ್ಮೀದೇವಿಯು ಲೊಕ್ಕಿಗುಂಡಿಯ 16 ವರ್ತಕರ ದೇಣಿಗೆಯಿಂದ ಧರ್ಮವೊಳಲಿನಲ್ಲಿ ತಾರಾಭಗವತಿಯ ವಿಹಾರವೊಂದನ್ನು ನಿರ್ಮಿಸಿದಳು. ಇದೇ ಊರಿನಲ್ಲಿ ಸಿಕ್ಕಿರುವ ಕ್ರಿ.ಶ. 1098 ರ ಹಾಗೂ ಕ್ರಿ.ಶ. 1283 ರ ಶಾಸನಗಳಲ್ಲೂ ಬೌದ್ಧ ವಿಹಾರಕ್ಕೆ ನೀಡಿದ

ದಾನಗಳ ಬಗೆಗೆ ಉಲ್ಲೇಖವಿದೆ. ಡಂಬಳದಲ್ಲಿ ಗಣೇಶನ ಗುಡಿಯ ಹಿಂದೆ ಇದ್ದಿರಬಹುದಾದ ವಿಹಾರದ ಪ್ರವೇಶದ್ವಾರದ ಭಾಗವನ್ನು ಇತ್ತೀಚೆಗೆ ಸಂಶೋಧಿಸಿ ಡಾ: ರಘುನಾಥ ಭಟ್ಟರವರೇ ಪ್ರಕಟಿಸಿರುತ್ತಾರೆ. (ಇತಿಹಾಸ ದರ್ಶನ, 1992, ಸಂ.7)

ಈ ಊರಿನಲ್ಲಿರುವ ಪ್ರಮುಖ ದೇವಾಲಯಗಳೆಂದರೆ ದೊಡ್ಡಬಸಪ್ಪ, ಕಾಳೇಶ್ವರ ಅಥವಾ ಸಿದ್ದೇಶ್ವರ ಮತ್ತು ಸೋಮೇಶ್ವರ. ಊರ ಹೊರಭಾಗದಲ್ಲಿರುವ ದೊಡ್ಡಬಸಪ್ಪ ದೇವಾಲಯವು ಲಕ್ಕುಂಡಿಯ ಅಥವಾ ಗದಗಿನ ಚಾಳುಕ್ಯ ಶೈಲಿಯ ದೇವಾಲಯಗಳಿಗಿಂತಲೂ ಭಿನ್ನವಾದ ಪರಿಪೂರ್ಣ ಶೈಲಿಯನ್ನು ವ್ಯಕ್ತಪಡಿಸುತ್ತದೆ. ಇದರ ತಳವಿನ್ಯಾಸವು ನಕ್ಷತ್ರಾಕಾರಕ್ಕೆ ಹೋಲುವುದರಿಂದ ಈ ದೇವಾಲಯವನ್ನು ಹೊಯ್ಸಳರ ಶೈಲಿಗೆ ಸಮೀಪ ವಾಸ್ತುಶೈಲಿ ಎಂದು ಹಲವು ಕಲಾತಜ್ಞರ ಅಭಿಪ್ರಾಯವಾಗಿದೆ. ಈ ದೇವಾಲಯದಲ್ಲಿ ಇರುವ ಕ್ರಿ.ಶ. 1184 ರ ಶಾಸನದಲ್ಲಿ ಸ್ವಯಂಭು ಶಿವದೇವಾಲಯವೆಂದು ಅದನ್ನು ಕರೆಯಲಾಗಿದೆ. ಮುಖಮಂಟಪದಲ್ಲಿ ಬೃಹದಾಕಾರವಾದ ಬಸವನ ಏಕಶಿಲಾ ಮೂರ್ತಿ ಇರುವುದರಿಂದ ದೊಡ್ಡಬಸಪ್ಪ ದೇವಾಲಯವೆಂಬ ಅನ್ವರ್ಥನಾಮವು ರೂಢಿಗೆ ಬಂದಿರುವ ಸಾಧ್ಯತೆ ಇದೆ. ದೇವಾಲಯವು ಸುಸ್ಥಿತಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಸ್ವಲ್ಪಮಟ್ಟಿಗೆ ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಎತ್ತರವಾದ ಪಾಣಿಪೀಠದ ಮೇಲೆ ಲಿಂಗವಿದೆ. ವಿಶಾಲ ನವರಂಗದ ಪೂರ್ವ ಹಾಗೂ ದಕ್ಷಿಣಕ್ಕೆ ಪ್ರವೇಶದ್ವಾರಗಳಿವೆ. ಪೂರ್ವದ ಪ್ರವೇಶದ್ವಾರದ ಮುಂಭಾಗದಲ್ಲಿ ತೆರೆದ ಮುಖಮಂಟಪವಿದೆ. ನವರಂಗದ ಮಧ್ಯದಲ್ಲಿ ವೃತ್ತಾಕಾರದ ನಾಟ್ಯಪೀಠವಿದ್ದು ಛಾವಣಿಯಲ್ಲಿ ಕೆಳಮುಖ ಮಾಡಿರುವ ಅಷ್ಟದಳದ ಕಮಲದ ಹೂವಿನ ಸುಂದರ ಕೆತ್ತನೆಯಿದೆ. ಮಧ್ಯದಲ್ಲಿರುವ ಚಾಳುಕ್ಯ ಶೈಲಿಯ ಕಂಬಗಳು ವೃತ್ತಾಕಾರದ ಅಡ್ಡಕೊಯ್ತದವು. ಇವು ಅತ್ಯಂತ ಆಕರ್ಷಕ ಕೆತ್ತನೆಗಳನ್ನು ಹೊಂದಿದೆ. ಪೂರ್ವದ ಮಹಾದ್ವಾರವು ವೈಭವ ಪೂರ್ಣ ಅಲಂಕಾರಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಕಿರುಶಿಲ್ಪವಿದೆ. ಮಹಾದ್ವಾರದ ಮುಂಭಾಗದಲ್ಲಿ ಎರಡು ಅತ್ಯಂತ ಅಲಂಕೃತ ಕಂಬಗಳು ಹಾಗೂ ಮುಂಭಾಗದಲ್ಲಿ ಮುಖಮಂಟಪವಿದೆ. ಈ ಕಂಬಗಳ ಮೇಲೆ ಅನೇಕ ಕೆತ್ತನೆಗಳಿದ್ದು ಪೀಠದ ಸುತ್ತಲೂ ಆನೆಗಳ ಬಿಡಿಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಹೊರಭಾಗದ ಗೋಡೆಗಳೂ ಸಹ ನಕ್ಷತ್ರಾಕಾರವಾಗಿಯೇ ಇದ್ದು ಕೋನಗಳಲ್ಲಿ ಶಿಖರಗಳ ಕಿರು ಶಿಲ್ಪಗಳನ್ನು ಹಾಗೂ ವಿವಿಧ ನರ್ತನ ಶಿಲ್ಪಗಳನ್ನೂ ಕೆತ್ತಲಾಗಿದೆ. ಅದಿಷ್ಠಾನದ ಸುತ್ತಲೂ ಆನೆ, ಸಿಂಹ ಹಾಗೂ ಯಾಳಿಗಳ ಸಾಲುಗಳನ್ನು ಉಬ್ಬುಶಿಲ್ಪಗಳಲ್ಲಿ ಬಿಡಿಸಲಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಕದಂಬನಾಗರ ಶಿಖರವು ಈಗಲೂ ಸುಸ್ಥಿತಿಯಲ್ಲಿದೆ. ಶಿಖರದ ಮುಂಭಾಗದಲ್ಲಿರುವ ಶುಕನಾಸವು ಅಲಂಕೃತಗೊಂಡ ಕೀರ್ತಿಮುಖವನ್ನು ಹೊಂದಿದೆ. ಈ ದೇವಾಲಯದ ಎದುರಿಗೆ (ಮುಂಭಾಗದಲ್ಲಿ) ಒಂದು ಪೂರ್ಣವಾಗಿ ಬಿದ್ದುಹೋಗಿರುವ ದೇವಾಲಯವಿದೆ ಹಾಗೂ ಇದರಲ್ಲಿ ಒಂದು ಶಾಸನವಿದೆ. ದೊಡ್ಡಬಸಪ್ಪನ ದೇವಾಲಯದ ಮುಂಭಾಗದಲ್ಲಿರುವ ಶಾಸನವು ಕ್ರಿ.ಶ. 1184 ಕ್ಕೆ ಸೇರಿದ್ದು ಚಾಳುಕ್ಯದೊರೆ ನಾಲ್ಕನೇ ಸೋಮೇಶ್ವರನ ಕಾಲದಲ್ಲಿ ಧರ್ಮವೊಳಲಿನಲ್ಲಿರುವ ಮೈಲಬೇಶ್ವರ (ಸೋಮೇಶ್ವರ ?) ದೇವಾಲಯಕ್ಕೆ ತೇಜಿಮಯ್ಯ , ಬಾಕಣ ದಂಡನಾಯಕ ಹಾಗೂ ಮತ್ತಿತರರು ದಾನನೀಡಿದ್ದು ಮತ್ತು ಸ್ಥಳೀಯ ಗೋಣಸಮುದ್ರ (ಕೆರೆ)ವನ್ನು ದುರಸ್ಥಿಗೊಳಿಸಿದ್ದು ತಿಳಿಸುತ್ತದೆ. ಅದೇ ಇಂದಿನ ಡಂಬಳದ ಕೆರೆಯಾಗಿದೆ.

ದೊಡ್ಡಬಸಪ್ಪ ದೇವಾಲಯದ ಹಿಂಭಾಗದಲ್ಲಿ ಚಾಳುಕ್ಯ ಶೈಲಿಯಲ್ಲಿ ನಿರ್ಮಾಣವಾಗಿರುವ ಸೋಮೇಶ್ವರ ದೇವಾಲಯವು ಕಂಡುಬರುತ್ತದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ವಿಶಾಲವಾದ ತೆರೆದ ಮುಖಮಂಟಪವಿದೆ. ಗರ್ಭಗೃಹವು ಚೌರಸ್ರವಾಗಿದ್ದು ಒಳಭಾಗದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಶಿವಲಿಂಗವನ್ನು ಹೊಂದಿದೆ. ಬಹುಶಃ ದೊಡ್ಡ ಬಸಪ್ಪನ ದೇವಾಲಯದ ಶಾಸನದಲ್ಲಿ ಉಲ್ಲೇಖಗೊಂಡಿರುವ ಮೈಲಭೇಶ್ವರ ಇದೇ ಇರಬೇಕೆಂದು ಈ ದೇವಾಲಯದಲ್ಲಿ ಕಂಡು ಬರುವ ಚಾಳುಕ್ಯರ ಕಾಲದ ಅಳತೆಗೋಲಿನ ಬಗೆಗೆ ಹೇಳುತ್ತ ರಾಜೇಂದ್ರಪ್ಪ ಅವರು "ಮೈಲಭೇಶ್ವರ ದೇವರ ಹೊಲದ ಗಡಿಂಬ" ಎಂಬ ಶಾಸನ ಉಲ್ಲೇಖವನ್ನು ನೀಡುತ್ತಾ 'ಗಡಿಂಬ' ಎಂಬುದು ಆ ಕಾಲದ ಅಳತೆಗೋಲನ್ನು ಸೂಚಿಸುತ್ತದೆಂದು ಅಭಿಪ್ರಾಯಪಡುತ್ತಾರೆ. ಇವರೇ ಹೇಳುವಂತೆ ಚಾಳುಕ್ಯ ಒಂದನೇ ಸೋಮೇಶ್ವರನ ಅರಸಿ ಮೈಳಲದೇವಿಯ ನೆನಪಿನಲ್ಲಿ ಕಟ್ಟಿರಬಹುದಾದ ದೇವಾಲಯವು ಇದಾದ್ದರಿಂದ ಬಹುಶಃ ಮೈಲಬೇಶ್ವರ ದೇವಾಲಯವು ಇದೇ ಎಂಬುದು ಇದೇ ಊರಿನಲ್ಲಿ ದೊರೆತಿರುವ ಹಲವಾರು ಬೇರೆ ಶಾಸನಗಳಿಂದಲೂ ಸ್ಪಷ್ಟವಾಗುತ್ತದೆ; ಅನಂತರ ಈ ದೇವಾಲಯವು ಸೋಮೇಶ್ವರ ದೇವಾಲಯವೆಂದು ಬಳಕೆಗೆ ಬಂದಿರಬಹುದು. ಗರ್ಭಗೃಹದ ದ್ವಾರಬಂದವು ವಿಪುಲವಾದ ಕೆತ್ತನೆಗಳಿಂದ ಅಲಂಕೃತಗೊಂಡಿದೆ. ಮುಂಭಾಗದಲ್ಲಿರುವ ತೆರೆದ ಮಂಟಪಕ್ಕೆ ಮೂರು ಪ್ರವೇಶ ದ್ವಾರಗಳಿವೆ. ಮುಖಮಂಟಪದ ಸುತ್ತಲೂ ಕಕ್ಷಾಸನವಿದ್ದು ಚಾಳುಕ್ಯ ಶೈಲಿಯ ಕಿರು ಕಂಬಗಳಿಂದ ವಿನ್ಯಾಸಗೊಂಡಿದೆ.

ಸೋಮೇಶ್ವರ ದೇವಾಲಯದ ಸಮೀಪ ಅಂದರೆ ಸ್ವಲ್ಪ ಒಳಭಾಗದಲ್ಲಿರುವ ಖಾಸಗಿ ತೋಟದಲ್ಲಿ ಚಾಳುಕ್ಯ ಶೈಲಿಯ ಶಿಥಿಲವಾದ ಕಲ್ಮೇಶ್ವರ ಅಥವಾ ಸಿದ್ದೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ವಿಶಾಲವಾದ ಛಾವಣಿರಹಿತ ನವರಂಗವಿದೆ. ಈ ದೇವಾಲಯದ ಬಹುತೇಕ ಭಾಗಗಳು ಬಿದ್ದುಹೋಗಿದ್ದು ನವರಂಗದ ಕಂಬಗಳು ಚಾಳುಕ್ಯರ ಶೈಲಿಯಲ್ಲಿವೆ. ಇದರ ದ್ವಾರಬಂಧವು ವಿಫುಲವಾದ ಕೆತ್ತನೆಗಳಿಂದ ಅಲಂಕೃತಗೊಂಡಿದೆ. ಇದೇ ದೇವಾಲಯದ ಬಾಗಿಲುವಾಡದ ಎಡಭಾಗದಲ್ಲೆ ಅಸ್ಪಷ್ಟವಾದ ಶಾಸನವಿದ್ದು ಇದೂ ಸಹ ಕ್ರಿ.ಶ. 12 ನೇ ಶತಮಾನಕ್ಕೆ ಸೇರುತ್ತದೆ. ಈ ತೋಟದ ಮುಂಭಾಗದಲ್ಲಿ ಜಪ್ಪಲಬಾವಿ ಇದ್ದು ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದೆ. ವಿಶಾಲವಾದ ನಿವೇಶನದಲ್ಲಿರುವ ಈ ಬಾವಿಯು ಲಕ್ಕುಂಡಿಯಲ್ಲಿರುವ ಚಾಳುಕ್ಯರ ಕಾಲದ ಬಾವಿಯಂತೆ ಪರಿಪೂರ್ಣವಾದ ಕಲ್ಲಿನ ಕಟ್ಟಡವಾಗಿದ್ದು ಅಚ್ಚುಕಟ್ಟಾಗಿ ನಿಯೋಜಿಸಲಾಗಿದೆ. ಸುತ್ತಲೂ ಕಲ್ಲಿನ ಕಿರಿದಾದ ಮಂಟಪಗಳಿವೆ. ಈ ಬಾವಿಯಲ್ಲಿರುವ ಶಾಸನದ ಪ್ರಕಾರ ಯಾವ ತಳಾರನೂ ಈ ತೋಟದ ಉತ್ಪತ್ತಿಯನ್ನೂ ಪಡೆಯಬಾರದೆಂದು ಹೇಳಿದೆ. ಇದು ಕೂಡ ಕ್ರಿ.ಶ. 12 ನೇ ಶತಮಾನದ ಲಿಪಿಯನ್ನು ಹೊಂದಿದೆ.

ಡಂಬಳದಲ್ಲಿ ಮೂಲಸಂಸ್ಥಾನವನ್ನು ಪ್ರಾರಂಭದಿಂದಲೂ ಹೊಂದಿರುವ ಗದಗಿನ ತೋಂಟದಾರ್ಯ ಸಿದ್ಧಲಿಂಗ ಮಠವು ವಿಶಾಲವಾದ ಆವರಣವನ್ನು ಹೊಂದಿದ್ದು ಉತ್ತಮವಾದ ಕಲ್ಲಿನ ಕಟ್ಟಡವನ್ನು ಹೊಂದಿದೆ. ಎತ್ತರವಾದ ಪ್ರವೇಶದ್ವಾರದಲ್ಲಿ ನಗಾರಿಖಾನೆಯನ್ನು ಹೊಂದಿದ್ದು ಮಧ್ಯದಲ್ಲಿ ಚಾಳುಕ್ಯರ ಶೈಲಿಯ ಅನುಕರಣೆಯಲ್ಲಿ ನಿರ್ಮಿತವಾಗಿರುವ ವಿಜಯನಗರೋತ್ತರ ಕಾಲದ ಕಂಬಗಳಿಂದ ಕೂಡಿದ ಚೌಕಾಕಾರವಾದ ಕಟ್ಟಡವಿದೆ. ಮಧ್ಯದಲ್ಲಿ ತೋಂಟದಾರ್ಯ ಪೀಠದ ಒಂಬತ್ತನೇ ಗುರುಗಳಾದ ಅರ್ಧನಾರೀಶ್ವರ ಶಿವಯೋಗಿಗಳ ಗದ್ದುಗೆ ಇದೆ. ಮಠದಲ್ಲಿ ಅನೇಕ ಹಿತ್ತಾಳೆಯ ಪಾತ್ರೆಗಳಿದ್ದು ಅವುಗಳನ್ನು ಕೆಳದಿ ಅರಸ ಬಸವಪ್ಪ ನಾಯಕನು ದಾನವಾಗಿ ನೀಡಿದ ಶಾಸನವಿದೆ. ಇದೇ ಕಾಲದಲ್ಲಿ ಬಸವಪ್ಪ ನಾಯಕನು ತನ್ನ ಪತ್ನಿಯ ಹೆಸರಿನಲ್ಲಿ ಚಿನ್ನದ ಮುಲಾಮಿರುವ ಎತ್ತರವಾದ ನವಿರಾದ ಕಳಶಗಳನ್ನು ನೀಡಿದ್ದು, ಈಗ ಮಠದ ವಶದಲ್ಲಿದೆ. ತೋಂಟದಾರ್ಯ ಮಠದಲ್ಲಿ ಮಾಘ ಬಹುಳ ಹುಣ್ಣಿಮೆಯಲ್ಲಿ ಮೂರು ದಿನಗಳ ಕಾಲ ಭಾರಿ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ. ಡಂಬಳದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಬಸವಣ್ಣ, ಹನುಮಂತ, ವೀರಭದ್ರ, ಮೈಲಾರ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇದೆ.

**ಡೋಣಿ** : ಮುಂಡರಗಿ ತಾಲೂಕಿನ ಊರಾದ ಡೋಣಿಯು (ಜನಸಂಖ್ಯೆ : 6,091) ಮುಂಡರಗಿಯಿಂದ ವಾಯುವ್ಯಕ್ಕೆ 28 ಕಿಮೀ ದೂರದಲ್ಲಿ ಗದಗಿನಿಂದ ಆಗ್ನೇಯಕ್ಕೆ 17 ಕಿಮೀ ದೂರದಲ್ಲಿ ಇದೆ. ಪ್ರಾಚೀನ ಶಾಸನಗಳಲ್ಲಿ 'ದ್ರೋಣಾಪುರ', 'ದ್ರೋಣಿಪುರ', 'ದೋಣಿಕಾ ಗ್ರಾಮ', 'ದೋಣಿ' ಎಂದೆಲ್ಲಾ ಉಲ್ಲೇಖಗೊಂಡಿದ್ದು, ಹಿಂದೆ ಇದು ಮಾಸವಾಡಿ-140 ಕ್ಕೆ ಸೇರಿದ ಅಗ್ರಹಾರವಾಗಿದ್ದು, 60 ಮಹಾಜನರನ್ನು ಹೊಂದಿತ್ತು. ಇಲ್ಲಿಂದ ಈವರೆಗೆ 10 ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಸಿದ್ದಲಿಂಗದೇವರ ಗುಡಿಯ ಮುಂದಿರುವ ಕಲ್ಯಾಣದ ಚಾಲುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1080ರ ಶಾಸನ, ಅರಸನ ಪಿರಿಯರಸಿ ಲಕ್ಷ್ಮಿಮಹಾದೇವಿ ದ್ರೋಣಪುರ (ಡೋಣಿ)ವನ್ನು ಆಳುತ್ತಿದ್ದಾಗ, ಅಗ್ರಹಾರದ 60 ಮಹಾಜನರು, ಸೆಟ್ಟಿಯರೂ ಕೂಡಿ ಸಿದ್ದೇಶ್ವರ ದೇವರಿಗೆ ದಾನಗಳನ್ನು ಬಿಟ್ಟ ವಿಷಯವನ್ನು ತಿಳಿಸುತ್ತದೆ; ಗವರೇಶ್ವರ ದೇವರನ್ನೂ ಉಲ್ಲೇಖಿಸಿದೆ. ಇದೇ ಗುಡಿಯಲ್ಲಿರುವ, ಕ್ರಿ.ಶ. 1094 ರ ಮತ್ತೊಂದು ಶಾಸನ ಸಿದ್ದೇಶ್ವರ ದೇವರಿಗೆ ಬರ್ಬ್ಬರಸನು ಉಗುರ-300 ರೂ ನಗದು ಹಾಗೂ ಸುಂಕವನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಚಾವಡಿ ಬಳಿಯಿರುವ ಕ್ರಿ.ಶ. 1097 ರ ಶಾಸನ ಅರಸನ ರಾಣಿ ಲಕ್ಷ್ಮಿಮಹಾದೇವಿ ಆಳುತ್ತಿದ್ದಾಗ ಸೋವಿಸೆಟ್ಟಿ ಬಸದಿ ನಿರ್ಮಿಸಿ ಭೂಮಿ ಹಾಗೂ ಇತರ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1098ರ ಶಾಸನ ಸಿದ್ದೇಶ್ವರ ದೇವರಿಗೆ, ಊರ ಮಹಾಜನರು ಭೂಮಿಯನ್ನು ದಾನ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. 1227ರ ಶಾಸನ, 770 ವರ್ಷ ಇಲ್ಲದ ಸಿಬಾರವನ್ನು ಮಡವರಿ ಬಸವಯ್ಯ ಮಾಡಿಸಿದನೆಂಬ ಅಪರೂಪದ ಮಾಹಿತಿಯನ್ನು ತಿಳಿಸುತ್ತದೆ. ಹನುಮಂತ ಗುಡಿ ಮುಂದಿನ ಜಿನಪಾದಪೀಠವು ಕ್ರಿ.ಶ. 1269 ರಲ್ಲಿ ತಿಪ್ಪರಾಜನು ಆಳುತ್ತಿದ್ದಾಗ ಶಿಂಕರಣದ ಬೊಪ್ಪಣ್ಣನು ಬಸದಿಗೆ ಪಾರ್ಶ್ವನಾಥ ವಿಗ್ರಹ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಿಂದ ಡೋಣಿಯಲ್ಲಿ ಎರಡು ಬಸದಿಗಳು, ಸಿದ್ದೇಶ್ವರ, ಗವರೇಶ್ವರ, ಮಲ್ಲಿಗೇಶ್ವರ, ತ್ರಿಪುತಿ, ಮೈಲಾರ ಮುಂತಾದ ಗುಡಿಗಳು ಇದ್ದವೆಂಬ ಅಂಶ ಗೊತ್ತಾಗುತ್ತದೆ. ಆದರೆ ಇಂದು ಊರಲ್ಲಿ ಜೈನ ಬಸದಿಗಳಾವುವು ಉಳಿದಿರದೆ, ಜೈನಾವಶೇಷಗಳಷ್ಟೆ ಲಭಿಸುತ್ತವೆ. ಊರ ಹೊರಗೆ ದೂರದಲ್ಲಿರುವ ಡೋಣಿಕಪ್ಪೆ ಗುಡಿ ಬಳಿ ಸಿಬಾರವಿದೆ.

ಊರ ಪ್ರವೇಶದಲ್ಲಿಯೇ ಡೋಣಿ ಹಳ್ಳದ ದಂಡೆ ಮೇಲೆ ಸಿದ್ದೇಶ್ವರ ಗುಡಿಯಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಗೆ ಪಾರ್ಶ್ವದ್ವಾರವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ನಡುವಣ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯ ದುಂಡನೆಯ ಅಡ್ಡ ಕೊಯ್ತದ ಸ್ತಂಭಗಳಾಗಿವೆ. ಇದರ ನಡುವಣ ಛತ್ತಿನಲ್ಲಿ ಸುಂದರವಾದ ಕಮಲವಿದೆ. ಈ ಗುಡಿಯ ಒಳಗೆ-ಹೊರಗೆ, ಶಾಸನಗಳು ಹಾಗೂ ವೀರಗಲ್ಲುಗಳೂ ಇದ್ದು, ಇವುಗಳಲ್ಲಿ ಸುಮಾರು ಕ್ರಿ.ಶ. 12 ನೇ ಶತಮಾನದ ಹುಲಿಬೇಟೆ ವೀರಗಲ್ಲು ಆಕರ್ಷಕವಾಗಿದೆ. ಊರಲ್ಲಿ ಹಲವಾರು ಗುಡಿಗಳಿದ್ದು, ಅವುಗಳಲ್ಲಿ, ಬಸವಣ್ಣ, ವೀರಭದ್ರ, ಹನುಮಂತ, ಮೈಲಾರ, ಲಕ್ಷ್ಮಮ್ಮ, ದ್ಯಾಮವ್ವ ಹಾಗೂ ದುರ್ಗಮ್ಮನ ಗುಡಿಗಳನ್ನು ಹೆಸರಿಸಬಹುದಾಗಿದ್ದು, ಇಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ತಂಬೂರು :** ಕಲಘಟಗಿ ತಾಲೂಕಿನ ತಂಬೂರು (ಜನಸಂಖ್ಯೆ : 1,472) ಕಲಘಟಗಿಯಿಂದ ದಕ್ಷಿಣಕ್ಕೆ 11 ಕಿಮೀ ದೂರದಲ್ಲಿದೆ. ಈ ಊರಿಗೆ ಕಲಘಟಗಿಯಿಂದ ಉತ್ತಮ ರಸ್ತೆಯಿದೆ. ಪ್ರಾಚೀನ ಶಾಸನಗಳಲ್ಲಿ 'ತಮ್ಮ ಊರ' 'ತಮ್ಮಿಯೂರು', ಹಾಗೂ ತಾಂಬ್ರಪುರ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ರಾಷ್ಟ್ರಕೂಟರ ಕಾಲದಷ್ಟು ಪುರಾತನದ್ದಾಗಿದೆ. ಹಿಂದೆ ಹಲಸಿಗೆ-12,000 ಕ್ಕೆ ಸೇರಿದ ತಮ್ಮಿಯೂರು-12 ರ ಆಡಳಿತ ಕೇಂದ್ರವಾಗಿದ್ದು ಇಲ್ಲಿಂದ ಈವರೆಗೆ 15 ಶಾಸನಗಳು ವರದಿಯಾಗಿವೆ. ಈ ಶಾಸನಗಳಲ್ಲಿ ರಾಷ್ಟ್ರಕೂಟ ನಾಲ್ಕನೇಯ ಗೋವಿಂದನ ಕ್ರಿ.ಶ. 932 ರ ಶಾಸನ ಅಣ್ಣಿಗನು ಊರಳಿವಿನಲ್ಲಿ ಹೋರಾಡಿ ಮಡಿದ ವಿಷಯವನ್ನು ತಿಳಿಸಿದರೆ, ಮತ್ತೊಂದು ಶಾಸನದಿಂದ ತಂಬೂರು 1000 ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿತ್ತೆಂಬ ಅಂಶ ಗೊತ್ತಾಗುತ್ತದೆ. ಕ್ರಿ.ಶ. 1120 ರ ಮತ್ತೊಂದು ಶಾಸನ ಕದಂಬ ಗುವಲದೇವನು ಆಳುವಾಗ ಸೇನಿಗಗಾವುಂಡ ಪಣರಾಜ ದೇವಾಲಯ ನಿರ್ಮಿಸಿದ ಅಂಶ ತಿಳಿಸಿದರೆ, ಇನ್ನೊಂದು, ಜಯದೇವನಿಂದ ವಿಷ್ಣು ದೇವಾಲಯ ನಿರ್ಮಾಣ ಹಾಗೂ ಭೂದಾನದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1125 ರ ಮತ್ತೊಂದು ಶಾಸನ ಬರ್ಮಚಯ್ಯನಾಯ್ಕ ರಾಜಮಲ್ಲನಾಯ್ಕರು ತಂಬೂರಿನಲ್ಲಿ ಜಿನಾಲಯ ನಿರ್ಮಿಸಿ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಇಲ್ಲಿನ ವೀರಗಲ್ಲುಗಳಲ್ಲಿ ಕಳಚೂರಿ ಬಿಜ್ಜಳನ ಕ್ರಿ.ಶ. 1136 ರ ವೀರಗಲ್ಲು, ಬಿಜ್ಜಳದೇವನು ಹಾನಗಲ್ ಕೋಟೆಯನ್ನು ಮುತ್ತಿದಾಗ ಕೇತೆಯ ನಾಯಕ ಆನೆಯೊಡನೆ ಕಾದು ಮಡಿದ ವಿಷಯವನ್ನು ಹೇಳುತ್ತಿದ್ದು ಈ ವೀರಗಲ್ಲು ಈಗ ಧಾರವಾಡದಲ್ಲಿದೆ. ಕ್ರಿ.ಶ. 1124 ರ ಶಾಸನ ಬರ್ಮನು ಸತ್ರಕ್ಕೆ ಭೂದಾನ ಮಾಡಿದ ವಿಷಯ ತಿಳಿಸಿದರೆ 1140 ರ ಮತ್ತೊಂದು ಶಾಸನ ಪದ್ಮಾವತಿ ಸತ್ರಕ್ಕೆ ದಾನಕೊಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. 1144 ರ ಒಂದು ಶಾಸನ ಮಾದಿರಾಜಯ್ಯನು ಚೌಡೇಶ್ವರ ಗುಡಿಗೆ ಭೂದಾನ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 1156 ರ ಮತ್ತೊಂದು ಶಾಸನ ಆಚರಸನು ನಾರಾಯಣ ದೇವರಿಗೆ ಸುಂಕ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. 1252 ರ ಇನ್ನೊಂದು ಶಾಸನ ಸಾತೇನಹಳ್ಳಿ ಮುತ್ತಿಗೆಯಲ್ಲಿ ಹಿರಿಯರಾಮನ ನಿಧನವನ್ನು ದಾಖಲಿಸಿದೆ.

ಮೇಲೆ ಚರ್ಚಿಸಿರುವ ಶಾಸನಗಳಲ್ಲಿ ಉಕ್ತವಾಗಿರುವ ದೇವಾಲಯಗಳಲ್ಲಿ ಹೆಚ್ಚಿನವು ಇಂದು ಹಾಳಾಗಿದ್ದು ಉಳಿದಿರುವ ಗುಡಿಗಳನ್ನು ಖಚಿತವಾಗಿ ಗುರುತಿಸಲು ಬಾರದ ಸ್ಥಿತಿಯಾಗಿದೆ. ಊರಲ್ಲಿರುವ ಗುಡಿಗಳಲ್ಲಿ ಪ್ರಾಚೀನವಾದ ಬಸವಣ್ಣ ಗುಡಿಯ ಪುನರ್ರಚನೆಯನ್ನು ಕೇಂದ್ರ ಪುರಾತತ್ವ ಇಲಾಖೆ ಮಾಡುತ್ತಿದೆ. ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ನಂದಿ ಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದ ಬಾಗಿಲವಾಡ ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ಕಪೋತದಲ್ಲಿ ಪಂಚಶಿಖರವಿದ್ದು ಬ್ರಹ್ಮ, ಗಣಪತಿ, ನಟರಾಜ, ಸೂರ್ಯ ಮತ್ತು ವಿಷ್ಣುವಿನ ಕೆತ್ತನೆಯನ್ನು ಹೊಂದಿದೆ. ಗರ್ಭಗೃಹದೊಳಗೆ ಶಿವಲಿಂಗವಿದ್ದು ಹಿಂಬದಿಯಲ್ಲಿ ಕಿರುಗಾತ್ರದ ಸೂರ್ಯ, ವಿಷ್ಣು, ಉಮಾಮಹೇಶ್ವರ, ಗಣಪತಿ, ಭೈರವ ಶಿಲ್ಪಗಳಿವೆ. ನವರಂಗದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ಸ್ತಂಭಗಳಿದ್ದು, ನುಣುಪಾಗಿದ್ದು ಮಿನುಗುತ್ತಿವೆ. ನವರಂಗದಲ್ಲಿ ದ್ವಾರದೆದುರೇ ಮಹಿಷಮರ್ದಿನಿಯ ಸುಂದರ ಶಿಲ್ಪವಿದೆ. ಈ ದೇವಾಲಯವು ಸುಂದರವಾದ ದ್ರಾವಿಡ ಶಿಖರವನ್ನು ಹೊತ್ತು ನಿಂತಿದೆ. ದೇವಾಲಯದ ಆವರಣದಲ್ಲಿ ಗಣಪತಿ, ಹಾಗೂ ಸಪ್ತಮಾತೃಕಾ ವಿಗ್ರಹಗಳಿವೆ.

ಊರಲ್ಲಿರುವ ಮತ್ತೊಂದು ಪ್ರಾಚೀನ ದೇವಾಲಯ ಕಲ್ಮೇಶ್ವರ ಗುಡಿಯಾಗಿದ್ದು ಇದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಇಲ್ಲಿನ ಶಿವಲಿಂಗ, ನಂದಿ, ದ್ವಾರಬಂಧ, ಗಣಪತಿ ಮತ್ತು ವಿಷ್ಣು ಶಿಲ್ಪಗಳು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿವೆ. ಊರಹೊರಗೆ ಗುಡ್ಡದ ಮೇಲೆ ಗರ್ಭಗೃಹ, ಅಂತರಾಳ ಹಾಗೂ ನವರಂಗವಿರುವ ಉತ್ತರ ಕುಮಾರನ ಗುಡಿಯಿದ್ದು, ಇದಕ್ಕೆ ಕದಂಬ ನಾಗರ

ಶಿಖರವಿದೆ. ಈ ಗುಡಿ ಶಿಥಿಲಾವಸ್ಥೆಯಲ್ಲಿದೆ. ಊರ ಬದಿಯಲ್ಲೇ ಹೊಲದಲ್ಲಿ ಬಾಲಬಸಪ್ಪನ ಗುಡಿಯಿದ್ದು ಇಂದು ಪೂರ್ಣ ಹಾಳಾಗಿದೆ. ಅರಣ್ಯ ಇಲಾಖಾ ಕಟ್ಟಡದ ಬಳಿ ನಾಲ್ಕು ಅಡಿ ಎತ್ತರದ ಸುಂದರವಾದ ಸರಸ್ವತಿ ಶಿಲ್ಪವಿದೆ. ಈ ಊರಲ್ಲಿ ಹಲವಾರು ವೀರಗಲ್ಲು, ಮಾಸ್ತಿಕಲ್ಲುಗಳು ಹರಡಿಕೊಂಡಿದ್ದು ಸುಂದರ ಕೆತ್ತನೆಯನ್ನು ಹೊಂದಿವೆ. ಇದರಿಂದ ಈ ಊರಲ್ಲಿ ಕ್ರಿ.ಶ. 12 ನೇ ಶತಮಾನದಲ್ಲಿ ಭಾರೀ ಕಾಳಗವೊಂದು ಜರುಗಿರಬೇಕೆಂದು ಊಹಿಸಬಹುದಾಗಿದೆ. ಶಾಸನಗಳಲ್ಲಿ ಜೈನ ಬಸದಿ ಉಲ್ಲೇಖವಿದ್ದರೂ ಇಂದು ಜೈನ ಬಸದಿ ಯಾವುದು ಉಳಿದು ಬಂದಿಲ್ಲ. ಈ ಊರಿಗೆ ಕೋಟೆ ಹಿಂದೆ ಇತ್ತು; ಈಗ ಪೂರ್ಣ ನಶಿಸಿಹೋಗಿದೆ. ಊರಲ್ಲಿ ದ್ಯಾಮವ್ವ, ದುರ್ಗವ್ವ, ಮೂರು ಮುಖದವ್ವ ಹಾಗೂ ಬಸವಣ್ಣ ದೇವರ ಗುಡಿಗಳಿವೆ. ಇದರ ಜಾತ್ರೆ ಭಾರತ ಹುಣ್ಣಿಮೆಯಲ್ಲಿ ಜರುಗುತ್ತದೆ. ಮಸೀದಿ ಹಾಗು ದರ್ಗಾಗಳೂ ಕೂಡ ಇದೆ.

**ತಡಕೋಡ** : ಧಾರವಾಡ ತಾಲೂಕಿನ ತಡಕೋಡವು (ಜನಸಂಖ್ಯೆ : 5,617) ಧಾರವಾಡದಿಂದ ವಾಯುವ್ಯಕ್ಕೆ 20 ಕಿಮೀ ದೂರದಲ್ಲಿದೆ. ಈ ಊರು ದೇವರ ಹುಬ್ಬಳ್ಳಿಯ ಕ್ರಿ.ಶ. 1216 ರ ಶಾಸನದಲ್ಲಿ 'ತಡಕೋಡು ಪಟ್ಟಣ' ಎಂದೇ ದಾಖಲಾಗಿದ್ದು ಹಲಸಿಗೆ-12,000 ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು, ಸುಮಾರು ಕ್ರಿ.ಶ. 12ನೇಯ ಶತಮಾನದ ಒಂದು ಶಾಸನ ಚಂದ್ರನಾಥ ತೀರ್ಥಂಕರನ ಸ್ತೋತ್ರ ಶಾಸನವಾದರೆ, ಕ್ರಿ.ಶ. 1282 ರ ಮತ್ತೊಂದು ಶಾಸನ ಕನ್ನರದೇವನ ರಾಣಿಯ ಸೂಚನೆಯಂತೆ, ಸರ್ವಾಧಿಕಾರಿ ಮಾಯಿದೇವನಾಯ್ಕನ ಆದೇಶದಂತೆ ಪಟ್ಟಣ (ತಡಕೋಡ)ದ ಬಸದಿಯ ನಿತ್ಯ ಸೇವೆಗೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮೊದಲಿನ ಶಾಸನದಲ್ಲಿ ಲಭಿಸುವ ಸುಳಿವಿಂದ ಇಲ್ಲಿನ ಬಸದಿ ಚಂದ್ರನಾಥ ತೀರ್ಥಂಕರನಿದ್ದಿರಬೇಕೆಂದು ತರ್ಕಿಸಬಹುದಾಗಿದೆ. ಈ ಎರಡೂ ಶಾಸನಗಳು ಊರ ಕೆರೆಯ ಕೋಡಿಯಂಚಲ್ಲಿರುವ ಕಲ್ಮೇಶ್ವರ ಗುಡಿ ಛಾವಣಿಯಲ್ಲಿವೆ. ಮೂಲತಃ ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದ್ದ ಈ ಗುಡಿ ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿದೆ. ಗುಡಿಯ ಭಿತ್ತಿಗಳು ಬಿದ್ದಿದ್ದು ಛಾವಣಿಯಷ್ಟೆ ಉಳಿದಿರುವ ಇದರ ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಇದರ ಬಾಗಿಲವಾಡದ ಪಕ್ಕದಲ್ಲಿ ಚಾಮರ ದಾರಿಗಳು, ದ್ವಾರಪಾಲಕರು ಹಾಗು ರತಿ-ಮನ್ಮಥರನ್ನು ಕೆತ್ತಿದ್ದಾರೆ. ಊರ ನಡುವೆ ಇರುವ ಜೈನ ಬಸದಿಯಲ್ಲಿರುವ ಸುಮಾರು 3.5 ಅಡಿ ಎತ್ತರದ ಸ್ಥಾನಿಕ ತೀರ್ಥಂಕರ ಮೂರ್ತಿಯ ಪಾದಪೀಠದ ಮೇಲೆ ದ್ರಾವಿಡ ಸಂಘದ ವೀರನಂದಿ ಸಿದ್ಧಾಂತ ಚಕ್ರವರ್ತಿಗಳ ಗುಡ್ಡನ ಹರಕೆ, ಈ ಮೂರ್ತಿಯ ಪ್ರತಿಷ್ಠೆ ಎಂದು ಹೇಳುವ ನಾಲ್ಕೈದು ಸಾಲಿನ ಶಾಸನವನ್ನು ಇತ್ತೀಚೆಗೆ ಗಮನಿಸಲಾಗಿದ್ದು ಇದು ಸುಮಾರು ಕ್ರಿ.ಶ. 12 ನೇ ಶತಮಾನದ ಲಿಪಿಯನ್ನು ಹೋಲುತ್ತದೆ. ಅಲ್ಲೇ ಸುಮಾರು 1.5 ಗೇಣು ಎತ್ತರದ ಪದ್ಮಾಸೀನ ತೀರ್ಥಂಕರ ಮೂರ್ತಿಯೂ ಇದೆ. ಈ ಗುಡಿ ಇತ್ತೀಚಿನ ಕಟ್ಟಡವಾಗಿದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಮೈಲಾರ, ವೀರಭದ್ರ, ಹನುಮಂತ, ಕಲ್ಮೇಶ್ವರ, ದ್ಯಾಮವ್ವ ಹಾಗೂ ಇನ್ನಿತರ ಗುಡಿಗಳಿವೆ. ಹನುಮಂತನ ಗುಡಿ ಬಳಿ ಸರಸ್ವತಿ ಹಾಗು ಭೈರವನ ಭಗ್ನ ಮೂರ್ತಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಇವೆ. ನೆರೆಯ ಭಾವಿಹಾಳ (ಬೇಚರಾಕ್)ದಲ್ಲಿ ಜೀರ್ಣೋದ್ಧಾರಗೊಂಡ ಕ್ರಿ.ಶ. 1125 ರ ಮಲ್ಲಿಕಾರ್ಜುನ ದೇವಾಲಯವಿದ್ದು ಸ್ಥಳೀಕರು ಈ ಊರನ್ನು ಹಾಳುಸಿದ್ದಾಪುರ ಎಂದು ಕರೆಯುತ್ತಾರೆ. ಮೂಲತಃ ಇದರ ಪ್ರಾಚೀನ ಹೆಸರು 'ಹಲಗುಂಡಿ' ಎಂದು ಶಾಸನ ತಿಳಿಸುತ್ತದೆ.

**ತಾಮ್ರಗುಂಡಿ:** ಮುಂಡರಗಿ ತಾಲೂಕಿನ ತಾಮ್ರಗುಂಡಿಯು (ಜನಸಂಖ್ಯೆ : 449) ಮುಂಡರಗಿಯಿಂದ ವಾಯುವ್ಯಕ್ಕೆ ಐದು ಕಿಮೀ ದೂರದಲ್ಲಿ, ಚಾರಿತ್ರಿಕ ಮಹತ್ವದ ಬರದೂರಿನಿಂದ ಪಶ್ಚಿಮಕ್ಕೆ ಸುಮಾರು ಎರಡು ಕಿಮೀ ದೂರದಲ್ಲಿದೆ. ಮುಂಡರಗಿ-ಗದಗ ರಸ್ತೆಯಲ್ಲಿರುವ ಈ ಊರು ಪ್ರಾಚೀನ ಶಾಸನಗಳಲ್ಲಿ 'ಕಿಸುಗುಣ್ಡಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು 50 ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿದ್ದು ಮಾಸವಾಡಿ-140 ಕ್ಕೆ ಸೇರಿತ್ತು. ಇಂದು ಊರಿನ ಹಾಳಾದ ನಿವೇಶನದಲ್ಲಿ ಈಶ್ವರ ಗುಡಿ ಮುಂದೆ ಇರುವ ಒಂದನೇಯ ಸೋಮೇಶ್ವರನ ಕ್ರಿ.ಶ. 1054 ರ ಶಾಸನ, ಕಿಸುಗುಣ್ಡಿಯನ್ನಾಳುತ್ತಿದ್ದ ದಾಸಿಮಯ್ಯನು ಮೂಲಸ್ಥಾನ ಕಲಿದೇವರಿಗೆ, ವಿಷ್ಣುದೇವರಿಗೆ ನಂದಾದೀಪಕ್ಕೆಂದೂ, ಸತ್ರಕ್ಕೆಂದೂ, ಮಹಾಜನರ ಕೈಯಲ್ಲಿ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಇದರಿಂದ ಶಾಸನೋಕ್ತ ಮೂಲಸ್ಥಾನದ ಕಲಿದೇವ ಗುಡಿ ಇಂದಿನ ಈಶ್ವರ ಗುಡಿಯೆಂದು ಗುರುತಿಸಬಹುದಾಗಿದೆ. ಕಲ್ಯಾಣದ ಚಾಲುಕ್ಯ ಶೈಲಿಯ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು ಜೀರ್ಣೋದ್ಧಾರಗೊಂಡು ಮೂಲ ಸ್ವರೂಪ ಉಳಿದಿಲ್ಲ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಬಾಗಿಲವಾಡ ಸರಳ ಶಾಖಾಲಂಕಾರವನ್ನು ಹೊಂದಿದೆ. ನವರಂಗದ ನಡುವಣ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯವು. ಇದರ ಶಿಖರ ಹಾಳಾಗಿದೆ. ಗುಡಿ ಪರಿಸರದಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಗಾಣಿಗೇರ ಹೊಲದಲ್ಲಿ ಇಂದು

ಇರುವ ಈ ಗುಡಿಯ ಬಳಿಯಲ್ಲೇ ಪಾಳು ಬಿದ್ದಿರುವ ಹನುಮಂತನ ಗುಡಿ ಇದ್ದು, ಇದೇ ಶಾಸನೋಕ್ತ ವಿಷ್ಣು ಗುಡಿ ಇದ್ದಿರಬೇಕೆಂದು ತೋರುತ್ತದೆ. ಹೊಸ ಊರಿಂದು ಹಳೇ ಊರಿಂದ ಸುಮಾರು ಅರ್ಧ ಕಿಮೀ ದೂರದಲ್ಲಿದೆ.

**ತಿಳವಳ್ಳಿ :** ಹಾನಗಲ್ ತಾಲೂಕಿನ ತಿಳವಳ್ಳಿಯು (ಜನಸಂಖ್ಯೆ : 6,031) ಹಾನಗಲ್‌ನಿಂದ ಆಗ್ನೇಯಕ್ಕೆ ಸುಮಾರು 20 ಕಿಮೀ ದೂರದಲ್ಲಿದೆ. ಈ ಊರಿಗೆ ಹಾವೇರಿ ಹಾಗೂ ಹಂಸಭಾವಿಗಳಿಂದ ಹೋಗಲು ಸಾಕಷ್ಟು ವಾಹನ ಸೌಕರ್ಯವಿದೆ. ಪ್ರಾಚೀನ ಶಾಸನಗಳಲ್ಲಿ 'ಅನಾದಿ ಅಗ್ರಹಾರ ತಿಳವಳ್ಳಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ 32ಶಾಸನಗಳು ವರದಿಯಾಗಿದ್ದು ಇವು ಕಲ್ಯಾಣದ ಚಾಲುಕ್ಯ, ಯಾದವ, ವಿಜಯನಗರ ಹಾಗೂ ನಂತರದ ಕಾಲಕ್ಕೆ ಸೇರಿದ್ದಾಗಿವೆ. ಪ್ರಾಚೀನ ಕಾಲದಲ್ಲಿ ನಾಗರಖಂಡ-70 ಕ್ಕೆ ಸೇರಿದ್ದ ಈ ಊರು ನಾಗರಖಂಡದ ಐದು ಅಗ್ರಹಾರಗಳಲ್ಲಿ ಒಂದಾಗಿದ್ದು 1000 ಮಹಾಜನರನ್ನು ಹೊಂದಿತು. ಕ್ರಿ.ಶ.1072 ರ ಭುವನೈಕಮಲ್ಲನ ಶಾಸನ 'ತಿಳಿವಳಿ'ಯ ಪಿರಿಯ ಕೆರೆಯ ಕಲ್ಕಟ್ಟುಗೆಲಸಕ್ಕೆಂದು ಅಲ್ಲಿನ ಸಕಲ ಸಾಸೀರ್ವರು, ಬಂಟ ಸಾಸೀರ್ವರು ದಾನಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿನ ಶಾಸನಗಳು ಸೋಮಯಾಜಿ, ಗ್ರಾಮದ ದಿಧ್ಯೆವ ಮಾಳೇಶ್ವರ, ಅಭಿನವಶಂಕರ, ಭಂಟೇಶ್ವರ, ಜನಾರ್ಧನ, ಸಾವಂತೇಶ್ವರ, ವೀರನಾರಾಯಣ, ಅಭಿನವ ಸೋಮನಾಥ, ಸಂಕೇಶ್ವರ ಮುಂತಾದ ದೇವಾಲಯಗಳಿಗೆ ಸಮಾಜದ ವಿವಿಧ ವರ್ಗದ ಜನ ನೀಡಿರುವ ನಾನಾ ವಿಧವಾದ ದಾನಗಳ ಬಗ್ಗೆ ಮಾಹಿತಿ ನೀಡುತ್ತವೆ. ಬಂಟ-1000, ಎಲೆಭೋಜಂಗ ಕೊತ್ತಳಿ-504, ಕೊನೆಗಾರರ ಕೊತ್ತಳಿಗಳು ಸುಸಂಘಟಿತರಾಗಿದ್ದ ಅಂಶವನ್ನು ಇಲ್ಲಿನ ನಾಲ್ಕಾರು ಶಾಸನಗಳು ಸೂಚಿಸುತ್ತವೆ.

ಶಾಸನೋಕ್ತ ದೇಗುಲಗಳಲ್ಲಿ ಸಾವಂತೇಶ್ವರ ದೇವಾಲಯವೊಂದೇ ಸುಸ್ಥಿತಿಯಲ್ಲಿದ್ದು ಇಂದು ಶಾಂತೇಶ್ವರ ದೇವಾಲಯವೆಂದು ಪರಿಚಿತವಾಗಿದೆ. ಯಾದವ ಸಿಂಘಣನ ಮಹಾಪಸಾಯ್ತ ಕಲಿದೇವ ಠಕ್ಕುರನು, ವೀರಾವೇಶದಿಂದ ಹೋರಾಡುತ್ತ ಸತ್ತ ತನ್ನ ತಂದೆ ಸಾವಂತ ಠಕ್ಕುರನ ಸ್ಮರಣಾರ್ಥ ಕ್ರಿ.ಶ. 1239 ರಲ್ಲಿ ತಿಳವಳ್ಳಿಯಲ್ಲಿ ಸಾವಂತೇಶ್ವರ ದೇವಾಲಯವನ್ನು ನಿರ್ಮಿಸಿ, ದೇವರ ಸೇವೆಗೆಂದು ಸೂಡಂಗಿ ಗ್ರಾಮವನ್ನು ದಾನ ಕೊಟ್ಟ ಅಂಶವನ್ನು ಗುಡಿಯ ಆವರಣದಲ್ಲೇ ಇರುವ 10 ಅಡಿ ಎತ್ತರದ ಬೃಹತ್ ಶಿಲಾಶಾಸನ ನಿವೇದಿಸುತ್ತದೆ. ದೇವಾಲಯಕ್ಕೆ ಬಿಟ್ಟ ಸೂಡಂಗಿ ಗ್ರಾಮ ಬ್ಯಾಡಗಿ ತಾಲೂಕಿನ ಸೂಡಂಬಿ ಗ್ರಾಮವಾಗಿದೆ.

ಪೂರ್ವಾಭಿಮುಖವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ಸಭಾಮಂಟಪವನ್ನು ಹೊಂದಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದ್ದು ಗರ್ಭಗೃಹದ ಲಲಾಟ ಬಿಂಬದಲ್ಲಿ ಸುಂದರವಾದ ಗಜಲಕ್ಷ್ಮಿ ಕೆತ್ತನೆಯಿದೆ. ಅಂತರಾಳದ ಮುಂದಿರುವ ವಿಶಾಲವಾದ ತೆರೆದ ಸಭಾಮಂಟಪವನ್ನು ಮೂರು ಮಾದರಿಯ 48 ಕಂಬಗಳು ಹೊತ್ತು ನಿಂತಿವೆ. ಸಭಾಮಂಟಪದಲ್ಲಿರುವ ದೇವಕೋಷ್ಠಗಳಲ್ಲಿ ಸಪ್ತಮಾತೃಕೆಯರು, ತಂಬೂರಿಧಾರಿ ಹಾಗೂ ಮಹಿಷ ಮರ್ದಿನಿಯ ಸುಂದರ ಶಿಲ್ಪಗಳಿದ್ದು, ಮತ್ತೊಂದು ಖಾಲಿಯಿದೆ. ಸಭಾ ಮಂಟಪಕ್ಕೆ ಮೂರು ದಿಕ್ಕಿಂದಲೂ ಪ್ರವೇಶವಿದ್ದು ಇದರ ಅಂಚಿನುದ್ದಕ್ಕೂ ಕಕ್ಷಾಸನವಿದೆ. ಸಭಾಮಂಟಪದ ನಡುವಿನ ವೃತ್ತಕಾರದ ಛತ್ತು ಆಕರ್ಷಕವಾದ ಭುವನೇಶ್ವರಿಯನ್ನು ಹೊಂದಿದ್ದು ನಡುವೆ ಇಳಿ ಬಿಟ್ಟ ಕಮಲವಿದ್ದು ಅಷ್ಟದಿಕ್ಪಾಲಕರಿಂದ ಆವೃತ್ತವಾಗಿದೆ. ಈ ಗುಡಿಯ ಗರ್ಭಗೃಹವನ್ನು ಸುಂದರವಾದ ವೇಸರ ಶಿಖರ ಅಲಂಕರಿಸಿದೆ. ಶುಕನಾಸಿಯ ಮುಮ್ಮುಖದಲ್ಲಿ ಸುಂದರವಾದ ನಟರಾಜನ ಕೆತ್ತನೆಯಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ದೇವಕೋಷ್ಠಗಳಿದ್ದು ಇವುಗಳನ್ನು ಸುಂದರವಾದ ಶಿಖರಗಳು ಅಲಂಕರಿಸಿವೆ. ಆದರೆ ಕೋಷ್ಠದಲ್ಲಿದ್ದಿರಬಹುದಾದ ಮೂರ್ತಿಗಳಿಂದು ನಾಪತ್ತೆಯಾಗಿವೆ. ಸಭಾಮಂಟಪದ ಪೂರ್ವ ಮತ್ತು ಉತ್ತರ ದ್ವಾರದ ಕಕ್ಷಾಸನದ ಹೊರಭಿತ್ತಿಯ ಮೇಲೆ ಕಿರುಪ್ರಮಾಣದ ಮಿಥುನ ಶಿಲ್ಪಗಳಿವೆ. ಚೌಕಕಾರದ ಪೀಠಭಾಗದ ಮುಖದ ಮೇಲೆ ಸುಂದರವಾದ ಚಿಕ್ಕಣಿ ಶಿಲ್ಪ ಕೆತ್ತನೆಯಿರುವ ಕಂಬಗಳು ಹೊಳೆಯುತ್ತವೆ. ಹಾನಗಲ್ಲಿನ ತಾರಕೇಶ್ವರ, ಕೋಟಿಪುರದ ಕೋಟೇಶ್ವರ ದೇವಾಲಯಗಳನ್ನು ನೆನಪಿಸುವ ಈ ದೇವಾಲಯ ಯಾದವರ ಕಾಲದ ವಾಸ್ತು ಶಿಲ್ಪ ಅಧ್ಯಯನಕ್ಕೆ ಉತ್ತಮ ಆಕರವಾಗಬಲ್ಲದು.

ಇಲ್ಲಿನ ಚುರ್ಚಿಮಠ ಹಾಗೂ ಸಿದ್ದೇಶ್ವರ ಗುಡಿಗಳೂ ಸುಮಾರು ಕ್ರಿ.ಶ. 11-12 ನೇ ಶತಮಾನದ ಗುಡಿಗಳಾಗಿದ್ದು ಪಾಳು ಬಿದ್ದಿವೆ. ಚುರ್ಚಿ ಮಠವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ನಂದಿಮಂಟಪಗಳನ್ನು ಹೊಂದಿತ್ತೆಂದು ತೋರುವ ಆಧಾರಗಳು ಚದುರಿಕೊಂಡಿವೆ. ಇಲ್ಲಿರುವ ಸಪ್ತಮಾತೃಕೆಯರು, ಮಹಿಷಮರ್ದಿನಿ, ಗಣಪತಿ ಹಾಗೂ ವೀರಭದ್ರ ಶಿಲ್ಪಗಳು ಉಲ್ಲೇಖಾರ್ಹ. ಈ ಗುಡಿಯ ಬಳಿಯಲ್ಲೇ ಇರುವ ಸಿದ್ದನಹೊಂಡದ ಪಕ್ಕದಲ್ಲಿ ಸಿದ್ದೇಶ್ವರ ಗುಡಿಯಿದ್ದು, ಇಂದು ಇದರ ಗರ್ಭಗೃಹವಷ್ಟೆ ಉಳಿದಿದೆ. ಈ ಗುಡಿಯಲ್ಲಿಂದು ಶಿವಲಿಂಗವಿದ್ದರೂ ಪಂಚಶಾಖಾಲಂಕೃತವಾದ ಈ ಗುಡಿಯ ಬಾಗಿಲವಾಡದ ಲಲಾಟದಲ್ಲಿರುವ ಮುಕ್ಕೊಡೆ ಹಾಗೂ

ಜಿನನ ಮಸುಕಾದ ಕೆತ್ತನೆಗಳು ಹಿಂದೆ ಇದೊಂದು ಜೈನ ಬಸದಿಯಾಗಿತ್ತೆಂಬ ಅಂಶವನ್ನು ಸೂಚಿಸುತ್ತವೆ. ಕ್ರಿ.ಶ. 1102 ರ ಜೈನ ನಿಷದಿ ಶಾಸನವೊಂದು ಇಲ್ಲಿ ದೊರೆತಿದೆ. ಕಾಳಿಕಾದೇವಿ ಗುಡಿಯಲ್ಲಿ ಮೂರು ಅಡಿ ಎತ್ತರದ ಮಹಿಷಾಸುರಮರ್ದಿನಿ ಶಿಲ್ಪ, ಮತ್ತು ಸಪ್ತಮಾತೃಕೆಯರ ಶಿಲ್ಪಗಳಿವೆ. ನಾರಾಯಣದೇವರ ಗುಡಿಯಲ್ಲಿ ಒಂದಡಿ ಎತ್ತರದ ನಾರಾಯಣ ಮೂರ್ತಿಯನ್ನಿಟ್ಟು ಆರಾಧಿಸುತ್ತಾರೆ. ನರಸಿಂಹನ ಗುಡಿಯಲ್ಲಿ ಕ್ರಿ.ಶ. 12ನೇ ಶತಮಾನದ ನರಸಿಂಹನ ಮೂರ್ತಿಯಿದ್ದು ಗುಡಿಯನ್ನು ಪೂರ್ಣ ಜೀರ್ಣೋದ್ಧಾರ ಮಾಡಿದ್ದಾರೆ. ಈ ಗುಡಿಯ ಆವರಣದಲ್ಲಿ ಕ್ರಿ.ಶ. 12 ನೇ ಶತಮಾನದ ಮುಕ್ಕಾಗಿರುವ ವಿಷ್ಣು, ಗಣಪತಿ, ಮಕರತೋರಣ ಮುಂತಾದ ಶಿಲ್ಪಗಳಿದ್ದು ಇವುಗಳ ನಡುವೆ ಭಗ್ನ ದ್ವಿಬಾಹು ಗಣಪತಿಯಿರುವುದು ಗಮನಿಸಬೇಕಾದ ಅಂಶ. ಕೆರೆಯಂಗಳದಲ್ಲಿ ಕೋಣನ ತಲೆ ಶಿಲ್ಪವಿದೆ. ಗಾಣಿಗಗೇರಿಯಲ್ಲಿರುವ ಮೈಲಾರಲಿಂಗನ ಗುಡಿಯಲ್ಲಿ ಗರ್ಭಗೃಹ ಅಂತರಾಳವಷ್ಟೇ ಉಳಿದಿದ್ದು ಇಲ್ಲಿರುವ ಮೈಲಾರಲಿಂಗನ ಶಿಲ್ಪದ ರುಂಡವು ಛೇದವಾಗಿದೆ. ಆಲಿಂಗಾಸನದಲ್ಲಿ ನಿಂತಿರುವ ಮೈಲಾರ-ಮಾಳಚಿಯರ (ಮೂರು ಅಡಿ ಎತ್ತರ) ಮೂರ್ತಿ ಬಹಳ ಸುಂದರವಾಗಿದ್ದು ಈ ಶಿಲ್ಪಗಳ ಪ್ರಾಚೀನತೆಯನ್ನು ಕ್ರಿ.ಶ. 12 ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಶಾಸನೋಕ್ತ ಬಂಟೇಶ್ವರ ಗುಡಿ ಇದೆ ಇದ್ದಿರಬೇಕೆಂದು ಅಭಿಪ್ರಾಯಪಡಬಹುದಾಗಿದೆ. ಈ ಗುಡಿಯ ಮುಂದಿರುವ ಸಿಬಾರಕಟ್ಟೆಗೆ ಮಾಸ್ತಿಕಲ್ಲೊಂದನ್ನು ಸೇರಿಸಿದ್ದಾರೆ. ಶಾಸನ ಹೊಂದಿರುವ ಈ ಮಾಸ್ತಿಕಲ್ಲು ಬಹಳ ವಿಶಿಷ್ಟವಾದುದಾಗಿದೆ. ಇದರ ಬಳಿಯೇ ಕುದುರೆ ಸವಾರ, ಛತ್ರಿ, ಚಾಮರ ಹಿಡಿದ ಸೇವಕರ ಕೆತ್ತನೆಯಿರುವ ಶಿಲ್ಪವಿದ್ದು ಇದು ಕುಮಾರರಾಮನ ಶಿಲ್ಪವಿರಬಹುದೆಂದು ತೋರುತ್ತದೆ. ಇವಲ್ಲದೆ ಊರಲ್ಲಿ ಪೇಟೆ ಹನುಮಂತನಗುಡಿ, ಬಸವನಗುಡಿ, ದ್ಯಾಮವ್ವನ ಗುಡಿ ಹಾಗೂ ವೀರಭದ್ರ ಗುಡಿಗಳಿವೆ.

ಇಲ್ಲಿ 7-8 ವೀರಗಲ್ಲುಗಳಿದ್ದು ಅವುಗಳಲ್ಲಿ ಬಸವಣ್ಣನ ಗುಡಿ ಮುಂದಿರುವ ಕ್ರಿ.ಶ. 1449 ರ ವೀರಗಲ್ಲೊಂದು ಆಕರ್ಷಕವಾಗಿದ್ದು, ಬೈರಗೌಡನ ವೀರಮರಣವನ್ನು ಚಿತ್ರಿಸುತ್ತದೆ. ಶಾಸನ ತ್ರುಟಿತವಾಗಿರುವ ಈ ವೀರಗಲ್ಲಿನ ಶಿಲ್ಪಕೆತ್ತನೆಯ ನೆರವಿನಿಂದ, ಬೈರಗೌಡನೊಂದಿಗೆ ಅವನ ಮಡದಿಯೂ ಸತ್ತಿರುವ ಅಂಶ ವೇದ್ಯವಾಗುತ್ತದೆ. ನರಸಿಂಹನ ಹೊಂಡದ ಬಲಭಾಗಕ್ಕಿರುವ ಮಸೀದಿ ಅಲಿ ಅದಿಲ್‌ಷಾನ ಕಾಲದ್ದೆಂದು ಸಾಂಪ್ರದಾಯಿಕ ಅಭಿಪ್ರಾಯವಿದೆ. ಇದರ ಜೊತೆಗೆ ಊರಲ್ಲಿ ಶಹಬುದ್ದಿನ್ ಷಾ ವಲಿ ದರ್ಗ, ರಾಜಾಭಾಗಸವಾರ ದರ್ಗಾ, ಹಯಾತ್‌ಮೀರ್ ಷಾ ಹಾಗೂ ಚಮನ್ ಷಾ ವಲಿ ದರ್ಗಾಗಳಿವೆ. ಉರುಸು ದಸ್ತಗಿರ್ ತಿಂಗಳಲ್ಲಿ ಜರುಗುತ್ತದೆ. ಊರ ಹೊರಗಿರುವ ಕಲ್ಯಾಣಮಠದಲ್ಲಿ ಶ್ರೀ ಎಡೆಯೂರು ತೋಂಟದ ಸಿದ್ದಲಿಂಗಸ್ವಾಮಿಗಳ ಶಿಷ್ಯವರ್ಗಕ್ಕೆ ಸೇರಿದ ಇಬ್ಬರ ಸಮಾಧಿಗಳಿವೆ.

**ದೇವಗಿರಿ** : ಹಾವೇರಿ ತಾಲೂಕಿನ ದೇವಗಿರಿಯು (ಜನಸಂಖ್ಯೆ : 7,470) ಹಾವೇರಿಯಿಂದ ವಾಯುವ್ಯಕ್ಕೆ 11 ಕಿಮೀ ದೂರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ ದೇವಿಂಗೆರೆ, ದೇವಗೇರಿ, ದೇವಗಿರಿ ಎಂದು ಉಲ್ಲೇಖಗೊಂಡಿದ್ದು ಕದಂಬರ ಶಾಖೆಯೊಂದು ಇಲ್ಲಿಂದಲೇ ಆಳುತ್ತಿತ್ತೆಂದೂ, ದೇವಗಿರಿಯು ಕದಂಬರ ಕಾಲದಲ್ಲಿ 'ತ್ರಿಪರ್ವತ'ವೆಂದೇ ಕರೆಯಲ್ಪಡುತ್ತಿತ್ತೆಂಬ ಅಭಿಪ್ರಾಯವಿದೆ. ಕದಂಬರ (ಬನವಾಸಿ) ಮೂರು ತಾಮ್ರ ಪಟಗಳು ದೇವಗಿರಿಯಲ್ಲೇ ಲಭಿಸಿರುವುದೂ ಇದನ್ನು ಪುಷ್ಟೀಕರಿಸುತ್ತದೆ. ಇವುಗಳಲ್ಲಿ ಎರಡು ವಿಜಯಶ್ರೀ ಮೃಗೇಶವರ್ಮ (455 ಕ್ರಿ.ಶ)ನ ಕಾಲಕ್ಕೂ ಉಳಿದೊಂದು ಒಂದನೇ ಕೃಷ್ಣವರ್ಮ (ಕ್ರಿ.ಶ.430-460) ನ ಮಗ ಯುವರಾಜ ದೇವವರ್ಮನ ಕಾಲಕ್ಕೂ ಸೇರಿವೆ. ಇವು ಜಿನ ಶಾಸನಗಳಾಗಿದ್ದು ಇದರಲ್ಲಿ ಒಂದು ದೇವವರ್ಮನು ಪರ್ವತದ ಅರ್ಹತ್‌ಭಗವತ ಚೈತ್ಯಾಲಯದ ಪೂಜೆ ದುರಸ್ತಿಗೆಂದು ಯುವರಾಜನು ಭೂಮಿಯನ್ನು ಕೊಟ್ಟಿದ್ದನ್ನು ತಿಳಿಸುತ್ತದೆ; ಮೃಗೇಶವರ್ಮನು ಬೃಹತ್ ಪೆರಲೂರ ಅರ್ಹತ್ (ಜಿನೇಂದ್ರ)ಗೆ ಭೂದಾನ ಮಾಡಿದ್ದನ್ನು ಇನ್ನೊಂದು ಹೇಳುತ್ತದೆ. ಕಾಳವಂಗ ಗ್ರಾಮವನ್ನು ಮೂರು ಭಾಗ ಮಾಡಿ ಜಿನೇಂದ್ರ, ಶ್ವೇತಪಂಥ ಮತ್ತು ನಿಗ್ರಂಥಿಗಳಿಗೆ ದಾನ ಕೊಟ್ಟ ಅಂಶವನ್ನು ಮೂರನೇಯ ಪಟ ತಿಳಿಸುತ್ತದೆ. ಕ್ರಿ.ಶ. ಒಂಭತ್ತನೇ ಶತಮಾನದ ರಾಷ್ಟ್ರಕೂಟರ ಶಿಲಾಶಾಸನವೊಂದು ಗೋವಿಂದಬ್ಬೆಯು ಪರಲೂರನ್ನು ಆಳುತ್ತಿದ್ದಳೆಂದು ತಿಳಿಸುತ್ತದೆ. ಕದಂಬ ಶಾಸನದ ಬೃಹತ ಪೆರಲೂರಿನೊಂದಿಗೆ ಇದನ್ನ ಹೋಲಿಸುವ ಅಗತ್ಯವಿದೆ. ಮೇಲಾಗಿ ಊರ ಪೂರ್ವಕ್ಕೆ ಪುರ ವೆಂಬ ಊರು ಹಿಂದೆ ಇತ್ತೆಂದು ಹೇಳುವ ಪುರದಮ್ಮನಕಲ್ಲು ಇರುವ ಸ್ಥಳದಲ್ಲಿ ಪಾರ್ಶ್ವನಾಥನ ಮುಕ್ಕಾದ ಮೂರ್ತಿಯಿದೆ. ಅದೇ ರೀತಿ ಊರಲ್ಲಿರುವ ಮಸೀದಿಯ ಹಿಂಬದಿಯಲ್ಲಿ ಹಾಗೂ ಖಾಸಗಿ ಹೊಲದಲ್ಲಿ ಮುಕ್ಕಾದ ಪದ್ಮಾಸೀನ ತೀರ್ಥಂಕರ ಮೂರ್ತಿಗಳಿವೆಯಾದರೂ ಜೈನಬಸದಿಗಳಾವುದು ಉಳಿದಿಲ್ಲ. ಇವುಗಳ ಜೊತೆಗೆ ಊರಲ್ಲಿ ಸುಮಾರು 20 ಶಿಲಾಶಾಸನಗಳು ಹರಡಿಕೊಂಡಿವೆ. ಕ್ರಿ.ಶ. 600 ರ ಶಾಸನ ಮಹಾಸಾಮಂತ ಬನವಾಸಿ-12000 ಆಳುತ್ತಿದ್ದನೆಂದು ಹೇಳಿದರೆ ಬಾದಾಮಿ ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯನ ಕ್ರಿ.ಶ ಏಳನೇ ಶತಮಾನದ ಶಾಸನವೊಂದು ಕಲಿಸಿಂಧನ ಬೇಡಿಕೆಯಂತೆ ಭೂದಾನ ಮಾಡಿದನ್ನು ತಿಳಿಸುತ್ತದೆ. ಕ್ರಿ.ಶ. 7-8 ನೇ ಶತಮಾನದ ಶಾಸನ ಅಮರಕೀರ್ತಿ ಎಂಬಾತ ಗೋಸಾಸ (ಗೋಸಹಸ್ರ) ಕೊಟ್ಟಿದ್ದನ್ನೂ, ಮುಂದೆ ಒಂದನೇ ಅಮೋಘವರ್ಷ ನೃಪತುಂಗನ ಕಾಲದಲ್ಲಿ,

ಮಾರಮ್ಮ ಗೋಸಾಸಿ ಇಳಿಸಿ ಮೇಂಟಿಯನ್ನು ನಿಲ್ಲಿಸಿದ್ದನ್ನೂ ತಿಳಿಸುತ್ತದೆ. ಈ ಕಾಲದ ಶಾಸನಗಳಿಂದ ದೇವಗಿರಿ ಬಾಸವೂರು-140 ಕ್ಕೆ ಸೇರಿದ್ದು ರಾಜಧಾನಿ ಪಟ್ಟಣವಾಗಿದ್ದಂತೆ ತೋರುತ್ತದೆ. ಇಮ್ಮಡಿ ಸೋಮೇಶ್ವರನ ಕ್ರಿ.ಶ 1065ರ ಶಾಸನದಿಂದ ಬಾಸವೂರು-140ರ ಮನ್ನೆಯರಸರ ಮಹಾಸಾಮಂತ ರಾಜಾದಿತ್ಯರಸನು ದೇವಂಗೇರಿಯ ಗೋವಿಂದೇಶ್ವರ ಮತ್ತು ಚಟ್ಟೇಶ್ವರದೇವರಿಗೆ ಒಟ್ಟು 18 ಮತ್ತರು ಭೂಮಿಯನ್ನು ದಾನ ಮಾಡಿದ್ದನ್ನು ದಾಖಲಿಸಿದೆ. ಸೋಮೇಶ್ವರನ ಕ್ರಿ.ಶ. 1075ರ ಶಾಸನ ದೇವಂಗೇರಿಯ ಕಂಕಾಳೇಶ್ವರ ದೇವರಿಗೆ ಹಲವಾರು ಅಧಿಕಾರಿಗಳು ತೆರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಐದು ಊರುಗಳ ಪ್ರಭು ತ್ರಿಭುವನಸಿಂಗಿಪಂಡಿತ ತ್ರಿಭುವನೇಶ್ವರ ಗುಡಿ ಮತ್ತು ಕೆರೆಗಳನ್ನು ಕಟ್ಟಿಸಿ ಭೂದಾನ ಮಾಡಿದ್ದನ್ನು ಆರ್ಮಡಿ ವಿಕ್ರಮಾದಿತ್ಯನ ಕ್ರಿ.ಶ. 1102ನ ಶಾಸನ ಹೇಳುತ್ತದೆ. ಮುಮ್ಮಡಿ ಸೋಮೇಶ್ವರನ ಕ್ರಿ.ಶ. 1134ರ ಶಾಸನ ಕಂಕಳೇಶ್ವರ ದೇವರಿಗೆ ಬಿಟ್ಟ ದಾನದ ಬಗ್ಗೆ ಹೇಳಿದರೆ, ಬಿಜ್ಜಳನ ಕ್ರಿ.ಶ. 1161ರ ಶಾಸನ ಗ್ರಾಮೇಶ್ವರ ದೇವರಿಗೆ ಎಲೆಯ ಭೂಜಂಗ 504 ಮತ್ತು ತೋಟಿಗರು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1539ರ ಶಾಸನದಿಂದ ದೇವಗಿರಿಯ ದಂಡಿಗೆ ಮಲ್ಲಯ್ಯನ ಮಗ ವೀರಯ್ಯ ದೇವಿ ಗುಡಿಯ ಬಾಗಿಲವಾಡ ಮಾಡಿಸಿದ ವಿಷಯ ತಿಳಿಯುತ್ತದೆ. ಚಾವಡಿ ಮುಂದಿರುವ ಹುಲಿಬೇಟೆ ವೀರಗಲ್ಲು ಉಲ್ಲೇಖಾರ್ಹವಾದುದಾಗಿದೆ. ಇಲ್ಲಿನ ಶಾಸನಗಳು ಚೈತ್ಯಾಲಯ, ಕಂಕಾಳೇಶ್ವರ, ಗೋವಿಂದೇಶ್ವರ, ಚಟ್ಟೇಶ್ವರ, ಗ್ರಾಮೇಶ್ವರ, ತ್ರಿಭುವನೇಶ್ವರ ಮುಂತಾದ ಗುಡಿಗಳನ್ನು ಉಲ್ಲೇಖಿಸಿವೆಯಾದರೂ ಎಲ್ಲವೂ ಯಥಾ ರೀತಿ ಉಳಿದಿಲ್ಲ. ಇಲ್ಲಿನ ವಿಶೇಷ ಆಕರ್ಷಣೆ ಒಂದೇ ಪ್ರಾಕಾರದಲ್ಲಿರುವ ಬಸವಣ್ಣಗುಡಿ ಹಾಗೂ ಈಶ್ವರ ಗುಡಿಗಳಾಗಿದ್ದು ಗರ್ಭಗೃಹ ತೆರೆದ ಅರ್ಧಮಂಟಪ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದೆ. ಗರ್ಭಗೃಹದ ಹಾಗೂ ಅಂತರಾಳದ ಬಾಗಿಲವಾಡಗಳು ತ್ರಿಶಾಖಾಲಂಕಾರವನ್ನು ಹೊಂದಿದ್ದರೆ ನವರಂಗದ ಕಂಬಗಳು ವೃತ್ತಾಕಾರದ್ದಾಗಿದ್ದು ಛತ್ತಿನಲ್ಲಿ ಕಮಲ ಇಳಿಬಿದ್ದಿದೆ. ಪೂರ್ವದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಮಕರತೋರಣವನ್ನು ಹೊಸ್ತಿಲಿಗೆ ಹೊಂದಿಸಿದ್ದಾರೆ. ಇದರ ಇಕ್ಕೆಲದಲ್ಲಿರುವ ದ್ವಾರಪಾಲಕರ ಶಿಲ್ಪಗಳು ಬೃಹತ್ತಾಗಿದ್ದು ಸುಂದರವಾಗಿವೆ. ಗುಡಿಯ ಹೊರಭಿತ್ತಿ ಸರಳವಾಗಿದ್ದು ನಡುವೆ ವಜ್ರಾಲಂಕೃತ ಪಟ್ಟಿಕೆಯಿದೆ. ಈ ಗುಡಿಯ ಗರ್ಭಗೃಹದ ಶಿಖರ ಕದಂಬನಾಗರ ಶೈಲಿಯ ಸರಳ ರಚನೆಯಾಗಿದೆ. ಈ ಗುಡಿಗೆ ಎದುರಾಗಿರುವ ಬಸವಣ್ಣನ ಗುಡಿಯೂ ಮೂಲತಃ ಈಶ್ವರನ ನಂದಿಯಾಗಿದ್ದು ಇದಕ್ಕೆ ನಂತರದಲ್ಲಿ ಗುಡಿ ಕಟ್ಟಿದ್ದಾರೆ. ಪೇಶ್ವೆಗಳು ಈ ಗುಡಿಗೆ ಬೆಳ್ಳಿಯ ಆಭರಣಗಳನ್ನು ದೇಣಿಗೆ ಕೊಟ್ಟಿದ್ದಾರೆ. ಈ ಗುಡಿಯ ಆವರಣದಲ್ಲಿರುವ ಶಾಸನಗಳೂ ಇದು ಯಾವ ಗುಡಿಯೆಂದು ಖಚಿತವಾಗಿ ಗುರುತಿಸುವಲ್ಲಿ ನೆರವಾಗವು. ಆದರೂ ಸಾಂದರ್ಭಿಕವಾಗಿ ಶಾಸನೋಕ್ತ ತ್ರಿಭುವನೇಶ್ವರ ಗುಡಿ ಇದೇ ಇರಬಹುದೆಂದು ಅಭಿಪ್ರಾಯಪಡಬಹುದಾಗಿದೆ.

ಹೊಸಪೇಟೆ ಓಣಿಯಲ್ಲಿರುವ ನರಸಿಂಹನ ಗುಡಿ ವಿಶಾಲವಾದ ಪ್ರಾಕಾರದೊಳಗೆ ಎತ್ತರವಾದ ಜಗತಿ ಮೇಲೆ ಗರ್ಭಗೃಹವನ್ನಷ್ಟೇ ಹೊಂದಿದ್ದು, ಒಳಗೆ ಸುಮಾರು ಎರಡಡಿ ಎತ್ತರದ ಲಕ್ಷ್ಮೀನರಸಿಂಹನ ಸುಂದರ ಶಿಲ್ಪವಿದೆ. ಈ ಗುಡಿ ಪ್ರಾಚೀನ ಎಂದೆನಿಸಿದರು ನಂತರ ಪುನರ್ನಿರ್ಮಾಣವಾಗಿದೆ. ಪ್ರಾಕಾರದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಆಕರ್ಷಕವಾಗಿದೆ. ಊರ ನಡುವೆ ಇರುವ ಪೇಟೆ ಹನುಮಂತನ ಗುಡಿಯನ್ನು ಸವಣೂರು ನವಾಬನ ಆಸ್ಥಾನದಲ್ಲಿದ್ದ ಬ್ರಾಹ್ಮಣ ದಿವಾನ ಕಟ್ಟಿಸಿದನೆಂಬ ಅಭಿಪ್ರಾಯವಿದೆ. ಸುಮಾರು ಎಂಟಡಿ ಎತ್ತರದ ಪ್ರಾಣದೇವರ ಶಿಲ್ಪ ಬಹಳ ಆಕರ್ಷಕವಾಗಿದೆ. ಈ ದೇವಾಲಯದ ಸಭಾಮಂಟಪದ ಮರದ ಸ್ತಂಭಗಳು ಚಿತ್ತಾಕರ್ಷಕವಾಗಿವೆ.

ಶಾಸನೋಕ್ತ ಗ್ರಾಮೇಶ್ವರ ಗುಡಿ ಇಂದಿನ ಎಲ್ಲಮ್ಮನ ಗುಡಿಯಿದ್ದಿರಬೇಕೆಂದು ತೋರುತ್ತದೆ. ವಿಶಾಲವಾದ ಪ್ರಾಕಾರದೊಳಗೆ ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿರುವ ಈ ಗುಡಿ ಮಾರ್ಪಾಡಿನೊಂದಿಗೆ ದುರಸ್ತಿಗೊಂಡು ನಿಂತಿದೆ. ಈ ದೇವಿಯ ಜಾತ್ರೆ ಹೊಸ್ತಿಲ ಹುಣ್ಣಿಮೆಯಂದು ಜರುಗುತ್ತದೆ. ಅಂಬಿಗೇರ ಓಣಿಯಲ್ಲಿರುವ ಈ ಗುಡಿಗೆ ಹೆಚ್ಚಾಗಿ ಅಂಬಿಗೇರ್ ನಡೆದುಕೊಳ್ಳುತ್ತಾರೆ. ಈ ಗುಡಿಯ ಹೊರಗೆ ಬಲಭಾಗದಲ್ಲಿ ಸಿಂಹಾಸನಕಟ್ಟೆ ಅಥವಾ ಉಯ್ಯಾಲೆ ಮಂಟಪವಿದೆ. ಜಾತ್ರೆ ಉತ್ಸವ ಸಂದರ್ಭದಲ್ಲಿ ದೇವಿಯನ್ನಿಲ್ಲಿ ಕೂರಿಸುವ ಸಂಪ್ರದಾಯವಿದೆ. ಈ ಗುಡಿಯ ಮುಂಭಾಗದಲ್ಲಿ ಬೃಹತ್ತಾದ ಮಕರತೋರಣ ಶಿಲ್ಪವಿದ್ದು ನಡುವೆ ಬ್ರಹ್ಮ ಮಹೇಶ್ವರ, ವಿಷ್ಣುಮೂರ್ತಿಗಳನ್ನು ಕೆತ್ತಿದ್ದಾರೆ.

ಊರ ಬಳಿಯಿರುವ ಮಲ್ಲೇಶನ ಗಿರಿಯ ಮೇಲೆ ಮಲ್ಲಿಕಾರ್ಜುನ ಗುಡಿಯಿದೆ. ಗರ್ಭಗೃಹ, ಅರ್ಧಮಂಟಪಗಳನ್ನು ಹೊಂದಿದ್ದ ಈ ಗುಡಿಯ ದುರಸ್ತಿ ಕಾರ್ಯ ನಡೆದಿದೆ. ಊರಿಂದ ಉತ್ತರಕ್ಕೆ ಗೌರಿಹಳ್ಳದ ದಂಡೆ ಮೇಲೆ ಆರೆಶಂಕರಗುಡಿಯಿದ್ದು ಇದೊಂದು ಸರಳ ರಚನೆಯಾಗಿದೆ.

ಇವಷ್ಟೇ ಅಲ್ಲದೆ ವಡ್ಡರ ಓಣಿಯಲ್ಲಿ ದುರ್ಗ್ಗವ್ವ, ಕುರುಬರ ಓಣಿಯಲ್ಲಿ, ಬೀರಪ್ಪ, ಪುರದವರ ಓಣಿಯಲ್ಲಿ ಮೈಲಾರ, ದ್ಯಾಮವ್ವ, ಕೆಂಚವ್ವನ ಓಣಿಯಲ್ಲಿ ಕೆಂಚವ್ವ, ಚನ್ನಾಪುರ ಓಣಿಯ ರಾಮಲಿಂಗ, ಪೇಟೆಯಲ್ಲಿ ಬಸವಣ್ಣ ಮತ್ತು ಗಣಪತಿ, ಅಗಸೆ ಹನುಮಪ್ಪ, ದ್ಯಾಮವ್ವನ ಚೌಕ, ಪರಿಶಿಷ್ಟ ಜಾತಿಯವರ ಓಣಿಯಲ್ಲಿ ಮಾಯವ್ವನ ಗುಡಿಗಳಿದ್ದು ಬನದ ಹುಣ್ಣಿಮೆಯಂದು ದುರ್ಗವ್ವ, ಬನಶಂಕರಿ, ಭಾರತ ಹುಣ್ಣಿಮೆಯಂದು ಗಿರಿಮಲ್ಲೇಶ, ಬಸವಜಯಂತಿಯಂದು ಬಸವಣ್ಣನ ಜಾತ್ರೆಗಳು ನಡೆಯುತ್ತವೆ. ಪುಟ್ಟರಾಜಗವಾಯಿಗಳ ಹುಟ್ಟೂರು ದೇವಗಿರಿ.

ಊರಲ್ಲಿ ಅಗಸಿ ಬಳಿ ದೊಡ್ಡ ಮಸೀದಿ ಇದೆ. ಅಹಲ್ ಸುನ್ನಮಲ್ ಜಮಾಅತ್ ಜಾಮಿಯಾ ಮಸೀದಿ ಹಾಗೂ ಇಬ್ಬರು ಮುಸ್ಲಿಂ ಸಂತ ಪೀರರ ದರ್ಗಾಗಳಿದ್ದು ದಸ್ತಗಿರ್ ತಿಂಗಳಲ್ಲಿ ಉರುಸು ನಡೆಯುತ್ತದೆ.

**ದೇವಿಹೊಸೂರು :** ಹಾವೇರಿ ತಾಲೂಕಿನ ದೇವೀಹೊಸೂರು (ಜನಸಂಖ್ಯೆ : 7,309) ಹಾವೇರಿಯಿಂದ ಪಶ್ಚಿಮಕ್ಕೆ ಸುಮಾರು ಎಂಟು ಕಿಮೀ ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ ಜನಮೇಜಯದತ್ತಿ, ಸರ್ವನಮಸ್ಯದ ಅಗ್ರಹಾರ 'ದೆಯ್ವದ ಪೊಸವುರು' 'ದೇವಿಯಹೊಸವುರು' ಎಂದೇ ಉಲ್ಲೇಖಗೊಂಡಿರುವ ಇದು ಬಾಸವೂರು-140 ಕ್ಕೆ ಸೇರಿದ್ದು, 1000 ಮಹಾಜನರಿದ್ದ ಅಗ್ರಹಾರವಾಗಿತ್ತು. ಇಲ್ಲಿಂದ 10 ಶಾಸನಗಳು ವರದಿಯಾಗಿದ್ದು ಇವು ಕಾಲದ ದೃಷ್ಟಿಯಿಂದ ರಾಷ್ಟ್ರಕೂಟರಿಂದ ವಿಜಯನಗರದರಸರ ಕಾಲದವರೆಗೆ ವ್ಯಾಪಿಸುತ್ತವೆ. ರಾಷ್ಟ್ರಕೂಟರ ಕಾಲದ ಗೊಸಾಸ ಕಲ್ಲುಗಳನ್ನು ಊರಲ್ಲಿ ಇತ್ತೀಚೆಗೆ ಪತ್ತೆ ಹಚ್ಚಲಾಗಿದೆ; ಎರಡರಲ್ಲಿ ಗೋಸಾಸಕ್ಕೆ ಸಂಬಂಧಿಸಿದ ಶಾಸನವಿದೆ. ಈ ಕಲ್ಲುಗಳನ್ನು ಸ್ಥಳೀಕರು 'ಜೇನಗಲ್ಲು' ಎಂದು ಕರೆಯುತ್ತಾರೆ. ಮತ್ತೊಂದೆಡೆಯಲ್ಲಿ ಈ ಕಲ್ಲಿರುವ ಸ್ಥಳವನ್ನು ಬಾಣಂತವ್ವನಗುಡಿ ಎಂದು ಕರೆಯುತ್ತಾರೆ. ಈ ಕಲ್ಲುಗಳ ಮೇಲೆ ನೇಗಿಲು, ಕಳಸದ ಆಕರ್ಷಕ ಉಬ್ಬು ಕೆತ್ತನೆಯಿದೆ. ರಾಷ್ಟ್ರಕೂಟರ ಕಾಲದಲ್ಲಿ ಇದೊಂದು ಪ್ರಮುಖ ಜನವಸತಿ ಕೇಂದ್ರವಾಗಿತ್ತೆಂಬ ಅಂಶವನ್ನು ಇಲ್ಲಿ ಲಭಿಸಿರುವ ಈ ಆರು ಗೊಸಾಸಕಲ್ಲುಗಳೂ ಹಾಗೂ ನಾಲ್ಕು ಶಾಸನಗಳೂ ಸಮರ್ಥಿಸುತ್ತವೆ. ಕ್ರಿ.ಶ. 1063 ಶಾಸನ ಇಂದಪ್ಪಯ್ಯ ಮಾಳಚಿದೇವಿಗೆ ಮಕರತೋರಣ ಮಾಡಿಸಿದ್ದನ್ನು ಹೇಳಿದರೆ ಕ್ರಿ.ಶ. 1149 ಶಾಸನ ಬನವಾಸೆ ನಾಡಾಳುತ್ತಿದ್ದ ರೇಚರಸನು ದೇವಿಯ ಸನ್ನಿದಾನದಲ್ಲಿ ಉಯ್ಯಾಲೆ ಪರ್ವಕ್ಕೊಂದು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1161 ರ ಶಾಸನ ಅಗ್ರಹಾರದ ಮಹಾಜನ ಸಾಸಿರ್ವರು ಏಕಸ್ಥರಾಗಿ ಮೂಲಸ್ಥಾನದ ಭೋಗೇಶ್ವರ ದೇವರಿಗೆ ಭೂದಾನ ಮಾಡಿದರೆ, ತೆಲ್ಲಿಗರೈವತ್ತೊಕ್ಕಲು ಎಣ್ಣೆಯನ್ನು ಶ್ರೀಮಾನ್ ಐನೂರ್ವರು (ಐಹೊಳೆ) ಮಳಿಗೆ ಇತ್ಯಾದಿಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಯಾದವ ಸಿಂಘಣನ 27 ನೇಯ ವರ್ಷದ ಶಾಸನವೊಂದು ಗವರೇಶ್ವರ ದೇವರಿಗೆ ಮುಮ್ಮುರಿದಂಡ ಇತ್ಯಾದಿಗಳು ವಿವಿಧ ತೆರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1407 ರ ಎರಡನೇಯ ಹರಿಹರ ಕಾಲದ ವೀರಮಾಸ್ತಿಕಲ್ಲು ಶಾಸನ ದೇವನಾಯ್ಕನ ಮಡದಿಯರಾದ ನಾಗಾಯಿ, ದೇಮಾಯಿಯರು ಮಹಾಸತಿಯರಾದ ವಿಷಯವನ್ನು ತಿಳಿಸುತ್ತದೆ. ಶಾಸನಾಧಾರಗಳಿಂದ ಈ ಊರಲ್ಲಿ ಮಾಳಚದೇವಿ, ಗವರೇಶ್ವರ, ಮೂಲಸ್ಥಾನದ ಭೋಗೇಶ್ವರ ಗುಡಿಗಳಿದ್ದವೆಂದು ಗೊತ್ತಾಗುವುದು. ಇಂದು ಇವೆಲ್ಲ ಶಿಥಿಲಾವಸ್ಥೆಯಲ್ಲಿವೆ.

ಊರ ಹೊರಗೆ ಇರುವ ಬನಶಂಕರಿ ಗುಡಿಯೇ ಶಾಸನೋಕ್ತ ಮಾಳಚಿದೇವಿಯ ಗುಡಿಯಾಗಿದೆ. ಸುಮಾರು ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಇಟ್ಟಿಗೆಯಿಂದ ಕಟ್ಟಿದ ಗುಡಿಯಾಗಿದ್ದ ಇದು ಇತ್ತೀಚೆಗೆ ಪೂರ್ಣ ದುರಸ್ತಿಗೊಂಡಿದೆ. ಮಲ್ಲಾರಿ ಮಾರ್ತಾಂಡನ ದೇವಿ ಗುಡಿ ಇದಾಗಿದ್ದು ಯೋಗ ಪೀಠಕ್ಕಿಂತ ಮಿಗಿಲಾದ ಮಾಳಜಪೀಠ ಇದೆಂದು ಶಾಸನ ಬಣ್ಣಿಸಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿರುವ ಈ ಗುಡಿಯನ್ನು ಗರ್ಭಗೃಹದಲ್ಲಿಂದು ಗಣಪತಿಯ ಮೂರ್ತಿಯಿದೆ. ಇಲ್ಲಿನ ದೇವಿ ಮೂರ್ತಿಯನ್ನು ಊರಲ್ಲಿರುವ ಬನಶಂಕರಿ ಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆಯೆಂದು ಸ್ಥಳೀಕರು ಹೇಳುತ್ತಾರೆ. ಈ ಗುಡಿಯ ಆವರಣದಲ್ಲಿ ಸಣ್ಣ ಪ್ರಮಾಣದ ಗುಡಿಗಳೆರಡು ಶಿಥಿಲ ಸ್ಥಿತಿಯಲ್ಲಿದ್ದು ಗುರುತಿಸಲು ಬಾರದಂತಾಗಿವೆ. ಈ ಗುಡಿ ಪರಿಸರದಲ್ಲೇ ರಾಷ್ಟ್ರಕೂಟರ ವೀರಗಲ್ಲು ಶಾಸನ, ಕಲ್ಯಾಣದ ಚಾಲುಕ್ಯರ ಹಾಗೂ ಯಾದವರ ಶಾಸನಗಳಿವೆ. ಗರ್ಭಗೃಹದ ಬಾಗಿಲವಾಡ ಸರಳವಾಗಿದೆ. ಗುಡಿಯ ಮುಂಭಾಗದಲ್ಲಿ ಸುಂದರವಾದ ಮಕರತೋರಣವಿದ್ದು ಇಂದಪ್ಪಯ್ಯ ಮಾಳಜ ದೇವಿಗೆ ನಿರ್ಮಿಸಿದ ಮಕರತೋರಣ ಇದೇ ಆಗಿದೆ. ಮಕರ ತೋರಣದಲ್ಲಿ ನಡುವೆ ಲಕ್ಷ್ಮಿ ಸರಸ್ವತಿ ಹಾಗೂ ಮಹೇಶ್ವರಿಯರನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ.

ಊರ ನಡುವಿರುವ ಬಾಗೇಶ್ವರ ಗುಡಿಯೇ ಶಾಸನೋಕ್ತ ಮೂಲಸ್ಥಾನದ ಭೋಗೇಶ್ವರ ಗುಡಿಯಾಗಿದೆ. ಗರ್ಭಗೃಹ ಹಾಗೂ ನವರಂಗವನ್ನಷ್ಟೇ ಹೊಂದಿರುವುದು ಇದರ ವೈಶಿಷ್ಟವಾಗಿದ್ದು ಒಳಗೆ ಶಿವಲಿಂಗ, ನಂದಿಗಳಿವೆ. ಈ ಗುಡಿಯಲ್ಲಿ ಸುಮಾರು ಮೂರಡಿ

ಎತ್ತರದ ಮುಕ್ಕಾದ ದುರ್ಗಿ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳು ಕಲ್ಯಾಣದ ಚಾಳುಕ್ಯರ ಶೈಲಿಯವು. ಗುಡಿಯ ಹೊರಗೆ ಸುಮಾರು 3.5 ಅಡಿ ಎತ್ತರದ ಸೂರ್ಯನ ಮೂರ್ತಿಯಿದೆ. ಇದನ್ನಿಂದು ವಿಷ್ಣು ಪೀಠಕ್ಕೆ ಹೊಂದಿಸಿದ್ದಾರೆ. ಬಸವಣ್ಣನ ಗುಡಿಯಲ್ಲಿ ಎರಡು ವೀರಗಲ್ಲು ಹಾಗೂ ಒಂದು ಮಾಸ್ತಿಕಲ್ಲುಗಳಿವೆ. ಇವುಗಳ ಜೊತೆಗೆ ಊರಲ್ಲಿ ಕಲ್ಲಿನಾಥ, ಹನುಮಂತ, ಬಸವಣ್ಣ, ದ್ಯಾಮವ್ವ, ವೀರಭದ್ರ ಮತ್ತು ಬನಶಂಕರಿಯ ಹಾಗೂ ದುರ್ಗವ್ವ ಮತ್ತು ಮರಿಯವ್ವನ ಗುಡಿಗಳಿವೆ. ಹನುಮಂತನ ಗುಡಿಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ವಿಷ್ಣು ಶಿಲ್ಪವಿದೆ. ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಿದ್ದಾರೆ. ಊರಲ್ಲಿ ಎರಡು ಮಸೀದಿ ಹಾಗೂ ಎರಡು ದರ್ಗಾಗಳಿವೆ.

**ದೇವರ ಹುಬ್ಬಳ್ಳಿ** : ಧಾರವಾಡ ತಾಲೂಕಿನ ದೇವರ ಹುಬ್ಬಳ್ಳಿಯು (ಜನಸಂಖ್ಯೆ : 1,696) ಧಾರವಾಡದಿಂದ ನೈರುತ್ಯಕ್ಕೆ 12 ಕಿಮೀ ದೂರದಲ್ಲಿ ಅಳ್ನಾವರ ರಸ್ತೆಯ ಬದಿಯಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಹುಪ್ಪವಳ್ಳಿ' ಎಂದು ಉಲ್ಲೇಖಿಸಲ್ಪಟ್ಟಿದ್ದು ಹಿಂದೆ ಇದು ಹಲಸಿಗೆ-12,000 ಕ್ಕೆ ಸೇರಿದ ಮಹಾರಾಜವಾಡಿ ನಾಡಿನ ಕಂಪಣ ಮುಗುದ-30 ಕ್ಕೆ ಸೇರಿದ ಮಹಾ ಅಗ್ರಹಾರವಾಗಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕೋಡಿ ಬಸವಣ್ಣನ ಗುಡಿಯ ಬಳಿಯಿರುವ ಗೋವೆ ಕದಂಬ ವೀರಜಯಕೇಶಿದೇವನ ಕ್ರಿ.ಶ. 1216 ರ ಶಾಸನ ಮಹಾ ಅಗ್ರಹಾರ ಹುಪ್ಪವಳ್ಳಿಯ ಮಹಾಜನರು ಸಭೆ ಸೇರಿ ಮಹಾಲಕ್ಷ್ಮೀದೇವಿಯ ಪ್ರತಿಷ್ಠಾಪನೆ ಮಾಡಿಸಿ, ನೈವೇದ್ಯಕ್ಕೆಂದು 400 ಕಂಬ ಗದ್ದೆ, ಅಂಗಡಿ, ನಿವೇಶನವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಅಗಸೆ ಬಳಿ ಇರುವ ಸದಾಶಿವರಾಯನ ಕ್ರಿ.ಶ. 1547 ರ ಶಾಸನ, ಕೆಲಸಿಗರಿಗೆ ಕೆಲವು ರಿಯಾಯಿತಿ ನೀಡಿದ ಅಂಶವನ್ನು ತಿಳಿಸುತ್ತದೆ.

ಊರಲ್ಲಿಂದು ಕಲ್ಯಾಣದ ಚಾಳುಕ್ಯರ ಕಾಲದ ಲಕ್ಷ್ಮಿ ವೆಂಕಟೇಶ್ವರ ದೇವಾಲಯವಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆ; ಆದರೂ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದ್ದು ಗರ್ಭಗೃಹದಲ್ಲಿ ಆಳೆತ್ತರದ ರಂಗನಾಥನ ಶಿಲ್ಪವಿದ್ದು ಸ್ಥಳೀಕರು 'ರಂಗಪ್ಪ'ನೆಂದು ಪೂಜಿಸುತ್ತಾರೆ. ಆಶ್ವಯುಜ ಮಾಸದಲ್ಲಿ ಇಲ್ಲಿ ಜಾತ್ರೆ ಜರುಗುತ್ತದೆ. ಊರ ನಡುವೆ ಇರುವ ಕೋಡಿ ಬಸವಣ್ಣನ ಗುಡಿಯ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಊರ ಹೊರಗೆ ಹೂಗಾರ ಹೊಲದಲ್ಲಿ ಶಿಥಿಲವಾದ ಬಸವಣ್ಣನ ಹಳೆ ಗುಡಿಯಿದೆ. ಇಲ್ಲಿನ ನಾಗಾನಂದ ಸ್ವಾಮಿ ಮಠ ವಿಶಾಲವಾಗಿದ್ದು, ಆವರಣದಲ್ಲಿ ನಾಗಾನಂದಸ್ವಾಮಿಗಳ ಹಾಗೂ ಹುಚ್ಚಮ್ಮನ ಗದ್ದುಗೆಗಳಿದ್ದು ಪ್ರತ್ಯೇಕ ಕಟ್ಟಡಗಳಿವೆ. ಊರ ಅಗಸಿ ಬಳಿ ಗಣಪತಿ ಶಿಲ್ಪ, ಗೊಗ್ರಹಣದ ಎರಡು ವೀರಗಲ್ಲುಗಳು ಹಾಗು ಒಂದು ಮಾಸ್ತಿಕಲ್ಲನ್ನು ನೋಡಬಹುದಾಗಿದೆ. ಇವುಗಳೊಂದಿಗೆ ಊರಲ್ಲಿ ಹನುಮಂತ, ದ್ಯಾಮವ್ವ, ದುರ್ಗವ್ವ, ಮಾರಿಕಾಂಬಾ ಹಾಗೂ ಭಾರತಮಾತಾ ಗುಡಿಗಳಿವೆ. ಮಸೀದಿ ಹಾಗು ದರ್ಗಾ ಕೂಡ ಇವೆ.

**ಧಾರವಾಡ** : (ಧಾರವಾಡ - ಹುಬ್ಬಳ್ಳಿ ಮಹಾನಗರ ಪಾಲಿಕೆ : ಜಿಲ್ಲಾ ಕೇಂದ್ರ 6,48,298) ಬೆಂಗಳೂರಿನಿಂದ 426 ಕಿ.ಮೀ ದೂರದಲ್ಲಿರುವ ಶಾಸನೋಕ್ತ 'ದಾರವಾಡ' ಕುಂದೂರು-500 ಕ್ಕೆ ಒಳಪಟ್ಟ ಸ್ಥಳವಾಗಿದ್ದು ಹಲಸಿಗೆ-12,000 ದ ಹಿರಿಯ ಘಟಕದ ಒಂದು ಭಾಗವಾಗಿದ್ದು ಈಗ ಕರ್ನಾಟಕದಲ್ಲೆ ಅತ್ಯುತ್ತಮ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರಗಳಲ್ಲಿ ಒಂದಾಗಿದೆ. ಭೌಗೋಳಿಕವಾಗಿ ಸಹ್ಯಾದ್ರಿಯ ಹಾಗೂ ಪಶ್ಚಿಮ ಘಟ್ಟಗಳ ಮುಂದುವರೆದ ಪ್ರದೇಶವಾಗಿರುವುದರಿಂದ ಏರಿಳಿತಗಳ ಭೂಭಾಗವಾಗಿರುವುದರಿಂದ ಸಮಶೀತೋಷ್ಣ ವಾತಾವರಣವನ್ನು ಹೊಂದಿದೆ. ಬೆಂಗಳೂರು-ಪುಣೆ ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು ರೈಲು ನಿಲ್ದಾಣವೂ ಆಗಿದೆ. ಈ ಊರಿನ ಸ್ಥಳನಾಮದ ಬಗೆಗೆ ಹಲವಾರು ಅಭಿಪ್ರಾಯಗಳಿದ್ದರೂ ಧಾರವಾಡದ ಕೋಟೆಯ ಭಾಗದಲ್ಲಿರುವ ದುರ್ಗಾದೇವಿ ದೇವಸ್ಥಾನದಲ್ಲಿ ದೊರೆತಿರುವ ಶಾಸನವು ಚಾಳುಕ್ಯ ದೊರೆ ಆರನೇ ವಿಕ್ರಮಾದಿತ್ಯ ಕಾಲಕ್ಕೆ ಸೇರಿದ್ದು (ಕ್ರಿ.ಶ. 1117) ಕುಂದೂರು - 500 ಕ್ಕೆ ಸೇರಿರುವ 'ಧಾರವಾಡ'ವನ್ನು ಬಾಸ್ಕರದೇವನೆಂಬ ಅಧಿಕಾರಿ ಆಳ್ವಿಕೆ ಮಾಡುತ್ತಿದ್ದು ದೇವಾಲಯಕ್ಕೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ದೇವಾಲಯವನ್ನು ಧರ್ಮೇಶ್ವರದೇವ ಎಂದು ಕರೆಯಲಾಗಿದೆ. ಇದಲ್ಲದೇ ನರೇಂದ್ರದ ಶಾಸನವು ಚಾಳುಕ್ಯ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1125) 'ಬಾಡ ದಾರವಾಡ' ಎಂದು ಉಲ್ಲೇಖಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಈ ಸ್ಥಳವು ಮಲೆನಾಡು ಮತ್ತು ಬಯಲು ಸೀಮೆಯ ನಡುವೆ ಸಗಟು ಸಾಗಣೆಗೆ 'ದ್ವಾರ'ದಂತಿದ್ದ ಮುಖ್ಯ ಪಟ್ಟಣವಾಗಿದ್ದುದರಿಂದ ಇದಕ್ಕೆ ಧಾರವಾಡ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ. ಇನ್ನೂ ಕೆಲವು ಪ್ರಾಚೀನ ಶಾಸನಗಳಲ್ಲಿ ಧಾರವಾಡವನ್ನು ಕಂಪಣಸ್ಥಾನವೆಂದು ವರ್ಣಿಸಿದೆ. ಧಾರವಾಡದಲ್ಲಿ ಸೇಉಣ ರಾಮಚಂದ್ರನ ಕಾಲದಲ್ಲಿ ದಾಮೋದರದೇವ ರಾಣೆಯ ಎಂಬ ಅಧಿಕಾರಿ ಇದ್ದ. ವಿಜಯನಗರ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1403 ರಲ್ಲಿ ಧಾರವ ಎಂಬ ವಿಜಯನಗರದ ಅಧಿಕಾರಿ ಈ

ಸ್ಥಳವನ್ನು ಆಳುತ್ತಿದ್ದನೆಂದು ಐತಿಹ್ಯವಿದೆ. ಈ ಅಧಿಕಾರಿಯಿಂದ ಧಾರವಾಡ ಎಂಬ ಹೆಸರು ಬಂದಿತೆಂಬ ವಾದವು ಮೇಲೆ ಕೊಟ್ಟಿರುವ ಚಾಳುಕ್ಯರ ಶಾಸನದ ಹಿನ್ನಲೆಯಲ್ಲಿ ಗೌಣವಾಗುತ್ತದೆ. ಆದರೆ ಆಗ ಇಲ್ಲಿನ ಕೋಟೆಯ ನಿರ್ಮಾಣ ಆದಂತಿದೆ. ಮುಂದೆ ಬಿಜಾಪುರದ ಆದಿಲ್‌ಷಾಹಿ ಅರಸು ಮನೆತನವು ಅಲಿಆದಿಲ್ ಷಾನು ಕ್ರಿ.ಶ. 1573 ರಲ್ಲಿ ಧಾರವಾಡವನ್ನು ವಶಪಡಿಸಿಕೊಂಡು ಕೋಟೆಯನ್ನು ಕಟ್ಟಿಸಿದನು. ಆರಂಭದಲ್ಲಿ ಬಿಜಾಪುರದವರು ಇಲ್ಲಿ 'ಮಣ(ಣ್ಣ)ಕಿಲ್ಲೆ' ಕಟ್ಟಿ ಮುಂದೆ ಇದಕ್ಕೆ ನಜರತಾಬಾದ್ ಎಂದು ಹೆಸರಿಟ್ಟರು. ಕೋಟೆಯಾದಾಗಿನಿಂದ ಧಾರವಾಡದ ಮಹತ್ವ ಬೆಳೆಯುತ್ತ ಹೋಯಿತು. ಅಬ್ದುಲ್ ಕರೀಂಖಾನ್ ಇದರ ಆಡಳಿತಗಾರನಾಗಿದ್ದ. ಮುಂದೆ ಶಿವಾಜಿಯು ಇದನ್ನು ಗೆದ್ದಂತಿದೆ. ಮುಂದೆ ಔರಂಗಜೇಬನ ಮಗ ಮುಅಜಂ ಇದನ್ನು ಗೆದ್ದು ಮಿರ್ಜಾ ಸೈಫುಲ್ಲಾನನ್ನು ಕಿಲೇದಾರನಾಗಿ ಮಾಡಿದ (1685).

ಪೇಶ್ವೆ ಬಾಳಾಜಿರಾಯನು 1753 ರಲ್ಲಿ ಧಾರವಾಡವನ್ನು ಗೆದ್ದು ತನ್ನ ತಂದೆಯ ತಂಗಿ ಅನುತಾಯಿ ಘೋರ್ಪಡೆಗೆ ಜಾಗೀರಾಗಿ ಕೊಟ್ಟನು. ಅಲ್ಲಿವರೆಗೆ ಈ ಕೋಟೆ ಮುಘಲರ ವಶದಲ್ಲೇ ಇದ್ದಂತಿದೆ. ಮರಾಠರು ಇಲ್ಲಿನ ಮಂಗಳವಾರಪೇಟೆ, ಸದಾಶಿವಪೇಟೆ (ಈಗಿನ ರವಿವಾರಪೇಟೆ) ಮುಂತಾದ ಬಜಾರುಗಳನ್ನು ಆರಂಭಿಸಿದರು. ಇವರ ನಂತರ ಮೈಸೂರು ರಾಜ್ಯದ ಒಡೆಯರಾಗಿದ್ದ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನನು ಈ ಪ್ರದೇಶವನ್ನು ಗೆದ್ದುಕೊಂಡು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಕ್ರಿ.ಶ. 1788 ರಲ್ಲಿ ಮತ್ತೆ ಅದು ಪೇಶ್ವೆಯರ ವಶವಾಯಿತು. ಇವರ ನಂತರ ಕ್ರಿ.ಶ. 1817 ರಲ್ಲಿ ಇದು ಬ್ರಿಟಿಷರ ಕೈವಶವಾಗಿ ಜಿಲ್ಲಾ ಆಡಳಿತ ಕೇಂದ್ರವಾಯಿತು. ಮೊದಮೊದಲು ಯುರೋಪಿಯನ್ ಅಧಿಕಾರಿಗಳೇ ಬಂದರೂ ಸ್ಥಳೀಯ ಜನಗಳನ್ನು ಕೆಳವರ್ಗದ ಹುದ್ದೆಗಳಿಗೆ ನೇಮಿಸಿದರು. 1848 ರಲ್ಲಿ ಸರಕಾರಿ ಆಂಗ್ಲ ಶಾಲೆಯನ್ನು ಸ್ಥಾಪಿಸಲಾಯಿತು. ಕ್ರಿ.ಶ. 1856 ರಲ್ಲಿ ಟೌನ್ ಮುನಿಸಿಪಾಲಿಟಿ ಆಯಿತು. ಬಾಸೆಲ್‌ಮಿಶನ್ ಸಂಸ್ಥೆಯವರು ಹೈಸ್ಕೂಲನ್ನು ಧಾರವಾಡದಲ್ಲಿ ಸ್ಥಾಪಿಸಿದರು (1863). ಧಾರವಾಡದಲ್ಲಿ ಶಿಕ್ಷಣ ತಜ್ಞರಾದ ಡೆಪ್ಯೂಟಿ ಚೆನ್ನಬಸಪ್ಪ, ಗಂಗಾಧರ ತುರುಮುರಿ, ವೆಂಕಟರಂಗೋಕಟ್ಟಿ ಇನ್ನು ಮುಂತಾದವರು ಕನ್ನಡದ ಶಿಕ್ಷಣದ ಪ್ರಾಬಲ್ಯಕ್ಕೆ ಕಾರಣರಾದರು. ಸೈದಾಪುರ, ಲಕಮನಹಳ್ಳಿ, ಹಾವೇರಿಪೇಟೆ, ಬಾಗ್‌ತಲಾನ್, ಮದೀಹಾಳ, ಗುಲಗಂಜಿಕೊಪ್ಪ, ಮಾಳಾಪುರ, ಕಮಲಾಪುರ, ನಾರಾಯಣಪುರ, ಸಪ್ತಾಪುರ, ಅತ್ತಿಕೊಳ್ಳ ಮತ್ತು ಹೊಸಯೆಲ್ಲಾಪುರ ಸೇರಿ 1883 ರಲ್ಲಿ ನಗರ ಮುನಿಸಿಪಾಲಿಟಿಯಾಯಿತು. ಬ್ರಿಟಿಷ್ ಸರಕಾರವು 1888 ರಲ್ಲಿ ರೈಲ್ವೆ ಕೇಂದ್ರ ಕಛೇರಿಗಳನ್ನು ಧಾರವಾಡದಲ್ಲಿ ಸ್ಥಾಪಿಸಿವಾಗ ಬಯಲು ಸೀಮೆಯವರನ್ನೇ ಅಲ್ಲದೇ ಕಡಲತೀರದ ಸಾರಸ್ವತರನ್ನು ಹಲವಾರು ಹುದ್ದೆಗಳಿಗೆ ನೇಮಿಸಿಕೊಂಡರು. 1867 ರಲ್ಲಿ ಸ್ಥಾಪನೆಗೊಂಡ ನಾರ್ಮಲ್ ಸ್ಕೂಲ್ ಮುಂದೆ ಟ್ರೇನಿಂಗ್ ಕಾಲೇಜು ಹಾಗೂ 1890 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಧಾರವಾಡದ ಎಲ್ಲಾ ಬುದ್ಧಿಜೀವಿಗಳನ್ನು ಹಾಗೂ ಜರ್ಮನಿಯ ಮಿಶನರಿಯವರನ್ನೂ ತನ್ನ ವ್ಯಾಪ್ತಿಗೆ ಒಳಪಡಿಸಿ ಸಾಂಸ್ಕೃತಿಕ ಚಟುವಟಿಕೆ, ಸಾಹಿತ್ಯಕ, ರಂಗಭೂಮಿ, ಸಂಗೀತ ಮತ್ತು ಇವೆಲ್ಲಕ್ಕೂ ಆದಿಯಾಗಿ ದೇಶಭಕ್ತಿ ಹಾಗೂ ರಾಷ್ಟ್ರೀಯತೆಯ ಭಾವನೆಗೆ ವಿಶೇಷವಾದ ಉತ್ತೇಜನ ಕೊಟ್ಟಿತ್ತು. ಮುರುಘಾಮಠ, ವೀರಶೈವ ವಿದ್ಯಾಭಿವೃದ್ಧಿ (1883) ಸಂಘಗಳೂ ಜನಜಾಗೃತಿಗೆ ದುಡಿದವು. ಸ್ವಾತಂತ್ರ್ಯ ಹೋರಾಟದಲ್ಲೂ ಧಾರವಾಡ ನಗರದ್ದು ಮೇಲುಗೈ ಪಡೆದಿದೆ. ಪ್ರಥಮ ಕರ್ನಾಟಕ ರಾಜಕೀಯ ಅಧಿವೇಶನವು ಈ ಊರಿನಲ್ಲಿ ನಡೆಯಿತು (1920). ಅಸಹಕಾರ ಹಾಗೂ ಖಿಲಾಫತ್ ಚಳುವಳಿಗಳಲ್ಲಿ ಧಾರವಾಡವು ಪ್ರಮುಖ ಪಾತ್ರವಹಿಸಿತು. ಅಸಹಕಾರ ಚಳುವಳಿಯು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಒದಗಿಸಿದಾಗ 1921 ರಲ್ಲಿ ಧಾರವಾಡದಲ್ಲಿ ಮೊದಲ ಬಾರಿಗೆ ಗೋಲಿಬಾರ್‌ಆಯಿತು. ಇದರಿಂದ ದೇಶದ ರಾಜಕೀಯ ಇತಿಹಾಸದಲ್ಲೇ ಈ ನಗರಕ್ಕೆ ಪ್ರಮುಖಸ್ಥಾನ ಲಭಿಸುವಂತಾಯಿತು. ಅನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಧಾರವಾಡವನ್ನು ತನ್ನ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿತು. ರಾಷ್ಟ್ರೀಯ ನಾಯಕರಾದ ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರರಾವ್, ಹುಕ್ಕೇರಿಕರ್ ಮತ್ತು ಕರಮರ್‌ಕರ್ ಇಲ್ಲಿ ನೆಲೆಸಿದ್ದರು. ಮತ್ತು ರಂ.ರಾ. ದಿವಾಕರ್ ಇಲ್ಲೇ ಜನಿಸಿ ಧಾರವಾಡವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಶಿ.ಶಿ. ಬಸವನಾಳರು ಇಲ್ಲಿ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿದರು.

ಹೀಗೆ ಬೆಳೆಯುತ್ತಾ ಈ ನಗರವು ಒಂದು ಮಹಾನಗರವಾಗಿದೆ. ಶಿಕ್ಷಣ ಹಾಗೂ ಸರಕಾರ ಕಚೇರಿಗಳು ಇದರ ಬೆಳವಣಿಗೆಗೆ ಕಾರಣ. ವಾಣಿಜ್ಯವೂ ಬೆಳೆದಿವೆ. 1926 ರಲ್ಲಿ ಬರೋ ಮುನಿಸಿಪಾಲಿಟಿಯಾಗಿ, 1962 ರಿಂದ ಧಾರವಾಡ ನಗರದ ಆಡಳಿತವು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಶದಲ್ಲಿದೆ.

ಧಾರವಾಡದ ಪ್ರಮುಖ ದೇವಾಲಯಗಳೆಂದರೆ ಮರಾಠಾ ಕಾಲೋನಿ ಅಥವಾ ಕೋಟೆಯ ಪ್ರದೇಶದಲ್ಲಿರುವ ದುರ್ಗಾದೇವಿ, ಮತ್ತು ವಿದ್ಯಾಗಿರಿಯಲ್ಲಿರುವ ಮೈಲಾರಲಿಂಗನ ದೇವಾಲಯ. ದುರ್ಗಾದೇವಿ ದೇವಾಲಯವು ಈಗ ಸಂಪೂರ್ಣವಾಗಿ ದುರಸ್ತಿಮಾಡಲಾಗಿದ್ದು ಕೇವಲ ಗರ್ಭಗೃಹದ ಭಾಗದ ವಾಸ್ತು ರಚನೆಯು ಮಾತ್ರ ಕ್ರಿ.ಶ. 12 ನೇ ಶತಮಾನದ ರಚನೆಯೆಂದು ಡಾ: ಅ. ಸುಂದರ ಅವರು ಅಭಿಪ್ರಾಯಪಡುತ್ತಾರೆ. ಶಾಸನದಲ್ಲಿ ಈ ದೇವಾಲಯವನ್ನು ಧಾರವಾಡದ ಧರ್ಮೇಶ್ವರ ಎಂದಿದೆ. ಈ ದೇವಾಲಯದ ಮೇಲ್ವಿಚಾರಕರಾಗಿದ್ದ ಶ್ರೀಮದಾಚಾರ್ಯ ಸೋಮೇಶ್ವರ ಪಂಡಿತರನ್ನು ಶಾಸನ ಉಲ್ಲೇಖಿಸುತ್ತದೆ. ಈ ಶಾಸನವು ಚಾಳುಕ್ಯದೊರೆ ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು (ಕ್ರಿ.ಶ. 1117) ಈ ದೇವಾಲಯದ ಆವರಣದಲ್ಲಿ ಚಾಳುಕ್ಯ ಲಕ್ಷಣಗಳುಳ್ಳ ಸಪ್ತಮಾತೃಕೆ ಮೊದಲಾದ ವಿಗ್ರಹಗಳಿವೆ. ವಿದ್ಯಾಗಿರಿಯಲ್ಲಿ ಜೆ.ಎಸ್.ಎಸ್. ಪದವಿ ಕಾಲೇಜಿನ ಹಿಂಭಾಗದ ಗುಡ್ಡದ ಮೇಲಿರುವ (ಹತ್ತಲು ಮೆಟ್ಟಿಲುಗಳಿವೆ) ಮೈಲಾರಲಿಂಗ ದೇವಾಲಯವು (ಕ್ರಿ.ಶ. 12 ನೇ ಶತಮಾನದ) ಕಲ್ಯಾಣದ ಚಾಳುಕ್ಯ ಶೈಲಿಯಲ್ಲಿ ನಿರ್ಮಿತವಾಗಿರುವ ವಾಸ್ತು ರಚನೆಯಾಗಿದ್ದು ಈಗ ಆಧುನಿಕ ರೀತಿಯಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಹಿಂದೆ ಆದಿಲ್‌ಷಾಹಿಗಳು ಇದನ್ನು ಮಸೀದಿಯಾಗಿ ಪರಿವರ್ತಿಸಿ ಮುಂದೆ ಪೇಶ್ವೆಯರು ಮತ್ತೆ ದೇವಾಲಯವಾಗಿ ಮಾಡಿದರೆಂದು ಹೇಳುವ ಇಲ್ಲಿನ ಒಂದು ಪರ್ಶಿಯನ್ ಶಾಸನ ಪ್ರಕಟವಾಗಿದ್ದು ಆ ಶಾಸನಮಾತ್ರ ಈಗ ಮರೆಯಾಗಿದೆ. ಈ ಗುಡ್ಡಕ್ಕೆ ಹಿಂದೆ ಮೈಲಾರಲಿಂಗ ಗುಡ್ಡ ಎನ್ನುತ್ತಿದ್ದರು. ಈ ದೇವಾಲಯದ ಹೊರಗಡೆ ಮುಂಭಾಗದಲ್ಲಿ ಭಿನ್ನವಾದ ಚಾಳುಕ್ಯ ಶಿವಲಿಂಗವಿದೆ. ಇದರ ಗರ್ಭಗೃಹ ಹಾಗೂ ನವರಂಗದ ಮಧ್ಯದಲ್ಲಿರುವ ಚಾಳುಕ್ಯ ಶೈಲಿಯ ಕಂಬಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಗರ್ಭಗೃಹದಲ್ಲಿರುವ ಆಸೀನ ಮೈಲಾರನು ಚತುರ್ಭುಜ ಮೂರ್ತಿಯಾಗಿದ್ದು ಕೈಗಳಲ್ಲಿ ಢಮರು, ತ್ರಿಶೂಲ, ಖಡ್ಗ ಹಾಗೂ ಕಪಾಲಗಳನ್ನು ಹೊಂದಿರುವನು. ಪೀಠದ ಮೇಲೆ ನಾಯಿ ಮತ್ತು ಕುದುರೆ ಹಾಗೂ ಇತರೆ ವಿಗ್ರಹಗಳ ಶಿಲ್ಪಗಳಿವೆ. ನವರಂಗದ ಛಾವಣಿಯಲ್ಲಿ ಕೆಳಮುಖ ಮಾಡಿರುವ ಕಮಲದ ಕೆತ್ತನೆಯಿದ್ದು ಕೆಳಗೆ ನಾಲ್ಕು ಚಾಳುಕ್ಯ ಕಂಬಗಳ ನಡುವೆ ನಂದಿಯ ಮೂರ್ತಿಯಿದೆ. ನವರಂಗದಲ್ಲಿ ಒಂದು ಕಡೆ ಶೇಷಶಯನ ವಿಷ್ಣು ಲಕ್ಷ್ಮಿ ಮುಂತಾದ ಬಿಡಿ ಶಿಲ್ಪಗಳು ಕಂಡುಬರುತ್ತವೆ. ದೇವಾಲಯವು ಎತ್ತರವಾದ ಗೋಡೆಗಳುಳ್ಳ ಒಳ ಪ್ರಾಕಾರವನ್ನು ಹೊಂದಿದೆ. ಮುಂಭಾಗದಲ್ಲಿ ವಿಶಾಲವಾದ ನಿವೇಶನವಿದ್ದು ಗುಡ್ಡದ ಇಳಿಜಾರು ಪ್ರದೇಶದ ನಂತರ ಸಮತಟ್ಟಾದ ತಗ್ಗಿನ ನಿವೇಶನವಿದೆ. ತಗ್ಗಿನ ನಿವೇಶನದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ದರ್ಗಾಗಳಿವೆ. ಇದು ಪೀರ್ ಅನವರ್‌ಷಾ ಮತ್ತು ಮುನಾವರ್‌ಷಾ ದರ್ಗಾಗಳೆಂದು ಕರೆಯುತ್ತಾರೆ; ಹಾಗೂ ಇಲ್ಲಿ ಪ್ರತಿವರ್ಷ ರಜ್ಜಬ್ ತಿಂಗಳಲ್ಲಿ ಉರುಸ್ ನಡೆಯುತ್ತದೆ.

ಧಾರವಾಡ ಮಾಳಮರಡಿ (ಮಾಳಮಡ್ಡಿ) ರಸ್ತೆಯ ಉಳವಿ ಬಸವೇಶ್ವರ ದೇವಸ್ಥಾನವು ಕಲ್ಯಾಣದ ಕ್ರಾಂತಿಯ ತರುವಾಯ ಚೆನ್ನಬಸವಣ್ಣನು ಕ್ರಿ.ಶ. 12 ನೇ ಶತಮಾನದಲ್ಲಿ ಕಲ್ಯಾಣದಿಂದ ಉಳವಿಗೆ ಹೋಗುವಾಗ ತಂಗಿದ್ದನೆನ್ನಲಾದ ಸ್ಥಳ ಗುಡ್ಡದ ಮೇಲೆ ಕಂಡುಬರುತ್ತದೆ. ಇದು ಬೃಹದಾಕಾರವಾದ ಕಟ್ಟಡವಾಗಿದ್ದು 63 ಮಂಟಪಗಳು ಹಾಗೂ ಎತ್ತರವಾದ ದ್ವಾರ (ಕಮಾನು ಆಕಾರ) ಮಂಟಪ ಕಂಡುಬರುತ್ತದೆ. ಪ್ರತೀ ವರ್ಷ ಶ್ರಾವಣದ ಸೋಮವಾರದಂದು ಭಾರಿ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಕರಡಿಮಜಲು ಎಂಬ ಜಾನಪದ ನೃತ್ಯ ಪ್ರದರ್ಶನ ನಡೆಯುತ್ತದೆ.

ಕಲಘಟಗಿಗೆ ಹೋಗುವ ರಸ್ತೆಯಲ್ಲಿ ಧರ್ಮಸ್ಥಳ ಮಂಜುನಾಥೇಶ್ವರ ದಂತ ಕಾಲೇಜಿನ ಹತ್ತಿರ (6 ಕಿಮೀ) ಹಳೆಯ ಸೋಮೇಶ್ವರ (ಈಗ ನಗರದ್ದೇ ಭಾಗವಾಗಿದೆ)ದಲ್ಲಿ ಕ್ರಿ.ಶ. 12ನೇ ಶತಮಾನದ ಸೋಮೇಶ್ವರ ದೇವಾಲಯವಿದೆ. ಇಲ್ಲಿನ ಕಲ್ಯಾಣಿಯಿಂದ ಶಾಲ್ಮಲಾನದಿ ಹುಟ್ಟುತ್ತದೆಂದು ನಂಬಿಕೆ. ಈ ಸ್ಥಳವು ಧಾರವಾಡಕ್ಕೆ ಹತ್ತಿರದಲ್ಲಿದ್ದು ಉತ್ತಮ ವಿಹಾರ ತಾಣವಾಗಿದೆ. ದೇವಾಲಯವು ಪೂರ್ವಾಭಿ ಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿದೆ. ಗರ್ಭಗೃಹದಿಂದ ಪ್ರಾರಂಭವಾಗಿ ಇಡೀ ದೇವಾಲಯವು ಜೀರ್ಣೋದ್ಧಾರವಾಗಿದೆ. ಆದರೂ, ಗರ್ಭಗೃಹದಲ್ಲಿರುವ ಎತ್ತರವಲ್ಲದ ಪಾಣಿಪೀಠದ ಮೇಲಿರುವ ಶಿವಲಿಂಗವು ಚಾಳುಕ್ಯರಿಗೂ ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ನವರಂಗದ ಮಧ್ಯದಲ್ಲಿ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳು ನಮ್ಮ ಗಮನವನ್ನು ಸೆಳೆಯುತ್ತದೆ. ಇದರ ಛಾವಣಿಯಲ್ಲಿ ಕೆಳಮುಖ ಮಾಡಿರುವ ಬಹುದಳ ಕಮಲದ ಹೂವಿನ ಅಲಂಕಾರವಿದೆ. ನವರಂಗದಲ್ಲಿ ಮಹಿಷಮರ್ದಿನಿ (ಚಾಳುಕ್ಯ) ಮತ್ತು ಚತುರ್ಭುಜ ಗಣಪತಿಯ ಸುಂದರ ಮೂರ್ತಿಗಳನ್ನು ಇರಿಸಲಾಗಿದೆ. ಗರ್ಭಗೃಹ ಹಾಗೂ ಅಂತರಾಳದ ಲಲಾಟಗಳು ಬರಿದಾಗಿವೆ. ಆದರೆ ನವರಂಗದ ಮುಖ್ಯ ಪ್ರವೇಶದ್ವಾರದ ಲಲಾಟದಲ್ಲೇ ಗಣೇಶನ ಶಿಲ್ಪವಿದೆ. ದೇವಾಲಯದ ಮುಂಭಾಗದಲ್ಲಿರುವ ಮೇಲೆ ಹೇಳಿದ ದೊಡ್ಡದಾದ ಕಲ್ಯಾಣಿ ಹಾಗೂ ಇದರ ಎಡಭಾಗದಲ್ಲಿ ಪ್ರತ್ಯೇಕ ಮಂಟಪದಲ್ಲಿ ಸಪ್ತಮಾತೃಕೆಯರ ಪಟ್ಟಿಕೆ (ಚಾಳುಕ್ಯ) ಹಾಗೂ ಹನುಮಂತ (ಅನಂತರ ಕಾಲದ್ದು)ನ ಶಿಲ್ಪಗಳು ಕಂಡುಬರುತ್ತವೆ. ಈ ದೇವಾಲಯವನ್ನು

ತಮ್ಮ ಬಾಲ್ಯದ ದಿನಗಳಲ್ಲಿ ಕಂಡ ದ.ರಾ. ಬೇಂದ್ರೆಯವರು 'ಬಂತಣ್ಣ ಸಣ್ಣ ಸೋಮವಾರ ಕಾಣಬೇಕಣ್ಣಾ ಸೋಮೇಶ್ವರ' ಎಂಬ ಜನಪ್ರಿಯ ಕವನವನ್ನು ಬರೆದು ಈ ಜಾಗದ ಮಹತ್ವವನ್ನು ಹೆಚ್ಚಿಸಿದ್ದಾರೆ. ಧಾರವಾಡ ನಗರದಲ್ಲಿ ಎರಡು ವೀರಗಲ್ಲುಗಳು ದೊರೆತಿವೆ ಹಾಗೂ ಇದರ ಕಾಲವು ಸುಮಾರು ಒಂಭತ್ತನೇ ಶತಮಾನವಾಗಿದ್ದು ದೇರಣ್ಣ ಎಂಬ ವೀರನು ಮರಣ ಹೊಂದಿದ ಉಲ್ಲೇಖವಿದೆ. ಜೊತೆಗೆ ನವಿಲೂರು ಅಗ್ರಹಾರದಲ್ಲಿದ್ದ ಒಂದು ಶಿವ ದೇವಾಲಯಕ್ಕೆ ಬಿಟ್ಟ ಭೂಮಿ ದಾನದ ವಿವರಗಳಿವೆ. ಹಾಗೂ ಕ್ರಿ.ಶ. 14ನೇ ಶತಮಾನದ ಮತ್ತೊಂದರಲ್ಲಿ ಮಲ್ಲಿದೇವನೆಂಬ ವೀರನ ಮರಣದ ವಿಷಯದ ಉಲ್ಲೇಖವಿದೆ ಎಂದು ಡಾ|| ಅ. ಸುಂದರ, ಅವರು ಅಭಿಪ್ರಾಯಪಡುತ್ತಾರೆ.

ಹಾವೇರಿ ಪೇಟೆಗೆ ಹೋಗುವ ದಾರಿಯ ಎಡಬದಿಗೆ ಬಿಜಾಪುರದ ಆದಿಲ್‌ಷಾಹಿ ಕಾಲದ ಕೋಟೆಯ (ಅಗಸೆ) ಮಹಾದ್ವಾರವು ಕಂಡುಬರುತ್ತದೆ. ಇದರ ಮೇಲೆ ಪರ್ಶಿಯನ್ ಶಾಸನವಿದೆ. ಆರ್.ಎಲ್.ಎಸ್. ಹೈಸ್ಕೂಲು ಕಡೆಯಿಂದಲೂ ಕೋಟೆಗೆ ಹೋಗುವ ಬಾಗಿಲಿದ್ದು ಅದು ಈಗ ಕಣ್ಮರೆಯಾಗಿದೆ. 1857 ರ ಬಂಡಾಯದ ಕಾಲಕ್ಕೆ ಶತ್ರುಗಳ ಕೈಗೆ ಬೀಳದಂತೆ ಬ್ರಿಟಿಷರು ಕೋಟೆಯ ಗೋಡೆಗಳನ್ನು ಕೆಡವಿದರು. ಅದರ ಬುರುಜುಗಳ ಅವಶೇಷಗಳು ಇವೆ.

ಈ ನಗರದಲ್ಲಿರುವ ಇತರ ದೇವಾಲಯಗಳೆಂದರೆ ದತ್ತಾತ್ರೇಯ (ಮಂಗಳವಾರಪೇಟೆ), ಕಾಳಮ್ಮ (ಮಂಗಳವಾರಪೇಟೆ), ಕರೆವ್ವ (ತೋಟಗೇರಿ ಗಲ್ಲಿ), ಲಕ್ಷ್ಮಿದೇವಿ (ಬಿ.ನಗರ) ಗಣಪತಿ (ವಿದ್ಯಾರಣ್ಯ ಪ್ರೌಢಶಾಲೆ ಹತ್ತಿರ), ಹರಿಮಂದಿರ (ಮಂಗಳವಾರ ಪೇಟೆ), ಲಕ್ಷ್ಮಿನಾರಾಯಣ (ಜವಳಿ ಪೇಟೆ), ನರಸಿಂಹ (ಮಂಗಳವಾರ ಪೇಟೆ), ರಾಮಮಂದಿರ (ಸ್ಟೇಷನ್ ರಸ್ತೆ), ರಾಮಮಂದಿರ (ಲೈನ ಬಜಾರ್), ಜೋಗಳೇಕರ್ ರಾಮಮಂದಿರ (ಸ್ಟೇಷನ್ ರಸ್ತೆ), ವಿಠೋಬ ಎರಡು (ಮಂಗಳವಾರ ಮತ್ತು ಸಪ್ತಾಪುರ), ವೆಂಕಟೇಶ ಎರಡು (ದೇಸಾಯಿ ಗಲ್ಲಿ, ಸಾಹುಕಾರ್ ಪೇಟೆ, ಈಶ್ವರ (ಜವಳಿಪೇಟೆ), ನಗರೇಶ್ವರ (ರವಿವಾರ ಪೇಟೆ), ಹನುಮಂತ (ಒಟ್ಟು 12), ನಂದಿಕೋಲ್ ಬಸವೇಶ್ವರ (ಮಂಗಳವಾರ ಪೇಟೆ), ಬಸವೇಶ್ವರ (ಹಾವೇರಿ ಪೇಟೆ), ವೀರಭದ್ರ (ಕಾಮನಕಟ್ಟಿ ಮತ್ತು ವಿದ್ಯಾಗಿರಿಯ ಹಿಂಭಾಗ ಹೊಂಡದ ವೀರಭದ್ರ ಮತ್ತು (ಮಂಗಳವಾರ ಪೇಟೆ) ಮುಂತಾದವುಗಳಿವೆ. ಮಾಳಮಡ್ಡಿಯಲ್ಲಿರುವ ಹಳೆಯದಾದ ರಾಘವೇಂದ್ರ ಮಠ ಹಾಗೂ ಉತ್ತರಾಧಿಮಠದ ಇಲ್ಲಿ ರಘೋತ್ತಮ ತೀರ್ಥರ ಮೃತ್ತಿಕಾಬೃಂದಾವನವಿದೆ. ಇದಲ್ಲದೇ ರಾಯರ ಮಠಗಳು ಶುಕ್ರವಾರ ಪೇಟೆ ಹಾಗೂ ದೇವಾಯಿ ಗಲ್ಲಿಗಳಲ್ಲೂ ಇದೆ.

ನಗರದಲ್ಲಿರುವ ಜೈನ ಬಸದಿಗಳೆಂದರೆ ಜವಳಿ ಪೇಟೆಯಲ್ಲಿರುವ ಜೈನ ಶ್ವೇತಾಂಬರ ಬಸದಿ ಮತ್ತು ಬಸದಿ ಓಣಿಯಲ್ಲಿರುವ ಮಹಾವೀರ ಜೈನ ಬಸದಿ. ಹಾವೇರಿ ಪೇಟೆಯಲ್ಲಿರುವ ಮುರುಘಾಮಠ ವೀರಶೈವರ ಧಾರ್ಮಿಕ ಚಟುವಟಿಕೆಯ ಮುಖ್ಯ ಕೇಂದ್ರವಾಗಿದೆ. ಪೇಶ್ವೆ ಕಾಲದಲ್ಲಿ ಭೂಮಿಯನ್ನು ದಾನವಾಗಿ ನೀಡಲಾಗಿರುವ ವಿಶಾಲ ನಿವೇಶನದಲ್ಲಿ ಈ ಮಠವನ್ನು ಕಟ್ಟಲಾಗಿದ್ದು ಬಡ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್‌ಗಳನ್ನು ಸಹ ನಿರ್ಮಿಸಲಾಗಿದೆ.

ಧಾರವಾಡವು ಬಿಜಾಪುರದ ಆದಿಲ್‌ಷಾಹಿ ಆಳ್ವಿಕೆಗೆ ಒಳಪಟ್ಟಿದ್ದರಿಂದ ಮುಸ್ಲಿಮರು ಈ ನಗರದಲ್ಲಿ ಆ ಕಾಲದಿಂದಲೂ ನೆಲೆಸಿರುವರು. ಇಲ್ಲಿರುವ ಅತ್ಯಂತ ಪ್ರಾಚೀನ ಮಸೀದಿ ಎಂದರೆ ಪೆಂಡಾರ್ ಓಣಿಯಲ್ಲಿರುವ ಜುಮ್ಮಾ ಮಸೀದಿ ವಾಸ್ತುಶಿಲ್ಪದ ದೃಷ್ಟಿಯಿಂದ ಇದು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದ್ದು ಈಗ ವಿಶಾಲವಾದ ನಿವೇಶನದಲ್ಲಿದೆ. ಎತ್ತರವಾದ ಎರಡು ಮೀನಾರ್‌ಗಳು ಹಾಗೂ ಗೋಳಾಕಾರವಾದ ಕೇಂದ್ರೀಯ ಗೋಪುರಗಳು ಆಕರ್ಷಕವಾಗಿವೆ. ಈ ಮಸೀದಿಯ ಆವರಣದಲ್ಲಿ ಕಲೀಮುಲ್ಲಾಷಾಖಾದ್ರಿಯವರ ದರ್ಗಾಯಿದ್ದು ಇಲ್ಲಿ ಜಿಲ್‌ಹಜ್ ತಿಂಗಳಲ್ಲಿ ಉರುಸ್ ನಡೆಯುತ್ತದೆ. ನಗರದಲ್ಲಿರುವ ಇತರ ಮಸೀದಿಗಳೆಂದರೆ ಮದನಿ ಮಸೀದಿ (ಟಿಕಾರೆ ರಸ್ತೆ), ರೋಣಾಕ್‌ಪುರ್ ಮಸೀದಿ (ರಸುಲ್‌ಪುರ್ ಬಡಾವಣೆ), ಸೌದಾಗರ್ ಮಸೀದಿ (ಮಾಳಾಪುರ ಓಣಿ), ಸೈದಾಪುರ ಮಸೀದಿ (ಸೈದಾಪುರ್ ಓಣಿ) ನಾಲ್ಕು ಮಸೀದಿಗಳು (ಹಾವೇರಿ ಪೇಟೆ), ಚಪ್ಪರ್‌ಬಂದ್ ಮಸೀದಿ (ಚಪ್ಪರ್‌ಬಂದ್ ಕಾಲೋನಿ), ಬಿಲಾಲ್ ಮಸೀದಿ (ಜನ್ನತ್‌ನಗರ), ಸುರಾನಿ ಮಸೀದಿ (ಆಜಾದ್‌ನಗರ), ಮದೀನಾ ಮಸೀದಿ (ಪಿ.ಬಿ. ರಸ್ತೆ), ತೇಜಸ್ವಿನಗರ ಮಸೀದಿ, ರಾಮನಗರ್ ಮಸೀದಿ, ಜಯನಗರ ಮಸೀದಿ ಇನ್ನೂ ಮುಂತಾದವುಗಳು ಕಂಡುಬರುತ್ತವೆ. ಮಸೀದಿಗಳೇ ಅಲ್ಲದೇ ನಗರದಲ್ಲಿರುವ ದರ್ಗಾಗಳೆಂದರೆ ಕಂಠಿ ಓಣಿಯಲ್ಲಿರುವ ದುಲ್ಲಾಹ್ ಬಕಷ್ ದರ್ಗಾ (ಉರುಸ್, ರಬೀಲ್ ಆಕರ್) ಕಾಟನ್ ಮಾರು ಕಟ್ಟೆಯಲ್ಲಿ ಹಜರತ್ ಶೇರ್ ಖಾನ್‌ವಲಿ (ಉರುಸ್-ರಬೀಲ್ ಅವ್ವಲ್) ಕೋಟೆ ಹತ್ತಿರದ ಇಸ್ಮಾಯಿಲ್ ಷಾಖಾದ್ರಿ (ಉರುಸ್-ರಬಿಲ್ ಆಕರ್) ಅನವರ್‌ಷಾ ಮುನಾವರ್ ಷಾ, ಸೈಯದ್ ಸದತ್ ದರ್ಗಾ ಜಾಮಿಯಾ ಮಸೀದಿ (ಉರುಸ್-ಜಿಲ್‌ಹಜ್)

ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಪೀರ್ ಶೇರ್‌ಖಾನ್‌ವಲಿ (ಉರುಸ್-ರಬಿಲ್ ಆಕರ್) ಮತ್ತು ಬಸ್ ಸ್ಟಾಂಡ್ ಹತ್ತಿರ ಮದನ್ ಷಾವಲಿ ಉರುಸ್ (ರಜ್ಜಬ್) ಇದಲ್ಲದೇ ಇನ್ನೂ ಕೆಲವು ದರ್ಗಾಗಳಿವೆ.

ಕ್ರೈಸ್ತಮತೀಯರು ಧಾರವಾಡ ನಗರದಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಾರಂಭದಿಂದಲೂ ನೆಲೆಸಿರುವರು. ತಮಿಳರೂ ಗೋವೆಯಿಂದ ಬಂದವರೂ ಇವರಲ್ಲಿ ಇದ್ದರು. ಬಾಸೆಲ್ ಮಿಶನ್ ಸಂಸ್ಥೆಯವರು 1844 ರಲ್ಲಿ ತಮ್ಮ ಚಟುವಟಿಕೆಗಳನ್ನು ತಮ್ಮದೇ ಹೆಬಿಕ್ ಸ್ಮಾರಕ ಚರ್ಚನ್ನು (14 ನೇ ಡಿಸೆಂಬರ್ 1945) ಅವರ ಈಗಿನ ನಿವೇಶನದಲ್ಲಿ ನಿರ್ಮಿಸುವುದರ ಮೂಲಕ ಆರಂಭಿಸಿದರು. ವಿಶಾಲವಾದ ಯುರೋಪಿಯನ್ ಶೈಲಿಯ ವಾಸ್ತು ವಿನ್ಯಾಸವನ್ನು ಹೊಂದಿರುವ ಈ ಚರ್ಚ್ 76 ಅಡಿ ಉದ್ದವಿದ್ದು 42 ಅಡಿ ಅಗಲವಿದೆ. ಮತ್ತು ಕೋನಾಕಾರವಾದ 24 ಅಡಿ ಎತ್ತರದ ಗೋಪುರವನ್ನು ಅಳವಡಿಸಲಾಗಿದೆ. ಇದೊಂದು ಆಕರ್ಷಕ ಯೂರೋಪಿಯನ್ ಶೈಲಿಯ ಕಟ್ಟಡವೆಂದು ಹೇಳಬಹುದು. ನಗರದ ಪ್ರಥಮ ರೋಮನ್ ಕ್ಯಾಥೋಲಿಕ್ ಚರ್ಚ್‌ನ್ನು 1894 ರಲ್ಲಿ ಎಚ್. ಕೊರ್‌ಪಾಲ್ಸೆಸ್ ಎಂಬ ವಾಸ್ತು ಶಿಲ್ಪಿ ಇದರ ಮುಂಭಾಗದ ವಾಸ್ತು ವಿನ್ಯಾಸದ ರಚನೆಯನ್ನು ನಿರ್ಮಿಸಿದನೆಂದು ದಾಖಲೆಗಳು ತಿಳಿಸುತ್ತವೆ. ಇದರ ಸ್ಥಳವಿನ್ಯಾಸವು 'ಟಿ' ಮಾದರಿಯಲ್ಲಿದ್ದು ಸುಟ್ಟ ಇಟ್ಟಿಗೆ ಹಾಗೂ ಗಾರೆಯಿಂದ ಮುಖ್ಯ ಕಟ್ಟಡವನ್ನು ಭದ್ರವಾಗಿ ನಿರ್ಮಿಸಲಾಗಿದೆ. ಛಾವಣಿಗೆ ಮಂಗಳೂರು ಹೆಂಚಿನ ಹೊದಿಕೆಯನ್ನು ಕಲಾತ್ಮಕವಾಗಿ ಹೊಂದಿಸಲಾಗಿದೆ. ವಿಶಾಲವಾದ ಎರಡು ಪಡಸಾಲೆಗಳಿದ್ದು ಸುಮಾರು 200 ಜನಗಳಿಗೆ ಸ್ಥಳಾವಕಾಶ ಸೌಲಭ್ಯವಿದೆ. ವಿಶಾಲವಾದ ಆವರಣವನ್ನು ಹೊಂದಿರುವ ಚರ್ಚ್‌ನಲ್ಲಿ ಸೆಂಟ್ ಜೋಸೆಫ್ಸ್ ಆಂಗ್ಲ ಶಾಲೆಯನ್ನು ಇದೇ ಸಂಕೀರ್ಣದಲ್ಲಿಯೆ ಸ್ಥಾಪಿಸಲಾಗಿದೆ. ಧಾರವಾಡ ಹಳಿಯಾಳ್ ರಸ್ತೆಯಲ್ಲಿರುವ ಆಲ್‌ಸೈಂಟ್ಸ್ ಚರ್ಚನ್ನು 27 ನೇ ಅಕ್ಟೋಬರ್ 1888 ರಲ್ಲಿ ವಿಶೇಷವಾದ ವಾಸ್ತು ಶಿಲ್ಪ ರಚನೆಯನ್ನು ಅಳವಡಿಸಿ ನಿರ್ಮಿಸಿರುವ ಕಟ್ಟಡವಾಗಿದೆ. ಇದರ ನೆಲಕ್ಕೆ ಚೆಂದವಾದ ಹೊಳಪಿರುವ ನೆಲ ಬಿಲ್ಲೆಗಳನ್ನು ಉಪಯೋಗಿಸಲಾಗಿದೆ ಹಾಗೂ ಛಾವಣಿಗೆ ಬಲವಾದ ಕಬ್ಬಿಣದ ವಿವಿಧ ಆಕಾರಗಳನ್ನು ಪ್ರತಿನಿಧಿಸುವ ಗರ್ಡರ್‌ಗಳನ್ನು ಬಳಸಲಾಗಿದೆ. ಇತರ ಅವಶೇಷಗಳಲ್ಲಿ ಮುಖ್ಯವಾದುದು ಥ್ಯಾಕರೆ ಹಾಗೂ ಮನ್ರೋ ಸ್ಮಾರಕಗಳು. ಕಿತ್ತೂರಿನ ಸೈನ್ಯದ ವಿರುದ್ಧ ಹೋರಾಡಿ ಮಡಿದ ಬ್ರಿಟಿಷರ ಸೈನ್ಯಾಧಿಕಾರಿಗಳಾದ ಥ್ಯಾಕರೆ ಹಾಗೂ ಮನ್ರೋರ ಸ್ಮರಣಾರ್ಥವಾಗಿ 1824 ರಲ್ಲಿ ಬೆಳಗಾವಿ ರಸ್ತೆಯಲ್ಲಿರುವ ಕಿತ್ತೂರು ಚೆನ್ನಮ್ಮ ಉದ್ಯಾನವನದಲ್ಲಿ ನಿರ್ಮಿಸಲಾಯಿತೆಂದು ಪ್ರತೀತಿಯಿದೆ. ಈ ಸ್ಮಾರಕದ ಮೇಲೆ ಬಹುಭಾಷಾ ಶಾಸನವೂ ಇದೆ. ಮಟನ್ ಮಾರ್ಕೆಟ್‌ನಲ್ಲಿ ಕಿತ್ತೂರಲ್ಲಿ ಮಡಿದ ಸೆಂಟ್‌ಜಾನ್ ಥ್ಯಾಕರೆ ಹಾಗೂ ಇತರ ಬ್ರಿಟೀಷ್ ಅಧಿಕಾರಿಗಳಾಗಿದ್ದ ಕ್ಯಾಪ್ಟನ್ ಬ್ಲ್ಯಾಕ್. ಲೆಫ್ಟಿನೆಂಟ್ ಸ್ಯೂಯಲ್ ಮತ್ತು ಡೆಯ್ಟಿನ್ ಅವರುಗಳ ಸಮಾಧಿಗಳಿವೆ.

ಧಾರವಾಡ ನಗರದ ಸಾರ್ವಜನಿಕ ಕಟ್ಟಡಗಳಲ್ಲಿ ಪ್ರಮುಖವಾದುದೆಂದರೆ ಕರ್ನಾಟಕ ಕಾಲೇಜಿನ ಬೃಹತ್ ಕಟ್ಟಡ. ಇದು ಕಮಾನು ಹಾಗೂ ಕೋನಾಕಾರದ ಚಿಕ್ಕ ಗೋಪುರಗಳನ್ನು ಛಾವಣಿ ಮೇಲ್ಭಾಗದಲ್ಲಿ ಹೊಂದಿರುವುದೇ ಅಲ್ಲದೇ ಇಂಡೋಯೂರೋಪಿಯನ್ ಶೈಲಿಯ ('ಟಿ' ಮಾದರಿಯ ಸ್ಥಳವಿನ್ಯಾಸ) ವಾಸ್ತು ರಚನೆಯನ್ನು ಪ್ರತಿನಿಧಿಸುತ್ತದೆ. ಮೊದಲು ಈ ಕಟ್ಟಡವನ್ನು 1889 ರಲ್ಲಿ ಎಂ.ಎಸ್.ಎಂ. ರೈಲ್ವೆ ಕಂಪನಿಯವರು ತಮ್ಮ ಕಛೇರಿಗಳನ್ನು ವರ್ಗಾಯಿಸುವ ಮೂಲಕ ನಿರ್ಮಿಸಿದರು. ಅನಂತರ 1920-21 ರಲ್ಲಿ ಬ್ರಿಟಿಷ್ ಸರಕಾರದವರೇ ಕರ್ನಾಟಕ ಕಾಲೇಜನ್ನು ಸ್ಥಾಪಿಸುವ ಉದ್ದೇಶದಿಂದ ಈ ಕಟ್ಟಡವನ್ನು (ರೂ. 3,26,956) ಖರೀದಿಸಿದರು. ಈ ಕಟ್ಟಡದ ನೆಲಕ್ಕೆ ಇಟಲಿ ಮತ್ತು ಯರಗುಂತಲದ ಚಪ್ಪಡಿಗಳನ್ನು ಹಾಸಿದ್ದಾರೆ. ಇದರ ಛಾವಣಿಗೆ ಮಂಗಳೂರು ಹೆಂಚಿನ ಹೊದಿಕೆಯಿದೆ. ಈ ಕಟ್ಟಡವು ಒಟ್ಟು 23,070 ಚದರ ಅಡಿಗಳಿವೆ ಹಾಗೂ ಸುಮಾರು ಆರು ಎಕರೆ 29 ಗುಂಟೆ ವಿಶಾಲ ನಿವೇಶನವನ್ನು ಹೊಂದಿದೆ. ಇದೊಂದು ಧಾರವಾಡದ ವೈಭವಯುತ ಯೂರೋಪಿಯನ್ ಶೈಲಿಯ ಕಟ್ಟಡವೆಂದು ಹೇಳಬಹುದು.

ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಕೇಂದ್ರಗಳು ಧಾರವಾಡದಲ್ಲಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡಗಳು ನಗರದ ಪ್ರಮುಖ ಆಕರ್ಷಣೆಯಾಗಿದೆ. ಎಲ್ಲಾ ಅಧ್ಯಯನ ವಿಭಾಗಗಳನ್ನು ಗ್ರಂಥಾಲಯದ ಹಾಗೂ ಸಂಶೋಧನಾ ವಿಭಾಗಗಳನ್ನು ಪ್ರತ್ಯೇಕ ಕಟ್ಟಡಗಳಲ್ಲಿ ನಿರ್ಮಿಸಲಾಗಿದೆ. ವಿಶ್ವವಿದ್ಯಾಲಯದ ಕಾರ್ಯಸೌಧವು ಇದೇ ರೀತಿಯ ಪ್ರಮುಖ ಕಟ್ಟಡವಾಗಿದೆ. ಮಧ್ಯದಲ್ಲಿ ಗಡಿಯಾರದ ಗೋಪುರವನ್ನು ಹೊಂದಿದ್ದು ಇಂಡೋ ಸಾರ್ಸೆನಿಕ್ ಶೈಲಿಯಲ್ಲಿ ವಾಸ್ತು ವಿನ್ಯಾಸವನ್ನು ನಿಯೋಜಿಸಲಾಗಿದೆ. ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಅತ್ಯಂತ ವ್ಯಾಪಕವಾದ ಪ್ರಾಚೀನ ಸಂಗ್ರಹಗಳನ್ನು ಹೊಂದಿರುವ ವಸ್ತು ಸಂಗ್ರಹಾಲಯವಿದೆ. ಪ್ರಾಚ್ಯವಸ್ತು ಹಾಗೂ ಇತಿಹಾಸ ವಿಭಾಗವೂ ಇಲ್ಲೇ ಕಾರ್ಯನಿರ್ವಹಿಸುತ್ತಿದೆ. ನಗರದಲ್ಲಿ ರಾಜ್ಯ ಪ್ರಾಚ್ಯವಸ್ತು

ಮತ್ತು ಸಂಗ್ರಹಾಲಯ ಇಲಾಖೆಯ ವಸ್ತು ಸಂಗ್ರಹಾಲಯವು ಎಮ್ಮಿಕೇರಿ ಬಳಿ ಇದೆ. ನಗರದಲ್ಲಿರುವ ಇತರ ಸಾರ್ವಜನಿಕ ಕಟ್ಟಡಗಳೆಂದರೆ ನಗರದ ಟೌನ್‌ಹಾಲ್, ಕರ್ನಾಟಕ ವಿದ್ಯಾವರ್ಧಕ ಸಂಘ (1890), ಸಂಸ್ಕೃತ ಕಾಲೇಜು, ನಗರ ಕಛೇರಿಗಳ ಕಟ್ಟಡ, ಮಾನಸಿಕ ಆಸ್ಪತ್ರೆ, ಕಟ್ಟಡ (1845-46) ಕರ್ನಾಟಕ ಶಿಕ್ಷಣ ಸಮಿತಿಯ ಕಾಲೇಜು, ಜಿಲ್ಲಾಧಿಕಾರಿಗಳ ಕಛೇರಿ, (1820-21) ಸಿವಿಲ್ ನ್ಯಾಯಾಧೀಶರ ಕೋರ್ಟ್ ಕಟ್ಟಡ (1820-21) ಜಿಲ್ಲಾ ನ್ಯಾಯಾಲಯ ಕಟ್ಟಡ (1861-62) ಸಾರ್ವಜನಿಕ ಆಸ್ಪತ್ರೆ ಕಟ್ಟಡ (1881) ಮುಂತಾದುವುಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಧಾರವಾಡ ನಗರಕ್ಕೆ ಕುಡಿಯುವ ನೀರನ್ನು ಕಲಘಟಗಿ ರಸ್ತೆಯಲ್ಲಿರುವ (ಧಾರವಾಡದಿಂದ 22 ಕಿಮೀ) ನೀರಸಾಗರವೆಂಬ ಅಣೆಕಟ್ಟಿನಿಂದ ಸರಬರಾಜು ಮಾಡಲಾಗುತ್ತದೆ. ಇದಲ್ಲದೇ ನಗರದ ಹಲವಾರು ಸ್ಥಳಗಳಲ್ಲಿ ನೀರು ರಿಸರ್‌ವಾಯಿರ್‌ಗಳನ್ನು ಈಚೆಗೆ ನಿರ್ಮಿಸಲಾಗಿದೆ. ನೀರಸಾಗರವು ಉತ್ತಮ ವಿಹಾರಧಾಮವಾಗಿದೆ. ಇತ್ತೀಚೆಗೆ ಅನೇಕ ಕೈಗಾರಿಕಾ ಘಟಕಗಳನ್ನು ನಗರದ ಸುತ್ತಮುತ್ತ ಸ್ಥಾಪಿಸಲಾಗಿದೆ. ಇವುಗಳಲ್ಲಿ ಪ್ರಮುಖವಾದುದೆಂದರೆ ಕಿರ್ಲೋಸ್ಕರ್ ಮೂಲಸಂಸ್ಥೆಯ ಟೈವಾಕ್ ಕೈಗಾರಿಕಾ ಸಂಸ್ಥೆ ಎನ್ನಬಹುದು. ಅತ್ತಿಕೊಳ್ಳದಲ್ಲಿ ಪ್ಲೇವುಡ್ ಘಟಕವೂ ಒಂದು. ಧಾರವಾಡದ ಆಕಾಶವಾಣಿ ಹಾಗೂ ದೂರದರ್ಶನ ಪ್ರಸಾರ ಕೇಂದ್ರಗಳು ಕಾರ್ಯೋನ್ಮುಖವಾಗಿವೆ. ಧಾರವಾಡವು ಸಾಂಸ್ಕೃತಿಕ ಹಾಗೂ ಸಾಹಿತ್ಯ ಕೇಂದ್ರವಾಗಿದ್ದಂತೆಯೇ ಪುಸ್ತಕ ಪ್ರಕಟಣೆ ಹಾಗೂ ಪತ್ರಿಕೋದ್ಯಮಕ್ಕೂ ಉತ್ತಮ ಕೇಂದ್ರವಾಗಿದೆ. ಧಾರವಾಡದ ಪೇಡಾ ದೇಶದಲ್ಲೇ ಮಾನ್ಯತೆಯನ್ನು ಪಡೆದಿದೆ. ಇಲ್ಲಿಗೆ ಬಂದವರ್ಯಾರು ಇದನ್ನು ಖರೀದಿಸದೇ ಹಿಂದಿರುಗುವುದಿಲ್ಲ.

**ನರಗುಂದ** : ತಾಲೂಕು ಕೇಂದ್ರವಾಗಿರುವ ನರಗುಂದವು (ಜನಸಂಖ್ಯೆ :29,944) ಧಾರವಾಡದಿಂದ 60 ಕಿ.ಮೀ. ದೂರದಲ್ಲಿದ್ದು, ಧಾರವಾಡ - ಬಿಜಾಪುರ ರಸ್ತೆಯಲ್ಲಿದೆ. ತಾಲೂಕುಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಹಳ್ಳಿಗಳನ್ನು ಹೊಂದಿರುವ 'ನರಗುಂದ' 1857ರ ಬಾಬಾಸಾಹೇಬನ ದಂಗೆಯಿಂದಾಗಿ, 1980ರ ರೈತ ಚಳುವಳಿಯಿಂದಾಗಿ ಪ್ರಸಿದ್ಧವಾಗಿರುವ ಚಾರಿತ್ರಿಕ ಮಹತ್ವವನ್ನೂ ಪಡೆದಿದೆ. ಪ್ರಾಚೀನ ಶಾಸನಗಳಲ್ಲಿ 'ನರುಗುಂದ'; 'ನರಗುಂದ' 'ಪಿರಿಯನರಗುಂದ' ಎಂದು ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ನಾಲ್ಕು ಓಣಿಗಳಲ್ಲಿ ಹಂಚಿಹೋಗಿದ್ದ 220 ಮಹಾಜನರನ್ನು ಒಳಗೊಂಡಿದ್ದ ಮಹಾ ಅಗ್ರಹಾರವಾಗಿದ್ದು, ಬೆಳ್ವೊಲ - 300 ಕ್ಕೆ ಸೇರಿದ ಕೊಳನೂರು (ಇಂದಿನ ಕೊಣ್ಣೂರು) -30ಕ್ಕೆ ಸೇರಿತ್ತೆಂದು ತೋರುತ್ತದೆ. ನೆರೆಯ ಗ್ರಾಮಗಳಾದ ದಂಡಾಪುರ, ಸೋಮಾಪುರಗಳು ಇಂದು ನರಗುಂದ ಪುರಸಭೆಗೆ ಒಳಪಟ್ಟಿದ್ದು, ಬ್ರಿಟಿಷರ ಆಳ್ವಿಕೆಯಲ್ಲಿ ಇದು ನರಗುಂದ ಪೇಟಾ ಆಗಿತ್ತು. ಈ ಊರಿಂದ ಈವರೆಗೆ ಹನ್ನೊಂದು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ದಂಡಾಪುರದ ಬಾವಿ ಬಳಿಯಿರುವ ರಾಷ್ಟ್ರಕೂಟ ನಾಲ್ಕನೇ ಗೋವಿಂದನ ಕ್ರಿ.ಶ. 920ರ ಶಾಸನ ಅತ್ಯಂತ ಪ್ರಾಚೀನದಾಗಿದ್ದು, ಕೆರೆಯೊಂದರ ಸುಸ್ಥಿತಿಗಾಗಿ ಮಾಡಿದ ವ್ಯವಸ್ಥೆಯನ್ನು ತಿಳಿಸುವ ಮಹತ್ವದ ದಾಖಲೆ. ನರಗುಂದದ ಕ್ರಿ.ಶ. 1078ರ ಶಾಸನ ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ಮಮ್ಮನು ಸತ್ರಕ್ಕೆ ಭೂದಾನ ಮಾಡಿದ ಅಂಶವನ್ನು ಹೇಳಿದರೆ, ಕ್ರಿ.ಶ. 1079ರ ದಂಡಾಪುರ ಮತ್ತೊಂದು ಶಾಸನ ದಂಡನಾಯಕ ಸಾಯಿಮಯ್ಯನೂ ಸತ್ರಕ್ಕೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಶಂಕರಲಿಂಗ ದೇವಾಲಯದಲ್ಲಿರುವ ಕ್ರಿ.ಶ. 1139ರ ಶಾಸನದ ದಂಡನಾಯಕ ರುದ್ರದೇವರಸನು ನರಗುಂದ ಅಗ್ರಹಾರದಲ್ಲಿದ್ದ ಧವಳ ಶಂಕರ ದೇವಾಲಯಕ್ಕೆ ಅಲ್ಲಿನ ಸಿದ್ದಾಯ ದಾನ ಬಿಟ್ಟ ವಿಷಯ ಹೇಳುತ್ತದೆ. ಜೋಡು ಹನುಮಂತದೇವರ ಗುಡಿ ಬಳಿಯಿರುವ ಕ್ರಿ.ಶ. 1140ರ ಶಾಸನ ಕೀರ್ತಿನಾರಾಯಣ ದೇವರಿಗೆ ಲಕ್ಷ್ಮೀನಾರಾಯಣಭಟ್ಟ ನೀಡಿದ ದಾನದ ಬಗ್ಗೆ ತಿಳಿಸುತ್ತದೆ. ಸುಮಾರು ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ ಧವಳ ಶಂಕರಗುಡಿಯ ಇನ್ನೊಂದು ಶಾಸನ ಕುಂಪಟಿ ವಿಟಿಸೆಟ್ಟಿಯು ನೀಡಿದ ದಾನದ ಬಗ್ಗೆ ತಿಳಿಸಿದರೆ, ಬಸವಣ್ಣನ ಗುಡಿ ಮುಂದಿರುವ ಕ್ರಿ.ಶ. 1075ರ ಶಾಸನ ಬಸದಿಗೆ ಸೆಟ್ಟಿಯೊಬ್ಬ ದಾನಕೊಟ್ಟ ವಿಷಯ ತಿಳಿಸುತ್ತದೆ. ಹನುಮಂತಗುಡಿ (ಸೋಮಪುರದ ಓಣಿ) ಮುಂದೆ ಇರುವ ಕ್ರಿ.ಶ. 1103ರ ಶಾಸನ ಮೆಕ್ಕೆಗೇರಿಯ 35 ಮಹಾಜನರು ಮಂಡೆಗೆರೆಯ ಕೆರೆಗೆ ದಾನ ಬಿಟ್ಟ ವಿಷಯವನ್ನು ಹೇಳಿದರೆ ಕ್ರಿ.ಶ. 1769ರ ಶಾಸನದಿಂದ ದೇವನಾಯಕನು ಸೋಮಾಪುರದಲ್ಲಿ ಹನುಮಂತದೇವರ ಪ್ರತಿಷ್ಠಾಪನೆ ಮಾಡಿದ ವಿಷಯ ಗೊತ್ತಾಗುತ್ತದೆ.

ಮೇಲಿನ ಶಾಸನೋಕ್ತ ಗುಡಿಗಳ ಇಂದು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಉಳಿದಿದೆ. ಪುರಸಭೆಯ ಬಳಿಯಲ್ಲೇ ಇರುವ ದಂಡೇಶ್ವರ ಗುಡಿ ಸುಮಾರು 10ನೇ ಶತಮಾನದ ರಚನೆಯಾಗಿರುವ ದ್ವಿಕೂಟವಾಗಿದೆ. ಎದುರು ಬದುರಾಗಿ ಗರ್ಭಗೃಹ ತೆರೆದ ಅರ್ಧಮಂಟಪವನ್ನು ಹೊಂದಿರುವ ಈ ದ್ವಿಕೂಟಗಳಿಗೆ ಒಂದೇ ನವರಂಗವಿದ್ದು, ನವರಂಗದ ಉತ್ತರ ಭಾಗದಲ್ಲಿರುವ ಹೆಬ್ಬಾದ

ಒಂದು ಅಂಕಣವು ಇದನ್ನು ತ್ರಿಕೂಟವೆಂಬಂತೆ ಭ್ರಮೆ ಹುಟ್ಟಿಸುತ್ತದೆ. ನಕ್ಷತ್ರಕಾರದಲ್ಲಿರುವ ಈ ಗರ್ಭಗೃಹಗಳಲ್ಲಿ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಎದುರಿನ ಗರ್ಭಗೃಹದಲ್ಲಿ ಸೂರ್ಯಪೀಠದ ಮೇಲೆ ನಾರಾಯಣ ಮೂರ್ತಿಯಿದೆ. ಅರ್ಧಮಂಟಪಗಳನ್ನು ಆಕರ್ಷಕವಾದ ಮಕರತೋರಣಗಳು ಅಲಂಕರಿಸಿದ್ದು ಒಂದರಲ್ಲಿ ಆಸೀನ ಬ್ರಹ್ಮ, ಮಹೇಶ್ವರ, ವಿಷ್ಣು ಹಾಗೂ ಕೆತ್ತನೆ ಇದ್ದರೆ, ಇನ್ನೊಂದರಲ್ಲಿ ಸೂರ್ಯನನ್ನು ಕೆತ್ತಿದ್ದಾರೆ. ನವರಂಗದ ಸ್ತಂಭಗಳು ಸರಳವಾಗಿ ನಿರಾಡಂಬರವಾಗಿದ್ದು, ಛತ್ತಿನಲ್ಲಿ ತ್ರಿದಳ ಕಮಲವಿದೆ. ನವರಂಗದ ಒಂದು ಮೂಲೆಯಲ್ಲಿ ಗಣಪತಿ ಶಿಲ್ಪವಿದೆ. ದೇವಾಲಯದ ಹೊರಭಿತ್ತಿಯನ್ನು ವೈವಿಧ್ಯಮಯವಾದ ಶಿಖರ ಮಾದರಿಗಳಿಂದ, ಅಲಂಕಾರಿಕ ಕಂಬಗಳಲ್ಲಿ ಅಲಂಕರಿಸಲಾಗಿದೆ. ಗರ್ಭಗೃಹಗಳ ಶಿಖರಗಳು ಜೀರ್ಣೋದ್ಧಾರಗೊಂಡಿವೆ.

ಇಲ್ಲಿನ ಮತ್ತೊಂದು ಆಕರ್ಷಣೆಯೆಂದರೆ, ಶಂಕರಲಿಂಗ ದೇವಾಲಯ. ವಿಶಾಲವಾದ ಪ್ರಾಕಾರದೊಳಗಿರುವ ಈ ಗುಡಿಯೂ ಕೂಡ ಕ್ರಿ.ಶ. 10-11ನೇ ಶತಮಾನದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ ನವರಂಗಗಳನ್ನು ಹೊಂದಿದ್ದು, ಜೀರ್ಣೋದ್ಧಾರದ ಸಂದರ್ಭದಲ್ಲಿ ಇದಕ್ಕೆ ವಿಶಾಲವಾದ ಸಭಾಮಂಟಪವನ್ನು ಸೇರಿಸಿದ್ದಾರೆ. ಇಲ್ಲೇ ಗುಡಿಯ ನವರಂಗದಲ್ಲೇ ಇರುವ ಶಾಸನಗಳು ಈ ಗುಡಿಯನ್ನು 'ಧವಳ ಶಂಕರ ದೇವಾಲಯ'ವೆಂದು ಕರೆದಿದ್ದು ಇದರ ಗರ್ಭಗೃಹದಲ್ಲಿ ಚಂದ್ರಕಾಂತ ಶಿಲೆಯ ಲಿಂಗವಿದೆ. ನವರಂಗದ ಉತ್ತರದಲ್ಲಿ ಕಿರುಗುಡಿಯಿದ್ದು ತೀರ್ಥಂಕರ ಪೀಠದ ಮೇಲೆ ಇತ್ತೀಚಿನ ದೇವಿ ಮೂರ್ತಿ ಇದೆ. ಸಭಾಮಂಟಪದ ಮೂಲಕ ಗುಡಿಗೆ ಪ್ರವೇಶಿಸಲು ಪೂರ್ವದಲ್ಲಿ ಇತ್ತೀಚಿನ ಪ್ರಧಾನ ಪ್ರವೇಶ ದ್ವಾರವಿದೆ. ಈ ಗುಡಿಯ ಪ್ರಾಕಾರದಲ್ಲಿ ಭಗ್ನವಾದ ತೀರ್ಥಂಕರ ಮೂರ್ತಿಯ ಪ್ರಭಾವಳಿ ಹಾಗೂ ಪದ್ಮಾವತಿ ಯಕ್ಷಿಯ ರುಂಡವಿದ್ದು ಕಿರೀಟದಲ್ಲಿ ತೀರ್ಥಂಕರ ಕೆತ್ತನೆಯಿದೆ. ಇಲ್ಲಿನ ದಂಡೇಶ್ವರ ಹಾಗೂ ಶಂಕರಲಿಂಗ ದೇವಾಲಯಗಳೆರಡೂ ಸುರಕ್ಷಿತ ಸ್ಮಾರಕಗಳಾಗಿವೆ. ಬಿಜಾಪುರ ರಸ್ತೆಯಲ್ಲಿರುವ ಮಾರುತಿ ಗುಡಿ ಪ್ರಾಚೀನ ಗುಡಿಯಾಗಿದ್ದು, ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿದ್ದು ದುಂಡಾದ ಅಡ್ಡಕೊಯ್ತದ ಆಕರ್ಷಕ ಕಂಬಗಳನ್ನು ಹೊಂದಿದೆ. ಇಲ್ಲಿನ ಪುರಸಭೆ ಕಟ್ಟಡ ಅತ್ಯಂತ ಪ್ರಾಚೀನದ್ದಾಗಿದ್ದು ಹಿಂದೆ ಬಾಬಾಸಾಹೇಬನ ಅರಮನೆಯಾಗಿತ್ತು. ಈ ಕಟ್ಟಡದ ಒಂದು ಕೊಠಡಿಯಲ್ಲಿ ಆಕರ್ಷಕವಾದ ವರ್ಣಚಿತ್ರಗಳಿದ್ದು, ಹಳೆಯ ಖಡ್ಗವೂ ಇದೆ.

ನರಗುಂದದ ಗುಡ್ಡದ ಇಳಿಜಾರಲ್ಲಿ, ಬೃಹತ್ತಾದ ವಿಶಾಲವಾದ ವೆಂಕಟೇಶ್ವರ ದೇವಾಲಯವಿದೆ. ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಪಂಚಶಿಖರಗಳಿಂದ ಕೂಡಿದ್ದ, ಈ ಗುಡಿಯ ಶೀಖರಗಳು ಎತ್ತರವಾಗಿದ್ದು ದ್ರಾವಿಡ ಶೈಲಿಯಲ್ಲಿದೆ. ನವರಂಗದ ಒಳಭಾಗದ ಮಾಳಿಗೆಯಲ್ಲಿ ಮೊಗಸಾಲೆಯಿದೆ. ಗರ್ಭಗೃಹದಲ್ಲಿ ಬಾಬಾಸಾಹೇಬನ ಮನೆ ದೇವರಾದ ವೆಂಕಟೇಶ್ವರನ ಮೂರ್ತಿಯಿದೆ. ಈ ಗುಡಿಯ ಆವರಣದಲ್ಲಿ ಗೋವಿಂದರಾಜ, ವರಾಹ, ಹರಿಹರೇಶ್ವರನ ಗುಡಿಗಳಿವೆ. ತಿರುಪತಿ ತಿಮ್ಮಪ್ಪನ ಗುಡಿ ಮಾದರಿಯಲ್ಲೇ, ಇದನ್ನು ಭಾವೇ ಮನೆತನಕ್ಕೆ ಸೇರಿದ ರಾಮರಾಯರು ಕಟ್ಟಿಸಿದರೆಂದು ಪ್ರತೀತಿ ಇದೆ.

ಇದೇ ಪರಿಸರದಲ್ಲಿ ಬಾಬಾಸಾಹೇಬನ ಅಂತಪುರ ರಾಣೀವಾಸದ ಕಟ್ಟಡಗಳಿದ್ದು, ಬಳಸಿದಂತೆ ಕೋಟೆ ಇದೆ. ಊರಲ್ಲಿ ಬಾಬಾ ಸಾಹೇಬನ ಎದೆ ಮಟ್ಟದ ಆಧುನಿಕ ಪ್ರತಿಮೆ ಇದೆ.

ಉರಲ್ಲಿ ಕಾಶಿವಿಶ್ವನಾಥ, ಬಸವಣ್ಣ, ಮಹಾದೇವ, ನಗರೇಶ್ವರ, ವೀರಭದ್ರ, ಗಣಪತಿ, ಮೈಲಾರ, ಮಲ್ಲಿಕಾರ್ಜುನ, ಪಾಂಡುರಂಗ, ನರಸಿಂಹ, ದತ್ತಾತ್ರೇಯ, ಬನ್ನಿಮಹಾಂಕಾಳಿ, ರೇಣುಕಾ, ದ್ಯಾಮವ್ವ, ಉಡಚಮ್ಮ, ದುರ್ಗಮ್ಮನ ಗುಡಿಗಳಿವೆ. ಗುಡ್ಡದ ಇಳಿಜಾರಲ್ಲಿ ಮುನ್ಸಿಪಾಲ್‌ಕಾಲೇಜಿನ ಮುಂಭಾಗದಲ್ಲಿ ಪತ್ರೇವನವಿದ್ದು, ಇದರ ಆವರಣದಲ್ಲಿ ಪಂಚಗೃಹ ಪೀಠದ ಪ್ರಭು ಸಿದ್ದೇಶ್ವರ ಹಾಗೂ ಅಜ್ಜಪ್ಪನ ಗುಡಿಗಳಿವೆ. ಊರಲ್ಲಿ ಹಿರೇಮಠ, ವಿರಕ್ತಮಠ ಹಾಗೂ ಅಜ್ಜನ ಮಠಗಳಿವೆ. 'ಜಾತಕ ತಿಲಕ' ಎಂಬ ಜ್ಯೋತಿಷ್ಯ ಗ್ರಂಥ ರಚಿಸಿದ ಶ್ರೀಧರಾಚಾರ್ಯ ಸುಮಾರು 11ನೇ ಶತಮಾನದಲ್ಲಿ ಜೀವಿಸಿದ್ದು ಇವನು ನರಗುಂದದವನು. ಇಲ್ಲಿ ಜುಮ್ಮಾ ಮಸೀದಿ, ಛತ್ರೆಮಸೀದಿ ಹಾಗೂ ನಗೇನ ಮಸೀದಿಗಳಿವೆ. ಮೇಲಾಗಿ ದರ್ಗಾಗಳು ಇವೆ. ಮಲಪ್ರಭೆಯ ಕಾಲುವೆ ಈ ಭಾಗದ ಜಮೀನುಗಳಿಗೆ ನೀರುಣಿಸುವುದರಿಂದ ಇಲ್ಲಿನ ರೈತರು ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಾರೆ. ಇದೊಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಹತ್ತಿಗಿರಣಿ ಎಣ್ಣೆಗಿರಣಿಗಳಿವೆ. ಇತ್ತೀಚೆಗೆ ಹತ್ತಿ ಬೀಜದ ಎಣ್ಣೆ ತಯಾರಿಸುವ ಮಲಪ್ರಭಾ ಸಹಕಾರಿ ಎಣ್ಣೆಗಿರಣಿಯೊಂದನ್ನು ಸರ್ಕಾರ ಇಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಆರಂಭಿಸಿದ್ದು, ಉತ್ಪಾದನೆ ಆರಂಭಗೊಂಡಿದೆ. ಇಲ್ಲಿಗೆ ಸುಮಾರು 15 ಕಿ.ಮೀ. ದೂರದಲ್ಲಿರುವ ಚಿಕ್ಕನರಗುಂದವೂ ಗುಡ್ಡದ ಅಂಚಿನಲ್ಲೇ ಇರುವ ಊರಾಗಿದ್ದು ಅಲ್ಲಿ ಚಿಕ್ಕ ಗುಡ್ಡವಿರುವುದರಿಂದ ಅದಕ್ಕೆ ಚಿಕ್ಕನರಗುಂದ ಎಂಬ ಹೆಸರು ಬಂದಿದೆ. ಅಲ್ಲಿನ ಬಸವೇಶ್ವರ ಗುಡಿ ಜೀರ್ಣೋದ್ಧಾರಗೊಂಡಿದ್ದು ವಿಶಾಲವಾಗಿದೆ. ಈ ಗುಡಿ ಆವರಣದಲ್ಲಿ ಹಿಂದಿನ ಕಾಲದ ಭಗ್ನಾವಶೇಷಗಳಿವೆ.

**ನರೇಂದ್ರ :** ಧಾರವಾಡ ತಾಲೂಕಿನ (ಜನಸಂಖ್ಯೆ : 4,222) ಧಾರವಾಡದಿಂದ ವಾಯುವ್ಯಕ್ಕೆ ಆರು ಕಿ.ಮೀ. ದೂರದಲ್ಲಿ ಬೆಳಗಾವಿ ರಸ್ತೆಯಲ್ಲಿ ಸ್ವಲ್ಪ ಒಳಕ್ಕೆ ಇರುವ ನರೇಂದ್ರವು ಪ್ರಾಚೀನ ಶಾಸನಗಳಲ್ಲೂ ನರೇಂದ್ರ, 'ನರೇಂದ್ರಪುರ' ಎಂದೇ ಉಲ್ಲೇಖಗೊಂಡಿದ್ದು, ಹಿಂದೆ ಹಲಸಿಗೆ-12000ಕ್ಕೆ ಸೇರಿದ ಕುನ್ದೂರು-500ರ ಕೇಂದ್ರವಾಗಿತ್ತು. ಇದರ ಪ್ರಾಚೀನ ಹೆಸರು 'ಕುಂದೂರು' ಆಗಿತ್ತೆಂಬ ಅಂಶವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಕುಂದೂರು ಗ್ರಾಮದ ಉಲ್ಲೇಖವಿರುವ ಕ್ರಿ.ಶ. 1125ರ ಶಾಸನದಲ್ಲಿ ಕುಂದೂರ ಸೀಮೆಯನ್ನು ಹೇಳುವಾಗ ಕೊಟ್ಟ ವಿವರಗಳಂತೆ ಶಾಸನದಲ್ಲಿ ವ್ಯಕ್ತವಾಗಿರುವ ಕುಂದೂರೇ ಇದೆಂದು ಪರಿಗಣಿಸಬೇಕಾಗುತ್ತದೆ. ಕುಂದೂರು-500ರ ಮೊದಲಬಾಡ ಕುಂದೂರಾಗಿದ್ದುದರಿಂದ, ರಾಜಧಾನಿ ಎಂಬ ಪದವನ್ನು ನರೇಂದ್ರಪುರ ಎಂದು ಸಂಸ್ಕೃತಿಕರಣಗೊಳಿಸಿರುವಂತೆ ತೋರುತ್ತದೆ. ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಶಂಕರಲಿಂಗ ದೇವಾಲಯದ ಮೇಲ್ಛಾವಣಿಯಲ್ಲಿ ಹಾಕಲಾಗಿತ್ತೆಂದು ಡಾ|| ಬಾರ್ನೆಟ್ ಹೇಳಿ ದಾಖಲಿಸಿದ್ದು ಇಂದು ಕಣ್ಮರೆಯಾಗಿರುವ ಕ್ರಿ.ಶ. 1123ರ ಶಾಸನವೇ ಅತ್ಯಂತ ಪ್ರಾಚೀನ ಶಾಸನವಾಗಿದ್ದು ಗೋವೆ ಕದಂಬ ಅರಸ ಜಯಕೇಶಿದೇವರ ಹಿರಿಯರಸಿ ಮೈಳಲದೇವಿ ಕುಂದೂರ ದಲ್ಲಿದ್ದುಕೊಂಡು ಅರಕೆರೆಯಲ್ಲಿದ್ದ ಶಂಕರದೇವರಿಗೆ ಕುಂದೂರ ನಾಡ ಬಳಿಯ ಮರೆಯವಾಡದಲ್ಲಿ ಭೂಮಿ ಹಾಗೂ ಇತರ ಆಸ್ತಿಗಳನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಊರ ಬಳಿಯಿರುವ ಹತ್ತಿಗಿರಣಿಯ ಮುಂದೆ ಇರುವ ಮಲ್ಲಿಕಾರ್ಜುನ ಗುಡಿ ಬದಿಯಲ್ಲಿರುವ ಕ್ರಿ.ಶ. 1125ರ ಶಾಸನ, ಮೈಳಲದೇವಿ ಅರಸಿಯ ದಂಡನಾಯಕ ಸಿಂಗರಸನು ಕುಂದೂರ ದಕ್ಷಿಣ ಭಾಗದಲ್ಲಿ ನಿರ್ಮಿಸಿದ ಲಕ್ಷ್ಮೇಶ್ವರ ದೇವಾಲಯಕ್ಕೆ ಜಯಕೇಶಿ ಹಾಗೂ ಮೈಳಲದೇವಿಯರು ಮಾಡಿದ ಭೂದಾನ ಬಗ್ಗೆ ಉಲ್ಲೇಖಿಸುತ್ತದೆ. ಉಳಿದ ಮೂರು ಶಾಸನಗಳಲ್ಲಿ ಎರಡು ಬಹಳ ಹಾಳಾಗಿದ್ದು, ನಾಗಚಂದ್ರಸಿದ್ಧಾನ್ತದೇವರ ಶಿಷ್ಯರಾದ ಕನಕ ಶಾನ್ತಿ ಸಿದ್ಧಾಂತ ಮುನಿಯ ಸ್ಮಾರಕವಾಗಿ ನಿಷೀದಿಯನ್ನು ನಿಲ್ಲಿಸಿದ ವಿಷಯವನ್ನು ತಿಳಿಸುತ್ತದೆ. ಈ ಮೂರು ಶಾಸನಗಳನ್ನು ಡಾ|| ಕಲ್ಬುರ್ಗಿಯವರು ಪ್ರಕಟಿಸಿದ್ದಾರೆ.

ಶಾಸನೋಕ್ತ ದೇವಾಲಯಗಳಾವುವು ಇಂದು ಯಥಾರೀತಿಯಲ್ಲಿ ಉಳಿದಿಲ್ಲ. ಊರ ಹೊರಗೆ ಕೆರೆದಂಡೆ ಮೇಲೆ ಇರುವ ಶಂಕರಲಿಂಗ ದೇವಾಲಯ ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಈಗ ಕೇವಲ ಗರ್ಭಗೃಹ ಹಾಗೂ ವಿಶಾಲವಾದ ಅರ್ಧಮಂಟಪವಿದೆ. ಗರ್ಭಗೃಹದೊಳಗೆ ಮೂರಡಿ ಎತ್ತರದ ಪಾಣಿಗಟ್ಟಿಯ ಮೇಲೆ ಒಂದೂವರೆ ಅಡಿ ಎತ್ತರದ ಶಿವಲಿಂಗವಿದೆ. ಶಿವಲಿಂಗದ ಮೈತುಂಬಾ 11 ಸಾಲಲ್ಲಿ ಕಿರುಲಿಂಗಗಳಿದ್ದು, ಇದೊಂದು ಅಪರೂಪದ ಸಹಸ್ರಲಿಂಗವಿದಾಗಿದೆ. ಈ ಗುಡಿಯ ಮುಂದಿರುವ ಶಾಸನ ಶಿರೋಪಟ್ಟಿಕೆಯಲ್ಲಿ ಕ್ರಿ.ಶ. 1037ರ ಶಾಸನವೊಂದಿದ್ದು, ಜಯಕೇಶಿ-ಮೈಳಲದೇವಿಯರ ಉಲ್ಲೇಖ ಇದರಲ್ಲಿದ್ದು, ಇದು ಪ್ರಕಟವಾಗಿಲ್ಲವೆಂದು ತೋರುತ್ತದೆ. ಊರ ಬಸ್‌ಸ್ಟ್ಯಾಂಡ್ ಬಳಿಯಿರುವ ವೀರಭದ್ರಗುಡಿ ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹ ಹಾಗೂ ವಿಶಾಲವಾದ ಅರ್ಧಮಂಟಪವನ್ನು ಹೊಂದಿದೆ. ಈ ಗುಡಿಯ ಮುಂದೆ ರಾಷ್ಟ್ರಕೂಟ - ಚಾಳುಕ್ಯ ಪರಿವರ್ತನಾ ಕಾಲದ ಎರಡು ಕಂಬಗಳಿವೆ. ಇದರ ಪ್ರಾಕಾರದಲ್ಲಿ 'ಉರಿಉಯ್ಯಾಲೆ' ಶಿಲ್ಪ ಕೆತ್ತನೆಯುಳ್ಳ ಆತ್ಮಬಲಿದಾನದ ಅಪರೂಪದ ಸ್ಮಾರಕ ಶಿಲ್ಪವಿದೆ. ಇದರಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ತ್ರುಟಿತ ಶಾಸನವಿದೆ. ಇದರ ಬದಿಯಲ್ಲೇ ನಾಲ್ಕಡಿ ಎತ್ತರದ ವಿಷ್ಣುವಿನ ಭಗ್ನ ಶಿಲ್ಪವಿದೆ. ಈ ಗುಡಿಯ ಸಮೀಪದಲ್ಲೇ ಮೈಲಾರಲಿಂಗನ ಗುಡಿಯಿದ್ದು, ವಿಜಯನಗರ ಕಾಲದ ಮೈಲಾರ ಹಾಗೂ ಮಾಳಚಿಯರ ಆಸೀನ ಏಕ ಪೀಠಸ್ಥ ಮೂರ್ತಿಯಿದೆ.

ಊರ ಪ್ರವೇಶದಲ್ಲೇ ಹತ್ತಿಗಿರಣಿ ಮುಂದೆ ಹೊಲದಲ್ಲಿರುವ ಮಲ್ಲಿಕಾರ್ಜುನ ಗುಡಿ ಪೂರ್ಣ ಹಾಳಾಗಿದ್ದು, ಸ್ಥಳೀಕರು ಗರ್ಭಗೃಹವನ್ನಷ್ಟೇ ಜೀರ್ಣೋದ್ಧಾರ ಮಾಡಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮುಂದೆ ನಂದಿಯಿದೆ. ಅಲ್ಲೇ ಇರುವ ಕ್ರಿ.ಶ. 1125ರ ಶಾಸನ ಇದನ್ನು ಲಕ್ಷ್ಮೇಶ್ವರ ಗುಡಿಯೆಂದು ಹೆಸರಿಸುತ್ತದೆ. ಊರ ಉತ್ತರದ ಮರಡಿಗುಡ್ಡದ ಮರಡಿಬಸವಣ್ಣನ ಗುಡಿಯಿದ್ದು, ಶ್ರಾವಣ ಮಾಸದಲ್ಲಿ ಜಾತ್ರೆಯಾಗುತ್ತದೆ. ಇಲ್ಲಿನ ಗುಡ್ಡದ ಮಠದ ದಿಬ್ಬದ ಮೇಲೆ ಜಿನನಿಷಿಧಿ ಶಾಸನವಿದೆ. ಡಾ.ಜ.ಚ.ನಿ.ರವರ ನಿಡುಮಾಮಿಡಿ ಶಾಖಾಮಠವಿಲ್ಲಿದೆ. ಇವುಗಳ ಜೊತೆಗೆ ಊರಲ್ಲಿ ಕಲ್ಮೇಶ್ವರ, ಬಸವಣ್ಣ, ಮಲ್ಲಯ್ಯ, ಹನುಮಂತ, ದ್ಯಾಮವ್ವ, ಎಲ್ಲಮ್ಮ, ಗೌರಿ ಹಾಗೂ ಕರಿಯವ್ವನ ಗುಡಿಗಳಿವೆ. ಜುಮ್ಮಾಮಸೀದಿ ಹಾಗೂ ದರ್ಗಾ ಕೂಡ ಇವೆ.

**ನರೇಗಲ್ :** ರೋಣ ತಾಲೂಕಿನ ಪಟ್ಟಣವಾಗಿರುವ ನರೇಗಲ್ (ಜನಸಂಖ್ಯೆ : 14,592) ಅಥವಾ ಶಾಸನೋಕ್ತ ನರೆಯಂಗಲ್ ರೋಣದಿಂದ ಆಗ್ನೇಯಕ್ಕೆ 32 ಕಿ.ಮೀ. ದೂರದಲ್ಲಿ ರೋಣ-ಗದಗ ರಸ್ತೆಯಲ್ಲಿರುವ ಪ್ರಾಚೀನ ಸ್ಥಳ. ಶಾಸನಗಳಲ್ಲಿ ಈ ಊರನ್ನು ಬೆಳ್ವಲ-300ಕ್ಕೆ ಸೇರಿದ್ದ ನರೆಯಂಗಲ - 12ರ ಆಡಳಿತ ಕೇಂದ್ರವೆಂದು ಉಲ್ಲೇಖಿಸಲಾಗಿದೆ. ಊರಿನಲ್ಲಿರುವ ಪ್ರಮುಖ

ದೇವಾಲಯಗಳೆಂದರೇ ತ್ರಿಪುರಾಂತಕೇಶ್ವರ, ಸೋಮೇಶ್ವರ, ಕಲ್ಮೇಶ್ವರ, ನಾರಾಯಣದೇವ ಮತ್ತು ಚಂದ್ರಮೌಳೀಶ್ವರ. ತ್ರಿಪುರಾಂತಕ ದೇವಾಲಯವು ಕಲ್ಯಾಣದ ಚಾಳುಕ್ಯ ದೊರೆ ಎರಡನೇ ಜಯಸಿಂಹನ ಕಾಲದಲ್ಲಿ ತಿಪ್ಪಣ್ಣ ದಂಡನಾಯಕನಿಂದ (ತಿಪ್ಪಣ್ಣೇಶ್ವರ ದೇವಾಲಯವೆಂದು ಉಲ್ಲೇಖವಿದೆ) ನಿರ್ಮಿಸಲಾಯಿತೆಂದು ಊಹಿಸಬಹುದಾಗಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ವಿಶಾಲವಾದ 18 ಕಂಬಗಳುಳ್ಳ ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹವು ಹಲವು ಕೋನಗಳ ವಿನ್ಯಾಸವನ್ನು ಹೊಂದಿದೆ. ನವರಂಗದಲ್ಲಿ ಚಾಳುಕ್ಯ ಶೈಲಿಯ ಬೃಹದಾಕಾರದ ಕಂಬಗಳಿವೆ. ನವರಂಗದಲ್ಲಿರುವ ಶಾಸನವು ತಿಪ್ಪಣ್ಣೇಶ್ವರ ದೇವಾಲಯಕ್ಕಾಗಿ ತ್ರಿಲೋಚನ ಪಂಡಿತ ದೇವರಿಗೆ ಬಿಟ್ಟ ಭೂದಾನದ ಬಗೆಗೆ ತಿಳಿಸುತ್ತದೆ. ತ್ರಿಪುರಾಂತಕ ಗುಡಿಯ ಮುಖಮಂಟಪದ ಹೊರಭಾಗದಲ್ಲಿ ಸೂರ್ಯನ ವಿಗ್ರಹವಿದೆ. ದೇವಾಲಯದ ಎದುರಿಗೆ ವೀರಗಲ್ಲಿದ್ದು ಶಾಸನದ ಪ್ರಕಾರ ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯಲ್ಲಿ (ಕ್ರಿ.ಶ. 1197)ಹಂಪೆಯ ನಾಯಕನೆಂಬ ವೀರನ ಮರಣವನ್ನು ದಾಖಲಿಸುತ್ತದೆ. ಊರಿನಲ್ಲಿರುವ ಮತ್ತೊಂದು ಪ್ರಮುಖ ದೇವಾಲಯವೆಂದರೆ ಚಾಳುಕ್ಯ ಶೈಲಿಯ ಕಲ್ಮೇಶ್ವರ. ಇದೂ ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದು ಇದರ ಸುತ್ತಲೂ (ಇತ್ತೀಚಿನ) ಎತ್ತರವಾದ ಹೊಸ ಪ್ರಾಕಾರವಿದೆ. ವಿಶಾಲ ನವರಂಗದ ಮಧ್ಯದಲ್ಲಿರುವ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳು ಗಮನವನ್ನು ಸೆಳೆಯುತ್ತವೆ. ಹೊರ ಪ್ರಾಕಾರದಲ್ಲಿ ಸುತ್ತುವರೆದಂತೆ ಕುಬೇರ, ಗಣಪತಿ, ಸಪ್ತಮಾತೃಕೆಯರ ಜೋಡು ಶಿಲ್ಪ ಮುಂತಾದ ಶಿಲ್ಪಗಳಿವೆ. ಹಾಗೂ ಹಿಂಭಾಗದಲ್ಲಿ ಒಂದು ಕಲ್ಲುಗಾಣವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಕುಸಿದಿರುವ ಕದಂಬನಾಗರ ಶಿಖರವಿದೆ. ಈ ದೇವಾಲಯದಲ್ಲಿರುವ ಶಾಸನವು ಯಾದವ ಕನ್ನರನ ಕಾಲದ್ದಾಗಿದ್ದು ಕಲಿದೇವರಿಗೆ ನೀಡಿದ ಭೂದಾನವನ್ನು ತಿಳಿಸುತ್ತದೆ. ಇದರ ಹೊರಭಾಗದಲ್ಲಿರುವ ಶಾಸನವು ಮುಂಡೆಯರ ಶ್ರೀಮಂತ ಗಾವುಂಡನೆಂಬ ಅಧಿಕಾರಿಯಿಂದ ಮೂಲಸ್ಥಾನ ದೇವಾಲಯಕ್ಕಾಗಿ ನೀಲಕಂಠ ಪಂಡಿತರಿಗೆ ಬಿಟ್ಟ ಭೂದಾನವನ್ನು ದಾಖಲಿಸುತ್ತದೆ. ಇದರ ಸಮೀಪದಲ್ಲೇ ಇರುವ ನಾರಾಯಣ ದೇವರ ಗುಡಿಯು ವಿಶಾಲವಾದ ರಾಷ್ಟ್ರಕೂಟ ಶೈಲಿಯ ಮೂಲ ರಚನೆಯಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ದೊಡ್ಡದಾದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಒಳಗೆ ಎತ್ತರವಾದ ಜೈನ ಲಕ್ಷಣಗಳಿರುವ ಪೀಠದ ಮೇಲೆ ಶಿವಲಿಂಗವಿದೆ. ನವರಂಗದಲ್ಲಿ ಸರಳವಾದ ರಾಷ್ಟ್ರಕೂಟ ಶೈಲಿಯ ಕಂಬಗಳಿವೆ. ಸಭಾಮಂಟಪದಲ್ಲಿ ನಕ್ಷತ್ರಾಕಾರವಾದ, ಕಮಲದ ಆಕಾರವಾದ 16 ಕಂಬಗಳ ಸುಂದರ ರಚನೆಯಿದೆ. ಸಭಾಮಂಟಪದ ಎರಡೂ ಅಂಚಿನಲ್ಲಿರುವ ಗೋಡೆಗಳಿಗೆ ಹೊಂದಿಕೊಂಡಂತೆ 24 ತೀರ್ಥಂಕರರುಗಳಿದ್ದಿರಬಹುದಾದ ಪೀಠಗಳು ಕಾಣಬರುತ್ತದೆ. ಈ ದೇವಾಲಯವು ಪ್ರಾರಂಭದಲ್ಲಿ ಜೈನಬಸದಿಯಾಗಿರಬೇಕೆಂದು ಡಾ|| ಎಸ್. ರಾಜಶೇಖರ್ ಅಭಿಪ್ರಾಯಪಡುತ್ತಾರೆ. ಊರಿನ ಚಾವಡಿ ಎದುರಿಗಿರುವ ಶಾಸನವು ರಾಷ್ಟ್ರಕೂಟ ಮೂರನೇ ಕೃಷ್ಣನ (ಕ್ರಿ.ಶ. 950) ರಾಣಿ ಪದ್ಮಬ್ಬರಸಿಯಿಂದ ಬಸದಿಯ ನಿರ್ಮಾಣ ಹಾಗೂ ದಾನದ ಬಗೆಗೆ ಉಲ್ಲೇಖವಿದೆ. ಆದರೆ, ಊರ ಚಾವಡಿಯ ಬಳಿ ದೇವಾಲಯದ ಕಪೋತ ಭಾಗವಿದ್ದು ಅದರಲ್ಲಿ ವೈವಿಧ್ಯ ಮಾದರಿಯ ಕಿರುಶಿಖರಗಳ ಅಲಂಕಾರವಿರುವ ಮಂಟಪದ ರಚನೆಗಳಿದ್ದು ಕ್ರಮವಾಗಿ ಕಾರ್ತಿಕೆಯ, ಬ್ರಹ್ಮ ಶಿವಲಿಂಗ, ವಿಷ್ಣು, ಗಣಪತಿ ಮುಂತಾದ ಶಿಲ್ಪಗಳಿವೆ. ಇದರ ಸಮೀಪ ತೀರ್ಥಂಕರ ಮೂರ್ತಿ (ಮಕರತೋರಣ ಸಹಿತ) ಮುರಿದು ಬಿದ್ದಿದೆ. ಮಾರುತಿ ಗುಡಿಯ ಮುಂದೆ ತೀರ್ಥಂಕರ ಶಿರೋಭಾಗವಿದೆ. ಚಾವಡಿಯ ಬಳಿ ಇರುವ ಕಲಚೂರಿ ಸಂಕಮನ ಕಾಲದ ಕ್ರಿ.ಶ. 1183ರ ಶಾಸನವು ಅಸ್ಪಷ್ಟವಾಗಿದ್ದು ರೇವಣೇಶ್ವರ ದೇವಾಲಯಕ್ಕೆ ಬಿಟ್ಟ ದಾನ ಎಂದು ಮಾತ್ರ ತಿಳಿಸುತ್ತದೆ. ಊರಿನಲ್ಲಿ ಒಂದು ಜುಮ್ಮಾ ಮಸೀದಿ ಇದೆ.

**ನರೇಗಲ್ :** ಹಾನಗಲ್ ತಾಲೂಕಿನ ನರೇಗಲ್ಲು (ಜನಸಂಖ್ಯೆ 3,466-1981ರಲ್ಲಿ) ಹಾನಗಲ್‌ನಿಂದ 28 ಕಿ.ಮೀ. ದೂರದಲ್ಲಿದೆ. ಈ ಊರಿಗೆ ಹಾನಗಲ್ ಹಾವೇರಿಗಳಿಂದ ಹೋಗಲು ಒಳ್ಳೆಯ ರಸ್ತೆಯಿದೆ. ಪ್ರಾಚೀನ ಶಾಸನಗಳಲ್ಲಿ 'ನರೆಯಂಗಲ್ಲ', 'ನರೇಗಲ್ಲ' ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿ ರಾಷ್ಟ್ರಕೂಟ ಧ್ರುವನ (ಕ್ರಿ.ಶ. 790) ಕಾಲದಿಂದ ಕ್ರಿ.ಶ. 15ನೇ ಶತಮಾನದವರೆಗೆ ಒಟ್ಟು ಒಂಭತ್ತು ಶಾಸನಗಳಿರುವುದರಿಂದ ಈ ಊರಿನ ಪ್ರಾಚೀನತೆಯನ್ನು ಐತಿಹಾಸಿಕವಾಗಿ ರಾಷ್ಟ್ರಕೂಟರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಇಲ್ಲಿನ ರಾಷ್ಟ್ರಕೂಟರ ಕಾಲದ ಗೋಸಾಸ ಕಲ್ಲುಗಳೂ ಇದನ್ನು ಸಮರ್ಥಿಸುತ್ತವೆ. ಧ್ರುವನ ಕಾಲದ ವೀರಗಲ್ಲು ಶಾಸನ ಗೋಗ್ರಹಣದಲ್ಲಿ ಮಡಿದ ದೊಂಬರ ಕಾಡಪಪನ ಬಗ್ಗೆ ಹೇಳಿದರೆ ಸರ್ವೇಶ್ವರ ದೇವಾಲಯದ ಕೆರೆದಂಡೆ ಮೇಲಿರುವ ಆರ್ಮಡಿ ವಿಕ್ರಮಾದಿತ್ಯನ ಕಾಲದ ಶಾಸನ ಮಹಾಪ್ರಭು ಕಪ್ಪಿಮಯ ನರೇಗಲ್ಲಲ್ಲಿ ಈಶ್ವರ ದೇವಾಲಯ ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ ಈ ಗುಡಿಯ ತೊಲೆಯ ಮೇಲಿರುವ ಕ್ರಿ.ಶ. 1125ರ ಶಾಸನ ಕಪ್ಪಿಮಯ್ಯನ ಮಗ ಗೋವಿಂದದೇವನು ಮೂಲಸ್ಥಾನದೇವರಿಗೆ ದತ್ತಿ ಬಿಟ್ಟ ವಿಷಯವನ್ನು ತಿಳಿಸಿದರೆ, ಮತ್ತೊಂದು ತೊಲೆಯ ಮೇಲಿರುವ ಶಾಸನ ಕ್ರಿ.ಶ. 1126ರಲ್ಲಿ ದಾಸಿಮಯ್ಯನು ಸೂರ್ಯ ದೇವಾಲಯ ನಿರ್ಮಿಸಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1273ರ ಶಾಸನ ಪಂಚಮಠ

ಸನ್ನಿಧಿಯಲ್ಲಿ ಜೋಯಿಸ ಮಧುವಯ್ಯ ಕೋಡಿಯ ದೇವಸ್ಥಾನಕ್ಕೆ ಬಿಟ್ಟ ದತ್ತಿಯನ್ನು ಹೇಳಿದರೆ, ಮತ್ತೊಂದು ಶಾಸನ ನರೇಗಲ್ಲ ಅಚಲೇಶ್ವರ ಗುಡಿಯ ಒಂದು ವ್ಯಾಜ್ಯದ ಬಗ್ಗೆ ತಿಳಿಸುತ್ತದೆ. ಊರಲ್ಲಿ ಎರಡು ಕೆರೆಗಳಿದ್ದು ದೊಡ್ಡಕೆರೆಗೆ ನವೆಂಬರ್ ತಿಂಗಳಲ್ಲಿ ಇಂಡೋನೇಷ್ಯಾ, ಚೀನಾ ಮುಂತಾದ ದೇಶದ ಪಕ್ಷಿಗಳು ವಲಸೆ ಬರುತ್ತಿದ್ದು ಇದೊಂದು ಒಳ್ಳೆಯ ಪಕ್ಷಿಧಾಮವಾಗಿದೆ. ನರೇಗಲ್ - ವರ್ದಿ ಸರಹದ್ದಲ್ಲಿ ಬರುವ ಈ ಕೆರೆ ಸುಮಾರು 320 ಎಕರೆ ವಿಶಾಲವಾಗಿದ್ದು 1500 ಎಕರೆಗೆ ನೀರಾವರಿ ಸೌಕರ್ಯವಿದೆ. ನರೇಗಲ್‌ನ ಪ್ರಾಚೀನ ದೇಗುಲಗಳಲ್ಲಿ ಸರ್ವೇಶ್ವರ (ಸರಸ್ವತಿ) ಗುಡಿ ವಿಶಾಲವಾಗಿದ್ದು, ನಯನ ಮನೋಹರವಾಗಿದೆ. ಆರನೇಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅವನ ನಾಳ್ಗಮು, ಕಪ್ಪಿಮಯ್ಯ ನಿರ್ಮಿಸಿದ ಈಶ್ವರ ಗುಡಿ ಇದೇ ಆಗಿದ್ದು, ಮುಂದೆ ಅವನ ಮಗ ಗೋವಿಂದ ದೇವ ಇದೇ ಗುಡಿಗೆ ಭೂದಾನ ಮಾಡಿದ್ದಾನೆ. ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ಎರಡು ಹಂತದಲ್ಲಿ ವಿಶಾಲವಾದ ತೆರೆದ ನವರಂಗವನ್ನು ಹೊಂದಿದ್ದು, ಪ್ರಧಾನಗುಡಿಗೆ ಎದುರಾಗಿ ಮತ್ತೊಂದು ಗರ್ಭಗೃಹವಿದ್ದು ಬಹುಶಃ ಇದನ್ನು ಕ್ರಿ.ಶ. 1126ರಲ್ಲಿ ದಾಸಿಮಯ್ಯ ನಿರ್ಮಿಸಿ ಆದಿತ್ಯದೇವರನ್ನು ಪ್ರತಿಷ್ಠೆ ಮಾಡಿರಬೇಕೆಂದು ತೋರುತ್ತದೆ. ಈಗ ಇದು ಬರಿದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡವನ್ನು ಬ್ರಹ್ಮ ಮಹೇಶ್ವರ, ಕೇಶವ ಕೆತ್ತನೆಯಿರುವ ಮಕರತೋರಣ ಅಲಂಕರಿಸಿದ್ದು ಇಕ್ಕೆಲದಲ್ಲಿ ಜಾಲಾಂದ್ರವಿದೆ. ನಾಲ್ಕು ಮಾದರಿಯ 32 ಕಂಬಗಳ ಮೇಲೆ ನಿಂತಿರುವ ಆಯಾಕಾರದ ತೆರೆದ ಸಭಾಮಂಟಪದ ಅಂಚಿನುದ್ದಕ್ಕೂ ಕಕ್ಷಾಸನವಿದೆ. ಸಭಾಮಂಟಪದ ಆಗ್ನೇಯ ಮೂಲೆಯಲ್ಲಿ ನಾಲ್ಕು ಅಡಿ ಎತ್ತರದ ಪದ್ಮಾಸೀನ ಸರಸ್ವತಿಯ ಮುಕ್ಕಾದ ಸುಂದರ ಶಿಲ್ಪವಿದೆ. ಈ ಗುಡಿಯ ಗರ್ಭಗೃಹವನ್ನು ಕದಂಬ ನಾಗರ ಶಿಖರವು ಅಲಂಕರಿಸಿದೆ. ಈ ಗುಡಿಯ ಹಿಂಬದಿಯಲ್ಲಿ ನಾಲ್ಕು ಅಡಿಯ ಸಪ್ತಮಾತೃಕೆಯರ ಪ್ರತ್ಯೇಕ ಶಿಲ್ಪಗಳಿದ್ದು ಇವುಗಳ ರುಂಡ ಕಣ್ಮರೆಯಾಗಿವೆ. ಈ ಗುಡಿಯಿಂದ ಸುಮಾರು 200 ಮೀಟರ್ ಅಂತರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಮಣ್ಣುದೇವರ ಗುಡಿಯಿದೆ. ಮೂಲದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪವನ್ನು ಹೊಂದಿರಬಹುದಾದ ಈ ಗುಡಿ ಈಗ ಪಾಳುಬಿದ್ದಿದೆ. ಶಿವಲಿಂಗ ಮತ್ತು ನಂದಿಗಳಿರುವ ಈ ಗುಡಿ ಕಂಬವೊಂದರ ಮೇಲಿನ ಶಾಸನದಿಂದ ಅಚಲೇಶ್ವರ ಗುಡಿ ಇದಾಗಿತ್ತೆಂಬ ಅಂಶ ಗೊತ್ತಾಗುತ್ತದೆ. ಈ ಗುಡಿಯ ನವರಂಗದಲ್ಲಿ ಜೈನ ತೀರ್ಥಂಕರನ ಮುಕ್ಕಾದ ಮೂರ್ತಿ, ಆವರಣದಲ್ಲಿ ಮಹಿಷಮರ್ದಿನಿ ಶಿಲ್ಪ ಹಾಗೂ ರಾಷ್ಟ್ರಕೂಟರ ಗೊಸಾಸ ಕಲ್ಲೂ ಇವೆ. ಇವುಗಳ ಜೊತೆಗೆ ಊರಲ್ಲಿ ಈಶ್ವರ, ಬಸವಣ್ಣ, ಮಾತಂಗವ್ವ, ದುರ್ಗಾ, ದ್ಯಾಮವ್ವ, ಹನುಮಂತ, ಪ್ಯಾಟಿ ಬಸವಣ್ಣ ಮುಂತಾದ ಗುಡಿಗಳಿವೆ. ಮಲ್ಲಿಕಾರ್ಜುನಸ್ವಾಮಿ ವಿರಕ್ತಮಠ, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ. ಈ ಊರಿನ ಸುಂದರ ಕೆರೆ ಅಲ್ಲಿನ ಪಕ್ಷಿಧಾಮ, ದೇವಾಲಯಗಳು ಪ್ರವಾಸಿಗಳಿಗೆ ವಿಶೇಷ ಆಕರ್ಷಣೆಯಾಗಬಲ್ಲವು.

**ನವಲಗುಂದ** : ತಾಲೂಕು ಕೇಂದ್ರವಾದ ನವಲಗುಂದ (ಜನಸಂಖ್ಯೆ : 19,438) ಧಾರವಾಡದಿಂದ ಈಶಾನ್ಯಕ್ಕೆ 47 ಕಿ.ಮೀ. ದೂರದಲ್ಲಿದ್ದು, ಬೆಳ್ವೊಲ-300ಕ್ಕೆ ಸೇರಿದ್ದು 40 ಗ್ರಾಮಗಳ ಆಡಳಿತ ಕೇಂದ್ರವಾಗಿದ್ದು, 'ನವಿಲ್ಗುಂದ - 40' ಎಂದೇ ಪ್ರಸಿದ್ಧವಾಗಿತ್ತು. ರಾಯಾಪುರದ ಕ್ರಿ.ಶ. 1183ರ ತಾಮ್ರ ಶಾಸನ (ಸಂಸ್ಕೃತ) ಬೆಳ್ವೊಲ - 300ರಲ್ಲಿದ್ದ ನವಿಲುಗುಂದ - 40ರ ಬೆಲ್ಲವುರ ಗ್ರಾಮದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. 1870ರಷ್ಟು ಪ್ರಾಚೀನವಾದ ಪುರಸಭೆಯನ್ನು ಹೊಂದಿರುವ ಈ ಊರಿಂದ ಈವರೆಗೆ ಶಾಸನಗಳಾವುವೂ ವರದಿಯಾಗಿಲ್ಲ, ಸವದತ್ತಿಯ ಕ್ರಿ.ಶ. 1228ರ ಶಾಸನ ದಾನ ಭೂಮಿಯನ್ನು ನವಿಲ್ಗುಂದ ಕೋಲಿನಲ್ಲಿ ಅಳೆದು ಕೊಟ್ಟ ಅಂಶವನ್ನು ತಿಳಿಸುತ್ತದೆ. ಸಂಗೂರಿನ ಕ್ರಿ.ಶ. 1396ರ ಶಾಸನ ನವಿಲ್ಗುಂದದ ಶ್ರುತಕೀರ್ತಿದೇವರೆಂಬ ಜೈನ ಆಚಾರ್ಯರನ್ನು ಉಲ್ಲೇಖಿಸುತ್ತದೆ. ನವಿಲ್ಗುಂದ ಪದವು 'ನವಿಲು + ಕುಂದ' ಎಂಬ ಎರಡು ಪದಗಳ ಸಂಯುಕ್ತ ಪದವಾಗಿದ್ದು, 'ಕುಂದ' ಎಂದರೆ ಗುಡ್ಡ ಎಂದು ಅರ್ಥ ಸುಮಾರು ಕ್ರಿ.ಶ. 1690ರ ಅವಧಿಯಲ್ಲಿ ಸವಣೂರಿನ ನವಾಬ, ಔರಂಗಜೇಬನ ಸಾಮಂತನಾಗಿ ಈ ಭಾಗ ಆಳುತ್ತಿದ್ದು, ಆಗ ನವಲಗುಂದದ ದೇಸಾಯಿ ಇಮ್ಮಡಿ ಜಾಯಗೌಡನ ಅಧೀನದಲ್ಲಿನ ಇದೊಂದು ಕಂದಾಯ ವಿಭಾಗವಾಗಿತ್ತು. ಕ್ರಿ.ಶ. 1747ರಲ್ಲಿ ಇದು ಸವಣೂರು ನವಾಬನಿಂದ ಪೇಶ್ವೆಗಳಿಗೆ ಹಸ್ತಾಂತರವಾಯಿತು. ಕ್ರಿ.ಶ. 1747ರಲ್ಲಿ ಇದು ಸವಣೂರು ನವಾಬನಿಂದ ಪೇಶ್ವೆಗಳಿಗೆ ಹಸ್ತಾಂತರವಾಯಿತು. 1778ರ ಹೈದರನ ದಾಳಿಯಿಂದಾಗಿ, ಸ್ಥಳೀಯ ದೇಸಾಯಿ ಲಿಂಗನಗೌಡನು (ಕ್ರಿ.ಶ. 1769-83) ಹೈದರನ ಅಧಿಪತ್ಯ ಒಪ್ಪಿಕೊಂಡ. ದೊಂಡೋಪಂತ ಗೋಖಲೆಯು ಲಿಂಗನಗೌಡ ದೇಸಾಯಿಯಿಂದ ನವಲಗುಂದವನ್ನು ವಶಪಡಿಸಿಕೊಂಡನು. ಮುಂದೆ ದೇಸಾಯಿಯಾದ ಜಾಯಪ್ಪನು (ಕ್ರಿ.ಶ. 1795-1817) ನವಲಗುಂದವನ್ನು ಬಿಟ್ಟು ಬೆಳಗಾವಿ ಜಿ।। ಯ ಸಿರಸಂಗಿಯಲ್ಲಿ ನೆಲೆ ನಿಂತನು. ಕ್ರಿ.ಶ. 1817ರಲ್ಲಿ ನವಲಗುಂದ ಮನ್ರೋನ ವಶವಾಯಿತು; ಅವನು ರಾಮರಾವ್ ಎಂಬವನನ್ನು ಬ್ರಿಟಿಷ್ ಸರಕಾರದ ಜಮಾದಾರನಾಗಿ ನೇಮಿಸಿದ. ಇಂದು ನವಲಗುಂದದಲ್ಲಿರುವ ನೀಲಮ್ಮನ ಕೆರೆ ಹಾಗೂ ಚೆನ್ನಮ್ಮನ ಕೆರೆಗಳು ದೇಸಾಯಿಗಳ ಕಾಲದ

ಸಮಾಜ ಕಲ್ಯಾಣ ಕಾರ್ಯಗಳಾಗಿವೆ. ದೇಸಾಯಿ ಮನೆತನದಲ್ಲಿ ಕೊನೆಯವನಾದ ಲಿಂಗರಾಜದೇಸಾಯಿಯು ಈ ಪ್ರದೇಶದ ಅಭ್ಯುದಯಕ್ಕೆ ಬಹಳ ಬೆಂಬಲವಿತ್ತಿದ್ದಾನೆ. ಸರಿಸುಮಾರು ಕ್ರಿ.ಶ. 1780ರಲ್ಲಿ ಕಟ್ಟಲಾದ ದೇಸಾಯಿಯ ವಾಡೆಯಲ್ಲಿ ತಾಲೂಕು ಬೋರ್ಡ್ ಕಚೇರಿಯಿದೆ.

ಊರಲ್ಲಿರುವ ದೇವಾಲಯಗಳಲ್ಲಿ ನವಿಲೇಶ್ವರ, ಗೋವಿಂದರಾಜ, ಗಣಪತಿ, ವೆಂಕಟೇಶ, ವೀರಭದ್ರ ನಗರೇಶ್ವರ, ಲಾಲ್‌ಗುಡಿ, ಮಾರುತಿ, ಬಸವಣ್ಣ, ದುರ್ಗಾದೇಗುಲಗಳೂ ಆದಿನಾಥನಿಗಾಗಿ ನಿರ್ಮಿತವಾದ ಹಳೆಯ ಬಸದಿಗಳೂ ಕಂಡುಬರುತ್ತವೆ. ಇವುಗಳಲ್ಲಿ ಊರ ಹೊರಗಿರುವ 'ಲಾಲ್‌ಗುಡಿ', ಕಲ್ಯಾಣದ ಚಾಲುಕ್ಯರ ಕಾಲದ ರಚನೆಯಾಗಿದ್ದು ಗರ್ಭಗೃಹ ಅಂತರಾಳ ಹಾಗೂ ತೆರೆದ ನವರಂಗವಿದೆ. ಇಲ್ಲಿನ ಬಾಗಿಲುವಾಡ ಹಾಗೂ ಕಂಬಗಳು ಅದರ ಪ್ರಾಚೀನತೆಯನ್ನು ನಿರ್ಧರಿಸುಲ್ಲಿ ನೆರವಾಗುತ್ತವೆ. ಈ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ವೆಂಕಟರಮಣನ ಗುಡಿಯಲ್ಲಿ ಶೇಷಶಯನ ಅನಂತ ಪದ್ಮನಾಭದ ಶಿಲ್ಪವಿದ್ದು, ಪ್ರಭಾವಳಿಯಲ್ಲಿ ದಶಾವತಾರವನ್ನು ಹೊಂದಿರುವ ಇದು ಸುಮಾರು ಕ್ರಿ.ಶ. 15ನೇ ಶತಮಾನದ ಮೂರ್ತಿಯಾಗಿದೆ. ಇಲ್ಲಿನ ದುರ್ಗಾಗುಡಿಯ ಮುಂದೆ ತೀರ್ಥಂಕರ ಮೂರ್ತಿಯ ಮುಕ್ಕೊಡೆ, ಯಕ್ಷ - ಯಕ್ಷಿ, ಸಪ್ತಹೆಡೆಯ ನಾಗನ ಕೆತ್ತನೆಯಿರುವ ಪಾರ್ಶ್ವನಾಥ ಪ್ರಭಾವಳಿಯಿದೆ. ದುರ್ಗಾಗುಡಿಯಲ್ಲಿ ಸಪ್ತಮಾತೃಕಾ ಪಟ್ಟಿಕೆ ಹಾಗೂ ಮಹಿಷಮರ್ದಿನಿ ಶಿಲ್ಪಗಳಿವೆ. ಊರಲ್ಲಿ ಮೂರು ಮಠಗಳಿವೆ. ಇವುಗಳಲ್ಲಿ ಸುಮಾರು ಕ್ರಿ.ಶ. 16ನೇ ಶತಮಾನದಲ್ಲಿ ಜಡೆಸ್ವಾಮಿಗಳು ಆರಂಭಿಸಿದ ಗವಿಮಠ ಆಕರ್ಷಕ ಅಲಂಕೃತ ಕೆತ್ತನೆಯನ್ನು ಹೊಂದಿರುವ ಕಟ್ಟಿಗೆಯನ್ನು ಬಳಸಿ ನಿರ್ಮಿಸಿರುವ ಪಂಚಗೃಹ ಹಿರೇಮಠ, ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳ ಸಮಕಾಲೀನರಲ್ಲೊಬ್ಬ ಮಹಿಮಾನ್ವಿತ ಯೋಗಿಗಳಿಂದ ನಿರ್ಮಾಣಗೊಂಡಿರುವ ನಾಗಲಿಂಗಸ್ವಾಮಿ ಮಠ, ಹಾಗೂ ದೇವಿ ಆರಾಧಕರಾಗಿದ್ದ ಹುರಕಡ್ಲಿ ಅಜ್ಜನವರ ಸಮಾಧಿಗಳು ಇಲ್ಲಿವೆ. ನಾಗಲಿಂಗಸ್ವಾಮಿ ಮಠ ಪಂಚಾಲ ಸಮಾಜದವರಾಗಿದ್ದು ಇಲ್ಲಿ ಬೈಬಲ್ಲಿಗೂ ಸಮಾನ ಗೌರವ ಸಲ್ಲುತ್ತಿರುವುದು ಉಲ್ಲೇಖನೀಯ. ಇಲ್ಲಿ ಹತ್ತು ಮಸೀದಿಗಳು ಹಾಗೂ ಐದು ದರ್ಗಾಗಳಿದ್ದು, ಅವುಗಳಲ್ಲಿ ಮಂಗಲ್‌ಷಾವಲಿಯ ದರ್ಗಾ ಮುಖ್ಯವಾದುದ್ದಾಗಿದೆ. ನವಲಗುಂದ ಆಕರ್ಷಕವಾದ ಬಣ್ಣಬಣ್ಣದ ಜಮಖಾನೆ, ಗುಡಾರ, ಮರದ ತೊಟ್ಟಿಲು ಹಾಗೂ ಆಟದ ಬೊಂಬೆಗಳಿಗೆ ಪ್ರಸಿದ್ಧವಾಗಿದೆ.

**ನವಿಲೂರು :** ಧಾರವಾಡದಿಂದ ಆಗ್ನೇಯಕ್ಕೆ ಸುಮಾರು ಆರು ಕಿ.ಮೀ. ದೂರದಲ್ಲಿ ಹುಬ್ಬಳ್ಳಿ ಧಾರವಾಡ ನಡುವೆ ಇರುವ ಈ ಊರು ಇಂದು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದೆ. ಪ್ರಾಚೀನ ಕಾಲದಲ್ಲಿ ಹಲಸಿಗೆ - 12000ಕ್ಕೆ ಸೇರಿದ ಕುಂದೂರು -500ರಲ್ಲಿದ್ದ ಈ ಊರು ಅಗ್ರಹಾರವಾಗಿತ್ತು. ಪ್ರಾಚೀನ ಶಾಸನಗಳಲ್ಲಿ ನವಿಲೂರು ಎಂದೇ ಉಲ್ಲೇಖಿತಗೊಂಡಿರುವ ಈ ಊರಿನಿಂದ ಈವರೆಗೆ ವರದಿಯಾಗಿರುವ ಶಾಸನ ಒಂದೇ. ಸುಮಾರು ಕ್ರಿ.ಶ. 13ನೇ ಶತಮಾನಕ್ಕೆ ಸೇರಿದ ಈ ಶಾಸನ ಮಹಾದೇವ ಗುಡಿಯಲ್ಲಿರುವ ಅಗಸ್ತೇಶ್ವರ ದೇವರ ಹೊಲದ ಸೀಮೆ ಬಗ್ಗೆ ತಿಳಿಸುತ್ತದೆ. ನೆರೆಯ ಧಾರವಾಡದ ಹೊಂಡದ ವೀರಭದ್ರ (ಮೈಲಾಲಿಂಗನಬೆಟ್ಟ) ಗುಡಿ ಹಿಂದಿದ್ದ ವೀರಗಲ್ಲು (ಈಗ ಕೆ.ಆರ್.ಐ.ನಲ್ಲಿದೆ) ಸುಮಾರು ಕ್ರಿ.ಶ. 9-10ನೇ ಶತಮಾನಕ್ಕೆ ಸೇರಿದ ಶಾಸನವು ಬಹಳ ಹಾಳಾಗಿದ್ದರೂ, ಉಳಿದಿರುವ ಭಾಗದಿಂದ, ಅಗ್ರಹಾರ ನವಿಲೂರಲ್ಲಿ ವ್ಯಕ್ತಿಯೊಬ್ಬ (ಹೆಸರು ಹಾಳಾಗಿದೆ) ತಾನೇ ನಿರ್ಮಿಸಿದ ಈಶ್ವರ ದೇವಾಲಯದ ಉತ್ತರದಲ್ಲಿದ್ದ ಹೊಲದಲ್ಲಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಿಂದ ನವಿಲೂರು ರಾಷ್ಟ್ರಕೂಟರಷ್ಟು ಪ್ರಾಚೀನವಾದ ಅಗ್ರಹಾರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಮೇಲಿನ ಶಾಸನೋಕ್ತ ದೇವಾಲಯಗಳಾದ ಮಹಾದೇವ, ಇದಕ್ಕೆ ಸೇರಿದ ಅಗಸ್ತೇಶ್ವರ ಹಾಗೂ ರಾಷ್ಟ್ರಕೂಟರ ಕಾಲದ ಇನ್ನೊಂದು ಈಶ್ವರ ದೇವಾಲಯಗಳನ್ನು ಇಂದು ಗುರುತಿಸುವುದು ಅಸಾಧ್ಯವಾಗಿದೆ. ಊರಲ್ಲಿರುವ ಈಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಶಿವಲಿಂಗ - ನಂದಿಯಷ್ಟೇ ಉಳಿದಿವೆ. ಕ್ರಿ.ಶ. 1198ರ ಹುಬ್ಬಳ್ಳಿಯ ಶಾಸನದಲ್ಲಿ ನವಿಲೂರು ಕುರುಬ ಶೇಣಿಗರ ಉಲ್ಲೇಖವಿದ್ದು ಅಗ್ರಹಾರ ಪೂದವಳ್ಳಿಯ ಬ್ರಾಹ್ಮಣರ ಅನುಮತಿ ಪಡೆದು ಅಲ್ಲಿ ಸೇಣಿಗೇಶ್ವರ ದೇವರಿಗೆ ಭೂಮಿ ನಿವೇಶನಗಳನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ. ಊರಲ್ಲಿ ಬಸವಣ್ಣ, ಹನುಮಂತ ಹಾಗೂ ದ್ಯಾಮವ್ವನ ಗುಡಿಗಳಿವೆ. ಊರಲ್ಲೊಂದು ಮಸೀದಿ ಹಾಗೂ ದರ್ಗಾ ಕೂಡ ಇವೆ. ಈ ಊರು ಹಣ್ಣಿನ ತೋಟಗಳಿಗೆ ಪ್ರಸಿದ್ಧವಿದ್ದು ಇಲ್ಲಿನ ಸೀಬೆಹಣ್ಣು (ಪೇರಲ) ಖ್ಯಾತವಾಗಿದೆ.

**ನಾಗರಹಳ್ಳಿ :** ಮುಂಡರಿಗೆ ತಾಲೂಕಿನ ನಾಗರಹಳ್ಳಿಯು (ಜನಸಂಖ್ಯೆ : 871) ಮುಂಡರಗಿಯಿಂದ ಸ್ವಲ್ಪ ಆಗ್ನೇಯಕ್ಕೆ ಮೂರು ಕಿ.ಮೀ. ದೂರದಲ್ಲಿ ಈಗ ಹೊಸ ಊರು ಇದ್ದು, ನಾಲ್ಕು ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿ ತೀರದಲ್ಲಿ ನಾಗರಹಳ್ಳಿಯ ಹಳೆಯ ಊರಿನ ನಿವೇಶನವಿದೆ. ಅಲ್ಲಿರುವ ಶಿಥಿಲವಾಗಿರುವ ಪಂಚಲಿಂಗ ದೇವಾಲಯದಲ್ಲಿ ಎರಡು ಶಾಸನಗಳಿವೆ. ಇವುಗಳಲ್ಲಿ ಕ್ರಿ.ಶ. 1022ರ ಶಾಸನದಂತೆ ಇಮ್ಮಡಿ ಜಯಸಿಂಹನ ಗರುಡನಾದ ದಾಸಿರಾಜನು ಮಾಸವಾಡಿ - 140ಅನ್ನು ಆಳುವಾಗ, ತುಂಗಭದ್ರಾ

ತೀರದ ಆರಗಿವಾಳದ ನಾಗಮಗಾವುಂಡನು ತ್ರಿಭುವನ ನಾರಾಯಣ ಧರ್ಮಸೆಟ್ಟಿಯು ಮಾಡಿಸಿದ ಧರ್ಮೇಶ್ವರ ದೇವರಿಗೆ ಆರುಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಹೇಳಿರುವ ಆರಗಿವಾಳ ನಾಗರಹಳ್ಳಿಯ ಪ್ರಾಚೀನ ಹೆಸರಾಗಿದ್ದು, ಹಿಂದೆ ಇದು ಮಾಸವಾಡಿ-140ಕ್ಕೆ ಸೇರಿತ್ತೆಂಬ ಅಂಶವೂ ಗೊತ್ತಾಗುತ್ತದೆ. ಮೇಲಾಗಿ ಶಾಸನೋಕ್ತ ಧರ್ಮೇಶ್ವರ ಗುಡಿ, ಇಂದಿನ ಪಂಚಲಿಂಗ ದೇವಾಲಯವೆಂಬ ಅಂಶ ಇದರಿಂದ ಗೊತ್ತಾಗುತ್ತದೆ. ಮೇಲೆ ಚರ್ಚಿಸಿರುವ ಈ ಶಾಸನ ಪಂಚಲಿಂಗ ದೇವಾಲಯದ ಆರು ನಂದಿಗಳಿರುವ ಪೀಠದ ಮೇಲೆ ಇದೆ ಎಂಬ ಅಂಶ ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಇಲ್ಲಿನ ಇನ್ನೊಂದು ಶಾಸನ ತ್ರಿಭುವನ ನಾರಾಯಣ ಧರ್ಮಸೆಟ್ಟಿಯು ಹಿಂದಿನೆರಡು ತಲೆಮಾರುಗಳನ್ನು ಹೇಳುತ್ತ ಅವನು ಮಳಲಿ ನಾಡವನೆಂಬ ಅಂಶವನ್ನು ತಿಳಿಸುತ್ತದೆ. ಏಕೆಂದರೆ ಶಾಸನವಿರುವ ಶಿವಲಿಂಗ ಪಾಣಿಪೀಠಗಳು ಬಹಳ ವಿರಳವೆಂದೇ ಹೇಳಬೇಕು. ಹಿಂದೆ ತುಂಗಭದ್ರಾ ತೀರದ ಸಮೀಪವಿದ್ದ ಈ ಊರು ನೆರೆ ಹಾವಳಿಯಿಂದಾಗಿ ದೂರಕ್ಕೆ ಸ್ಥಳಾಂತರಗೊಂಡಿದ್ದು ಹಳೆ ಊರು ಅನಾಥವಾಗಿ ಧರ್ಮೇಶ್ವರ ಗುಡಿ ಪಾಳುಬಿದ್ದು ಪಂಚಲಿಂಗ ದೇವಾಲಯ ಎಂಬ ಹೆಸರೊಂದಿಗೆ ಅವಶೇಷವಾಗಿ ಉಳಿದಿದೆ.

ತುಂಗಭದ್ರೆಯ ದಂಡೆಯ ಮೇಲಿರುವ ಈ ಗುಡಿ ಆಯಾಕಾರದಲ್ಲಿದ್ದು ನಾಲ್ಕರಂತೆ ಎರಡು ಸಾಲು ಕಂಬಗಳನ್ನು ಹೊಂದಿದೆ. ಹಿಂಬದಿಯಲ್ಲಿ ಪಂಚಲಿಂಗ, ಷಡ್‌ನಂದಿ ಹಾಗೂ ಸಪ್ತಮಾತೃಕಾ ಶಿಲ್ಪಗಳನ್ನು ಇಡಲಾಗಿದೆ. ಪಂಚಲಿಂಗವೆಂದು ಕರೆಯುವ ಶಿವಲಿಂಗವು, ಒಂದೇ ವೃತ್ತಾಕಾರದ ಪಾಣಿಪೀಠದ ಮೇಲೆ ನಡುವೆ ದೊಡ್ಡದಾದ ಲಿಂಗವನ್ನು ಹಾಗೂ ವಾಯುವ್ಯ, ಈಶಾನ್ಯ, ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಲ್ಲಿ ಒಂದೊಂದು ಕಿರು ಲಿಂಗವನ್ನು ಕೆತ್ತಿದ್ದು 'ಪಂಚಮುಖಿ' ಶಿವನು ಲಿಂಗರೂಪದಲ್ಲಿ ಇಲ್ಲಿ ಮೂಡಿರುವಂತೆ ಕೆತ್ತಲಾಗಿದೆ. ಇದರ ಬದಿಯಲ್ಲೇ ಇರುವ ಮತ್ತೊಂದು ವೃತ್ತಾಕಾರದ ಪಾಣಿಪೀಠದಲ್ಲಿ ಷಡ್ ನಂದಿಗಳು ಷಡ್‌ದಿಶೆಯತ್ತ ಮುಖ ಮಾಡಿ ಕುಳಿತಿದ್ದು ಇವುಗಳ ಹಿಂಬದಿಯಲ್ಲಿ ನಡುವೆ ಶಿವಲಿಂಗವಿದೆ. ಇಲ್ಲಿರುವ ಆರು ನಂದಿಗಳು ಷಟ್‌ಸ್ಥಳವನ್ನು ನಡುವೆ ಇರುವ ಶಿವಲಿಂಗ ಶಿವಸಾಯುಜ್ಯವನ್ನು ಸೂಚಿಸುತ್ತಿರಬಹುದೇನೋ ಎಂದೆನಿಸುತ್ತದೆ. ಇಂದು ನಾಗರಹಳ್ಳಿ ಇರುವ ನೂತನ ನೆಲೆಯಲ್ಲಿ ನವೀನ ದೇವಾಲಯಗಳಿವೆ.

**ನಾಗವಂದ** : ಹಿರೇಕೆರೂರು ತಾಲೂಕಿನ ನಾಗವಂದವು (ಜನಸಂಖ್ಯೆ : 3,381) ಹಿರೇಕೆರೂರಿನಿಂದ ಆಗ್ನೇಯಕ್ಕೆ 23 ಕಿ.ಮೀ. ದೂರದಲ್ಲಿದೆ. ಶಾಸನೋಕ್ತವಾಗಿರುವ ಎಡೆವಟ್ಟ-70ರ ಆಡಳಿತದ ವ್ಯಾಪ್ತಿಗೆ ಸೇರಿದ್ದ 'ನಾಗಾರ್ಜುನ' ಗ್ರಾಮವು ಗದಗ ತಾಲೂಕಿನ ನಾಗಾವಿಯಂತೆ ಪ್ರಾಚೀನ ವಿದ್ಯಾರ್ಜನೆಯ ಕೇಂದ್ರವಾಗಿತ್ತು. ಊರಿನಲ್ಲಿರುವ ಸಿದ್ದೇಶ್ವರ ದೇವಾಲಯ ಅಥವಾ ಚಾಳುಕ್ಯ ಶೈಲಿಯ ಶಾಸನೋಕ್ತ ಬ್ರಹ್ಮೇಶ್ವರವು ತ್ರಿಕೂಟಾಚಲವಾಗಿದ್ದು ಕುತೂಹಲ ಕೆರಳಿಸುತ್ತದೆ. ಇದರಲ್ಲಿ ಮೂರು ಗರ್ಭಗೃಹಗಳು ಮೂರು ಅಂತರಾಳಗಳು ಹಾಗೂ ಮಧ್ಯದಲ್ಲಿ ನವರಂಗವಿದೆ. ಮಧ್ಯದ ಗರ್ಭಗೃಹದಲ್ಲಿ ಪದ್ಮಪೀಠದ ಮೇಲಿರುವ ಸ್ಥಾನಿಕ ದ್ವಿಬಾಹುಮೂರ್ತಿಯ ಎಡಗೈಯಲ್ಲಿ ಲಿಂಗವನ್ನು ಬಲಗೈಲಿ ಜಪಮಾಲೆಯನ್ನು ಹಿಡಿದು ನಿಂತಿರುವಂತೆ ತೋರುವ ಈ ಮೂರ್ತಿಯ ಇಕ್ಕೆಲದಲ್ಲಿ ಚಾಮರಧಾರಿ ಅಪ್ಸರೆಯರಿದ್ದಾರೆ. ಈ ಮೂರ್ತಿಯನ್ನು 'ನಾಗಾರ್ಜುನ' ಎಂದು ಕರೆಯುತ್ತಾರೆ. ಇದರ ಪ್ರಭಾವಳಿಯಲ್ಲಿ ಆಕರ್ಷಕವಾದ ಕೀರ್ತಿಮುಖ ಹಾಗೂ ಮಕರತೋರಣಗಳಿವೆ. ಇದರ ಅಂತರಾಳದ ಬಾಗಿಲವಾಡದ ಎರಡೂ ಕಡೆಗಳಲ್ಲಿ ದೇವಕೋಷ್ಠಗಳಿದ್ದು ಒಂದರಲ್ಲಿ ಸುಂದರವಾದ ನಾಗಬಂದ ಶಿಲ್ಪವಿದ್ದು ಇನ್ನೊಂದರಲ್ಲಿ ಶಿವಲಿಂಗವಿದೆ. ಬಲಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅಂತರಾಳದ ಎಡಭಾಗದಲ್ಲಿ ದೇವಕೋಷ್ಠವಿದ್ದು ಮಹಿಷಮರ್ದಿನಿಯ ವಿಗ್ರಹವಿದೆ. ಇದರ ಅಂತರಾಳದ ಬಾಗಿಲುವಾಡವು ಅಲಂಕೃತವಾಗಿದೆ. ಬಾಗಿಲುವಾಡದ ಲಲಾಟದ ಮೇಲ್ಭಾಗದಲ್ಲಿ ಬ್ರಹ್ಮ ಷಡ್ಭುಜ ನಟರಾಜ ಮತ್ತು ವಿಷ್ಣುವಿನ ಅಲಂಕಾರಿಕ ಶಿಲ್ಪಗಳಿವೆ. ಎಡಭಾಗದ ಗರ್ಭಗೃಹದಲ್ಲಿ ಸೂರ್ಯಪೀಠವಿದ್ದು ಅದು ಬರಿದಾಗಿದೆ. ಇದರ ಅಂತರಾಳದ ಎರಡೂ ಕಡೆಗಳಲ್ಲಿ ಜಾಲಂಧ್ರಗಳಿದ್ದು ಮತ್ತು ಇಕ್ಕೆಡೆಗಳಲ್ಲಿ ಎರಡು ದೇವಕೋಷ್ಠಗಳಲ್ಲಿ ಬಲಗಡೆ ಉಮಾ ಮಹೇಶ್ವರ ಹಾಗೂ ಎಡಗಡೆ ಸಪ್ತಮಾತೃಕಾ ಶಿಲ್ಪವಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಸುಂದರ ಚಾಳುಕ್ಯ ಕಂಬಗಳು ಆಕರ್ಷಕವಾಗಿವೆ. ನವರಂಗದಲ್ಲಿ ಮತ್ತೊಂದು ಕೋಷ್ಠದಲ್ಲಿ ಸುಂದರವಾದ ಶೇಷಶಯನ ಅನಂತ ಪದ್ಮನಾಭನ ಶಿಲ್ಪವಿದ್ದು ಪ್ರಭಾವಳಿಯಲ್ಲಿ ದಶಾವತಾರದ ಕಿರು ಶಿಲ್ಪಗಳಿವೆ ನವರಂಗದ ದ್ವಾರದಲ್ಲಿ ದ್ವಾರಪಾಲಕರ ಶಿಲ್ಪವಿದೆ. ಈ ಗುಡಿಯ ಹೊರಗಿರುವ ಶಾಸನವು ಕಲ್ಯಾಣದ ಚಾಳುಕ್ಯ ಮೂರನೇ ಸೋಮೇಶ್ವರನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1120) ನಾಗಾರ್ಜುನ ಗ್ರಾಮದಲ್ಲಿ ಸೂರ್ಯಗ್ರಹಣದಂದು ದೇವರ ಬಂಟ ಬಾಚಿಗನು ಪ್ರಾಣಾರ್ಪಣೆ ಮಾಡಿದ ವಿಷಯವನ್ನು ತಿಳಿಸುತ್ತಿದ್ದು ಶಿರೋಭಾಗದಲ್ಲಿ ಹಾವು ಸೂರ್ಯನನ್ನು ನುಂಗಲು ಮುಂದಾಗಿರುವಂತೆ ಕೆತ್ತಲಾಗಿದೆ. ಇದರ ಪಕ್ಕದಲ್ಲೇ ಇರುವ ಇನ್ನೊಂದು ಶಾಸನವು (ಕ್ರಿ.ಶ.1129) ನಾಗಾರ್ಜುನ ಗ್ರಾಮದ ಬ್ರಹ್ಮೇಶ್ವರ ದೇವಾಲಯಕ್ಕೆ ಭೂಪನೆಂಬ ಅಧಿಕಾರಿಯು ಹುಂಡರ ಹಣದಿಂದ ಬರುವ ಸುಂಕವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಎಲ್ಲಾ ಗರ್ಭಗೃಹಗಳ ಮೇಲೂ ಕುಸಿದ ಕದಂಬ ನಾಗರ ಶೈಲಿಯ ಶಿಖರಗಳಿವೆ.

ಊರಿನಲ್ಲಿರುವ ಇತರ ದೇವಾಲಯಗಳೆಂದರೆ ವೀರಭದ್ರ, ಮಾರುತಿ ಮಾರಿಕಾಂಬ, ಬಸವೇಶ್ವರ, ಬನಶಂಕರಿ, ದುರ್ಗವ್ವ, ಗುತ್ತವ್ವ, ಮಾತಂಗಿ, ಬೇಡರಕಣ್ಣಪ್ಪ ಇನ್ನೊಂದು ಸಿದ್ದೇಶ್ವರ ಹಾಗೂ ಬ್ರಹ್ಮದೇವರು. ಊರಿನಲ್ಲಿ ಒಂದು ಮಸೀದಿ ಇದೆ.

**ನಾಗಾವಿ :** ಗದಗ ತಾಲೂಕಿನ ನಾಗಾವಿಯು (ಜನಸಂಖ್ಯೆ : 4,121) ಗದಗಿನಿಂದ 8 ಕಿ.ಮೀ. ದೂರವಿದ್ದು ಶಾಸನಗಳಲ್ಲಿ ನಾಗರಖಂಡ - 70ಕ್ಕೆ ಸೇರಿದ್ದ 'ನಾಗಾಯಿ' ಎಂದು ಉಲ್ಲೇಖಗೊಂಡಿದ್ದು ಪ್ರಸಿದ್ಧ ಜ್ಞಾನಾರ್ಜನೆಯ ಕೇಂದ್ರವಾಗಿತ್ತು. ಈ ಊರಿನ ಇತಿಹಾಸ ಪ್ರಸಿದ್ಧವಾಗಿರುವ ನಾಗಾರ್ಜುನ ಗುಡಿಯು ಕಿರಿದಾದ ಸಾಧಾರಣ ಕಟ್ಟಡವಾಗಿದೆ. ಕೇವಲ ಇಟ್ಟಿಗೆಯಲ್ಲಿ ಕಟ್ಟಿರುವ ಕೊಠಡಿಯಲ್ಲಿ ಪುರಾತನ (ರಾಷ್ಟ್ರಕೂಟ ಶೈಲಿಯ) ನಾಗಾರ್ಜುನ ವಿಗ್ರಹವನ್ನು ಇಡಲಾಗಿದೆ. ಈ ವಿಗ್ರಹವು ಐದು ಹೆಡೆಯ ಸರ್ಪಛತ್ರವನ್ನು ಹೊಂದಿದ್ದು ಒಂದು ಕಾಲನ್ನು ಮಡಚಿ ಆಸೀನನಾಗಿರುವ ವಿದ್ಯಾಗುರುಗಳ ಸೌಮ್ಯಭಾವವನ್ನು ವ್ಯಕ್ತಪಡಿಸುವ ಆಕರ್ಷಕ ಶಿಲಾಕೃತಿಯಾಗಿದೆ. ಈ ದೇವಾಲಯದ ಎದುರಿಗಿರುವ ಶಾಸನವು ರಾಷ್ಟ್ರಕೂಟ ದೊರೆ ಖೊಟ್ಟಿಗನ ಕಾಲದ್ದಾಗಿದ್ದು (ಕ್ರಿ.ಶ. 936) ಅಸ್ಪಷ್ಟವಾಗಿದ್ದು, ರಾಮೇಶ್ವರ ದೇವಾಲಯಕ್ಕೆ ಶಿಕ್ಷಣಕ್ಕಾಗಿ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ಸ್ಥಳೀಯವಾಗಿ ಈಗಲೂ ಶಿವರಾತ್ರಿಗೆ ವಿಶೇಷ ಪೂಜೆ ನಡೆಯುತ್ತದೆ. ಆಗ ಡೊಳ್ಳಿನ ಕುಣಿತ, ಗೀಗೀಪದಗಳ ಹಾಡುಗಾರಿಕೆ ಮುಂತಾದ ಕಾರ್ಯಗಳು ನಡೆಯುತ್ತವೆ. ಊರಿನಲ್ಲಿರುವ ಇತರೆ ದೇವಾಲಯಗಳೆಂದರೆ ಸೋಮೇಶ್ವರ, ಕೋಡಿ ಬಸವಣ್ಣ (ಶಾಸನೋಕ್ತ ಮಹಾಬಲೇಶ್ವರ) ಎಲ್ಲಮ್ಮ, ದ್ಯಾಮವ್ವ ಮುಂತಾದುವುಗಳು. ಸೋಮೇಶ್ವರ ದೇವಾಲಯವು ರಾಷ್ಟ್ರಕೂಟರ ಶೈಲಿಯ ಗರ್ಭಗೃಹ ಹಾಗೂ ಅಂತರಾಳ ಮಾತ್ರ ಹೊಂದಿದೆ. ಮುಂಭಾಗದಲ್ಲಿ ಶಿವಲಿಂಗವಿದೆ. ಹಳೆ ತಳಹದಿಯ ಮೇಲೆ ಹೊಸ ಗೋಡೆಯನ್ನು ಕಟ್ಟಲಾಗಿದೆ. ಹೊರಗೆ ಒಂದು ಭಗ್ನವಾದ ಶಿವಲಿಂಗವಿದೆ. ಊರ ಹಿಂಭಾಗದಲ್ಲಿ ಜಮದಗ್ನಿ ಬೆಟ್ಟವಿದೆ. ಇದರ ಮೇಲ್ಭಾಗದಲ್ಲಿ ಪುರಾತನ ಗವಿ ಇದೆ ಎಂದು ಹೇಳಲಾಗುತ್ತದೆ. ಊರ ಹೊರಭಾಗದಲ್ಲಿ ಎತ್ತರವಾದ ಗುಡ್ಡದ ಮೇಲೆ ಎಲ್ಲಮ್ಮನ ಚಿಕ್ಕದಾದ ಆಧುನಿಕ ಕಟ್ಟಡವಿರುವ ಗುಡಿಯಿದೆ. ಕಪ್ಪತಗುಡ್ಡ (ನಾಗಾವಿಯಿಂದ 10 ಕಿ.ಮಿ.) ವು ಎಲ್ಲಮ್ಮನ ಮೂಲ ಸ್ಥಾನವಾಗಿದ್ದು ಆ ದೇವತೆ ಅಲ್ಲಿಂದ ನಾಗಾವಿಗೆ ಬಂದು ಅನಂತರ ಸೌಂದತ್ತಿಗೆ ಹೋಗಿ ನೆಲೆಸಿದಳೆಂದು ಪ್ರತೀತಿಯಿದೆ. ಎಲ್ಲಮ್ಮನ ಗುಡ್ಡದ ಸಾಲಿನಲ್ಲಿಯೇ ಜಮದಗ್ನಿ ಗುಡ್ಡದಲ್ಲಿ ಗವಿಯ ಒಳಗೆ ಶಿವಲಿಂಗವಿದೆ, ಎಂದು ಹೇಳಲಾಗುತ್ತದೆ. ಈ ದೇವಾಲಯದಲ್ಲಿ ಅಂಬಿಗರು ಪೂಜೆ ಮಾಡುತ್ತಾರೆ. ಜನವರಿಗೆ ಈ ದೇವಾಲಯದಲ್ಲಿ ಭಾರಿ ಜಾತ್ರೆ ನಡೆಯುತ್ತದೆ. ಸುಮಾರು 50ರಿಂದ60,000 ಜನ ಸೇರುತ್ತಾರೆ.

ನಾಗಾವಿ ಊರಿನಿಂದ ಹೊರಗೆ ಶಿಥಿಲವಾದ ಕೋಡಿ ಬಸವಣ್ಣಗುಡಿ ಅಥವಾ ಶಾಸನೋಕ್ತ ಮಹಾಬಲೇಶ್ವರ ದೇವಾಲಯ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ಮುಂಭಾಗದಲ್ಲಿ ನಾಲ್ಕು ಕಂಬಗಳ ತೆರೆದ (ಕುಸಿದಿರುವ) ನವರಂಗವಿದೆ. ಇದರ ನಾಲ್ಕೂ ಕಂಬಗಳ ಮೇಲೂ ಶಾಸನಗಳಿವೆ. ಮೊದಲನೇಯ ಕಂಬದ ಶಾಸನವು ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದ್ದು (ಕ್ರಿ.ಶ. 1211); ಧರ್ಮರಾಶಿ ಪಂಡಿತರಿಂದ ನಾಗಾಯಿಯ ಮಹಾಬಲೇಶ್ವರ ದೇವರಿಗೆ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಎರಡನೇ ಕಂಬದ ಶಾಸನವು ಯಾದವ ಸಿಂಘಣ ಕಾಲದ್ದು (ಕ್ರಿ.ಶ. 1215); ಬೊಮ್ಮೋಜನೆಂಬ ಅಧಿಕಾರಿಯಿಂದ ಮಹಾಬಲೇಶ್ವರ ದೇವರಿಗೆ ಬಿಟ್ಟ ದಾನ. ಮೂರನೇ ಕಂಬದ ಶಾಸನವೂ ಇದೇ ಕಾಲಕ್ಕೆ ಸೇರಿದ್ದು ಮಹಾಬಲೇಶ್ವರ ದೇವರಿಗೆ ಪ್ರತಿಷ್ಠಿತ ಗ್ರಾಮಸ್ಥರು ಬಿಟ್ಟ ದಾನವನ್ನು ದಾಖಲಿಸುತ್ತದೆ. ಹಾಗೂ ನಾಲ್ಕನೇ ಕಂಬದ ಮೇಲಿರುವ ಶಾಸನವು ಯಾದವ ಕನ್ನರನ ಕಾಲದ್ದು (ಕ್ರಿ.ಶ. 1255);ಕೆಲವು ನಾಯಕರಿಂದ ಮಹಾಬಲೇಶ್ವರ ದೇವರಿಗೆ ಬಿಟ್ಟ ಸುಂಕದಾನವನ್ನು ತಿಳಿಸುತ್ತದೆ. ಅಂತರಾಳದ ಬಾಗಿಲುವಾಡದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಕುಸಿದಿರುವ ಕದಂಬನಾಗರ ಶಿಖರವಿದೆ.

**ನಾವಳ್ಳಿ :** ನವಲಗುಂದ ತಾಲೂಕಿನ ನಾವಳ್ಳಿ ಗ್ರಾಮವು (ಜನಸಂಖ್ಯೆ : 1,976) ನವಲಗುಂದದಿಂದ ಪೂರ್ವಕ್ಕೆ 13 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ನಾರ್ಪೊಳೆ' ಎಂದು ಉಲ್ಲೇಖಿತಗೊಂಡಿದ್ದು, ಹಿಂದೆ ಇದೊಂದು ಅಗ್ರಹಾರವಾಗಿತ್ತೆಂಬ ಅಂಶವೂ ಶಾಸನದಲ್ಲಿ ದಾಖಲಾಗಿದೆ. ನಾರ್ಪೊಳೇ ನಾರ್ಪೊಳೆ ನಾವೊಳ್ ನಾವಳ್ಳಿ ಎಂದು ರೂಪಾಂತರಗೊಂಡಿದ್ದು, ನಾರು ಹಾಗೂ ಹೊಳೆಯಿಂದಾಗಿ ಊರಿಗೆ ಈ ಹೆಸರು ಬಂದಿರಲಿಕ್ಕೂ ಸಾಕ್ಕು. ಊರ ಬಳಿ ಹಂದಿಗನ ಹಳ್ಳವಿದ್ದು ಕಲ್ಲುನಾರು ಹೇರಳವಾಗಿ ಸಿಗುವುದರಿಂದ ಇದಕ್ಕೆ ನಾರ್ಪೊಳೆ ಎಂಬ ಹೆಸರು ಬಂದಿದೆ. ಪ್ರಾಚೀನ ಕಾಲದಲ್ಲಿ ಬೆಳ್ವೊಲ-300ರ ನವಲಗುಂದ-40ರ ಈ ಗ್ರಾಮದಿಂದ ಈವರೆಗೆ ಒಂದೇ ಶಾಸನ ವರದಿಯಾಗಿದೆ. ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1121ರ ಈ ಶಾಸನ ಭಾಗಶಃ ಹಾಳಾಗಿದ್ದು ಬಲ್ಲರಸನ ಬೇಡಿಕೆಯಂತೆ ಕೇಶ್ವ ಚಮೂಪ ಹಾಗೂ ಸಾಯಿಪಯ್ಯಗಳು ಇಲ್ಲಿಗೆ ಬಂದು ಭಯಾಪಹಾರಿ ಕಲಿದೇವನನ್ನು ಆರಾಧಿಸಿ, ದೇವರಿಗೆ ಅಲ್ಲಿನ ಚಟ್ಟವೃತ್ತಿ ಬಾಲಶಿಕ್ಷೆಗಾಗಿ ಪರಮೇಶ್ವರ ದತ್ತಿಯಾಗಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಎತ್ತರವಾದ ದಿನ್ನೆಯ ಮೇಲೆ ಪೂರ್ವಾಭಿಮುಖವಾಗಿರುವ ಕಲ್ಲೇಶ್ವರ ಗುಡಿಯಿಂದ ಊರ ಹೊರಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ 'ಸ್ವಯಂಭು' ಲಿಂಗವಿದ್ದು ಶಾಸನ ಇದನ್ನು ಕಲಿದೇವನೆಂದು ಹೆಸರಿಸಿದೆ. ಅಂತರಾಳದ ಬಾಗಿಲವಾಡವು ಒಂದೇ ಶಾಖೆಯನ್ನು ಹೊಂದಿದ್ದು ಇಕ್ಕೆಲದಲ್ಲಿ ಜಾಲಾಂಧ್ರವಿದ್ದು ಬುಡದಲ್ಲಿ ಚಾಮರ ಧಾರಿಗಳು, ದ್ವಾರಪಾಲಕರು ಹಾಗೂ ರತಿ-ಮನ್ಮಥರ ಉಬ್ಬು ಶಿಲ್ಪಗಳಿವೆ. ಇದರ ನವರಂಗ ವಿಶಾಲವಾಗಿದ್ದು ಪೂರ್ವ ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು ಪ್ರತೀಯೊಂದಕ್ಕೂ ಸುಂದರವಾದ ದ್ರಾವಿಡ ಶಿಖರವಿದ್ದು ಇವುಗಳಲ್ಲಿ ಕ್ರಮವಾಗಿ ಶಿವಲಿಂಗ, ನಾರಾಯಣ, ಮಹಿಷ ಮರ್ದಿನಿ ಹಾಗೂ ಕೇಶವರ ಸುಂದರ ಶಿಲ್ಪಗಳಿವೆ. ನವರಂಗದ ನಡುವಣ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯ ದುಂಡಾದ ಅಡ್ಡಕೊಯ್ತದ ಅಲಂಕೃತ ಸ್ತಂಭಗಳಿದ್ದು ಹೊಳೆಯುತ್ತಿವೆ. ನವರಂಗದ ಪೂರ್ವದ್ವಾರದ ಲಲಾಟದಲ್ಲಿ ಸರಸ್ವತಿಯ ಕೆತ್ತನೆ ಇದೆ. ಶಾಸನದಲ್ಲಿ ಬರುವ 'ಚಟ್ಟ ವೃತ್ತಿ', ಬಾಲಶಿಕ್ಷೆ ಪದಗಳ ಹಿನ್ನೆಲೆಯಲ್ಲಿ ಬಾಗಿಲವಾಡದ ಲಲಾಟದಲ್ಲಿರುವ ಸರಸ್ವತಿಯು ಮಹತ್ವ ಪಡೆಯುವುದರೊಂದಿಗೆ, ಈ ಗುಡಿ ಶಿಕ್ಷಣ ಕೇಂದ್ರವೂ ಆಗಿತ್ತೆಂಬ ಅಂಶವನ್ನು ಖಚಿತಪಡಿಸುತ್ತದೆ. ಈ ದೇವಾಲಯದ ಹೊರ ಭಿತ್ತಿ, ಸರಳವಾಗಿದ್ದು, ಗರ್ಭಗೃಹವನ್ನು ಕದಂಬ ನಾಗರ ಶಿಖರ ಅಲಂಕರಿಸಿದ್ದು ಶುಕನಾಸದಲ್ಲಿ ನಟರಾಜನ ಕೆತ್ತನೆಯಿದೆ. ಈ ದೇವರ ಜಾತ್ರೆ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಜರುಗುತ್ತದೆ. ಈ ಗುಡಿಯ ಮುಂಬದಿಯಲ್ಲಿ ಸುಮಾರು ಕ್ರಿ.ಶ. 11ನೇ ಶತಮಾನದ ಪದ್ಮಾಸೀನ ತೀರ್ಥಂಕರ ಮೂರ್ತಿಯ ಸುಂದರ ಶಿಲ್ಪವಿದ್ದು, ಇದು ಹಾಲಿ ಇರುವ ಗುಡಿ ಆವರಣದಲ್ಲಿ ಎಡಮೂಲೆಯಲ್ಲಿ ಲಭಿಸಿತ್ತೆಂದು ಹೇಳುತ್ತಾರೆ. ಇದರ ಬದಿಯಲ್ಲಿರುವ ಉಮಾಮಹೇಶ್ವರ ಶಿಲ್ಪ ಆಕರ್ಷಕ ಅಲಂಕಾರದೊಂದಿಗೆ ಸುಂದರವಾಗಿದೆ. ಇಲ್ಲೇ ಇರುವ ಮಹಿಷಮರ್ದಿನಿ ಶಿಲ್ಪ ಭಗ್ನವಾಗಿದೆ. ಈ ಗುಡಿಯ ದಕ್ಷಿಣ ದಿಕ್ಕಲ್ಲಿ 3-4 ವೀರಗಲ್ಲುಗಳಿದ್ದು ಅವುಗಳಲ್ಲೊಂದು ಆತ್ಮಬಲಿದಾನ ಮಾಡಿಕೊಂಡ ಗಂಡನೊಂದಿಗೆ ಸಹಗಮನ ಮಾಡಿರುವ ಸತಿಯನ್ನು ಕೆತ್ತನೆಯಲ್ಲಿ ತೋರಿಸಿದೆ. ಈ ಗುಡಿಯ ಪೂರ್ವ ದಿಕ್ಕಲ್ಲೂ 3-4 ಗೋಗ್ರಹಣ ವೀರಗಲ್ಲು ಹಾಗೂ ಮಾಸ್ತಿಕಲ್ಲೂ ಇವೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ವೀರಭದ್ರ, ಹನುಮಂತ ಹಾಗೂ ದ್ಯಾಮವ್ವನ ಗುಡಿಗಳು ಮಸೀದಿ ಮತ್ತು ದರ್ಗಾ ಕೂಡ ಇವೆ.

**ನಿಡಗುಂದಿ :** ರೋಣ ತಾಲೂಕಿನ ಊರಾದ ನಿಡಗುಂದಿಯು (ಜನಸಂಖ್ಯೆ 5,460) ರೋಣದಿಂದ ಆಗ್ನೇಯಕ್ಕೆ 44 ಕಿ.ಮೀ. ದೂರದಲ್ಲಿ ಹಾಗೂ ನರೇಗಲ್‌ನಿಂದ ಈಶಾನ್ಯಕ್ಕೆ ಸುಮಾರು 12 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ನಿಡುಗುಣ್ಡೆ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಇದು ಕಿಸುಕಾಡು - 70ಕ್ಕೆ ಸೇರಿದ್ದು 400 ಮಹಾಜನರಿದ್ದ ಅಗ್ರಹಾರವಾಗಿತ್ತು. ಗಣ್ಯವಿದ್ಯಾಕೇಂದ್ರವಾಗಿ ಪಟ್ಟಣವಾಗಿತ್ತು. ಇಲ್ಲಿಂದ ಈವರೆಗೆ 10 ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ನಾರಾಯಣದೇವರ ಗುಡಿ ಎದುರಿರುವ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕ್ರಿ.ಶ. 1074ರ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದ್ದು, ದಂಡನಾಯಕ ಜನ್ನಿಮಯನು 'ನಿಡುಗುಣ್ಡೆ'ಯಲ್ಲಿ ತ್ರೈಪುರುಷ ದೇವಾಲಯ ನಿರ್ಮಾಣ ಮಾಡಿ ಗುಡಿ ಹಾಗೂ ಅದಕ್ಕೆ ಸೇರಿದ ಗುರುಕುಲಕ್ಕೆ ಕಳ್ಳಮನಹಳ್ಳಿಯನ್ನು ದಾನ ಮಾಡಿದ ಅಂಶವನ್ನು ತಿಳಿಸುತ್ತಿದ್ದು, ಈ ತ್ರೈಪುರುಷ ದೇವಾಲಯ ಇಂದಿನ ನಾರಾಯಣ ದೇವರ ಗುಡಿಯಾಗಿದೆ. ಬಸವಣ್ಣನ ಗುಡಿ ಮುಂದೆ ಇರುವ ಕ್ರಿ.ಶ. 1076ರ ಶಾಸನ ಅಹವಮಲ್ಲನ (ಒಂದನೇ ಸೋಮೇಶ್ವರ) ಮಗಳು ಸುಗ್ಗಲದೇವಿ ನಿಡಗುಂದಿಯನ್ನಾಳುತ್ತಿದ್ದಾಗ ಸ್ವಯಂಭೂಕಲಿ ದೇವರಿಗೆ ನೀಡಿದ ದತ್ತಿಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1106ರ ಇನ್ನೊಂದು ಶಾಸನ ಕೇಶವಾದಿತ್ಯರಿಗೆ ಹಲವಾರು ಭಕ್ತರು ದಾನ ಕೊಟ್ಟ ವಿಷಯ ತಿಳಿಸುತ್ತಿದ್ದು ಇದು ಇಂದಿನ ಬಸವಣ್ಣನ ಗುಡಿಯೇ ಇರಬೇಕೆಂದು ತೋರುತ್ತದೆ. ಕಳಚೂರಿ ಸೋವಿದೇವನ ಕ್ರಿ.ಶ. 1170ರ ಶಾಸನ ಸಿಂಧ ಸಿರಿಯಾದೇವಿ ಹಾಗೂ ಅವಳ ಇಬ್ಬರು ಮಕ್ಕಳೂ ಕೂಡಿ ತ್ರೈಪುರುಷರ ನಾರಾಯಣ ದೇವರಿಗೆ ಕಳ್ಳವನಹಳ್ಳಿಯನ್ನು ಪುನರ್ಭರಣ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 1174ರ ಶಾಸನ ದಂಡನಾಯಕ ಮಾಧವದೇವನು ನಿರ್ಮಿಸಿದ ಮಾಧವೇಶ್ವರ ದೇಗುಲದ ದೇವರಿಗೆ ಹಾಗೂ ಸತ್ರಕ್ಕೆ ಅನೇಕರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕಂಚೇಶ್ವರ ಗುಡಿಯ ಕಂಬದಲ್ಲಿರುವ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನ ಈಶಾನ್ಯ ಶಕ್ತಿದೇವರು ನಿಡುಗುಂದಿಯ ಅಕ್ಕಬ್ಬೇಶ್ವರ ದೇವಾಲಯದ ಎಣ್ಣೆಗಾಣವನ್ನು ಮಹೇಶ್ವರ ಕಾಳಿಸೆಟ್ಟಿಗೆ ವಂಶಪಾರ್ಯವಾಗಿ ಬಿಟ್ಟ ವಿಷಯ ತಿಳಿಸುತ್ತದೆ. ಈ ಶಾಸನೋಕ್ತ ಅಕ್ಕಬ್ಬೇಶ್ವರ ಗುಡಿ ಇಂದಿನ ಕಂಚೇಶ್ವರ ಗುಡಿಯಾಗಿದೆ. ಯಾದವ ಸಿಂಘಣನ ಕ್ರಿ.ಶ. 1233ರ ಶಾಸನ ವಾಮದೇವರು ಹಾಗು ತಕ್ಕುರನಾಯಕರು ಸ್ವಯಂಭೂಕಲಿದೇವರಿಗೆ ದಾನ ಕೊಟ್ಟ ವಿಷಯ ತಿಳಿಸಿದರೆ, ಇದರ ಮುಂದುವರಿದ ಭಾಗ ಊರ ರಕ್ಷಾಪಾಲಕ ಸ್ವಯಂಭೂಪಾತಾಳಭೈರವ ದೇವರಿಗೆ ಹಾಗೂ ಗ್ರಾಮದೇವತೆ ಹಿರಿಯಕಾಳಿಗೆ ವಾಮದೇವನು ಭೂದಾನ ಮಾಡಿದ ವಿಷಯ ತಿಳಿಸುತ್ತದೆ. ಕ್ರಿ.ಶ. 1170ರ ಶಾಸನವೊಂದು ಬಮ್ಮದೇವ ನಾಯಕನ ಮಗ ಗೋವಣ್ಣನು ಕೇಶವಾದಿತ್ಯರೊಳಗೆ ತಾನು

ಮಾಡಿಸಿದ ಕೇಶವದೇವರ್ಗೆ ನಗದು ಹಣವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಹಿಂದೆ ಉಲ್ಲೇಖಿಸಿರುವ ಕೇಶವಾದಿತ್ಯಗುಡಿ ಹಾಗೂ ಇದು ಬೇರೆ ಬೇರೆ ಎಂದು ಪರಿಗಣಿಸುವುದು ಸೂಕ್ತವೆಂದು ತೋರುತ್ತದೆ. ದಾಸಿಮೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 1144ರ ಶಾಸನ, ದಾಸಿ ರಾಜೋತ್ತಮನು ದಾಸಿಮೇಶ್ವರ ದೇವಾಲಯವನ್ನು ನಿರ್ಮಿಸಿ ಅದಕ್ಕೆ ದತ್ತಿ ಬಿಟ್ಟ ವಿಷಯ ತಿಳಿಸುವ ಈ ಶಾಸನವಿನ್ನೂ ಪ್ರಕಟವಾಗಬೇಕಾಗಿದ. ಊರ ಹೊರಗಿನ ಹೊಲದಲ್ಲಿ ಸುಮಾರು ಕ್ರಿ.ಶ. 12ನೇ ಶತಮಾನದ ವೀರಗಲ್ಲು ಶಾಸನ ಪತ್ತೆಯಾಗಿದ್ದು ಅಕ್ಷರಗಳು ಸವೆದಿವೆ.

ಮೇಲಿನ ಶಾಸನಗಳಲ್ಲಿ ಉಕ್ತವಾಗಿರುವ ಎರಡು ತ್ರೈಪುರುಷ, ಅಕಬ್ಬೇಸ್ವರ, ಸ್ವಯಂಭೂದೇವ, ಕೇಶವಾದಿತ್ಯ, ಮಹಾದೇವೇಶ್ವರ ಹಾಗೂ ಸ್ವಯಂಭೂ ಪಾತಾಳಭೈರವ ದೇವಾಲಯಗಳೆಲ್ಲವನ್ನೂ ಇಂದು ನಾವಿಲ್ಲಿ ನೋಡಬಹುದಾಗಿದೆ.

ಇಂದು ಖಾದಿ ಗ್ರಾಮೋದ್ಯೋಗ ಕೇಂದ್ರವಾಗಿರುವ ನಾರಾಯಣದೇವರ ಗುಡಿ ಕ್ರಿ.ಶ. 1074ರ ಶಾಸನೋಕ್ತ ತ್ರೈಪುರುಷ ನಾರಾಯಣ ದೇವರ ಗುಡಿಯಾಗಿದ್ದು, ಇದರ ಪ್ರಧಾನ ದೈವ ನಾರಾಯಣನೇ ಎಂಬ ಅಂಶವನ್ನು ಶಾಸನಪಾಠ, ಶಾಸನ ಶಿರೋಭಾಗದ ಶಿಲ್ಪ ಹಾಗೂ ಗರ್ಭಗೃಹದಲ್ಲಿರುವ ಹಂಸ, ಗರುಡ, ವೃಷಭ ವಾಹನವುಳ್ಳ ಅಖಂಡ ಪೀಠಗಳು ಸಮರ್ಥಿಸುತ್ತವೆ. ಪೂರ್ವಾಭಿಮುಖವಾಗಿರುವ ಈ ಗುಡಿ ವಿಶಾಲವಾದ ಗರ್ಭಗೃಹ, ತೆರೆದ ಅರ್ಧಮಂಟಪ, 36 ಕಂಬದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಒಂದೇ ಪೀಠದ ಮೇಲೆ ತ್ರಿಮೂರ್ತಿಗಳು ವಿರಾಜಿಸುತ್ತಿದ್ದು ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ವಿಶಾಲವಾದ ಆಯಾಕಾರದ ಸಭಾಮಂಪಟವನ್ನು ಆರು ಸಾಲಿನಿಂದ ಕೂಡಿದ 36 ಕಂಬಗಳು ಹೊತ್ತು ನಿಂತಿದ್ದು, ಇಲ್ಲಿನ ಕಂಬಗಳು ವೈವಿಧ್ಯತೆಯಿಂದ ಕೂಡಿದ್ದು ಆಕರ್ಷಕವಾಗಿದೆ. ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಮೂಲ ಸ್ವರೂಪ ಉಳಿದಿರುವ ಈ ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು ಗರ್ಭಗೃಹ, ಅಂತರಾಳ ಭಾಗದಲ್ಲಿ ಆಲಂಕಾರಿಕ ಕಂಬ, ಕಿರು ಶಿಖರಗಳಿದ್ದು ಶಿಖರಭಾಗ ಹಾಳಾಗಿದೆ. ಈ ಗುಡಿಯ ಮುಂದೆ ಎಂಟಡಿ ಎತ್ತರದ ಶಾಸನ, ವೀರಗಲ್ಲುಗಳಿವೆ.

ಊರ ಪಶ್ಚಿಮಕ್ಕೆ ಇರುವ ಕಂಚೀಶ್ವರ (ಶಾಸನೋಕ್ತ ಅಕ್ಕಬೇಶ್ವರ) ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿಯಿದ್ದು ಸರಳ ಬಾಗಿಲವಾಡಗಳಿವೆ. ಮೂರು ಮಾದರಿಯ 16 ಕಂಬಗಳ ಮೇಲೆ ನಿಂತಿರುವ ನವರಂಗದ ಛತ್ತು ನಿರಾಡಂಬರವಾಗಿದೆ. ನಕ್ಷತ್ರಾಕಾರದ ತಳವಿನ್ಯಾಸವಿರುವ ಗರ್ಭಗೃಹಕ್ಕೆ ದ್ರಾವಿಡ ಶೈಲಿಯ ಶಿಖರವಿದ್ದು ಶಿಥಿಲವಾಗುತ್ತಿದೆ. ನವರಂಗದ ಕಂಬದಲ್ಲಿ ಗುಡಿ ಹೆಸರಿರುವ ಶಾಸನವಿದೆ. ಊರ ನಡುವೆ ವಿಶಾಲವಾದ ಬಸವಣ್ಣನ ಗುಡಿಯಿದೆ. ಗರ್ಭಗೃಹ, ಅಂತರಾಳ, ನಂದಿಮಂಟಪ, ಅಂತರ್ಗತ ಸಭಾಮಂಟಪವನ್ನು ಹೊಂದಿರುವ ಈ ಗುಡಿ ಜೀರ್ಣೋದ್ಧಾರಗೊಂಡಿದ್ದು ಅಲ್ಪಸ್ವಲ್ಪ ಮಾರ್ಪಡಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ದಕ್ಷಿಣಕ್ಕೆ ಪ್ರವೇಶದ್ವಾರವಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಭೈರವನ ಮೂರ್ತಿಯಿದ್ದು ಬಾಗಿಲವಾಡ ಸರಳವಾಗಿದೆ ಅಂತರಾಳದ ಬಾಗಿಲವಾಡವೂ ಸರಳವಾಗಿದೆ. ಸಭಾಮಂಟಪದ ಉತ್ತರ ಭಾಗದಲ್ಲಿ ಎತ್ತರದಲ್ಲಿ ಪಂಚಲಿಂಗಗಳನ್ನು ಹಾಗೂ ಸರಸ್ವತಿಯನ್ನು ಒಂದೇ ಸಾಲಿನಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಗುಡಿಗೆ ಇತ್ತೀಚಿನ ಶಿಖರವಿದ್ದು ಪ್ರವೇಶದ್ವಾರವೂ ದುರಸ್ತಿಯಾಗಿದೆ. ಶಾಸನೋಕ್ತ ಕೇಶವಾದಿತ್ಯ ಗುಡಿ ಇದೇ ಇರಬೇಕೆಂದು ಊಹಿಸಲು ಸಾಧ್ಯವಿದ್ದು, ಪ್ರಧಾನ ಗರ್ಭಗೃಹದಲ್ಲಿರುವ ಗರುಡ ಪೀಠ, ಇದಕ್ಕೆ ಎದುರಾಗಿ ಇಂದು ನಂದಿಯಿರುವ ಗರ್ಭಗೃಹಗಳು ಇವು ಕ್ರಮವಾಗಿ ಕೇಶವ, ಆದಿತ್ಯ ಆಲಯಗಳಾಗಿದ್ದವೆಂಬ ಊಹೆಯನ್ನು ಪುಷ್ಟೀಕರಿಸುತ್ತವೆ. ಈ ಗುಡಿಯ ಪ್ರವೇಶದಲ್ಲೇ ಸುಮಾರು ಆರಡಿ ಎತ್ತರದ ಭಗ್ನವಾದ ತೀರ್ಥಂಕರ ಬಿಂಬ ನಿಂತಿದೆ, ನಾಲ್ಕು ಶಾಸನ ಕಲ್ಲುಗಳೂ ಇವೆ.

ಊರ ದಕ್ಷಿಣಕ್ಕೆ ಪೂರ್ವಾಭಿಮುಖವಾಗಿ ಮನೆಗಳ ನಡುವೆ ಮುದುಡಿಕೊಂಡಂತೆ ಇರುವ ಗುಡಿಯೇ ಕ್ರಿ.ಶ. 1222ರ ಶಾಸನೋಕ್ತ ದಾಸಿಮೇಶ್ವರ ದೇವಾಲಯವಾಗಿದ್ದು, ಇದೊಂದು ತ್ರಿಕೂಟವಾಗಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹ, ಅಂತರಾಳಗಳ ಇಕ್ಕೆಲಗಳಲ್ಲಿ ದಕ್ಷಿಣೋತ್ತರವಾಗಿ ಒಂದೊಂದು ಗರ್ಭಗೃಹ ತೆರೆದ ಅರ್ಧಮಂಟಪವಿದ್ದು ಇವುಗಳನ್ನು ಒಂದೇ ನವರಂಗ ಒಗ್ಗೂಡಿಸಿದೆ. ಎಲ್ಲಾ ಗರ್ಭಗೃಹ, ದ್ವಾರಬಂಧ ಪಂಚಶಾಖೆಯನ್ನು ಹೊಂದಿದ್ದು ಸರಳವಾಗಿದ್ದು ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗ, ಬಲಗಡೆಯದರಲ್ಲಿ ಹಂಸಪೀಠ (ಮೂರ್ತಿ ಇಲ್ಲ), ಎಡಗಡೆಯದರಲ್ಲಿ ಗರುಡ ಪೀಠ (ಮೂರ್ತಿ ಇಲ್ಲ)ಗಳಿವೆ. ಹಂಸಪೀಠವಿರುವ ಗರ್ಭಗೃಹದಲ್ಲಿ ಪ್ರಾಯಶಃ ಸರಸ್ವತಿ ಇತ್ತೆಂದು ತೋರುತ್ತದೆ, ಏಕೆಂದರೆ ಅಲ್ಲೇ ಇರುವ ಶಾಸನ ಶಿರೋಭಾಗದ ಶಿಲ್ಪಕೆತ್ತನೆಯಲ್ಲಿ,

ಸರಸ್ವತಿ, ಶಿವಲಿಂಗ ಹಾಗೂ ವಿಷ್ಣುವನ್ನು ಕೆತ್ತಿದ್ದಾರೆ. ಇದರಿಂದ ಇಲ್ಲಿ ಬ್ರಹ್ಮಸ್ಥಾನವನ್ನು ಅವನ ಹೆಂಡತಿಯಾದ ಸರಸ್ವತಿಗೆ ನೀಡಲಾಗಿತ್ತೆಂದು ಗೊತ್ತಾಗುತ್ತದೆ. ಇದೊಂದು ವಿದ್ಯಾಕೇಂದ್ರವಾಗಿತ್ತೆಂಬ ಅಂಶವನ್ನೂ ಇದು ಸೂಚಿಸುತ್ತದೆ. ಈ ದೇವಾಲಯ ನವರಂಗವನ್ನು ನಾಲ್ಕು ಮಾದರಿಯ 16ಕಂಬಗಳು ಅಲಂಕರಿಸಿದ್ದು ಛಾವಣಿ ಚಪ್ಪಟೆಯಾಗಿದ್ದು ಮುಂದಿನ ಪಾರ್ಶ್ವ ಇಳಿಜಾರಾಗಿದೆ. ರಂಗಮಂಟಪದ ನಡುವಣ ಚಾಳುಕ್ಯ ಶೈಲಿಯ ನಾಲ್ಕು ಕಂಬಗಳೂ ಆಕರ್ಷಕವಾಗಿದ್ದು ಹೊಳೆಯುತ್ತವೆ. ಇದರ ಛತ್ತಿನಲ್ಲಿ ಸರಳವಾದ ಕಮಲವಿದೆ. ಈ ದೇವಾಲಯವು ಭಿತ್ತಿಯವರೆಗೂ ಸುಸ್ಥಿತಿಯಲ್ಲಿದ್ದು, ಅಲ್ಲಿಂದ ಮೇಲೆ ನವೀನ ರಚನೆಯಿದೆ. ಊರ ಹೊರಗೆ ಖಾಸಗಿ ಹೊಲದಲ್ಲಿ ಹೂತಿರುವ ಗುಡಿ ಇದೆ. ಊರಲ್ಲಿರುವ ವೀರಭದ್ರನ ಗುಡಿ ಹಿಂದೆ ಜೈನಬಸದಿಯಾಗಿರಬೇಕೆಂದು ತೋರುತ್ತದೆ. ಊರಲ್ಲಿರುವ ತೀರ್ಥಂಕರ ಪ್ರತಿಮೆ, ವೀರಭದ್ರಗುಡಿ, ಪರಸರದಲ್ಲಿರುವ ಜೈನಾವಶೇಷಗಳು ಇದನ್ನು ಸಮರ್ಥಿಸುತ್ತವೆ. ಇದೇ ಗುಡಿ ಪರಿಸರದಲ್ಲಿ ಕ್ರಿ.ಶ. 12-13ನೇ ಶತಮಾನದ ವೀರಗಲ್ಲು ಇವೆ. ಊರ ನಡುವೆ ಇರುವ ಗ್ರಾಮದೇವತೆ ಗುಡಿಯ ಮುಂದಿನ ದುರ್ಗಾ ಶಿಲ್ಪ ಹಾಗೂ ವೀರಭದ್ರನ ಶಿಲ್ಪಗಳಿವೆ. ಎ.ಎಂ. ಅಣ್ಣಿಗೇರಿರವರು ನಿಡುಗುಂದಿ ದೇವಾಲಯದ ಮೇಲೆ ಅಳತೆಕೋಲಿನ ಕೆತ್ತನೆ ಇದೆ ಎಂದು ಹೇಳುತ್ತಾರೆ. ಆದರೆ ಇಂದು ಅದು ಉಳಿದಿಲ್ಲ. ಇವುಗಳೊಂದಿಗೆ ಊರಲ್ಲಿ ಈಶ್ವರ, ಸಂಗಮೇಶ್ವರ, ಹನುಮಂತ, ಸುಗ್ರೀವ, ಶರಣಬಸವೇಶ್ವರ, ದ್ಯಾಮವ್ವ, ದುರ್ಗವ್ವ ಹಾಗೂ ಭೀಮಾಂಬಿಕೆ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳು ಇವೆ. 'ಭವ್ಯಮಾನವ'ದಂತಹ ಆಧುನಿಕ ಮಹಾಕಾವ್ಯವನ್ನು ಬರೆದಿರುವ ದಿವಂಗತ ಎಸ್.ಎಸ್. ಭೂಸನೂರಮಠರವರು ಇದೇ ಊರಿನವರು.

**ನಿಡಸಿಂಗಿ : (ಬೇಚರಾಕ್)** ಹಾನಗಲ್ ತಾಲೂಕಿನ ನಿಡಸಿಂಗಿ ಪ್ರಾಚೀನ ಶಾಸನಗಳಲ್ಲಿ 'ನಿಟ್ಟಸಿಂಗಿ;' 'ನಿಡಿಸಿಗೆ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಈ ಊರಿನ ಜನ ನೆರೆಯ ಬೊಮ್ಮನಹಳ್ಳಿಗೆ ವಲಸೆ ಹೋಗಿ ನೆಲೆಸಿರುವುದರಿಂದ, ಇಂದು ಇದು ಪಾಳು ಬಿದ್ದಿದ್ದು, ಹಾನಗಲ್‌ನಿಂದ ಉತ್ತರಕ್ಕೆ 15 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಪಾನುಂಗಬಲ್ಲು - 500 ಕಂಪಣಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ, ಹಾನಗಲ್ ಕದಂಬ ಹಾಗೂ ನಂತರದ ಕಾಲದ ಐದು ಶಾಸನಗಳು ವರದಿಯಾಗಿವೆ. ಕೆರೆ ಏರಿ ಬಳಿಯಿರುವ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಹಿರಿಯ ರಾಣಿ ಲಕ್ಷ್ಮೀದೇವಿಯು 'ನಿಟ್ಟಸಿಂಗಿ'ಯನ್ನಾಳುತ್ತಿದ್ದಾಗ, ಉಗುರು ಮುನ್ನೂರ್ವರು ಕೊಯ್ಲಲೇಶ್ವರ ದೇವರ ಸ್ಥಾನಾಚಾರ್ಯ್ಯ ಸೋಮೇಶ್ವರ ಪಂಡಿತರಿಗೆ ಬಿಟ್ಟ ದತ್ತಿಯ ಬಗ್ಗೆ ತಿಳಿಸಿದರೆ, ಬಸವಣ್ಣನ ಗುಡಿ ಬಳಿಯಿರುವ ಶಾಸನ ಪ್ರಸವೇಶ್ವರ ದೇವಾಲಯಕ್ಕೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಮತ್ತೊಂದು ಶಾಸನ ಮಹಾದೇವ ದೇಗುಲಕ್ಕೆದಾನ ನೀಡಿದ ಅಂಶವನ್ನು ದಾಖಲಿಸಿದರೆ, ಬೊಮ್ಮನಹಳ್ಳಿಯ ಕ್ರಿ.ಶ. 16ನೇ ಶತಮಾನದ ಶಾಸನ ಊರ ಹೆಸರನ್ನು 'ನಿಡಿಸಿಗೆ' ಎಂದು ಉಲ್ಲೇಖಿಸುತ್ತದೆ.

ಮೇಲಿನ ಶಾಸನೋಕ್ತ ಮೂರು ಗುಡಿಗಳಲ್ಲಿ ಶಿಥಿಲಾವಸ್ಥೆಯಲ್ಲಾದರೂ ಕಾಣಸಿಗುವುದು ರಾಮಲಿಂಗ ಗುಡಿಯೊಂದೇ. ಇದು ತೋಟಗಳ ನಡುವೆ ಎತ್ತರವಾದ ಸ್ಥಳದಲ್ಲಿದೆ. ಗರ್ಭಗೃಹ, ತೆರೆದ ಅಧರಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಸರಳವಾದ ಬಾಗಿಲವಾಡವನ್ನು ಹೊಂದಿದೆ. ತೆರೆದ ಅರ್ಧಮಂಟಪದ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಇವುಗಳಲ್ಲಿ ಕ್ರಮವಾಗಿ ಸುಮಾರು ಎರಡಡಿ ಎತ್ತರದ ಸಪ್ತಮಾತೃಕಾ ಪಟ್ಟಿಕೆ, ಕಾರ್ತಿಕೇಯ ಹಾಗೂ ಮಹಿಷಮರ್ದಿನಿಯ ಮೂರ್ತಿಗಳಿವೆ. ಅಲ್ಲೇ ಸೂರ್ಯನ ಶಿಲ್ಪವಿದ್ದು ಪ್ರಭಾವಳಿಯಲ್ಲಿ ಅಷ್ಟಗ್ರಹಗಳನ್ನು ಬಿಡಿಸಿದ್ದಾರೆ. ನವರಂಗದ ನಡುವಣ ನಾಲ್ಕು ಕಂಬಗಳು ಭಿಕ್ಷಾಟಾನ ಶಿವ, ಸೂರ್ಯ ಮುಂತಾದ ಚಿಕಣಿ ಶಿಲ್ಪಕೆತ್ತನೆಯನ್ನು ಹೊಂದಿದ್ದು ಆಕರ್ಷಕವಾಗಿದೆ. ನವರಂಗದ ಪ್ರವೇಶದ್ವಾರವು ಚಿತ್ತಾಕರ್ಷಕವಾದ ನಾಲ್ಕು ಶಾಖಾಲಂಕಾರವನ್ನು ಹೊಂದಿದ್ದು ದ್ವಾರಪಾಲರಿದ್ದಾರೆ. ದೇವಾಲಯದ ಹೊರಭಿತ್ತಿಯಲ್ಲಿ ಕಿರುಶಿಖರಮಾದರಿ ಅಹಗೂ ಅಲಂಕಾರಿಕ ಕಂಬಗಳನ್ನು ಬಿಡಿಸಲಾಗಿದ್ದು, ಗರ್ಭಗೃಹದ ಶಿಖರದ ಹಿಂಬದಿ ಕಾಣಿಸುತ್ತಿದ್ದು ಗರ್ಭಗೃಹದ ಭಿತ್ತಿಯನ್ನು ಪೂರ್ಣ ಮಣ್ಣಿಂದ ಮುಚ್ಚಿದ್ದಾರೆ. ಸುಮಾರು ಕ್ರಿ.ಶ. 11ನೇ ಶತಮಾನದ ರಚನೆಯಾಗಿರಬಹುದಾದ ಈ ಗುಡಿಯ ಸಮೀಪದಲ್ಲಿ ಪಾಳು ಬಿದ್ದಿರುವ ಕಿರುಗುಡಿಯ ಮುಂದೆ ಸುಮಾರು ಎರಡೂವರೆ ಅಡಿ ಎತ್ತರದ ಕಾಳಿ, ದಕ್ಷ ಹಾಗೂ ಕೋಣನ ತಲೆಯ ಶಿಲ್ಪಗಳಿವೆ. ಇವುಗಳೊಂದಿಗೆ ಇಲ್ಲಿ ಬಸವಣ್ಣ, ಹನುಮಂತ, ಗಣೇಶ ಹಾಗೂ ಈಶ್ವರನ ಗುಡಿಗಳಿದ್ದು, ಅಜ್ಜಯ್ಯನ ಮಠವಿದೆ. ಬೃಹತ್ತಾದ ಪ್ರಾಚೀನ ಕಟ್ಟಡವನ್ನು ಹೊಂದಿರುವ ಅಜ್ಜಯ್ಯನ ಮಠದಲ್ಲಿ ಸಂಕ್ರಾತಿಯಲ್ಲಿ ಜಾತ್ರೆಯಾಗುತ್ತದೆ. ಸುಂದರ ದೇವಾಲಯಗಳನ್ನುಳ್ಳ 'ಯಳವಟ್ಟಿ' ನೆರೆಯ ಗ್ರಾಮವಾಗಿದ್ದು ಎರಡು ಕಿ.ಮೀ. ದೂರದಲ್ಲಿದೆ.

**ನೀರಸಾಗರ :** ಕಲಘಟಗಿ ತಾಲೂಕಿನ ನೀರಸಾಗರವು ಧಾರವಾಡದಿಂದ ದಕ್ಷಿಣಕ್ಕೆ ಸುಮಾರು 19 ಕಿ.ಮೀ. ದೂರದಲ್ಲಿ ಕಲಘಟಗಿಯಿಂದ 15 ಕಿ.ಮೀ. ಉತ್ತರಕ್ಕಿರುವ ದುಮ್ಮವಾಡದಿಂದ ಸುಮಾರು 6 ಕಿ.ಮೀ. ಒಳಗೆ ಇರುವ ದುಮ್ಮವಾಡದ ಕೆರೆ ಇರುವ

ಸ್ಥಳ. ನೀರಸಾಗರ ವಿಶಾಲವಾದ ಸರೋವರವಾಗಿರುವ ಇದು ಅಪಾರವಾದ ಜಲರಾಶಿಯಿಂದಾಗಿ ನೀರಸಾಗರದಂತೆ ಗೋಚರಿಸುತ್ತದೆ. ದೂರದ ಧಾರವಾಡ ನಗರಕ್ಕೆ ಕುಡಿಯುವ ನೀರನ್ನು ಭಾಗಶಃ ಪೂರೈಸುವ ಈ ಕೆರೆಯ ತಗ್ಗಲ್ಲಿ, ಉದ್ಯಾನವನವಿದೆ. ವಾರದಂಚಿನ ವಿಹಾರ ವನಭೋಜನಗಳಿಗೆ ಇದು ಪ್ರಶಸ್ತ ತಾಣವಾಗಬಲ್ಲುದಾಗಿದೆ. ಇಲ್ಲೇ ಮೀನು ಕೃಷಿ ತರಬೇತಿ ಕೇಂದ್ರ ಹಾಗೂ ತೋಟಗಾರಿಕೆ ಕೇಂದ್ರವಿದೆ. ಧಾರವಾಡ ತಾಲೂಕಿನ ಮನುಗುಂಡಿಯ 1221ರ ಶಾಸನದಲ್ಲಿ ದಾನ ನೀಡಿದ ಸೀಮೆಯ ಗಡಿಯನ್ನು ಸೂಚಿಸುವಾಗ 'ಊರ ತೆಂಕ ಮುಂದಾಗಿ ನೀರು ಸಾಗರಕ್ಕೆ ಹೋದ ಓಣಿಯಂ ಪಡುವಲು' ಎಂಬ ಪ್ರಯೋಗವಿದೆ. ಇದು ದುಮ್ಮವಾಡದ ನೀರಸಾಗರವನ್ನು ಸೂಚಿಸಬಹುದೆಂದೆನಿಸಿದರೂ, ದುಮ್ಮವಾಡ ಮನಗುಂಡಿಯಿಂದ ದಕ್ಷಿಣಕ್ಕೆ ಇರುವುದರಿಂದ ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಮೇಲಿನ ಶಾಸನದಲ್ಲಿ ಉಕ್ತವಾಗಿರುವ 'ನೀರು ಸಾಗರವನ್ನು' ಮನಗುಂಡಿಯಿಂದ ಉತ್ತರಕ್ಕಿರುವ ನೀರಲಕಟ್ಟಿ ಎಂದು ಗುರುತಿಸುವುದು ಸಮಂಜಸವೆಂದು ತೋರುತ್ತದೆ. ನೀರಸಾಗರಕ್ಕೆ ಬೇರೆ ಬೇರೆ ಕಡೆಗಳಿಂದ ಪಕ್ಷಿಗಳು ವಲಸೆ ಬರುತ್ತವೆ.

**ನೀರಲಗಿ** : ಶಿಗ್ಗಾಂವಿ ತಾಲೂಕಿನ ನೀರಲಗಿಯು (ಜನಸಂಖ್ಯೆ : 1,366) ಶಿಗ್ಗಾಂವಿಯಿಂದ ವಾಯುವ್ಯಕ್ಕೆ 20 ಕಿ.ಮೀ ದೂರದಲ್ಲಿದೆ. ಈ ಊರು ಕಲ್ಯಾಣದ ಚಾಳುಕ್ಯರ ಕಾಲದ ಸಿದ್ದರಾಮೇಶ್ವರ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಗಾತ್ರದಲ್ಲಿ ಚಿಕ್ಕದಾದರೂ ಚೊಕ್ಕವಾಗಿರುವ ಈ ಗುಡಿ ಚಾಳುಕ್ಯ ವಾಸ್ತುರಚನೆಯ ಉತ್ತಮ ನಿದರ್ಶನವಾಗಿದೆ. ಈ ಗುಡಿಯ ಪ್ರವೇಶಮಾರ್ಗದಲ್ಲೇ ಇರುವ ಮೇಟಿಕಲ್ಲಿಂದ ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದೆಂದೆನಿಸುತ್ತದೆ. ಈ ಊರಿಂದ ಈವರೆಗೆ ಒಂದೇ ಶಾಸನ ವರದಿಯಾಗಿದ್ದು, ವೀರಭದ್ರನ ಗುಡಿ ಮುಂದಿರುವ ಆ ಶಾಸನ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ (ಕ್ರಿ.ಶ.1125) ಹೊರಡಿಸಲ್ಪಟ್ಟಿದ್ದು ಕಂಕಣಭಟ್ಟೋಪಾಧ್ಯಾಯನು ಕಲಿದೇವ ಸ್ವಾಮಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ವೀರಭದ್ರನ ಗುಡಿ ಬಳಿಯಲ್ಲೇ ಗಣಪತಿ ಕೆತ್ತನೆಯುಳ್ಳ ದಾನಶಾಸನ ಹಾಗೂ ಶಾಸನವುಳ್ಳ ಮಾಸ್ತಿಕಲ್ಲುಗಳಿದ್ದು ಇವು ಇನ್ನೂ ಪ್ರಕಟವಾಗಬೇಕಾಗಿದೆ. ಇಲ್ಲಿನ ಪ್ರಧಾನ ಆಕರ್ಷಣೆಯೆಂದರೆ ಎತ್ತರವಾದ ಸ್ಥಳದ ಮೇಲೆ ವಿಜೃಂಭಿಸುತ್ತಿರುವ ಸಿದ್ದರಾಮೇಶ್ವರ ಗುಡಿ. ಮೇಲಿನ ಶಾಸನೋಕ್ತ ಕಲಿದೇವಸ್ವಾಮಿ ಗುಡಿ ಇದೇ ಆಗಿದ್ದು ಆ ಶಾಸನದ ನೆರವಿನಿಂದ ಈ ಗುಡಿಯ ರಚನಾ ಕಾಲವನ್ನು ಕ್ರಿ.ಶ. 11ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಆಕರ್ಷಕವಾದ ಅಧಿಷ್ಠಾನದ ಮೇಲೆ ನಕ್ಷತ್ರಾಕಾರದ ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು ನವರಂಗದ ಎರಡೂ ಪಾರ್ಶ್ವಗಳಲ್ಲಿ ಪ್ರವೇಶವಿದ್ದು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಬಲಹರಿ ಪೀಠದ ಮೇಲೆ ಶಿವಲಿಂಗವಿದ್ದು, ಇದರ ದ್ವಾರ ಲಲಾಟದಲ್ಲಿ ಗಜಲಕ್ಷ್ಮಿವಲ್ಲಿ, ಸ್ತಂಭ, ಸಿಂಹಗಳೇ ಮುಂತಾದ ಕೆತ್ತನೆಯಿರುವ ಆಕರ್ಷಕ ಪಂಚಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದೆ. ಅರ್ಧಮಂಟಪವನ್ನು ನಟರಾಜ ಕೆತ್ತನೆ ಇರುವ ಸುಂದರವಾದ ಮಕರತೋರಣ ಅಲಂಕರಿಸಿದೆ.

ಅರ್ಧಮಂಟಪ ಮುಂಭಾಗದ ಇಕ್ಕೆಲಗಳಲ್ಲಿ ದೇವಕೋಷ್ಠವಿದ್ದು ಅವುಗಳಲ್ಲಿ ಕ್ರಮವಾಗಿ ಕಾರ್ತಿಕೇಯ ಹಾಗೂ ಕೇಶವನ ಸುಂದರ ಬಿಡಿ ಶಿಲ್ಪಗಳಿವೆ. ನವರಂಗದ ನಡುವಿನ ನಾಲ್ಕೂ ಕಂಬಗಳು ಚಾಳುಕ್ಯ ಶೈಲಿಯ ದುಂಡಾಕಾರದ ಅಡ್ಡಕೊಯ್ತುದ್ದಾಗಿದ್ದು, ಒಂದರ ಮೇಲೆ ಸುಮಾರು 16-17ನೇ ಶತಮಾನದ ನಾಲ್ಕು ಸಾಲಿನ ಶಾಸನವಿದ್ದು, ಊರಿನ ಹೆಸರನ್ನು ನೆರಲಿಗೆ ಎಂದಿಲ್ಲಿ ಹೇಳಲಾಗಿದೆ. ನವರಂಗದ ಉತ್ತರ ಪ್ರವೇಶದ್ವಾರವು ಆಕರ್ಷಕ ಕೆತ್ತನೆ ಇರುವ ಪಂಚಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ದ್ವಾರಪಾಲಕರಾಗಿ ವೃಷಭನನ್ನೂ ಹಾಗೂ ರತಿ ಮನ್ಮಥರನ್ನೂ ಕೆತ್ತಲಾಗಿದೆ. ಇದರ ಮುಖಮಂಟಪವು ಪೂರ್ಣ ನಾಶವಾಗಿದೆ. ದೇವಾಲಯದ ಭಿತ್ತಿಯ ಹೊರಮೈಯನ್ನು ಅಲಂಕಾರಿಕ ಗೋಡೆಗಂಬಗಳಿಂದ ಕಳಿಂಗ, ನಾಗರ, ದ್ರಾವಿಡ ಮಾದರಿಯ ಕಿರು ಶಿಖರಗಳು ಅಲಂಕರಿಸಿದೆ. ಮಕರ ಪ್ರಣಾಳವಿರುವ ಗರ್ಭಗೃಹವು ಆಕರ್ಷಕವಾದ ದ್ರಾವಿಡ ಶಿಖರವನ್ನು ಹೊಂದಿದೆ. ಯುಗಾದಿ ಪಾಡ್ಯದ ದಿನ ಇಲ್ಲಿ ಜಾತ್ರೆ ನಡೆಯುತ್ತಿದ್ದು ಎರಡು ರಥಗಳನ್ನು ಎಳೆಯಲಾಗುತ್ತದೆ.

ಇದರ ಸಮೀಪದಲ್ಲೇ ಕಿರು ಪ್ರಮಾಣದ ಗರ್ಭಗೃಹ, ಅರ್ಧಮಂಟಪವಿರುವ ವೀರಭದ್ರನ ಗುಡಿಯಿದ್ದು ವೀರಭದ್ರನ ಎರಡು ಮೂರ್ತಿಗಳಿದ್ದು ಈ ಗುಡಿ ಶಿಥಿಲಾವಸ್ಥೆಯಲ್ಲಿದೆ. ಊರ ಸಮೀಪದ ಗುಡ್ಡದಲ್ಲಿ ಗವಿಸಿದ್ಧೇಶ್ವರ ಗುಡಿಯಿದೆ. ಉಳಿದಂತೆ ಊರಲ್ಲಿ ರೇವಣ್ಣಸಿದ್ದೇಶ್ವರ, ಬಾಗಿಲಭರಮಪ್ಪ, ಬಸವಣ್ಣ, ಹನುಮಂತ, ತಳದ ಕರಿಯವ್ವ ಹಾಗೂ ದ್ಯಾಮವ್ವನ ಗುಡಿ, ಮಸೀದಿ ಹಾಗೂ ದರ್ಗಾ ಇವೆ.

**ನೀರಲಗಿ :** ಹಾವೇರಿ ತಾಲೂಕಿನ ನೀರಲಗಿಯು (ಜನಸಂಖ್ಯೆ : 1,313)ಹಾವೇರಿಯಿಂದ ಈಶಾನ್ಯಕ್ಕೆ 48 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ನೇರುಲಗೆ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಬೆಳುಹುಗೆ-70ಕ್ಕೆ ಸೇರಿತ್ತು. ಈ ಊರಲ್ಲಿ ಈವರೆಗೆ ಎರಡು ಶಾಸನಗಳು ಲಭ್ಯವಿದ್ದು ಕ್ರಿ.ಶ. 1148ರ ಶಾಸನ ಬೆಳಹುಗೆ (ಇಂದಿನ ಬೆಳವಿಗಿ) ನಾಡ ಪ್ರಭು ಮಲ್ಲಗಾವುಂಡ ನೇರುಲಗೆಯಲ್ಲಿ ತಾನು ಮಾಡಿಸಿದ ಮಲ್ಲಿನಾಥ ಜಿನಾಲಯಕ್ಕೆ ಅಂಗ-ರಂಗ ಭೋಗಕ್ಕೆಂದು ಭೂದಾನ ಮಾಡಿದ ಅಂಶವನ್ನು ತಿಳಿಸಿದರೆ, ಕ್ರಿ.ಶ. 18ನೇಯ ಶತಮಾನದ ಮತ್ತೊಂದು ಶಾಸನ ಸೀಮೆಗಲ್ಲನ್ನು ನಿಲ್ಲಿಸಿದ ಅಂಶವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ಜೈನಬಸದಿ ಕಣ್ಮರೆಯಾಗಿದ್ದು ಮುಕ್ಕಾದ ಜೈನಾವಶೇಷಗಳಿವೆ. ಆದರೆ ಊರ ಹೊರಗೆ ಬಹಳ ಆಕರ್ಷಕವಾದ ಕಲ್ಲೇಶ್ವರ ಗುಡಿಯಿದೆ. ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದ್ದು ನವರಂಗವನ್ನು ಎರಡು ಕಡೆಯಿಂದ ಪ್ರವೇಶಿಸಬಹುದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದಲ್ಲಿ ನಂದಿಯಿದ್ದು ಇದರ ಬಾಗಿಲವಾಡ ಆಕರ್ಷಕವಾಗಿದ್ದು, ಕಪೋತ ಭಾಗದಲ್ಲಿ ನಾಗರ ಶೈಲಿಯ ಕಿರು ಶಿಖರಗಳ ನಡುವೆ ಸ್ಥಾನಿಕ ಬ್ರಹ್ಮ ಮಹೇಶ್ವರ, ವಿಷ್ಣು ಶಿಲ್ಪಗಳಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದ್ದು ಇಕ್ಕೆಲದಲ್ಲಿ ಜಾಲಂಧ್ರವಿದೆ. ನವರಂಗದ ಎರಡು ದೇವಕೋಷ್ಠಗಳಲ್ಲಿ ಬ್ರಹ್ಮಪೀಠ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. 16 ಕಂಬಗಳ ಮೇಲೆ ನಿಂತಿರುವ ತೆರೆದ ನವರಂಗದಂಚಿನುದ್ದಕ್ಕೂ ಕಕ್ಷಾಸನವಿದೆ. ಈ ಗುಡಿ ಸುಂದರವಾದ ಕದಂಬನಾಗರ ಶಿಖರವನ್ನು ಹೊಂದಿದೆ. ಈ ಗುಡಿಯ ಹೊರಭಿತ್ತಿ ಸರಳವಾಗಿದ್ದು ಕಿರು ಶಿಖರಗಳ ಹಾಗೂ ಅಲಂಕಾರಿಕ ಕಂಬಗಳ ಕೆತ್ತನೆಯನ್ನು ಹೊಂದಿದೆ. ಗಾತ್ರದಲ್ಲಿ ಕಿರಿದಾದರೂ ಕಲಾತ್ಮಕತೆಯ ದೃಷ್ಟಿಯಿಂದ ಉತ್ಕೃಷ್ಟವಾಗಿರುವ ಈ ಗುಡಿ ಕುಸಿಯುವ ಸ್ಥಿತಿಯಲ್ಲಿ ಇದೆ. ಈ ಗುಡಿಯ ಬಳಿಯಲ್ಲೇ ವಿಷ್ಣುವಿನ ಭಗ್ನ ಶಿಲ್ಪಾವಶೇಷವಿದೆ. ಆಸೀನ ಭೈರವನ ಮೂರ್ತಿಯೂ ಇಲ್ಲಿದ್ದು ಆಕರ್ಷಕವಾಗಿದೆ. ಈ ಗುಡಿಯ ಆಸುಪಾಸಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಎರಡು ವೀರಗಲ್ಲುಗಳಿವೆ. ಊರಲ್ಲಿರುವ ಇತರ ಗುಡಿಗಳೆಂದರೆ ಬಸವಣ್ಣ, ಹನುಮಂತ, ದ್ಯಾಮವ್ವ ಹಾಗೂ ಕರಿಯಮ್ಮನದಾಗಿದ್ದು ಮಸೀದಿ ಹಾಗೂ ದರ್ಗಾ ಕೂಡ ಇವೆ.

**ನೀಲಗುಂದ :** ಗದಗ ತಾಲೂಕಿನ ನೀಲಗುಂದವು (ಜನಸಂಖ್ಯೆ : 2,166) ಗದಗಿನಿಂದ ನೈರುತ್ಯಕ್ಕೆ 25 ಕಿ.ಮೀ. ದೂರದಲ್ಲಿದೆ. ಮುಳುಗುಂದದಿಂದ ವಾಯುವ್ಯಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ನೀರ್ಗುಂದ' ಎಂದು ಉಲ್ಲೇಖಿತಗೊಂಡಿರುವ ಈ ಊರು ಅಗ್ರಹಾರವಾಗಿದ್ದು ಹಿಂದೆ ಇದು ಬೆಳ್ವೊಲ-300ರ ಮುಳುಗುಂದ - 12ಕ್ಕೆ ಸೇರಿದ್ದಿರಬೇಕು. ಊರ ಚಾವಡಿ ಬಳಿಯಿರುವ 3-4 ಮೇಟಿಕಲ್ಲುಗಳಿಂದ ಇದೊಂದು ರಾಷ್ಟ್ರಕೂಟ ನೆಲೆ ಆಗಿತ್ತೆಂಬ ಅಂಶ ಗೊತ್ತಾಗುತ್ತದೆ. ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ರಾಷ್ಟ್ರಕೂಟ ಒಂದನೆಯ ಅಮೋಘವರ್ಷನ ಕ್ರಿ.ಶ. 866ರ ಶಾಸನ ಬೆಳ್ವೊಲ-300ರ ಅಧಿಕಾರಿ ರೇವಣ್ಣಯ್ಯನು ನೀರ್ಗುಂದ ಮಹಾಜನರಿಗೆ ತುಪ್ಪದ ಸುಂಕ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ತೈಲಪನ ಕ್ರಿ.ಶ. 982ರ ಶಾಸನ ಶೋಭನರಸನು ಸತ್ರಕ್ಕೆಂದು ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಕಲ್ಮೇಶ್ವರ ದೇವಾಲಯದಲ್ಲಿರುವ ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನ ಬಹಳ ಹಾಳಾಗಿದ್ದು ಬಲವರ್ಮ ಹಾಗೂ ಭೋಗಾದಿತ್ಯದೇವರ ಬಗ್ಗೆ ಪ್ರಶಸ್ತಿಗಳಿವೆ. ಹೊಲದಲ್ಲಿರುವ ಕ್ರಿ.ಶ. 1524 ಶಾಸನದಿಂದ ಮುಳಗುಂದದ ಸಿದ್ದೇಶ್ವರ ದೇವರಿಗೆ ವೆಂಕಟಪ್ಪನಾಯಕನು ಭೂದಾನ ನೀಡಿದ ವಿಷಯ ಗೊತ್ತಾಗುತ್ತದೆ. ಕಲ್ಮೇಶ್ವರ ದೇವಾಲಯದ ಕಂಬದ ಮೇಲೆ ಒಂದು, ದ್ವಿಕೂಟವಿರುವ ಈಶ್ವರ ಗುಡಿಯ ಮೇಲೆ 4-5 ಶಾಸನಗಳಿದ್ದು ಇವುಗಳಲ್ಲಿ ಹೆಚ್ಚಿನವು ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ್ದು ಒಂದು ಮಾತ್ರ ಕ್ರಿ.ಶ. 15ನೇ ಶತಮಾನಕ್ಕೆ ಸೇರಿದೆ. ಇವುಗಳಲ್ಲೊಂದು ಶಾಸನದಿಂದ ಈ ಗುಡಿಯನ್ನು ದೇಶೇಶ್ವರ ಗುಡಿ ಎಂದು ಕರೆಯುತ್ತಿದ್ದ ಅಂಶ ಗೊತ್ತಾಗುತ್ತಿದ್ದು ಈ ಶಾಸನಗಳೆಲ್ಲ ಪ್ರಕಟವಾಗಬೇಕಾಗಿದೆ.

ಈ ಊರಲ್ಲಿ ನಾಲ್ಕು ಪ್ರಾಚೀನ ಗುಡಿಗಳಿದ್ದು, ಅವುಗಳಲ್ಲಿ ಮೂರು ಅಲ್ಪ ಸ್ವಲ್ಪ ಹಾಳಾಗಿದ್ದರೆ ಒಂದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಊರ ಚಾವಡಿ ಬಳಿಯಿರುವ ಸೋಮೇಶ್ವರ ಗುಡಿ ಏಕಕೂಟವಾಗಿದ್ದು ಗರ್ಭಗೃಹ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಊರ ಕೆರೆ ಬಳಿಯಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಎತ್ತರವಾದ ಅಧಿಷ್ಠಾನದ ಮೇಲಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಪಂಚಶಾಖಾ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದಲ್ಲಿ ನಂದಿ ಇದ್ದು, ಇದರ ಬಾಗಿಲವಾಡ ಜಾಲಂಧ್ರವನ್ನು ಒಳಗೊಂಡಿದೆ. ನವರಂಗದ ನಡುವೆ ಚಾಳುಕ್ಯ ಶೈಲಿಯ ದುಂಡಾದ ಅಡ್ಡಕೊಯ್ತದ

ನಾಲ್ಕು ಅಲಂಕೃತ ಕಂಬಗಳಿದ್ದು (ಒಂದರಲ್ಲಿ ಇಮ್ಮಡಿ ಬಲ್ಲಾಳನ ಶಾಸನವಿದೆ). ನವರಂಗಕ್ಕೆ ಪೂರ್ವ-ದಕ್ಷಿಣಗಳಿಂದ ಪ್ರವೇಶವಿದೆ. ಈ ದೇವಾಲಯದ ಆದಿಷ್ಠಾನದ ಮೇಲೆ ಶಾಸನವಿರುವುದು ಗಮನಾರ್ಹವಾಗಿದೆ.

ಇಲ್ಲಿನ ನಾರಾಯಣ ಗುಡಿ ಗಾತ್ರದಲ್ಲಿ ಚಿಕ್ಕದಾದರೂ ಸುಂದರವಾದ ದೇವಾಲಯವಾಗಿದೆ. ಗರ್ಭಗೃಹ ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ನಾರಾಯಣನ ಇತ್ತೀಚಿನ ಶಿಲ್ಪವಿದೆ. ಇದರ ದ್ವಾರಬಂಧ ಪಂಚಶಾಖಾಲಂಕೃತವಾಗಿದ್ದು, ಚಾಮರಧಾರಿಗಳು, ಮನ್ಮಥರ ಕೆತ್ತನೆ ಇವೆ. ಅಂತರಾಳದಲ್ಲಿ ಸುಂದರವಾದ ಚಂದ್ರಶಿಲೆಯಿದೆ. ನವರಂಗದಲ್ಲಿರುವ ಉಮಾ ಮಹೇಶ್ವರ ಶಿಲ್ಪ ಭಗ್ನವಾಗಿದ್ದರೂ, ಇವರ ವಾಹನಗಳಾದ ನಂದಿ ಹಾಗೂ ಉಡವನ್ನು ಕೆತ್ತಿದ್ದಾರೆ. ನವರಂಗದ ನಡುವಣ ನಾಲ್ಕೂ ಕಂಬಗಳು ವೃತ್ತಾಕಾರ ಅಡ್ಡಕೊಯ್ತದ ಚಾಲುಕ್ಯ ಶೈಲಿಯಲ್ಲಿದ್ದು ಮಿರಮಿರನೆ ಹೊಳೆಯುತ್ತವೆ. ಈ ದೇವಾಲಯದ ಕಂಬಗಳಲ್ಲಿರು ರಾಷ್ಟ್ರಕೂಟ ಶೈಲಿಯ ಪ್ರಭಾವವಿರುವುದನ್ನು ಗಮನಿಸಿದಾಗ ಇದರ ರಚನಾಕಾಲವನ್ನು ಕ್ರಿ.ಶ. 11ನೇ ಶತಮಾನದ ಆರಂಭಕ್ಕೆ ಗುರುತಿಸಬಹುದಾಗಿದೆ. ಈ ಗುಡಿಯ ಹೊರಭಿತ್ತಿಯನ್ನು ಆಕರ್ಷಕವಾದ ಕಿರು ಶಿಖರ, ಮಂಟಪ ಆಲಂಕಾರಿಕ ಗೋಡೆಗಂಬಗಳಿಂದ ಅಲಂಕರಿಸಲಾಗಿದ್ದು ಗರ್ಭಗೃಹದ ದ್ರಾವಿಡ ಶಿಖರದಲ್ಲಿ ಉಗ್ರನರಸಿಂಹ, ನಟರಾಜ, ಭೈರವ ಮುಂತಾದ ದೇವತೆಗಳನ್ನು ಕೆತ್ತಿದ್ದು ಶುಕನಾಸಿಯಲ್ಲಿ ಕೀರ್ತಿಮುಖವಿದ್ದು ನಡುವೆ ನಟರಾಜನ ಶಿಲ್ಪವಿದೆ. ಈ ಗುಡಿಗೆ ಸೇರಿದಂತೆ ಪೂರ್ವಕ್ಕೆ ದಕ್ಷಿಣೋತ್ತರವಾಗಿ ಎದುರು ಬದುರಾಗಿರುವ ಗರ್ಭಗೃಹವುಳ್ಳ ದ್ವಿಕೂಟ ದೇವಾಲಯವಿದ್ದು ಇದನ್ನು ಸ್ಥಳೀಕರು ಈಶ್ವರ ಗುಡಿಯೆಂದು ಕರೆಯುತ್ತಾರೆ. ಎರಡೂ ಗರ್ಭಗೃಹಗಳು ತೆರೆದ ಅರ್ಧಮಂಟಪವನ್ನು ಹೊಂದಿದ್ದು, ಇವೆರಡನ್ನೂ ತೆರೆದ ನವರಂಗ ಜೋಡಿಸಿದ್ದು, ಪೂರ್ವ ಪಶ್ಚಿಮದಿಂದ ನವರಂಗ ಪ್ರವೇಶಕ್ಕೆ ಹಾದಿಯಿದೆ. ಎರಡೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಇಲ್ಲೂ ನವರಂಗದ ನಡುವಿನ ಕಂಬಗಳು ನುಣುಪಾಗಿದ್ದು ಮಿನುಗುತ್ತವೆ. ಈ ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು ಗರ್ಭಗೃಹಗಳಿಗೆ ದ್ರಾವಿಡ ಶಿಖರಗಳಿದ್ದು ಶಿಥಿಲವಾಗಿವೆ. ಇದೇ ಗುಡಿಯಲ್ಲಿರುವ ಶಾಸನವೊಂದು ಇದನ್ನು ದೇಶೇಶ್ವರ ಗುಡಿಯೆಂದು ಕರೆದಿದೆ. ಈ ಗುಡಿಯಲ್ಲಿ 3-4 ಶಾಸನಗಳಿವೆ. ಮೇಲೆ ಚರ್ಚಿಸಿರುವ ನಾರಾಯಣಗುಡಿ ಹಾಗೂ ಅದರ ಎದುರೇ ಪೂರ್ವಕ್ಕಿರುವ ದ್ವಿಕೂಟಾಚಲವನ್ನು ಒಟ್ಟಾಗಿ ಪರಿಗಣಿಸಿದರೆ ಇದೊಂದು ತ್ರಿಕೂಟವಾಗುತ್ತದೆ. ಆರನೆಯ ವಿಕ್ರಮಾದಿತ್ಯನ ಕಾಲದ ಬಹಳ ತ್ರುಟಿತವಾದ ಶಾಸನವೊಂದರ ಕೊನೆಯ ಭಾಗದಲ್ಲಿ 'ತ್ರಿಪುರ.......ರೊಳಗೆ ಮಹಾದೇವಂ .....' ಎಂದಿದ್ದು ತ್ರುಟಿತಭಾಗವನ್ನು ತ್ರಿಪುರುಷ ದೇವರೊಳಗೆ ಮಹಾದೇವಂಗೆ ಎಂದು ಓದಬಹುದಾದರೆ ಆಗ ಮೇಲಿನ ದೇವಾಲಯ ಸಂಕೀರ್ಣ ತ್ರಿಕೂಟವಾಗುತ್ತದೆ. ಕುರ್ತಕೋಟಿ ರಸ್ತೆಯಲ್ಲಿ ಗುಡ್ಡದ ಬುಡದಲ್ಲಿ ವಿಶಾಲವಾದ ಗುಡ್ಡೇಶ್ವರಸ್ವಾಮಿ ಮಠವಿದ್ದು ಇದರ ಶಾಖೆಗಳು ಬಸವನಾಳ (ಶಿಗ್ಗಾಂವಿ ತಾಲೂಕು), ಅಣ್ಣಿಗೇರಿ (ನವಲಗುಂದ) ನಾಯಕನೂರು (ನವಲಗುಂದ) ಹಾಗೂ ಕುಕ್ಕನೂರು (ಯಲಬುರ್ಗಿ ತಾಲೂಕು)ಗಳಲ್ಲಿ ಇವೆ. ಈ ಮಠದ ಗಡಿಯುದ್ದಕ್ಕೂ ಲಿಂಗ ಮುದ್ರೆಕಲ್ಲು ಮತ್ತು ನಂದಿಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ವೀರಭದ್ರ, ಭರಮಪ್ಪ, ಹನುಮಪ್ಪ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿವೆ. ಊರಲ್ಲಿ ಒಂದು ಮಸೀದಿ ಹಾಗೂ ಮೆಹಬೂಬ ಸುಬಾನಿಯ ದರ್ಗಾ ಕೂಡ ಇದೆ.

**ನೂಲ್ವಿ :** ಹುಬ್ಬಳ್ಳಿ ತಾಲೂಕಿನ ನೂಲ್ವಿ ಗ್ರಾಮವು (ಜನಸಂಖ್ಯೆ : 4,383-1981ರಲ್ಲಿ) ಹುಬ್ಬಳ್ಳಿಯಿಂದ ಆಗ್ನೇಯಕ್ಕೆ 10 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ನೂಲೆ' ಎಂದು ಉಲ್ಲೇಖಿತಗೊಂಡಿದ್ದು ಹಿಂದೆ ಹಲಸಿಗೆ-12000ಕ್ಕೆ ಸೇರಿದ್ದ ಸಬ್ಬಿ-30ರಲ್ಲಿ ಅಂತರ್ಗತವಾಗಿದ್ದಂತೆ ತೋರುತ್ತದೆ. ಈ ಊರಿಂದ ಈವರೆಗೆ ಒಟ್ಟು ಐದು ಶಾಸನಗಳು ವರದಿಯಾಗಿವೆ. ಊರಲ್ಲಿ ಇರುವ ಶಾಸನರಹಿತ ವೀರಗಲ್ಲು ಮೂರ್ತಿಶಿಲ್ಪಗಳಿಂದ ಈ ಊರಿನ ಇತಿಹಾಸವನ್ನು ಸುಮಾರು 10ನೇಯ ಶತಮಾನಕ್ಕೆ ಗುರುತಿಸಬಹುದಾಗಿದೆ. ಊರಲ್ಲಿರುವ ಶಾಸನಗಳಲ್ಲಿ ಕಲ್ಯಾಣದ ಚಾಲುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕ್ರಿ.ಶ. 1073ರ ಶಾಸನವೇ ಅತ್ಯಂತ ಹಳೆಯದಾಗಿದ್ದು, ನೂಲೆಯ 12 ಗಾವುಂಡರು ಆಚಾರ್ಯ ಸೋಮಕರ್ತಾರ ದೇವರಿಗೆ ದಾನ ಬಿಟ್ಟ ವಿಚಾರ ತಿಳಿಸಿದರೆ, ಕ್ರಿ.ಶ. 1186ರ ಶಾಸನ ಕಾಳೇಶ್ವರಾರ್ಯರಿಗೆ ಬಿಟ್ಟ ದಾನದ ಬಗ್ಗೆ ತಿಳಿಸುತ್ತದೆ. ಗೋವೆಯ ಕದಂಬ ಮುಮ್ಮಡಿ ಜಯಕೇಶಿ ದೇವನ 1200ರ ಶಾಸನ ಅರವತ್ತು ಒಕ್ಕಲಿಗರು ನೈವೇದ್ಯಕ್ಕೆಂದು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1294ರ ಇನ್ನೊಂದು ಶಾಸನವು ತ್ರುಟಿತವಾಗಿದ್ದು ಹಲಸಿಗೆ-12,000ದ ಉಲ್ಲೇಖದೊಂದಿಗೆ ದಾನ ಬಿಟ್ಟ ವಿಷಯವನ್ನು ಹೇಳುತ್ತದೆ. ಇಲ್ಲಿನ ಶಾಸನಗಳು ತ್ರುಟಿತವಾಗಿರುವುದರಿಮದ ದೇಗುಲಗಳ ಬಗ್ಗೆ ಸಿಗುವ ಮಾಹಿತಿ ಅತ್ಯಲ್ಪವಾಗಿದೆ.

ಊರ ನಡುವೆ ಇರುವ ಕಲ್ಮೇಶ್ವರವು ಗರ್ಭಗೃಹ ಹಾಗೂ ಅರ್ಧಮಂಟಪವನ್ನುಳ್ಳ ಸರಳ ರಚನೆಯಾಗಿದ್ದು ಗರ್ಭಗೃಹದಲ್ಲಿ ಲಿಂಗವಿದ್ದು ಮುಂದೆ ನಂದಿಯಿದೆ. ಈ ಗುಡಿಯ ಮುಂದೆ 4.5 ಅಡಿ ಎತ್ತರದ ಆಸೀನ ಭೈರವಿಯ ಶಿಲ್ಪವಿದೆ. ಊರಲ್ಲಿರುವ ಉಡಚವ್ವನ ಗುಡಿಯಲ್ಲಿ ಸುಮಾರು ಕ್ರಿ.ಶ. 10ನೇ ಶತಮಾನದ ಎರಡು ಅಡಿ ಎತ್ತರದ ಮಹಿಷಮರ್ದಿನಿಯ ಶಿಲ್ಪವಿದೆ. ವೀರಣ್ಣನ ಗುಡಿ ಸಮೀಪ ಮನೆಯೊಂದರ ಕಟ್ಟೆಯ ಮೇಲೆ ತೀರ್ಥಂಕರ ಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು ಪೀಠದ ಮೇಲೆ ಕ್ರಿ.ಶ. 1035ರ ಅಪ್ರಕಟಿತ ಶಾಸನವಿದ್ದು ಕಾರೆಯಗಣದ ಜಿನ ಗುಡ್ಡನೊಬ್ಬ ಮೂರ್ತಿ ಪ್ರತಿಷ್ಠಾಪನೆ ಮಾಡಿದ ವಿಷಯವನ್ನು ಅದು ತಿಳಿಸುತ್ತದೆ.

ಎತ್ತರವಾದ ಸ್ಥಳದಲ್ಲಿರುವ ವೀರಣ್ಣನ ಗುಡಿ ಗರ್ಭಗೃಹ, ಪ್ರದಕ್ಷಿಣಾಪಥ ಹಾಗೂ ಸಭಾಮಂಟಪವನ್ನು ಹೊಂದಿದ್ದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿರುವ ವೀರಭದ್ರ ತೀರ್ಥಂಕರ ಪೀಠದ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿದ್ದು ಹಿಂದೆ ಇದು ಜೈನ ಬಸದಿಯಾಗಿತ್ತೆಂಬ ಅಂಶವನ್ನು ಸೂಚಿಸುತ್ತದೆ. ವೀರಣ್ಣನ ಗುಡಿ ಬಳಿಯಿರುವ ಸೂರ್ಯಶಿಲ್ಪದ ಕೈಗಳು ಭಗ್ನವಾಗಿದ್ದು ಪ್ರಭಾವಳಿಯಲ್ಲಿ ಅಷ್ಟಗ್ರಹಗಳನ್ನು ಕೆತ್ತಿದ್ದು ಇದೊಂದು ಸುಂದರ ಶಿಲ್ಪವಾಗಿದೆ. ಊರ ಹೊರಗೆ ಹಿರೇಮಠದ ಹಕ್ಕಲಲ್ಲಿ ಶಿವಲಿಂಗ, ನಂದಿಗಳಿವೆ. ಕನ್ನಡ ಶಾಲೆಯ ಮುಂದೆ ಮೂರು ವೀರಗಲ್ಲುಗಳಿದ್ದು, ಒಂದು ರಾಷ್ಟ್ರಕೂಟರ ಕಾಲದ್ದಾಗಿದೆ. ಇವುಗಳೊಂದಿಗೆ ಊರಲ್ಲಿ ಕಂಟಿ ಬಸವಣ್ಣ, ಹನುಮಂತ, ದುರ್ಗವ್ವ, ಹಾಗೂ ದ್ಯಾಮವ್ವನ ಗುಡಿಗಳಿವೆ. ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇವೆ.

**ಬಂಕಾಪುರ** : ಶಿಗ್ಗಾಂವಿ ತಾಲೂಕಿನ ಬಂಕಾಪುರವು (ಜನಸಂಖ್ಯೆ) ಹುಬ್ಬಳ್ಳಿಯಿಂದ 32 ಕಿ.ಮೀ. ದೂರವಿದೆ. ಬಂಕಾಪುರವು 1951ರವರೆಗೂ ತಾಲೂಕು ಕೇಂದ್ರವಾಗಿದ್ದು ನಂತರ ಕೇಂದ್ರವನ್ನು ಶಿಗ್ಗಾಂವಿಗೆ ವರ್ಗಾಯಿಸಲಾಯಿತು. ಬೆಂಗಳೂರು - ಮೀರಜ್ ರೈಲು ಮಾರ್ಗದಲ್ಲಿರುವ ಯಲವಿಗಿ (ನಿಲ್ದಾಣದಿಂದ 16 ಕಿ.ಮೀ.) ಯಿಂದಲೂ ಬಂಕಾಪುರವನ್ನು ತಲಪಬಹುದಾಗಿದೆ. ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಗಣ್ಯ ಸೇನಾನಿ ಮಾಂಡಲಿಕನಾದ ಬಂಕೆಯರಸನ ಹೆಸರಿನ ಮೇಲೆ ಈ ಊರಿಗೆ ಬಂಕೆಯಪುರ ಅಥವಾ ಬಂಕಾಪುರವೆಂದು ಹೆಸರು ಬಂದಿತೆಂದು ಗುಣಭದ್ರಾಚಾರ್ಯನ ಉತ್ತರ ಪುರಾಣದಿಂದ ತಿಳಿದುಬರುತ್ತದೆ. ಊರಿನಲ್ಲಿ ಪಾಳುಬಿದ್ದ ಕೋಟೆ ಇದೆ. ಊರ ಕೋಟೆಯಲ್ಲಿ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ನಗರೇಶ್ವರ (ಅರವತ್ತು ಕಂಬದ ದೇವಾಲಯ)ವಿದೆ. ಈ ಕೋಟೆಯು ವಿಶಾಲವಾಗಿದ್ದು 139 ಎಕರೆ ಜಮೀನನ್ನು ಆವರಿಸಿಕೊಂಡಿದೆ. ಇದರಲ್ಲಿ ಮದ್ದುಗುಂಡುಗಳಿಗಾಗಿ ದೊಡ್ಡ ಖಾನೆ ಇದೆ. ಪಶ್ಚಿಮ ಕರಾವಳಿ ಪ್ರಾಂತ್ರಗಳಿಗೆ ಹೋಗುವ ಆಯಾಕಟ್ಟಿನ ಪ್ರದೇಶದಲ್ಲಿರುವ ಬಂಕಾಪುರವು ಐತಿಹಾಸಿಕ ಸ್ಥಳವಾಗಿದೆ. ಹಲವಾರು ಶಿಲಾಶಾಸನಗಳಲ್ಲಿ ಈ ಊರನ್ನು ಬಂಕಾಪುರವೆಂದೇ ಉಲ್ಲೇಖಿಸಲಾಗಿದೆ. ಹನ್ನೊಂದನೇ ಶತಮಾನದಲ್ಲಿ ಈ ಊರು ಚಾಳುಕ್ಯರ ಸಾಮಂತ ಕದಂಬ ಅರಿಕೇಸರಿಯ ಆಡಳಿತಕ್ಕೆ ಒಳಪಟ್ಟಿತ್ತೆಂದು ಶಾಸನಾಧಾರದಿಂದ ತಿಳಿದುಬರುತ್ತದೆ. ಕ್ರಿ.ಶ. 1140ರಲ್ಲಿ ಹೊಯ್ಸಳ ವಿಷ್ಣುವರ್ಧನನು ಬಂಕಾಪುರವನ್ನು ಸ್ವಾಧೀನಪಡಿಸಿಕೊಂಡು ಅದನ್ನು ತನ್ನ ಸಾಮ್ರಾಜ್ಯದ ಉತ್ತರದ ರಾಜಧಾನಿಯನ್ನಾಗಿ ಮಾಡಿಕೊಂಡನು. ಮುಂದೆ ಆತನು ಅಲ್ಲಿಯೇ ಮಡಿದನು. ಆನಂತರ ವಿಜಯನಗರದ ಅರಸರಿಗೂ ಹಾಗೂ ಬಹಮನೀ ಸುಲ್ತಾನರಿಗೂ ಬಂಕಾಪುರದ ಮೇಲಿನ ಒಡೆತನಕ್ಕಾಗಿ ಯುದ್ಧಗಳು ನಡೆಯುತ್ತಲೇ ಇದ್ದು ಕ್ರಿ.ಶ. 1567ರಲ್ಲಿ ಆಲಿ ಆದಿಲ್ ಷಾ ಸ್ವತಃ ಇದನ್ನು ಗೆದ್ದುಕೊಂಡು ಇಲ್ಲಿ ಭಾರೀ ಮಸೀದಿ ಕಟ್ಟಿಸಿದನೆಂದು ಜುಬೇರಿ ಹೇಳಿದ್ದಾನೆ. ಮುಂದೆ ಬಿಜಾಪುರದ ದಳಪತಿ ಮುಸ್ತಫಾಖಾನ್ ಈ ಸ್ಥಳದಲ್ಲಿ ನೆಲೆಸಿದನು. ಬಿಜಾಪುರದ ಸುಲ್ತಾನನು ಕ್ರಿ.ಶ. 1637ರಲ್ಲಿ ಪಠಾಣ ರಾವುಫಖಾನನ್ನು ಬಂಕಾಪುರದ ಪ್ರಾಂತ್ಯಾಧೀಶನನ್ನಾಗಿ ನೇಮಿಸಿದನು. ಅವನು ಮುಂದೆ ಮುಘಲರಿಗೆ ಶರಣಾದನು. (ನಂತರ ಸವಣೂರಿಗೆ ಕೇಂದ್ರವನ್ನು ಬದಲಾಯಿಸಿದನು). ಆನಂತರ ಈ ಪ್ರದೇಶವು ಮರಾಠರ ವಶವಾಗಿ 1802ರಲ್ಲಿ ಬೆಸ್ಸೀನ್ ಒಪ್ಪಂದದ ಪ್ರಕಾರ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಬಂಕಾಪುರವು ಪೂರ್ವ ಕಾಲದಲ್ಲಿ ಒಂದು ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಜೈನ ಮತಕ್ಕೆ ಬಂಕೆಯನಿಂದ ಹೆಚ್ಚಿನ ಮನ್ನಣೆ ದೊರೆತಿದ್ದು ಇದೊಂದು ಜೈನವಿದ್ಯಾಪೀಠವಾಗಿತ್ತೆಂದು ಪ್ರತೀತಿಯಿದೆ. ಇಲ್ಲಿ ಹಲವು ಶಿವಾಲಯಗಳಿದ್ದು ಅವು ಪಾಶುಪಥ ಪಂಥದವರ ಅಧೀನದಲ್ಲಿದ್ದುವು.

ಕೋಟೆಯೊಳಗೆ ಪಶ್ಚಿಮ ಭಾಗದಲ್ಲಿರುವ ನಗರೇಶ್ವರ ದೇವಾಲಯ ವಿಶಾಲವಾದ ನಿವೇಶನದಲ್ಲಿ ನಿರ್ಮಿಸಲಾಗಿರುವ ಚಾಳುಕ್ಯರ ಶೈಲಿಯ ಭವ್ಯ ಸುಂದರ ವಾಸ್ತು ಶಿಲ್ಪವಾಗಿದೆ. ಇದರಲ್ಲಿ ಎತ್ತರವಾದ ಬೃಹದಾಕಾರವಾದ ಕಂಬಗಳಿರುವುದರಿಂದ ಇದನ್ನು ಅರವತ್ತು ಕಂಬಗಳ ದೇವಾಲಯವೆಂದು ಕರೆಯುತ್ತಾರೆ. ಇದರಲ್ಲಿ ಗರ್ಭಗೃಹ, ಅರ್ಧಮಂಪಟ, ನವರಂಗ ಹಾಗೂ ಮುಖಮಂಟಪಗಳಿವೆ. ಮುಖಮಂಟಪದ ಮುಂದೆ ಇನ್ನೊಂದು ವಿಶಾಲ ಮಂಟಪವಿದ್ದು ಅದರ ಎಡಬಲಗಳಲ್ಲಿ ಪ್ರವೇಶ ದ್ವಾರದ ಮೇಲೆ ಕಿರು

ಮಂಟಪಗಳಿವೆ. ಚಾಳುಕ್ಯರ ಶೈಲಿಯಂತೆ ಬಹುಕೋನಾಕಾರವಾದ ಗರ್ಭಗೃಹದ ದ್ವಾರದಲ್ಲಿ ಅಲಂಕಾರಯುತವಾದ ಕೆತ್ತನೆ ಇದೆ. ಅರ್ಧಮಂಟಪದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಇದರ ಮುಂಭಾಗದಲ್ಲಿ ನವರಂಗದಲ್ಲಿರುವ ಸಪ್ತಮಾತೃಕಾ ಪಟ್ಟಿಕೆಗೆ ಮಕರತೋರಣವಿರುವುದು ವಿಶೇಷವಾಗಿದೆ. ನವರಂಗದ ಛಾವಣಿಯು ಅಲಂಕೃತವಾದ ಭುವನೇಶ್ವರಿಯನ್ನು ಹೊಂದಿದೆ. ಮಧ್ಯದಲ್ಲಿರುವ ವೃತ್ತಾಕಾರದ ನಾಲ್ಕುಕಂಬಗಳು ಹಾಗೂ ವೃತ್ತಾಕಾರವಾದ ನಾಟ್ಯಮಂಟಪ ಆಕರ್ಷಕವಾಗಿ ನಿರ್ಮಿತವಾಗಿವೆ. ನವರಂಗದಿಂದ ಮುಖಮಂಟಪಕ್ಕೆ ಕಕ್ಷಾಸನವಿರುವ ಸಂಪರ್ಕ ಮಂಟಪವಿದೆ. ಇದರ ದ್ವಾರಬಂಧವು ಸುಂದರ ಹಾಗೂ ಸೂಕ್ಷ್ಮವಾದ ಅಲಂಕಾರವನ್ನು ಹೊಂದಿದೆ. ವಿಶಾಲವಾದ ಎದುರಿನ ಮುಖಮಂಟಪವು 60ಕ್ಕೂ ಮೇಲ್ಪಟ್ಟು ಬೃಹದಾಕಾರವಾದ ಕಂಬಗಳಿಂದ ಅಲಂಕೃತವಾಗಿದೆ. ಈ ದೇವಾಲಯದ ಹೊರಭಿತ್ತಿ, ಕಕ್ಷಾಸನ ಹಾಗೂ ಒಳಗಡೆ ಇರುವ ಒಂದೊಂದು ಮೂರ್ತಿಯನ್ನೂ ಬಿಡದೆ ಧ್ವಂಸಮಾಡಲಾಗಿದೆ. ದೇವಾಲಯದ ಗರ್ಭಗೃಹದ ಬಲಗಡೆ ಮಾತ್ರ ಬಲಿಯ ಕತೆಗೆ ಸಂಬಂಧಿಸಿದ ಶಿಲ್ಪಗಳು ಇವೆ. ನವರಂಗದ ಕಕ್ಷಾಸನದಲ್ಲಿ ಕೆಲವು ಅಡಿ ಅಂತರದವರೆಗೆ ಮಾತ್ರ ಹೊರಗಡೆ ಸೂರ್ಯ, ಬ್ರಹ್ಮ ಕಾಮ, ವಿಷ್ಣು, ಭೈರವ, ಶಿವ, ಕಾರ್ತಿಕೇಯ, ಗಣಪತಿ, ಬೇತಾಳ ಮುಂತಾದ ಕಿರುಮೂರ್ತಿಗಳಿವೆ. ದೇವಾಲಯದ ಈ ಭಾಗದಲ್ಲಿ ಮಣ್ಣುಮುಚ್ಚಿತ್ತೆಂದೂ ಹೀಗಾಗಿ ಈ ಮೂರ್ತಿಗಳು ಉಳಿದುವೆಂದೂ ಸ್ಥಳೀಕರು ಹೇಳುತ್ತಾರೆ. ಸುತ್ತಲೂ ಇದ್ದ ನೂರಾರು ಮೂರ್ತಿಗಳೆಲ್ಲ ಭಗ್ನವಾಗಿದ್ದು ಈ ಕೆಲವು ಮಾತ್ರ ಉಳಿದಿವೆ. ಹೊರಗಡೆ ಮುಖಮಂಟಪದ ಸುತ್ತಲೂ ಛಾವಣಿಯಿಂದ ಎರಡೂ ಕಡೆ ಇಂಗ್ಲಿಷ್‌ನ ಎಸ್ ಅಕ್ಷರದಂತೆ ಬಾಗಿದ ಛಜ್ಜಾಗಳಿವೆ. ದೇವಾಲಯದ ಸಮೀಪವೇ ಇರುವ ದನದ ಕೊಟ್ಟಿಗೆಯ ಹತ್ತಿರ ಸುಮಾರು 8 X 8 ಹಾಗೂ ಒಂದು ಅಡಿ ಆಳವಿರುವ ಬೃಹದಾಕಾರವಾದ ಕಲ್ಲಿನ ಏಕಶಿಲಾ ತೊಟ್ಟಿ ಇದೆ. ಇದರ ಹೊರಭಾಗದಲ್ಲಿ ಹಲವು ವಿಧವಾದ ಮೀನುಗಳ ಉಬ್ಬು ಶಿಲ್ಪಗಳಿವೆ. ಕೋಟೆಯಲ್ಲಿರುವ ಗೋಸಂವರ್ಧನಾ ಕೇಂದ್ರದ ಬಳಿ ಒಂದು ಮುರಿದ ಕಂಬದ ತುಂಡಿನ ಬುಡದಲ್ಲಿ ಶಾಸನವಿದೆ. ಇದರ ಪ್ರಕಾರ ಕಲ್ಯಾಣದ ಚಾಳುಕ್ಯರ ದೊರೆ ಮೊದಲನೇ ಸೋಮೇಶ್ವರನ (1063) ಅಧೀನದಲ್ಲಿದ್ದ ಪಡೆವಳ ಬೀರಯ್ಯ, ಅಲ್ಲಮಯ್ಯ ಮತ್ತು ಶ್ರೀಧರಯ್ಯ ಪೆರ್ಗಡೆಗಳಿಂದ ಬಂಕಾಪುರದ ಇಂದ್ರೇಶ್ವರ ದೇವಾಲಯಕ್ಕೆ ಸುಂಕದಾನ ಮಾಡಿದ್ದುದರ ಬಗೆಗೆ ಉಲ್ಲೇಖವಿದೆ. ಇದರ ಬಳಿಯೇ ಇರುವ ಇನ್ನೊಂದು ಶಾಸನವೂ ಇದೇ ಕಾಲಕ್ಕೆ ಸೇರಿದ್ದು (1079) ಅರಸನಿಂದ ಬಂಕಾಪುರದ ನಗರೇಶ್ವರ ದೇವಾಲಯಕ್ಕೆ ಸ್ಥಳವೃತ್ತಿಯೆಂದು ಗಾವುಂಡವಳ್ಳಿ ಗ್ರಾಮದಾನದ ಬಗೆಗೆ ಉಲ್ಲೇಖಿಸುತ್ತದೆ. ಈ ಶಾಸನಗಳಿರುವ ಸಮೀಪವೇ ಬೇವಿನಮರದ ಕೆಳಗೆ ಎರಡು ಕಲ್ಲಿನ ಆನೆಗಳು, ಒಂದು ತಾಳವಾರ, ಒಂದು ಭಗ್ನ ವಿಷ್ಣು, ಸಪ್ತಮಾತೃಕೆಯರ ಜೋಡು ಶಿಲ್ಪದ ಭಾಗ ಮುಂತಾದ ಅವಶೇಷಗಳು ಬಿದ್ದಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಹಲವು ಸಣ್ಣಪುಟ್ಟ ಗುಡಿಗಳಾದ ಲಕ್ಷ್ಮಿ, ಪರಶುರಾಮ, ಹನುಮಂತ ಮತ್ತು ಭರಮದೇವರ ಗುಡಿಗಳಿವೆ. ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾಗಿರುವ ಲಕ್ಷ್ಮಿ ಗುಡಿಯಲ್ಲಿರುವ ಮೂಲವಿಗ್ರಹವು ಶಂಖ, ಚಕ್ರ, ವರದ ಹಾಗೂ ಅಭಯ ಹಸ್ತಗಳಿರುವ ಚತುರ್ಭುಜ ವಿಗ್ರಹವಾಗಿದೆ. ಗೋಸಂವರ್ಧನಾ ಕಛೇರಿಯ ಬಳಿ ಎತ್ತರವಾದ ಕೋಟೆಯ ಬುರುಜು ಇದೆ. ಇಲ್ಲಿಯೇ ಶಾಸನಗಳಲ್ಲಿ ಉಲ್ಲೇಖವಾಗಿರುವ ಇಂದ್ರೇಶ್ವರ ದೇವಾಲಯದ ಅವಶೇಷಗಳಿವೆ. ಇದನ್ನು ರಾಷ್ಟ್ರಕೂಟ ನಾಲ್ಕನೇಯ ಇಂದ್ರನು ಸುಮಾರು 973-74ರಲ್ಲಿ ಕಟ್ಟಿಸಿದನೆಂದಿದ್ದು ಅವನು ಮಳಖೇಡವನ್ನು ಕಳೆದುಕೊಂಡ ಮೇಲೆ ಬಂಕಾಪುರವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ಇದರ ಪಕ್ಕದಲ್ಲೇ ಎಲ್ಲಮ್ಮ ದೇವಾಲಯವಿದೆ. ಈ ಗುಡಿಯ ಬಳಿ ಒಂದು ದಿಕ್ಪಾಲರಿರುವ ಶಿಲೆಯಿದ್ದು, ಈಶಾನ್ಯ, ನಿರುತಿಯರ ಕೆತ್ತನೆಗಳಿವೆ; ಯಮ ಹಾಗೂ ಸಪ್ತಮಾತೃಕೆಯರ ಜೋಡು ಶಿಲ್ಪದ ಭಾಗವಿದೆ. ಇಲ್ಲೆ ಒಂದು ನಿಷಿಧಿಕಲ್ಲಿದೆ. ಯಲ್ಲಮ್ಮನ ಗುಡಿಯ ಬಾಗಿಲುವಾಡವು ರಾಷ್ಟ್ರಕೂಟ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಮತ್ತು ಮೂಲ ವಿಗ್ರಹವು ಕುಳಿತ ಭಂಗಿಯಲ್ಲಿರುವ ಕಾಳಿಯ ವಿಗ್ರಹವಾಗಿದೆ. ಕೋಟೆಯ ಮುಖ್ಯದ್ವಾರದ ಬಳಿ ಬಲಗಡೆ ಒಂದು ಸುಂದರ ಮಸೀದಿ ಇದೆ. ಇದು ಮುಂಭಾಗದಲ್ಲಿ ಪೂರ್ತಿ ತೆರೆದಿದ್ದು ಎರಡು ಅಂಕಣಗಳ ಭವನವನ್ನು ಹೊಂದಿದೆ. ಇದರ ಹಿಂಭಾಗದ ಮಿಹ್ರಾಬಿ ಅಲಂಕೃತವಾಗಿದ್ದು ಅದರ ಮೇಲ್ಗಡೆ ಒಂದು ಪರ್ಶಿಯನ್ ಶಾಸನವಿದೆ. ಮಸೀದಿಯ ಎದುರಿಗೆ ಅನತಿದೂರದಲ್ಲಿ ಒಂದು ಕನ್ನಡ ಶಾಸನವಿದ್ದು ವಿಜಯನಗರದ ಈ ಬರಹದ ಚಪ್ಪಡಿಯ ಮೇಲೆ ಕನ್ನಡಿ, ಕತ್ತರಿ, ಬಾಳುಗಳ ಚಿತ್ರವಿದ್ದು ಇದು ಸದಾಶಿವರಾಯನು ಕೆಲಸಿಗರಿಗೆ ಕೊಟ್ಟ ದಾನಶಾಸನವಾಗಿದೆ. ವಿಜಯನಗರದ ಸಂಗಮ ಅರಸರ ಕೈತಪ್ಪಿದ ಬಂಕಾಪುರ ತುಳುವರ ಕಾಲದಲ್ಲಿ ಮತ್ತೆ ಅವರ ಕೈಗೆ ಬಂತೆನ್ನಲು ಈ ಶಾಸನ ಸಾಕ್ಷಿಯಾಗಿದೆ. ಕೋಟೆಯಲ್ಲಿ ಮಸೀದಿಗೂ ಮೊದಲು ಭರಮಪ್ಪನ ಗುಡಿ ಇದ್ದು ಅದರ ಬಳಿ ಒಂದು ಭಾರೀ ಬಂಡೆ ಇದೆ. ಅದರ ಹತ್ತಿರವೇ ಶಿರವಿಲ್ಲದ ಮಹಿಷಮರ್ದಿನಿಯ ಮೂರ್ತಿ ಇದೆ. ಕೋಟೆಯ ಹೊರಗೆ ಹಳೇ ಕಾಲದ ಕಾವಲು ಚೌಕಿಯ ಕಟ್ಟಡವಿದ್ದು ಕೋಟೆಯ ಸುತ್ತಲೂ ಕಂದಕವಿದೆ.

ಕೋಟೆಯೊಳಗಿನ ಸರಕಾರಿ ಗೋರಕ್ಷಣಾ ಕೇಂದ್ರ ಕಿಲಾರಿ ಹಸುಗಳ ವರ್ಧನೆ ಮಾಡುತ್ತಿದ್ದು ಇಲ್ಲಿ ಮೊಲದ ತಳಿಗಳ ವರ್ಧನೆಯ ಕೇಂದ್ರವೂ ಇದೆ. ದೇಶವಿದೇಶಗಳ ಆಕರ್ಷಕ ಮೊಲಗಳನ್ನು ಇಲ್ಲಿ ಸಾಕಿದ್ದಾರೆ. ಈ ಕೇಂದ್ರದಿಂದಾಗಿ ಕೋಟೆಯೊಳಗೆ ಶುಚಿಯಾದ ಶಿಸ್ತಿನ ವ್ಯವಸ್ಥೆ ಆಗಿದೆ.

ಬಂಕಾಪುರದ ಸುಂಕದ ಕೇರಿಯಲ್ಲಿರುವ ಸಿದ್ದೇಶ್ವರ ದೇವಾಲಯವು ಚಾಳುಕ್ಯ ಶೈಲಿಯಲ್ಲಿ ನಿರ್ಮಿತವಾಗಿರುವ ಕಟ್ಟಡವಾಗಿದೆ. ಇದರಲ್ಲಿ ಗರ್ಭಗೃಹ ಅರ್ಧಮಂಟಪ ಹಾಗೂ ವಿಶಾಲವಾದ ನವರಂಗಗಳಿವೆ. ಗರ್ಭಗೃಹದ ದ್ವಾರದಲ್ಲಿ ಪಂಚಶಾಖೆ ಅಲಂಕಾರವಿದ್ದು, ಅರ್ಧಮಂಟಪದ ಬಾಗಿಲ ಎರಡೂ ಪಕ್ಕದಲ್ಲಿ ಜಾಲಾಂದ್ರಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶಿಖರವಿದೆ. ಅರ್ಧಮಂಟಪದ ಲಲಾಟದ ಮೇಲೆ ಬ್ರಹ್ಮ ಶಿವ, ವಿಷ್ಣು ಹಾಗೂ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ನವರಂಗದಲ್ಲಿ ಸಪ್ತಮಾತೃಕೆಯರ ಜೋಡು ಶಿಲ್ಪದಲ್ಲಿ ಮೇಲ್ಭಾಗದಲ್ಲಿ ತೋರಣಗಳಿವೆ. ಇಲ್ಲಿ ಇರಿಸಲಾಗಿರುವ ಇತರೆ ಶಿಲ್ಪಗಳೆಂದರೆ ಗಣೇಶ, ವೃಷಭಾರೂಢ ಶಿವ ಹಾಗೂ ಭಗ್ನವಾದ ಮಹಿಷಮರ್ಧಿನಿಗಳು; ದೇವಾಲಯದ ಮುಂದೆ ಪತ್ರಿವನವಿದೆ.

1975ರಲ್ಲಿ ಖಾಸಗಿ ಮನೆಯ ಪಾಯ ಹಾಕುವಾಗ ಸುಮಾರು ನಾಲ್ಕಡಿ ಎತ್ತರದ ಪಾರ್ಶ್ವನಾಥ ಹಾಗೂ ಚವ್ವೀಸ ತೀರ್ಥಂಕರನ ಶಿಲ್ಪಗಳು ದೊರೆತಿವೆ. ಇವುಗಳ ಕಾಲವನ್ನು ಡಾ॥ ಸುಂದರರವರು ಕ್ರಿ.ಶ. 11-12ನೇ ಶತಮಾನಕ್ಕೆ ಗುರುತಿಸುತ್ತಾರೆ. ಈ ಮೂರ್ತಿಗಳ ಪಾದಪೀಠದ ಮೇಲಿರುವ ಶಾಸನದಿಂದ ಇಲ್ಲಿ ನಿಟ್ಟಸಿಂಗಿ ಬಸದಿ ಇತ್ತೆಂಬ ಅಂಶ ಗೊತ್ತಾಗುತ್ತದೆ. ಆ ಶಾಸನ ಜಂಜೆಯ ಬಾಮಯನ ಮಗ ಲಖಿಯನು ನಿಟ್ಟಸಿಂಗಿಯ ಬಸದಿಗೆ ಮಾಡಿದ ಚವ್ವೀಸ ತೀರ್ಥಂಕರದೇವರು ಎಂದು ಹೇಳುವುದರೊಂದಿಗೆ ಬಂಕಾಪುರವು ಪ್ರಾಚೀನ ಕಾಲದಲ್ಲಿ ಜೈನಕೇಂದ್ರವೂ ಆಗಿತ್ತೆಂಬ ಅಂಶವನ್ನು ಪುಷ್ಟೀಕರಿಸುತ್ತದೆ. ಈ ಶಿಲ್ಪದಲ್ಲಿನಡುವೆ ವೃಷಭನಾಥನಿದ್ದು ಸುತ್ತಲೂ ಉಳಿದ 23 ತೀರ್ಥಂಕರರ ಕಿರು ಕೆತ್ತನೆ ಇದೆ. ಬಸದಿ ಹಾಳಾಗಿದ್ದರೂ ಈ ಶಿಲ್ಪಗಳು ಉಳಿದು ಬಂದಿವೆ.

ಬಂಕಾಪುರದಲ್ಲಿರುವ ಇತರೆ ದೇವಾಲಯಗಳೆಂದರೆ ಮೈಲಾರದೇವರು, ಯಲ್ಲಮ್ಮ ವಿಠಲ, ವೀರಭದ್ರ, ಬಸವಣ್ಣ, ಹನುಮಂತ, ಬಂಡಿಗಣೇಶ, ದ್ಯಾಮವ್ವ, ದುರ್ಗವ್ವ, ಚಾಮುಂಡೇಶ್ವರಿ (ಕೋಟೆ ಹತ್ತಿರ ಸಿಕ್ಕ ಮೂರ್ತಿ), ಬ್ರಾಹ್ಮಣರ ಬೀದಿಯಲ್ಲಿ ವಿರೂಪಾಕ್ಷ ನಗರೇಶ್ವರ (ಇತ್ತೀಚಿನದು), ಮಾತಂಗಿಯವ್ವ, ಮಾಯವ್ವ ಮುಂತಾದುವುಗಳು. ಪ್ರತಿಯೊಂದು ಬೀದಿಯಲ್ಲೂ ಹನುಮಂತನ ಗುಡಿ ಕಂಡುಬರುತ್ತದೆ. ದುರ್ಗಮ್ಮನ ಜಾತ್ರೆ ದೊಡ್ಡ ಪ್ರಮಾಣದಲ್ಲಿ ಐದು ದಿನಗಳ ಕಾಲ ಬನದ ಹುಣ್ಣಿಮೆಯ ವೇಳೆಗೆ ನಡೆಯುತ್ತದೆ. ಯಲ್ಲಮ್ಮನ ಜಾತ್ರೆಯು ಈ ಊರಿನಲ್ಲಿ ಜನಪ್ರಿಯವಾಗಿ ಜರುಗುತ್ತದೆ. ಊರಿನಲ್ಲಿರುವ ಇತ್ತೀಚೆಗೆ ನಿರ್ಮಿತವಾಗಿರುವ ನಗರೇಶ್ವರ ದೇವಾಲಯದಲ್ಲಿ ಚಾಳುಕ್ಯ ಶೈಲಿಯ ಮಹಿಷಮರ್ದಿನಿ ಹೂಗೂ ಗಣಪತಿಯ ಶಿಲ್ಪಗಳಿವೆ. ಇದರ ಸಮೀಪವೇ ಇರುವ ವಿರೂಪಾಕ್ಷ ದೇವಾಲಯದ ಹೊರಗೆ ಬಸವ ಇರುವ ಉಮಾ ಮಹೇಶ್ವರ ಪೀಠವಿದೆ. ದೇವಾಲಯದ ಹೊರಗೋಡೆಯಲ್ಲಿ ಗಣಪತಿಯ ಭಗ್ನ ಉಬ್ಬು ಶಿಲ್ಪವಿದೆ. ಈ ದೇವಾಲಯದ ಮುಖ್ಯದ್ವಾರದ ದ್ವಾರಬಂಧವು ಚಾಳುಕ್ಯ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ, ಹಾಗೂ ಗರ್ಭಗೃಹದ ಲಲಾಟದಲ್ಲಿ ಸರಸ್ವತಿಯ ಶಿಲ್ಪವಿದ್ದು ಒಳಗಡೆ ಶಿವಲಿಂಗವಿರುವುದು ಕುತೂಹಲಕಾರಿಯಾಗಿದೆ. ಮೂಲಕಟ್ಟಡದ ಪಕ್ಕದಲ್ಲಿ ಪಾರ್ವತಿಯ ಚಿಕ್ಕಗುಡಿ ಇದೆ. ಈ ದೇವಾಲಯದ ಮೂಲ ವಿಗ್ರಹವು ವಿಜಯನಗರದ ಶೈಲಿಯ ದ್ವಿಬಾಹು ಮೂರ್ತಿಯಾಗಿದ್ದು ಪದ್ಮ ಹಾಗೂ ಅಭಯ ಹಸ್ತಗಳನ್ನು ಹೊಂದಿದೆ. ಗರ್ಭಗೃಹದ ಲಲಾಟದಲ್ಲಿ ಗಣೇಶನ ಶಿಲ್ಪವಿದೆ. ಮುಂಭಾಗದಲ್ಲಿ ವಿಶಾಲವಾದ ತೆರೆದ ಮಂಟಪವಿದೆ. ಬಂಕಾಪುರದಲ್ಲಿ ಕೆಂಡದ ಮಠ ಹಾಗೂ ಅರಳೇಹಳ್ಳಿ ಹಿರೇಮಠವೆಂಬ ವೀರಶೈವಮಠಗಳಿವೆ. ಹಾಗೂ ಒಳಗೆ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಇದೆ.

ಈ ಊರಲ್ಲಿರುವ ಪಂಚಮಲಕಪ್ಪನ ಬಾವಿ ಎಂಬ ರಚನೆ ದೊಡ್ಡ ಈಜುಕೊಳವನ್ನು ಹೊಂದಿದ ಒಂದು ಅತ್ಯಂತ ಆಕರ್ಷಕ ರಚನೆ. ಇದರ ವಿನ್ಯಾಸ ವಿಶಿಷ್ಟವಾಗಿದ್ದು ಇಲ್ಲಿ, ನಾಗಬಂಧದ ಅಲಂಕರಣವಿರುವ ಭಾವಣಿ, ಗಣಪತಿ ಹಾಗೂ ಲಿಂಗವಿರುವ ಗುಡಿ ಮುಂತಾದವು ಇದೆ. ಇದೂ ಒಂದು ಪ್ರೇಕ್ಷಣೀಯ ಪ್ರವಾಸೀ ಆಕರ್ಷಣೆ; ಇದರಲ್ಲಿ ಶುಚಿತ್ವವಿಲ್ಲ.

ಊರಲ್ಲಿ ಹಲವು ಮಸೀದಿಗಳಿದ್ದು ಕೋಟೆಯೊಳಗಿನದೇ ಪ್ರಾಚೀನ. ಇದಲ್ಲದೆ ಅಲಿ ಆದಿಲ್ ಷಾ ಕಟ್ಟಿಸಿದ ಜುಮ್ಮಾಮಸೀದಿ, ಹಾಗೂ ಸರ್ಜಾಮಸೀದಿ, ಕಾಲಿಮಸೀದಿ (ಅಲಿ ಆದಿಲ್ ಷಾ ಕಾಲದಲ್ಲಿ), ಗುಡ್ಡದ ಮೇಲಿನ ಜಬ್ಬಲ್ ಮಸೀದಿ, ಹಾಗೂ ಇನ್ನಿತರ 10 ಹಿರಿಕಿರಿಯ ಮಸೀದಿಗಳಿವೆ. ಊರಲ್ಲಿ 20ಕ್ಕೂ ಮೇಲ್ಪಟ್ಟು ದರ್ಗಾಗಳಿವೆ. ಅವುಗಳಲ್ಲಿ ಅಲಾದಿನ್ ಷಾ ಖಾದ್ರಿ (ಷಾಬಾನ್

ತಿಂಗಳಲ್ಲಿ ಉರುಸು). ನೂರುಲ್ಲಾ ಷಾ ಖಾದ್ರಿ ಷಾಬಾನ್, ತೊಕರ್ ಷಾವಲಿ, ಮೆಹಬೂಬ್ ಷಾವಲಿ (ಗಾರವಿ), ಜಲಾಲ್ ಬುಖಾರಿ ಹಾಗೂ ಪೈಗಂಬರ್ ಆಸಾರ್ ಷರೀಫ್ (ರಬಿತ ಅವತ್)ರ ದರ್ಗಾಗಳು ಮುಖ್ಯವಾದುವುಗಳು.

**ಬನ್ನಿಕೊಪ್ಪ :** ಶಿಗ್ಗಾಂವಿ ತಾಲೂಕಿನಲ್ಲಿರುವ ಬನ್ನಿಕೊಪ್ಪ (ಜನಸಂಖ್ಯೆ 587) ಅಥವಾ ಶಾಸನೋಕ್ತ 'ಬನ್ನಿಯೂರು' ಶಿಗ್ಗಾಂವಿಯಿಂದ ಆರು ಕಿ.ಮೀ. ದೂರದಲ್ಲಿರುವ ಪುರಾತನ ಸ್ಥಳವಾಗಿದೆ. ಊರ ಹೊರಗೆ ರಾಷ್ಟ್ರಕೂಟ ಕಂಬಗಳಿರುವ ಸಣ್ಣ ಗುಡಿಯಿದೆ. ಭಿನ್ನವಾದ ಸೂರ್ಯನ ವಿಗ್ರಹವನ್ನು ತಿದ್ದಿ ಒಂದು ಅಭಯ ಹಸ್ತ ಹಾಗೂ ಇನ್ನೊಂದು ಫಲಧಾರಿ ಹಸ್ತಗಳನ್ನು ಅನಂತರ ಇಟ್ಟಿರುವುದು ವ್ಯಕ್ತವಾಗುತ್ತದೆ. ಸೂರ್ಯಪೀಠದ ಮೇಲೆ ಉಷಾ ಪ್ರತ್ಯುಷೆಯರ್ ಸುಮಾರು 1.5 ಅಡಿ ಎತ್ತರದ ಸಣ್ಣ ದೇಹದ ಉಬ್ಬು ಶಿಲ್ಪಗಳಿವೆ. ಇದರ ಸಮೀಪವೇ ಶಿವಾಲಯದ ಎದುರಿಗೆ ಗರ್ಭಗೃಹ ಹಾಗೂ ರಾಷ್ಟ್ರಕೂಟ ಶೈಲಿಯ ನಾಲ್ಕು ಕಂಬಗಳಿರುವ ಮಂಟಪವಿದೆ. ಇದರ ಎಡಭಾಗದಲ್ಲಿ ಪುನರ್ರಚಿತವಾದ ಬಸವಣ್ಣನ ಸಣ್ಣ ಗುಡಿ ಹಾಗೂ ಎದುರಿಗೆ ಒಂದು ವೀರಗಲ್ಲು, ಒಂದು ಬಾದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟರ ಶಾಸನಗಳಿವೆ (ಅಪ್ರಕಟಿವಾದವು). ಈ ಗುಡಿಯ ಸಮೀಪವೇ ಧರ್ಮೇಶ್ವರ ದೇವಾಲಯ (ಅಥವಾ ಶಾಸನೋಕ್ತ ಭೀಮೇಶ್ವರ) ವಿದ್ದು ಗರ್ಭಗೃಹ, ಆಯತಾಕಾರವಾದ ಅರ್ಧಮಂಟಪ ಹಾಗೂ ಮುಂಭಾಗದಲ್ಲಿ ಒಂದು ವಿಶಾಲವಾದ ಪಡಸಲೆ ಇದ್ದು ಎರಡು ಕೊಠಡಿಗಳನ್ನು ಹೊಂದಿದೆ. ಇದರ ಹಿಂಭಾಗದಲ್ಲಿ ಸಾಂಧಾರ ಪ್ರದಕ್ಷಿಣಾಪಥದಲ್ಲಿ ಇನ್ನೊಂದು ಪಾಣಿಪೀಠದ ಮೇಲೆ ಲಿಂಗವಿದ್ದು ಇದು ಬಹುಶಃ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಭೀಮೇಶ್ವರ ಲಿಂಗವಿರಬಹುದು. ಇಲ್ಲೇ ಚಾಳುಕ್ಯ ಶೈಲಿಯ ದುರ್ಗಿಯ ಶಿಲಾಕೃತಿ ಇದೆ. ಮುಂಭಾಗದಲ್ಲಿರುವ ಆಯತಾಕಾರವಾದ ಮಂಟಪದಲ್ಲಿ ಗರ್ಭಗೃಹದ ಬಾಗಿಲುವಾಡದ ಪಕ್ಕದಲ್ಲಿ ಬಿಲ್ಲು ಹಿಡಿದು ನಿಂತ ಐದು ಅಡಿ ಎತ್ತರದ ಅರ್ಜುನ ಮತ್ತು ಪದ್ಮಾಸನ ಹಾಕಿ ನವಿಲಿನ ಮೇಲೆ ಕುಳಿತ ಏಕಮುಖದ ಕಾರ್ತಿಕೇಯನ ಶಿಲ್ಪಗಳು ಪ್ರಾಚೀನ ಲಕ್ಷಣವನ್ನು ಹೋಲುತ್ತವೆ. ಇದರ ಮುಂಭಾಗದಲ್ಲಿ ಮಂಟಪದಲ್ಲಿರುವ ಎರಡು ಕೊಠಡಿಗಳಲ್ಲಿ ಎಡಭಾಗದ ಕೊಠಡಿಯಲ್ಲಿ ವೇಣುಗೋಪಾಲ ಮತ್ತು ಸಹದೇವೇಶ್ವರ ಹಾಗೂ ಬಲಭಾಗದಲ್ಲಿ ನಕುಲೇಶ್ವರ ಲಿಂಗಗಳಿವೆ. ಇಲ್ಲೇ ಸೂರ್ಯನ ಶಿಲ್ಪವಿದೆ. ಧರ್ಮೇಶ್ವರದ ಉತ್ತರದ ಗೋಪುರದ ಹಿಂಭಾಗದಲ್ಲಿ ಹಳ್ಳವಿದ್ದು ಅದರ ಆಚೆಗೆ ಭೀಮೇಶ್ವರ ಎಂಬ ಸಣ್ಣ ಗುಡಿ (ಇತ್ತೀಚಿನದು)ಯಿದೆ. ಊರಿನಲ್ಲಿರುವ ಕಾಳಮ್ಮನ ಗುಡಿಯ ಹಿಂದಿನ ಗೋಡೆಯ ಮೇಲೆ ಶಾಸನವಿದ್ದು ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕಾಲದ ಲಿಪಿಯನ್ನು ಹೊಂದಿದ್ದು ನಂದೀಶ್ವರ ದೇವಾಲಯದ ನಿರ್ಮಾಣ ಮಾಡಿ ಬಿಟ್ಟ ಭೂದಾನದ ಬಗೆಗೆ ಉಲ್ಲೇಖವಿದೆ. ಭೀಮನಗುಡಿಯ ಎದುರಿಗಿರುವ ಶಾಸನವು ಕಲ್ಯಾಣದ ಚಾಳುಕ್ಯ ಮೂರನೇಯ ಸೋಮೇಶ್ವರನ ಕಾಲದ್ದಾಗಿದ್ದು (ಸ್ತು.ಕ್ರಿ.ಶ. 12ನೇ ಶತಮಾನ) ದಂಡನಾಯಕ ಹೊಲಕೇಶಿದೇವನಿಂದ ಬನ್ನಿಯೂರ ತೀರ್ಥದ ಭೀಮೇಶ್ವರ ದೇವಾಲಯಕ್ಕೆ ಬಿಟ್ಟ ಭೂದಾನದ ಬಗೆಗೆ ತಿಳಿಸುತ್ತದೆ. ಈ ದೇವಾಲಯದಲ್ಲಿ ನಾಗರಪಂಚಮಿ ಹಾಗೂ ಯುಗಾದಿಗೆ ವಿಶೇಷ ಪೂಜೆ ನಡೆಯುತ್ತದೆ ಮತ್ತು ಜಾತ್ರೆಯು ಜರುಗುತ್ತದೆ.

**ಬರದೂರು :** ಮುಂಡರಗಿ ತಾಲೂಕಿನ ಬರದೂರು (ಜನಸಂಖ್ಯೆ : 1,947) ಮುಂಡರಗಿಯಿಂದ ವಾಯುವ್ಯಕ್ಕೆ ಐದು ಕಿ.ಮೀ. ದೂರದಲ್ಲಿದೆ. ಈ ಊರು 1032ರ ಶಾಸನದಲ್ಲಿ 'ಭರತಾಪುರ' ಎಂದು ದಾಖಲಾಗಿದ್ದು, 200 ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿತ್ತು. ಹಿಂದೆ ಇದು ಮಾಸವಾಡಿ - 140ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ 1032ರ ಏಕೈಕ ಶಾಸನ ವರದಿಯಾಗಿದ್ದು, ಭರತಾಪುರದ ಭರತೇಶ್ವರ ದೇವರಿಗೆ ಎರಡು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತ, ದಾನ ನೀಡಿದ ಭೂಮಿಯನ್ನು 200 ಮಹಾಜನರಿಗೆ ಹಣ ಕೊಟ್ಟು ಖರೀದಿಸಲಾಯಿತೆಂದು ಹೇಳುವ ಈ ಶಾಸನದಲ್ಲಿ ರಾಜನ ಹೆಸರಾಗಲಿ, ದಾನಿಯ ಉಲ್ಲೇಖವಾಗಲಿ ಇಲ್ಲ. ಈ ಊರಲ್ಲಿ ಎರಡು ಪ್ರಾಚೀನ ದೇವಾಲಯಗಳಿವೆ. ಊರ ಬಳಿ ರಸ್ತೆ ಬದಿಯಲ್ಲೇ ಇರುವ ಅಹೋಬಲನರಸಿಂಹಸ್ವಾಮಿ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಸುಮಾರು 11ನೇ ಶತಮಾನದ ರಚನೆಯಾಗಿದೆ. ಎತ್ತರವಾದ ಅಧಿಷ್ಠಾನದ ಮೇಲಿರುವ ಈ ಗುಡಿಯ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಇತ್ತೀಚಿನ ನಾರಾಯಣ ಮೂರ್ತಿಯಿದೆ. ತೆರೆದ ಅಂತರಾಳದ ಮುಂತೊಲೆಯನ್ನು ಎರಡು ಕಂಬಗಳು ಹೊತ್ತುನಿಂತಿವೆ. ನವರಂಗದ ನಡುವಣ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯಲ್ಲಿದ್ದು, ಛತ್ತಿನಲ್ಲಿ ಸರಳ ಕಮಲವಿದೆ. ಊರ ನಡುವೆ ಇರುವ ಭರತೇಶ್ವರ ಗುಡಿ ಗರ್ಭಗೃಹ ತೆರೆದ ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು, ಪೂರ್ವ-ದಕ್ಷಿಣ ಪಾರ್ಶ್ವಗಳಿಗೆ ಪ್ರವೇಶದ್ವಾರಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಂದಿಯಿದೆ. ನವರಂಗದ ನಡುವಣ ಕಂಬಗಳು ಚಾಲುಕ್ಯ ಶೈಲಿಯಲ್ಲಿದ್ದು ಇವುಗಳ ಬಾಗಿಲುವಾಡ ಸರಳವಾಗಿದೆ. ಇವುಗಳ ಜೊತೆಗೆ ಊರಲ್ಲೆ ಬಸವಣ್ಣ, ಕಾಶಿಲಿಂಗ, ಹನುಮಂತ, ದುರ್ಗಾ, ದ್ಯಾಮವ್ವ, ಕರಿಯಮ್ಮ ಮತ್ತು ಮಾಯಮ್ಮನ

ಇತ್ತೀಚಿನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇದೆ. ಚಾರಿತ್ರಿಕ ಮಹತ್ವದ ಮೇವುಂಡಿ ಇದರ ನೆರೆಯ ಗ್ರಾಮವಾಗಿದ್ದು ಎರಡು ಕಿ.ಮೀ. ದೂರದಲ್ಲಿದೆ.

**ಬಾಡ** : ಶಿಗ್ಗಾಂವಿ ತಾಲೂಕಿನ ಬಾಡ (ಜನಸಂಖ್ಯೆ 1,683) ಮತ್ತು ಹಳೆಯಬಾಡ ಜೋಡಿ ಗ್ರಾಮಗಳಾಗಿದ್ದು ಬಾಡವು ಶಿಗ್ಗಾಂವಿಯಿಂದ 14 ಕಿ.ಮೀ. ದೂರದಲ್ಲಿರುವ ಪ್ರಾಚೀನ ಸ್ಥಳ. ಬಂಕಾಪುರದ ಕದಂಬರ ಆಡಳಿತಕ್ಕೆ ಈ ಪ್ರದೇಶವು ಒಳಪಟ್ಟಿತ್ತು. ಆದಿಲ್‌ಷಾಹಿಗಳು ಇದಕ್ಕೆ ಇಸ್ಲಾಂಪುರ ಎಂದು ಹೆಸರಿಟ್ಟಿದ್ದಾರೆ. ಬಾಡದಲ್ಲಿರುವ ದೇವಾಲಯಗಳೆಂದರೆ ಬಂಕನಾಥ, ಬಸವಣ್ಣ, ಮರೆವ್ವ, ಹನುಮಂತ ಮುಂತಾದವುಗಳು. ಬಾಡದ ಮುಖ್ಯವಾದ ಮುಸ್ಲಿಂ ವಾಸ್ತುಶಿಲ್ಪ ರಚನೆಯೆಂದರೆ ಕೆರೆಯ ದಂಡೆಯ ಮೇಲಿರುವ ಮಸೀದಿ ಎನ್ನಬಹುದು. ಎತ್ತರವಾದ ಎರಡು ಮೀನಾರ್‌ಗಳನ್ನು ಹೊಂದಿದ್ದು ಮಧ್ಯದಲ್ಲಿ ಗುಮ್ಮಟಗಳಿವೆ. ಅರ್ಧಗೋಲಾಕಾರವಾದ ಈ ಗುಮ್ಮಟಗಳ ಮೇಲೆ ಹೂವಿನ ಹಾಗೂ ಬಳ್ಳಿಗಳ ಮಾದರಿಗಳನ್ನು ಕೆತ್ತಲಾಗಿದೆ. ಮುಂಭಾಗದಲ್ಲಿ ವಿಶಾಲವಾದ ನಿವೇಶನವಿದ್ದು ಪ್ರವೇಶದ್ವಾರವು ಕಮಾನುಗಳಿಂದ, ಕೋನಾಕಾರವಾದ ಕಿಟಕಿಗಳಿಂದ ಅಲಂಕರಿಸಲ್ಪಟ್ಟಿದ್ದು ಇಂಡೋ - ಮುಸ್ಲಿಮ್ ಶೈಲಿಯ ಉತ್ತಮ ಪ್ರತೀಕಗಳಾಗಿವೆ. ಹೊರಭಾಗದಲ್ಲಿ ಶಿಲೆಯ ಆಕರ್ಷಕ ಚಾಚುಪೀಠ (ಬ್ರ್ಯಾಕೆಟ್)ಗಳ ಸರಣಿಯಿದೆ. ಈ ಮಸೀದಿಯನ್ನು ಬಿಜಾಪುರದ ಸುಲ್ತಾನರು ನಿರ್ಮಿಸಿರಬಹುದೆಂದು ಪ್ರತೀತಿಯಿದೆ. ಒಳಭಾಗದ ಛಾವಣಿಯಲ್ಲಿ ಗೋಳಾಕಾರವಾದ ಆಳವಾದ ಅಂಕಣಗಳಿದ್ದು ಗಾರೆಯಿಂದ ವೃತ್ತಾಕಾರಾವಾಗಿ ವಿವಿಧ ಮಾದರಿಗಳನ್ನು ಸೃಷ್ಟಿಸಲಾಗಿದೆ. ಮಿಹ್ರಾಬ್‌ನಲ್ಲಿ ಸುಂದರ ಶಿಲಾ ಅಲಂಕಾರವಿದೆ. ಎತ್ತರವಾದ ವೃತ್ತಾಕಾರವಾದ ಕಂಬಗಳು ಆಕರ್ಷಿಸುತ್ತವೆ. ಊರಿನಲ್ಲಿ ಪೀರ್ ರಾಜಾ ಬಾಗ್‌ಸವಾರನ ದರ್ಗಾಯಿದ್ದು ಹೋಳಿ ಸಮಯಕ್ಕೆ ಉರುಸ್ ನಡೆಯುತ್ತದೆ.

ಬಾಡದ ಸಮೀಪವೇ ಇರುವ ಹಳೇಬಾಡದಲ್ಲಿರುವ ಮುಖ್ಯ ಆಕರ್ಷಣೆಯೆಂದರೆ 1965ರಲ್ಲಿ ಕಟ್ಟಲಾಗಿರುವ ಕನಕದಾಸರ ಚಿಕ್ಕ ಸ್ಮಾರಕ ಮಂಟಪ. ಒಳಗೆ ಅವರ ಮೂರ್ತಿಯಿದೆ. ಕನಕದಾಸರು ಈ ಊರಿನಲ್ಲೇ ಜನಿಸಿದರೆಂದು ಅವರ ಜೀವನದ ವೃತ್ತಾಂತಗಳಿಂದ ವ್ಯಕ್ತವಾಗುತ್ತದೆ. ಈ ಮಂಟಪದ ಪರಿಸರದಲ್ಲಿ ತೀರ ದೊಡ್ಡದಾದ ಹಳೆಯ ದೇವಾಲಯದ ತಳಪಾಯ ಮಾತ್ರ ಉಳಿದಿದೆ. ಇದರಲ್ಲಿ ಒಂದು ಬಸವ ವಿಗ್ರಹ, ಗರ್ಭಗೃಹವಿದ್ದು ಸ್ಥಳದಲ್ಲಿ ಒಂದು ಭಗ್ನ ದೇವಿಯ ಮೂರ್ತಿ (ವಿಜಯನಗರ ಕಾಲದ್ದು), ಹಾಗೂ ಕಟ್ಟೆಯ ಕೆಳಗಿನ ಭಾಗದ ಒಂದು ಗೋಡೆಯಲ್ಲಿ ಆನೆ, ಹನುಮಂತ ಮುಂತಾದ ಉಬ್ಬು ಶಿಲ್ಪಗಳಿವೆ. ಇದರ ಸಮೀಪವೇ ಪ್ರಾಕಾರದ ನಂತರ ಸ್ವಲ್ಪ ಖಾಲಿಜಾಗವಿದ್ದು ರಾಷ್ಟ್ರಕೂಟರ ಕಾಲದ ಬಾಗಿಲುವಾಡ ಇರುವ ಶಿಥಿಲ ರಚನೆ ಇದೆ. ಮತ್ತು ಇದರಲ್ಲಿ ಒಂದು ಅಪ್ರಕಟಿತ ಶಾಸನವಿದೆ ('ದಸವರ್ಮನ ಶಿಲೆಕಲ್ಲು'). ಇಲ್ಲಿರುವ ಒಂದು ಪಾಣೀಪೀಠವು ಸ್ವಲ್ಪ ವೃತ್ತಾಕಾರವಾಗಿದ್ದು ರಂಗನಾಥನ ಪೀಠದ ಲಕ್ಷಣವನ್ನು ಹೊಂದಿದೆ. ಇಲ್ಲಿನ ಕೇಶವಮೂರ್ತಿಯನ್ನು ಕನಕದಾಸರು ಕಾಗಿನೆಲೆಗೆ ಒಯ್ದರೆಂದು ಪ್ರತೀತಿ. ರಾಷ್ಟ್ರಕೂಟರ ಕಾಲದ ಇಟ್ಟಿಗೆಗಳೂ ಈ ಪರಿಸರದಲ್ಲಿ ಕಂಡುಬರುತ್ತವೆ. ಈ ಗುಡಿಯ ಹಿಂಭಾಗದ ಹೊಂಡದಲ್ಲಿ ಇನ್ನೊಂದು ರಾಷ್ಟ್ರಕೂಟರ ಕಾಲದ ಅಪ್ರಕಟಿತ (ಹೊಸದಾಗಿ ಸಿಕ್ಕಿರುವ) ಸು. ಕ್ರಿ.ಶ. 1029 ಶಾಸನವಿದ್ದು 'ಬನವಾಸಿ ಪನ್ನಿರ್ಸಾಸಿರ'ವೆಂದು ಮಾತ್ರ ವಿಷಯ ವ್ಯಕ್ತವಾಗುತ್ತದೆ. ಹಳೇಬಾಡದಲ್ಲಿರುವ ಇತರ ಗುಡಿಗಳೆಂದರೇ ಹನುಮಂತ, ಬಸವಣ್ಣ, ಈಶ್ವರ ಮುಂತಾದವುಗಳು. ಹನುಮಂತ ದೇವರ ಗುಡಿಯ ಹೊರಗಿರುವ ಕಂಬದ ಮೇಲೆ ಶಾಸನವಿದ್ದು (ಸು.ಕ್ರಿ.ಶ. 12ನೆ ಶತಮಾನ) ಅಸ್ಪಷ್ಟವಾಗಿದ್ದು ಬಂಕಾಪುರದ ನಗರೇಶ್ವರ ದೇವರ ದತ್ತಿ ಎಂಬ ಉಲ್ಲೇಖವಿದೆ. ಈ ಗುಡಿಯ ಸಮೀಪವೇ ಒಂದು ಕೋಣನ ತಲೆಯ ಕಲ್ಲಿದೆ.

**ಬಾಳಂಬೀಡು** : ಹಾನಗಲ್ ತಾಲೂಕಿನ ಬಾಳಂಬೀಡು (ಜನಸಂಖ್ಯೆ 3,059) ಹಾನಗಲ್‌ನಿಂದ 14 ಕಿ.ಮೀ. ದೂರದಲ್ಲಿದೆ. ಶಾಸನೋಕ್ತ 'ಬಳ್ಳಾರೆಯ ಬೀಡು' ಗ್ರಾಮವು ಜಿಲ್ಲೆಯಲ್ಲಿರುವ ಪ್ರಾಚೀನ ಸ್ಥಳಗಳಲ್ಲೊಂದಾಗಿದೆ. ಇಲ್ಲಿನ ಪ್ರಮುಖ ದೇವಾಲಗಳೆಂದರೆ ರಾಮೇಶ್ವರ (ಕಲ್ಲೇದೇವರು), ಬೋಳದೇವರು ಮತ್ತು ವೀರಭದ್ರ. ರಾಮೇಶ್ವರ ದೇವಾಲಯವು ಚಾಳುಕ್ಯ ಶೈಲಿಯಲ್ಲಿದ್ದು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಇದರ ಲಲಾಟದ ಮೇಲ್ಭಾಗದಲ್ಲಿರುವ ಬೋದಿಗೆಯಲ್ಲಿ ಬ್ರಹ್ಮ ಶಿವ ಮತ್ತು ಸಪ್ತಮಾತೃಕೆಯರ ಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದೆ. ಅಂತರಾಳದ ದ್ವಾರದ ಇಕ್ಕೆಲಗಳಲ್ಲಿ ದೇವಕೋಷ್ಠಗಳಿದ್ದು ಎಡಗಡೆ ಭಗ್ನ ಕಾರ್ತಿಕೇಯ ಮತ್ತು ಬಲಗಡೆ ಭಗ್ನಗಣಪತಿಯ ಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳಲ್ಲಿ ಹೂವುಗಳ ಕೆತ್ತನೆಯಿದ್ದು ಛಾವಣಿಯಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಕೆತ್ತನೆಯಿದೆ. ನಾಲ್ಕೂ ಕಂಬಗಳು ಉತ್ತಮ ಹೊಳಪು ಹೊಂದಿದ್ದು ಮೆಲ್ಭಾಗದಲ್ಲಿ ಪೂರ್ಣ ಕುಂಭದ ಉಬ್ಬು ಅಲಂಕಾರವಿದೆ. ಇದರ ಮಧ್ಯದಲ್ಲಿ ನಂದಿಯ ಏಕಶಿಲಾಮೂರ್ತಿಯಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ವೇಸರ ಶೈಲಿಯ ಶಿಖರವಿದೆ. ಈ ದೇವಾಲಯದಲ್ಲಿ ಎರಡು ಶಾಸನಗಳಿದ್ದು ಮೊದಲನೇ ಶಾಸನವು

ಹಾನಗಲ್ ಕದಂಬ ದೊರೆ ತೈಲಪನ ಕಾಲದ್ದಾಗಿದ್ದು (ಕ್ರಿ.ಶ. 11ನೇ ಶತಮಾನ) ವೀರಸ್ವರ್ಗ ಪಡೆದ ಬಸವನಿಗೆ ಬಿಟ್ಟ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಇಲ್ಲೇ ಇರುವ ಎರಡನೇಯ ಶಾಸನವು ಕಲ್ಯಾಣದ ಚಾಳುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1123) ಬಮ್ಮಗಾವುಂಡನೆಂಬ ಅಧಿಕಾರಿ 'ಬಳ್ಳಾರೆಯ ಬೀಡು' ಗ್ರಾಮದ ರಾಮೇಶ್ವರ ದೇವರಿಗಾಗಿ ಬಿಟ್ಟ ಭೂ ದಾನವನ್ನು ತಿಳಿಸುತ್ತದೆ. ಈ ದೇವಾಲಯವನ್ನು ಕೇಂದ್ರ ಪ್ರಾಚ್ಯವಸ್ತು ಇಲಾಖೆಯವರು ಸಂರಕ್ಷಿಸಿರುತ್ತಾರೆ.

ಈ ದೇವಾಲಯದಿಂದ ಸ್ವಲ್ಪ ದೂರದಲ್ಲೇ ಬೋಳದೇವರ ಅಥವಾ ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವಿದೆ. ಇದರಲ್ಲಿರುವ ಶಾಸನದ ಪ್ರಕಾರ ಕ್ರಿ.ಶ. 1123ರಲ್ಲಿ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಮಹಾಪ್ರಭು ಬಮ್ಮಗಾವುಂಡನು ಬಳ್ಳಾರೆಯ ಬೀಡು ಗ್ರಾಮದಲ್ಲಿ ಬ್ರಹ್ಮೇಶ್ವರ ದೇವಾಲಯವನ್ನು ನಿರ್ಮಿಸಿದ ದಾಖಲೆಯಿದೆ. ಇದರಲ್ಲಿ ಗರ್ಭಗೃಹ, ಆಯತಾಕಾರವಾದ ಅಂತರಾಳ ಹಾಗೂ ತೆರೆದ ನವರಂಗವಿದೆ. ಇದೂ ಬಹುತೇಕವಾಗಿ ಮೊದಲು ದ್ವಿಕೂಟಾಚಲವಾಗಿರಬೇಕು. ಆದರೆ ಈಗ ಇರುವುದು ಕೇವಲ ಒಂದೇ ಗರ್ಭಗೃಹ. ಗರ್ಭಗೃಹದಲ್ಲಿ ಚಾಳುಕ್ಯ ಪೀಠದ ಮೇಲೆ ಒಂದು ಅಡಿ ಎತ್ತರದ ಲಿಂಗವಿದೆ ಹಾಗೂ ಇದರ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದ ನಾಲ್ಕು ಕಂಬಗಳು ಹೂವಿನ ಅಲಂಕಾರವನ್ನು ಹೊಂದಿವೆ. ಇಲ್ಲೇ ಜಟಾಮುಕುಟ ಅಲಂಕಾರವಿರುವ ಪ್ರಭಾವಳಿಯನ್ನು ಹೊಂದಿರುವ ಸಪ್ತ ಮಾತೃಕೆಯರ ಪಟ್ಟಿಕೆಯ ಶಿಲ್ಪವಿದೆ. ಊರ ಚಾವಡಿಯ ಹತ್ತಿರ ಎರಡು ವೀರಗಲ್ಲು ಹಾಗೂ ಒಂದು ಮಾಸ್ತಿಕಲ್ಲುಗಳಿವೆ. ಅವುಗಳಲ್ಲಿ ಒಂದರಲ್ಲಿ ಶಾಸನವಿದ್ದು (ಈಚಿನ ಅಕ್ಷರ) ಹೊಮ್ಮರಡಿಯಲ್ಲಿ ಎಲ್ಲೇ ನಾಯಕನೆಂಬ ವೀರನ ಮರಣವನ್ನು ತಿಳಿಸುತ್ತದೆ. ಪ್ರಾಚೀನ ವೀರಗಲ್ಲುಗಳಲ್ಲಿ ಒಂದಾದ ಕಲ್ಲಿನಲ್ಲಿ ಒಬ್ಬ ವೀರ ಕುದುರೆಯ ಮೇಲೆ ಕೂತ ಪ್ರಭಾವಶಾಲಿ ಕೆತ್ತನೆಯಿದೆ. ಈ ದೇವಾಲಯದ ಸಮೀಪವೇ ಐದು ಅಡಿ ಎತ್ತರದ ವೀರಭದ್ರ ಮೂರ್ತಿ ಇರುವ ಗುಡಿ ಇದೆ. ಇದರ ಎದುರಿಗೆ ಭಾರಿ ಗಾತ್ರದ ತಳಹದಿಯ ಕಲ್ಲುಗಳು ಹಾಗೂ ಸಮೀಪವೇ ಬೇವಿನ ಕಟ್ಟೆಯ ಬಳಿ ಮೂರು ಮಹಾಸತಿ ಕಲ್ಲು ಹಾಗೂ ಮೂರು ವೀರಗಲ್ಲುಗಳಿವೆ. ಇದರ ಹತ್ತಿರವೇ ಜೈನ ಬಸದಿಯ ಅವಶೇಷಗಳಿದ್ದು ಚಾಳುಕ್ಯ ಶೈಲಿಯ ಬಾಗಿಲುವಾಡ ಹಾಗೂ ಸಿಂಹ ಶಿಲ್ಪವಿರುವ ಜೈನಪೀಠವಿದೆ. ಶಂಭುನಾಥ ತೀರ್ಥಂಕರ (ಕೈಯಲ್ಲಿ ಪದ್ಮ)ರ ಭಿನ್ನವಾದ ವಿಗ್ರಹವಿದೆ. ಬ್ರಹ್ಮ ಯಕ್ಷನ ವಿಗ್ರಹವಿದೆ. ಇದರ ಗರ್ಭಗೃಹದ ಹಿಂಭಾಗದಲ್ಲಿ ಮೂರು ನಿಷಿಧಿ ಕಲ್ಲುಗಳಿದ್ದು ಎರಡರಲ್ಲಿ ಶಾಸನವಿದೆ (ಒಂದು ಸೇಉಣರದು) ಬ್ರಹ್ಮದೇವರ ಗುಡಿಯಲ್ಲಿ ಪದ್ಮಾವತಿ ಯಕ್ಷಿಯ ವಿಗ್ರಹವಿದೆ.

**ಬಾಳಂಬೀಡು** : ಹಿರೇಕೆರೂರು ತಾಲ್ಲೂಕಿನ ಬಾಳಂಬೀಡು (ಜನಸಂಖ್ಯೆ 915) ಹಿರೇಕೆರೂರಿನಿಂದ ವಾಯುವ್ಯಕ್ಕೆ ಎರಡು ಕಿ.ಮೀ. ದೂರದಲ್ಲಿದೆ. ಶಾಸನೋಕ್ತ ಪ್ರಾಚೀನ ಹಿರಿಯಕೆರೆಯೂರಿನ (ಹಿರೇಕೆರೂರು) ಗ್ರಾಮಕ್ಕೆ ಸೇರಿಕೊಂಡಿರುವ ಸ್ಥಳ ಇದಾಗಿದೆ. ಈ ಊರಿನಲ್ಲಿರುವ ಕಲ್ಲದೇವರ ಗುಡಿ ಅಥವಾ ಶಾಸನಗಳಿಂದಲೂ ವಿಷಪರಿಹಾರೇಶ್ವರವೆಂದೇ ಜನಪ್ರಿಯವಾಗಿರುವ ಈ ದೇವಾಲಯವು ರಾಷ್ಟ್ರಕೂಟರ ಕಾಲದ ರಚನೆ ಇರಬಹುದೆಂದು ಅನಂತರ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ದುರಸ್ತಿಗೊಂಡಿರಬಹುದೆಂದು ಹೇಳಬಹುದಾಗಿದೆ. ಶಾಸನಗಳಲ್ಲಿ ಈ ದೇವಾಲಯವನ್ನು 'ಪಂಡರಂಗೇಶ್ವರ' ಎಂದೂ ಉಲ್ಲೇಖಿಸಲಾಗಿದೆ. ಸ್ಥಳೀಯ ಸಂಪ್ರದಾಯದ ಪ್ರಕಾರ ಹಾವು ಕಚ್ಚಿದವರಿಗೆ ಈ ಶಿವಲಿಂಗದ ಅಭಿಷೇಕ ಮಾಡಿದ ತೀರ್ಥವನ್ನು ಕುಡಿಸಿದರೆ ಬದುಕುವರೆಂಬ ದೃಢವಾದ ನಂಬಿಕೆಯಿದೆ. ಆದುದರಿಂದಲೇ ಈ ದೇವಾಲಯದ ಶಿವಲಿಂಗವನ್ನು ಶಾಸನದಲ್ಲಿ - 'ವಿಷಪರಿಹಾರೇಶ್ವರ' ಎಂದು ಕರೆಯಲಾಗುತ್ತದೆ. ಹಾವು ಕಡಿದ ಅಥವಾ ನಂಜಾದ ಜನ ಚಿಕಿತ್ಸೆಗೆ ಈಗಲೂ ಇಲ್ಲಿ ಬರುತ್ತಿದ್ದು ಅವರ ವಾಸಕ್ಕೆ ಒಂದು ಬಿಡಾರ ಮೀಸಲಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮಾತ್ರ ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಆದರೆ ಉಳಿದ ಭಾಗಗಳೆಲ್ಲವೂ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದಲ್ಲಿರುವ ಶಿವಲಿಂಗವು ರಾಷ್ಟ್ರಕೂಟ ಲಕ್ಷಣವನ್ನು ಹೊಂದಿದ್ದು ಪ್ರಾಚೀನವೆಂದು ಹೇಳಬಹುದಾಗಿದೆ. ದೇವಾಲಯದ ಹೊರಗಡೆ ರಾಷ್ಟ್ರಕೂಟ ಶೈಲಿಯ ಗಣಪತಿಯ ಶಿಲಾಕೃತಿಯಿದೆ. ಈ ದೇವಾಲಯದ ಪರಿಸರದಲ್ಲಿ ಮೂರು ಶಾಸನಗಳಿದ್ದು ಮೊದಲನೆಯದು ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ಕಾಲದ್ದು (ಕ್ರಿ.ಶ. 1088) ಅಸ್ಪಷ್ಟವಾಗಿದ್ದು ಹಿರಿಯ ಕೆರೆಯೂರಿನ ಜ್ಞಾನಿಗಳಾಗಿದ್ದ ಬ್ರಾಹ್ಮಣರ (ಅವರ ಹೆಸರುಗಳಿವೆ) ಸಮ್ಮುಖದಲ್ಲಿ ದೇವಾಲಯಕ್ಕೆ ಬಿಟ್ಟ ದಾನಗಳನ್ನು ದಾಖಲಿಸುತ್ತದೆ. ಇದರ ಸಮೀಪವಿರುವ ಎರಡನೇ ಶಾಸನವು ಇದೇ ಕಾಲದ್ದಾಗಿದ್ದು ದೇವಯ್ಯನ ಭೂತಗಾವುಂಡನು ಹಿರಿಯಕೆರೆಯೂರಿನ 1000 ಮಹಾಜನರ ಸಮ್ಮುಖದಲ್ಲಿ ಪಂಡರಂಗೇಶ್ವರ ದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ. ಕೊನೆಯ ಶಾಸನವು ಯಾದವ ಸಿಂಘಣನ ಕಾಲದ ಶಾಸನವಾಗಿದ್ದು ಅಸ್ಪಷ್ಟವಾಗಿದ್ದು ದಂಡನಾಯಕ ಬಾಚಯ್ಯನಿಂದ ಪಂಡರಂಗೇಶ್ವರ ದೇವರಿಗೆ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಈ ಊರು ಹಿರೇಕೆರೂರಿನ ವಿಶಾಲ ಕೆರೆಯ ಇನ್ನೊಂದು ದಂಡೆಯಲ್ಲಿದೆ.

**ಬಾಳೀಹಳ್ಳಿ :** ಹಾನಗಲ್ ತಾಲೂಕಿನ ಬಾಳೀಹಳ್ಳಿಯು (ಜನಸಂಖ್ಯೆ : 699) ಹಾನಗಲ್‌ನಿಂದ ನೈರುತ್ಯಕ್ಕೆ 18 ಕಿ.ಮೀ. ದೂರದಲ್ಲಿ ಶಿರ್ಶಿ ರಸ್ತೆಯಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಬಾಳಿಹಳ್ಳಿ', 'ಬಾಳೆಹಳ್ಳಿ' ಕದಳಿಪುರ ಎಂದೇ ಉಲ್ಲೇಖಿತಗೊಂಡಿರುವ ಈ ಊರಿನಿಂದ ಈವರೆಗೆ 16 ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನವು ವೀರಗಲ್ಲು ಶಾಸನಗಳಾದರೆ ಉಳಿದವು ದಾನ ಮತ್ತು ನಿಷಿಧಿ ಶಾಸನಗಳಾಗಿವೆ. ಇಲ್ಲಿನ ಶಾಸನಗಳಲ್ಲಿ ಗೌರೇಶ್ವರ ಮತ್ತು ಪಾರ್ಶ್ವನಾಥಬಸದಿಗಳ ಉಲ್ಲೇಖವಿದ್ದು, ಇಂದಿನ ಸಿದ್ಧೇಶ್ವರ ಗುಡಿಯೇ ಶಾಸನೋಕ್ತ ಗೌರೇಶ್ವರ ದೇವಾಲಯವಾಗಿದ್ದು, ಪಾರ್ಶ್ವನಾಥ ಬಸದಿ ಇಂದು ಉಳಿದುಬಂದಿಲ್ಲ. ಊರ ಪ್ರವೇಶದಲ್ಲೇ ಇರುವ ಸಿದ್ಧೇಶ್ವರ ಗುಡಿಯ ಪುನರ್ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದ್ದ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ಸರಳವಾಗಿದ್ದು ನಡುವೆ ಗಜಲಕ್ಷ್ಮಿಯಿದೆ. ಇಲ್ಲಿ ಸುಂದರ ಮಹಿಷಮರ್ದಿನಿ ಶಿಲ್ಪವಿದ್ದು ಇದನ್ನು ಮಾಡಿದವನು ಕಣ್ಣೆಯ ಭೀಮಯ್ಯ ಎಂದು ಪಾದಪೀಠದ ಮೇಲಿನ ಶಾಸನದಿಂದ ಗೊತ್ತಾಗುತ್ತದೆ. ಈ ಗುಡಿಯ ಆವರಣದಲ್ಲಿ ಭೈರವ, ಕಾರ್ತಿಕೇಯ, ಸರಸ್ವತಿ ಮತ್ತು ವಿಷ್ಣು ಹಾಗೂ ಸಪ್ತಮಾತೃಕಾ ಶಿಲ್ಪಗಳಿದ್ದು, ಹೆಚ್ಚಿನವು ಮುಕ್ಕಾಗಿವೆ. ಸರಸ್ವತಿ ಶಿಲ್ಪ ಬಹಳ ಸುಂದರವಾಗಿದ್ದು ಉತ್ತಮ ಸ್ಥಿತಿಯಲ್ಲಿದೆ. ಊರಕೆರೆ ದಂಡೆ ಮೇಲೆ ದೇವಾಲಯವಿದ್ದು ಇಂದು ಪೂರ್ಣ ಶಿಥಿಲವಾಗಿದೆ.

ಈ ಗುಡಿಯ ಮುಂದೆ ಹತ್ತಾರು ವೀರಗಲ್ಲುಗಳಿದ್ದು, ಇವು ಬೇರೆ ಬೇರೆ ಕಾಲದಲ್ಲಿ ಜರುಗಿದ ಯುದ್ಧಗಳಲ್ಲಿ ಮಡಿದ ವೀರರ ಬಗ್ಗೆ ಮಾಹಿತಿ ನೀಡುತ್ತವೆ. ಈ ವೀರಗಲ್ಲುಗಳು ಊರುಳಿವಿಗಾಗಿ ಸತ್ತ ಕಮ್ಮಾರ ಬೋಕೋಜ, ಸೇನಿಗ ಸೋಮನಾಥ, ಜಾಡ ಕಾಟಿಗ, ಬೊಮ್ಮಣ, ಸಮಗಾರ ಬಮ್ಮಣ, ತೈಲಹ, ಬೆಳಿಗಾವುಂಡ ಮುಂತಾದ ವೀರರ ಸ್ಮಾರಕ ಶಿಲ್ಪಗಳಾಗಿವೆ.

**ಬಾಳೂರು :** ಹಾನಗಲ್ ತಾಲೂಕಿನ ಬಾಳೂರು (ಜನಸಂಖ್ಯೆ : 2,112) ಅಥವಾ ಶಾಸನೋಕ್ತ 'ಬಾಳೆಯೂರ' ಹಾನಗಲ್‌ನಿಂದ ಎಂಟು ಕಿ.ಮೀ. ದೂರದಲ್ಲಿದೆ. ಗುತ್ತಿಯ ಮಾಂಡಳಿಕ ಬಮ್ಮಗಾವುಂಡನ ಆಡಳಿತ ಕೇಂದ್ರವಾಗಿದ್ದ ಇದು ಬಹುಮುಖ್ಯವಾದ ಐತಿಹಾಸಿಕ ಸ್ಥಳ. ಊರ ಹೊರಗೆ ಕೋಟೆ ಇದ್ದು ಈಗ ಕೇವಲ ಅವಶೇಷಗಳಿವೆ. ಕೋಟೆಯ ಬಳಿ ಶಿಥಿಲವಾದ ಚಾಳುಕ್ಯ ಶೈಲಿಯ ಗುಡಿಯಿದ್ದು (ಬಸದಿ) ಕೇವಲ ಗರ್ಭಗೃಹ, ಅರ್ಧಮಂಟಪ ಹಾಗೂ ಎರಡು ಕಂಬಗಳಿದ್ದು ಕುಸಿದು ಬಿದ್ದಿರುವ ಮಂಟಪ ಮಾತ್ರ ಉಳಿದಿದೆ. ಚಾಳುಕ್ಯ ಶೈಲಿಯ ಎರಡು ಕಂಬಗಳಿವೆ. ಒಂದು ಕಂಬದಲ್ಲಿರುವ (ಅಪ್ರಕಟಿತ) ಶಾಸನದ ಪ್ರಕಾರ "ಶ್ರೀ ಪಾರ್ಶ್ವನಾಥಾಲಯ ಶ್ರೀಜಿನಾಯನಮಃ ಶಿರಸಸನಾಥ ಕಾರ್ಲೊನಗರೇಂದ್ರ ಕರಲಿಖಿಥ" ಎಂದಿದೆ. ಮೂರ್ತಿ ಇಲ್ಲದ ಗರ್ಭಗುಡಿಯ ಮೇಲ್ಭಾಗದಲ್ಲಿ ಕುಸಿದಿರುವ ಕದಂಬನಾಗರ ಶಿಖರವಿದೆ. ಊರಿನಲ್ಲಿರುವ ಕೆರೆಯ ದಂಡೆಯ ಮೇಲೆ ಇನ್ನೊಂದು ಶಿಥಿಲವಾದ ಗುಡಿ ಹಾಗೂ ಎರಡು ವೀರಗಲ್ಲುಗಳಿವೆ. ಇದರ ಸಮೀಪವೇ ಕೋಣನ ತಲೆ ಇದ್ದು ಅದರ ಹಣೆಯ ಮೇಲೆ ಕಮಲದ ಕೆತ್ತನೆಯಿದೆ. ಈ ಗುಡಿಯಲ್ಲಿ ಚಾಳುಕ್ಯ ಶೈಲಿಯ ಕಂಬವಿದ್ದು ಗರ್ಭಗೃಹ ಹಾಗೂ ಅರ್ಧಮಂಟಪವಿದೆ. ಗರ್ಭಗೃಹದ ಬಾಗಿಲುವಾಡವು ಪಂಚಶಾಖಾಲಂಕಾರವನ್ನು ಹೊಂದಿದೆ ಹಾಗೂ ಬೋದಿಗೆಯಲ್ಲಿ ಬ್ರಹ್ಮ ಶಿವ ಮತ್ತು ವಿಷ್ಣು ಶಿಲ್ಪಗಳನ್ನು ಬಿಡಿಸಲಾಗಿದೆ. ಜೈನ ಬಸದಿಯ ಎದುರಿಗಿರುವ ಮಾಸ್ತಿಕಲ್ಲು ಶಾಸನವು ಬಾಳೂರ ಮುದ್ದಗೌಡನ ಹೆಂಡತಿ ಸಹಗಮನ ಮಾಡಿಕೊಂಡ ವಿವರವನ್ನು ದಾಖಲಿಸುತ್ತದೆ. ಕೆರೆಯ ತೂಬಿನ ಮೇಲೆ ಬಾದುಬ್ಬೆ ಕಲ್ಲಿನ (ಈಗ ಮೋರಲು ಬಿದ್ದಿದೆ) ಮೇಲೆ ಶಾಸನವಿದ್ದು (ಕ್ರಿ.ಶ. 1116) ಬಾಳೆಯೂರ ಬರ್ಮಗಾವುಂಡನು ನಿಲ್ಲಿಸಿದ ಬಾದುಬ್ಬೆಕಲ್ಲು ಎಂದು ಉಲ್ಲೆಖಿಸುತ್ತದೆ. ಕೆರೆಯ ದಂಡೆಯಲ್ಲಿದ್ದ ಇನ್ನೊಂದು ಶಾಸನವು ಈಗ ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿದ್ದು (ಕ್ರಿ.ಶ. 1120) ಮಲ್ಲಯ ಸಹಾನಿಯ ಮಗ ಚಂಡನು ಸೂರ್ಯ ಗ್ರಹಣದಂದು ಕಿಚ್ಚನ್ನು ಪ್ರವೇಶಿಸಿ ಸ್ವರ್ಗಸ್ಥನಾದ ವಿವರಗಳನ್ನು ದಾಖಲಿಸುತ್ತದೆ. ಕೆರೆಯ ಸಮೀಪ ಎರಡು ದೇವಾಲಯಗಳ ಅವಶೇಷಗಳಿದ್ದು ಬಹುಶಃ ಒಂದು ಶಾಸನೋಕ್ತ ದೇವಿಗುಡಿ ಇರಬಹುದು. ಈ ದೇವಿಗುಡಿಯಲ್ಲಿ ಶಾಸನವಿದ್ದು (ಸು.ಕ್ರಿ.ಶ. 1163) ಅಪೂರ್ಣವಾಗಿದೆ. ಗುತ್ತಿಯ ಮಾಂಡಳಿಕ ಬಮ್ಮಣನು ಹೂಡಿದ ಬಾಳೆಯೂರ ಮುತ್ತಿಗೆಯಲ್ಲಿ ರಾಮರಾಯನು ವೀರಮರಣ ಹೊಂದಿದ್ದನ್ನು ದಾಖಲಿಸುತ್ತದೆ. ಈ ಶಾಸನದ ಸಮೀಪವೇ ಎರಡು ಸತಿಕಲ್ಲಿವೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲೇ ಪೂರ್ಣವಾಗಿ ಧ್ವಂಸವಾಗಿರುವ ಈಶ್ವರಗುಡಿಯಿದ್ದು ಗರ್ಭಗೃಹದ ಬಾಗಿಲುವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಪರಿಸರದಲ್ಲಿ ಎರಡು ಚಾಳುಕ್ಯ ಅರೆಗಂಬಗಳಿವೆ.

ಊರಿನಲ್ಲಿ ಅಡವಿಸ್ವಾಮಿ ಮಠವಿದೆ. ಇದರ ಆವರಣದ ಮೂಲೆಯಲ್ಲಿ ಮೂರು ನಿಷಿಧಿಕಲ್ಲುಗಳಿತ್ತೆಂದು (ಈಗ ಧಾರವಾಡದಲ್ಲಿದೆ) ಹೇಳಲಾಗುತ್ತದೆ. ಮೊದಲನೇ ಕಲ್ಲು ಹೊಯ್ಸಳ ಎರಡನೇ ಬಲ್ಲಾಳನ ಕಾಲದ್ದಾಗಿದ್ದು (1205) ಕಸಪಗಾವುಂಡನು ನಿಷಧಿಹೋದ ವಿವರವನ್ನು ತಿಳಿಸುತ್ತದೆ. ಇನ್ನೊಂದು ಸಂಪೂರ್ಣವಾಗಿ ತ್ರುಟಿತವಾಗಿದೆ (ಯಾದವ ಕನ್ನರ, 1257) ಮೂರನೇ ನಿಷಿಧಿ ಶಾಸನವು

(1262) 'ಸಂಬೂರಿನ ಕಾವಯ್ಯನ ಮಗ ಚೀಕ ..... ನಿಲ್ಲಿಸಿದ ನಿಷಿಧಿ' ಎಂದು ದಾಖಲಿಸುತ್ತದೆ. ಕೋಟೆಯ ಬಳಿ ಒಂದು ದಿಬ್ಬದ ಮೇಲೆ ಹನುಮಂತನ ಮೂರ್ತಿಯಿದೆ. ಊರಿನಲ್ಲಿ ಇತ್ತೀಚೆಗೆ ಕಟ್ಟಲಾಗಿರುವ ಮಸೀದಿ ಇದೆ.

**ಬಿದರಹಳ್ಳಿ :** ಮುಂಡರಗಿ ತಾಲೂಕಿನ ಬಿದರಹಳ್ಳಿಯು (ಜನಸಂಖ್ಯೆ : 1,700) ಮುಂಡರಗಿಯಿಂದ ನೈಋತ್ಯಕ್ಕೆ 32 ಕಿ.ಮೀ. ದೂರದಲ್ಲಿದೆ. ತುಂಗಭದ್ರಾ ನದಿ ದಂಡೆ ಮೇಲಿರುವ ಈ ಊರು ಪ್ರಾಚೀನ ಶಾಸನಗಳಲ್ಲಿ 'ಬಿದುರ್ವಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಇದೊಂದು ಅಗ್ರಹಾರವಾಗಿದ್ದು ಮಾಸವಾಡಿ-140 ಕ್ಕೆ ಸೇರಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಸೋಮೇಶ್ವರ ಗುಡಿ ಮುಂದಿರುವ ಕ್ರಿ.ಶ. 1052ರ ಈ ಶಾಸನ ಅಗ್ರಹಾರ ಬಿದುರ್ವಳ್ಳಿಯ ದೇಗುಲಕ್ಕೆ ದಾನ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. 1150ರ ಶಾಸನ ಸೋಮನಾಥ ದೇವರಿಗೆ ಭೂದಾನ ನೀಡಿದ ವಿಷಯ ತಿಳಿಸುತ್ತದೆ. 1780ರ ಮತ್ತೊಂದು ಶಾಸನ ಬಿದರಹಳ್ಳಿಗೆ 'ತಿಗುಲಗಾಜಯಸಮುದ್ರ' ಎಂದು ನಾಮಕರಣ ಮಾಡಿದ ಅಂಶವನ್ನು ತಿಳಿಸುತ್ತದೆ. ಊರಲ್ಲಿ ಎರಡು ಪ್ರಾಚೀನ ದೇವಾಲಯಗಳಿವೆ. ಊರ ಹೊರಗೆ ಎತ್ತರವಾದ ದಿಬ್ಬದ ಮೇಲೆ ಇರುವ ಸೋಮೇಶ್ವರ ಗುಡಿ (ಶಾಸನೋಕ್ತ ಸೋಮನಾಥ) ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದು, ದ್ವಾರಬಂಧದಲ್ಲಿ ಪೂರ್ಣಕುಂಭ, ಚಾಮರಧಾರಿ, ರತಿ-ಮನ್ಮಥ ಹಾಗೂ ದ್ವಾರಪಾಲಕರಿದ್ದಾರೆ. ಅಂತರಾಳದ ದ್ವಾರಬಂಧ ಸರಳವಾಗಿದ್ದು, ಬ್ರಹ್ಮ ಮಹೇಶ್ವರ, ವಿಷ್ಣು ಕೆತ್ತನೆಯಿರುವ ಆಕರ್ಷಕವಾದ ಮಕರತೋರಣಕ್ಕೆ ಅಲಂಕೃತ ಜಾಲಾಂಧ್ರವಿದೆ. ನವರಂಗದ ನಡುವಣ ಕಂಬಗಳು ಚಾಳುಕ್ಯ ಶೈಲಿಯವು. ಗರ್ಭಗುಡಿಯ ಹಿಂದೆ ಬಯಲಲ್ಲಿ ಚತುರ್ಮುಖ ಶಿವಲಿಂಗವಿದೆ. ಶಿವಲಿಂಗದ ನಾಲ್ಕು ಬದಿಯಲ್ಲೂ ಶಿವನ ಶಿರೋಭಾಗವನ್ನು ತೋರಿಸಿದ್ದು, ಇಂತಹ ಚತುರ್ಮುಖ ಲಿಂಗಗಳು ಬಹಳ ವಿರಳವಾಗಿದ್ದು, ಜಿಲ್ಲೆಯಲ್ಲಿರುವ ಇಂತಹ ಮತ್ತೊಂದು ಉದಾಹರಣೆಯೆಂದರೆ ಉಣಕಲ್ಲಿನ ಚದುರಲಿಂಗದೇವರಾಗಿದ್ದು, ಇದೂ ಕೂಡ ಚತುರ್ಮುಖ ಶಿವಲಿಂಗವೇ ಆಗಿದೆ. ಸೋಮೇಶ್ವರ ದೇವಾಲಯದ ಬಲ ಹಿಂಬದಿಯಲ್ಲಿರುವ ಗಣಪತಿ ದೇವಾಲಯದ ಗರ್ಭಗೃಹದ ಮುಂದೆ ಆಯಾಕಾರದ ಸಭಾಂಗಣವಿದೆ. ನವರಂಗದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ಕಂಬಗಳಿವೆ. ಇದರೊಂದಿಗೆ ಊರಲ್ಲಿ ಬಸವಣ್ಣ, ವೀರಣ್ಣ, ಬಯಲಬಸವ, ಶಂಕರಲಿಂಗ, ಮಲ್ಲಿಕಾರ್ಜುನ, ಸಿದ್ಧಲಿಂಗಪ್ಪ, ವೀರಭದ್ರ, ವಿಷ್ಣು, ರೇಣುಕಾಂಬ ಹಾಗೂ ರಾಘವೇಂದ್ರರ ದೇವಾಲಯವಿದ್ದು, ಶರಣಬಸವೇಶ್ವರ ಮಠವಿದೆ. ಈ ಊರಲ್ಲಿ ಒಂದು ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ. ತುಂಗಭದ್ರೆಯ ಆಚೆ ದಡದಲ್ಲಿರುವ ಬಳ್ಳಾರಿ ಜಿಲ್ಲೆಯ ಮಾಗಳ ಕೂಡ ಪ್ರಾಚೀನ ದೇವಾಲಯಗಳ ಆಗರವಾಗಿದ್ದು, ದೂರದಿಂದಲೇ ಈಚೆ ದಂಡೆಯ ಮೇಲಿರುವ ನಮ್ಮ ಗಮನ ಸೆಳೆಯುತ್ತದೆ.

**ಬಿಲ್ಲಹಳ್ಳಿ :** ರಾಣೆಬೆನ್ನೂರು ತಾಲೂಕಿನ ಬಿಲ್ಲಹಳ್ಳಿ (ಜನಸಂಖ್ಯೆ 2,187) ರಾಣೆಬೆನ್ನೂರಿನಿಂದ ನೈಋತ್ಯಕ್ಕೆ 14 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಕಾಲದಲ್ಲಿ ನೂರುಂಬಾಡಕ್ಕೆ ಸೇರಿತ್ತೆಂದು ಊಹಿಸಲು ಶಾಸನಾಧಾರವಿದೆ. ಊರ ಹೊರಗೆ ಹೊಲಮಾಳದಲ್ಲಿರುವ ರಾಷ್ಟ್ರಕೂಟರ ಕಾಲದ ಮೂರು ಗೋಸಾಸಕಲ್ಲುಗಳಿಂದ ಈ ಊರಿನ ಇತಿಹಾಸವನ್ನು ಕನಿಷ್ಠ ರಾಷ್ಟ್ರಕೂಟರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಸ್ಥಳೀಕರು ಜಿನಗಲ್ಲೆಂದು ಕರೆಯುವ ಈ ಗೋಸಾಸ ಕಲ್ಲುಗಳ ಮೇಲೆ ಆನೆ, ಮೀನು ಹಂಸ, ಕಳಸಗಳ ಸುಂದರ ಉಬ್ಬು ಕೆತ್ತನೆಗಳಿವೆ. ಊರಲ್ಲಿ ಎರಡು ಶಾಸನಗಳಿವೆ. ಕ್ರಿ.ಶ. 1188ರ ವೀರಗಲ್ಲು ಶಾಸನ ಇಮ್ಮಡಿ ಬಲ್ಲಾಳನ ಕಾಲದ್ದಾಗಿದ್ದು ಬಿಲ್ಲವಳ್ಳಿಯ ತುರುಗಳನ್ನು ಬಿಡಿಸಿಕೊಂಡು ಹಿಂದಿರುಗುವಾಗ ಅಕ್ಕಸಾಲಿ ದಾಸೋಜನು ಮಡಿದ ವಿಷಯವನ್ನು ತಿಳಿಸುತ್ತದೆ. ಮತ್ತೊಂದು ಶಾಸನ ಚಕ್ಕಬಂದಿಕಲ್ಲಿನ ಮೇಲೆ ಬರೆಯಲ್ಪಟ್ಟಿದೆ.

ಊರಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಎರಡು ಗುಡಿಗಳಿವೆ. ಕಲ್ಲೇಶ್ವರ ಹಾಗೂ ಬಿಲ್ಲೇಶ್ವರ ಎಂದು ಕರೆಯಲ್ಪಡುವ ಈ ಗುಡಿಗಳು ಸು.ಕ್ರಿ.ಶ. 11ನೇ ಶತಮಾನದ ಶಿಲಾ ರಚನೆಗಳಾಗಿವೆ. ಈ ಎರಡರಲ್ಲಿ ಸ್ವಲ್ಪ ಚಿಕ್ಕದಾದ ಕಲ್ಲೇಶ್ವರ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ನವರಂಗದ ದೇವಕೋಷ್ಠದಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದಕ್ಕೆ ಕದಂಬನಾಗರ ಶಿಖರವಿದೆ. ಈ ಗುಡಿಯ ಬದಿಯಲ್ಲಿರುವ ಬಿಲ್ಲೇಶ್ವರ ಗುಡಿ ಕೂಡ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದ್ದರೂ ಇದು ಪಾರ್ಶ್ವ ಪ್ರವೇಶದ್ವಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದಲ್ಲಿ ಮೂರು ದೇವಕೋಷ್ಠಗಳಿದ್ದು ಅದರೊಳಗೆ ಕ್ರಮವಾಗಿ 4.5 ಅಡಿ ಎತ್ತರ ಉಮಾಮಹೇಶ್ವರ, ಆದಿತ್ಯ ಮತ್ತು ದೇವದಂಪತಿಗಳ (ಮೈಲಾರ - ಮಾಳಚಿ) ಶಿಲ್ಪಗಳಿವೆ. ನವರಂಗದ ನಡುವಣ ಛತ್ತಲ್ಲಿ ಸುಂದರವಾದ ಇಳಿಬಿಟ್ಟ ಕಮಲವಿದೆ. ಇದಕ್ಕೆ ಕದಂಬನಾಗರ

ಶಿಖರವಿದೆ. ಈ ಗುಡಿಯ ಹೊರಬದಿಯಲ್ಲಿ ಸುಂದರವಾದ ನಾಗಶಿಲ್ಪಗಳಿವೆ. ಇವುಗಳ ಜೊತೆಗೆ ಊರಲ್ಲಿ ಕರಿಯಮ್ಮ, ವೀರಭದ್ರ ಮಾತಂಗಿ, ಹನುಮಂತ ಹಾಗೂ ಮೈಲಾರಲಿಂಗನ ಗುಡಿಗಳಿವೆ; ಹಾಗೂ ಮಸೀದಿಯಿದೆ.

**ಬುಡರಸಿಂಗಿ** : ಹುಬ್ಬಳ್ಳಿ ತಾಲೂಕಿನ ಬುಡರಸಿಂಗಿಯು (ಜನಸಂಖ್ಯೆ 751) ಪ್ರಾಚೀನ ಶಾಸನದಲ್ಲಿ 'ಉಚ್ಚಂಗಿ' ಎಂದು ಉಲ್ಲೇಖಿತಗೊಂಡಿದೆ. ಈ ಊರು ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿ ಪುಣೆ-ಬೆಂಗಳೂರು ರಸ್ತೆಯಲ್ಲಿದ್ದು ಪ್ರಾಚೀನ ಕಾಲದಲ್ಲಿ ಹಲಸಿಗೆ-12000ಕ್ಕೆ ಸೆರಿದ ಕಂಪಣ ಸಬ್ಬಿ-30ರಲ್ಲಿ ಅಂತರ್ಗತವಾಗಿತ್ತು. ಈ ಊರಿಂದ ವರದಿಯಾಗಿರುವ ಕ್ರಿ.ಶ. 1258ರ ಶಾಸನ ಗೋವೆ ಕದಂಬ ಚಟ್ಟಯ್ಯನ ಆಳ್ವಿಕೆಯಲ್ಲಿ, ಸೊನ್ನಲಿಗೆಯ ಕಪಿಲ ಸಿದ್ಧಮಲ್ಲಿಕಾರ್ಜುನ ದೇವರಿಗೆ ಉಚ್ಚಂಗಿ (ಬುಡರಸಿಂಗಿ) ಗ್ರಾಮವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದು ಹನುಮಂತನ ಗುಡಿ ಬಳಿಯ ನಂದಿಕಂಬದ ಮೇಲಿದೆ. ಆದರೆ ಈ ಊರಲ್ಲಿ ಇತ್ತೀಚೆಗೆ ಪತ್ತೆಯಾಗಿರುವ ಶಾಸನಸ್ತ ತೀರ್ಥಂಕರ ಮೂರ್ತಿಯಿಂದಾಗಿ ಪ್ರಸಿದ್ಧಿಯಲ್ಲಿದೆ. ಊರ ಬಳಿಯ ಗುಡ್ಡದ ಮೇಲಿದ್ದ ಈ ಮೂರ್ತಿಯನ್ನು ಊರವರು ತಂದು ಊರ ನಡುವೆ ಇರುವ ಸಿದ್ದರಾಮೇಶ್ವರ ಗುಡಿಯ ಮುಖ-ಮಂಟಪದಲ್ಲಿ ಇಟ್ಟಿದ್ದಾರೆ. ಸುಮಾರು ನಾಲ್ಕಡಿ ಎತ್ತರವಿರುವ ಈ ಸ್ಥಾನಿಕ ತೀರ್ಥಂಕರ ಮೂರ್ತಿಯ ಶಿಲ್ಪದ ಬುಡದಲ್ಲಿ ಯಕ್ಷ - ಪದ್ಮಾವತಿಯರ ಕೆತ್ತನೆಯಿದೆ. ಇದರ ಪಾದಪೀಠದ ಮೇಲಿರುವ ಶಾಸನದಿಂದ ಚಾರುದೇಸಿ ಗಣದ ನಾಗಣಗೌಡನ ಸೇವಾರ್ಥವೆಂದು ಗೊತ್ತಾಗುತ್ತದೆ. ಇದರ ಬದಿಯಲ್ಲೇ ಸುಮಾರು 12ನೇ ಶತಮಾನದ ಚತುರ್ಭುಜ ವಿನಾಯಕನ ಶಿಲ್ಪವಿದ್ದು ಇದು ಮುಕ್ಕಾಗಿದೆ. ಊರ ಪ್ರವೇಶದಲ್ಲೇ ಇರುವ ಹನುಮಂತನ ಗುಡಿ ವಿಜಯನಗರ ಕಾಲದ್ದಾಗಿದ್ದು ಗರ್ಭಗೃಹ ಅಂತರಾಳ ಹಾಗೂ ನವರಂಗಗಳನ್ನುಳ್ಳ ಈ ಗುಡಿಯ ಗರ್ಭಗೃಹದಲ್ಲಿ ಏಳು ಅಡಿ ಎತ್ತರದ ಕಿರೀಟ ರಹಿತ ಹನುಮನ ಮೂರ್ತಿಯಿದೆ. ಗರ್ಭಗೃಹದ ಶಿಖರವನ್ನು ಕದಂಬನಾಗರ ಶೈಲಿಯ ಶಿಖರ ಅಲಂಕರಿಸಿದೆ. ಊರ ಹೊರವಲಯದಲ್ಲಿ ಇತ್ತೀಚಿನ ಬಸದಿಯೊಂದಿದೆ. ಗುಡ್ಡದ ಮೇಲೆ ಇನ್ನೂ ಅನೇಕ ಮೂರ್ತಿ ಶಿಲ್ಪಗಳಿವೆ ಎಂದು ಸ್ಥಳೀಕರು ಹೇಳುತ್ತಾರೆ. ಊರಲ್ಲಿ ಬಸವಣ್ಣ, ಸಿದ್ದರಾಮೇಶ್ವರ, ಎಲ್ಲಮ್ಮನ ಗುಡಿಗಳಿವೆ. ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾ ಕೂಡ ಇದೆ.

**ಬೆಂತೂರು** : ಗದಗ ತಾಲೂಕಿನ ಬೆಂತೂರು (ಜನಸಂಖ್ಯೆ 2,135) ಗದಗಿನಿಂದ ನೈರುತ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಬೆಣತೂರ', 'ಬೆನತೂರ', ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಹಿಂದೆ ಬೆಳ್ವೊಲ - 300ಕ್ಕೆ ಸೇರಿದ ಅಗ್ರಹಾರವಾಗಿತ್ತು. ಈ ಊರಿನ ಪ್ರಾಚೀನತೆಯನ್ನು ಕುರ್ತಕೋಟಿಯ ಕೂಟ ತಾಮ್ರ ಶಾಸನದಲ್ಲಿರುವ 'ಬೆನೆಯಿತವೂರ' ಎಂಬ ಉಲ್ಲೇಖದಿಂದ ಬಾದಾಮಿ ಚಾಲುಕ್ಯರಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು ಈ ಊರಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿವೆ. ಖಾಸಗಿ ಮನೆಯ ಮುಂದೆ ನಿಂತಿರುವ ರಾಷ್ಟ್ರಕೂಟ ಒಂದನೇಯ ಅಮೋಘವರ್ಷನ 864ರ ವೀರಮಾಸ್ತಿಗಲ್ಲು ಬಹಳ ಸುಂದರವಾದ ಶಿಲ್ಪಕೆತ್ತನೆಯನ್ನು ಹೊಂದಿದ್ದು, ವಿಶಿಷ್ಟವಾಗಿದೆ. ಆದರೆ ಅದರ ಮೇಲಿನ ಬರಹ ಬಹಳ ಹಾಳಾಗಿದೆ. ಹನುಮಂತ ಗುಡಿಯ ಮುಂದಿರುವ ಕ್ರಿ.ಶ. 1049ರ ವೀರಗಲ್ಲು ಶಾಸನ ಮಾದಿರಾಜನು ಗೋಗ್ರಹಣದಲ್ಲಿ ಆಕಳುಗಳನ್ನು ರಕ್ಷಿಸಿದ ವಿಷಯ ತಿಳಿಸಿದರೆ, ಶಂಭುಲಿಂಗದೇವಾಲಯದಲ್ಲಿರುವ 'ಕಂಬ ಶಾಸನ' ಇಮ್ಮಡಿ ಬಲ್ಲಾಳನ ಕ್ರಿ.ಶ. 1200 ಹಾಗೂ ಕ್ರಿ.ಶ. 1204 ರದ್ದಾಗಿದ್ದು, ಸ್ವಯಂಭೂ ದೇವರಿಗೆ ಬೇರೆ ಬೇರೆ ವ್ಯಕ್ತಿಗಳು ಸುವರ್ಣ ದಾನ ಮಾಡಿದ ವಿಷಯ ತಿಳಿಸುತ್ತದೆ. ಅಲ್ಲೇ ಇರುವ ಮತ್ತೊಂದು ಶಾಸನ ವೈಜವ್ವೆ ನಿರ್ಮಿಸಿದ ಕಂಬವೆಂದು ಉಲ್ಲೇಖಿಸುತ್ತದೆ. 1204ರ ಶಾಸನ, ಹಿರಿಯಕೆರೆಗೆ ದಾನಬಿಟ್ಟ ವಿಷಯ ತಿಳಿಸಿದರೆ, 1511ರ ಶಾಸನ ಸೋಮನಾಥಭಟ್ಟ ದಾನ ಪಡೆದ ವಿಷಯ ತಿಳಿಸುತ್ತದೆ. ಊರಲ್ಲಿ ಇರುವ ಶಂಭುಲಿಂಗೇಶ್ವರ ಗುಡಿ ಪ್ರಾಚೀನದ್ದಾಗಿದ್ದು ಶಾಸನೋಕ್ತ ಸ್ವಯಂಭೂಲಿಂಗ ಇದೇ ಆಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಪಂಚಶಾಖೆಯ ಬಾಗಿಲವಾಡವಿದೆ. ನವರಂಗದ ನಡುವಣ ಕಂಬಗಳು ಕಲ್ಯಾಣದ ಚಾಳುಕ್ಯ ಶೈಲಿಯವು. ನವರಂಗದಲ್ಲಿ ಸಪ್ತಮಾತೃಕಾ ಪಟ್ಟಿಕೆಯಿದೆ. ಜೀರ್ಣೋದ್ಧಾರಗೊಂಡಿರುವ ಈ ಗುಡಿಗೆ ಇತ್ತೀಚಿನ ಶಿಖರವಿದೆ. ಇದರೊಂದಿಗೆ ಊರಲ್ಲಿ, ಬಸವಣ್ಣ, ಹನುಮಂತ, ದ್ಯಾಮವ್ವ, ದುರ್ಗವ್ವ, ಮರಿಯವ್ವನ ಗುಡಿಗಳು ಹಾಗೂ ಬೂದಿಸ್ವಾಮಿ ಮಠವಿದೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಬೆಟ್ಟಕೆರೂರು** : ಹಿರೇಕೆರೂರು ತಾಲೂಕಿನ ಬೆಟ್ಟಕೆರೂರು (ಜನಸಂಖ್ಯೆ : 1,878) ಶಾಸನೋಕ್ತ 'ಕೆರೆವೂರು' ಆಗಿದೆ. ಭೌಗೋಳಿಕವಾಗಿ ಎರಡು ಗುಡ್ಡಗಳ ನಡುವಿರುವ ಕೆರೆಯ ಬದಿಯಲ್ಲಿ ಇರುವ ಸುಂದರ ಊರಾಗಿದೆ. ಆದುದರಿಂದ ಈ ಊರಿಗೆ ಬೆಟ್ಟಕೆರೆ ಊರು ಎಂದು ಕರೆಯಲಾಗುತ್ತದೆ. ಬಲಭಾಗದ ಬೆಟ್ಟದ ಮೇಲೆ ರಾಮಲಿಂಗೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ,

ಅರ್ಧಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿರುವ ಶಿವಲಿಂಗವು ರಾಷ್ಟ್ರಕೂಟ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಗರ್ಭಗೃಹದ ದ್ವಾರಬಂಧವು ಚತುಶಾಖಾಲಂಕೃತವಾಗಿದ್ದು ನಡುವೆ ಆನೆ, ಗಂಧರ್ವ, ಸಿಂಹ, ನರ್ತಕಿಯರ ಕಿರುಶಿಲ್ಪವನ್ನು ಹೊಂದಿದೆ. ಗರ್ಭಗೃಹವನ್ನು ಇಟ್ಟಿಗೆಯಿಂದ (ರಾಷ್ಟ್ರಕೂಟ ರಚನೆ) ಕಟ್ಟಿರುವುದು ವ್ಯಕ್ತವಾಗುತ್ತದೆ. ಅರ್ಧಮಂಟಪದಲ್ಲಿ ವಿಷ್ಣು (ಕಟೀ ಹಸ್ತ ವಿಷ್ಣು)ವನ್ನು ಸೂರ್ಯಪೀಠದ ಮೇಲೆ ಸ್ಥಾಪಿಸಲಾಗಿದೆ. ನವರಂಗದಲ್ಲಿ ಉಮಾಮಹೇಶ್ವರನ ಶಿಲಾಕೃತಿಯಿದೆ. ದೇವಾಲಯದ ಹೊರಗೆ ಮಹಿಷಮರ್ಧಿನಿಯ ಶಿಲ್ಪವಿದೆ. ಇದರ ಸಮೀಪವೇ ಮರದ ಕೆಳಗೆ ಇನ್ನೊಂದು ಸೂರ್ಯಪೀಠವಿದೆ. ಬೆಟ್ಟದ ಕೆಳಗೆ ಎರಡು ಗುಡಿಗಳಿದ್ದು ಒಂದರಲ್ಲಿ ಒಂದು ಮೀಟರ್ ಎತ್ತರದ ಎರಡು ದೇವಿಮೂರ್ತಿಗಳಿವೆ. ಬಹುಶಃ ಸಪ್ತಮಾತೃಕೆ (ಸ್ಥಳೀಯವಾಗಿ ಮರೆಯವ್ವ ಹಾಗೂ ದುರ್ಗಾ ಎರಡು ಮೀಟರ್ ಎತ್ತರದ ಶಿಲ್ಪ)ಯರಲ್ಲಿ ಒಂದಾಗಿರಬಹುದು. ಎರಡನೆಯದು ನಾಲ್ಕು ಕೈಯುಳ್ಳ ಚಾಮುಂಡಿ (ಪೀಠದಲ್ಲಿ ಸರಿ ಇದೆ)ಯಾಗಿದ್ದು ರಾಷ್ಟ್ರಕೂಟರ ಕಾಲದ ಮೂರ್ತಿ ಇರಬಹುದು. ಕೆರೆದಂಡೆಯಲ್ಲಿ ಈ ಗುಡಿಗಳ ಹತ್ತಿರ ಒಂದು ಕಲ್ಲು ಮಂಟಪದಲ್ಲಿ ಚಾಳುಕ್ಯ ಲಿಂಗವಿದ್ದು ಚೌಕಪಾಣಿಪೀಠದ ಮೇಲಿದೆ. ಕೆರೆಯ ತೂಬಿಗೆ ಶಾಸನವಿದ್ದು ಗಜಲಕ್ಷ್ಮಿಯ ಶಿಲ್ಪವಿದೆ. ಈ ಶಾಸನವು ಸು. 1117ರ ದಿನಾಂಕವನ್ನು ಹೊಂದಿದೆ. ಊರಲ್ಲಿರುವ ಇತರ ದೇವಾಲಯಗಳೆಂದರೆ, ಹನುಮಂತ, ವೀರಭದ್ರ, ದ್ಯಾಮವ್ವ, ದುರ್ಗವ್ವ ಹಾಗೂ ಗಣಪತಿ. ವೀರಭದ್ರ ಗುಡಿಯ ಎದುರಿಗೆ ವೀರಗಲ್ಲಿದೆ. ಇದು ರಾಷ್ಟ್ರಕೂಟ ಅಕಾಲವರ್ಷನ ಕಾಲದ್ದಾಗಿದ್ದು (ಕ್ರಿ.ಶ. 9 ) ಅಸ್ಪಷ್ಟವಾಗಿದೆ. ದ್ಯಾಮವ್ವನ ಗುಡಿಯ ಪಕ್ಕದಲ್ಲಿ ಇನ್ನೊಂದು ಶಾಸನವಿದ್ದು ಕ್ರಿ.ಶ. 1250ರಲ್ಲಿ ಮಹಾಪ್ರಧಾನ ಇಮ್ಮಡಿ ದೋರದಣ್ಣಾಯಕನಿಂದ ಕೆರೆವೂರ ಚಂಡೇಶ್ವರ ದೇವಿಗೆ ಬಿಟ್ಟ ಭೂದಾನವನ್ನು ತಿಳಿಸುತ್ತದೆ.

**ಬೆನಕನಕೊಂಡ** : ರಾಣೆಬೆನ್ನೂರು ತಾಲೂಕಿನ ಬೆನಕನಕೊಂಡ (ಜನಸಂಖ್ಯೆ 3,106) ರಾಣೆಬೆನ್ನೂರಿನಿಂದ ನೈರುತ್ಯಕ್ಕೆ 11 ಕಿ.ಮೀ. ದೂರದಲ್ಲಿದೆ. ಈ ಊರು ಬಾದಾಮಿ ಚಾಲುಕ್ಯ - ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದುದು. ವಡ್ಡರ ಕೇರಿಯಲ್ಲಿರುವ ಕ್ರಿ.ಶ. 703-04ರ ವೀರಗಲ್ಲು ಶಾಸನ ಹಾಗೂ ಶಂಕರಕಟ್ಟೆ ಬಳಿಯಿರುವ ರಾಷ್ಟ್ರಕೂಟರ ಕಾಲದ ಮೂರು ವೀರಗಲ್ಲುಗಳು ಇದನ್ನು ಪುಷ್ಟೀಕರಿಸುತ್ತವೆ. ಕಲ್ಯಾಣದ ಚಾಲುಕ್ಯರ ಕಾಲದ (1033) ಶಾಸನದಿಂದ ಇದು ಸತ್ತಳಿಗೆ - 70ಕ್ಕೆ ಸೇರಿತ್ತೆಂಬ ಅಂಶ ಗೊತ್ತಾಗುತ್ತದೆ. ಇದೇ ಶಾಸನ ಮಹಾದೇವರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1303ರ ಇಮ್ಮಡಿ ಬಲ್ಲಾಳನ ಶಾಸನ ಊರ ಕೆರೆಯನ್ನು ಬಲಿಷ್ಠಗೊಳಿಸಲು ಗಂಗನ ಗಳೆಯಲ್ಲಿ ಮೂರು ಮತ್ತರು ಭೂಮಿಯನ್ನು, ಊರಲ್ಲಿ 30 ಕೈಯ ನಿವೇಶನವನ್ನು ಕೊಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1284ರ ಮತ್ತೊಂದು ಶಾಸನ ಒಡೆಯನಿಗೆ ಕೊಟ್ಟ ಭಾಷೆಯಂತೆ ಚಟ್ಟಯ್ಯನಾಯಕ ಮತ್ತು ಆತನ ಮಡದಿ ತಲೆಕೊಟ್ಟ ಅಂಶವನ್ನು ತಿಳಿಸುತ್ತದೆ. ಆದರೆ ಈ ಶಾಸನಗಳಲ್ಲಿ 'ಬೆನಕನಕೊಂಡ'ದ ಉಲ್ಲೇಖವಿರದೆ 'ಅಗ್ರಹಾರ ಬೆಳಗಲಿ'ಯ ಉಲ್ಲೇಖವಿದೆ. 'ಬೆಳಗಲಿ'ಯೆ ಬೆನಕನಕೊಂಡದ ಪ್ರಾಚೀನ ಹೆಸರೆಂದು ಖಚಿತವಾಗಿ ಹೇಳಲು ಬಾರದಾಗಿದೆ.

ಊರ ಹೊಂಡದ ಬಳಿಯಲ್ಲೇ ಇರುವ ಕಲ್ಲೇಶ್ವರ ಗುಡಿ (ಶಾಸನೋಕ್ತ ಮಹಾದೇವ) ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಇದರ ನವರಂಗದಲ್ಲಿ ತೆರೆದ ಅಂಕಣವಿದ್ದು ಇದರಲ್ಲಿ ಮಹಿಷಮರ್ದಿನಿ, ಸಪ್ತಮಾತೃಕಾ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹ, ಅಂತರಾಳದ ಬಾಗಿಲವಾಡಗಳು ಸರಳವಾಗಿದ್ದು, ಅಂತರಾಳದ ದ್ವಾರಬಂಧಕ್ಕೆ ಜಾಲಾಂಧ್ರವಿದೆ. ನವರಂಗದಲ್ಲಿ ಚಾಳುಕ್ಯ ಕಂಬಗಳಿವೆ. ಈ ಗುಡಿಯ ಮುಂಬದಿಯಲ್ಲೆ ಯಾದವ ರಾಮಚಂದ್ರನ ಕಾಲದ ಚಟ್ಟಯ್ಯನಾಯಕ ದಂಪತಿಯರ ಆತ್ಮಾಹುತಿ ಕಲ್ಲಿದ್ದು, ಇದರ ಬಲಬದಿಯಲ್ಲೇ ಮಾಸ್ತಿ ತೋಳನ್ನು ಕೆತ್ತಿರುವುದು ಗಮನಿಸಬೇಕಾದ ಅಂಶವಾಗಿದೆ. ಈ ಗುಡಿಯ ಬದಿಯಲ್ಲೇ ಇರುವ ವಿನಾಯಕನ ಗುಡಿಯಲ್ಲಿ ಚತುರ್ಭುಜ ಗಣಪತಿ ಶಿಲ್ಪವಿದೆ. ಈ ಗುಡಿ ಮತ್ತು ಇದರ ಬಳಿಯಿರುವ ಹೊಂಡದಿಂದಾಗಿ ಊರಿಗೆ 'ಬೆನಕನಹೊಂಡ' ಎಂಬ ಹೆಸರು ಬಂದಿರಬೇಕೆಂದು ತೋರುತ್ತದೆ. ಈ ಗುಡಿ ಬಳಿಯಲ್ಲೆ ಕರಿಯಮ್ಮನ ಗುಡಿಯಿದ್ದು ದುರ್ಗಿ ಹಾಗೂ ಪಾರ್ವತಿಯರ ಶಿಲ್ಪಗಳಿವೆ. ಹನುಮಂತನ ಗುಡಿಯಲ್ಲಿ ಸು.10ನೇ ಶತಮಾನದ ಚಾಮುಂಡಿಯ ಶಿಲ್ಪವಿದೆ. ಇದಲ್ಲದೆ ಊರಲ್ಲಿ ಬಸವಣ್ಣಗುಡಿಯಿದ್ದು, ಇದರ ತೇರು ಬಹಳ ಆಕರ್ಷಕವಾಗಿದೆ. ಇಲ್ಲಿನ ಸಿದ್ಧಾರೂಢರ ಮಠದಲ್ಲಿರುವ ಸಿದ್ಧರೂಢರ ಪ್ರತಿಮೆ ಬಹಳ ಆಕರ್ಷಕವಾಗಿದೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳಿವೆ.

**ಬೆಲಹೋಡ** : ಗದಗ ತಾಲೂಕಿನ ಬೆಲಹೋಡವು (ಜನಸಂಖ್ಯೆ 1,845) ಗದಗಿನಿಂದ ವಾಯುವ್ಯಕ್ಕೆ 18 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಬೆಳಹೊಡೆ', 'ಬೆಳ್ವೊಡೆ', 'ಬೆಳುಪಾಡಿ', ಎಂದು ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬೆಳ್ವೊಲ - 300ಕ್ಕೆ ಸೇರಿತ್ತು. ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ರಾಷ್ಟ್ರಕೂಟ ಜಗತ್ತುಂಗನ ಕಾಲಕ್ಕೆ ಸೇರಿದ ಶಾಸನ ಈಶ್ವರಗುಡಿಯ ಬಳಿಯಿದ್ದು ವಿಚಮ್ಮ ಹಾಗೂ ಎರವಾಸನು ಗೋಸಹಸ್ರ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ಕಲಚೂರಿ ಸೋವಿದೇವನ ಕ್ರಿ.ಶ. 1173ರ ಶಾಸನ ಮೂಲಸ್ಥಾನದೇವಾಲಯದ ಆದಿತ್ಯದೇವನಿಗೆ ರಾಯರಸನು ದಾನ ಬಿಟ್ಟ ವಿಷಯ ತಿಳಿಸಿದರೆ, ಕಲಚೂರಿ ಸಂಕಮನ ಕ್ರಿ.ಶ. 1178ರ ಶಾಸನದಲ್ಲಿ ದಂಡನಾಯಕ ಧನ್ನುಗಿದೇವಾದಿಗಳು ಊರ ದೇವಿಂಗೆರೆಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಊರ ನಡುವೆ ಎತ್ತರವಾದ ಸ್ಥಳದಲ್ಲಿ ಕಿರಿದಾದ ಈಶ್ವರಗುಡಿಯಿದೆ. ಮೇಲಿನ ಶಾಸನೋಕ್ತ ಮೂಲಸ್ಥಾನದೇವರ ಗುಡಿ ಇದೇ ಆಗಿದೆ. ಇಂದು ಪೂರ್ಣ ಶಿಥಿಲವಾಗಿರುವ ಈ ಗುಡಿಯ ಗರ್ಭಗೃಹವಷ್ಟೆ ಉಳಿದಿದ್ದು, ಗರ್ಭಗೃಹದಲ್ಲಿ ಮಧ್ಯಮ ಪ್ರಮಾಣದ ಶಿವಲಿಂಗವಿದ್ದು, ಮುಂದೆ ನವರಂಗವಿದ್ದ ಸ್ಥಳದಲ್ಲಿ ನಂದಿಯಿದೆ. ಈ ಗುಡಿಯ ಪರಿಸರದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಸೂರ್ಯಮೂರ್ತಿ, ಉಮಾ-ಮಹೇಶ್ವರ ಹಾಗೂ ನಾರಾಯಣರ ಭಗ್ನ ಶಿಲ್ಪಗಳಿವೆ. ಇವುಗಳಲ್ಲಿ ಚತುರ್ಬಾಹು ಶಿವನ ತೊಡೆಯ ಮೇಲೆ ಕುಳಿತಿರುವ ದ್ವಿಬಾಹು ಪಾರ್ವತಿಯಿರುವ ಉಮಾಮಹೇಶ್ವರ ಮೂರ್ತಿ ಬಹಳ ಸುಂದರವಾಗಿದೆ. ಈ ಗುಡಿಯ ಬಳಿಯಲ್ಲೇ ಆರು ಗೋಸಾಸ ಕಲ್ಲುಗಳಿವೆ. ಊರ ಬಯಲಲ್ಲಿರುವ ಬಸವಣ್ಣನ ಗುಡಿ ಜೀರ್ಣೋದ್ಧಾರಗೊಂಡಿದ್ದು, ಇಲ್ಲಿನ ಶಿವಲಿಂಗ, ನಂದಿಗಳು ಪ್ರಾಚೀನವಾಗಿವೆ. ಹನುಮಂತನ ಗುಡಿ ಬಳಿ ಇರುವ ವಿಷ್ಣು ಶಿಲ್ಪ ಮುಕ್ಕಾಗಿದ್ದು, ಇದರ ಪ್ರಭಾವಳಿಯಲ್ಲಿ ದಶಾವತಾರದ ಕೆತ್ತನೆಗಳಿವೆ. ಇಲ್ಲೇ ಪೀಠಸ್ಥ ಚತುರ್ಮುಖ ಬ್ರಹ್ಮ ಶಿರವಿರುವ ಶಿಲ್ಪವಿದೆ. ಇವುಗಳ ಜೊತೆಗೆ ಊರಲ್ಲಿ ಗ್ರಾಮದೇವತೆ, ದುರ್ಗಮ್ಮ, ಚಂದದೇವಿ, ದ್ಯಾಮವ್ವ, ಹಾಗೂ ಕರಿಯಪ್ಪನ ಗುಡಿಗಳಿದ್ದು ಸಿದ್ಧರೂಢ ಮಠವೂ ಇದೆ. ಊರಲ್ಲಿ ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇದೆ. ಇವು ಆಧುನಿಕ ರಚನೆಗಳು.

**ಬೆಳಗಲಿ** : ಹುಬ್ಬಳ್ಳಿ ತಾಲೂಕಿನ ಬೆಳಗಲಿಯು ಹುಬ್ಬಳ್ಳಿಯಿಂದ ದಕ್ಷಿಣಕ್ಕೆ 12 ಕಿ.ಮೀ. ದೂರದಲ್ಲಿದೆ. ಈ ಊರು, ಹಿಂದೆ ಹಲಸಿಗೆ-12,000ಕ್ಕೆ ಸೇರಿದ ಕಂಪಣ ಸಬ್ಬಿ-30ರಲ್ಲಿ ಅಂತರ್ಗತವಾಗಿತ್ತು. ಈ ಊರಲ್ಲಿ ಹರಡಿಕೊಂಡಿರುವ ರಾಷ್ಟ್ರಕೂಟ ಅವಶೇಷಗಳಿಂದ ಈ ಊರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ 1042ರ ಇಮ್ಮಡಿ ಜಯಸಿಂಹನ ಶಾಸನ ಸಬ್ಬಿನಾಡಿನಲ್ಲಿ ಕದಂಬ ಅರಸನೊಬ್ಬ ಕೆರೆ ಕಟ್ಟಿಸಿ ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಸುಮಾರು 12ನೇ ಶತಮಾನದ ವೀರಗಲ್ಲು ಶಾಸನ, ಹೋರಾಡಿ ಮಡಿದ ವೀರನ ಕುಟುಂಬಕ್ಕೆ ಗಾವುಂಡ ಹಾಗೂ ಎಂಟು ಹಿಟ್ಟುಗಳು ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಊರ ನಡುವೆ ಇರುವ ಕಲ್ಲಪ್ಪನ ಗುಡಿ ಮುಂದೆ ಇರುವ ಗಜಲಕ್ಷ್ಮಿ ಬಹಳ ಸುಂದರವಾಗಿದ್ದು, ಪದ್ಮಪೀಠದ ಮೇಲೆ ಕುಳಿತ ಲಕ್ಷ್ಮಿಯ ಶಿರದ ಮೇಲೆ ಕುಂಭಾಭಿಷೇಕದಲ್ಲಿ ತೊಡಗಿರುವ ಆನೆಗಳ ಕೆತ್ತನೆಯಲ್ಲಿ ಶಿಲ್ಪಿ ನೈಜತೆಯನ್ನು ಮೆರೆದಿದ್ದಾನೆ. ಈ ಗುಡಿಯ ಬಳಿಯಲ್ಲಿ ಸುಮಾರು ಕ್ರಿ.ಶ. 10ನೇ ಶತಮಾನದ ನಾಲ್ಕು ಸಾಲಿನ ಶಾಸನವಿದೆ.

ಊರ ಹನುಮಂತನ ಗುಡಿಯಲ್ಲಿ ಅಭಯಮುದ್ರೆಯಲ್ಲಿರುವ ಆಭರಣಗಳಿಂದ ಅಲಂಕೃತವಾದ ಹನುಮಂತನ ಶಿಲ್ಪ ಚೆನ್ನಾಗಿದೆ. ಬಸವಣ್ಣನ ಗುಡಿಯ ಹಿಂಬದಿಯಲ್ಲಿ ರಾಷ್ಟ್ರಕೂಟರ ಕಾಲದ ಗೋಸಾಸಕಲ್ಲಿದ್ದು ಇದರ ಮೇಲೆ ಕಮಲದ ಕೆತ್ತನೆಯಿದೆ. ಈ ಗುಡಿಯ ಮುಂಬದಿಯಲ್ಲಿ ಸಣ್ಣಪ್ರಮಾಣದ ಆಕರ್ಷಕ ಸಪ್ತಮಾತೃಕಾಪಟ್ಟಿಕೆಯಿದೆ. ಈ ಗುಡಿ ಎದುರಿರುವ ಜೋಡಿ ಬಸವಣ್ಣ ಮೂರ್ತಿಗಳಲ್ಲಿ ಒಂದು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆ. ಬಸವಣ್ಣನ ಗುಡಿ ಬಳಿ ತೀರ್ಥಂಕರ ಪೀಠವಿದೆ.

ಊರಲ್ಲಿರುವ ಮಸೀದಿ ಬಳಿ ಶರೀಫ್ ಅಜ್ಜ ಹಾಗೂ ಗೋವಿಂದಜ್ಜನ ಗದ್ದುಗೆಗಳಿವೆ. ಶಿಶುವಿನಹಾಳದಲ್ಲಿ ಜಾತ್ರೆ ನಡೆಯುವುದಕ್ಕೆ ಎಂಟು ದಿನ ಮೊದಲು, ಇಲ್ಲಿ ಜಾತ್ರೆಯಾಗುತ್ತಿದ್ದು, ಶರೀಫರ ರಥವನ್ನು ಎಳೆಯುತ್ತಾರೆ. ಮಾರನೆಯ ದಿನ ಕಡುಬಿನ ಕಾಳಗವೂ ನಡೆಯುತ್ತದೆ. ಊರ ಹೊರಗೆ ಹೊಲದಲ್ಲಿ ಹೊನ್ನಮ್ಮನ ಗುಡಿ ಎಂಬ ಸ್ಥಳದಲ್ಲಿ 7-8 ಕಾಡುಗಲ್ಲುಗಳಿದ್ದು, ಇವು ಸಪ್ತಮಾತೃಕಾ ಆರಾಧನೆಯ ಪ್ರಾಚೀನ ರೂಪವಾಗಿರುವಂತೆ ತೋರುತ್ತದೆ. ಇದನ್ನು ಅಣ್ಣ - ತಮ್ಮನ ಕಲ್ಲೆಂದೂ ಸ್ಥಳಿಕರು ಕರೆಯುತ್ತಾರೆ. ಇವುಗಳ ಜೊತೆಗೆ ಊರಲ್ಲಿ ಬೀರದೇವರು, ಹನುಮಪ್ಪ, ದುರ್ಗವ್ವ, ದ್ಯಾಮವ್ವ, ಶಿವಪಾರ್ವತಿ ಹಾಗೂ ಕರಿಯವ್ವನ ಗುಡಿಗಳಿವೆ. ಈ ಊರಲ್ಲಿ ಒಂದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾ ಇದ್ದು, ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಬೆಳಧಡಿ** : ಗದಗ ತಾಲೂಕಿನ ಬೆಳಧಡಿಯು (ಜನಸಂಖ್ಯೆ : 3,425) ಗದಗಿನಿಂದ 17 ಕಿ.ಮೀ. ದೂರದಲ್ಲಿದ್ದು ನಾಗಾವಿಯ ಮೂಲಕ (5 ಕಿ.ಮೀ.) ಸುಲಭವಾಗಿ ತಲುಪಬಹುದಾದಂತಹ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿರುವ ಮುಖ್ಯ ಸ್ಮಾರಕ ಬಸವಣ್ಣದೇವರ

ಗುಡಿ (1980), ಶ್ರೀರಾಮಮಂದಿರ (ಇತ್ತೀಚಿನದು), ಮಾರುತಿ, ಕಾಳಿಕಾದೇವಿ ಮುಂತಾದವುಗಳು. ಬಸವಣ್ಣದೇವರಗುಡಿಯು ಸಾಧಾರಣವಾದ ಕಟ್ಟಡವಾಗಿದ್ದು ಕೇವಲ ಗರ್ಭಗೃಹ ಮಾತ್ರ ಇದ್ದು ಒಳಗಡೆ ಪ್ರಾಚೀನವೆನ್ನಬಹುದಾದ ಶಿವಲಿಂಗವಿದೆ. ಈ ಗುಡಿಯ ಹೊರಗಡೆ ಒಂದು ವೀರಗಲ್ಲಿದೆ. ಬಸವಣ್ಣನ ಗುಡಿಯ ಪಕ್ಕದಲ್ಲಿರುವ ರಸ್ತೆಯಿಂದಾಚೆಗೆ ಚರಂಡಿಯ ಪಕ್ಕದಲ್ಲಿ ಧ್ಯಾನಾಸಕ್ತನಾಗಿರುವ ಶೈವ ಮೂರ್ತಿ ಇದ್ದು ಕೈ ಮತ್ತು ಕೊರಳಲ್ಲಿ ರುದ್ರಾಕ್ಷಿ ಮಾಲೆ ಹಾಗೂ ಕೆಳ ಉಡುಪಾಗಿ ಪಂಚೆಯಂಥ ಉಡುಪನ್ನು ಕೆತ್ತಲಾಗಿದೆ. ಇದನ್ನು ಸ್ಥಳೀಯವಾಗಿ ಬೇಡರಕಣ್ಣಪ್ಪ ಎನ್ನುತ್ತಾರೆ. ಇದರ ಪಕ್ಕದಲ್ಲೆ ಜೈನ ತೀರ್ಥಂಕರ ಬಿಂಬವಿರುವ ಒಂದು ಕಲ್ಲು (ಬಹುಶಃ ನಿಷಿಧಿ) ಇದೆ. ಊರಿನ ಮಧ್ಯದಲ್ಲಿ ಶ್ರೀರಾಮಮಂದಿರ (ಖಾಸಗಿ)ವಿದ್ದು ಇದನ್ನು ಜಾಲಿಹಾಳ ಬ್ರಹ್ಮಾನಂದ ಯತಿಗಳು ನೂರು ವರ್ಷದ ಹಿಂದೆ (ಬ್ರಹ್ಮ ಚೈತನ್ಯರ ಅನುಯಾಯಿಗಳು) ನಿರ್ಮಿಸಿದರೆಂದು ಪ್ರತೀತಿ ಇದೆ. ಈ ರಾಮಮಂದಿರವು ಹಿಂಭಾಗದಲ್ಲಿ ಕಲ್ಯಾಣದ ಚಾಳುಕ್ಯರ ಶೈಲಿಯ ಗರ್ಭಗೃಹ ಮಾತ್ರವಿರುವ ಈಶ್ವರ ದೇವಾಲಯವಿದೆ. ಪ್ರತೀವರ್ಷ ಶ್ರೀರಾಮನವಮಿಯಂದು ರಾಮಮಂದಿರದಲ್ಲಿ ವಿಶೇಷ ಪೂಜೆಗಳು ನಡೆಯುತ್ತದೆ. ಊರಿನ ಮಾರುತಿ ಗುಡಿಯ ಮುಂಭಾಗದಲ್ಲಿ ಸು. 10ನೇ ಶತಮಾನದ ಕಂಬಗಳು ನೆಲದಲ್ಲಿ ಹೂತಿವೆ. ಶ್ರೀ ಕಾಳಿಕಾದೇವಿ ದೇವಾಲಯದ ಮುಂಭಾಗದಲ್ಲಿ ನಿಷಿಧಿ ಕಲ್ಲಿದೆ. ಈ ಕಲ್ಲಿನಲ್ಲಿ ಶಾಸನವಿದೆಯೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಕಲ್ಲು ಬೋರಲು ಬಿದ್ದಿದ್ದು ನೆಲದಲ್ಲಿ ಹೂತು ಹೋಗಿದೆ.

**ಬೆಳವಟಗಿ :** ನವಲಗುಂದ ತಾಲೂಕಿನ ಬೆಳವಟಗಿಯು (ಜನಸಂಖ್ಯೆ : 2,427) ಪ್ರಾಚೀನ ಶಾಸನಗಳಲ್ಲಿ ಬೆಳ್ಳಿಟ್ಟಗೆ ಎಂದು ಉಲ್ಲೇಖಿತಗೊಂಡಿರುವ ಊರು. ಇದು ನವಲಗುಂದದಿಂದ ಉತ್ತರಕ್ಕೆ 10 ಕಿ.ಮೀ. ದೂರದಲ್ಲಿದ್ದು ಹಿಂದೆ ಬೆಳ್ವೊಲ-300 ಕ್ಕೆ ಸೇರಿದ ನವಿಲಗುಂದ-40ಕ್ಕೆ ಸೇರಿತ್ತೆಂದು ತೋರುತ್ತದೆ. ವಿಜಯನಗರದರಸರ ಕಾಲದಲ್ಲಿ ಇದು ತೊರಗಲೆ ಸೀಮೆಗೆ ಸೇರಿತ್ತೆಂಬ ಸಂಗತಿ ಸದಾಶಿವರಾಯನ ಕ್ರಿ.ಶ. 1547ರ ಶಾಸನದಿಂದ ಗೊತ್ತಾಗುತ್ತದೆ. ಇಲ್ಲಿಂದ ಮೂರು ಶಾಸನಗಳು ವರದಿಯಾಗಿದ್ದು, ರಾಮಲಿಂಗ ದೇವರ ಗುಡಿ ಮುಂದಿರುವ ಕಲ್ಯಾಣದ ಚಾಳುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1093ರ ಶಾಸನ, ನಾಗಲೋಕದಲ್ಲಿನ ನಾಗಮಂದಿರದಂತೆ ಬೆಳ್ಳಿಟ್ಟಗೆಯಲ್ಲಿ ಬೈರುಂಬರ ಮಲ್ಲಿಮಯ್ಯನು ಬೈರುಂಬೇಶ್ವರ ದೇವಾಲಯ ಕಟ್ಟಿಸಿ, ಅಲ್ಲಿನ ಬೈರುಂಬೇಶ್ವರ ಹಾಗೂ ಸರಸ್ವತಿ ದೇವತೆಗಳಿಗೆಂದು ಅರವತ್ತು ಮತ್ತರು ಭೂಮಿಯನ್ನು ಊರ ಹನ್ನೆರಡು ಗೌಂಡರ ವಶಕ್ಕೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸದಾಶಿವರಾಯನ ಕ್ರಿ.ಶ. 1547ರ ಶಾಸನವು ರಾಮರಾಜಯ್ಯ ವೆಂಕಟಾದ್ರಿ ಅರಸುಗಳು ನಾವಿದ ಕೊಂಡೋಜನಿಗೆ ಬಿಟ್ಟ ಬಿರಾಡಗಳನ್ನು ತೊರಗಲೆ ಸೀಮೆಯಲ್ಲಿ ಮನ್ನಾ ಮಾಡಿದ ವಿಷಯವನ್ನು ತಿಳಿಸುತ್ತದೆ. ಸರ್ವೆ ನಂ. 117ರಲ್ಲಿ ಇರುವ ಶಾಸನ ಕೆರೆಯನ್ನು ಅಗೆದ ವ್ಯಕ್ತಿಗಳಿಗೆ ನಿಡಿದ ದಾನದ ಬಗ್ಗೆ ತಿಳಿಸುತ್ತದೆ. ಊರಲ್ಲಿರುವ ರಾಮಲಿಂಗೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಎತ್ತರವಾದ ಸ್ಥಳದ ಮೇಲೆ ಇರುವ ಈ ಗುಡಿ ಗರ್ಭಗೃಹ ಹಾಗೂ ವಿಶಾಲವಾದ ಅರ್ಧಮಂಟಪವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಸುಮಾರು ಕ್ರಿ.ಶ. 11ನೇ ಶತಮಾನದ ಲಿಂಗವಿದೆ. ಶಾಸನೋಕ್ತ ಬೈರುಂಬೇಶ್ವರ ದೇವಾಲಯ ಇದೇ ಆಗಿದ್ದು ಶಾಸನ ಉತ್ಪ್ರೇಕ್ಷಿಸಿರುವಷ್ಟು ಸುಂದರವಾದ ರಚನೆ ಇದು ಆಗಿರಲಿಲ್ಲವೆಂದೇ ಹೇಳಬೇಕು. ಈ ಗುಡಿಯ ಮುಂದೆ ರಾಷ್ಟ್ರಕೂಟರ ಕಾಲದ ಎರಡು ವೀರಗಲ್ಲುಗಳಿದ್ದು, ಇದರಿಂದ ಈ ಊರು ರಾಷ್ಟ್ರಕೂಟರಷ್ಟು ಪ್ರಾಚೀನವಾದ ಊರೆಂದು ಅಭಿಪ್ರಾಯಪಡಬಹುದಾಗಿದೆ.

ಊರ ನಡುವೆ ಇರುವ ಹನುಮಂತನ ಗುಡಿ ಬಳಿಯಿರುವ ಚಾವಡಿಯಲ್ಲಿ (ವೀರಭದ್ರನ ಗುಡಿಯಲ್ಲಿ) ಪಂಚಲಿಂಗಗಳನ್ನು ಇಟ್ಟಿದ್ದಾರೆ. ಇದರ ಬದಿಯಲ್ಲೇ ವೀರಭದ್ರನ ಮೂರ್ತಿಯಿದೆ. ಅಯ್ಯನವರ ಮನೆ ಮುಂದೆ ಸುಮಾರು 10ನೇ ಶತಮಾನದ ಗಜಲಕ್ಷ್ಮಿ ಶಿಲ್ಪವಿದೆ. ಇಲ್ಲೇ ನಾಲ್ಕುಮುಖದ ಪೀಠಸ್ಥ ಚತುರ್ಮುಖ ಬ್ರಹ್ಮನ ಮೂರ್ತಿಯಿದೆ. ಇದರೊಂದಿಗೆ ಊರಲ್ಲಿ ವೀರಭದ್ರ, ಹನುಮಂತ, ಉಳವಿ ಬಸವಣ್ಣ, ಈಶ್ವರ, ನಾರಾಯಣ, ದೊಡ್ಡಬಸಪ್ಪ, ಭರುಮಪ್ಪ, ಮೈಲಾರ, ಕರಿಯಮ್ಮ, ದುರ್ಗವ್ವ ಹಾಗೂ ದ್ಯಾಮವ್ವನ ದೇವಾಲಯಗಳಿದ್ದು ರೇವಣಸಿದ್ದೇಶ್ವರ, ಶಿವಾನಂದ, ಕೋಣನಕೇರಿ ಹಾಗೂ ರಾಮಗಿರಿ ಮಠಗಳಿವೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಬೆಳವಣಿಕಿ :** ರೋಣ ತಾಲೂಕಿನ ಈ ಊರು (ಜನಸಂಖ್ಯೆ : 4,774) ರೋಣದಿಂದ ಸ್ವಲ್ಪ ನೈರುತ್ಯಕ್ಕೆ 17 ಕಿ.ಮೀ. ದೂರದಲ್ಲಿ ರೋಣ-ನರಗುಂದ ರಸ್ತೆಯಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಬೆಳ್ವಣಿಗೆ', 'ಬೆಳುವಣಿಕೆ' 'ಬೆಳುವಣಿಗೆ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿದ್ದು, 12 ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಬೆಳ್ವಣಿಕೆ-12 ಎಂದೇ ಚಾಲ್ತಿಯಲ್ಲಿತ್ತು. ಈ ಊರ ಬಳಿಯಿರುವ ಇರುವೆ ಹಳ್ಳದ ತೀರದಲ್ಲಿ ನವ ಶಿಲಾಯುಗದ ಪಳಿಯುಳಿಕೆಗಳು ಲಭಿಸಿವೆ. ಚಾರಿತ್ರಿಕವಾಗಿ

ಈ ಊರಿನ ಇತಿಹಾಸವನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ನೆರೆಯ ಕೌಜಗೇರಿ ಗ್ರಾಮದ 934ರ ಶಾಸನ, ಬೆಳ್ವಣಿಕೆಯಲ್ಲಿದ್ದ ಮಠವೊಂದಕ್ಕೆ ಕೌಜಗೇರಿಯ ಗೌಡ ಬಳ್ಳಜ್ಜನ್ನು ದಾನ ಬಿಟ್ಟ ವಿಷಯವನ್ನು ತಿಳಿಸುವುದರೊಂದಿಗೆ ಈ ಊರಿನ ಇತಿಹಾಸ ಆರಂಭವಾಗುತ್ತಿದ್ದು, ಈವರೆಗೆ ಇಲ್ಲಿಂದ ಎರಡು ಶಾಸನಗಳು ವರದಿಯಾಗಿವೆ. ಕ್ರಿ.ಶ. 943ರ ವೀರಗಲ್ಲು ಶಾಸನ ಯುದ್ಧದಲ್ಲಿ ಬಿರಿಯ ಎಂಬುವನು ನಿಧನ ಹೊಂದಿದ ಅಂಶವನ್ನು ತಿಳಿಸಿದರೆ, ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1102ರ ಶಾಸನ ಪಲಗೆಯ ಚಾವುಂಡಯ್ಯ ಹಾಗೂ ಅವನ ಹೆಂಡತಿ ಸಾಂತಿಕಬ್ಬೆ, ಸಭಾಮಂಟಪ ನಿರ್ಮಿಸಿ, ಮುತ್ತಲಗೆರೆಗೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ವೇಳೆಗಾಗಲೇ ಇದೊಂದು ಅಗ್ರಹಾರವಾಗಿ ಮಾರ್ಪಟಿದ್ದು, 84 ಮಹಾಜನರನ್ನು ಹೊಂದಿದ್ದ ಅಂಶವನ್ನು ಇದೇ ಶಾಸನ ತಿಳಿಸುತ್ತದೆ. ಊರಲ್ಲಿ ವೀರಭದ್ರನ ಗುಡಿ ಇದ್ದು ಅದರ ಪರಿಸರದಲ್ಲೇ ಸುಂದರವಾದ ಸಪ್ತಮಾತೃಕಾ ಪಟ್ಟಿಕೆ, ಮಹಿಷಮರ್ದಿನಿಮೂರ್ತಿ, ತೀರ್ಥಂಕರನ ಸಿಂಹಪೀಠಗಳಿದ್ದರೆ ಬಡಿಗೇರ ಓಣಿಯಲ್ಲಿರುವ ಗಾಳಿದುರ್ಗವ್ವನ ಗುಡಿಯಲ್ಲಿ ನಾಲ್ಕಡಿ ಎತ್ತರದ ಮಹಿಷ ಮರ್ದಿನಿ ಶಿಲ್ಪ ಸುಂದರವಾಗಿದೆ. ಇಲ್ಲೇ ಹಳೆಯ ಕಾಲದ ಲಿಂಗಗಳು, ನಂದಿ ಹಾಗೂ ಗಣಪತಿಯ ಶಿಲ್ಪಗಳಿವೆ.

ಊರ ನಡುವಿರುವ ವೀರಭದ್ರ ಗುಡಿ ಈ ಭಾಗದ ಅತ್ಯಂತ ಜನಪ್ರಿಯ ಗುಡಿಯಾಗಿದೆ. ಈ ಗುಡಿಯ ಗರ್ಭಗೃಹದಲ್ಲಿರುವ ಸುಂದರವಾದ ವೀರಭದ್ರದ ಮೂರ್ತಿ 16ನೇ ಶತಮಾನದ ಹಳೆಯ ವೀರಭದ್ರಮೂರ್ತಿಯ ಅನುಕರಣೆಯಾಗಿದೆ. ಈ ಶತಮಾನದಲ್ಲಿ ರಚಿತವಾಗಿರುವ ಇಲ್ಲಿನ ವೀರಭದ್ರ ಹಾಗೂ ನಂದಿಯ ಶಿಲ್ಪಗಳನ್ನು ಈಶ್ವರಪ್ಪ ಹೊನ್ನಪ್ಪ ಒಕ್ಕುಂದ (ಬಡಿಗೇರ್) ಎಂಬ ಸ್ಥಳೀಯ ಬಡಗಿ ನಿರ್ಮಿಸಿದ್ದು ಬಹಳ ಆಕರ್ಷಕವಾಗಿವೆ. ವೀರಭದ್ರನ ಹಳೆಯ ಮೂರ್ತಿ, ಗುಡಿ ಬದಿಯಲ್ಲಿರುವ ಕಲ್ಯಾಣ ಮಂಟಪದಲ್ಲಿದ್ದು ಅದಿಂದು ಮುಕ್ಕಾಗಿದೆ. ಸಮೀಪದ ಕಲ್ಮೇಶ್ವರ ಗುಡಿ ಬಳಿ ರಾಷ್ಟ್ರಕೂಟರ ಕಾಲದ ಎರಡು ವೀರಗಲ್ಲುಗಳಿವೆ. ಹಿಂದೆ ಅಗ್ರಹಾರವಾಗಿ ಮೆರೆದಿದ್ದ ಈ ಊರು ಇಂದು ಅನ್ನದಾನೇಶ್ವರ ಶಿಕ್ಷಣ ಸಂಸ್ಥೆಯನ್ನು ಹೊಂದಿದ್ದು ಸುತ್ತಮುತ್ತಲಿನ ಹಳ್ಳಿಗಳಿಗೆ ಈಗಲೂ ಇದೇ ವಿದ್ಯಾಕೇಂದ್ರವಾಗಿದೆ. ಇವುಗಳೊಂದಿಗೆ ಊರಲ್ಲಿಂದು ಕಲ್ಮೇಶ್ವರ, ದೊಡ್ಡೇಶ್ವರ, ನಂದಿಬಸವೇಶ್ವರ, ಮೈಲಾರಲಿಂಗ, ಹನುಮಂತ, ಹುಡೇದ ಲಕ್ಷ್ಮವ್ವ, ದ್ಯಾಮವ್ವ, ಹಾಗೂ ಮುಷಿಗೇರಿ ದ್ಯಾಮವ್ವನ ಗುಡಿಗಳಿವೆ. ಊರಲ್ಲಿ ಎರಡು ಮಸೀದಿ ಹಾಗೂ ಒಂದು ದರ್ಗಾ ಇವೆ.

**ಬೆಳವತ್ತಿ** : ಹಾನಗಲ್ ತಾಲೂಕಿನ ಈ ಊರು (ಜನಸಂಖ್ಯೆ : 749) ಶಾಸನೋಕ್ತ ಅಗ್ರಹಾರ ಬೆಳವಂತಿಯಾಗಿದ್ದು (ಹಾನಗಲ್‌ನಿಂದ 17 ಕಿ.ಮೀ.) ಜಿಲ್ಲೆಯಲ್ಲಿರುವ ಪ್ರಾಚೀನ ಸ್ಥಳಗಳಲ್ಲಿ ಒಂದಾಗಿದೆ. ಈ ಊರಿನ ಹಳೆ ಊರು ಇದ್ದ ಸ್ಥಳದಲ್ಲಿ ಒಂದು ಗುಡಿಯ ಕೆಲವು ಕಂಬಗಳು ಮಾತ್ರ ಒಂದು ಮಣ್ಣಿನ ದಿಬ್ಬದಲ್ಲಿ ಉಳಿದಿವೆ. ಇದರಲ್ಲಿ ಗರುಡ ಪೀಠವೂ ಇದೆ. ಕೆರೆ ದಂಡೆಯಲ್ಲಿ ಒಂದು ವೀರಗಲ್ಲು ಹಾಗೂ ಇನ್ನೊಂದು ಭಾರಿ ತ್ರಿಕೂಟಾಚಲವಿದ್ದಿರಬಹುದಾದ ದೇವಾಲಯದ ಅಪಾರ ಅವಶೇಷಗಳಿವೆ. ಇದನ್ನು ಸ್ಥಳೀಯವಾಗಿ ಗೋಕುಳೇಶ್ವರ ದೇವಾಲಯವಿದ್ದ ಸ್ಥಳವೆಂದು ಹೇಳಲಾಗುತ್ತದೆ. ವೃತ್ತಾಕಾರದ ನುಣುಪಾದ ಆರು ಕಂಬಗಳಿವೆ ಹಾಗೂ ಗರ್ಭಗೃಹದ ಭಾಗ ಎತ್ತರವಾದ ಅದಿಷ್ಠಾನವು ಕಂಡುಬರುತ್ತದೆ. ಗರ್ಭಗೃಹದ ಹಿಂದೆ ಹಲವು ಶಾಸನಗಳಿವೆ. ಮೊದಲ ಶಾಸನವು ಕಲ್ಯಾಣದ ಚಾಳುಕ್ಯ ಒಂದನೇಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1047) ಬನವಾಸಿ-12000, ಹಾನಗಲ್ಲು - 500 ಆಳುತ್ತಿದ್ದಾಗ ಮಯೂರವರ್ಮನು ಸ್ವಯಂಭೂ ದೇವಸ್ಥಾನಕ್ಕಾಗಿ ಕೊಟ್ಟ ದಾನವನ್ನು ತಿಳಿಸುತ್ತದೆ. ಅದೇ ಜಾಗದಲ್ಲಿರುವ ಕ್ರಿ.ಶ. 1054ರ ಶಾಸನವು ಹರಿಕೇಸರಿ ದೇವನು ಮಹಾಸಾಮಂತ ರಾಮದೇವನ ವಿನಂತಿಯ ಮೇರೆಗೆ ಅಗ್ರಹಾರ ಬೆಳವಂತಿಯ ಮನೆವಣವನ್ನು ಬಿಟ್ಟುಕೊಟ್ಟ ಉಲ್ಲೇಖವಿದೆ. ಮೂರನೇ ಶಾಸನವು ಕ್ರಿ.ಶ. 1067ರಲ್ಲಿ ಮಾಂಡಳಿಕ ಲಕ್ಕರಸನ ವಿನಂತಿಯಂತೆ ಗೋಗುಳೇಶ್ವರ (ಸ್ವಯಂಭೂ) ದೇವಾಲಯದ ಆಚಾರ್ಯ ಸೋಮೇಶ್ವರ ಪಂಡಿತರಿಗೆ ಎಲ್ಲೂರು ಗ್ರಾಮವನ್ನು ದಾನವನ್ನು ಬಿಟ್ಟ ಬಗೆಗೆ ತಿಳಿಸುತ್ತದೆ. ಬಸದಿ ಗುಡಿಯಲ್ಲಿರುವ ಶಾಸನವು ಕ್ರಿ.ಶ. 12ನೇ ಶತಮಾನದ ಕಾಲದ್ದಾಗಿದ್ದು ಮಾದವಯ್ಯನೆಂಬ ಅಧಿಕಾರಿಯಿಂದ ಕೆರೆಯ ನಿರ್ಮಾಣ ಹಾಗೂ ಗೋವಿಂದಯ್ಯನೆಂಬ ಇನ್ನೊಬ್ಬ ಅಧಿಕಾರಿಯಿಂದ ಮೂಲಸ್ಥಾನ ದೇವರಿಗೆ ದೀಪಕ್ಕೆ ಬಿಟ್ಟ ದಾನವನ್ನು ತಿಳಿಸುತ್ತದೆ. ಗೋಕುಳೇಶ್ವರ ದೇವರ ಹಿಂದೆ ಇರುವ ಇನ್ನೊಂದು ಶಾಸನವು ಸವಣೂರು ಬಮಿಸೆಟ್ಟಿ ಎಂಬ ಅಧಿಕಾರಿಯಿಂದ ಬೆಳವಂತಿ ಗ್ರಾಮದಲ್ಲಿ ಬ್ರಹ್ಮಜಿನಾಲಯ ನಿರ್ಮಾಣ ಹಾಗೂ ಬಿಟ್ಟ ದಾನದ ವಿವರಗಳನ್ನು ದಾಖಲಿಸುತ್ತದೆ. ಗೋಕುಳೇಶ್ವರ ದೇವಾಲಯದ ಪರಿಸರದಲ್ಲಿರುವ ಇನ್ನೊಂದು ಶಾಸನವು ಕ್ರಿ.ಶ. 11-12ನೇ ಶತಮಾನಕ್ಕೆ ಸೇರಿದ್ದು ಶ್ರೀಧರ ದಂಡನಾಯಕನಿಂದ ಹಿರಿಯ ಕೆರೆಯ ಜೀರ್ಣೋದ್ಧಾರಕ್ಕಾಗಿ ಬೆಳವಂತಿಯ ಮುನ್ನೂರ್ವರಿಗೆ ನೂರು ಗದ್ಯಾಣ ಹಾಗೂ ಮಹಾರಾಣಿಯಿಂದ ಗೋಕುಳೇಶ್ವರ ದೇವಾಲಯಕ್ಕೆ ಗುಂಡನಹಳ್ಳಿ ಗ್ರಾಮದಾನವನ್ನು ತಿಳಿಸುತ್ತದೆ.

**ಬೆಳ್ಳಟ್ಟಿ :** ಶಿರಹಟ್ಟಿ ತಾಲೂಕಿನ ಬೆಳ್ಳಟ್ಟಿಯು (ಜನಸಂಖ್ಯೆ 5,641) ಶಿರಹಟ್ಟಿಯಿಂದ ಆಗ್ನೇಯಕ್ಕೆ 17 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲೂ 'ಬೆಳ್ಳಟ್ಟಿ' ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಜೋಗಿಬಂಡೆ ಮೇಲಿರುವ ಕ್ರಿ.ಶ. 990ರ ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ಪೆರ್ಗಡೆ ಆಯ್ತವರ್ಮನು ಬೆಳಟ್ಟಿ ಗಣದ ಬಸದಿ ನಿರ್ಮಿಸಿದ ಅಂಶವನ್ನು ತಿಳಿಸಿದರೆ, ಹೊಯ್ಸಳ ಇಮ್ಮಡಿ ನರಸಿಂಹನ ಕಾಲದ ಶಾಸನ, ಬೆಳಟ್ಟಿಯ ಬ್ರಹ್ಮಪುರಿಯಲ್ಲಿ ಮೂಲಿಗಗೌಡನು ಮಾಧವ ದೇವರ ಪ್ರತಿಷ್ಠೆ ಮಾಡಿ, ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಇಲ್ಲಿನ ಸುಮಾರು ಕ್ರಿ.ಶ. 15ನೇ ಶತಮಾನದ ಶಾಸನ ತುಂಡೊಂದು ಮಲ್ಲಿಕಾರ್ಜುನ ದೇವಾಲಯದ ಭೂಮಿಯ ಸೀಮೆ ಬಗ್ಗೆ ತಿಳಿಸಿದರೆ, ಕ್ರಿ.ಶ. 16ನೇ ಶತಮಾನದ ಮತ್ತೊಂದು ಶಾಸನ ಭಂಡಿವಾಡೆಯ ನಾಯಕಾದಿಗಳು ಸವಣೂರ ಸೀಮೆಯಲ್ಲಿ ಭೂಮಿದಾನ ಬಿಟ್ಟ ವಿಷಯ ತಿಳಿಸುತ್ತದೆ. ಮೇಲಿನ ಶಾಸನೋಕ್ತ ಗುಡಿಗಳಿಂದು ಯಥಾರೀತಿಯಲ್ಲಿ ಉಳಿದಿಲ್ಲ. ಊರ ಗುಡ್ಡದ ಬಳಿ ಶಾಸನೋಕ್ತ ಬೆಳ್ಳಟ್ಟಿ ಗಣದ ಜೀರ್ಣಗೊಂಡ ಬಸದಿ ಇದೆ. ಇಲ್ಲಿ ತೀರ್ಥಂಕರ ಮೂರ್ತಿಗಳಿವೆ. ಶಿರಹಟ್ಟಿ ರಸ್ತೆಯಲ್ಲಿರುವ ದಿಬ್ಬದಲ್ಲಿ, ರಾಮಲಿಂಗೇಶ್ವರ ಮಠ ಹಾಗೂ ಎಲ್ಲಮ್ಮನ ಗುಡಿಗಳಿವೆ. ಗುಡ್ಡದ ಪರಿಸರದಲ್ಲಿ ಗವಿಯಂತಿರುವ ರಾಮಲಿಂಗೇಶ್ವರ ಮಠವು, ಗರ್ಭಗೃಹ ತೆರೆದ ಅರ್ಧಮಂಟಪ ನವರಂಗ ಹಾಗೂ ಹಜಾರ ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಕ್ರಿ.ಶ. 10ನೇ ಶತಮಾನದ ಬೃಹತ್ತಾದ ಲಿಂಗವಿದೆ. ಈ ಗುಡಿಯ ಆವರಣದಲ್ಲಿ ಕ್ರಿ.ಶ. 11ನೇ ಶತಮಾನದ ದ್ವಾರಪಾಲಕ ಹಾಗೂ ಗಣಪತಿಯ ಶಿಲ್ಪವಿದೆ. ಕಾಳಮ್ಮನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಇದರ ಬಳಿ ನಾಲ್ಕಡಿ ಎತ್ತರದ ಮಹಿಷ ಮರ್ದಿನಿ ಶಿಲ್ಪ, ಸಪ್ತಮಾತೃಕಾ ಪಟ್ಟಿಕೆ ಹಾಗೂ ಎರಡು ವೀರಗಲ್ಲುಗಳಿವೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಈಶ್ವರ, ವೀರಭದ್ರ, ಹನುಮಂತ, ದೇವಮ್ಮ, ದ್ಯಾಮವ್ವ, ಕಂಟಿ ದ್ಯಾಮವ್ವ ಹಾಗೂ ಕೆಂಚಮ್ಮನ ಗುಡಿಗಳಿವೆ. ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇದೆ.

**ಬ್ಯಾಡಗಿ :** (ತಾಲೂಕು ಕೇಂದ್ರ, ಜನಸಂಖ್ಯೆ : 20,874) ಧಾರವಾಡದಿಂದ ಆಗ್ನೇಯಕ್ಕೆ 112 ಕಿ.ಮೀ. ದೂರದಲ್ಲಿ, ಹಾವೇರಿ ಹಾಗೂ ರಾಣೆಬೆನ್ನೂರುಗಳಿಂದ ಉತ್ತಮ ವಾಹನ ಸೌಕರ್ಯ ಹೊಂದಿರುವ ಬ್ಯಾಡಗಿ ಮೆಣಸಿಕಾಯಿ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದು ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಬೇಡಗೆಯ್' ಬೇಡಗೆ, 'ಬ್ಯಾಡಗೆ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ಬೇಡಗೆಯ್, ಬೇಡಗೆ, ಬ್ಯಾಡಗೆ, ಬ್ಯಾಡಗಿಯಾಗಿ ರೂಪಾಂತರಗೊಂಡಿದೆ. ಹಿಂದೆ ಬನವಾಸಿ - 12000ಕ್ಕೆ ಸೇರಿದ ಸತ್ತಿಯಳ್ಗೆ (ಸತ್ತಳಿಗೆ) - 70ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ಮೂರು ಪ್ರಕಟವಾಗಿವೆ. ಸಿದ್ದೇಶ್ವರ ಗುಡಿಯಲ್ಲಿರುವ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದ ಕ್ರಿ.ಶ. 902ರ ಶಾಸನವು ಲೋಕಟೆಯು ಬನವಾಸಿ-12000ವನ್ನು, ಚಿಕ್ಕಂಬರ ಬಿಜ್ಜನು ಸತ್ತಿಯಳ್ಗೆ - 70ನ್ನು, ಹಾಗೂ ಬುದ್ದನು ಊರ ಗೌಡಿಕೆಯನ್ನೂ ಆಳುತ್ತಿದ್ದಾಗ, ಪಿಟ್ಟಮ್ಮೆಯು ಮಾಡಿದ ದಾನವನ್ನು ತಿಳಿಸುತ್ತದೆ. ಕಲ್ಯಾಣದ ಚಾಳುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ಕಾಲದ ರಸ್ತೆಯ ಸೇತುವೆಗೆ ಸೇರಿರುವ ಕ್ರಿ.ಶ. 1092ರ ಶಾಸನವು ಮಹಾಮಂಡಳೇಶ್ವರ ವೀರಗಾಂಗೇಯರಾಯನು ಬನವಾಸಿ 12000ವನ್ನು ಆಳುವಾಗ 'ಬೇಡಗೆ'ಯ ಮಲ್ಲಿಕಾರ್ಜುನ ದೇವಾಲಯಕ್ಕೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ವೀರಭದ್ರನ ಗುಡಿಯ ಮುಂದೆ ಇರುವ ಸುಮಾರು ಕ್ರಿ.ಶ. 12ನೇ ಶತಮಾನದ ವೀರಗಲ್ಲು ಶಾಸನವು ತುರುಗಳ ರಕ್ಷಣೆಗೆ ಮಡಿದ ಸೋಮಗೌಂಡನ ಸ್ಮಾರಕವಾದರೆ, ಸಿದ್ದೇಶ್ವರ ಗುಡಿ ಮುಂದಿರುವ ಯಾದವ ಸಿಂಘಣನ ಕಾಲದ ಕ್ರಿ.ಶ. 1228ರ ವೀರಗಲ್ಲು ಶಾಸನ ಕುಂಚೂರ ಕಾಳಗದಲ್ಲಿ ಬೇಡಗೆಯ ಮಡಿವಳರ ಯೋಧನೊಬ್ಬ ಸತ್ತ ವಿಷಯವನ್ನು ದಾಖಲಿಸಿದೆ. ಇಲ್ಲಿನ ಮತ್ತೊಂದು ಶಾಸನ ಬ್ಯಾಡಿಗೆಯ ಗೌಡಿಕೆಗಾಗಿ ಇಬ್ಬರು ಗೌಡರ ನಡುವೆ ನಡೆದ ವ್ಯಾಜ್ಯವನ್ನು ನೆರೆಯ ಹೊಮ್ಮರಡಿ ಗ್ರಾಮದ ಪ್ರತಿನಿಧಿಗಳು ಹಾಗೂ ಊರವರು ಸೇರಿಕೊಂಡ ಬಗೆಹರಿಸಿದ ವಿಷಯವನ್ನು ತಿಳಿಸುತ್ತದೆ.

ಮೇಲಿನ ಶಾಸನೋಕ್ತ ಮಲ್ಲಿಕಾರ್ಜುನ ಗುಡಿ ಇಂದು ಯಥಾರೀತಿಯಲ್ಲಿ ಉಳಿದಿಲ್ಲ. ಊರಲ್ಲಿಂದು ಇರುವ ಸಿದ್ದೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆಯಾದರೂ ಅದರ ಪ್ರಾಚೀನತೆಯನ್ನು ಆ ಗುಡಿಯ ಗರ್ಭಗೃಹ ಹಾಗೂ ಅಂತರಾಳಗಳ ಹೊರಭಾಗವನ್ನು ನೋಡಿ ಗುರುತಿಸಬಹುದಾಗಿದೆ. ಈ ಗುಡಿಯ ಒಳಗೆ ಮೇಲೆ ಹೇಳಿರುವ ರಾಷ್ಟ್ರಕೂಟ ಶಾಸನವಿದ್ದರೆ, ಹೊರಗೆ ಗುಡಿಯ ಹಿಂದೆ ವೀರಗಲ್ಲು ಹಾಗೂ ಭಗ್ನ ಶಿಲ್ಪಾವಶೇಷಗಳಿವೆ. ಊರ ನಡುವೆ ಇರುವ ವೀರಭದ್ರ ದೇವಾಲಯ ವಿಶಾಲವಾಗಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಇದರ ಎದುರೇ ಇರುವ ಕಲ್ಮೇಶ್ವರ ದೇವಾಲಯವು ಪ್ರಾಚೀನದ್ದಾಗಿದ್ದು, ಇದರ ಬಳಿಯಲ್ಲಿ ಪ್ರಾಚೀನ ಶಿಲ್ಪಾವಶೇಷಗಳು ಹರಡಿಕೊಂಡಿವೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ಗ್ರಾಮದೇವತೆ, ಹನುಮಂತ, ದುರ್ಗಾ, ಮುಂತಾದ ದೇವಾಲಯಗಳಿವೆ. ಊರಲ್ಲಿ ಜಾಮಿಯಾ ಮಸೀದಿ,/ ಮದೀನಾ ಮಸೀದಿ ಹಾಗೂ ಅಗಸ್ತನಹಳ್ಳಿ ಮಸೀದಿಗಳಿವೆ. ಇವುಗಳ

ಜೊತೆಗೆ ಚಮನ್‌ಷಾವಲಿಯ ಚಿಲ್ಲ, ಮೊಯಿದ್ದಿನ್ ಷಾ ಖಾದ್ರಿ ದರ್ಗಾ, ಜಂಗಿಮಕಾನ್ ದರ್ಗಾ ಹಾಗೂ ರಹಮಾನ್ ಷಾ ವಲಿಯ ದರ್ಗಾಗಳಿವೆ.

**ಬ್ಯಾಹಟ್ಟಿ** : ಹುಬ್ಬಳ್ಳಿ ತಾಲೂಕಿನ ಬ್ಯಾಹಟ್ಟಿಯು (ಜನಸಂಖ್ಯೆ : 9,684) ಪ್ರಾಚೀನ ಶಾಸನಗಳಲ್ಲಿ 'ಬೆಪಟ್ಟಿ', 'ಬೆಹಟ್ಟಿ' ಎಂದು ಉಲ್ಲೇಖಿತಗೊಂಡಿದೆ. ಈ ಊರು ಹುಬ್ಬಳ್ಳಿಯಿಂದ 10 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿತ್ತು. ಬಾದಾಮಿ ಚಾಲುಕ್ಯರಷ್ಟು ಪುರಾತನವಾದ ಈ ಊರಿಂದ ಈವರೆಗೆ 12 ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ಇಮ್ಮಡಿ ಜಯಸಿಂಹನ ಕ್ರಿ.ಶ. 1037ರ ಶಾಸನ ಅತ್ಯಂತ ಪ್ರಾಚೀನದಾಗಿದ್ದು, ವಾಮನರಸ ಹಾಗೂ 12 ಮಂದಿ ಗೌಡರು ಜಿನಾಲಯಕ್ಕೆ ದಾನ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. 1166ರ ಶಾಸನ ಗ್ರಾಮೇಶ್ವರ ದೇವರಿಗೆ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಹಿರೇಮಠದ ಬಳಿಯಿರುವ ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದ ಶಾಸನ ಬ್ಯಾಹಟ್ಟಿಯ 20 ಮಂದಿ ಬ್ರಾಹ್ಮಣ ಪಂಡಿತರಿಗೆ ದಾನ ಬಿಟ್ಟ ವಿಷಯ ತಿಳಿಸಿದರೆ, ಯಾದವ ಸಿಂಘಣನ ಕ್ರಿ.ಶ. 1235ರ ಶಾಸನ ಹೊನ್ನ ಬೊಮ್ಮಸೆಟ್ಟಿ ಹಾಗೂ ಚೌಡಸೆಟ್ಟಿ ಬ್ರಾಹ್ಮಣರಿಗೆ ದಾನ ನೀಡಿದ ವಿಷಯ ತಿಳಿಸುತ್ತದೆ. ತೋಪಣ್ಣನವರ ಹೊಲದಲ್ಲಿರುವ ಸುಮಾರು 15ನೇ ಶತಮಾನದ ಶಾಸನ ಪಂಚಾಕ್ಷರದೇವರ ಮಠಕ್ಕೆ ನೀಡಿದ ದತ್ತಿಯ ಬಗ್ಗೆ ತಿಳಿಸುತ್ತದೆ. ಈ ಊರಿನ ಎಲ್ಲಾ ಶಾಸನಗಳ ಪೂರ್ಣ ಪಾಠ ಪ್ರಕಟವಾಗಬೇಕಾಗಿದೆ.

ಊರಲ್ಲಿಂದು ಜಾಡರಗೇರಿಯಲ್ಲಿ ಕಲ್ಮೇಶ್ವರ ಗುಡಿಯಿದೆ. ಈ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದರೂ, ಮೂಲ ಸ್ವರೂಪ ಉಳಿದಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಇತ್ತೀಚಿನ ಸೇರ್ಪಡೆಯಾದ ಹಜಾರವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದ್ದು, ಇದರ ಬಾಗಿಲವಾಡ ಏಕಶಾಖೆಯನ್ನು ಹೊಂದಿದ್ದು ಸರಳವಾಗಿದೆ. ಅಂತರಾಳದಲ್ಲಿ ನಂದಿಯಿದೆ. ಇದರ ದ್ವಾರ ಕಮಾನಿನ ಆಕಾರದಲ್ಲಿದೆ. ನವರಂಗದ ಪೂರ್ವದ ಪ್ರವೇಶದ್ವಾರದ ಬಾಗಿಲವಾಡವು ತ್ರಿಶಾಖಾಲಂಕಾರವನ್ನು ಹೊಂದಿದ್ದು, ಪೂರ್ಣಕುಂಭ ದ್ವಾರಪಾಲಕರು, ರತಿ ಮನ್ಮಥರ ಕೆತ್ತನೆಯನ್ನು ಹೊಂದಿದೆ. ನವರಂಗದಲ್ಲಿರುವ ಕಂಬಗಳು ಆಕರ್ಷಕವಾಗಿದ್ದು ಛತ್ತಿನಲ್ಲಿ ದ್ವಿದಳವಿರುವ ಕಮಲವಿದೆ. ಈ ಗುಡಿಯ ಎಡಬದಿಯಲ್ಲಿ ಗ್ರಾಮೇಶ್ವರ ಗುಡಿ ಇದ್ದು, ಗರ್ಭಗೃಹವಷ್ಟೇ ಇರುವ ಇದರ ಸಿಂಹ ಪೀಠ (ತೀರ್ಥಂಕರ ಪೀಠ)ದ ಮೇಲೆ ನಾಲ್ಕೂವರೆ ಅಡಿ ಎತ್ತರದ ವಿಷ್ಣುಮೂರ್ತಿಯಿದೆ. ಕಲ್ಮೇಶ್ವರ ಗುಡಿಯ ಬಲಭಾಗಕ್ಕೆ ಇರುವ ಹಾಳು ಗುಡಿಯಲ್ಲಿ ರಾಷ್ಟ್ರಕೂಟರ ಕಾಲದ ಬೃಹತ್ತಾದ ಲಿಂಗ - ನಂದಿ, ಕಲ್ಯಾಣದ ಚಾಲುಕ್ಯರ ಕಾಲದ ಲಿಂಗ, ನಂದಿಗಳಿದ್ದು ಮುಂಭಾಗದಲ್ಲಿ ಶಾಸನವಿದೆ. ಊರ ಹೊರಗೆ ಕೆರೆದಂಡೆ ಮೇಲೆ ಸಿದ್ದೇಶ್ವರಗುಡಿ ಇದ್ದು ಹಿಂದೆ ಇದು ಜೈನ ಬಸದಿಯಾಗಿದ್ದಿರಬೇಕು. ಇದನ್ನು ಕೆರೆದಂಡೆ ಮೇಲಿರುವ ಜೈನ ಶಾಸನ ಪುಷ್ಟೀಕರಿಸುತ್ತದೆ. ಇವುಗಳೊಂದಿಗೆ ಊರಲ್ಲಿ, ಬಸವಣ್ಣ, ವೀರಭದ್ರ, ಮೈಲಾರ, ಕೋಡಿ ಬಸವಣ್ಣ, ಹನುಮಂತ, ಗ್ರಾಮದೇವತೆ, ಉಡಚವ್ವ, ದುರ್ಗವ್ವ, ಮಾರಮ್ಮ ಹಾಗೂ ಕರಿಯವ್ವನ ಗುಡಿಗಳಿವೆ. ಊರಲ್ಲಿ ಮೂರು ಮಸೀದಿಗಳಿದ್ದು, ಇವುಗಳಲ್ಲಿ ಜಮ್ಮಾ ಮಸೀದಿ ದೊಡ್ಡದಾಗಿದೆ. ಮೆಹಬೂಬು ಸುಬಾನಿಯ ದರ್ಗಾ ಕೂಡ ಇದೆ.

**ಭಂಡಿವಾಡ** : ಹುಬ್ಬಳ್ಳಿ ತಾಲೂಕಿನ ಭಂಡಿವಾಡವು (ಜನಸಂಖ್ಯೆ : 3,266) ಪ್ರಾಚೀನ ಶಾಸನಗಳಲ್ಲಿ ಭಂಡಿವಾಡೆ ಎಂದೇ ಉಲ್ಲೇಖಿತಗೊಂಡಿದೆ. ಈ ಊರು ಹುಬ್ಬಳ್ಳಿಯಿಂದ ಪೂರ್ವಕ್ಕೆ 12 ಕಿ.ಮೀ. ದೂರದಲ್ಲಿ ಹುಬ್ಬಳ್ಳಿ-ಗದಗು ರಸ್ತೆಯಲ್ಲಿದೆ. ಇಲ್ಲಿಂದ ಈವರೆಗೆ ಒಂದು ಶಾಸನ ವರದಿಯಾಗಿದೆ. ಮಲ್ಲಿಕಾರ್ಜುನ ಗುಡಿ ಬಳಿಯಿರುವ ಈ ಶಾಸನ ಬಹಳ ಹಾಳಾಗಿದ್ದು, ವಿವರ ಲಭ್ಯವಿಲ್ಲ. ಈ ಗುಡಿಯೂ ಜೀರ್ಣೋದ್ಧಾರಗೊಂಡಿದ್ದು, ಶಿವಲಿಂಗ - ನಂದಿಗಳಷ್ಟೆ ಉಳಿದಿವೆ. ಬೆಳ್ಳಟ್ಟಿ (ಶಿರಹಟ್ಟಿ ತಾ:)ಯ ಸುಮಾರು ಕ್ರಿ.ಶ. 16ನೇ ಶತಮಾನದ ಶಾಸನವೊಂದು ಭಂಡಿವಾಡೆ ನಾಯಕಾದಿಗಳಿಂದ ಸವಣೂರ ಭೂಮಿಯಲ್ಲಿ ದಾನ ಬಿಟ್ಟ ವಿಷಯ ತಿಳಿಸುತ್ತಿದ್ದು ಇಲ್ಲಿನ ಶಾಸನೋಕ್ತ 'ಭಂಡಿವಾಡ' ಯಾವುದೆಂದು ಗುರುತಿಸಲಾಗುತ್ತಿಲ್ಲ. ಭಂಡಿವಾಡ ಇಂದು ಹನುಮಂತನ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ಗರ್ಭಗೃಹ ಹಾಗೂ ದೊಡ್ಡದಾದ ಸಭಾಮಂಟಪವನ್ನು ಹೊಂದಿರುವ ಈ ಗುಡಿ ಸುಮಾರು 200 ವರ್ಷಗಳಷ್ಟು ಪ್ರಾಚೀನದ್ದಾಗಿದ್ದು, ಇದರ ನಿರ್ಮಾಣದಲ್ಲಿ ಕಟ್ಟಿಗೆಯನ್ನು ಹೆಚ್ಚಾಗಿ ಬಳಸಲಾಗಿದೆ. ಗರ್ಭಗೃಹದಲ್ಲಿ ಅಭಯ ಮುದ್ರಾ ಹನುಮನ ಮೂರ್ತಿಯಿದ್ದು, ಇದರ ಕಟ್ಟಿಗೆಯ ಬಾಗಿಲವಾಡ ಆಕರ್ಷಕವಾದ ಕೆತ್ತನೆಗಳಿಂದ ತುಂಬಿದೆ. ತ್ರಿಶಾಖಾಲಂಕಾರವನ್ನು ಹೊಂದಿರುವ ಇದರ ಮೇಲೆ ಚಿತ್ರ ವಿಚಿತ್ರ ಭಂಗಿಯ ಮಿಥುನ ಶಿಲ್ಪಗಳಿವೆ. ಇದರ ಲಲಾಟ ಪಟ್ಟಿಕೆಯಲ್ಲಿ ಸುಂದರವಾದ ಗಂಡಭೇರುಂಡದ ಕಂಡರಣೆಯಿದೆ. ಸಭಾಮಂಟಪಕ್ಕೆ ಬಳಸಿರುವ ಕಂಬಗಳು ಅಲ್ಪ ಅಲಂಕಾರವನ್ನು ಹೊಂದಿದ್ದು ಕಂಬಗಳ

ಬೋದಿಗೆಯಿಂದ ಜಿಗಿಯುತ್ತಿರುವಂತಿರುವ ಪ್ರಾಣಿಗಳ ಮಾದರಿ ವಿಜಯನಗರ ಕಂಬಗಳನ್ನು ನೆನಪಿಸುತ್ತದೆ. ದೇವಾಲಯವನ್ನು ಆವರಿಸಿರುವ ಪ್ರಾಕಾರದ ಕೊಠಡಿಗಳಲ್ಲಿ ಒಂದೆರಡಲ್ಲಿ ಲಿಂಗಗಳಿವೆ. ಪ್ರಾಕಾರದ ಪ್ರವೇಶದ್ವಾರವು ಬಹಳ ಆಕರ್ಷಕವಾಗಿದ್ದು ಎರಡು ಅಂತಸ್ತಿನಲ್ಲಿದ್ದು ಎತ್ತರವಾಗಿದೆ. ದೇವಾಲಯದ ಗಾತ್ರಕ್ಕೆ ಎತ್ತರವಾದ ಈ ಪ್ರವೇಶದ್ವಾರ ಹೆಚ್ಚಿನ ಶೋಭೆಯನ್ನು ತಂದಿದೆ. ಹನುಮ ಜಯಂತಿಯಂದು ಇಲ್ಲಿ ಜಾತ್ರೆ ನಡೆಯುತ್ತದೆ. ಊರ ಹೊರಗೆ ಸಿದ್ದಯ್ಯನಮಠ, ಗಿರಿಮಲ್ಲೇಶ್ವರ ಮಠಗಳಿದ್ದು, ಊರಲ್ಲಿ ಮಲ್ಲಿಕಾರ್ಜುನ, ಬೀರಪ್ಪ (ಮೈಲಾರ) ಉಡಚಮ್ಮ, ದುರ್ಗಮ್ಮ ಹಾಗೂ ಕಲ್ಲಪ್ಪನ ಗುಡಿಗಳಿವೆ. ಊರಲ್ಲಿ ಎರಡು ಮಸೀದಿಗಳೂ ಹಾಗೂ ಒಂದು ದರ್ಗಾ ಕೂಡ ಇದೆ.

**ಮಂಟೂರು** : ಹುಬ್ಬಳ್ಳಿ ತಾಲೂಕಿನ ಮಂಟೂರು (ಜನಸಂಖ್ಯೆ : 3,588) ಪ್ರಾಚೀನ ಶಾಸನಗಳಲ್ಲೂ 'ಮಂಟೂರು' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ಹುಬ್ಬಳ್ಳಿಯಿಂದ ಪೂರ್ವಕ್ಕೆ 12 ಕಿ.ಮೀ. ದೂರದಲ್ಲಿದ್ದು ಹುಬ್ಬಳ್ಳಿ-ಗದಗ ರಸ್ತೆಯಲ್ಲಿದೆ. ವಲ್ಲಭೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿರುವ ಈ ಊರು ಹಿಂದೆ ಜೈನ ಕೇಂದ್ರವೂ ಆಗಿತ್ತು. ಊರ ಹೊರಗಿರುವ ಕಲ್ಲೇಶ್ವರ ಗುಡಿ ಬಳಿ ಎರಡು ಮೇಟಿ ಕಲ್ಲುಗಳಿದ್ದು, ಒಂದನ್ನು ಗುಡಿಯ ಪ್ರಕ್ಷಾಳವನ್ನಾಗಿಸಿಕೊಂಡಿದ್ದಾರೆ. ಈ ಮೇಟಿ (ಗೋಸಾಸ) ಕಲ್ಲುಗಳು ರಾಷ್ಟ್ರಕೂಟರ ಕಾಲದ್ದಾಗಿದ್ದು, ಇದರಿಂದ ಮಂಟೂರಿನ ಇತಿಹಾಸವನ್ನು ಸುಮಾರು ಕ್ರಿ.ಶ. 10ನೇ ಶತಮಾನಕ್ಕೆ ಗುರುತಿಸಬಹುದಾಗಿದ್ದು, ಇಲ್ಲಿಂದ ಈವರೆಗೆ ಐದು ಶಾಸನಗಳು ವರದಯಾಗಿವೆ. ವಲ್ಲಭೇಶ್ವರ ದೇವಾಲಯದ ಹಿಂದೆ ಇರುವ, ಇಮ್ಮಡಿ ಸೋಮೇಶ್ವರನ ಕ್ರಿ.ಶ. 1072 ಶಾಸನ ಮಹಾಮಂಡಳೇಶ್ವರ ಲಕ್ಷ್ಮಣರಸನು ಮಂಟೂರ ದೇವಾಲಯದ ರುದ್ರಶಕ್ತಿ ಪಂಡಿತರಿ[illegible] ಭೂದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಉಳಿದ ನಾಲ್ಕರಲ್ಲಿ ಹನುಮಂತನ ಗುಡಿ ಮುಂದಿನ ವೀರಗಲ್ಲು ಕಲಿವಿಲನ ಮರಣವನ್ನು ತಿಳಿಸಿದರೆ, ವಲ್ಲಭೇಶ್ವರ ಗುಡಿ ಮುಂದಿನ ನಿಷಿಧಿ ಶಾಸನ ನಾಗಚಂದ್ರನ ನಿರ್ವಾಣವನ್ನು ತಿಳಿಸುತ್ತದೆ. ಉಳಿದ ಶಾಸನಗಳು ಹಾಳಾಗಿವೆ. ಇಲ್ಲಿನ ಶಾಸನ ಪಾಠಗಳಿನ್ನೂ ಪ್ರಕಟವಾಗಬೇಕಾಗಿದೆ. ಪೂರ್ಣ ಪ್ರಮಾಣದಲ್ಲಿ ಜೀರ್ಣೋದ್ಧಾರಗೊಂಡಿರುವ ಈ ಗುಡಿ ವಿಶಾಲವಾಗಿದ್ದು, ಗರ್ಭಗೃಹ, ನವರಂಗ ಹಾಗೂ ವಿಶಾಲವಾದ ಹಜಾರವನ್ನು ಹೊಂದಿದ್ದು ಇದಕ್ಕೆ ಪ್ರಾಕಾರವಿದೆ. ಗರ್ಭಗೃಹದಲ್ಲಿ ಬೃಹತ್ತಾದ ಬಲಹರಿ ಲಿಂಗವಿದ್ದು, 14 ಹಣತೆಗಳು ಸದಾ ಕಾಲ ಉರಿಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಗರ್ಭಗೃಹದ ದ್ವಾರದ ಬಳಿ ಆಕರ್ಷಕವಾದ ಚಂದ್ರಶಿಲೆ ಇದೆ. ನವರಂಗದಲ್ಲಿ ಚತುರ್ಭುಜ ವಿಷ್ಣುವಿನ ಸುಂದರ ಶಿಲ್ಪವಿದೆ. ಈ ಗುಡಿಯ ಮುಂದೆ ಸಲ್ಲೇಖನ ವ್ರತ ಆಚರಿಸಿ ಮಡಿದ ನಾಗಚಂದ್ರನ ನಿಷಿಧಿ ಶಾಸನ ಕಲ್ಲಿದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಕಲ್ಲೇಶ್ವರ, ಹನುಮಂತ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ. ಖ್ಯಾತ ಸ್ವಾತಂತ್ರ್ಯಯೋಧ ದ.ಪ. ಕರಮರಕರ ಇದೇ ಊರವರು.

**ಮಕರವಳ್ಳಿ** : ಹಾನಗಲ್ ತಾಲೂಕಿನ ಮಕರವಳ್ಳಿಯು (ಜನಸಂಖ್ಯೆ : 1,516) ಹಾನಗಲ್‌ನಿಂದ 14 ಕಿ.ಮೀ. ದೂರದಲ್ಲಿ ಮಲೆನಾಡು ಹಾಗೂ ಬಯಲುಸೀಮೆಯ ಅಂಚಿನಲ್ಲಿರುವ ನಯನ ಮನೋಹರ ಪಕ್ಷಿಧಾಮವೆಂದು ಜನಪ್ರಿಯವಾಗಿರುವ ತಾಣ. ಈ ಅಜ್ಞಾತ ಪಕ್ಷಿಧಾಮವು ಸಹಸ್ರಾರು ಪಕ್ಷಿಗಳಿಗೆ ಆಶ್ರಯತಾಣವಾಗಿದ್ದು ವಿವಿಧ ದೇಶಗಳಿಂದ ಡಿಸೆಂಬರ್ - ಜನವರಿಗಳಲ್ಲಿ ಇಲ್ಲಿಗೆ ಪ್ರತೀವರ್ಷ ಪಕ್ಷಿಗಳು ಸಂತಾನ ಅಭಿವೃದ್ಧಿಗಾಗಿ ವಲಸೆ ಬರುತ್ತವೆ. ಈ ಪಕ್ಷಿಧಾಮಕ್ಕೆ ಬರುವ ಮುಖ್ಯ ಪಕ್ಷಿಗಳೆಂದರೆ ಉಳ್ಳಂಗ (ನೀರುನಡಿಗೆಯ ಪಕ್ಷಿ), ಐಬೀಸು, ಬ್ರಾಹ್ಮನಿ ಬಾತು, ಕೊಕ್ಕರೆ, ಬೆಳ್ಳಕ್ಕಿ, ಬಕ, ಬಾತು, ಹೆಬ್ಬಾತುಗಳು (ಹೊರ ದೇಶಗಳಿಂದ ವಲಸೆ ಬರುವವು) ಹಾಗೂ ಸ್ಥಳೀಯ ಪಕ್ಷಿಗಳು, ಮಳೆಗಾಲ ಚೆನ್ನಾಗಿದ್ದು ಕೆರೆಗಳಲ್ಲಿ ನೀರು ತುಂಬಿಕೊಂಡಾಗ ವಿವಿಧ ರೀತಿಯ ಕೊಕ್ಕರೆ, ಬಕ, ಬೆಳ್ಳಕ್ಕಿಗಳ ದಂಡೇ ಧಾವಿಸಿ ಬಂದು ಈ ಊರಿನ ಕೆರೆಯ ಸುತ್ತಣ ಮರಗಳನ್ನು ಆಶ್ರಯಿಸುತ್ತವೆ. ಚಳಿಗಾಲದಲ್ಲಿ ಉತ್ತರ ಏಷ್ಯಾ, ಯುರೋಪ್ ಖಂಡಗಳಿಂದ ಹಿಮದ ತಾಪ ತಾಳಲಾರದೇ ಉಷ್ಣವಲಯದ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಈ ಪೈಕಿ ಸೂಜಿಬಾಲದ ಬಾತು, ವರ್ಣರಂಜಿತ ಶಾವೆಲ್ಲರ್, ಗಾರ್ಗನಿ, ನೀಲರೆಕ್ಕೆಯ ಟೀಲು, ಸಾಮಾನ್ಯ ಪೊಚಾರ್ಡ್, ಸಾಕಷ್ಟು ಕಂಡುಬರುತ್ತವೆ. ಸುಂದರವಾದ ಹಸಿರಾದ ಗುಡ್ಡಗಳಿಂದ ಆವೃತವಾದ ಮಕರವಳ್ಳಿ ಕಣಿವೆಯ ಪ್ರದೇಶದಲ್ಲಿ ವಿಶಾಲವಾದ ಕೆರೆಯ (35 ಎಕರೆ ವಿಸ್ತೀರ್ಣವಿರುವ) ಅಂಗಳವಿದ್ದು ಸುತ್ತಲೂ ಗಿಡಮರ ಬಳ್ಳಿಗಳಿಂದ ಸುತ್ತುವರೆದಿದ್ದು ಅತ್ಯಂತ ಸುಂದರವಾದ ನೈಸರ್ಗಿಕ ದೃಶ್ಯವನ್ನು ಒದಗಿಸುತ್ತವೆ. ಈ ಪಕ್ಷಿಧಾಮವು ಹಾನಗಲ್ ಅರಣ್ಯವಲಯದ ವ್ಯಾಪ್ತಿಗೆ ಸೇರುತ್ತದೆ. ಆದರೆ ಇಲ್ಲಿಯವರೆಗೂ ಪಕ್ಷಿನೋಟಕರೊಬ್ಬರ ವರದಿಯಂತೆ ಮಳೆಗಾಲ ಕಾಲಮಾನ ಅನುಸರಿಸಿ ಸುಮಾರು 5 ರಿಂದ 10,000 ಸಂಖ್ಯೆಯಲ್ಲಿ ಒಟ್ಟು ಸುಮಾರು 50 ಜಾತಿಗಳ ವಿವಿಧ ಪಕ್ಷಿಗಳು ಇಲ್ಲಿ ಆಶ್ರಯ ಪಡೆಯುತ್ತವೆ. 1988ರ ನಂತರ ವಲಸೆ ಪಕ್ಷಿಗಳ ಸಂಖ್ಯೆ, ಪ್ರಭೇದಗಳು ವೃದ್ಧಿಗೊಂಡವು. 1990ರಲ್ಲಿ 10,000 ಹೆಚ್ಚಿನ ಪಕ್ಷಿಗಳಿದ್ದವು. ಡಿಸೆಂಬರ್-ಜನವರಿ ಇಲ್ಲಿಗೆ ಭೇಟಿ ಕೊಡಲು ಉತ್ತಮ ಕಾಲವೆಂದು ಹೇಳಬಹುದು.

**ಮಡ್ಲೂರು :** ಹಿರೇಕೆರೂರು ತಾಲೂಕಿನ ಮಡ್ಲೂರು ಹಿರೇಕೆರೂರಿನಿಂದ ವಾಯುವ್ಯಕ್ಕೆ ಸುಮಾರು 18 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲೂ ಕೂಡ 'ಮಡಲೂರು' ಎಂದೇ ಉಲ್ಲೇಖಗೊಂಡಿದೆ. ಚಾರಿತ್ರಿಕ ಮಹತ್ವದ ಸಾತೇನಹಳ್ಳಿಯ ನೆರೆಗ್ರಾಮವಿದು. ಈ ಊರಲ್ಲಿ ಮೂರು ಶಾಸನಗಳಿದ್ದು, ಅವು ಕಲ್ಯಾಣದ ಚಾಳುಕ್ಯ, ಯಾದವ ಅರಸರ ಕಾಲಕ್ಕೆ ಸೇರಿದ್ದಾಗಿವೆ. ಆರನೇಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಶಾಸನವೊಂದು ಮಹಾಮಂಡಲೇಶ್ವರ ತೈಲಪದೇವ ಬನವಾಸಿ-12000 ಆಳುತ್ತಿದ್ದಾಗ 'ನಾಗರ ಖಂಡ'-70ನ್ನು ಆಳುತ್ತಿದ್ದ ಭೂಪ್ಪದೇವರಸನ ಕಾಲದ ದಾನದ ಬಗ್ಗೆ ಹೇಳಿದರೆ ಯಾದವಸಿಂಘಣನ ಕಾಲ (1247)ಕ್ಕೆ ಸೇರಿದ ಶಾಸನ ಮಡಲೂರ ನಾಡ ತೊಲ್ಲಗಾವುಂಡಂಗೆ ಬೊಮ್ಮದೇವರಸ, ಕೆರೆಯ ಹೂಳನ್ನು ಎತ್ತಲು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಊರ ಕೆರೆದಂಡೆ ಮೇಲೆ ಗರ್ಭಗೃಹ ಹಾಗೂ ನವರಂಗ ಹೊಂದಿರುವ ಈಶ್ವರನ ಗುಡಿಯಿದೆ. ಗುಡಿಯಲ್ಲಿ ಲಿಂಗ ನಂದಿಯಿದ್ದು, ಬಾಗಿಲವಾಡದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ಊರ ಈಶಾನ್ಯಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ, ಹೊಲಮಾಳದಲ್ಲಿ ಮಣ್ಣುಮುಚ್ಚಿರುವ ತ್ರಿಕೂಟವಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಮೂರು ಗರ್ಭಗೃಹದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಪ್ರಧಾನ ಗರ್ಭಗೃಹದಲ್ಲಿ ಶಿವರಂಗ, ಉಳಿದೆರಡರಲ್ಲಿ ಬ್ರಹ್ಮ - ವಿಷ್ಣು ಮೂರ್ತಿಗಳಿವೆ. ಪ್ರಧಾನ ಗರ್ಭಗೃಹಕ್ಕೆ ತೆರೆದ ಅರ್ಧಮಂಟಪವಿದ್ದರೆ, ಉಳಿದೆರಡಕ್ಕೆ ಇಲ್ಲ. ಸುಮಾರು ನಾಲ್ಕೂವರೆ ಅಡಿ ಎತ್ತರವಿರುವ ಬ್ರಹ್ಮ ವಿಷ್ಣು ಶಿಲ್ಪಗಳು ಸುಂದರ ಕಲಾಕೃತಿಗಳಾಗಿವೆ. ಚತುರ್ಮುಖ ಬ್ರಹ್ಮನು ಪಾಶಾಂಕುಶನಾಗಿ ಅಭಯ ನೀಡುತ್ತಿದ್ದರೆ, ಶಂಕ ಗದಾ ಪದ್ಮಧಾರಿ ಮಂದಸ್ಮಿತ ವಿಷ್ಣು ಅನುಗ್ರಹ ನೀಡುತ್ತಿರುವಂತೆ ತೋರುತ್ತದೆ. ನವರಂಗದಲ್ಲಿ ಮೂರಡಿ ಎತ್ತರದ ದೇವಕೋಷ್ಠಗಳಲ್ಲಿ ಸಪ್ತಮಾತೃಕಾ, ಕಾರ್ತಿಕೇಯ, ದುರ್ಗಾ, ಪಾರ್ವತಿ-ಪರಮೇಶ್ವರ ಶಿಲ್ಪಗಳಿವೆ. ಊರ ಹೊರಗೆ ಸಾತೇನಹಳ್ಳಿ ರಸ್ತೆಯಲ್ಲಿ ಹೊಲದಲ್ಲಿ ಕುಮಾರರಾಮನ ಶಿಲ್ಪಕೆತ್ತನೆಯಿದೆ. ಸ್ಥಳಿಕರು, ಅದರಲ್ಲೂ ವಿಶೇಷವಾಗಿ ತಳವಾರ ಜನಾಂಗ ಇದನ್ನು ರಾಮಲಿಂಗಪ್ಪನ ಗುಡಿ ಎಂದೇ ಪೂಜಿಸಿಕೊಂಡು ಬಂದಿದ್ದಾರೆ. ಮಾಸ್ತಿಕಲ್ಲೆಂದು ಸ್ಥಳೀಕರು ಭಾವಿಸಿರುವುದು ಪೀಠಸ್ಥ ಚತುರ್ಮುಖ ಬ್ರಹ್ಮನ ಮೂರ್ತಿಯಾಗಿದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ಬಸವಣ್ಣ, ವೀರಭದ್ರ, ದುರ್ಗವ್ವ, ದ್ಯಾಮವ್ವ, ಪೇಟೆ ಹನಮಪ್ಪನ ಗುಡಿಗಳಿವೆ. ಊರಲ್ಲೊಂದು ಮಸೀದಿ, ಮೆಹಬೂಬು ಸುಬಾನಿಯ ದರ್ಗಾಯಿದೆ.

**ಮಣಕಟ್ಟಿ :** ಶಿಗ್ಗಾಂವಿ ತಾಲೂಕಿನ ಮಣಕಟ್ಟಿಯು (ಜನಸಂಖ್ಯೆ : 1,773) ಶಿಗ್ಗಾಂವಿಯಿಂದ ವಾಯುವ್ಯಕ್ಕೆ 10 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಮಣಿಗಟ್ಟೆ', 'ಮಣಿಕಟ್ಟೆ' ಎಂದು ಉಲ್ಲೇಖಗೊಂಡಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಸೋಲಭೇಶ್ವರ ಗುಡಿ ಮುಂದೆ ಇರುವ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಗದೇಕಮಲ್ಲನ ಕ್ರಿ.ಶ. 1147ರ ಶಾಸನ ಮಾರಗಾವುಂಡನು ಹೊಲ್ಲೇಶ್ವರ ದೇವರಿಗೆ ವಿವಿಧ ದಾನಗಳನ್ನು ಮಾಡಿದ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1148ರ ಮತ್ತೊಂದು ಶಾಸನ ಹುಲಗೂರ ಗೌರೇಶ್ವರ ದೇವರಿಗೆ ಕಾಳಿಸೆಟ್ಟಿ ಹಾಗೂ ಬೊಪ್ಪಗೌಂಡರು ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಕಲಚೂರಿ ಬಿಜ್ಜಳನ ಕಾಲದ ಕ್ರಿ.ಶ. 1165ರ ಶಾಸನವು ಮಹಾಪ್ರಧಾನ ಕೇಶಿರಾಜಯ್ಯನ ಮಣಿಗಟ್ಟಿಯ ಹೊಲೇಶ್ವರದೇವರಿಗೆ ಮಣಿಕಟ್ಟೆಯ ಸುಂಕಗಳನ್ನು ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ಹೊಲೇಶ್ವರ ಗುಡಿ ಇಂದು ಕಲ್ಮೇಶ್ವರವೆಂದು ಕರೆಯಲ್ಪಡುತ್ತಿದ್ದು ಊರ ಹೊರಗೆ ಹೊಲದಲ್ಲಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು, ನಿರಾಡಂಬರವಾಗಿದ್ದು ಸರಳವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಸರಳ ಚತುರ್ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲವಾಡವು ಜಾಲಂಧ್ರವನ್ನು ಹೊಂದಿದ್ದು ತ್ರಿಮೂರ್ತಿ ಕೆತ್ತನೆಯಿರುವ ಸುಂದರವಾದ ಮಕರತೋರಣವಿದೆ. ನವರಂಗದಲ್ಲಿ ಹತ್ತು ದೇವಕೋಷ್ಠಗಳಲ್ಲಿ ಒಂದರಲ್ಲಿ ಮಾತ್ರ ಕಾರ್ತಿಕೇಯನ ಶಿಲ್ಪವಿದೆ. ನವರಂಗ ಕಂಬಗಳು ಚಾಳುಕ್ಯ ಶೈಲಿಯಲ್ಲಿದ್ದು ಆಕರ್ಷಕವಾಗಿದೆ. ಇಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ಬಹುಶಃ ಕ್ರಿ.ಶ. 1140 ಸುಮಾರಿನಲ್ಲಿ ನಿರ್ಮಾಣವಾಗಿರಬಹುದಾದ ಈ ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು ಇದರ ಗರ್ಭಗೃಹವನ್ನು ಕದಂಬ - ನಾಗರ ಶೈಲಿಯ ಶಿಖರ ಅಲಂಕರಿಸಿದೆ. ಗಿಡ-ಗಂಟಿ ಬೆಳೆದಿರುವುದರಿಂದ ಈ ಗುಡಿಯೂ ಶಿಥಿಲಗೊಳ್ಳುವ ಭೀತಿಯಿದೆ.

ಊರ ಬಳಿಯಲ್ಲೇ ಮತ್ತೊಂದು ಗುಡಿ ಶಿಥಿಲಾವಸ್ಥೆಯಲ್ಲಿದೆ. ಈಶ್ವರ ಗುಡಿಯೆಂದು ರೂಢಿಯಲ್ಲಿರುವ ಈ ಗುಡಿಯ ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಉಳಿದಿದ್ದು ನವರಂಗ ಭಾಗ ಹಾಳಾಗಿದೆ. ಇದರ ಗರ್ಭಗೃಹದಲ್ಲಿ ಸ್ವಯಂಭೂಲಿಂಗವಿದ್ದು ಬಾಗಿಲವಾಡಗಳು ಸರಳವಾಗಿವೆ. ಸುತ್ತ ಗಿಡ-ಗಂಟಿಗಳು ಬೆಳೆದಿರುವುದರಿಂದ ಗುಡಿ ನೋಡುವುದೇ ದುಸ್ತರವಾಗಿದೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ,

ಮಲ್ಲಿಕಾರ್ಜುನ, ಬೀರೆದೇವರು, ದುರ್ಗವ್ವ, ಉಡಚವ್ವ, ದ್ಯಾಮವ್ವ ಹಾಗೂ ಹಾಲೀರಮ್ಮನ ಗುಡಿಗಳಿವೆ. ಊರಲ್ಲಿ ಚಂದ್ರಗಿರಿ ಮಠ ಹಾಗೂ ವಿರಕ್ತಮಠಗಳಿದ್ದು, ವಿರಕ್ತಮಠದ ತೇರು ಶಿವರಾತ್ರಿಯಲ್ಲಿ ಜರುಗುತ್ತವೆ. ಊರಲ್ಲೊಂದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿದ್ದು, ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಮಲಗುಂದ** : ಹಾನಗಲ್ ತಾಲೂಕಿನ ಮಲಗುಂದವು (ಜನಸಂಖ್ಯೆ : 2,202) ಹಾನಗಲ್‌ನಿಂದ 19 ಕಿ.ಮೀ. ದೂರದಲ್ಲಿರುವ ಪುರಾತನ ಸ್ಥಳ. ಊರ ಹೊರಗಿರುವ ಕಲ್ಲೇಶ್ವರ ಅಥವಾ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯವು ಚಾಳುಕ್ಯ ಶೈಲಿಯ ಕಟ್ಟಡವಾಗಿದೆ. ಇದರಲ್ಲಿ ಕೇವಲ ಗರ್ಭಗೃಹ ಹಾಗೂ ಕುಸಿದಿರುವ ಅರ್ಧಮಂಟಪ ಮಾತ್ರ ಇದೆ. ಗರ್ಭಗೃಹವು ಚೌಕಾಕಾರವಾಗಿದ್ದು ಒಳಗೆ ಚಾಳುಕ್ಯ ಶೈಲಿಯ ಪೀಠದ ಮೇಲೆ ಶಿವಲಿಂಗವಿದೆ. ಇದರ ಸಮೀಪದ ಹಾಲು ಹೊಂಡದಲ್ಲಿ ಶಾಸನವಿರುವ ಒಂದು ಸತಿ ಕಲ್ಲು, ಗಣಪತಿ, ಭಗ್ನ ಮಹಿಷಮರ್ದಿನಿ, ಸೂರ್ಯನ ಭಗ್ನ ಭಾಗ, ಭೈರವ ಇನ್ನೂ ಮುಂತಾದ ಅವಶೇಷಗಳು ಬಿದ್ದಿವೆ. ಈ ಗುಡಿಯ ಹತ್ತಿರ ಶಾಸನವಿದ್ದು ಕಲ್ಯಾಣದ ಚಾಳುಕ್ಯ ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು ಅಸ್ಪಷ್ಟವಾಗಿದೆ. ತೈಲಪನು ಬನವಾಸಿ-12000 ಪಾನುಂಗಲ್ಲು-500 ಆಳುವಾಗ ಬೀರಗೌಡನೆಂಬ ಅಧಿಕಾರಿಯು ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ಭೂದಾನವನ್ನು ಉಲ್ಲೇಖಿಸುತ್ತವೆ. ಈ ಗುಡಿಯ ಹಿಂಭಾಗದಲ್ಲಿ ಹಾಲು ಹೊಂಡ ಎಂಬ ಕೊಳವಿದ್ದು ಅಲ್ಲಿರುವ ವೀರಗಲ್ಲು ಶಾಸನ ರಾಷ್ಟ್ರಕೂಟ ಕನ್ನರನ ಕಾಲದ್ದಾಗಿದ್ದು (ಸು.ಕ್ರಿ.ಶ. 10ನೇ ಶತಮಾನ) ಅಸ್ಪಷ್ಟವಾಗಿದ್ದು ಕಲಿವಿಟ್ಟರಸನು ಬನವಾಸಿಯನ್ನಾಳುವಾಗ ವೀರನೊಬ್ಬನ ಮರಣವನ್ನು ದಾಖಲಿಸುತ್ತದೆ. ಈ ಗುಡಿಯ ಸಮೀಪವಿರುವ ಆರ್ಷೇಯ ವಿದ್ಯಾಪೀಠದಲ್ಲಿ ಒಂದು ಗಣಪತಿಯ ಗುಡಿ ಇದೆ. ಇದರ ಬಳಿ ಒಂದು ಪುಷ್ಕರಣಿಯಿದೆ. ಊರಿನಲ್ಲಿರುವ ಇತರ ದೇವಾಲಯಗಳೆಂದರೆ ವೀರಭದ್ರ, ಯಲ್ಲಮ್ಮ ದ್ಯಾಮವ್ವ, ಮಾತಂಗವ್ವ, ಗಣಪತಿ, ಹನುಮಂತ (ಎರಡು), ಸಿದ್ದೇಶ್ವರ, ಬನಶಂಕರಿ ಮುಂತಾದ ಗುಡಿಗಳಿವೆ. ಗಣಪತಿ ಗುಡಿ ಎದುರು ಕೋಣನಕಲ್ಲಿದೆ. ಊರಿನ ಸಮೀಪದಲ್ಲೇ ಗುಡ್ಡದ ಮೇಲೆ ಎಲ್ಲಮ್ಮನ ಗುಡಿಯಿದೆ (ಸಾಧಾರಣ ಆಧುನಿಕ ಕಟ್ಟಡ). ಊರಲ್ಲಿರುವ ಮತ್ತೊಂದು ಚಾಳುಕ್ಯ ಶೈಲಿಯ ಗುಡಿ ಎಂದರೆ ಇನ್ನೊಂದು ಕಲ್ಲಪ್ಪಗುಡಿ. ಇದರಲ್ಲಿ ಗರ್ಭಗೃಹ ಅಂತರಾಳ ಹಾಗೂ ತೆರೆದ ಮಂಟಪವಿದೆ. ಗರ್ಭಗೃಹದ ಬಾಗಿಲುವಾಡವು ಅಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಹೊಂದಿದೆ. ಇದರ ಬಾಗಿಲುವಾಡವು ಅಲಂಕೃತವಾಗಿದ್ದು ಮೇಲ್ಭಾಗದ ಭೋದಿಗೆಯಲ್ಲಿ ವಿಷ್ಣು ಶಿವ ಮತ್ತಿತರ ಶಿಲ್ಪಗಳನ್ನು ಮಕರ ತೋರಣದ ಮಧ್ಯದಲ್ಲಿ ಕೆತ್ತಲಾಗಿದೆ. ಈ ಬಾಗಿಲುವಾಡದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಗುಡಿಯ ಹತ್ತಿರ ಊರ ಕೆರೆಯಿದೆ. ಊರಲ್ಲಿ ಕುಮಾರವ್ಯಾಸನ ಓಣಿಯಲ್ಲಿ ರಾಷ್ಟ್ರಕೂಟರ ಕಾಲದ ಶಾಸನವಿರುವ ವೀರಗಲ್ಲಿದೆ.

**ಮಾಗಡಿ** : ಶಿರಹಟ್ಟಿ ತಾಲೂಕಿನ ಮಾಗಡಿಯು (ಜನಸಂಖ್ಯೆ : 4,103) ಪ್ರಾಚೀನ ಶಾಸನಗಳಲ್ಲಿ 'ಮಾಗುಂಡಿ' ಎಂದೇ ಉಲ್ಲೇಖಿತಗೊಂಡಿದ್ದು ಶಿರಹಟ್ಟಿಯಿಂದ ನೈರುತ್ಯಕ್ಕೆ ಏಳು ಕಿ.ಮೀ. ದೂರದಲ್ಲಿ, ಲಕ್ಷ್ಮೇಶ್ವರದಿಂದ ಉತ್ತರಕ್ಕೆ ಐದು ಕಿ.ಮೀ. ದೂರದಲ್ಲಿ ಗದಗು - ಲಕ್ಷ್ಮೇಶ್ವರ ರಸ್ತೆಯಲ್ಲಿದೆ. ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿದ್ದ ಮುಳಗುಂದ-12ರಲ್ಲಿದ್ದಂತೆ ತೋರುತ್ತದೆ. ನೀಲಮ್ಮನ ಮಠದ ಬಳಿಯಿರುವ ಕ್ರಿ.ಶ. 970ರ ಶಾಸನದಿಂದ ಛಲದಂಕಕಾರನ ಆಡಳಿತದಲ್ಲಿ ಬಲ್ಲವರಸನು ಬನವಾಸಿಯನ್ನು ಆಳುತ್ತಿರುವಾಗ ಸಕಳರಾಶಿ ಪಂಡಿತರಿಗೆ ಕಯಿಕಜ್ಜ ಗ್ರಾಮವನ್ನು ದಾನಕೊಟ್ಟ ವಿಷಯ ಗೊತ್ತಾಗುತ್ತದೆ. ಇದರಿಂದ ಈ ಊರು ರಾಷ್ಟ್ರಕೂಟರಷ್ಟು ಪ್ರಾಚೀನವಾದುದೆಂದು ತಿಳಿಯುತ್ತದೆ. ನೆರೆಯ ಯಳವತ್ತಿಯ 1195ರ ಶಾಸನ ಈ ಊರನ್ನು ಮಾಗುಂಡಿ ಎಂದೇ ದಾಖಲಿಸಿದೆ. ಆದರೆ ಕೃಷ್ಣದೇವರಾಯನ ಕಾಲದ ಒಂದು ಶಾಸನ (ಅಪ್ರಕಟಿತ)ದಲ್ಲಿ ಈ ಊರನ್ನು 'ಮಾಗಡೆ' ಎಂದು ಕರೆದಿದೆ. ಆದರೆ ಊರಲ್ಲಿಂದು ಪ್ರಾಚೀನ ದೇವಾಲಯಗಳಾವುವು ಉಳಿದಿಲ್ಲ, ಇರುವ ಉಡಚವ್ವನ ಗುಡಿಯನ್ನು ಹಳೆಗುಡಿಯ ಅವಶೇಷಗಳನ್ನು ಬಳಸಿ ಜೀರ್ಣೋದ್ಧಾರ ಮಾಡಿರುವಂತೆ ತೋರುತ್ತದೆ. ಗರ್ಭಗೃಹ ಹಾಗೂ ವಿಶಾಲವಾದ ನವರಂಗವನ್ನು ಹೊಂದಿರುವ ಇದರಲ್ಲಿ 'ಸ್ವಯಂಭೂ' ಉಡಚವ್ವನ ಉದ್ಭವ ಶಿಲೆಯಿದೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದ್ದು, ಇದು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದೆ. ಗುಡಿಯ ಆವರಣದಲ್ಲಿ ವೀರಗಲ್ಲು ಹಾಗೂ ಶಾಸನದ ಶಿರೋಭಾಗಗಳಿವೆ. ಊರ ಬಸ್‌ಸ್ಟ್ಯಾಂಡ್ ಬಳಿ ಎರಡು ವೀರಗಲ್ಲುಗಳು ಹಾಗೂ ಪೀಠಸ್ಥ ಚತುರ್ಮುಖ ಬ್ರಹ್ಮಶಿರ ಶಿಲ್ಪವಿದೆ. ಗುಡಿಯ ಬಳಿಯಲ್ಲೇ ವಿಶಾಲವಾದ ಕೆರೆಯಿದೆ. ಊರಲ್ಲಿಂದು ಬಸವಣ್ಣ, ಈಶ್ವರ, ವೀರಭದ್ರ, ಮೈಲಾರ, ದ್ಯಾಮವ್ವ ಹಾಗೂ ಕರಿಯಮ್ಮನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಮಿಶ್ರಿಕೋಟಿ** : ಕಲಘಟಗಿ ತಾಲೂಕಿನ ಊರಾದ ಮಿಶ್ರಿಕೋಟಿ (ಜನಸಂಖ್ಯೆ : 7,137) ಕಲಘಟಗಿಯಿಂದ ನೈಋತ್ಯಕ್ಕೆ 10 ಕಿ.ಮೀ. ದೂರದಲ್ಲಿದೆ. ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಊರ ಹೊರಗೆ ರಾಮೇಶ್ವರ ದೇವಾಲಯದ ಬಳಿಯಿರುವ ಚಾಳುಕ್ಯ ಮಾಂಡಲಿಕ ಗೋವೆ ಕದಂಬ ಇಮ್ಮಡಿ ಜಯಕೇಶಿಯ ಕ್ರಿ.ಶ. 1126ರ ಶಾಸನ, ಅವನ ಪಟ್ಟದರಸಿಯಾದ ಮೈಳಲದೇವಿಯು ಕುಂದೂರನ್ನು ಆಳುವಾಗ ಬಾರಗಿಯರ ಬಾಚಣ್ಣನಿಗೆ ಊರೊಡೆಯ ಮಲ್ಲರಸ ಹಾಗೂ ಸೋವರಸರು ದಾನ ಕೊಟ್ಟ ವಿಷಯ ತಿಳಿಸಿರೆ, ಕ್ರಿ.ಶ. 1158ರ ಮತ್ತೊಂದು ಶಾಸನ ಗೋವೆ ಕದಂಬ ಪೇರ್ಮಾಡಿದೇವನ ಕಾಲದಲ್ಲಿ ಪುಲಿವಂದ ಮಹಾಪ್ರಭು ಮಲ್ಲರಸ ಹಾಗೂ ಮಲ್ಲಿದೇವರು ಮಾಚೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು 14ನೇ ಶತಮಾನದ ಶಾಸನ ಮುದ್ದಳರಸನಿಗೆ ಎಲ್ಲಪ್ಪ ಒಡೆಯ ಬಿಟ್ಟ ದತ್ತಿಯಾಗಿದೆ. ಊರನ್ನು ಆವರಿಸಿದ್ದ ಮಣ್ಣಿನ ಕೋಟೆಯಿಂದು ಊರ ಹೊರಗಿದ್ದು, ಕೋಟೆಯ ನಡುವೆ ನಿರ್ದಿಷ್ಟ ಹಂತದಲ್ಲಿ 12 ಬುರುಜು (ಹುಡೆ)ಗಳಿವೆ. ಇದರೊಳಗೆ ಇರುವ ರಾಮಲಿಂಗೇಶ್ವರ ಪ್ರಾಚೀನ ದೇವಾಲಯಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದ್ದು, ಗುಡಿಯ ಪ್ರವೇಶಕ್ಕೆ ನವರಂಗದ ಪೂರ್ವ ದಕ್ಷಿಣದಲ್ಲಿ ದ್ವಾರಗಳಿವೆ. ದಕ್ಷಿಣದ ದ್ವಾರಕ್ಕೆ ಕಮಲಾಕೃತಿಯ ಕೈಪಿಡಿಯಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗರ್ಭಗೃಹ, ಹಾಗೂ ಅಂತರಾಳದ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿವೆ. ನವರಂಗದ ನಡುವಿನ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯಲ್ಲಿವೆ. ಮುಖಮಂಟಪವನ್ನು ನಂದಿಮಂಟಪವನ್ನಾಗಿಸಿದ್ದಾರೆ. ನಂದಿಮೂರ್ತಿಯಿದೆ. ಅಧಿಷ್ಠಾನದವರೆಗೆ ಸುಸ್ಥಿತಿಯಲ್ಲಿರುವ ಈ ಗುಡಿಯ ಮೇಲು ಭಾಗವನ್ನು ಪುನಃ ರಚಿಸಿದ್ದಾರೆ. ಕೋಟೆ ಹನುಮಪ್ಪನ ಗುಡಿಯಲ್ಲಿ ಆಭರಣಗಳಿಂದ ಅಲಂಕೃತವಾದ ಕ್ರಿ.ಶ. 14ನೇ ಶತಮಾನದ ಸುಂದರವಾದ ಹನುಮಂತನ ಮೂರ್ತಿಯಿದೆ. ಇಲ್ಲಿನ ಕೋಟೆ ವಿಜಯನಗರ ಕಾಲದಾಗಿದ್ದು ಆದಿಲ್ ಷಾಹಿಗಳಿಂದ ವಿಸ್ತರಿಸಲ್ಪಟ್ಟಿದೆ. ಕಲ್ಯಾಣದ ಚಾಳುಕ್ಯರ ಕಾಲದ ಜೈನ ಬಸದಿಯೊಂದಿದ್ದು, ಇಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದೆ. ಉಳಿದಂತೆ ಊರಲ್ಲಿ, ಬಸವಣ್ಣ, ಮೈಲಾರ, ಈಶ್ವರ, ವೀರಭದ್ರ, ದುರ್ಗವ್ವ ಹಾಗೂ ದ್ಯಾಮವ್ವನ ದೇವಾಲಯಗಳಿವೆ. ಊರಲ್ಲಿ ನಾಲ್ಕಾರು ಮಸೀದಿಗಳಿದ್ದು, ಜುಮ್ಮಾಮಸೀದಿ ಆದಿಲ್ ಷಾಹಿಗಳ ಕಾಲದ್ದು. ಇದು ವಿಶಾಲವಾಗಿದ್ದು ಇದರ ಮೇಲೆ ಪರ್ಷಿಯನ್ ಶಾಸನವಿದೆ. ನಾಲ್ಕು ದರ್ಗಾಗಳಿದ್ದು ಮೆಹಬೂಬು ಸುಬಾನಿಯ ಉರುಸು ದಸ್ತಗಿರಿ ತಿಂಗಳಲ್ಲಿ ನಡೆಯುತ್ತದೆ.

**ಮುಂಡರಗಿ** : ತಾಲೂಕು ಕೇಂದ್ರವಾದ ಮುಂಡರಗಿಯು (ಜನಸಂಖ್ಯೆ : 14,542) ಧಾರವಾಡದಿಂದ ಆಗ್ನೇಯಕ್ಕೆ 110 ಕಿ.ಮೀ. ದೂರದಲ್ಲಿ ಗದಗಿನಿಂದ 36 ಕಿ.ಮೀ. ದೂರದಲ್ಲಿದೆ. ಈ ಊರಿನ ಪ್ರಾಚೀನ ಹೆಸರು 'ಮೃಡಗಿರಿ' ಎಂದೂ, ಮುಂದೆ ಇದೇ ಮುಂಡರಗಿ ಆಯಿತೆಂದು ಸ್ಥಳೀಕರು ಹೇಳುತ್ತಾರೆ. ಊರ ಸಮೀಪದ ಗುಡ್ಡವನ್ನೇ ಅವರು ಮೃಡಗಿರಿ ಎಂದು ಕರೆಯುತ್ತಾರೆ. ಡಾ|| ಕಲ್ಬುರ್ಗಿಯವರು ಇದು ಜನಾಂಗವಾಚಿ ಎಂದು ಗುರುತಿಸಿ ಮುಂಡರ + ಕೆಯ್=ಮುಂಡರಗೆಯ್ ಮುಂಡರಗಿ ಆಯಿತೆಂದು ಅರ್ಥೈಸುತ್ತಾರೆ. ಇಲ್ಲಿನ ಬೆಟ್ಟದ ಮೇಲೆ ಕನಕ ನರಸಿಂಹಸ್ವಾಮಿ ಗುಹೆ ಇದೆ; ಆದರಿಂದಾಗಿ ಇಲ್ಲಿ ಹೋಳಿ ಆಚರಣೆಯಿಲ್ಲದಿರುವುದು ಈ ಊರಿನ ವೈಶಿಷ್ಟ್ಯವಾಗಿದೆ. ಗುಡ್ಡದ ಮೇಲಿರುವ ಶಿವಾಲಯದಲ್ಲಿರುವ 16ನೇ ಶತಮಾನದ ಶಾಸನ ಗೌಡ ಬಣಜಿಗ ಕುಂಬಾರಾದಿಗಳು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದರಿಂದ ಈ ಊರು ಅತ್ಯಂತ ಪ್ರಾಚೀನದ್ದಲ್ಲವೆಂದು ಊಹಿಸಬಹುದಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಭೀಮರಾಯನಿಂದಾಗಿ ಈ ಊರು ಪ್ರಸಿದ್ಧವಾಗಿದೆ. ಕನಕ ನರಸಿಂಹನ ಗುಡ್ಡದ ಮೇಲೆ ಮಲ್ಲಿಕಾರ್ಜುನ, ಕನಕನರಸಿಂಹನ ಗುಡಿಗಳಿದ್ದು, ಕನಕನರಸಿಂಹನ ಜಾತ್ರೆ ಹೋಳಿ ಹುಣ್ಣಿಮೆಯಾಗಿ ಐದು ದಿನಕ್ಕೆ ನಡೆಯುತ್ತದೆ. ಗುಡ್ಡದ ಮೇಲೆ ಬೃಹತ್ತಾದ ನೀರಿನ ಟ್ಯಾಂಕ್‌ನಿಂದ, ತುಂಗಭದ್ರಾ ನೀರನ್ನು ಊರಿಗೆ ಸರಬರಾಜು ಮಾಡಲಾಗುತ್ತದೆ. ಊರಲ್ಲಿ ಹನುಮಂತ, ಕೆಂಗಣ್ಣು ದುರ್ಗವ್ವ, ಕನ್ನಿಕಾಪರಮೇಶ್ವರಿ ಅಂಬಾಭವಾನಿ, ವಿಠಲ, ಪಾಂಡುರಂಗ, ಬಸವೇಶ್ವರ, ವೆಂಕಟೇಶ, ಗ್ರಾಮದೇವತೆ ಚೌಡಮ್ಮ ಕೋಟೆ ಆಂಜನೇಯ, ಬೀರದೇವರು, ಗಣಪತಿ, ಕರಿಯಮ್ಮ ಮಾಯಮ್ಮ ಹಾಗೂ ರಣದಮ್ಮನ ಗುಡಿಗಳು ಅನ್ನದಾನೇಶ್ವರ ಮಠ ಹಾಗೂ ತೋಂಟದಾರ್ಯ ಮಠದ ಶಾಖೆಗಳೂ ಇವೆ. ಅನ್ನದಾನೇಶ್ವರ ಸ್ವಾಮಿಗಳ ಜಾತ್ರೆಯು ಭಾರತ ಹುಣ್ಣಿಮೆಗೆ ಮೂರು ದಿನ ಮೊದಲು ನಡೆಯುತ್ತದೆ. ಕೋಟೆಯಿರುವ ಸ್ಥಳವನ್ನು ಭೀಮರಾಯನ ಕೋಟೇ ಎಂದೇ ಕರೆಯುತ್ತಾರೆ. ಮುಂಡರಗಿ ಭೀಮರಾಯನ ವಂಶಸ್ಥರು ಇಂದಿಗೂ ಇಲ್ಲಿದ್ದಾರೆ. ಉರಲ್ಲಿರುವ ಜುಮ್ಮಾಮಸೀದಿ ದೊಡ್ಡದಾಗಿದ್ದು ಮೂರು ದರ್ಗಾಗಳಿವೆ.

**ಮುಕ್ತಿ ಮಂದಿರ** : ಶಿರಹಟ್ಟಿ ತಾಲೂಕಿನ ಮುಕ್ತಿಮಂದಿರುವ ಲಕ್ಷ್ಮೇಶ್ವರದಿಂದ ಆಗ್ನೇಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಬಾಳೆಹೊನ್ನೂರಿನ ರಂಬಾಪುರಿ ಪೀಠದ ಲಿಂಗೈಕ್ಯ ರೇಣುಕಾ ವೀರಗಂಗಾಧರಸ್ವಾಮಿಗಳು 1940ರಿಂದಲೂ ಇಲ್ಲಿ ನೆಲೆಸಿದ್ದು

ತತ್ಪರಿಣಾಮವಾಗಿ, ವನವು ತಪೋವನವಾಗಿ ಮಾರ್ಪಟ್ಟು ಧರ್ಮಕ್ಷೇತ್ರವಾಗಿದೆ. ಸರ್ವ ಧರ್ಮಗಳನ್ನು ಪ್ರತಿನಿಧಿಸುವ ಮಂಟಪಗಳಿರುವ ಮುಕ್ತಿಮಂಟಪವು 80 ಎಕರೆಯಷ್ಟು ವಿಶಾಲವಾದ ಕ್ಷೇತ್ರವನ್ನು ಹೊಂದಿದ್ದು, ಶಿವ-ಪಾರ್ವತಿ, ರೇಣುಕಾಮಂದಿರ, ಪೂಜಾಮಂಟಪ, ದಾಸೋಹಮನೆ, ಸಂಸ್ಕೃತ ಪಾಠಶಾಲೆ, ಗುರುಕುಲಾಶ್ರಮ ಹಾಗೂ ಉದ್ಯಾನವನಗಳಿಂದ ಸುತ್ತುವರಿದು ಪ್ರಶಾಂತಿಯ ತವರಾಗಿ ಶೋಭಿಸುತ್ತಿದ್ದು ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ಕೇಂದ್ರವಾಗಿದೆ. ಮಾನವಕುಲ ಒಂದೇ ಎಂಬ ಸಂದೇಶ ಸಾರುವ ಉದ್ದೇಶವನ್ನು ಹೊಂದಿರುವ 'ಮುಕ್ತಿಮಂದಿರ' ವಿರುವ ಪರಿಸರದ ಮಹಾತ್ಮೆಯು ಬಗ್ಗೆ ಒಂದು ಐತಿಹ್ಯವಿದೆ. ಕ್ರಿ.ಶ. 19ನೇ ಶತಮಾನದಲ್ಲಿ ಜೀವಿಸಿದ್ದ ಶಿಶುನಾಳಷರೀಫರು, ಸಂಚಾರದಲ್ಲಿದ್ದಾಗ ಒಂದೆಡೆ ಕುಳಿತು, ಚಿಲುಮೆ ಸೇದುವಾಗ ಅದರಲ್ಲಿಯ ಹರಳು ಜಾರಿ ಬಿತ್ತು. ಆಗ ಷರೀಫರು ಎರಡು ಕಲ್ಲುಗಳ ಮೇಲೆ ಹರಳನ್ನು ಇಟ್ಟು, ಗುಡಿ ಆಕಾರ ಮಾಡಿ 'ದೊಡ್ಡ ಜಾಗಾ ಆಗಿ ಪ್ರಸಿದ್ಧಿ ಆಗು ಹೋಗು' ಎಂದರಂತೆ. ಅದೇ ಪ್ರಕಾರ ಇಂದು ಮುಕ್ತಿ ಮಂದಿರವು ಧರ್ಮಕ್ಷೇತ್ರವಾಗಿ ಮೆರೆಯುತ್ತಿದೆ ಎಂದು ಸ್ಥಳಿಕರು ಹೇಳುತ್ತಾರೆ. ಇಂದು ಇದು ಸರ್ವಧರ್ಮ ಸಮನ್ವಯತೆಯ ಸಂದೇಶವನ್ನು ಸಾರುವ ಸ್ಥಾರಕವಾಗಿ ಶೋಭಿಸುತ್ತಿದೆ.

**ಮುಗದ** : ಧಾರವಾಡ ತಾಲೂಕಿನ ಮುಗದವು (ಜನಸಂಖ್ಯೆ 4,185) ಪ್ರಾಚೀನ ಶಾಸನಗಳಲ್ಲಿ 'ಮುಗುಂದ', 'ಮುಗುನ್ದ' 'ಮುಗುದ' ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಈ ಊರು ಧಾರವಾಡದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿ ಆಳ್ನಾವರ ರಸ್ತೆಯಲ್ಲಿದೆ. ಹಿಂದೆ ಇದು ಹಲಸಿಗೆ-12,000ಕ್ಕೆ ಸೇರಿದ, ಮಹಾರಾಜವಾಡಿ ನಾಡಿಗೆ ತಿಲಕಪ್ರಾಯವಾಗಿದ್ದ ಮುಗುಂದ-30 ಕಂಪಣದ ಆಡಳಿತ ಕೇಂದ್ರವಾಗಿತ್ತು. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಒಂದನೇಯ ಸೋಮೇಶ್ವರನ ಕ್ರಿ.ಶ. 1045ರ ಶಾಸನ, ಮುಗುಂದ - 30ರ ನಾಡಗೌಡ ಚಾವುಂಡಗೌಡನು ಮುಗುನ್ದದಲ್ಲಿ ತಾನು ಮಾಡಿಸಿದ ಸಮ್ಯಕ್ತ ರತ್ನಾಕರ ಚೈತ್ಯಾಲಯಕ್ಕೆ ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತ ಮತ್ತಷ್ಟು ಮುಂದುವರಿದು, ಇವನ ಮೊಮ್ಮಗ ಮಹಾಸಾಮಂತ ಮಾರ್ತಂಡಯ್ಯನು, ತನ್ನ ತಾತ ಮಾಡಿಸಿದ ಬಸದಿಯನ್ನು ಬೆಚ್ಚಿ ನಾಟಕ ಶಾಲೆಯನ್ನೂ ಸೇರಿಸಿ ನಿರ್ಮಿಸಿದನೆಂದು ಹೆಳುತ್ತದೆ. ಹೆಗ್ಗೆರೆ ಬಳಿಯಿರುವ ಆರನೇಯ ವಿಕ್ರಮಾದಿತ್ಯನ ಕ್ರಿ.ಶ. 1125ರ ಶಾಸನ ಮುಗುಂದ-30ರ ನಾಡಗೌಡ ಚಾಮುಂಡರಾಯನು ಮಾರ್ಕಂಡೇಯ ಕೆರೆಗೆಂದು ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಹೆಗ್ಗೆರೆ ಬಳಿಯಿರುವ 12ನೇ ಶತಮಾನದ ವೀರಗಲ್ಲು ಗೋಗ್ರಹಣದಲ್ಲಿ ಮಡಿದ ವೀರಣ ಸ್ಮಾರಕಶಿಲ್ಪವಾಗಿದೆ. ಜೈನ ತೀರ್ಥಂಕರ ಪಾದ ಪೀಠದ ಮೇಲಿರುವ ಸುಮಾರು ಕ್ರಿ.ಶ. 12 ಶತಮಾನದ ಶಾಸನ, ಶಿಷ್ಯೆಯೊಬ್ಬಳು ಚೆನ್ನಪಾರ್ಶ್ವನಾಥನನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಿಂದ ಹಿಂದೆ ಮುಗದ ಒಂದು ಪ್ರಮುಖ ಜೈನಕೇಂದ್ರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ಇಂದು ಕೂಡ ಮುಗದದಲ್ಲಿ ಪ್ರಾಚೀನ ಕಾಲದ ಪಾರ್ಶ್ವನಾಥ ಬಸದಿ ಇದೆ. ಇಂದು ಜೀರ್ಣೋದ್ಧಾರಗೊಂಡಿರುವ ಈ ಗುಡಿ ಗರ್ಭಗುಡಿ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದ್ದು ಗರ್ಭಗುಡಿಯಲ್ಲಿ ಐದಡಿ ಎತ್ತರದ ಪಾರ್ಶ್ವನಾಥನ ಮೂರ್ತಿಯಿದೆ. ಪಾಶ, ಅಂಕುಶ, ಶ್ರೀಫಲ ಹಾಗೂ ಕಮಲಗಳನ್ನು ನಾಲ್ಕು ಕೈಗಳಲ್ಲಿ ಧರಿಸಿದ ಪದ್ಮಾಸೀನವಾಗಿರುವ ಪದ್ಮಾವತಿಯ ಸುಂದರ ಶಿಲ್ಪವಿದೆ. ಈಕೆ ಕುಳಿತಿರುವ ಪೀಠದಲ್ಲಿ ಹಂಸವಿದೆ. ಈಕೆಯ ಕಿರೀಟದ ಮೇಲೆ ಐದು ಹೆಡೆಯ ಸರ್ಪವಿದೆ. ಈ ಗುಡಿಯಲ್ಲಿರುವ ಸುಮಾರು ವಿಳೂವರೆ ಅಡಿ ಎತ್ತರದ ಶಾಸನ ಇದನ್ನು ಸಮ್ಯಕ್ತರತ್ನ ಬಸದಿಯೆಂದು ವರ್ಣಿಸಿದೆ. ಈ ಗುಡಿಯಲ್ಲಿ ಸುಂದರವಾದ ಕಂಚಿನ ಉತ್ಸವ ಮೂರ್ತಿಗಳಿವೆ.

ಊರ ಹೊರಗೆ ಪಾಳು ಬಿದ್ದಿರುವ ರಾಮಲಿಂಗೇಶ್ವರ ಗುಡಿಯಿದೆ. ಗರ್ಭಗೃಹ ಹಾಗೂ ವಿಶಾಲವಾದ ನವರಂಗವನ್ನು ಹೊಂದಿರುವ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಮುಂದೆ ನಂದಿಯಿದೆ. ನವರಂಗದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಮುಕ್ಕಾಗಿರುವ ಮಹಿಷಮರ್ದಿನಿ, ಆದಿತ್ಯ, ಮೈಲಾರ, ಸಪ್ತಮಾತೃಕಾ ಪಟ್ಟಿಕೆ, ಗಣಪತಿ, ಕಾರ್ತಿಕೇಯ ಹಾಗೂ ಉಮಾ-ಮಹೇಶ್ವರ ಶಿಲ್ಪಗಳಿವೆ. ಇವುಗಳಲ್ಲಿ ಕೊನೆಯ ಶಿಲ್ಪ ಬಹಳ ಸುಂದರವಾಗಿದ್ದು ಸಂಗಡ ಗಣಪತಿ ಕಾರ್ತಿಕೇಯರನ್ನೂ ಕೆತ್ತಲಾಗಿದೆ. ಊರಕೆರೆದಂಡೆ ಮೇಲೆ ವೀರಗಲ್ಲುಗಳಿದ್ದು, ಅವುಗಳಲ್ಲೊಂದು ಆಕರ್ಷಕವಾದ ಹುಲಿಬೇಟೆ ವೀರಗಲ್ಲಾಗಿದೆ. ಇಲ್ಲೂ ಮಹಿಷಮರ್ದಿನಿ ಹಾಗೂ ಗಣಪತಿಯ ಭಗ್ನಶಿಲ್ಪಗಳಿವೆ. 110 ಎಕರೆಯಷ್ಟು ವಿಶಾಲವಾದ ಇಲ್ಲಿನ ಕೆರೆ ಮತ್ತೊಂದು ಆಕರ್ಷಣೆ; ಎರಡು ತೂಬುಗಳನ್ನುಳ್ಳ ಇದು 650 ಎಕರೆ ಜಮೀನಿಗೆ ನೀರುಣಿಸುತ್ತದೆ. ಊರಲ್ಲಿ ಬಸವಣ್ಣ, ವಿಠಲ, ಹನುಮಂತ, ದುರ್ಗಮ್ಮ ಹಾಗೂ ಮಾಸ್ತಮ್ಮನ ಗುಡಿಗಳಿವೆ. ಮೂರು ಮಸೀದಿಗಳು ಹಾಗೂ ಪೀರ್‌ಜಾದಾನ ದರ್ಗಾವಿದ್ದು ಬೇಸಿಗೆಯಲ್ಲಿ ಉರುಸು ನಡೆಯುತ್ತದೆ.

**ಮುತ್ತೂರು** : ಬ್ಯಾಡಗಿ ತಾಲೂಕಿನ ಮುತ್ತೂರು (ಜನಸಂಖ್ಯೆ 1,829) ಬ್ಯಾಡಗಿಯಿಂದ ನೈರುತ್ಯಕ್ಕೆ 21 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲೂ 'ಮುತ್ತೂರು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬಾಸವೂರು-140ಕ್ಕೆ ಸೇರಿದ ಕಂಪಣ ಕಾಗಿನೆಲೆ-12ರಲ್ಲಿ ಇತ್ತೆಂದು ತೋರುತ್ತದೆ. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಮುಮ್ಮಡಿ ಸೋಮೇಶ್ವರನ ಕಾಲದ ಕ್ರಿ.ಶ. 1138ರ ಶಾಸನ, ಕಮನವಳ್ಳಿಯ ಜಕ್ಕಿಸೆಟ್ಟಿ ಮುತ್ತೂರನ್ನು ಮುತ್ತಿದಾಗ, ಕಮ್ಮಾರ ಮಾಚನ ಅಣ್ಣ ಹಳ್ಳಿಗನು ಹೋರಾಡುತ್ತ ಮಡಿದ ವಿಷಯವನ್ನು ತಿಳಿಸಿದರೆ, ಕಲಚೂರಿ ಸೋವಿದೇವನ ಕಾಲಕ್ಕೆ ಸೇರಿದ ಕ್ರಿ.ಶ. 1172ರ ಶಾಸನ ದಂಡನಾಯಕನ ಕೇಸಿಮಯ್ಯನು ಮುತ್ತೂರ ತುರುಗಳನ್ನು ಕೊಂಡು ಹೋಗುವಾಗ, ಅಗಸರ ಕಾಳೆಯನು ಶತ್ರುಗಳನ್ನು ಎದುರಿಸಿ ಹೋರಾಡುತ್ತ ಮಡಿದ ವಿಷಯವನ್ನು ದಾಖಲಿಸುತ್ತ, ಅವನ ಕುಟುಂಬಕ್ಕೆ ಮನೆ ಹಾಗೂ ಗದ್ದೆಯನ್ನು ದಾನ ಕೊಟ್ಟ ವಿಷಯವನ್ನೂ ತಿಳಿಸುತ್ತದೆ. ಇದೇ ಕಾಲಕ್ಕೆ ಸೇರಿದ ಇನ್ನೆರಡು ವೀರಗಲ್ಲುಗಳು ಗೋಗ್ರಹಣದಲ್ಲಿ ಮಡಿದ ಕಮ್ಮಾರ ಗಣಕೋಜನಂತಹ ವೀರರ ಮರಣದ ಬಗ್ಗೆ ದಾಖಲಿಸುತ್ತದೆ. ಇದೇ ರೀತಿ ಕ್ರಿ.ಶ. 1382ರ ವೀರಗಲ್ಲು ಶಾಸನ ಬೋಮಯ್ಯನ ವೀರಮರಣ ಹಾಗೂ ಅವನ ಮಡದಿ ಕಾಮಾಯಿಯ ಸಹಗಮನದ ಬಗ್ಗೆ ತಿಳಿಸುತ್ತದೆ. ಊರ ಹೊರಗೆ ಕಲ್ಲೇಶ್ವರ ಗುಡಿ ಆವರಣದಲ್ಲೇ ಇರುವ ಇವೆಲ್ಲವೂ ವೀರಗಲ್ಲು ಶಾಸನಗಳಾಗಿವೆ. ಇತ್ತೀಚೆಗೆ ಇಲ್ಲಿನ ಶಿವಪ್ಪ ಬಸಪ್ಪ ಅಂಗಡಿಯವರ ಬಳಿಯಿದ್ದ ಕದಂಬ ಅರಸ ವಿಜಯಶಿವ ಮಾಂಧಾತೃವರ್ಮನ ಆಳ್ವಿಕೆಯ 13ನೇ ವರ್ಷದಲ್ಲಿ ನೀಡಲ್ಪಟ್ಟಿರುವ ತಾಮ್ರ ಶಾಸನ ಪತ್ತೆಯಾಗಿದ್ದು, ಈ ಶಾಸನವನ್ನು ಓದಿ, ಅದರ ಪಾಠವನ್ನು ಡಾ|| ದೇವರಕೊಂಡಾರೆಡ್ಡಿಯವರು ಪ್ರಕಟಿಸಿದ್ದಾರೆ. ಇದೊಂದು ದಾನ ಶಾಸನವಾಗಿದ್ದು, ಶಿವಮಾಂಧಾತೃವು ದ್ರೋಣಾಚಾರ್ಯ ಹಾಗೂ ವಲಾರ್ಯರಿಗೆ ಮಾಕುಂದಹಾರದ ವಲಶಟ್ಟಿ ಗ್ರಾಮದಲ್ಲಿ 20 ನಿವರ್ತನ ಹಲ ಕ್ಷೇತ್ರವನ್ನು (ಸಾಗುವಳಿ ಭೂಮಿ) ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 5 ನೇ ಶತಮಾನಕ್ಕೆ ಸೇರಿದ ಈ ಶಾಸನ ಇಲ್ಲಿ ಲಭಿಸಿದ್ದರೂ, ಶಾಸನಕ್ಕೂ ಮುತ್ತೂರಿಗೂ ಏನೇನೂ ಚಾರಿತ್ರಿಕ ಸಂಬಂಧವಿಲ್ಲ.

ಊರ ಹೊರಗಿರುವ ಕಲ್ಲೇಶ್ವರ ಗುಡಿ ಸುಮಾರು ಕ್ರಿ.ಶ. 10ನೇ ಶತಮಾನದ ರಚನೆಯಾಗಿದೆ. ಮೂರು ಗರ್ಭಗೃಹಗಳನ್ನು ಹೊಂದಿರುವ ಈ ತ್ರಿಕೂಟದ ಪ್ರಧಾನ ಗರ್ಭಗೃಹಕಷ್ಟೆ ತೆರೆದ ಅರ್ಧಮಂಟಪವಿದ್ದು, ಉಳಿದ ಗರ್ಭಗೃಹಗಳಿಗಿಲ್ಲ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದರೆ, ಉತ್ತರದ ಗರ್ಭಗೃಹದಲ್ಲಿ ವಿಷ್ಣು ಹಾಗೂ ದಕ್ಷಿಣದ ಗರ್ಭಗೃಹದಲ್ಲಿ ಆದಿತ್ಯನ ಮೂರ್ತಿಗಳಿವೆ. ಪ್ರಧಾನ ಗರ್ಭಗೃಹದ ಬಾಗಿಲವಾಡ ಪಂಚಶಾಖೆಯನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದ್ದು, ಉಳಿದೆರಡು ಗರ್ಭಗೃಹಗಳ ಬಾಗಿಲುವಾಡ ಏಕಶಾಖೆಯಿಂದ ಕೂಡಿದ್ದು ಜಾಲಂಧ್ರಗಳಿವೆ. ತೆರೆದ ಅರ್ಧಮಂಟಪವು ತ್ರಿಮೂರ್ತಿ ಕೆತ್ತನೆಯಿರುವ ಸುಂದರವಾದ ಮಕರ ತೋರಣದಿಂದ ಅಲಂಕೃತವಾಗಿದೆ. ಉತ್ತರ-ದಕ್ಷಿಣದ ಗರ್ಭಗೃಹಗಳಲ್ಲಿ ಐದಡಿ ಎತ್ತರದ ಆದಿತ್ಯ ಹಾಗು ವಿಷ್ಣುವಿನ ಮೂರ್ತಿಗಳಿವೆ. ನವರಂಗದಲ್ಲಿರುವ ಐದು ದೇವಕೋಷ್ಠಗಳಲ್ಲಿ ಎರಡು ಅಡಿ ಎತ್ತರದ ಸಪ್ತಮಾತೃಕಾ, ಶಿವಲಿಂಗ, ಉಮಾ-ಮಹೇಶ್ವರ, ಭೈರವ ಹಾಗೂ ಮಹಿಷಮರ್ಧಿನಿಯರ ಸುಂದರ ಶಿಲ್ಪಗಳಿವೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯಲ್ಲಿವೆ. ಈ ದೇವಾಲಯದ ಭಿತ್ತಿಯವರೆಗೆ ಮಣ್ಣು ಹಾಕಿ ಮುಚ್ಚಿದ್ದಾರೆ. ನವರಂಗದ ಪ್ರವೇಶದ್ವಾರವೂ ಸುಂದರವಾಗಿದೆ. ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಪ್ರಧಾನ ಗರ್ಭಗೃಹದ ಶಿಖರ ಕದಂಬ ನಾಗರ ಶೈಲಿಯಲ್ಲಿದೆ. ಈ ಗುಡಿಯ ಮುಂದೆ 12 ವೀರಗಲ್ಲು, ಮಾಸ್ತಿಕಲ್ಲುಗಳು ನಿಂತಿವೆ.

ಇವುಗಳೊಂದಿಗೆ ಊರಲ್ಲಿ ದ್ಯಾಮವ್ವ, ಹನುಮಂತ, ಕರಿಯಮ್ಮ, ಎಲ್ಲಮ್ಮ ಹಾಗೂ ದುಂಡಿ ಬಸವಣ್ಣನ ಗುಡಿಗಳಿವೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಮುದೇನೂರು** : ರಾಣೆಬೆನ್ನೂರು ತಾಲೂಕಿನ ಮುದೇನೂರು (ಜನಸಂಖ್ಯೆ : 2340) ಹೊಳೆಆನ್ವೇರಿಗೆ ಐದು ಕಿ.ಮೀ. ದೂರದಲ್ಲಿರುವ ಈ ಊರಲ್ಲಿ (ಶಾಸನಗಳಲ್ಲಿ ಮುದುಗುನೂರು) ಮೂರು ಶಾಸನಗಳಿದ್ದು 1098ರ ಶಾಸನ ಮುದುಗುನೂರ ಗೋವಿಂದ ಥಯಸಾಸರಿಗೆ ಹಲವಾರು ಸುಂಕ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. 1181ರ ಮತ್ತೊಂದು ಶಾಸನ ಕುರುಬರ ಕೊಟಿಯನಾಯಕನ ಶೌರಕ್ಕಾಗಿ ದಾನ ನೀಡಿ ವೀರಗಲ್ಲು ನಿಲ್ಲಿಸಿದ ಅಂಶವನ್ನು ಹೇಳುತ್ತದೆ. ಮೇಲೆ ಸೂಚಿಸಿರುವ ಶಾಸನೋಕ್ತ ಶಂಕರನಾರಾಯಣ ಗುಡಿ ಹಲವಾರು ಮಾರ್ಪಡಿನೊಂದಿಗೆ ಪೂರ್ಣ ಜೀರ್ಣೋದ್ಧಾರ ಹೊಂದಿ ನವೀನವೆಂದೂ ತೋರಿದರೂ, ಇಲ್ಲಿ ಪ್ರಾಚೀನ ಕಾಲದ ಸಪ್ತಮಾತೃಕಾ, ಮಹಿಷ ಮರ್ದಿನಿ, ವಿಷ್ಣು ಹಾಗೂ ಉಮಾಮಹೇಶ್ವರರ ಆಕರ್ಷಕ ಮೂರ್ತಿಗಳನ್ನು ರಕ್ಷಿಸಿಡಲಾಗಿದೆ.

**ಮುಮ್ಮಿಗಟ್ಟಿ** : ಧಾರವಾಡ ತಾಲೂಕಿನ ಮುಮ್ಮಿಗಟ್ಟಿಯು (ಜನಸಂಖ್ಯೆ : 3,206) ಧಾರವಾಡದಿಂದ ವಾಯುವ್ಯಕ್ಕೆ ಒಂಭತ್ತು ಕಿ.ಮೀ. ದೂರದಲ್ಲಿದೆ. ಈ ಊರಿಗೆ ಹಿಂದೆ 'ಅರಣಿಗೆರೆಯಹಳ್ಳಿ' ಎಂಬ ಹೆಸರು ಇದ್ದಿರಬೇಕೆಂದು ಶಾಸನದಿಂದ ಊಹಿಸಬೇಕಾಗುತ್ತದೆ. ಹಿಂದೆ ಇದು ಕುನ್ನೂರು-500ಕ್ಕೆ ಸೇರಿದ ಗ್ರಾಮವಾಗಿತ್ತು. ಈ ಊರಿಂದ ಈವರೆಗೆ ವರದಿಯಾಗಿರುವ ಶಾಸನ ಕ್ರಿ.ಶ. 1124 ರದ್ದಾಗಿದ್ದು, ಊರ ಹೊರಗೆ ಗದಗ ರಸ್ತೆಯ ಹೊಲದಲ್ಲಿರುವ ಕಲ್ಲೇಶ್ವರ ಗುಡಿ ಬಳಿಯಿದೆ. ಗೋವೆ ಕದಂಬ ಜಯಕೇಶಿ - ಮೈಳಲದೇವಿಯರು ಆಳುತ್ತಿದ್ದಾಗ, ತನ್ನ ತಂದೆ ಶಿವಭಕ್ತ ಮಲ್ಲಗೌಡನ ಸ್ವರ್ಗಾರ್ಥವಾಗಿ, ಉದಯಮಗೌಡನು ಮಹಾಪಟ್ಟಣ ಕುಂದೂರ 16 ಗೌಡರು, ಪಂಚ ಮಠಸ್ಥಾನದ ಸನ್ನಿಧಿಯಲ್ಲಿ ಕಲಿದೇವರಿಗೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನ ನಿಂತಿರುವ ಸ್ಥಳದಲ್ಲಿರುವ ಗುಡಿ ಶಿಥಿಲಗೊಂಡು, ಸರಳವಾಗಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ ಹಾಗೂ ವಿಶಾಲವಾದ ಅರ್ಧಮಂಟಪವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಸ್ವಯಂಭೂಲಿಂಗವಿದೆ. ಊರೊಳಗೆ ಜೈನ ಬಸದಿಯಿದ್ದು, ತೀರ್ಥಂಕರ ಮೂರ್ತಿಯಿದೆ. ನರೇಂದ್ರದ ಕ್ರಿ.ಶ. 1125ರ ಶಾಸನ, ಕುಂದೂರ ಪಶ್ಚಿಮಕ್ಕೆ ಸವಣನಪಳ್ಳಿ ಇದ್ದ ವಿಷಯವನ್ನು ತಿಳಿಸುತ್ತದೆ. ಮುಮ್ಮಿಗಟ್ಟಿಯಲ್ಲಿ ಜೈನ ಬಸದಿ ಇರುವುದನ್ನು ನೋಡಿದರೆ, ಮೇಲಿನ ಶಾಸನೋಕ್ತ ಸವಣನಪಳ್ಳಿ ಇದೇ ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಊರಲ್ಲಿ ಈಶ್ವರ, ಬಸವಣ್ಣ, ಹನುಮಂತ, ದ್ಯಾಮವ್ವ ಹಾಗೂ ಕರಿಯವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಮುಳುಗುಂದ** : ಗದಗ ತಾಲೂಕಿನ ಮುಳುಗುಂದವು (ಜನಸಂಖ್ಯೆ : 15,760) ಗದಗಿನಿಂದ 22 ಕಿ.ಮೀ. ದೂರದಲ್ಲಿದೆ. ಈಗ ಹೋಬಳೀ ಕೇಂದ್ರವಾಗಿದ್ದು ಪ್ರಾಚೀನ ಕಾಲದಲ್ಲಿ ಬೆಳ್ವಲ-300 ವ್ಯಾಪ್ತಿಯಲ್ಲಿದ್ದ ಮುಳುಗುಂದ - 12 ಎಂಬ ಆಡಳಿತ ವಿಭಾಗದ ರಾಜಧಾನಿಯಾಗಿದ್ದು ಸು.ಕ್ರಿ.ಶ. 9ನೇ ಶತಮಾನದಿಂದಲೂ ಅಸ್ತಿತ್ವದಲ್ಲಿರುವ ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಜೈನಯತಿಗಳು ಹೆಚ್ಚಾಗಿ ವಾಸಿಸುತ್ತಿದ್ದುದರಿಂದ (ಜೈನಪೀಠವಾಗಿದ್ದ ಕಾರಣ) ಇದು ಮುನಿಗುಂದ ಇದ್ದು ಅನಂತರ 'ಮುಳುಗುಂದ' ಆಗಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದರ ಮೊದಲ ರೂಪ 'ಮೂಲಗುಂದ'ಎಂದೂ ಇರಬಹುದೆಂದು ಅಭಿಪ್ರಾಯವಿದೆ. ಆದರೆ 'ಮೂಲ' ಎಂಬುದು 'ಮುಳ್ಳ' ಆಗುವುದು ಲಿಪಿಯ ಬೆಳವಣಿಗೆಯ ದೃಷ್ಟಿಯಿಂದ ಅಸಾಧ್ಯವಾಗಿದೆ. ಅಮೋಘ ವರ್ಷ ನೃಪತುಂಗನ ಕ್ರಿ.ಶ. 866ರ ನೀಲಗುಂದದ ಶಾಸನದಲ್ಲಿ ಮುಳಗುಂದ-12ರ ಉಲ್ಲೇಖವಿದೆ. ಶಾಸನ ಕವಿಗಳ ದೃಷ್ಟಿಯಲ್ಲಿ ಮುಳಗುಂದ ಅನಾದಿಪಟ್ಟಣ. ಈ ಊರಿನಲ್ಲಿರುವ ಪೇಟೆಬಸಪ್ಪನ ಗುಡಿಯ ಬಳಿಯ ಶಾಸನದಲ್ಲಿ ಇದು ನಾಲ್ಕು ಯುಗಗಳಲ್ಲಿ ನಾಲ್ಕೂ ವಿಧವಾಗಿ ಮಹತ್ವವೆತ್ತ ರಾಜಧಾನಿ ಪಟ್ಟಣ, ಎಂದಿದ್ದರೆ ಇದು ಇಂದ್ರನ ಅಮರಾವತಿಗೆ ಸಮಾನವೆಂದು ಕವಿಗಳು ವರ್ಣಿಸಿದ್ದಾರೆ. ಒಟ್ಟಿನಲ್ಲಿ ಕ್ರಿ.ಶ. 9 ನೇ ಶತಮಾನದಿಂದ ಕ್ರಿ.ಶ. 16ನೇ ಶತಮಾನದವರೆಗೂ ಚಿಕ್ಕದೊಂದು ಆಡಳಿತ ವಿಭಾಗವಾಗಿ ಧರ್ಮ, ಸಂಸ್ಕೃತಿಗಳ, ನೆಲೆಯಾಗಿ ಬಾಳಿತೆಂದು ಪ್ರಸ್ತಾಪಿಸುವ ಅನೇಕ ಆಧಾರಗಳು ಸಿಗುತ್ತವೆ. ವಿಜಯನಗರದ ಅರಸರ ಕಾಲದಲ್ಲೂ ಇದು ಮುಳಗುಂದ ವಳಿತ ಎಂಬ ಹೆಸರಿನಿಂದ ಆಡಳಿತ ವಿಭಾಗವಾಗಿ ರಾಜಕೀಯ ಮಹತ್ವ ಉಳಿಸಿಕೊಂಡಿದೆ. ಸೇಉಣರಿಗೂ ಹೊಯ್ಸಳರಿಗೂ ಬೆಳ್ವೊಲ-300ರ ಪ್ರಭುತ್ವಕ್ಕಾಗಿ ನಡೆದ ಸೆಣಸಾಟದಲ್ಲಿ ಮುಳಗುಂದ-12ಪ್ರಮುಖಪಾತ್ರ ವಹಿಸಿತ್ತು. ರಾಜಕೀಯವಾಗಿ ಈ ಪ್ರಾಂತ್ಯವು ರಾಷ್ಟ್ರಕೂಟರಿಂದ ಈ ಪ್ರಾಂತ್ಯವನ್ನು ಮುಳಗುಂದದ ಸಿಂದರೆನಿಸಿದ (ಇವರ ಬಗೆಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ) ಸಿಂದರಸ ಹಾಗೂ ಸಿಂದ ಭೀಮರಸರಿಬ್ಬರೂ ಜನಪ್ರಿಯತೆ ಗಳಿಸಿದ್ದರು. ಈ ರಾಜರುಗಳು 'ಮುಳಗುಂದ ಪುರವರಾಧೀಶ್ವರ' 'ಮುಳಗುಂದ ವಿದ್ಯಾಧರ' ಎಂಬ ಬಿರುದುಗಳನ್ನು ಹೊಂದಿದ್ದು ಇಲ್ಲಿ ಆಳುತ್ತಿದ್ದರೆಂದು ಹೇಳಬಹುದು.

ಮುಳಗುಂದವು ಪ್ರಾರಂಭದಿಂದಲೂ ದೇವಾಲಯಗಳಿಗೆ ಕೇಂದ್ರವಾಗಿದ್ದ ಸ್ಥಳ. ಆದರೆ ಈಗ ಉಳಿದಿರುವುದು ಹಲವೇ ದೇವಾಲಯಗಳು. ಇಲ್ಲಿಯ ಪ್ರಾಚೀನ ದೇವಾಲಯವೆಂದರೆ ಶೋಭನೇಶ್ವರ. ಇದನ್ನು ಕಲ್ಯಾಣದ ಚಾಳುಕ್ಯ ದೊರೆ ಎರಡನೇ ತೈಲಪನ ಕಾಲದಲ್ಲಿ (ಕ್ರಿ.ಶ. 981) ಬೆಳ್ವೊಲ-300, ಪುಲಿಗೆರೆ-300 ಪ್ರಾಂತಗಳ ಅಧಿಪತಿಯಾಗಿದ್ದ ಶೋಭನರಸನು ನಿರ್ಮಿಸಿದನೆಂದು ಪ್ರತೀತಿಯಿದೆ. ಆದರೆ ಈಗ ಉಳಿದಿರುವುದು ಶಿಥಿಲವಾದ ಗರ್ಭಗೃಹ ಮತ್ತು ಅರ್ಧಮಂಟಪ ಮಾತ್ರ. ಇಲ್ಲಿಯ ಇನ್ನೊಂದು ಪ್ರಸಿದ್ಧ ದೇವಾಲಯವೆಂದರೆ ಈಗ ಶಿಥಿಲವಾಗಿರುವ ವೀರ ನಾರಾಯಣದೇವರದು. ಮುಳಗುಂದದ ಸಮೀಪದ ಹೊಸೂರು ಗ್ರಾಮವನ್ನು ಇದಕ್ಕೆ ದತ್ತಿಯಾಗಿ ಬಿಟ್ಟಿದೆ. ನಾರಾಯಣದೇವರ ಗುಡಿ ಧ್ವಜಸ್ತಂಭದ ಮೇಲಿರುವ ಶಾಸನವು ಕ್ರಿ.ಶ. 1577ರಲ್ಲಿ ಮೂಲಸ್ತಂಭದ ಸ್ಥಾಪನೆಯ ಬಗೆಗೆ ದಾಖಲಿಸುತ್ತದೆ. ಊರಿನಲ್ಲಿರುವ ಇನ್ನೊಂದು ಪ್ರಮುಖ ದೇವಾಲಯವೆಂದರೆ ನಗರೇಶ್ವರ. ಮುಳುಗುಂದದ ಬಲ್ಲವಸೆಟ್ಟಿ, ಧರ್ಮಸೆಟ್ಟಿ, ಕೃತಯುಸೆಟ್ಟಿ, ಕೊಳಗರಸೆಟ್ಟಿ ಮುಂತಾದ ವರ್ತಕರುಗಳು ಈ ದೇವಾಲಯಕ್ಕೆ ಕ್ರಿ.ಶ. 1062ರಲ್ಲಿ ಬಿಟ್ಟ

ಭೂದಾನದ ಬಗೆಗೆ ತಿಳಿದು ಬರುತ್ತದೆ. ನಗರೇಶ್ವರದ ಗೋಡೆಯ ಮೇಲಿರುವ ಶಾಸನವು ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ್ದು ಎರಡನೇ ಜಗದೇಕಮಲ್ಲನ ಆಳ್ವಿಕೆಯ ಈ ಶಾಸನದಲ್ಲಿ ರಾಜಧಾನಿ ಪಟ್ಟಣ ಮುಳಗುಂದ-12ರ ಅಧಿಕಾರಿಯಾದ ಬೊಪ್ಪರಸನು ಭೂಮಿದಾನ ಮಾಡಿದ ವಿಷಯವನ್ನು ನಿರೂಪಿಸುತ್ತದೆ. ಇಲ್ಲಿರುವ ಇನ್ನೊಂದು ದೇವಾಲಯ. ವಿದುರೇಶ್ವರ (ಈಗ ಅದು ಇಲ್ಲವಾಗಿದೆ). ಮುಳುಗುನ್ದದ ಸೆಟ್ಟಿಯರು ಕ್ರಿ.ಶ. 1123ರಲ್ಲಿ ಈ ದೇವಾಲಯಕ್ಕೆ ಧನಧಾನ್ಯಗಳನ್ನು ಒಪ್ಪಿಸಿದರೆಂದು ಇಲ್ಲಿಯ ಇನ್ನೊಂದು ಶಾಸನವು ಉಲ್ಲೇಖಿಸುತ್ತದೆ. ಊರಿನ ಚಾವಡಿಯ ಬಳಿಯಿರುವ ಇನ್ನೊಂದು ಶಾಸನವು ಕ್ರಿಶ. 1178ರಲ್ಲಿ ಈ ದೇವಾಲಯದ ಅಂದಿನ ಸೆಟ್ಟಿಯರು ಧಾನ್ಯಗಳ ದಾನವನ್ನು ನೀಡಿರುತ್ತಾರೆಂದು ದಾಖಲಿಸುತ್ತದೆ. ಸ್ವಯಂಭು ದೇವ, ಬಿಲ್ಲೇಶ್ವರ, ಗುಣದಬ್ಬೇಶ್ವರ, ಪೇಟೆಬಸಪ್ಪ, ದೇವೇಶ್ವರ, ತೆಲ್ಲಿಗೇಶ್ವರ, ರಾಮದೇವರು, ಸಿದ್ದೇಶ್ವರ ಮುಂತಾದವು ಇಲ್ಲಿಯ ಇತರ ಶಾಸನೋಕ್ತ ದೇವಾಲಯಗಳು. ಸಿದ್ದೇಶ್ವರ ಗುಡಿಯ ಬಾವಿಯ ಕಟ್ಟೆಯಲ್ಲಿರುವ ಶಾಸನವು ಕ್ರಿ.ಶ. 1178ರಲ್ಲಿ ಮಹಾಜನರಿಂದ ವಿದುರೇಶ್ವರ ದೇವಾಲಯಕ್ಕೆ ಬಿಟ್ಟ ದಾನವನ್ನು ತಿಳಿಸುತ್ತದೆ. ಪೇಟೆ ಬಸಪ್ಪನ ಗುಡಿಯ ಎದುರಿಗಿರುವ ಹೊಯ್ಸಳ ಇಮ್ಮಡಿ ಬಲ್ಲಾಳನ ಕ್ರಿ.ಶ. 1184ರ ಶಾಸನವು ಚಂದಣ್ಣನೆಂಬ ವೀರನ ಮರಣದ ಬಗೆಗೆ ದಾಖಲಿಸುತ್ತದೆ. ಊರಿನಲ್ಲಿರುವ ವೀರಶೈವರ ಅನ್ನದಾನ ಸ್ವಾಮಿ ಮಠದ ಕಂಬದ ಮೇಲಿರುವ ಶಾಸನವು ಕ್ರಿ.ಶ. 1224ರಲ್ಲಿ ಸ್ವಯಂಭೂ ದೇವಾಲಯದ ನಂದಾದೀವಿಗೆಗಾಗಿ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ.

ಧರ್ಮಾಮೃತ ಕಾವ್ಯದ ಕರ್ತ ನಯಸೇನ ಹಾಗೂ ಅವನ ಗುರು ಪರಂಪರೆಯನ್ನು ವಿವರಿಸುವ ಶಾಸನವು ಲಕ್ಷ್ಮೇಶ್ವರದಲ್ಲಿದೆ. ನಯಸೇನನು ಮುಳುಗುಂದದಲ್ಲಿ ಹಲವು ಕಾಲ ವಾಸವಾಗಿದ್ದನೆಂದು ಪ್ರತೀತಿಯಿದೆ. ಇಲ್ಲಿಯ ಬಸದಿಗಳೆಲ್ಲ ಹಾಳಾಗಿವೆ. ಅವುಗಳಲ್ಲಿ ಮುಖ್ಯವಾದವು ಪಾರ್ಶ್ವನಾಥ ಮತ್ತು ಚಂದ್ರನಾಥ ಬಸದಿಗಳು. ಪಾರ್ಶ್ವನಾಥ ಬಸದಿಯ ಗೋಡೆಯ ಮೇಲಿರುವ ಶಾಸನವು ರಾಷ್ಟ್ರಕೂಟ ಎರಡನೇ ಕೃಷ್ಣನ ಕಾಲದ್ದು (ಕ್ರಿ.ಶ. 902-3). ಚೀಕಾರ್ಯನೆಂಬ ಅಧಿಕಾರಿಯೊಬ್ಬ ಮುಳಗುಂದದಲ್ಲಿ ಬಸದಿಯ ನಿರ್ಮಾಣ ಹಾಗೂ ಆತನ ಮಗ ಅರಪಾರ್ಯನು ಬಿಟ್ಟ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಪಾರ್ಶ್ವನಾಥ ಬಸದಿಯಲ್ಲಿರುವ ಮತ್ತೊಂದು ಮುಖ್ಯವಾದ ಶಾಸನವೆಂದರೆ ಕ್ರಿ.ಶ. 16ನೇ ಶತಮಾನದಲ್ಲಿ ಪಾರ್ಶ್ವನಾಥ ಬಸದಿಯನ್ನು ಸುಟ್ಟ ಮುಸ್ಲಿಮರೊಂದಿಗೆ ನಡೆದ ಯುದ್ಧದಲ್ಲಿ ಸಹಸ್ರಕೀರ್ತಿ ಎಂಬ ವೀರನ ಮರಣವನ್ನು ದಾಖಲಿಸುತ್ತದೆ. ಚಂದ್ರನಾಥ ಬಸದಿಯ ಗೋಡೆಯ ಮೇಲಿರುವ ಶಾಸನವು ಕ್ರಿ.ಶ. 1420 ರದ್ದಾಗಿದ್ದು ಬುಳಿಶೆಟ್ಟಿಯ ಕೇಶಪ್ಪನ ಮರಣವನ್ನು ದಾಖಲಿಸುತ್ತದೆ. ಇದೇ ಬಸದಿಯ ಕಂಬದ ಮೇಲಿರುವ ಶಾಸನವು ಕ್ರಿ.ಶ. 1675ರಲ್ಲಿ ಮಹಮ್ಮದಿಯರಿಂದ ಮುರಿಯಲ್ಪಟ್ಟ ಆದಿನಾಥ ವಿಗ್ರಹವನ್ನು ಬನದಾಂಬಿಕೆಯು ಪುನಃ ಪ್ರತಿಷ್ಠಾಪನೆ ಮಾಡಿದ ಬಗೆಗೆ ಉಲ್ಲೇಖವಿದೆ. ಮುಳಗುಂದದಲ್ಲಿರುವ ಇತರ ದೇವಾಲಯಗಳೆಂದರೇ ವೀರಭದ್ರ, ಹನುಮಂತ (ಎರಡು), ದ್ಯಾಮವ್ವ, ದುರ್ಗವ್ವ ಮುಂತಾದವುಗಳು. ಊರಿನಲ್ಲಿ ವೀರಶೈವ ಸಂಪ್ರದಾಯದ ಆನಂದಸ್ವಾಮಿ ಮಠವಿದೆ. ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿರುವ ಪುರಾತನವಾದ ಮಸೀದಿ ಹಾಗೂ ಒಂದು ದರ್ಗಾವಿದೆ.

**ಮೆಣಸಿಗಿ** : ರೋಣ ತಾಲೂಕಿನ ಮೆಣಸಿಗಿಯು (ಜನಸಂಖ್ಯೆ : 3,861) ರೋಣದಿಂದ ವಾಯುವ್ಯಕ್ಕೆ 29 ಕಿ.ಮೀ. ದೂರದಲ್ಲಿರುವ ಊರು. ಇದು ಮಲಪ್ರಭಾ ನದಿ ದಂಡೆಯ ಮೇಲಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನಗಳು ವರದಿಯಾಗಿಲ್ಲ. ವಿಜಯನಗರೋತ್ತರ ಕಾಲಕ್ಕೆ ಸೇರಿದ ಶಾಸನವೊಂದು ಪತ್ತೆಯಾಗಿದ್ದರೂ, ಬಹಳ ನಶಿಸಿಹೋಗಿರುವುದರಿಂದ ನಿಷ್ಪ್ರಯೋಜಯಕವಾಗಿದೆ. ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಹೊಳೆಯ ದಂಡೆಯಲ್ಲಿ ಲಭಿಸಿದ್ದು, ಇದರಿಂದ ಮೆಣಸಿಗಿಯ ಪೂರ್ವೇತಿಹಾಸವನ್ನು ಸುಮಾರು ಕ್ರಿ.ಪೂ. 1000ರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಚಾರಿತ್ರಿಕವಾಗಿ ಈ ಊರಿನ ಇತಿಹಾಸವನ್ನು ಸುಮಾರು 11ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು ಊರ ಹೊರಗಿರುವ ಕಲ್ಲೇಶ್ವರ ದೇವಾಲಯವೇ ಇದಕ್ಕೆ ಇರುವ ಆಧಾರವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿ ಗರ್ಭಗೃಹ, ಹಾಗೂ ನವರಂಗವನ್ನು ಹೊಂದಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡ ಸರಳ ತ್ರಿಶಾಖಾಲಂಕಾರವನ್ನು ಹೊಂದಿದೆ. ನವರಂಗ ಭಾಗವು ಪೂರ್ಣ ಕುಸಿದಿವೆ. ಈ ಕಲ್ಲುರಾಶಿಯ ನಡುವೆ ಶಾಸನವಿದೆಯೆಂದು ಸ್ಥಳೀಕರು ಹೇಳುತ್ತಾರೆ. ಮರಳು ಮಿಶ್ರಿತ ಕೆಂಪು ಕಲ್ಲನ್ನು ಬಳಸಿ ನಿರ್ಮಿಸಿರುವ ಈ ಗುಡಿಯ ಹೊರಭಿತ್ತಿಯಲ್ಲಿ ವೈವಿಧ್ಯತೆಯಿಂದ ಕೂಡಿದ ಕಿರುಶಿಖರಗಳು, ಅಲಂಕಾರಿಕ ಕಂಬಗಳಿದ್ದವೆಂದು ಸೂಚಿಸುವ ಅಂಶ ಉಳಿದಿರುವ ಗರ್ಭಗೃಹ ಭಾಗವನ್ನು ನೋಡಿ ಗ್ರಹಿಸಬಹುದಾಗಿದೆ. ಇದರ ತಳವಿನ್ಯಾಸ ನಕ್ಷತ್ರಾಕಾರದಲ್ಲಿರುವುದು ವಿಶೇಷವಾದ ಆಕರ್ಷಣೆಯಾಗಿದೆ. ಊರ ಹುಡೇದ ಗದ್ದೆ ಬಳಿ ಶಾಸನದ ಶಿರೋಫಲಕವಷ್ಟೇ ಉಳಿದಿದ್ದು, ಕೆಳಭಾಗ ಕಣ್ಮರೆಯಾಗಿದೆ. ದುರ್ಗಮ್ಮನ ಗುಡಿ ಹಿಂದಿರುವ ಆದಿತ್ಯನ ಶಿಲ್ಪ ಹಾಳಾಗಿದೆ. ವೀರಭದ್ರನ ಗುಡಿಯಲ್ಲಿ ಸುಮಾರು ಐದಡಿ ಎತ್ತರದ ವೀರಭದ್ರನ ಸುಂದರವಾದ

ಮೂರ್ತಿಯಿದೆ. ಇವುಗಳೊಂದಿಗೆ ಊರಲ್ಲಿ ಹನುಮಂತ, ಬಸವಣ್ಣ, ದ್ಯಾಮವ್ವ, ಹಾಗೂ ಕರಿಯಮ್ಮನ ಗುಡಿಗಳಿವೆ, ಶರಣಬಸವೇಶ್ವರ ಮಠವಿದೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇಲ್ಲಿವೆ.

**ಮೇದೂರು** : ಹಿರೇಕೆರೂರು ತಾಲೂಕಿನ ಮೇದೂರು (ಜನಸಂಖ್ಯೆ : 3,367) ಅಥವಾ ಶಾಸನೋಕ್ತ 'ಮೇಜೂರ' (ಹಿರೇಕೆರೂರಿನಿಂದ 16 ಕಿ.ಮೀ.) ಪುರಾತನವಾದ ಸ್ಥಳವಾಗಿದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೆ ಸರಸ್ವತಿ, ದೊಡ್ಡಈಶ್ವರ, ಸಣ್ಣಬಸವಣ್ಣ ಮುಂತಾದವುಗಳು. ಸರಸ್ವತಿ ದೇವಾಲಯವು ಸಾಧಾರಣ ಕಟ್ಟಡವಾಗಿದ್ದು ಸುಮಾರು ಐದು ಅಡಿ ಎತ್ತರವಿರುವ ಹಂಸ ಪೀಠದ ಮೇಲೆ ಒಂದು ಕೈಮುರಿದ ಆಸೀನ ಸರಸ್ವತಿಯ ಮೂಲವಿಗ್ರಹವಿದೆ. ಇದರ ಸಮೀಪವೇ ಕೆರೆಯ ದಂಡೆಯಲ್ಲಿರುವ ಬಸವಣ್ಣಗುಡಿ ಕಲ್ಯಾಣದ ಚಾಳುಕ್ಯರ ನಿರ್ಮಿತವಾಗಿರುವುದು ಶಾಸನಗಳಿಂದ (ಕ್ರಿ.ಶ. 11 ನೇ ಶತಮಾನ) ವ್ಯಕ್ತವಾಗುತ್ತದೆ. ಇದರಲ್ಲಿ ಗರ್ಭಗೃಹ, ಆಯತಾಕಾರವಾದ ಅಂತರಾಳ, ನವರಂಗ ಹಾಗೂ ಮುಂದೆ ಚಿಕ್ಕದಾದ ಮುಖಮಂಟಪವಿದೆ. ಗರ್ಭಗೃಹದ ಬಾಗಿಲುವಾಡವು ಅಲಂಕೃತವಾಗಿದ್ದು ಒಳಗೆ ಚಾಳುಕ್ಯಪೀಠದ ಮೇಲೆ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡದ ಇಕ್ಕೆಲಗಳಲ್ಲಿ ರಾಷ್ಟ್ರಕೂಟ ಶೈಲಿಯ ಎರಡು ಕಂಬಗಳಿವೆ, ಹಾಗೂ ಅವುಗಳ ಪಕ್ಕದಲ್ಲಿ ಜಾಲಂಧ್ರಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕೂ ಚಾಳುಕ್ಯ ಶೈಲಿಯ ಕಂಬಗಳು ನಮ್ಮ ಗಮನವನ್ನು ಸೆಳೆಯುತ್ತವೆ ಹಾಗೂ ಮೇಲ್ಭಾಗದ ಛಾವಣಿಯಲ್ಲಿ ಭುವನೇಶ್ವರಿ ಇದ್ದು ಮಧ್ಯದಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಅಲಂಕಾರವಿದೆ. ನವರಂಗದ ಪ್ರವೇಶದ್ವಾರದ ಬಳಿ ಸುಮಾರು 1.5 ಮೀಟರ್ ಎತ್ತರವಿರುವ ದೊಡ್ಡದಾದ ನಂದಿಯ ಶಿಲಾಕೃತಿಯಿದೆ. ಮುಖಮಂಟಪದಲ್ಲಿ ಸುಂದರವಾದ ಸೂರ್ಯನ ವಿಗ್ರಹವಿದ್ದು ಮೂರು ಅಡಿ ಎತ್ತರವಾದ ಪ್ರಭಾವಳಿಯಲ್ಲಿ ಉಷಾ-ಪ್ರತ್ಯುಷಾ ಹಾಗೂ ಇತರ ಶಿಲ್ಪಗಳ ಅಲಂಕಾರವಿದೆ. ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಈ ಗುಡಿಯ ಹಿಂಭಾಗದಲ್ಲಿರುವ ಶಾಸನವು ಕ್ರಿ.ಶ. 11ನೇ ಶತಮಾನದ ಲಿಪಿಯನ್ನು ಹೊಂದಿದ್ದು ಮಾಕಳಗಾವುಂಡನೆಂಬ ಅಧಿಕಾರಿಯಿಂದ ಮಾಕಳೇಶ್ವರ ದೇವಾಲಯದ ನಿರ್ಮಾಣ ಹಾಗೂ ದಾನ ಬಿಟ್ಟ ಬಗೆಗೆ ದಾಖಲಿಸುತ್ತದೆ. ಇದರ ಸಮೀಪವಿರುವ ಇನ್ನೊಂದು ಶಾಸನವು ಕ್ರಿ.ಶ. 1146ಕ್ಕೆ ಸೇರಿದ್ದು ಮಹಾಸಾಮಂತ ಬಿಜ್ಜರಸನು ಮೇಜವೂರಿನ ಮಾಕಳೇಶ್ವರ ದೇವರಿಗೆ ನೀಡಿದ ಭೂದಾನದ ಬಗೆಗೆ ತಿಳಿಸುತ್ತದೆ. ಇಲ್ಲೇ ಇರುವ ಮೂರನೇ ಶಾಸನವು ಚಾಳುಕ್ಯ ಆರನೇ ವಿಕ್ರಮಾದಿತ್ಯನ ಕುಲಕ್ಕೆ ಸೇರಿದ್ದು (ಕ್ರಿ.ಶ. 1111) ಅಸ್ಪಷ್ಟವಾಗಿದೆ. ದಂಡನಾಯಕ ಗೋವಿಂದರಸ ಬನವಾಸಿ-12000 ಮತ್ತು ಸಾಂತಳಿಗೆ-1000 ಆಳುತ್ತಿರುವಾಗ ಮೇಜೂರಿನ ಮಾಕಳೇಶ್ವರ ದೇವರಿಗೆ ನೀಡಿದ ದಾನವನ್ನು ದಾಖಲಿಸುತ್ತದೆ. ದೇವಾಲಯದ ಹೊರಗೆ ಮಹಾಸತಿ ಕಲ್ಲುಮೇಲೆ ಶಾಸನವಿದ್ದು ಕ್ರಿ.ಶ. 1164 ರಲ್ಲಿ ಸಿಂಗೆಯ ದಣ್ಣಾಯಕನು ಹಣಜೆಯ ಮೇಲೆ ದಾಳಿಮಾಡಿದಾಗ ಮೇಜೂರ ನಾಳ್ಪಭುಸಾಮಂತ ಕಾಳಗೌಡ ಹೋರಾಡಿ ಮರಣ ಹೊಂದಿದ ಉಲ್ಲೇಖವನ್ನು ನೀಡುತ್ತದೆ. ಇವುಗಳ ಸಮೀಪವೇ ಭೈರವ, ಸಪ್ತಮಾತೃಕೆಯರ ಪಟ್ಟಿಕೆ, ಎರಡು ಮಹಿಷಮರ್ದಿನಿ (ಚೂರಾಗಿವೆ) ಮುಂತಾದ ಅವಶೇಷಗಳು ಕಂಡುಬರುತ್ತವೆ. ಈ ದೇವಾಲಯದ ಸಮೀಪವೇ ದೊಡ್ಡ ಈಶ್ವರ ಗುಡಿಯಿದ್ದು ಗರ್ಭಗೃಹ ಹಾಗೂ ಅಂತರಾಳ ಮಾತ್ರ ಇದೆ. ಗರ್ಭಗೃಹದಲ್ಲಿ ಚಾಳುಕ್ಯ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಇದರ ದ್ವಾರಬಂಧವು ಚಾಳುಕ್ಯರ ಕಾಲದ ಅಲಂಕಾರವನ್ನು ಹೊಂದಿದೆ. ಈ ಗುಡಿಯ ಹೊರಗೆ ಒಂದು ಎತ್ತರವಾದ ಐದು ಹಂತಗಳಿರುವ ತುರುಗೋಳ್ ಚಿತ್ರಣವಿರುವ ಭಾರಿ ವೀರಗಲ್ಲಿದೆ. ಈ ಗುಡಿಯ ಹತ್ತಿರವೇ ಇನ್ನೊಂದು ಸಾಧಾರಣ ಕೆತ್ತನೆಯಿರುವ ಭಾರಿ ವೀರಗಲ್ಲಿದೆ. ಈ ಗುಡಿಯ ಹತ್ತಿರವೇ ಇನ್ನೊಂದು ಸಾಧಾರಣ ಕಟ್ಟಡವಿರುವ ಈಶ್ವರಗುಡಿಯಿದ್ದು ಗೋಡೆಯಲ್ಲಿ ಒಂದು ಶಾಸನವನ್ನು ಹೊಂದಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಸಣ್ಣಬಸವಣ್ಣ ಎಂದು ಸ್ಥಳೀಯವಾಗಿ ಕರೆಯಲಾಗುವ ತ್ರಿಕೂಟಾಚಲ ದೇವಾಲಯವಿದೆ. ಇದರಲ್ಲಿ ಮೂರು ಗರ್ಭಗೃಹಗಳಿದ್ದು ಮೂರು ಅಂತರಾಳಗಳು ಕೇಂದ್ರ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಕೇಂದ್ರ ಹಾಗೂ ಬಲಭಾಗದ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಎಡಭಾಗದ ಗರ್ಭಗೃಹದಲ್ಲಿ ಸೂರ್ಯನ ಮೂರ್ತಿಯನ್ನು ಹೊಂದಿದೆ. ಅಂತರಾಳಗಳ ದ್ವಾರದ ಪಕ್ಕಗಳಲ್ಲಿ ರಾಷ್ಟ್ರಕೂಟ ಶೈಲಿಯ ಕಂಬಗಳಿವೆ. ನವರಂಗದಲ್ಲಿ ಚಾಳುಕ್ಯ ಲಕ್ಷಣವಿರುವ ಚತುರ್ಭುಜಗಳ ವಿಷ್ಣುವಿನ ಮೂರ್ತಿಯಿದೆ. ಇದರ ಪಕ್ಕದಲ್ಲಿ ನಾಗಬಂಧ ದಂಪತಿ, ಭೈರವ (ಆಸೀನಮೂರ್ತಿ), ಕಾಳಿ, ಈಶ್ವರ (ನಂತರದ ಕಾಲದ್ದು), ಮಹಿಷಮರ್ದಿನಿ (ವೀರಾವೇಶದ ಶಿಲ್ಪಾಕೃತಿ) ಹಾಗೂ ಸಪ್ತಮಾತೃಕೆಯರ ಪಟ್ಟಿಕೆ, ಇತರ ಬಿಡಿ ಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿ ನಾಲ್ಕು ರಾಷ್ಟ್ರಕೂಟರ ಶೈಲಿಯ ಚೌಕಾಕಾರವಾದ ಆಕರ್ಷಕ ಕಂಬಗಳಿವೆ. ಇವುಗಳ ಮೇಲ್ಭಾಗದ ಪೂರ್ಣಕುಂಭ ಹಾಗೂ ಪೀಠಭಾಗಗಳಲ್ಲಿ ಆನೆಗಳ ಶಿಲ್ಪಾಲಂಕಾರಗಳಿವೆ. ಈ ಗುಡಿಯ ಹೊರಗೆ ಒಂದು ಅಪ್ರಕಟಿತ ಶಾಸನವಿರುವ ಕಲ್ಲಿದೆ. ಈ ಗುಡಿಯ ಪಕ್ಕದಲ್ಲೇ ಬಯಲಿನಲ್ಲಿ ಆನೆಯ ಪೀಠದಲ್ಲಿ ನೀಲವ್ವ ಎಂಬ ಆಧುನಿಕ ಮೂರ್ತಿಯಿರುವ ಚಿಕ್ಕ ಗುಡಿಯಿದೆ. ಊರಲ್ಲಿರುವ ಇತರ ಗುಡಿಗಳೆಂದರೆ ಹನುಮಂತ, ಕಾಮಣ್ಣ, ಚೌಡೇಶ್ವರಿ, ಶನಿದೇವ ಮತ್ತು ಉಡುಚವ್ವ. ಹನುಮಂತನ ಗುಡಿಯು ಬೃಹದಾಕಾರವಾದ

ಕಟ್ಟಡವಾಗಿದ್ದು ಚಾಳುಕ್ಯರ ಕಾಲದ ದ್ವಾರಬಂಧವನ್ನು ಹಾಗೂ ಮುಂಭಾಗದ ನವರಂಗದಲ್ಲಿ ಚಾಳುಕ್ಯ ಶೈಲಿಯ ಕಂಬಗಳನ್ನು ಹೊಂದಿದೆ. ಆದರೆ ಆಂಜನೇಯನ ಮೂರ್ತಿಯು 1942 ರಲ್ಲಿ ಪ್ರತಿಷ್ಠಾಪಿಸಲಾಯಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಬಸವಜಯಂತಿಗೆ ಬಸವಣ್ಣ-ಹನುಮಂತ ದೇವರ ಜೋಡಿ ತೇರು. ಹೋಳಿಹುಣ್ಣಿಮೆಗೆ ಕಾಮದೇವರ ಭಾರಿ ಜಾತ್ರೆ ಮಘಾ ಪ್ರತಿಷ್ಠೆ, ಹುಬ್ಬಾ ನಕ್ಷತ್ರಕ್ಕೆ ಅಗ್ನಿಗೆ ಆಹುತಿ ಮಾಡುತ್ತಾರೆ. ಭಾರತ ಹುಣ್ಣಿಮೆಗೆ ಚೌಡವ್ವನ ಜಾತ್ರೆ. ಊರಿನಲ್ಲಿ ಒಂದು ಮಸೀದಿ ಇದೆ.

**ಮೇವುಂಡಿ :** ಮುಂಡರಗಿ ತಾಲೂಕಿನ ಮೇವುಂಡಿಯು (ಜನಸಂಖ್ಯೆ : 2,301) ಮುಂಡರಗಿಯಿಂದ ವಾಯುವ್ಯಕ್ಕೆ 10 ಕಿ.ಮೀ. ದೂರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ 'ಮೇಳಿಮಡು', 'ಮೇಳುವಿಡು', 'ಮೇಳುವಿಡಿ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಹಿಂದೆ ಮಾಸವಾಡಿ-140 ರ ರಾಜಧಾನಿ ಪಟ್ಟಣವಾಗಿತ್ತು. ಮೇಲಾಗಿ 500 ಮಹಾಜನರನ್ನು ಹೊಂದಿದ್ದ ಅಗ್ರಹಾರವೂ ಆಗಿತ್ತೆಂಬ ಅಂಶವನ್ನು ಮೇವುಂಡಿಯ ಕ್ರಿ.ಶ. 897 ರ ಶಾಸನ ತಿಳಿಸುತ್ತದೆ. ರಾಷ್ಟ್ರಕೂಟರಷ್ಟು ಪ್ರಾಚೀನವಾದ ಈ ಊರಲ್ಲಿ ರಾಷ್ಟ್ರಕೂಟರ ಕಾಲದ ಎರಡು ಗೋಸಾಸ ಕಲ್ಲುಗಳಿವೆ. ರಾಷ್ಟ್ರಕೂಟ, ಹೊಯ್ಸಳ ಹಾಗೂ ಯಾದವ ಅರಸರ ಕಾಲಕ್ಕೆ ಸೇರಿದ ಎಂಟು ಶಾಸನಗಳು ಈವರೆಗೆ ಇಲ್ಲಿಂದ ವರದಿಯಾಗಿದ್ದು ಇವುಗಳಲ್ಲಿ ದ್ಯಾಮವ್ವನ ಕಟ್ಟೆ ಮುಂದಿರುವ ರಾಷ್ಟ್ರಕೂಟ ಚಕ್ರವರ್ತಿ ಒಂದನೇಯ ಅಮೋಘವರ್ಷನ ಕಾಲದ ಕ್ರಿ.ಶ. 865 ರ ಕೀಲ್ಗುಂಟೆ ಶಾಸನ ಅತ್ಯಂತ ಪ್ರಾಚೀನದ್ದಾಗಿದ್ದು, ರಟ್ಟಿಯಣ್ಣನು ಅರಸನ ಅನಾರೋಗ್ಯ ತಿಳಿದು, ಕೂಳ ತೊರೆದು ಮೂವತ್ತು ಗಾವುದ ನಡೆದು ಬರುವಾಗ ಅರಸನು (ಸ್ಥಳೀಯ ಮಾಂಡಳಿಕ) ಸತ್ತು ಉರಿಯುತ್ತಿದ್ದುದನ್ನು ನೋಡಿ ಕೀಲ್ಗುಂಟೆಯಾದ ಅಪರೂಪದ ನಿದರ್ಶನ. ವೆಂಕಟೇಶ್ವರ ಗುಡಿ ಮುಂದಿರುವ ಕ್ರಿ.ಶ. 897 ರ ಶಾಸನ (ಈ ಶಾಸನ 11 ನೇ ಶತಮಾನದ ಪುನಃ ರಚನೆಯಾಗಿದೆ) ಇಮ್ಮಡಿ ಕೃಷ್ಣನ ಆಳ್ವಿಕೆಯಲ್ಲಿ ಮಹಾಸಾಮಂತನೊಬ್ಬ ಮಾಸವಾಡಿ-140 ರ ರಾಜಧಾನಿ ಮೆಳುವಿಡು (ಮೇವುಂಡಿ)ವಿನಲ್ಲಿ ಇಂದ್ರಸಮಾನವಾದ ದೇಗುಲವನ್ನು ಮಾಡಿಸಿ, ಅಲ್ಲಿನ ಐನೂರು ಮಹಾಜನರ ಕೈಲಿ 1500 ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 12 ನೇ ಶತಮಾನದ ಲಿಪಿಯಲ್ಲಿರುವ ಇಮ್ಮಡಿ ಕೃಷ್ಣನ ಕಾಲದ ಶಾಸನ ಮಹಾಸಾಮಂತ ಕುಪ್ಪದೇವರಸನು ಕುಪ್ಪೇಶ್ವರ ದೇವಾಲಯ ನಿರ್ಮಾಣ ಮಾಡಿಸಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತ ಮಲ್ಲಿಕಾರ್ಜುನ ಹಾಗೂ ರಾಮನಾಥ ದೇವಾಲಯಗಳನ್ನೂ ಉಲ್ಲೇಖಿಸುತ್ತದೆ. ಇಲ್ಲಿನ ವೆಂಕಟೇಶ್ವರ ಗುಡಿ ಮುಂದಿರುವ ಇಮ್ಮಡಿ ಬಲ್ಲಾಳನ ಕ್ರಿ.ಶ. 1196 ರ ಶಾಸನ ದೇಹುತಗೆರೆಯ ಬಿಲ್ಲೇಶ್ವರ ದೇವರಿಗೆ ನಖರ-ಮುಮ್ಮುರಿದಂಡಗಳು ದಾನ ಬಿಟ್ಟ ಸಂದರ್ಭದಲ್ಲಿ ಅಯ್ಯಾವೊಳೆ-500 ಕೂಡ ಆ ದೇವರಿಗೆ ಸುಂಕ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ನೀಲಕಂಠೇಶ್ವರ ಗುಡಿ ಮುಂದಿರುವ ಕ್ರಿ.ಶ. 1223 ರ ಶಾಸನ ಹೀರಾಬಾಯಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಲ್ಲಿ ಉಕ್ತವಾಗಿರುವ ಗುಡಿಗಳಲ್ಲಿ ಕೆಲವು ಇಂದಿಗೂ ಉಳಿದಿದ್ದು ಶಿಥಿಲಾವಸ್ಥೆಯಲ್ಲಿವೆ.

ಊರ ಆರಂಭದಲ್ಲೇ ಇರುವ ಹನುಮಂತನ ಗುಡಿಯ ರಚನೆಯಲ್ಲಿ ಚಾಲುಕ್ಯ ಶೈಲಿಯ ಕಂಬಗಳನ್ನು ಬಳಸಿ ನಂತರದಲ್ಲಿ ಕಟ್ಟಿದ್ದು, ಇದರ ಮುಂದೆ ಕಿರಣಸ್ತಂಭ, ಮೇಟಿಕಲ್ಲುಗಳಿವೆ. ಅಭಯ ಮುದ್ರೆಯ ಹನುಮಂತನಿರುವ ಈ ಗುಡಿಯ ಆವರಣದಲ್ಲಿ ತೀರ್ಥಂಕರ ಪಾದಗಟ್ಟೆ ಹಾಗೂ ಭಗ್ನವಾದ ಗಣಪತಿಯ ಶಿಲ್ಪವಿದೆ. ಇದರ ಬಳಿಯ ದ್ಯಾಮವ್ವನ ಕಟ್ಟೆಯ ಬಳಿ ರಾಷ್ಟ್ರಕೂಟರ ಕಾಲದ ನಾಲ್ಕು ವೀರಗಲ್ಲುಗಳಿದ್ದು, ಜೊತೆಗೆ ಕೀಲ್ಗುಂಟೆ ಕಲ್ಲೂ ಇದೆ. ಮೂರು ಹಂತದಲ್ಲಿರುವ ಕಿಲ್ಗುಂಟೆಯ ಶಿಲ್ಪ ಕೆತ್ತನೆ ವಿಶಿಷ್ಟವಾಗಿದೆ. ಇದರ ಬಳಿಯಿರುವ ಕಲ್ಲಪ್ಪನ ಗುಡಿಯಲ್ಲಿ ರಾಷ್ಟ್ರಕೂಟರ ಕಾಲದ ಬೃಹತ್ತಾದ ಲಿಂಗವಿದೆ. ಊರಲ್ಲಿರುವ ವೆಂಕಟೇಶ್ವರ ದೇವಾಲಯವು ಪ್ರಾಚೀನ ಗುಡಿಯಾಗಿದ್ದು ಪ್ರಾಕಾರದೊಳಗೆ ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ವೆಂಕಟೇಶ್ವರನ ಶಿಲ್ಪವಿದೆ. ನವರಂಗದಲ್ಲಿ ಶೇಷಶಯನ ಪದ್ಮನಾಭನ ಸುಂದರ ಶಿಲ್ಪವಿದ್ದು, ಪ್ರಭಾವಳಿಯಲ್ಲಿ ದಶಾವತಾರಗಳನ್ನು ತೋರಿಸಲಾಗಿದೆ. ಈ ಗುಡಿ ಆವರಣದಲ್ಲಿ ಲಕ್ಷ್ಮಿಯಿದ್ದು ಈ ಗುಡಿ ಕೂಡ ಜೀರ್ಣೋದ್ಧಾರಗೊಂಡಿದೆ.

ಈ ಗುಡಿ ಹಿಂಬದಿಯಲ್ಲಿರುವ ಇತ್ತೀಚಿನ ಕಟ್ಟಡದಲ್ಲಿ ಜೈನ ತೀರ್ಥಂಕರರ ಹಾಗೂ ಶಿವಲಿಂಗಗಳಿವೆ. ಊರ ಹೊರಗಿರುವ ಈಶ್ವರಗುಡಿ ಜೀರ್ಣೋದ್ಧಾರಗೊಂಡಿದ್ದು ಪೂರ್ಣ ಮಾರ್ಪಾಡುಗೊಂಡಿದೆ. ಇಲ್ಲಿರುವ ಎರಡು ಗರ್ಭಗೃಹಗಳಲ್ಲಿ ಬೃಹತ್ತಾದ ಶಿವಲಿಂಗವಿದ್ದು, ಅಲಂಕಾರಿಕ ಪಟ್ಟಿಕೆಯ ತುಂಡುಗಳನ್ನು ಗೋಡೆಯಲ್ಲಿ ಸೇರಿಸಿದ್ದಾರೆ. ಇದರಿಂದ ಸ್ವಲ್ಪ ದೂರದಲ್ಲಿರುವ ಬೀರಪ್ಪನ ಗುಡಿ ಪಾಳು ಬಿದ್ದಿದ್ದು, ಒಳಗಿರುವ ಮೂರ್ತಿ ಯಾವುದೆಂದು ತಿಳಿದು ಬರುವುದಿಲ್ಲ. ಆಲೂರು ರಸ್ತೆಯಲ್ಲಿರುವ ದಿಡಿಗೇಶ್ವರ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಶಿಖರ ಕದಂಬ-ನಾಗರ

ಶೈಲಿಯಲ್ಲಿದೆ. ಈ ಊರನ್ನು ಬಳಸಿ ನಿಂತಿದ್ದ ಕೋಟೆ ಇಂದು ಹಾಳಾಗಿದ್ದು, ಒಂದೆರಡು ಬುರುಜುಗಳ ಅವಶೇಷಗಳನಷ್ಟೇ ಕಾಣಬಹುದಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ರಾಜಧಾನಿ ಪಟ್ಟಣವಾಗಿ ಮೆರೆದ ಈ ಊರು ನಂತರ ತನ್ನ ಪ್ರಾಮುಖ್ಯತೆ ಕಳೆದುಕೊಂಡಂತೆ ಕಾಣುತ್ತದೆ. ಕಲ್ಯಾಣದ ಚಾಲುಕ್ಯರ ಶಾಸನಗಳಾವುವು ಈ ಊರಲ್ಲಿ ದೊರೆಯದೆ, ಬದಲಾಗಿ ಹೊಯ್ಸಳರ ಹಾಗೂ ಯಾದವರ ಶಾಸನಗಳು ಲಭಿಸುತ್ತವೆ. ನಂತರದ ಕಾಲಕ್ಕೆ ದಾಖಲೆಗಳು ಸಿಕ್ಕಿಲ್ಲ. ಇವುಗಳಲ್ಲದೇ ಊರಲ್ಲಿ ಬಸವಣ್ಣ, ಹನುಮಂತ, ವಿಠಲ, ಮೈಲಾರ, ದ್ಯಾಮವ್ವ, ನೀಲಕಂಠೇಶ್ವರ, ಕೆಂಚವ್ವ ಮತ್ತು ದುರ್ಗವ್ವನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಮೊರಬ** : ನವಲಗುಂದ ತಾಲೂಕಿನ ಮೊರಬವು (ಜನಸಂಖ್ಯೆ : 8,318) ಪ್ರಾಚೀನ ಶಾಸನಗಳಲ್ಲೂ 'ಮೊರಬ' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ನವಲಗುಂದದಿಂದ 22 ಕಿ.ಮೀ. ದೂರದಲ್ಲಿ, ಅಮ್ಮಿನಭಾವಿಯಿಂದ 10 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿತ್ತು. ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಕಲ್ಮೇಶ್ವರ ಗುಡಿ ಮುಂದಿರುವ ಕ್ರಿ.ಶ. 1079ರ ಶಾಸನ, ಆರನೆಯ ವಿಕ್ರಮಾದಿತ್ಯನ ಸಹೋದರನಾದ ಜಯಸಿಂಹನು ಯುವರಾಜನಾಗಿ ಕುಂದೂರು, ಕೋಗಳಿ, ಬೆಳ್ವೊಲ ಹಾಗೂ ಪುರಿಗೆರೆ ನಾಡುಗಳನ್ನಾಳುತ್ತಿರುವಾಗ ಮಹಾಪ್ರಧಾನ ಸಂಕರಯ್ಯ ಹಾಗೂ ಸೇನಾಪತಿ ಮಧುವಪ್ಪಯ್ಯ ನಾಯಕರು ಮೊರಬದ ಕೆರೆಗೆ ನೊಳಂಬಸಮುದ್ರ ಎಂದು ಕರೆದು 40 ಮತ್ತರು ಭೂಮಿ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಇದೇ ಶಾಸನ ಮೊರಬದ ಮೂಲಸ್ಥಾನ ದೇವರನ್ನೂ (ಇಂದಿನ ಕಲ್ಮೇಶ್ವರ) ಉಲ್ಲೇಖಿಸುತ್ತ, ಸಾಂದರ್ಭಿಕವಾಗಿ ಘಟಾಂತಕಿ ಬಸದಿ, ಅದರ ದಾನ ಶಾಲೆ, ಹಾಗೂ ಹಿರಿಯ ಹೊಲಗಳ ಬಗ್ಗೆ ಹೇಳುತ್ತದೆ. ಹನುಮಂತನ ಗುಡಿ ಮುಂದಿದ್ದ ಕ್ರಿ.ಶ. 1059 ರ ನಿಷಿದಿ ಶಾಸನ ನಾಗಚಂದ್ರದೇವರು ನಿಷಿದಿಯಾದ ಬಗ್ಗೆ ಹೇಳುತ್ತದೆ. ಉಳಿದ ಮೂರು ಶಾಸನಗಳು ತ್ರುಟಿತಗೊಂಡಿದ್ದು, ಹೆಚ್ಚಿನ ವಿವರ ಲಭಿಸುವುದಿಲ್ಲ. ಊರಲ್ಲಿರುವ ಕಲ್ಮೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಶಿವಲಿಂಗವನ್ನುಳಿದು, ಪ್ರಾಚೀನವಾದುದೇನೂ ಅಲ್ಲಿ ಉಳಿದಿಲ್ಲ. ಹನುಮಂತನ ಗುಡಿ ಮುಂದೆ ಜೈನ ದಾನ ಶಾಸನವೂ ಸೇರಿದಂತೆ ಪ್ರಾಚೀನ ಅವಶೇಷಗಳು ಹರಡಿಕೊಂಡಿವೆ. ಮೇಲಿನ ಶಾಸನದಲ್ಲಿ ಸಾಂದರ್ಭಿಕವಾಗಿ ಉಲ್ಲೇಖಗೊಂಡಿರುವ ಘಟಾಂತಕಿ ಬಸದಿ ಮೊರಬದಲ್ಲೇ ಇತ್ತೆಂಬ ಅಂಶ ಮಹತ್ವದ್ದಾಗಿದ್ದು, ಮುಗದದ ಕ್ರಿ.ಶ. 1125ರ ಶಾಸನ ಮಹಾಸಾಮಂತ ಮಾರ್ತಂಡನ ಮಡದಿ ಗೊಜ್ಜಿಗಾವುಂಡಿಯನ್ನು ಘಟಾಂತಕಿಯೊಂದಿಗೆ ಸರಿದೂಗಿಸಿ ವರ್ಣಿಸಿರುವುದನ್ನಿಲ್ಲಿ ಸ್ಮರಿಸಬಹುದಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಊರು ಬಹಳ ಸಾಹಸ ಮಾಡಿದ ಪ್ರಸಿದ್ಧ ಸ್ಥಳವಾಗಿದೆ. ಶಿರಕೋಳ (ಜನಸಂಖ್ಯೆ : 3,116) ನೆರೆಯ ಗ್ರಾಮವಾದ ಶಿರಕೋಳವು ಮೊರಬದಿಂದ ಈಶಾನ್ಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಸುಮಾರು 200 ವರ್ಷದಷ್ಟು ಪ್ರಾಚೀನವಾದ ಕಟ್ಟಿಗೆಯ ರಚನೆಯಾದ ಕಲ್ಮೇಶ್ವರ ಗುಡಿಯಿದೆ. ಆಕರ್ಷಕ ಕಟ್ಟಿಗೆಯ ಕೆಲಸವನ್ನು ಹೊಂದಿರುವ ಈ ಗುಡಿಯ ಕಂಬಗಳು ಸುಮಾರು 20 ಅಡಿ ಎತ್ತರವಿದ್ದು ಮುಂದಿನ ಹಜಾರದ ಮೇಲೆ ಮೊಗಸಾಲೆಯನ್ನು ಹೊಂದಿದೆ. ಈ ಗುಡಿಯ ಮುನ್ನೋಟ ಚೇತೋಹಾರಿಯಾಗಿದ್ದು, ಆಗಿ ಹುಣ್ಣಿಮೆಯಂದು ಇಲ್ಲಿ ಜಾತ್ರೆಯಾಗುತ್ತದೆ.

**ಮೋಟೆಬೆನ್ನೂರು** : ಬ್ಯಾಡಗಿ ತಾಲೂಕಿನ ಊರಾದ ಮೋಟೆಬೆನ್ನೂರು (ಜನಸಂಖ್ಯೆ : 7,208) ಅಥವಾ ಶಾಸನೋಕ್ತ 'ಬೆಣ್ಣೆವೂರು' ಬ್ಯಾಡಗಿಯಿಂದ ಆರು ಕಿ.ಮೀ. ದೂರದಲ್ಲಿರುವ ಪ್ರಾಚೀನ ಸ್ಥಳವಾಗಿದೆ. ಹಿಂದೆ ಇದು ಸತ್ತಳಿಗೆ-70ಕ್ಕೆ ಸೇರಿದ ಬೆಣ್ಣೆವೂರು-12 ಕಂಪಣದ ಆಡಳಿತ ಕೇಂದ್ರವಾಗಿತ್ತು. ಊರಿನಲ್ಲಿರುವ ಭುಜಂಗೇಶ್ವರ ದೇವಾಲಯವು ಸ್ಥಳೀಯವಾಗಿ ಜೀರ್ಣೋದ್ಧಾರಗೊಂಡಿದ್ದರೂ ಚಾಳುಕ್ಯರ ಕಾಲದ ಕಟ್ಟಡವೆಂದು ವ್ಯಕ್ತವಾಗುತ್ತದೆ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಕುಸಿದಿರುವ ಕದಂಬನಾಗರ ಶಿಖರವಿದೆ. ನವರಂಗದಲ್ಲಿ ಚಾಳುಕ್ಯ ಶೈಲಿಯ ಕಂಬಗಳಿದ್ದು ಸರಸ್ವತಿಯ ಸುಂದರ ಶಿಲ್ಪವಿದೆ. ಈ ಗುಡಿಯ ಎದುರಿಗೆ ಶಾಸನವಿದ್ದು ಚಾಳುಕ್ಯ ದೊರೆ ಎರಡನೇಯ ಸೋಮೇಶ್ವರನ ಕಾಲದಲ್ಲಿ ಮಹಾಮಂಡಲೇಶ್ವರ ಲಕ್ಕರಸನು ಆಳುತ್ತಿದ್ದ ಬಗೆಗೆ ಉಲ್ಲೇಖಿಸುತ್ತದೆ. ಈ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಚಾಳುಕ್ಯ ಶೈಲಿಯ ಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗವಿದ್ದು ಹೊರಪ್ರಾಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ರಾಷ್ಟ್ರಕೂಟ ಶೈಲಿಯ ಪೀಠವಿದ್ದು ಅದೇ ಕಾಲದ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ನವರಂಗದಲ್ಲಿ ರಾಷ್ಟ್ರಕೂಟ ಶೈಲಿಯ ಪೂರ್ಣಕುಂಭ ಹಾಗೂ ಆನೆಯ ಶಿಲ್ಪಗಳಿರುವ ನಾಲ್ಕು ಕಂಬಗಳಿವೆ. ಇದರ ಹೊರಭಾಗದ ಛಾವಣಿಯ ಸುತ್ತಲೂ ಅನೇಕ ದೇವಕೋಷ್ಠಗಳಿದ್ದು ಅನೇಕ ದೇವದೇವತೆಯರ ಬಿಡಿ ಶಿಲ್ಪಗಳಿವೆ. ಮುಖ್ಯಕಟ್ಟಡದ ಎದುರಿಗೆ ಸ್ವಲ್ಪ ಪಕ್ಕದಲ್ಲಿ ಗಣಪತಿ ಹಾಗೂ ಮಹಿಷಮರ್ದಿನಿಯರ ಪ್ರತ್ಯೇಕ ಗುಡಿಗಳಿವೆ. ಈ ದೇವಾಲಯದಲ್ಲಿರುವ ಶಾಸನವು

ಚಾಳುಕ್ಯ ದೊರೆ ಮೊದಲನೇ ಸೋಮೇಶ್ವರನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1052) ಅತಿತ್ರುಟಿತವಾಗಿದ್ದು ದೇವಾಲಯಕ್ಕೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಈ ದೇವಾಲಯದ ಸಮೀಪವೇ ರಾಷ್ಟ್ರಕೂಟರ ಕಾಲದ ಇಟ್ಟಿಗೆ ರಚನೆಯಿರುವ ಗಳೇಶ್ವರ ಗುಡಿಯಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ಚಿಕ್ಕದಾದ ನವರಂಗವಿದೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯಲ್ಲಿವೆ. ಈ ದೇವಾಲಯದ ಹೊರಭಾಗದ ಪ್ರವೇಶದ್ವಾರದ ಮೇಲಿರುವ ಲಲಾಟದಲ್ಲಿ ಜಿನ ಬಿಂಬವಿದೆ. ಗರ್ಭಗೃಹದಲ್ಲಿ ತೀರ್ಥಂಕರ ಪೀಠವಿದ್ದು ಮೇಲೆ ನಂತರದ ಕಾಲದ ವೀರಭದ್ರಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಂದಿನ ಭಾಗಗಳೆಲ್ಲಾ ಬಿದ್ದುಹೋಗಿದೆ. ವೀರಭದ್ರಪೀಠದಲ್ಲಿ ಶಾಸನವಿದೆ. ಹೊರಗೆ ಇನ್ನೊಂದು ಪೀಠವಿದ್ದು ಅದರ ಮೇಲೆ ಸರಸ್ವತಿಯ ಒರಟಾದ ಶಿಲ್ಪವಿದೆ. ಊರಿನ ಕುಂಬಾರ ಓಣಿಯಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಮೊದಲನೇ ಸೋಮೇಶ್ವರನ ಕಾಲದ್ದಾಗಿದ್ದು (1067) ಅಯ್ಯಿಮಯ್ಯ ನಾಯಕನು ಬೆಣ್ಣೆವೂರಲ್ಲಿ ಕಟ್ಟಿಸಿದ ಬಸದಿಗೆ ಮಹಾಮಂಡಳೇಶ್ವರ ಲಕ್ಷ್ಮರಸನು ಬಿಟ್ಟ ಭೂದಾನದ ಬಗೆಗೆ ತಿಳಿಸುತ್ತದೆ. ಊರಿನಲ್ಲಿರುವ ಇತರ ದೇವಾಲಯಗಳೆಂದರೆ ಹನುಮಂತ, ದುರ್ಗವ್ವ, ದ್ಯಾಮವ್ವ, ಹೊನ್ನಂತ್ತವ್ವ, ಮೈಲಾರಲಿಂಗಪ್ಪ, ಕತ್ತಲ ಮಲ್ಲಪ್ಪ ಮುಂತಾದವುಗಳು. ಊರಿನಲ್ಲಿ ಅಜಯ್ಯನಮಠ, ಕಂಬ ಬಸವೇಶ್ವರ ಮಠ, ಹಾಗೂ ಗುಬ್ಬಿ ನಂಜುಂಡೇಶ್ವರರ ಗದ್ದುಗೆ ಇವೆ. ಇಲ್ಲಿ ನಾಲ್ಕೂ ಕೆರೆಗಳಿದ್ದು ಎರಡು ದೊಡ್ಡ ಕೆರೆಗಳಾಗಿವೆ. ಊರಿನಲ್ಲಿ ಒಂದು ಮಸೀದಿ ಹಾಗೂ ಕ್ಯಾಥೋಲಿಕ್ ಚರ್ಚ್ ಇದೆ.

**ಯಮನೂರು :** ನವಲಗುಂದ ತಾಲೂಕಿನ ಯಮನೂರು (ಜನಸಂಖ್ಯೆ : 1,980) ಹಿಂದು-ಇಸ್ಲಾಂ ಧರ್ಮ ಸಮನ್ವಯದ ಸಂಕೇತವಾಗಿದೆ. ಯಮನೂರು ರಾಜಾಬಾಗ ಸವಾರನ ಸಮಾಧಿಯಿಂದಾಗಿ ಪ್ರಸಿದ್ಧಿಯಲ್ಲಿದೆ. ಬೆಣ್ಣೆಹಳ್ಳದಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿರುವ ಈ ಊರು ಮಾರ್ತಂಡ ಮುನಿಗಳು ತಪಸ್ಸು ಮಾಡಿದ ಊರಾಗಿದ್ದು ಹಿಂದೆ ಇದಕ್ಕೆ ಯಮ್ಮಿಗ್ಗನೂರು ಎಂಬ ಹೆಸರಿತ್ತೆಂದು ಸ್ಥಳ ಪುರಾಣ ಹೇಳುತ್ತದೆ. ರಾಜಾಬಾಗ ಸವಾರ್ (ಚಾಂಗದೇವ) ಪುಣತಾಂಬೆ ಎಂಬ ಊರಿನವರಂತೆ. ನಾಥಪಂಥೀ ಯೋಗೀ ಸಾಧಕರು ಜ್ಞಾನದೇವನನ್ನು ಮರಳು ಮಾಡಬೇಕೆಂದು ಚಾಂಗದೇವನು ಹುಲಿಯ ಬೆನ್ನೇರಿ ಬರಲು ಇದನ್ನು ಕಂಡ ಜ್ಞಾನದೇವನು ತಾನು ಕುಳಿತಿದ್ದ ಮೋಟು ಗೋಡೆ ಸಹಿತ ಚಾಂಗದೇವರನ್ನು ಸಮೀಪಿಸಿದನಂತೆ. ಜ್ಞಾನದೇವರ ಅದ್ಭುತ ತಪಸ್ಸಿಗೆ ತಲೆಬಾಗಿ ವಂದಿಸಿ, ಜ್ಞಾನದೇವನ ಆದೇಶದಂತೆ ಚಾಂಗದೇವನು ಯಮನೂರಲ್ಲಿ ನೆಲೆಸಿ ಸಮಾಧಿಯಾದನಂತೆ. ಇಂದು ಯಮನೂರಿನಲ್ಲಿರುವ ಇವನ ಸಮಾಧಿಗೆ ಹಿಂದು ಮುಸ್ಲಿಂರೆನ್ನದೆ ಸಕಲರೂ ನಡೆದುಕೊಳ್ಳುತ್ತಾರೆ. ಈ ಸಮಾಧಿಗೆ ಜಾಗವಾಗಿ ನವಲಗುಂದದ ಲಿಂಗರಾಜ ದೇಸಾಯಿಗಳು ತಮ್ಮ ಎಮ್ಮೆ ಕೊಟ್ಟಿಗೆಯನ್ನೇ ಕೊಟ್ಟರಂತೆ. ಟಿಪ್ಪುಸುಲ್ತಾನ ಇಲ್ಲಿರುವ ಅಲಿ ದೇವರನ್ನು ದಾನ ಮಾಡಿರುವನೆಂದು ಹೇಳಿಕೆ ಇದೆ. ಹೋಳಿ ಹುಣ್ಣಿಮೆಯಾದ ನಾಲ್ಕನೇಯ ದಿನಕ್ಕೆ ಗಂಧ, ಐದನೆ ದಿನಕ್ಕೆ ನಡೆಯುವ ಉರುಸಿನಲ್ಲಿ ಪಾಲ್ಗೊಳ್ಳಲು ಉತ್ತರ ಕರ್ನಾಟಕದ ದೂರದ ಊರುಗಳಿಂದ ಸಾವಿರಾರು ಜನ ಬಂದು ಸೇರುತ್ತಾರೆ. ಸುಮಾರು ಒಂದು ತಿಂಗಳು ಜರುಗುವ ಈ ಜಾತ್ರೆಯಲ್ಲಿ ದನಗಳ ವ್ಯಾಪಾರ ತುರುಸಿನಿಂದ ನಡೆಯುತ್ತದೆ.

**ಯಳವಟ್ಟಿ :** ಹಾನಗಲ್ ತಾಲೂಕಿನ ಯಳವಟ್ಟಿಯು (ಜನಸಂಖ್ಯೆ : 2,429) ಹಾನಗಲ್‌ನಿಂದ ಉತ್ತರಕ್ಕೆ 13 ಕಿ.ಮೀ. ದೂರದಲ್ಲಿದ್ದು ಬನವಾಸಿ-12000 ಮಹಾಘಟಕದಲ್ಲಿದ್ದ ಹಾನಗಲ್-500 ರ ಆಡಳಿತ ವಿಭಾಗದಲ್ಲಿದ್ದ ಪ್ರಸಿದ್ಧ ಸ್ಥಳವಾಗಿದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೆ ರಾಮಲಿಂಗೇಶ್ವರ, ಮಹಾಬಲೇಶ್ವರ ಹಾಗೂ ಚಂದ್ರಪ್ರಭ ಬಸದಿ. ರಾಮಲಿಂಗೇಶ್ವರ ದೇವಾಲಯವು ಬೃಹದಾಕಾರದಲ್ಲಿ ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ಕಟ್ಟಡವಾಗಿದೆ. ಇದನ್ನು 1983 ರಲ್ಲಿ ದುರಸ್ತಿಗೊಳಿಸಲಾಗಿದೆ. ಈ ದೇವಾಲಯವು ಬಹುಶಃ ರಾಷ್ಟ್ರಕೂಟ ಕಾಲದಲ್ಲಿ ಮೊದಲು ನಿರ್ಮಿಸಿ ಅನಂತರ ಚಾಳುಕ್ಯರ ಕಾಲದಲ್ಲಿ ವಿಸ್ತರಣೆಗೊಂಡಿರುವ ಸಾಧ್ಯತೆಗಳಿವೆ. ಏಕೆಂದರೆ ಚಾಳುಕ್ಯರ ಶಾಸನಗಳು ಆಗಲೇ ಅಸ್ತಿತ್ವದಲ್ಲಿದ್ದ ರಾಮೇಶ್ವರ ದೇವಾಲಯಕ್ಕೆ ಬಿಟ್ಟ ದಾನಗಳನ್ನು ಮಾತ್ರ ದಾಖಲಿಸುತ್ತವೆ. ಇದರಲ್ಲಿ ಗರ್ಭಗೃಹ, ಆಯತಾಕಾರವಾದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಒಳಭಾಗದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಪುರಾತನ ಲಕ್ಷಣಗಳುಳ್ಳ ಶಿವಲಿಂಗವಿದೆ. ಅಂತರಾಳದ ಎತ್ತರವಾದ ಬಾಗಿಲವಾಡದ ಮೇಲ್ಭಾಗದಲ್ಲಿ ಮಕರತೋರಣದ ಅಲಂಕಾರವಿದ್ದು ಮಧ್ಯದಲ್ಲಿ ನಟರಾಜ, ಎಡಭಾಗದಲ್ಲಿ ವಿಷ್ಣು ಹಾಗೂ ಬಲಭಾಗದಲ್ಲಿ ಬ್ರಹ್ಮನ ಸುಂದರ ಆಕರ್ಷಕ ಶಿಲ್ಪಗಳಿವೆ. ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ನಾಲ್ಕು ಆಕರ್ಷಕ ಚಾಳುಕ್ಯ ಶೈಲಿಯ ಭಾರೀ ಕಂಬಗಳಿವೆ. ಅನೇಕ ಕಂಬಗಳ ಮೇಲೆ ಪೂರ್ಣ ಕುಂಭವಿದ್ದು ರಾಷ್ಟ್ರಕೂಟ ಹಾಗೂ ಚಾಳುಕ್ಯ ಶೈಲಿಗಳ ಮಿಶ್ರಣವೆನ್ನಬಹುದಾಗಿದೆ. ನವರಂಗಕ್ಕೆ ಮಧ್ಯದಲ್ಲಿ ಪ್ರವೇಶದ್ವಾರವಿದ್ದು ತ್ರಿಶಾಖಾಲಂಕಾರವನ್ನು ಹೊಂದಿದೆ. ನವರಂಗದ ಮಧ್ಯದಲ್ಲಿ ಆಸೀನ ನಂದಿಯಿದೆ. ನವರಂಗಕ್ಕೆ ದಕ್ಷಿಣದಿಂದ ಇನ್ನೊಂದು ಪ್ರವೇಶದ್ವಾರವಿದೆ. ಉತ್ತರಕ್ಕೆ ಒಂದು ಚಿಕ್ಕ ಗರ್ಭಗೃಹವಿದ್ದು ಒಳಗೆ ಶಿವಲಿಂಗವಿದೆ. ದಕ್ಷಿಣಕ್ಕಿರುವ

ಪ್ರವೇಶದ್ವಾರದ ಅಕ್ಕಪಕ್ಕದಲ್ಲಿ ಸಪ್ತಮಾತೃಕೆಯರ ಪಟ್ಟಿಕೆ, ಭಗ್ನ ಸೂರ್ಯ, ಆಸೀನ ಭೈರವ ಸ್ಥಾನಿಕಭೈರವ, ಮಹಿಷಮರ್ದಿನಿಯರ ಸುಂದರ ಶಿಲ್ಪಗಳಿವೆ. ನವರಂಗದ ಮುಖ್ಯ ದ್ವಾರದ ಮೇಲ್ಭಾಗದಲ್ಲಿರುವ ಬೋದಿಗೆಯಲ್ಲಿ ನರ್ತಕಿಯರ ಹಾಗೂ ಸಂಗೀತ ವಾದಕರುಗಳ ಶಿಲ್ಪಗಳಿವೆ. ಗರ್ಭಗೃಹದ ಹೊರಭಾಗದಲ್ಲಿ ಶಿಖರವು ತುದಿಯ ಕಳಶದವರೆಗೂ ಭಾರಿ ಮಣ್ಣಿನ ಗುಪ್ಪೆಯಿಂದ ಮುಚ್ಚಲ್ಪಟ್ಟಿದೆ. ಬಹುಶಃ ದಾಳಿಗಳ ಭೀತಿಯಿಂದ ಹೀಗೆ ಮಾಡಿರಲು ಸಾಧ್ಯವೆನ್ನಬಹುದಾಗಿದೆ. ಈ ದೇವಾಲಯದಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ದೊರೆ ಎರಡನೇ ಜಗದೇಕಮಲ್ಲನ ಕಾಲದ್ದಾಗಿದ್ದು (ಕ್ರಿ.ಶ. 1188) ದಂಡನಾಯಕ ಸೋವಿದೇವರಸನು ಯಲವಟ್ಟಿಯ ರಾಮೇಶ್ವರ ದೇವರಿಗೆ ಬಿಟ್ಟ ಭೂ ದಾನವನ್ನು ತಿಳಿಸುತ್ತದೆ. ಈ ದೇವಾಲಯದ ಎದುರಿಗೆ 7-8 ಗೋಸಾಸ ಕಲ್ಲು ಮಹಾಸತಿಕಲ್ಲು ಇವೆ. ಇದರ ಸಮೀಪದಲ್ಲಿರುವ ಮಹಾಬಲೇಶ್ವರ ದೇವಾಲಯವು ಶಿಥಿಲವಾಗಿದ್ದು ಕೇವಲ ಗರ್ಭಗೃಹ ಹಾಗೂ ಅರ್ಧಮಂಟಪಗಳನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಚಾಳುಕ್ಯ ಪೀಠದ ಮೇಲೆ ಶಿವಲಿಂಗವಿದೆ. ಅರ್ಧಮಂಟಪದ ಬಾಗಿಲುವಾಡವು ಅಲಂಕೃತವಾಗಿದ್ದು ಇಕ್ಕೆಲಗಳಲ್ಲಿ ವಜ್ರಪುಷ್ಪಾಲಂಕೃತ ಜಾಲಂದ್ರಗಳಿವೆ. ಇಲ್ಲಿರುವ ಒಂದು ಶಾಸನವು ಕಲ್ಯಾಣದ ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು (ಕ್ರಿ.ಶ. 1114) ಮಹಾದೇವಿ ಮೈಳಲಾ ದೇವಿಯಿಂದ ಮಾಳಬೇಶ್ವರ ದೇವಾಲಯದ ನಿರ್ಮಾಣದ ಬಗೆಗೆ ಹಾಗೂ ನೀಡಿದ ಹಲವು ದಾನಗಳ ಬಗೆಗೆ ದಾಖಲಿಸುತ್ತದೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಊರಹೊರಭಾಗದಲ್ಲಿ ಚಂದ್ರಪ್ರಭ ತೀರ್ಥಂಕರ ಬಸದಿಯಿದೆ. ಇದು ಚಾಳುಕ್ಯ ಶೈಲಿಯ ಸುಂದರ ಕಟ್ಟಡವಾಗಿದ್ದು ಗರ್ಭಗೃಹ ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಒಳಗೆ ದೊಡ್ಡ ಜೈನ ಪೀಠದ ಮೇಲೆ ಪದ್ಮಾಸನದ ಚಂದ್ರಪ್ರಭ ತೀರ್ಥಂಕರರ ಸುಂದರ ಮೂರ್ತಿಯಿದೆ. ಅಂತರಾಳದ ಮುಂಭಾಗದಲ್ಲಿರುವ ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳಿದ್ದು ಪ್ರವೇಶದ್ವಾರವು ಅಲಂಕೃತವಾಗಿದೆ. ಅಂತರಾಳದ ದ್ವಾರದ ಎರಡೂ ಕಡೆಗಳಲ್ಲಿ ಜಾಲಂದ್ರಗಳಿವೆ. ಮುಖಮಂಟಪವು ವಿಶಾಲವಾಗಿದೆ. ಮುಖ್ಯ ಪ್ರವೇಶದ್ವಾರವು ಮೆಟ್ಟಿಲುಗಳನ್ನು ಹೊಂದಿದ್ದು ಪಕ್ಕದಲ್ಲಿ ಯಾಳಿಗಳಿವೆ. ಬಸದಿಯ ಎದುರು ಭಾಗದಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ಮಾನಸ್ತಂಭವಿದೆ. ಹೊರಗೆ ಒಂದು ಅಪೂರ್ಣ ಪಾರ್ಶ್ವನಾಥ ವಿಗ್ರಹವಿದೆ. ಬಸದಿಯ ಆವರಣದಲ್ಲಿ ನಾಲ್ಕು ನಿಷಧಿಕಲ್ಲುಗಳಿವೆ. ಅವುಗಳಲ್ಲಿ ಎರಡರಲ್ಲಿ ಶಾಸನವಿದ್ದು ದೇವಕೀರ್ತಿ ಭಟ್ಟಾರಕರ ಶಿಷ್ಯನೊಬ್ಬನ ಸಮಾಧಿಮರಣದ ಬಗೆಗೆ ಹಾಗೂ ಇನ್ನೊಂದರಲ್ಲಿ ಸೇನಬೋವ ಕೇತಯ್ಯನ ಸಮಾಧಿ ಮರಣದ ಬಗೆಗೆ ಉಲ್ಲೇಖಿಸುತ್ತವೆ. ಊರಿನಲ್ಲಿರುವ ಇತರ ದೇವಾಲಯಗಳೆಂದರೆ ಈಶ್ವರ, ಮಾರಮ್ಮ ಹನುಮಂತ ಮುಂತಾದವುಗಳು. ಊರಿನಲ್ಲಿ ಒಟ್ಟು ಐದು ಕೆರೆಗಳಿವೆ. ಹಾಗೂ ಇತ್ತೀಚೆಗೆ ನಿರ್ಮಿಸಲಾದ ಮಸೀದಿ ಇದೆ. ಗಣ್ಯ ದೇವಾಲಯವುಳ್ಳ ಈ ಊರು ಹೆಚ್ಚು ಪ್ರಸಿದ್ಧಿಯನ್ನು ಪಡೆದಿಲ್ಲ.

**ಯಳವತ್ತಿ** : ಶಿರಹಟ್ಟಿ ತಾಲೂಕಿನ ಯಳವತ್ತಿಯು (ಜನಸಂಖ್ಯೆ : 3,556) ಪ್ರಾಚೀನ ಶಾಸನಗಳಲ್ಲಿ 'ಎಳವತ್ತಿ' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ಶಿರಹಟ್ಟಿಯಿಂದ ಸ್ವಲ್ಪ ವಾಯುವ್ಯಕ್ಕೆ 12 ಕಿ.ಮೀ. ದೂರದಲ್ಲಿ, ಮಾಗಡಿಯಿಂದ ವಾಯುವ್ಯಕ್ಕೆ ಐದು ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಮುಳುಗುಂದ-12ಕ್ಕೆ(?) ಸೇರಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದೆ. ಗುಂಡಲಿಂಗ ಗುಡಿ ಆವರಣದಲ್ಲಿರುವ ಕಂಬದ ಮೇಲಿರುವ ಸುಮಾರು ಎಂಟನೆಯ ಶತಮಾನದ ಶಾಸನ ಪಳ್ತಿಯಮತ್ತವೂರ (ಹತ್ತಿಮತ್ತೂರು, ಸವಣೂರು ತಾಲೂಕು) ಮಾದೆಗೋವಜ್ಜನ ಮಗನಾದ ಶ್ರಿಕುಮಾರ, ಕಂಬ ಮಾಡಿಸಿದ್ದನ್ನು ದಾಖಲಿಸಿದೆ. ಇದೇ ಆವರಣದಲ್ಲಿರುವ ಕ್ರಿ.ಶ. 1151 ರ ಶಾಸನ ಎಳವತ್ತಿ ಗ್ರಾಮದ 120 ಮಹಾಜನರು ಗುಂಡೇಶ್ವರ ದೇವರಿಗೆ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. 1158 ರ ಶಾಸನ ಭಾಗಶಃ ಹಾಳಾಗಿದ್ದು, ನಾಗೇಶ್ವರ ಗುಡಿಯ ಆಚಾರ್ಯ ದೇವರಾಶಿ ಪಂಡಿತರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಕ್ರಿ.ಶ. 1159 ರ ಶಾಸನ ದಂಡನಾಯಕ ಹರಿದೇವನು ಗುಂಡೇಶ್ವರ ದೇವರಿಗೆ ಉಮ್ಮಚ್ಚಿಗೆ ಗ್ರಾಮವನ್ನು ದಾನ ನೀಡಿದ ಅಂಶವನ್ನು ಹೇಳುತ್ತದೆ. ಕ್ರಿ.ಶ. 1195 ರ ಶಾಸನ ಮಾಗುಂಡಿ (ಈಗಿನ ಮಾಗಡಿ)ಯ ನೀಲಕಂಠದೇವರ ಶಿಷ್ಯರಾದ 'ಸಿಮನಮಲ್ಲಯ್ಯ'ನು ಗುಂಡನಾಥದೇವರಿಗೆ ಪುಷ್ಕರಿಣಿ ಕಟ್ಟಿಸಿ ಭೂಮಿಯನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 12 ನೇ ಶತಮಾನಕ್ಕೆ ಸೇರಿದ ಮತ್ತೊಂದು ಶಾಸನ ಸೂಸಿಕಲ್ಲರ ಶಂಕರಯ್ಯನು ಗುಂಡೇಶ್ವರ ದೇವರಿಗೆ ನೆಲ್ಲಕ್ಕಿ ಕಂಬ ಮುಂತಾದವುಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಊರ ಹೊಲದಲ್ಲಿರುವ 1819 ರ ಶಾಸನ ಸರಸಿಂಹಭಟ್ಟನಿಗೆ ಸರ್ವಮಾನ್ಯವಾಗಿ ಕೊಟ್ಟಿದ್ದ ದತ್ತಿಯ ಬಗ್ಗೆ ಉಲ್ಲೇಖಿಸುತ್ತದೆ. ಮೇಲೆ ಚರ್ಚಿಸಿರುವ ಶಾಸನಗಳ ಪಾಠವಿನ್ನೂ ಪ್ರಕಟವಾಗಿಲ್ಲದಿರುವುದರಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ.

ಇಲ್ಲಿನ ಶಾಸನೋಕ್ತ ಗುಂಡೇಶ್ವರ ಇಂದಿನ ಗುಂಡಲಿಂಗ ದೇವಾಲಯವಾಗಿದೆ. ಊರ ಹೊರಗೆ ಕೆರೆ ಏರಿಯ ಮೇಲಿರುವ ಈ ಗುಡಿ ಗರ್ಭಗುಡಿ, ಅಂತರಾಳ ಹಾಗೂ ನವರಂಗವನ್ನ ಹೊಂದಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಇದರ ಬಾಗಿಲವಾಡ ಸರಳ ಪಂಚಶಾಖೆಯನ್ನು ಹೊಂದಿದೆ. ನವರಂಗದಲ್ಲಿರುವ ದೇವಕೋಷ್ಠಗಳಲ್ಲಿ ಸಪ್ತಮಾತೃಕಾ ಪಟ್ಟಿಕೆ, ಬ್ರಹ್ಮ, ಮಹೇಶ್ವರ ಹಾಗೂ ವಿಷ್ಣು ಪೀಠಗಳಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿ ಇಟ್ಟಿದ್ದಾರೆ. ನವರಂಗದ ಸಕಲ ಅಂಕಣದ ಛತ್ತುಗಳಲ್ಲಿ, ತೊಲೆಯಲ್ಲಿ ಕಿರು ಕಮಲಗಳನ್ನು ಬಿಡಿಸಲಾಗಿದ್ದು, ನವರಂಗದ ಛಾವಣಿ ಕಮಲಮಯವಾಗಿದೆಯೆಂದರೆ ತಪ್ಪಾಗಲಾರದು. ಗರ್ಭಗೃಹಕ್ಕೆ ಶಿಖರವಿದೆ. ಈ ಗುಡಿ ಆವರಣದಲ್ಲಿ ಪ್ರಾಚೀನ ಕಾಲದ ವೀರಗಲ್ಲು, ಶಾಸನ, ಸಪ್ತಮಾತೃಕಾ ಪಟ್ಟಿಕೆಗಳು ಹರಡಿಕೊಂಡಿವೆ. ಊರಿನ ಮತ್ತೊಂದು ಬದಿಯಲ್ಲಿರುವ ಉಡಚಮ್ಮನ ಗುಡಿಯು ವಿಶಾಲವಾಗಿದ್ದು ಆಕರ್ಷಕವಾಗಿದೆ. ಇದೇ ರೀತಿ ಬಸವಣ್ಣ, ಈಶ್ವರ, ಕಲ್ಮೇಶ್ವರ, ವೀರಭದ್ರ, ಮೈಲಾರ, ಹನುಮ, ಬನಶಂಕರಿ, ಹಾಗೂ ದುರ್ಗಾ ದೇವಾಲಯಗಳಿದ್ದು, ಮೇಲ್ಮಠವಿದೆ. ಊರಲ್ಲಿ ಮೂರು ಮಸೀದಿ ಹಾಗೂ ಒಂದೆರಡು ದರ್ಗಾಗಳಿವೆ. ಗುಂಡಲಿಂಗ ದೇವರ ಜಾತ್ರೆ ಕಾರ ಹುಣ್ಣಿಮೆಗೆ ಐದು ದಿನ ಮೊದಲೇ ಜರುಗುತ್ತದೆ.

**ಯಾವಗಲ್ಲು :** ರೋಣ ತಾಲೂಕಿನ ಯಾವಗಲ್ಲು (ಜನಸಂಖ್ಯೆ : 4,516) ಪ್ರಾಚೀನ ಶಾಸನಗಳಲ್ಲಿ 'ಎವಂಗಲ್ಲು' 'ಯಾವಂಗಲ್ಲು' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ರೋಣದಿಂದ ಪಶ್ಚಿಮಕ್ಕೆ 22 ಕಿಮೀ ದೂರದಲ್ಲಿ ಇರುವ ಹಳ್ಳದ ಮೇಲಿದೆ. ಹಿಂದೆ ಇದು ಬೆಳ್ವಣಿಕೆ-12 ಕ್ಕೆ ಸೇರಿದ ಗ್ರಾಮವಾಗಿದ್ದು ನೆರೆಯ ಕೌಜಗೇರಿ ಗ್ರಾಮದ ಕ್ರಿ.ಶ. 934 ರ ರಾಷ್ಟ್ರಕೂಟರ ಶಾಸನದಲ್ಲಿ ಮೊದಲ ಬಾರಿಗೆ ಈ ಊರಿನ ಉಲ್ಲೇಖವಿದ್ದು ಯಾವಗಲ್ಲಿನಲ್ಲಿದ್ದ ಆದಿತ್ಯ, ಈಶ್ವರ ದೇವರುಗಳ ಬಗ್ಗೆ ಹೇಳುತ್ತದೆ. ಇಲ್ಲಿಂದಲೇ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಮಡವಾಳದವರ ಮಠದ ಗೋಡೆಗೆ ಸೇರಿರುವ ಯಾದವ ಮಹಾದೇವನ ಕ್ರಿ.ಶ. 1271 ರ ಶಾಸನ ದೇವಾಲಯವೊಂದರ ಸ್ಥಾನಾಚಾರ್ಯರಾದ ಚಂದ್ರಭೂಷಣ ಯತಿಗಳಿಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದ ಕೊನೆಯಲ್ಲಿ ಬರುವ ಭೋಗೇಶ್ವರಾದಿತ್ಯ ದೇವರ ಉಲ್ಲೇಖದಿಂದ ಈ ಊರಲ್ಲಿ ಹಿಂದೆ ಭೋಗೇಶ್ವರ ಹಾಗೂ ಆದಿತ್ಯ ದೇವರ ಗುಡಿಗಳಿದ್ದವೆಂಬ ಅಂಶ ವೇದ್ಯವಾಗುತ್ತದೆ. ಸರ್ವೆ ನಂ.133 ರಲ್ಲಿರುವ ಕ್ರಿ.ಶ. 1555 ರ ಶಾಸನ ಮಹಾರಾಜ ಮಲ್ಲಿಕ ಸಾಹೇಬನು ಧರ್ಮಛತವನ್ನು ಹದಲಿ ಯಾವಗಲ್ ರಸ್ತೆಯಲ್ಲಿ ಸ್ಥಾಪಿಸಿ ಗ್ರಾಮಕ್ಕೆ ನೀರೆತ್ತಿಕೊಂಡು ಇರಬೇಕೆಂದು ಆದೇಶಿಸಿ, ಆ ಸಂಬಂಧ ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಿಂದ 16 ನೇ ಶತಮಾನದ ವೇಳೆಗೆ ಈ ಪ್ರದೇಶ ಗದುಗಿನ ಸೀಮೆಗೆ ಸೇರಿದ್ದ ಅಂಶ ಸ್ಪಷ್ಟವಾಗುತ್ತದೆ. ಸುಮಾರು ಕ್ರಿ.ಶ. 16 ನೇ ಶತಮಾನದ ಶಾಸನ ನರಹರಿಭಟ್ಟನಿಗೆ ಹೂವಿನ ಹಡಗಲಿ (ನೆರೆಯ ಹಡಗಲಿ) ಗ್ರಾಮದಲ್ಲಿ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ಊರಲ್ಲಿಂದು ಕೆರೆಯ ದಂಡೆಯ ಮೇಲೆ ಪ್ರಾಚೀನ ಲಿಂಗ, ನಂದಿಗಳಿವೆ. ಆದಿತ್ಯನ ಪೀಠವೂ ಇದೆ. ಕೆರೆಗೆ ಹತ್ತಿದಂತೆ ಇರುವ ಹೇಮಲಿಂಗೇಶ್ವರ ಗುಡಿಯಲ್ಲಿರುವ ಲಿಂಗವು ಸುಮಾರು ಕ್ರಿ.ಶ. 10 ನೇ ಶತಮಾನದ್ದಾಗಿದೆ. ಇದರ ಬಳಿಯಲ್ಲೇ ಮಳೆಯಪ್ಪಜ್ಜನ ಮಠವಿದೆ. 'ಹೇಮಲಿಂಗೇಶ್ವರ'ನಿಂದಾಗಿ ಊರಿಗೆ 'ಹೇಮಗಲ್ಲು', 'ಯಾವಗಲ್ಲು' ಎಂದು ಹೆಸರು ಬಂತೆಂದು ಸ್ಥಳೀಯ ಐತಿಹ್ಯವಿದೆ. ಎವಂಗಲ್ಲುನ ಸಂಸ್ಕೃತ ರೂಪ ಹೇಮಗಲ್ಲು ಇರಬೇಕೆಂದು ತೋರುತ್ತದೆ. ಊರ ಪ್ರವೇಶದಲ್ಲೇ ಸಿಂಹ ಪೀಠದ ಮೇಲೆ ಪದ್ಮಾಸೀನ ನೇಮಿನಾಥ ತೀರ್ಥಂಕರನ ಭಗ್ನ ಶಿಲ್ಪವಿದೆ. ಯಕ್ಷ ಯಕ್ಷಿಯರಿರುವ ಈ ಶಿಲ್ಪ ಎರಡು ಮೂರು ತುಂಡಾಗಿದೆ. ಇಲ್ಲಿನ ವೀರಭದ್ರ ಗುಡಿ, ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದ್ದು ಗರ್ಭಗೃಹದಲ್ಲಿ ವೀರಭದ್ರನಿದ್ದು ಇದನ್ನು ಕದಂಬ ನಾಗರ ಶಿಖರ ಅಲಂಕರಿಸಿದೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯವೇ. ಈ ಗುಡಿಯನ್ನು ಡಾ|| ಸುಂದರ್‌ರವರು ಜೈನ ಬಸದಿ ಇರಬೇಕೆಂದು ಸಂಶಯ ವ್ಯಕ್ತಪಡಿಸಿದ್ದು, ಅವರ ಅವಮಾನ ಇತ್ತೀಚೆಗೆ ಪತ್ತೆಯಾಗಿರುವ ನೇಮಿನಾಥ ತೀರ್ಥಕರ ಶಿಲ್ಪದಿಂದಾಗಿ ನಿಜವಾದಂತಾಗಿದೆ. ಈ ಗುಡಿಯ ಆವರಣದಲ್ಲಿರುವ ಸುಬ್ರಹ್ಮಣ್ಯ, ನಾಗ ಕೆತ್ತನೆಯನ್ನು ಹೊಂದಿರುವ ಸಪ್ತಮಾತೃಕಾ ಪಟ್ಟಿಕೆ ವಿಶಿಷ್ಟವಾಗಿದ್ದು, ಇದನ್ನೂ ಡಾ| ಸುಂದರರವರೇ ಗುರುತಿಸಿದ್ದಾರೆ. ಪೇಟೆಯಲ್ಲಿ ಗಜಲಕ್ಷ್ಮಿಯ ಸುಂದರ ಶಿಲ್ಪವಿದೆ. ಊರ ಹೊರಗೆ ಹಳೆಯ ಶಾಲೆ ಬಳಿ ಮಕರತೋರಣಗಳೇ ಮುಂತಾದ ಅವಶೇಷಗಳಿವೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ದ್ಯಾಮವ್ವ, ಹಾಗೂ ಕರಿಯಮ್ಮನ ಗುಡಿಗಳಿವೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ರಟ್ಟಿಹಳ್ಳಿ :** ಹಿರೇಕೆರೂರು ತಾಲೂಕಿನ ರಟ್ಟಿಹಳ್ಳಿಯು (ಜನಸಂಖ್ಯೆ : 10,353) ಶಾಸನೋಕ್ತ 'ರಟ್ಟಪಳ್ಳಿ' ಎಂದು ಇದ್ದು (ಹಿರೇಕೆರೂರಿನಿಂದ 20 ಕಿಮೀ) ಹಿಂದೆ ನೂರುಂಬಾಡ ನಾಡಿನ ರಾಜಧಾನಿ ಪಟ್ಟಣವಾಗಿತ್ತು. ಈ ಊರು ಕುಮದ್ವತಿ ನದಿಯ

ದಂಡೆಯಲ್ಲಿರುವ ಪುರಾತನ ಸ್ಥಳವಾಗಿದೆ. ಇಲ್ಲಿರುವ ಕಡಂಬೇಶ್ವರ ದೇವಾಲಯವು ಚಾಳುಕ್ಯ ಶೈಲಿಯ ತ್ರಿಕೂಟಾಚಲವಾಗಿದ್ದು, ಒಂದು ಬೃಹದಾಕಾರವಾದ ಕಟ್ಟಡವಾಗಿದೆ. ಇದರಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಒಂದೇ ಕೇಂದ್ರ ನವರಂಗ ಹಾಗೂ ಮುಂಭಾಗದಲ್ಲಿ ವಿಶಾಲವಾದ ಕಂಬಗಳಿಂದ ಅಲಂಕೃತವಾಗಿರುವ ತೆರೆದ ಸಭಾಮಂಟಪ ಇದೆ. ಕೇಂದ್ರ ಗರ್ಭಗೃಹದ ಬಾಗಿಲುವಾಡವು ಪಂಚಶಾಖಾಲಂಕೃತವಾಗಿದ್ದು ಕಮಾನಾಗಿರುವ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಹೊಂದಿದೆ. ಇದರ ಒಳಗಿರುವ ಚಾಳುಕ್ಯ ಶೈಲಿಯ ಪಾಣಿಪೀಠದ ಮೇಲೆ ಪ್ರಾಚೀನ ಲಕ್ಷಣವುಳ್ಳ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡವೂ ಸಹ ಪಂಚಶಾಖಾಲಂಕೃತವಾಗಿದ್ದು, ಇಕ್ಕೆಲಗಳಲ್ಲಿ ಜಾಲಾಂದ್ರಗಳಿವೆ. ಉಳಿದ ಎರಡೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಅಲಂಕೃತವಾದ ಬಾಗಿಲುವಾಡಗಳನ್ನು ಹೊಂದಿವೆ. ಇವುಗಳ ಮುಂಭಾಗದಲ್ಲಿರುವ ಅಂತರಾಳಗಳ ಬಾಗಿಲುವಾಡಗಳೂ ಅಲಂಕೃತವಾಗಿದ್ದು ಜಾಲಂದ್ರಗಳನ್ನು ಹೊಂದಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಬೃಹದಾಕಾರವಾದ ಕಂಬಗಳು ಚಾಳುಕ್ಯ ಶೈಲಿಯಲ್ಲಿದ್ದು ನಮ್ಮ ಗಮನವನ್ನು ಸೆಳೆಯುತ್ತವೆ. ನವರಂಗದ ಪೂರ್ವಕ್ಕಿರುವ ಪ್ರವೇಶದ್ವಾರದ ಬಳಿ ನಂದಿಯ ಏಕ ಶಿಲಾ ವಿಗ್ರಹವಿದೆ. ಇದರ ಮುಂಭಾಗದಲ್ಲಿರುವ ವಿಶಾಲವಾದ ಸಭಾಮಂಟಪವು 24 ಕಂಬಗಳಿಂದ ಅಲಂಕೃತವಾಗಿದೆ. ಈ ಮಂಟಪಕ್ಕೆ ಮೂರು ಪ್ರವೇಶದ್ವಾರಗಳಿದ್ದು ಮುಂಭಾಗದಲ್ಲಿ ಪ್ರತ್ಯೇಕ ಮುಖಮಂಟಪಗಳನ್ನು ಹೊಂದಿವೆ. ನವರಂಗದ ಪ್ರವೇಶ ದ್ವಾರದ ಬೋದಿಗೆಯಲ್ಲಿ ಚಾಮರ ಸುಂದರಿಯರು, ಗಣೇಶ, ನಾಟ್ಯಶಿವ, ವಿಷ್ಣು, ಮಹಿಷಮರ್ದಿನಿ ಮುಂತಾದ ಸುಂದರ ಅಲಂಕಾರಿಕ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗದ ಬಾಗಿಲುವಾಡವು ಅಲಂಕೃತವಾಗಿದ್ದು ಇಕ್ಕೆಲಗಳಲ್ಲಿ ಎತ್ತರವಾದ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿನ ಎರಡು ದೇವಕೋಷ್ಠಗಳು ಗಣಪತಿ ಹಾಗೂ ದುರ್ಗಾ ವಿಗ್ರಹಗಳನ್ನು ಹೊಂದಿವೆ. ಮೂರು ಗರ್ಭಗೃಹಗಳ ಮೇಲೆ ದ್ರಾವಿಡ ಶೈಲಿಯ ಶಿಖರಗಳಿದ್ದು ಬಲಭಾಗದ ಮತ್ತು ಎಡಭಾಗದ ಶಿಖರಗಳು ಮಾತ್ರ ಸುಸ್ಥಿತಿಯಲ್ಲಿವೆ. ದೇವಾಲಯದ ಬಲಭಾಗದ ಶಿಖರದಲ್ಲಿ ನಟರಾಜ, ವಿವಿಧ ಭಂಗಿಯ ಆಸೀನ (ಚತುರ್ಭುಜ) ಶಿವ, ಹಿಂಭಾಗದಲ್ಲಿ ನಾಟ್ಯ ಭೈರವ, ನಾಟ್ಯಶಿವನ ಕಿರುಶಿಲ್ಪಗಳನ್ನು ಶಿಖರದ ಆರೋಹಣ ಪಟ್ಟಿಕೆಯ ಮೇಲೆ ಬಿಡಿಸಲಾಗಿವೆ. ಎಡಭಾಗದ ಶಿಖರದಲ್ಲೂ ಹೀಗೆಯೇ ಸುಂದರ ಚಾಳುಕ್ಯ ಶೈಲಿಯ ಶಿಲ್ಪಗಳ ಅಲಂಕಾರಗಳಿವೆ. ಎಡಕ್ಕೆ ಕೆಳಹಂತದಲ್ಲಿ ಆಸಿನ ಶಿವ ಹಾಗೂ ಮೇಲಿನ ಹಂತದಲ್ಲಿ ನಾಟ್ಯ ಶಿವನ ಅಲಂಕಾರಿಕ ಶಿಲ್ಪಗಳಿವೆ. ಶಿಖರದ ಸುತ್ತಲೂ ವೃತ್ತಾಕಾರವಾಗಿ ಆವರಿಸಿರುವ ಭಿತ್ತಿಗಳಲ್ಲಿ ನಾಟ್ಯಶಿವನ ಹಾಗೂ ಆಕಾಶದಲ್ಲಿ ಮೋಡಗಳಿರುವಂತೆ ಉಬ್ಬು ಶಿಖರಾಲಂಕಾರವನ್ನು ಮಾಡಿರುವುದು ವಿಶೇಷವಾಗಿದೆ. ಈ ದೇವಾಲಯದ ಹೊರಗೆ ಮೂರು ವೀರಗಲ್ಲುಗಳಿದ್ದು ಒಂದರಲ್ಲಿ ತುರುಗೋಳ್ ಚಿತ್ರಣವಿದ್ದು ಶಾಸನವನ್ನು ಹೊಂದಿದೆ. ಇದರ ಬಳಿಯೇ ಎರಡು ತೀರ್ಥಂಕರ ಮೂರ್ತಿಗಳು, ಸ್ಥಾನಿಕ ಪಾರ್ಶ್ವನಾಥ, ಹಾಗೂ ಇನ್ನೊಂದು ಆಸೀನ ಮೂರ್ತಿ ಮುಂತಾದ ಅವಶೇಷಗಳು ಕಂಡುಬರುತ್ತವೆ. ಈ ದೇವಾಲಯದಲ್ಲಿ ಹಲವಾರು ಶಾಸನಗಳು ಕಂಡುಬಂದರೂ ಇದರ ನಿರ್ಮಾಣದ ಬಗೆಗೆ ಖಚಿತವಾದ ದಿನಾಂಕವು ತಿಳಿದು ಬರುವುದಿಲ್ಲ. ಈ ಗುಡಿಯ ಹತ್ತಿರವಿರುವ ಶಾಸನವು ಕಲ್ಯಾಣದ ಚಾಳುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದ್ದಾಗಿದ್ದು ಅಸ್ಪಷ್ಟವಾಗಿದೆ. ದಂಡಾಧೀಶ ಬೊಮ್ಮದೇವನಿಗೆ ಬನವಾಸಿ ನಾಡಿನ ಆಡಳಿತವನ್ನು ಕೊಟ್ಟ ಉಲ್ಲೇಖವಿದೆ. ಮಧ್ಯಮಂಟಪದಲ್ಲಿರುವ ಶಾಸನವು ಕಲಚೂರಿ ಅರಸು ಸೋವಿದೇವನ ಕಾಲದ್ದಾಗಿದ್ದು (ಕ್ರಿ.ಶ. 1174) ಮಹಾಮಂಡಳೇಶ್ವರ ಪಾಂಡ್ಯದೇವನಿಂದ ಕಡಂಬೇಶ್ವರ ದೇವರಿಗೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು ಯಾದವ ಸಿಂಘಣನ ಕಾಲದ್ದಾಗಿದ್ದು (ಕ್ರಿ.ಶ. 1238) ಹೊನ್ನಬಮ್ಮಿಸೆಟ್ಟಿ ಎಂಬ ವರ್ತಕನು ಮಲ್ಲೇಶ್ವರ ಮತ್ತು ರಾಜೇಶ್ವರ ದೇವರಿಗಾಗಿ ಇದೇ ದೇವಾಲಯದ ಸ್ಥಾನಾಚಾರ್ಯ ರಾಜಗುರು ಮೂರುಜಾವಿದೇವರಿಗೆ ಬಿಟ್ಟ ದಾನವನ್ನು ತಿಳಿಸುತ್ತದೆ. ಈ ದೇವಾಲಯವು ಚಾಳುಕ್ಯ ಕಲಾಶೈಲಿಯ ಪರಿಪೂರ್ಣ ಕಟ್ಟಡವೆಂದು ಹಲವು ಕಲಾತಜ್ಞರ ಅಭಿಪ್ರಾಯವಾಗಿದೆ.

ಕುಮದ್ವತಿ ದಂಡೆಯ ಮೇಲೆ ಮಳೆಮಲ್ಲೇಶ್ವರ ಶಿವಾಲಯವಿದೆ. ಶಿವಾಲಯವು ಸ್ಥಳೀಯವಾಗಿ ದುರಸ್ತಿಗೊಂಡಿದ್ದು ಇದರ ಗೋಡೆಯಲ್ಲಿ ಸಹಗಮನ ಮಾಡುತ್ತಿರುವ ಸುಂದರ ಸತಿ ಕಲ್ಲಿನಲ್ಲಿ ಆರು ಸತಿಯರಿದ್ದಾರೆ ಹಾಗೂ ಇದರಲ್ಲಿ ಚಿತೆಯ ಚಿತ್ರಣವೂ ಇದೆ. ಇದರ ಬಳಿ ಯಾದವ ರಾಮಚಂದ್ರನ ಕಾಲದ ಶಾಸನವಿದ್ದು 'ಹೊಯ್ಸಳ ರಾಯವಿಭಾಡ' ಬಿರುದಿನ ಮಹಾಮಂಡಳೇಶ್ವರ ಸಳುವೆಯ ಆಚಾರಪಂಡಿತ ಮಾಡಿದ ದಾನವನ್ನು ಉಲ್ಲೇಖಿಸುತ್ತದೆ. ಇದರ ಸಮೀಪವೇ ಯಕ್ಷಭೈರವ ಮುಂತಾದ ಶಿಲ್ಪಗಳನ್ನು ಗೋಡೆಯಲ್ಲಿ ಸೇರಿಸಿ ಕಟ್ಟಲಾಗಿದೆ. ಇಲ್ಲಿರುವ ನವರಂಗದಲ್ಲಿ ಚಾಳುಕ್ಯ ಶೈಲಿಯ ಕಂಬಗಳನ್ನು ಬಳಸಿದ್ದಾರೆ. ಹಾಗೂ ಇದರ ಛಾವಣಿಯಲ್ಲಿ ನಾಗಬಂಧದ ಸುಂದರ ಶಿಲ್ಪಾಲಂಕಾರವಿದೆ. ಊರಿನಲ್ಲಿರುವ ಇತರ ದೇವಾಲಯಗಳೆಂದರೆ ಕೇಶವ, ಬಸವೇಶ್ವರ, ವೀರಭದ್ರ, ನರಸಿಂಹ, ದುರ್ಗವ್ವ (ಹೊಳೆಯ ದಂಡೆಯಲ್ಲಿ), ಪಾಂಡುರಂಗ, ಕಾಳಿಕಾದೇವ, ಬಂದೇಶ್ವರ, ಗಣಪತಿ, ಬೀರೇದೇವರು, ಮೈಲಾರಲಿಂಗ, ಹನುಮಂತ (ಎರಡು) ಮುಂತಾದವುಗಳಿವೆ. ಕೇಶವ ದೇವರ ಗುಡಿಯ ಹತ್ತಿರ ವೀರಗಲ್ಲು ಶಾಸನವಿದ್ದು

ಮೂರಜಾವಿದೇವರು ಹುಲಿಗೆರೆಗೆ ಹೋಗುವಾಗ ಬಿಸಿಲಹಳ್ಳಿಯ ಹತ್ತಿರ ಮೇದರ ಪಾಂಡ್ಯನ ಮರಣವನ್ನು ದಾಖಲಿಸುತ್ತದೆ. ಊರಿನಲ್ಲಿ ರಾಘವೇಂದ್ರಸ್ವಾಮಿ ಮಠ, ಕಬ್ಬಿಣಕಂತಿಮಠ, ಪ್ರಸಾದಿಮಠ ಮತ್ತು ಪ್ರೇಮಾನಂದ ಮಠಗಳಿವೆ. ಇದಲ್ಲದೇ ಇತ್ತೀಚೆಗೆ ನಿರ್ಮಿಸಲಾಗಿರುವ ಕಣ್ಣಪ್ಪನ ಮತ್ತು ಲಕ್ಷ್ಮೀದೇವಿ ಗುಡಿಗಳಿವೆ. ರಟ್ಟಿಹಳ್ಳಿಯಲ್ಲಿ ನಾಲ್ಕು ಮಸೀದಿಗಳಿದ್ದು ಮುಖ್ಯವಾದುವೆಂದರೆ ಕಾರಂಜಿ ಮಸೀದಿ, ಮಹಮದೀಯ ಮಸೀದಿ ಮತ್ತು ಅಹಲೆಹದೀಸ್ ಮಸೀದಿ. ಇವಲ್ಲದೇ ಚಮನ್‌ಷಾವಲಿ ಮತ್ತು ಮಹಬೂಬ್‌ಸುಬಾನಿ ಪೀರ್‌ಗಳ ದರ್ಗಾಗಳೂ ಇವೆ.

**ರಾಜೂರು :** ರೋಣ ತಾಲೂಕಿನ (ಜನಸಂಖ್ಯೆ : 4,315) ಪ್ರಾಚೀನ ಶಾಸನಗಳಲ್ಲಿ ರಾಜುರು, ರಾಜೂರು ಹಾಗೂ ರಾಜವೂರು ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಈ ಊರು ರೋಣದಿಂದ ಪೂರ್ವಕ್ಕೆ 25 ಕಿಮೀ ದೂರದಲ್ಲಿ, ಗಜೇಂದ್ರಗಢದಿಂದ ಪಶ್ಚಿಮಕ್ಕೆ ಐದು ಕಿ.ಮೀ. ದೂರದಲ್ಲಿ, ರೋಣ-ಗಜೇಂದ್ರಗಢ ರಸ್ತೆಯಲ್ಲಿದೆ. ಹಿಂದೆ ಇದು ಕಿಸುಕಾಡು-70 ಕ್ಕೆ ಸೇರಿದ ಗ್ರಾಮವಾಗಿದ್ದು, ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಹನುಮಂತನಗುಡಿ ಮುಂದಿರುವ ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಜಗದೇಕಮಲ್ಲನ ಕಾಲದ 1033 ರ ಶಾಸನ ರಾಜೂರಲ್ಲಿ ಜೋಗಗೌಂಡನು ಜೋಗೇಶ್ವರ ದೇವರ ಪ್ರತಿಷ್ಠೆ ಮಾಡಿಸಿ, ಊರ ಐನೂರ್ವರನ್ನು ಕರೆಸಿ, ದೇವರಿಗೆ ಗವರೇಶ್ವರನೆಂದು ಹೆಸರಿಟ್ಟ ಸಂದರ್ಭದಲ್ಲಿ 60 ಒಕ್ಕಲು ಮುಖ್ಯವಾಗಿ ಜೋಗಗೌಡನೂ ಇತರರೂ ಅನೇಕ ರೀತಿಯ ದಾನ ಬಿಟ್ಟರೆಂದೂ ಹೇಳುತ್ತದೆ. ಈ ಶಾಸನ ಸಾಂದರ್ಭಿಕವಾಗಿ ಗ್ರಾಮೇಶ್ವರ, ಸೋಮನಾಥ ದೇವರು, ಕಲಿದೇವರು ಹಾಗೂ ಕತ್ತಲೇಶ್ವರ ಗುಡಿಗಳನ್ನು ಹೆಸರಿಸುವುದರ ಮೂಲಕ ರಾಜೂರಿನ ವಿವಿಧ ದೇವಾಲಯಗಳ ಪಟ್ಟಿಯನ್ನು ನೀಡುತ್ತವೆ. ಹನುಮಂತನ ಗುಡಿ ಮುಂದಿರುವ ಇಮ್ಮಡಿ ಜಗದೇಕಮಲ್ಲನ ಕಾಲದ 1144 ರ ಶಾಸನ ರಾಜವೂರ ಪನ್ನಾಯದ ಕೇಣಿಕಾರ ಹೆಗ್ಗಡೆ ಚಂದಪ್ಪಯ್ಯ ನಾಯಕನು ಅಲ್ಲಿನ ಸ್ವಯಂಭು ಮೂಲಸ್ಥಾನ ದೇವರಿಗೆ ದಾನ ಬಿಟ್ಟ ವಿಚಾರ ಹೇಳುತ್ತದೆ.

ಊರಿನ ಎಲ್ಲಾ ಗುಡಿಗಳು ಜೀರ್ಣೋದ್ಧಾರಗೊಂಡಿವೆ. ಊರ ಹೊರಗಿರುವ ಕಲ್ಮೇಶ್ವರ ಗುಡಿ ಪೂರ್ಣ ಶಿಥಿಲಗೊಂಡಿದ್ದು ಗರ್ಭಗೃಹ ಹಾಗೂ ನವರಂಗವಷ್ಟೆ ಉಳಿದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಹೊರಗಡೆ ನಂದಿಯಿದೆ. ಎತ್ತರವಾದ ವೇದಿಕೆಯ ಮೇಲಿರುವ ಈ ಗುಡಿಯ ಗರ್ಭಗೃಹದ ಹಿಂಬದಿ ಅಲ್ಪಸ್ವಲ್ಪ ಉಳಿದಿದ್ದು ಅಲಂಕಾರಿಕ ಸ್ತಂಭಗಳನ್ನು ಕಾಣಬಹುದಾಗಿದೆ. ಊರ ನಡುವೆ ಇರುವ ಹನುಮಂತನ ಗುಡಿ ಮುಂದೆ ಪ್ರಾಚ್ಯ ಅವಶೇಷಗಳು ಚದುರಿಗೊಂಡಿದ್ದು, ಶಾಸನಕಲ್ಲು, ವೀರಗಲ್ಲು, ಸಪ್ತಮಾತೃಕಾ ಪಟ್ಟಿಕೆ ಹಾಗೂ ಆದಿತ್ಯ ಪೀಠ ಉಲ್ಲೇಖಾರ್ಹವಾಗಿವೆ. ಇದರ ಬಳಿಯೇ ಇರುವ ಬಸವೇಶ್ವರ ಗುಡಿಯಲ್ಲಿ ಶಿವಲಿಂಗ ನಂದಿಗಳಿವೆ. ಕಲ್ಲಪ್ಪನ ಗುಡಿಯೂ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಊರಲ್ಲಿ ವೀರಭದ್ರ, ದುರ್ಗಾ ಹಾಗೂ ದ್ಯಾಮವ್ವನ ಗುಡಿಗಳಿವೆ. ಹನುಮಂತನ ಗುಡಿ ವಿಶಾಲವಾಗಿದ್ದು ಊರಿನ ಕೇಂದ್ರ ಬಿಂದುವಾಗಿದೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ರಾಣೆಬೆನ್ನೂರು :** ತಾಲೂಕು ಕೇಂದ್ರವಾದ ರಾಣೆಬೆನ್ನೂರು (ಜನಸಂಖ್ಯೆ : 67,442) ಧಾರವಾಡದಿಂದ ಆಗ್ನೇಯಕ್ಕೆ 128 ಕಿಮೀ ದೂರದಲ್ಲಿದ್ದು ಪೂಣೆ-ಬೆಂಗಳೂರು ರಸ್ತೆಯಲ್ಲಿ ಇದೆ. ಪ್ರಾಚೀನ ಶಾಸನಗಳಲ್ಲಿ ಬಿನವೂರು, ಬಿನ್ನವೂರು ಎಂದೇ ಉಲ್ಲೇಖಿತಗೊಂಡಿದ್ದರೂ, ರಾಣೆದಬೆನ್ನೂರು, ರಾಣೆಬೆನ್ನೂರು ಎಂಬ ಉಲ್ಲೇಖ ಕ್ರಮವಾಗಿ ಕ್ರಿ.ಶ. 17-18 ನೇ ಶತಮಾನಕ್ಕೆ ಸೇರಿದ ಬೆಳ್ಳೂರಿ ಹಾಗೂ ಚನ್ನಾಪುರ ಶಾಸನಗಳಲ್ಲಿ ಕಂಡುಬರುತ್ತದೆ. ಹಿಂದೆ ಇದು ಹನ್ನೆರಡು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು ಬಿನ್ನವೂರು-12 ಎಂದೇ ಪರಿಚಿತವಿದ್ದು, ರಟ್ಟಿಹಳ್ಳಿ-70 ಕ್ಕೆ ಸೇರಿದ್ದಂತೆ ತೋರುತ್ತದೆ. ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದ ಈ ಊರಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ ಕ್ರಿ.ಶ. 859 ರ ಶಾಸನ ಅತ್ತಿಗೇರಿಯ ಗೌಂಡಗಳ ಸಮ್ಮುಖದಲ್ಲಿ ನಾಗುಳರ ಪೊಲ್ಲಬ್ಬೆ ಮಾಡಿಸಿದ ನಾಗುಳ ಬಸದಿಗೆ ಭೂದಾನ ಮಾಡಿದ ಅಂಶವನ್ನು ತಿಳಿಸಿದರೆ, ಕ್ರಿ.ಶ. 1235 ರ ಮತ್ತೊಂದು ಶಾಸನ ಸರ್ವಾಧಿಕಾರಿ ಆಚರಸನು ಬಿಂನವೂರ ಮೂಲಸ್ಥಾನದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ. ಕ್ರಿ.ಶ. 1252 ರ ವೀರಗಲ್ಲು ಶಾಸನ ಮರಾಠಿ ಭಾಷೆಯಲ್ಲಿದ್ದು ಮಡಿದ ವೀರನ ಸ್ಮಾರಕವಾಗಿದ್ದರೆ, ಕ್ರಿ.ಶ. 15 ನೇ ಶತಮಾನದ ಶಾಸನವೊಂದು ರಟ್ಟಿಹಳ್ಳಿ ಸೀಮೆಯಲ್ಲಿ ಮದುವೆ ಸುಂಕ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 15 ಮತ್ತು 16 ನೇ ಶತಮಾನಕ್ಕೆ ಸೇರಿದ ಉಳಿದೆರಡು ಶಾಸನಗಳು ನಂದಿ ವಿಗ್ರಹ ಸ್ಥಾಪನೆ ಹಾಗೂ ನಾವಿದವರಿಗೆ ತೆರಿಗೆ ಮನ್ನಾ ಮಾಡಿದ ಅಂಶವನ್ನು ತಿಳಿಸುತ್ತವೆ. ಮೇಲೆ ಉಲ್ಲೇಖಿಸಿರುವ ಜೈನಬಸದಿ ಉಳಿದುಬಂದಿಲ್ಲ. ರಾಣೆಬೆನ್ನೂರಲ್ಲಿರುವ ದೇವಾಲಯಗಳಲ್ಲಿ ಹೆಸರಿಸಲೇಬೇಕಾದ ಗುಡಿ ಸಿದ್ದೇಶ್ವರ ಗುಡಿಯಾಗಿದ್ದು, ಹಾವೇರಿ ರಸ್ತೆಯಲ್ಲಿ ಎಡಬದಿಗೆ ವಿಶಾಲವಾದ ಪ್ರಾಕಾರದಿಂದ ಆವರಿಸಲ್ಪಟ್ಟಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪವನ್ನು

ಹೊಂದಿರುವ ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿಯಿದ್ದು ಇವುಗಳ ಬಾಗಿಲವಾಡದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ನವರಂಗದ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯವು. ಸಭಾಮಂಟಪದ ಎರಡು ದೇವಕೋಷ್ಠಗಳಲ್ಲಿ ಉಮೆ ಎಡಗೈಲಿ ಕನ್ನಡಿ ಹಿಡಿದು ಬಲಗೈಯಿಂದ ಹೆರಳು ತಿದ್ದಿಕೊಳ್ಳುತ್ತಿರುವ ಭಂಗಿ, ಹಾಗೂ ಗಣಪತಿಯ ಸುಂದರ ಶಿಲ್ಪಗಳಿವೆ. ಈ ಗುಡಿಯ ಗರ್ಭಗೃಹ, ಅಂತರಾಳದ ಹೊರಭಿತ್ತಿಯಲ್ಲಿ ವಿಷ್ಣು ದಶಾವತಾರ, ಗೋಪಾಲಕೃಷ್ಣ, ಕಾಳಿಂಗ ಮರ್ದನ ಕೃಷ್ಣ, ಹಾಗೂ ಮಿಥುನ ಶಿಲ್ಪಗಳಿವೆ. ಈ ಗುಡಿಯ ಶಿಖರ ಪಾಳೇಗಾರರ ಅಥವಾ ಮರಾಠರ ಕಾಲದ್ದಾಗಿದ್ದು ಹಲವಾರು ಕೆತ್ತನೆಯನ್ನು ಹೊಂದಿದೆ. ಈ ಗುಡಿಯ ಬಲಬದಿಯಲ್ಲಿ ಗವಿಯನ್ನೇ ಸೇರಿಸಿಕೊಂಡು ನಿರ್ಮಿಸಿರುವ ಕಲ್ಲೇಶ್ವರ ಗುಡಿಯಿದೆ. ಮೇಲಿನ ಶಾಸನೋಕ್ತ ಮೂಲಸ್ಥಾನ ಕಲಿದೇವ ದೇವಾಲಯ ಇದೇ ಆಗಿದ್ದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಕಲ್ಯಾಣದ ಚಾಳುಕ್ಯರ ಕಾಲದ ರಚನೆಯಾಗಿರಬಹುದಾದ ಇದರ ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿಯಿದ್ದು, ಇವುಗಳ ಬಾಗಿಲವಾಡ ಸರಳವಾಗಿದೆ. ಈ ಗುಡಿಯ ಅವರಣದಲ್ಲಿ ಸಪ್ತಮಾತೃಕಾ ಶಿಲ್ಪ ಮತ್ತು ವೀರಗಲ್ಲುಗಳಿವೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ಲಕ್ಷ್ಮೀನರಸಿಂಹ, ವೀರಭದ್ರ, ಬಸವಣ್ಣ, ದುರ್ಗಮ್ಮ ಮೈಲಾರ ಹಾಗೂ ಇನ್ನಿತರ ಗುಡಿಗಳಿವೆ. ರಾಣೆಬೆನ್ನೂರಿನ ಕೋಟೆ ಬಡಾವಣೆಯಲ್ಲಿರುವ ಉತ್ತರಾಧಿಮಠದಲ್ಲಿ ಸತ್ಯಭೀಜ್ಞತೀರ್ಥರ ಮೂಲ ಬೃಂದಾವನವಿದೆ. ಇದೇ ಮಠದ ಮತ್ತೊಬ್ಬ ಪ್ರಸಿದ್ಧ ಯತಿಗಳಾದ ವಿದ್ಯಾಧೀಶ ತೀರ್ಥರ (1541-1583) ಶಿಲಾಪ್ರತಿಮೆಯಿದ್ದು ಇದು ಏಕೈಕ ಉದಾಹರಣೆಯಾಗಿದೆ. ವಿದ್ಯಾಧೀಶರ ಮೂಲ ಬೃಂದಾವನವು ಅಯೋಧ್ಯೆ (ಉತ್ತರ ಪ್ರದೇಶ) ಬಳಿಯಿರುವ ಏಕಚಕ್ರಾನಗರದಲ್ಲಿದೆ ಎಂದು ಪ್ರತೀತಿಯಿದ್ದರೂ ಅದು, ಇಲ್ಲಿಯವರೆಗೆ ಲಭ್ಯವಿಲ್ಲವಾಗಿದೆ. ಊರಲ್ಲಿ ಜುಮ್ಮಾ ಮಸೀದಿ, ಕೋಟೆ ಮಸೀದಿ ಮತ್ತು ಪೀರ್‌ಜಾದೆ ಮಸೀದಿಗಳಿದ್ದು ಇವುಗಳಲ್ಲಿ ಜುಮ್ಮಾಮಸೀದಿ ಸುಮಾರು 16ನೇ ಶತಮಾನದ್ದಾಗಿದ್ದು ಆದಿಲ್ ಶಾಹಿ ದಂಡನಾಯಕ ಅಂಕುಶ್‌ಖಾನನ ಕಾಲದ್ದೆಂದು ಅಭಿಪ್ರಾಯವಿದೆ. ಊರಲ್ಲಿ ರಬುಕ್ ಬಲಿಕ್ ಸೌದಿಕ್, ಖಾಲಿಕ್ ಮಹ್ಮದ್, ಯಾಕುದ್ ಖಾಜಾ ಸಾದಿಕ್‌ಮತ್ತು ಖಾಜಾ ರಹಮುದ್ದಿನ್ ಈದ್ ಹಜರತ್ ಜಮಾಲ್‌ಷಾ ವಲಿ ದರ್ಗಾಗಳಿದ್ದು ಇವುಗಳಲ್ಲಿ ಕೊನೆಯ ಸಂತನ ದರ್ಗಾದಲ್ಲಿ ಮೊಹರಂ ತಿಂಗಳಲ್ಲಿ ಉರುಸು ಜರುಗುತ್ತದೆ. ಈ ಸಂತ ಅಜ್ಮೀರದವನೆಂದೂ, ಮೊಣಕೈಗಳಿಗೆ ಗೆಜ್ಜೆ ತೊಟ್ಟು ಒಂದೇ ಸರಪಳಿಯಲ್ಲಿ ಇಲಿ, ಬೆಕ್ಕು, ನಾಯಿ, ಜಿಂಕೆ, ಹಾವು ಮತ್ತು ಮುಂಗುಸಿಗಳನ್ನು ಹಿಡಿದುಕೊಂಡು ಅಲೆದಾಡುತ್ತಿದ್ದನೆಂಬ ಅಂಶವನ್ನು ಹಿಂದಿನ ಗೆಜೆಟಿಯರ್ ದಾಖಲಿಸಿದೆ. ಇಲ್ಲಿ ಪ್ರಾಟೆಸ್ಟಂಟ್‌ರ ಎರಡು ಚರ್ಚುಗಳಿವೆ. ಇದು ಹತ್ತಿ ವ್ಯಾಪಾರದ ದೊಡ್ಡ ಕೇಂದ್ರವಾಗಿದ್ದು ಜಿಲ್ಲೆಯಲ್ಲಿ ಗದಗಿನ ನಂತರ ದೊಡ್ಡ ನಗರವಾಗಿದೆ.

**ರೋಣ** : ತಾಲೂಕು ಕೇಂದ್ರವಾದ ರೋಣವು (ಜನಸಂಖ್ಯೆ 19,116) ಪ್ರಾಚೀನ ಶಾಸನಗಳಲ್ಲೂ 'ರೋಣ' ಎಂದೇ ಉಲ್ಲೇಖಿತಗೊಂಡಿದ್ದು, ಧಾರವಾಡದಿಂದ ಈಶಾನ್ಯಕ್ಕೆ ಸುಮಾರು 85 ಕಿಮೀ ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಪುಲಿಗೆರೆ-300 ಕ್ಕೆ ಸೇರಿದ್ದ ಇದು 104 ಮಹಾಜನರನ್ನು ಒಳಗೊಂಡಿದ್ದ ಒಂದು ಅಗ್ರಹಾರವಾಗಿತ್ತು. ಬಾದಾಮಿಯ ಅರೇರ್ ಓಣಿ ಬಳಿಯಿರುವ ಬಂಡೆಗಲ್ಲಿನ ಮೇಲೆ ಸುಮಾರು ಕ್ರಿ.ಶ. 7-8 ನೇ ಶತಮಾನದ 'ಶ್ರೀರೋಣದ ಸಿವಾಲಯ' ಎಂಬ ಏಕಸಾಲಿನ ಶಾಸನವಿದೆ. ಈ ಊರಿನ ಪ್ರಾಚೀನ ಹೆಸರು ದ್ರೋಣಾಪುರವೆಂದೂ, ದ್ರೋಣರು ಇಲ್ಲೇ ಗುರುಕುಲ ನಡೆಸುತ್ತಿದ್ದರೆಂದೂ, ದ್ರೋಣಾಚಾರ್ಯ ಗುಡಿಯಲ್ಲಿರುವ ಮೂರ್ತಿಯು ದ್ರೋಣರದೆಂದೂ ಅದರಿಂದ ಈ ಊರಿಗೆ ರೋಣ ಎಂಬ ಹೆಸರು ಬಂದಿದೆಯೆಂಬ ಐತಿಹ್ಯವಿದೆ. ಎಂಟನೇ ಶತಮಾನದಿಂದ 16 ನೇ ಶತಮಾನದವರೆಗಿನ ಎಲ್ಲಾ ಶಾಸನಗಳಲ್ಲೂ, ಸಂಸ್ಕೃತಭಾಷೆಯಲ್ಲಿರಲಿ, ಕನ್ನಡ ಭಾಷೆಯಲ್ಲಿರಲಿ, 'ರೋಣ', 'ಮಹಾ ಅಗ್ರಹಾರ ರೋಣ', ಎಂದೇ ಉಲ್ಲೇಖಿತಗೊಂಡಿರುವುದರಿಂದ ರೋಣದ ಪ್ರಾಚೀನ ಹೆಸರು ದ್ರೋಣಪುರ ಎಂಬುದು ಆಧಾರರಹಿತವಾಗಿದೆ. ಈ ಊರಿಂದ ಈವರೆಗೆ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಕಲಚೂರಿಗಳ ಕಾಲಕ್ಕೆ ಸೇರಿದ 17 ಶಾಸನಗಳು ವರದಿಯಾಗಿವೆ. ಇದರೊಂದಿಗೆ ಊರ ನಡುವೆ ಇರುವ ಜೈನ ಬಸದಿಯ ತೀರ್ಥಂಕರರ ಪಾದಪೀಠದ ಮೇಲಿರುವ ಶಾಸನವಿನ್ನೂ ಪ್ರಕಟವಾದಂತಿಲ್ಲವೆಂದು ತೋರುತ್ತದೆ. ಈ ಶಾಸನಗಳಲ್ಲಿ ಬಸವಣ್ಣನ ಗುಡಿ ಮುಂದಿರುವ ರಾಷ್ಟ್ರಕೂಟ ಒಂದನೆಯ ಅಮೋಘವರ್ಷನ ಕ್ರಿ.ಶ. 874ರ ಶಾಸನ, ಬಲ್ಲವರಸನು ರೋಣದ ಮಹಾಜನರಿಗೆ ತುಪ್ಪದ ಸುಂಕ ದಾನ ಬಿಟ್ಟ ವಿಷಯ ತಿಳಿಸಿದರೆ, ಅದೇ ಶತಮಾನದ ಮತ್ತೊಂದು ಶಾಸನ ತುರಂಗಬೆಡಂಗನು ಮಹಾಜನರಿಗೆ ಬನಿಯ ಬಿಟ್ಟ ಬಗ್ಗೆ ತಿಳಿಸುತ್ತದೆ. ಮೇಲಾಗಿ ಇವನಿಗೆ 'ಕಿಷ್ಕಿಂದಪುರವರೇಶ್ವರ' ಎಂಬ ಬಿರುದಿದ್ದ ಅಂಶವನ್ನೂ ತಿಳಿಸುತ್ತದೆ. ತಾಲೂಕು ಕಛೇರಿ ಮುಂದಿರುವ ಮುಮ್ಮಡಿ ಕೃಷ್ಣನ ಕ್ರಿ.ಶ. 942 ರ ಶಾಸನ, ಕೃಷ್ಣನ ಭಾವ ಪೆರ್ಮಾಡಿ ಬೂತಾರ್ಯ (ಇಮ್ಮಡಿ ಬೂತುಗ)ನು ಗಂಗವಾಡಿ, ಬೆಳ್ವೊಲ ಹಾಗೂ ಪುಲಿಗೆರೆ ನಾಡುಗಳನ್ನಾಳುವಾಗ, ಪಂಪಯ್ಯನು ಬೂತುಗನನ್ನು ಎದುರಿಸಿ ಹೋರಾಡುತ್ತ ಮಡಿದ ವಿಷಯವನ್ನು ತಿಳಿಸುತ್ತದೆ. ಈ ವೀರಗಲ್ಲು ಒಂದು ವಿಶಿಷ್ಟ ಹಾಗೂ ಅಪರೂಪದ ಕೆತ್ತನೆ ಎಂದೇ ಹೇಳಬೇಕು. ಕಲ್ಲೇಶ್ವರ ಗುಡಿ ಮುಂದಿರುವ ಕಲ್ಯಾಣದ ಚಾಳುಕ್ಯ ಅರಸ

ಒಂದನೆಯ ಜಗದೇಕಮಲ್ಲನ ಕ್ರಿ.ಶ. 1022ರ ಶಾಸನ, ಬ್ರಾಹ್ಮಣ ಕುಲದ ಆಯ್ತವರ್ಮನ ಕಿರಿಯ ಮಗ ಸಂಕಿಮಯ್ಯನು ರೋಣದಲ್ಲಿ ಕಟ್ಟಿಸಿದ ಮೂಲಸ್ಥಾನ ದೇವರಿಗೆ ಅವನ ಅಣ್ಣನಾದ ಮಾಚಿಮಯ್ಯನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ದ್ರೋಣಾಚಾರ್ಯರ ಗುಡಿ ಬಳಿ ಇರುವ ಕ್ರಿ.ಶ. 1111ರ ಶಾಸನ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ಹೈಂಗ ಕುಲದ ನಾಗವಿಷ್ಣು ಕಪ್ಪೆಯಗೇರಿಯ 51ಮಹಾಜನರಿಂದ ಅನುಮತಿ ಪಡೆದು ಕಪ್ಪೆಯಗೇರಿಯಲ್ಲಿ ಸಭಾಮಂಟಪ ಹಾಗೂ ಸತ್ರಗಳನ್ನು ನಿರ್ಮಿಸಿ, ಹಲವು ದಾನ ನೀಡಿದ್ದನ್ನು ತಿಳಿಸುತ್ತದೆ. ಸೋಮೇಶ್ವರ ದೇವಾಲಯದ ಬಲಗಡೆಯ ಬದಿಯಿರುವ ಕಲಚೂರಿ ಸಂಕಮನ ಕ್ರಿ.ಶ. 1179ರ ಶಾಸನ ಕಿಸುಕಾಡು-70 ಅನ್ನು ಆಳುತ್ತಿದ್ದ ಸಿಂಧವಂಶದ ವಿಕ್ರಮಾದಿತ್ಯ ಸಾಮಂತನು ರೋಣದಲ್ಲಿದ್ದ ಚಾಮೇಶ್ವರ ಹಾಗೂ ಮಲ್ಲೇಶ್ವರ ದೇವರುಗಳಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಈ ಶಾಸನದಿಂದ ಇವು ಕಾಳಾಮುಖ ದೇವಾಲಯಗಳಾಗಿದ್ದವೆಂಬ ಅಂಶ ಸ್ಪಷ್ಟವಾಗುತ್ತದೆ. ಕಲ್ಮೇಶ್ವರ ದೇವಾಲಯದ ಮುಂದಿರುವ ಸುಮಾರು ಕ್ರಿ.ಶ. 12ನೇಯ ಶತಮಾನದ ಹಾಳಾಗಿರುವ ಶಾಸನ ಬ್ರಾಹ್ಮಣರ ಆಹಾರಕ್ಕೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಹನುಮಂತನಗುಡಿ ಎದುರಿಗಿರುವ ಸುಮಾರು ಕ್ರಿ.ಶ. 16ನೇ ಶತಮಾನದ ಶಾಸನ ಕುಷ್ಟಿಗೆಯ ಗುಜಲ ಇಮ್ಮಡಿ ಮನ್ನನಾಯಕ ಒಡೆಯರ ಕಾರ್ಯಕರ್ತ ಬಾದಾಮಿ ಸೀಮೆಯ ಪಾರುಪತ್ಯಗಾರ ಮಲ್ಲರಸನು ಹನುಮಂತ ದೇವರ ಸೇವೆಗೆಂದು ಪೂರ್ವದ ಮಾನ್ಯವನ್ನು ಪುನರ್ಭರಣ ಮಾಡಿ ನಾರಸಿಂಹದಾಸರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕೆಲವು ವರ್ಷಗಳ ಹಿಂದೆ ಗಮನಿಸಿರುವ ಜೈನ ಬಸದಿಯಲ್ಲಿರುವ ಜೈನ ತೀರ್ಥಂಕರನ ಪಾದಪೀಠದ ಶಾಸನವು ಸುಮಾರು ಕ್ರಿ.ಶ. 12ನೇ ಶತಮಾನದಲ್ಲಿದ್ದ ಜೈನ ಬಸದಿಯ ಕಾಲವನ್ನು ನಿಗದಿಪಡಿಸಲು ನೆರವಾಗುತ್ತದೆ. ಮೇಲಿನ ಶಾಸನೋಕ್ತ ದೇವಾಲಯಗಳನ್ನು ನೋಡಿದಾಗ, ರೋಣ ಹಿಂದೆ ಶೈವ, ವೈಷ್ಣವ, ಜೈನ ಧರ್ಮಿಯರಿಂದ ಕೂಡಿದ ಧರ್ಮ ಸಮನ್ವಯತೆಯ ಸಮಾಜವನ್ನು ಹೊಂದಿತ್ತೆಂದು ಅಭಿಪ್ರಾಯಪಡಬಹುದಾಗಿದೆ. ರೋಣದಲ್ಲಿ ಪ್ರಾಚೀನ ಕಾಲದ ಕಲ್ಮೇಶ್ವರ, ಮಲ್ಲಿನಾಥ ಲೋಕೇಶ್ವರ, ರಾಮೇಶ್ವರ, ಸೋಮೇಶ್ವರ, ಬಸವಣ್ಣ, ಈಶ್ವರ, ಅನಂತಶಯನ ಹಾಗೂ ಪಾರ್ಶ್ವನಾಥ ಬಸದಿಗಳಿವೆ; ಸುಂದರವಾದ ಗೌಡರ ಬಾವಿ ಹಾಗೂ ಸೆಟ್ಟರ ಬಾವಿಗಳಿವೆ. ಆಕರ್ಷಕವಾದ, ವಿಶಿಷ್ಟವಾದ, ವೀರಗಲ್ಲುಗಳಿವೆ. ಆದರೂ ರೋಣ ಇತರ ಚಾರಿತ್ರಿಕ ಸ್ಥಳಗಳಂತೆ ಪ್ರವಾಸಿಗರ ಕಣ್ಣು ಸೆಳೆಯದಿರುವುದು ವಿಷಾದನೀಯ.

ಗೌಡರ ಓಣಿಯಲ್ಲಿ ಮಲ್ಲಿನಾಥ ಹಾಗೂ ಲೋಕನಾಥ (ಲೋಕೇಶ್ವರ) ಗುಡಿಗಳಿವೆ. ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿರುವ ಈ ಗುಡಿ (ಮಲ್ಲಿನಾಥ) ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡ ಆಕರ್ಷಕವಾಗಿದೆ. ಅಂತರಾಳದಲ್ಲಿ ತ್ರಿಮೂರ್ತಿ ಕೆತ್ತನೆಯಿರುವ ಮಕರತೋರಣವಿದೆ. ನವರಂಗದಲ್ಲಿ ಗರುಡಪೀಠ, ಸಪ್ತಮಾತೃಕಾ ಪೀಠ, ಸಪ್ತಮಾತೃಕಾ ಪಟ್ಟಿಕೆ, ಗಣೇಶ ಹಾಗೂ ವೀರಭದ್ರನ ಶಿಲ್ಪಗಳಿವೆ. ಇದರಿಂದ ಸ್ವಲ್ಪ ದೂರದಲ್ಲಿರುವ ಲೋಕನಾಥ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ಇದರ ಬಾಗಿಲವಾಡಗಳೂ ಸುಂದರವಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗ ನವರಂಗದಲ್ಲಿ ಸಪ್ತಮಾತೃಕಾ ಪಟ್ಟಿಕೆಗಳಿವೆ. ನವರಂಗದ ಕಂಬಗಳು ಕಲ್ಯಾಣದ ಚಾಲುಕ್ಯರ ಶೈಲಿಯವಾಗಿದ್ದು ಆಕರ್ಷಕವಾಗಿವೆ. ಈ ಎರಡೂ ಗುಡಿಗಳ ಹೊರಭಿತ್ತಿಯನ್ನು ಅಲಂಕಾರಿಕ ಸ್ತಂಭಗಳಿಂದ ಅಲಂಕರಿಸಲಾಗಿದೆ. ಗಿರಡ್ಡಿಯವರ ಓಣಿಯಲ್ಲಿರುವ ಈಶ್ವರ ಗುಡಿಯೂ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ರಚನೆಯಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಇಲ್ಲಿ ಸಪ್ತಮಾತೃಕಾ ಪಟ್ಟಿಕೆ ಇದೆ. ದ್ಯಾಮವ್ವನ ಗುಡಿಯಲ್ಲಿ ಉಗ್ರನರಸಿಂಹನ ಮೂರ್ತಿಯಿದೆ. ಇಲ್ಲಿ ಮಹಿಷನನ್ನು ವರ್ಧಿಸುತ್ತಿರುವ ದುರ್ಗಿಯ ಶಿಲ್ಪವಿದೆ.

ಕಂಬಿಯವರ ಓಣಿಯಲ್ಲಿರುವ ಬಸವಣ್ಣನ ಗುಡಿಯನ್ನು ದ್ರೋಣಾಚಾರ್ಯರ ಗುಡಿಯೆಂದೇ ಸ್ಥಳೀಕರು ಕರೆಯುತ್ತಾರೆ. ಪೂರ್ಣ ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಸಭಾಮಂಟಪದ ಗೂಡೊಂದರಲ್ಲಿ ಪದ್ಮಾಸೀನ ದ್ವಿಬಾಹು ಮೂರ್ತಿಯಿದ್ದು, ಭಿನ್ನವಾಗಿದೆ. ತಲೆಯಲ್ಲಿ ಕಿರೀಟ, ತೋಳಲ್ಲಿ ತೋಳ್ಬಂದಿ, ಕೊರಳಲ್ಲಿ ಕಂಠಿಹಾರ, ಜನಿವಾರ ಹಾಗೂ ನೀಳ ಕೇಶವುಳ್ಳ ಈ ಮೂರ್ತಿಯನ್ನು ಸ್ಥಳೀಕರು ದ್ರೋಣಾಚಾರ್ಯರ ಶಿಲ್ಪವೆಂದೇ ಗುರುತಿಸುತ್ತಾರೆ.

ಊರ ಕೆರೆಯ ಹಿಂಬದಿಯಲ್ಲಿರುವ ರಾಮೇಶ್ವರ, ಸೋಮೇಶ್ವರ ದೇವಾಲಯಗಳೂ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಸರಳ ರಚನೆಗಳಾಗಿದ್ದು ರಾಮೇಶ್ವರ ಪೂರ್ವಾಭಿಮುಖವಾಗಿದ್ದರೆ, ಸೋಮೇಶ್ವರ ಉತ್ತರ ಮುಖವಾಗಿದೆ. ಈ ಗುಡಿಗಳಿಗೆಂದೇ ಒಂದು ಬಾವಿಯಿದ್ದು, ನೀರೆತ್ತಲು ಎರಡು ಬದಿಯಿಂದಲೂ ಮೆಟ್ಟಿಲುಗಳಿವೆ. ಅಲ್ಲೇ ಇರುವ ಶಾಸನ (1179) ಈ ಗುಡಿಗಳನ್ನು ಚಾಮೇಶ್ವರ ಹಾಗೂ ಮಲ್ಲೇಶ್ವರಗಳೆಂದು ಕರೆದಿದೆ.

ಗುಡಿಯವರ ಓಣಿಯಲ್ಲಿ ಅನಂತಶಯನನ ಗುಡಿಯಿದೆ. ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿರುವ ಈ ಗುಡಿಯಲ್ಲಿ ಅನಂತಶಯನನ ಸುಂದರ ಶಿಲ್ಪವಿದೆ. ಈ ಗುಡಿಯ ಪ್ರವೇಶದ್ವಾರದಲ್ಲಿ ಗಜಲಕ್ಷ್ಮಿಯಿದೆ. ಇದೂ ಕೂಡ ಸುಮಾರು ಕ್ರಿ.ಶ. 12 ನೇ ಶತಮಾನದ ರಚನೆಯಾಗಿದ್ದು ಗರ್ಭಗೃಹವನ್ನು ದ್ರಾವಿಡ ಶಿಖರ ಅಲಂಕರಿಸಿದೆ. ಇದೇ ಓಣಿಯಲ್ಲಿರುವ ಈಶ್ವರ ಗುಡಿಯ ಗರ್ಭಗೃಹ ಹಾಗೂ ನಂದಿಮಂಟಪವಷ್ಟೆ ಉಳಿದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡವು ತ್ರಿಶಾಖೆಯನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದೂ ಕೂಡ ಕಲ್ಯಾಣದ ಚಾಲುಕ್ಯರ ಕಾಲದ ನಿರ್ಮಾಣವಾಗಿದೆ. ಈ ಎರಡೂ ಗುಡಿಗಳ ಹೊರಭಿತ್ತಿಯಲ್ಲಿ ವಿವಿಧ ಮಾದರಿಯ ಕಿರುಶಿಖರಗಳು, ಅಲಂಕಾರಿಕ ಸ್ತಂಭಗಳನ್ನು ನೋಡಬಹುದಾಗಿದೆ.

ಬೇಳಿಯವರ ಓಣಿಯಲ್ಲಿರುವ ಪಾರ್ಶ್ವನಾಥ ಬಸದಿ ಕಲ್ಯಾಣದ ಚಾಲುಕ್ಯರ ಕಾಲದ ರಚನೆಯಾಗಿದ್ದು, ಇಂದು ಗರ್ಭಗೃಹ ಹಾಗೂ ನವರಂಗವಷ್ಟೆ ಉಳಿದಿದೆ. ಚಾಳುಕ್ಯ ಶೈಲಿಯ ಬಾಗಿಲವಾಡಗಳು ಹಾಗೂ ಸ್ತಂಭಗಳನ್ನಿಲ್ಲಿ ನೋಡಬಹುದಾಗಿದೆ. ಗರ್ಭಗೃಹದಲ್ಲಿ ಸುಂದರವಾದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದ್ದು ಅದರ ಪಾದಪೀಠದ ಮೇಲೆ 'ಮೂಲ ಸಂಘದ ದೇವಗಣದ' ಎಂದು ಆರಂಭವಾಗುವ ಕಿರುಶಾಸನವಿದೆ. ಸುಮಾರು ಕ್ರಿ.ಶ. 12 ನೇ ಶತಮಾನಕ್ಕೆ ಸೇರಿದ ಈ ಶಾಸನದಿಂದ ಬಸದಿಯ ಕಾಲವನ್ನೂ ಗುರುತಿಸಬಹುದಾಗಿದೆ. ಈ ಗುಡಿಯ ಹಿಂಬದಿಯಲ್ಲಿ ಒಂದು ಬಾವಿಯಿದೆ. ಹಿಂದೆ ಹಿರಿದಾಗಿದ್ದ ಈ ಬಸದಿ ಇಂದು ಅತಿಕ್ರಮಣದಿಂದಾಗಿ ಸಂಕುಚಿತಗೊಂಡಿದೆ. ಮುನಿಸಿಪಾಲಿಟಿ ಬಳಿಯಿರುವ ವೀರಭದ್ರಗುಡಿ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ವಿಶಾಲವಾಗಿದ್ದು, ಆಕರ್ಷಕವಾಗಿದೆ. ಈ ಗುಡಿಯ ಹಿಂಬದಿಯಲ್ಲಿ ಪ್ರಾಚೀನ ಅವಶೇಷಗಳಿವೆ.

ಊರ ನಡುವೆ ಹಕ್ಕರಿಯವರ ಓಣಿಯಲ್ಲಿರುವ ಅಜ್ಜಪ್ಪನ ಬಾವಿ, ಮಲ್ಲಾಪುರ ರಸ್ತೆಯಲ್ಲಿರುವ ಗೌಡರ ಬಾವಿ ಹಾಗೂ ಜಕ್ಕಲಿ ರಸ್ತೆಯಲ್ಲಿರುವ ಸೆಟ್ಟರ ಬಾವಿ ಉಲ್ಲೇಖನಾರ್ಹವಾಗಿವೆ. ಕೊನೆಯ ಎರಡರಲ್ಲೂ ಕಿರುಪ್ರಮಾಣದ ಈಶ್ವರ ಗುಡಿ, ಬಸವಣ್ಣ, ಗಣಪತಿ ಕೆತ್ತನೆಗಳಿದ್ದು ಇಳಿಯಲು ಸೋಪಾನಗಳಿದ್ದು ಆಕರ್ಷಕವಾಗಿವೆ. ಸೆಟ್ಟರ ಬಾವಿಯಲ್ಲಿರುವ ಶಾಸನದಿಂದ ಇದು ಕ್ರಿ.ಶ. 12 ನೇ ಶತಮಾನದಷ್ಟು ಪ್ರಾಚೀನವಾದುದೆಂದು ಗೊತ್ತಾಗುತ್ತದೆ. ಸೆಟ್ಟರ ಬಾವಿಯಲ್ಲಿ ಹಲವಾರು ಉಬ್ಬು ಕೆತ್ತನೆಗಳಿವೆ. ಉಗ್ರನರಸಿಂಹ, ಗಣಪತಿ, ನಂದಿ, ಮಹಿಷಮರ್ದಿನಿ ಶಿಲ್ಪಗಳೊಂದಿಗೆ ಒಂದೆರಡು ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ. ಇವುಗಳೊಂದಿಗೆ ಊರಲ್ಲಿ ಮೈಲಾರ, ಹನುಮಂತ, ಬೀರದೇವರು, ವಿಠಲ, ದ್ಯಾಮವ್ವ, ದುರ್ಗವ್ವ, ಹಾಗೂ ಕಲ್ಲೇಶ್ವರ ದೇವಾಲಯಗಳಿವೆ. ವಿಶಾಲವಾದ ವಿರಕ್ತಮಠವಿದ್ದು ಇದರ ಬಾಗಿಲಿಗೆ ಗುಲಗಂಜಿಯಿಂದ ಅಲಂಕರಿಸುತ್ತಿದ್ದರಿಂದ, ಇದಕ್ಕೆ ಗುಲಗಂಜಿ ಮಠ ಎಂದು ಹೆಸರಾಯಿತೆಂಬ ಅಭಿಪ್ರಾಯವಿದ್ದು ಇಲ್ಲಿ ಸಂಸ್ಕೃತ ಪಾಠಶಾಲೆಯೂ ಇದೆ. ಇದರ ಶಾಖಾಮಠಗಳು ಸಾಕಷ್ಟು ಕಡೆಯಲ್ಲಿವೆ. ಅದರಂತೆ ಹಿರೇಮಠ, ಬೂದಿಸ್ವಾಮಿ, ಶಾಂತಸ್ವಾಮಿ, ಸಿದ್ಧಾರೂಢ, ಹಾಗೂ ಶಿವಾನಂದ ಮಠಗಳಿವೆ. ಊರಲ್ಲಿ ನಾಲ್ಕು ಮಸೀದಿ ಹಾಗೂ ಹಲವು ದರ್ಗಾಗಳು ಕೂಡ ಇವೆ.

**ಲಕ್ಕುಂಡಿ** : ಗದಗ ತಾಲೂಕಿನ ಲಕ್ಕುಂಡಿಯು (ಜನಸಂಖ್ಯೆ : 9,936) ಪ್ರಾಚೀನ ಕಾಲದ ಲೊಕ್ಕಿಗುಂಡಿ (ಗದುಗಿನಿಂದ 11 ಕಿಮೀ)ಯಾಗಿದ್ದು ಕರ್ನಾಟಕದಲ್ಲೆ ಅತ್ಯಂತ ಗಣ್ಯ ಐತಿಹಾಸಿಕ ಕೇಂದ್ರಗಳಲ್ಲಿ ಒಂದಾಗಿದೆ. ಸಮೃದ್ಧವಾದ ಪ್ರಾಚ್ಯ ಅವಶೇಷಗಳು ಲಭ್ಯವಿರುವ ಈ ಪ್ರದೇಶವು ಒಂದು ಅತ್ಯುತ್ತಮ ಚಾಳುಕ್ಯ ವಾಸ್ತುಕಲಾ ಕೇಂದ್ರವಾಗಿ ಮೂಲತಃ ಜೈನಕ್ಷೇತ್ರವೂ ಆಗಿ ಆ ಕಾಲದಲ್ಲಿ ಜನಪ್ರಿಯತೆ ಗಳಿಸಿದ್ದಿತು. ಈಗ ಜೈನರ ಕುಟುಂಬಗಳು ಲಕ್ಕುಂಡಿಯಲ್ಲಿ ಕಂಡುಬರುವುದಿಲ್ಲ. ಪೌರಾಣಿಕವಾಗಿ ಶ್ರೀರಾಮನು ಲಕ್ಕುಂಡಿಯನ್ನು ಅಗ್ರಹಾರವನ್ನಾಗಿ ಕೊಟ್ಟಿದ್ದನೆಂಬ ನಂಬಿಕೆಯಿಂದ ಈ ಊರಿನ ಶಾಸನಗಳಲ್ಲಿ 'ಶ್ರೀರಾಮ ದತ್ತಿ' ಎಂದು ಪದೇ ಪದೇ ಕರೆಯಲಾಗಿದೆ. ಲಕ್ಕುಂಡಿಯ ಪ್ರಾಚೀನ ಹೆಸರು 'ಲೋಕ್ಕಿಗುಂಡಿ' ಎಂದು ಶಾಸನಗಳು ಈ ಹೆಸರು ಉಲ್ಲೇಖಿಸಿವೆ. 'ಲೊಕ್ಕಿ' ಎಂದರೆ ಒಂದು ರೀತಿಯ ಸಸ್ಯ ಹಾಗೂ ಗುಂಡಿ ಎಂದರೆ ತಗ್ಗಾದ ಪ್ರದೇಶವೆಂದು ಎ.ಎಂ. ಅಣ್ಣಿಗೇರಿಯವರು ಅಭಿಪ್ರಾಯ ಪಡುತ್ತಾರೆ. ಲೊಕ್ಕಿಯು ಪದ್ಮಾವತಿಯ ಪ್ರಿಯ ವೃಕ್ಷವೂ ಆಗಿದ್ದು ಆ ಗಿಡದಿಂದಲೂ ಈ ಹೆಸರು ಬಂದಿರಬಹುದು. ಇದೇ ಊರಿನಲ್ಲಿ ದೊರೆತ ಶಾಸನದಲ್ಲಿ ಲಕ್ಕುಂಡಿಯ ಸೌಂದರ್ಯದ ವರ್ಣನೆ ಇದೆ. ಇದರ ಪ್ರಕಾರ ದೇವಲೋಕದ ಅಮರಾವತಿ ಹೆಚ್ಚೋ ನಮ್ಮ ಲೊಕ್ಕಿಗುಂಡಿ ಹೆಚ್ಚೋ ಎಂದು ತೂಗಿ ನೋಡಲಾಯಿತಂತೆ; ಹಗುರವಾದ ಅಮರಾವತಿ ಮೇಲೆ ಆಕಾಶಕ್ಕೆ ಹೋಯಿತು. ಹಾಗೂ ಅನೇಕ ಮಹತ್ತರವಾದ ಜನ ಮಹಾಜನಗಳಿಂದ ಶಿಲ್ಪಕಲಾ ವೈಭವದಿಂದ ಗುಣ ವಿದ್ಯೆಗಳಿಂದ, ಪುಣ್ಯ ಭಾಗ್ಯಗಳಿಂದ ಭಾರವಾದ ಲಕ್ಕುಂಡಿ ಭೂಮಿಯಲ್ಲಿ ನಿಂತಿತೆಂದು ಶಾಸನಕವಿ ಲಕ್ಕುಂಡಿಯ ಹಿರಿಮೆಯನ್ನು ವರ್ಣಿಸುತ್ತಾನೆ. ಕಲ್ಯಾಣದ ಚಾಳುಕ್ಯರ ಆಡಳಿತಾವಧಿಯಲ್ಲಿ ಲಕ್ಕುಂಡಿಯು ಭವ್ಯವಾಗಿ ಮೆರೆದ ನಗರವಾಗಿತ್ತು. ಹೊಯ್ಸಳ ಎರಡನೇ ಬಲ್ಲಾಳನ ಕಾಲದಲ್ಲಿ, ಈ ಪ್ರದೇಶವು ಆತನ ಉಪ

ರಾಜಧಾನಿಯಾಗಿತ್ತು. ದೇವಗಿರಿ (ದೌಲತಾಬಾದ್)ಯ ಯಾದವ ಅಥವಾ ಸೇಉಣರಿಗೂ ಹಾಗೂ ಹೊಯ್ಸಳರಿಗೂ ಬೆಳವೊಲ-300 ರ ಮೇಲಿನ ಸ್ವಾಮ್ಯಕ್ಕಾಗಿ ನಡೆದ ಸೆಣಸಾಟದಲ್ಲಿ ಲಕ್ಕುಂಡಿಯು ಹೊಯ್ಸಳ ಬಲ್ಲಾಳನ ಸೈನ್ಯದ ಪ್ರಮುಖ ನೆಲೆಯಾಗಿತ್ತು. ಲಕ್ಕುಂಡಿಯ ಇತಿಹಾಸದೊಡನೆ ಹಾಸುಹೊಕ್ಕಾಗಿ ನಿಲ್ಲುವ ಮಹಾವ್ಯಕ್ತಿ ಎಂದರೆ ಅತ್ತಿಮಬ್ಬೆ, ಅವಳು ಪರಮ ಜಿನಭಕ್ತೆ. ಆಕೆಯ ಗಂಡ ವಾಜಿಕುಲದ ನಾಗದೇವನೆಂಬ ಅಧಿಕಾರಿ. ದಾನಚಿಂತಾಮಣಿ ಅತ್ತಿಮಬ್ಬೆಯು ಕನ್ನಡದ ಕವಿ ರನ್ನನ ಪ್ರಮುಖ ಆದರಣೀಯಳಾಗಿದ್ದಳು ಹಾಗೂ ತನ್ನ ಜಿನಭಕ್ತಿಯ ಪ್ರತೀಕವಾಗಿ ಕ್ರಿ.ಶ. 1007 ರಲ್ಲಿ ಲಕ್ಕುಂಡಿಯಲ್ಲಿ ಬ್ರಹ್ಮಜಿನಾಲಯವನ್ನು ನಿರ್ಮಿಸಿದಳೆಂದು ಶಾಸನಗಳು ಉಲ್ಲೇಖಿಸುತ್ತವೆ. ಮಹಾಕವಿ ರನ್ನನು ತನ್ನ ಅಜಿತತೀರ್ಥಂಕರ ಪುರಾಣದಲ್ಲಿ ಅತಿಮಬ್ಬೆಯ ಘನತೆಯನ್ನು ಸುಂದರ ಶಬ್ದಗಳಲ್ಲಿ ಹೊಗಳಿದ್ದಾನೆ. ಲಕ್ಕುಂಡಿಯು ಕ್ರಿ.ಶ. 9 ರಿಂದ 12 ನೇ ಶತಮಾನಗಳವರೆಗೂ ಪ್ರಸಿದ್ಧ ನಗರವಾಗಿದ್ದಿತು. ಆದರೆ ಚಾಳುಕ್ಯರ ಪತನದ ತರುವಾಯ ಈ ನಗರವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಲಾರಂಭಿಸಿತು.

ಲಕ್ಕುಂಡಿಯು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತೆಂದು ಹಲವಾರು ಶಾಸನಗಳು ತಿಳಿಸುತ್ತವೆ; ಹಾಗೂ ಇಲ್ಲಿರುವ ಗವರೇಶ್ವರ ದೇವಾಲಯವು (ಈಗ ಈ ದೇವಾಲಯವನ್ನು ಹಾಲಗುಂದಿ ಬಸವೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ) ಈ ಊರಿನ ಪ್ರಮುಖರಿಂದ ನಿರ್ಮಿತವಾಯಿತು. 'ಗವರೆ' ಎಂದರೆ ವರ್ತಕ ಎಂದು ಅರ್ಥೈಸಲಾಗಿದೆ. ಈ ತ್ರಿಕೂಟ ದೇವಾಲಯವನ್ನು ಇಲ್ಲಿನ ವರ್ತಕರುಗಳು ನಿರ್ಮಿಸಿರಬೇಕು. ಮೂರು ಗರ್ಭಗೃಹಗಳಲ್ಲಿ ಬ್ರಹ್ಮ ಶಿವಲಿಂಗ ಮತ್ತು ಸೂರ್ಯನ ವಿಗ್ರಹವಿದ್ದ ಪಾಣಿಪೀಠದಲ್ಲಿ ಸಪ್ತ ಅಶ್ವಗಳ ಉಬ್ಬು ಶಿಲ್ಪವಿದೆ. ಲಕ್ಕುಂಡಿಯು ಚಿನ್ನದ ನಾಣ್ಯಗಳನ್ನು ತಯಾರಿಸುವ ಟಂಕಸಾಲೆಗೆ ಹೆಸರಾಗಿತ್ತು ಹಾಗೂ ಈ ನಾಣ್ಯಗಳನ್ನು ಲೊಕ್ಕಿಗುಂಡಿಯ ಗದ್ಯಾಣಗಳೆಂದೇ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಜೈನ ಕೇಂದ್ರವಾದ ಇಲ್ಲಿನ ಅನೇಕ ಜೈನ ಮಂದಿರಗಳು ನಾಶವಾಗಿವೆ; ಹಾಗೂ ಈಗ ಕೇವಲ ಬೆರಳೆಣಿಕೆಯಷ್ಟು ಮಾತ್ರ ಉಳಿದಿವೆ. ಜೈನಬಸದಿಗಳಲ್ಲಿ ಕಳಶಪ್ರಾಯವಾಗಿದ್ದುದು ಇಲ್ಲಿನ ಬ್ರಹ್ಮಜಿನಾಲಯ. ಬಹುಶಃ ಲಕ್ಕುಂಡಿಯ ಪುರಾತನ ಕಟ್ಟಡಗಳಲ್ಲಿ ಸುಂದರ ಹಾಗೂ ಬೃಹತ್ ಕಟ್ಟಡವೆಂದರೇ ಬ್ರಹ್ಮಜಿನಾಲಯ. ಅತ್ತಿಮಬ್ಬೆಯು ಕ್ರಿ.ಶ. 1007 ರಲ್ಲಿ ತಾನು ಹಲವಾರು ದಾನಗಳನ್ನು ನೀಡಿ ಜಿನಾಲಯವನ್ನು ಕಟ್ಟಿಸುವುದರ ಜೊತೆಗೆ ಕಲ್ಯಾಣದ ಚಾಳುಕ್ಯ ರಾಜನಾದ ಇರಿವಬೆಡಂಗ ಸತ್ಯಾಶ್ರಯ ಅಹವಮಲ್ಲನಿಂದ ಬ್ರಹ್ಮಜಿನಾಲಯಕ್ಕೆ ದೇಣಿಗೆ ಕೊಡಿಸಿದ್ದಾಳೆ. ಇದರಲ್ಲಿ ಚೌಕಾಕಾರವಾದ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ತೆರೆದ ಮುಖಮಂಟಪಗಳಿವೆ. ಚೌಕಾಕಾರವಾದ ಗರ್ಭಗೃಹದಲ್ಲಿ ಎತ್ತರವಾದ ಅಲಂಕೃತ ಪಾಣಿಪೀಠದ ಮೇಲೆ ನಿಂತಿರುವ ಮಹಾವೀರನ ವಿಗ್ರಹವನ್ನು ಬ್ರಹ್ಮಜಿನನೆಂದೂ ಕರೆಯಲಾಗಿದೆ. ಕಪ್ಪು ಶಿಲಾ ಮೂರ್ತಿಯ ಹಿಂಭಾಗದಲ್ಲಿ ಅಲಂಕಾರಯುತವಾದ ಪ್ರಭಾವಳಿ ಹಾಗೂ ಅಕ್ಕಪಕ್ಕದಲ್ಲಿ ಚಾಮರಧಾರಿಣಿಯರ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಲಲಾಟದಲ್ಲಿ ಆಸೀನ ಜಿನಬಿಂಬವಿದೆ ಹಾಗೂ ಅರ್ಧಮಂಟಪದ ಲಲಾಟದಲ್ಲಿ ಗಜಲಕ್ಷ್ಮಿಯ ವಿಗ್ರಹವಿದೆ. ವಿಪುಲವಾದ ಕೆತ್ತನೆಗಳಿಂದ ಕೂಡಿರುವ ಗರ್ಭಗೃಹದ ದ್ವಾರಬಂಧದಲ್ಲಿ ಅನೇಕ ಹೂಬಳ್ಳಿಗಳ ಅಲಂಕಾರವಿದೆ. ಅರ್ಧಮಂಟಪದಲ್ಲಿ ನಿಂತಿರುವ ಬ್ರಹ್ಮನ ವಿಗ್ರಹವು ಕಲ್ಯಾಣದ ಚಾಳುಕ್ಯರ ಕಲಾ ಕೌಶಲ್ಯದ ಪ್ರತೀಕವಾಗಿ ಗದುಗಿನಲ್ಲಿರುವ ಭಿನ್ನವಾದ ಸರಸ್ವತಿಯ ವಿಗ್ರಹದಷ್ಟೇ ಆಕರ್ಷಕವಾಗಿದೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯಲ್ಲಿದ್ದು ಮಧ್ಯದಲ್ಲಿ ಉಬ್ಬಿದ ಪದಕಗಳ ಅಲಂಕಾರ ಹೊಂದಿವೆ. ಕಂಬಗಳು ಚೌಕಾಕಾರವಾದ ಪೀಠದ ಮೇಲ್ಭಾಗದಲ್ಲಿ ಶಿಲಾಬಾಲಿಕೆಯರು, ದರ್ಪಣ ಸುಂದರಿ, ನರ್ತಕಿ ಹಾಗೂ ಇತರ ಸುಂದರ ಉಬ್ಬು ಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿ ಕಕ್ಷಾಸನಗಳಿಂದ ಸುತ್ತುವರೆದಿರುವ ತೆರೆದ ಮುಖಮಂಟಪವಿದೆ. ಎಡಗರ್ಭಗೃಹದ ಮೇಲ್ಭಾಗದಲ್ಲಿ ದೀರ್ಘವಾದ ಸುಂದರ ಶಿಖರವಿದ್ದು ಮುಂಭಾಗದಲ್ಲಿ ಶುಕನಾಸದಲ್ಲಿ ಜೈನ ಬಸದಿಗಳಲ್ಲಿರುವಂತೆಯೇ ತೀರ್ಥಂಕರ ಶಿಲ್ಪವಿದೆ. ಮುಖಮಂಟಪದ ಮೇಲ್ಭಾಗದಲ್ಲಿ ಕೀರ್ತಿಮುಖವಿದ್ದು ಅದರ ಪದಕಸ್ಥಾನದಲ್ಲಿ ಆಸೀನ ಭಂಗಿಯಲ್ಲಿ ಜೈನ ತೀರ್ಥಂಕರನ ಕಿರು ಶಿಲ್ಪವಿದೆ. ಬಸದಿಯ ಮುಖ್ಯಕಟ್ಟಡವು ಎತ್ತರವಾದ ಜಗತಿಯ ಮೇಲಿದ್ದು ಹೊರಭಾಗದ ಗೋಡೆಗಳಲ್ಲಿರುವ ಗೋಡೆಗಂಬಗಳ ನಡುವೆ ಅನೇಕ ದೇವಕೋಷ್ಠಗಳು, ಅವುಗಳ ಮೇಲೆ ಶಿಖರ ವಿನ್ಯಾಸಗಳ ಕಿರು ಉಬ್ಬು ಕೆತ್ತನೆಗಳನ್ನು ಸೃಷ್ಟಿಸಿರುವುದು ಬಹಳ ಆಕರ್ಷಕವಾಗಿ ಕಂಡುಬರುತ್ತದೆ.

ಇದೇ ಬಸದಿಯ ಆವರಣದಲ್ಲಿ ಮುಖ್ಯ ಕಟ್ಟಡದ ಎಡಭಾಗದಲ್ಲಿ ಮತ್ತೊಂದು ಜಿನಾಲಯವಿದ್ದು ಗರ್ಭಗೃಹದಲ್ಲಿ ಅಲಂಕಾರಯುತ ಪ್ರಭಾವಳಿ ಇರುವ ಪಾಣಿಪೀಠದಲ್ಲಿ ಯಾವುದೇ ವಿಗ್ರಹವೂ ಇಲ್ಲ. ಈ ಬಸದಿಯಲ್ಲಿ ಗರ್ಭಗೃಹ ಅರ್ಧಮಂಟಪ ಹಾಗೂ ಕಿರುದಾದ ನವರಂಗಗಳಿವೆ. ಈ ಜಿನಾಲಯದ ಹೊರಭಾಗದಲ್ಲಿ ಭಗ್ನ ತೀರ್ಥಂಕರ (ಆಸೀನ) ಹಾಗೂ ಭಗ್ನವಾದ ಗಣೇಶನ ವಿಗ್ರಹಗಳಿವೆ. ಬ್ರಹ್ಮಜಿನಾಲಯದ ಬಲಭಾಗದಲ್ಲಿ ಕೇಂದ್ರ ಪ್ರಾಚ್ಯವಸ್ತು ಸರ್ವೇಕ್ಷಣಾಲಯವು ಹೊಸದಾಗಿ ಸ್ಥಾಪಿಸಿರುವ ವಸ್ತು

ಸಂಗ್ರಹಾಲಯವಿದೆ. ಈ ಸಂಗ್ರಹಾಲಯದಲ್ಲಿ ಗದಗ ತಾಲೂಕಿನ ನಾನಾಭಾಗಗಳಿಂದ ತಂದಿರುವ ಅನೇಕ ಬಿಡಿ ಶಿಲ್ಪಗಳನ್ನು ಕಾಲವಿಭಜನೆಯಂತೆ ಪ್ರದರ್ಶಿಸಲಾಗಿವೆ. ಇಲ್ಲಿ ಕಂಡುಬರುವ ಶಿಲ್ಪಗಳೆಂದರೆ ತೀರ್ಥಂಕರ, ದ್ವಾರಪಾಲಕ, ಶೇಷಶಯನ ವಿಷ್ಣು ಚಾಮರಧಾರಿಣಿ, ಸಿಂಹದಮುಖ, ಕುಬೇರ, ಋಷಭನಾಥ, ಸ್ತ್ರೀ ವಿಗ್ರಹ (ಭಗ್ನ), ತೀರ್ಥಂಕರ, ಕಾಮದೇವ, ಸಪ್ತಮಾತೃಕೆ (ಭಗ್ನ), ಶಿವ ಪರಮೇಶ್ವರ, ತೀರ್ಥಂಕರನ ಶಿರೋಭಾಗ, ಜೈನಪಾಣಿಪೀಠ, ಕಾಳಭೈರವ, ಸೂರ್ಯ (ಭಗ್ನ), ಯಕ್ಷಿ, ಹೊಯ್ಸಳ ಲಾಂಛನ, ಎರಡೂ ಕೈ ಮುರಿದಿರುವ ಸೂರ್ಯನಾರಾಯಣ, ಪಾರ್ಶ್ವನಾಥ (ಖಡ್ಗಾಸನ) ಸಿದ್ಧಾಸನ ಪಾರ್ಶ್ವನಾಥ, ಕಾರ್ತಿಕೇಯ, ಚಾಮರಧಾರಿಣಿ (2) ಆನೆ (ಭಗ್ನ), ವಿಷ್ಣು, ಕೀರ್ತಿಮುಖ ಇನ್ನೂ ಮುಂತಾದ ಸುಂದರ ಚಾಳುಕ್ಯ ಶೈಲಿಯ ಶಿಲ್ಪಗಳಿವೆ.

ಲಕ್ಕುಂಡಿಯಲ್ಲಿ ಈಗ ಕರೆಯಲಾಗುವ ನಾಗನಾಥ ದೇವಾಲಯವೂ ಒಂದು ಚಾಳುಕ್ಯರ ಕಾಲದ ಬಸದಿ ಎಂದು ಹೇಳಲಾಗಿದೆ. ಗರ್ಭಗೃಹದಲ್ಲಿ ಸರ್ಪದ ಶಿರೋಭಾಗದ ಉಬ್ಬು ಶಿಲ್ಪವಿರುವ ಪಾಣಿಪೀಠವು ಯಾವುದೇ ಶಿಲಾ ಮೂರ್ತಿಯನ್ನು ಹೊಂದಿಲ್ಲದಿದ್ದರೂ ಬಹುಶಃ ಇದು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಘಾನತಂತಿಕೇಯ (ಪಾರ್ಶ್ವನಾಥ?) ಬಸದಿ ಎಂದು ಹೇಳಲಾಗಿದೆ. ಈ ಜಿನಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ಕಿರಿದಾದ ನವರಂಗಗಳಿವೆ. ಇವೆರಡೂ ಬಸದಿಗಳಿಗೆ ಎದುರುಗಡೆ ರಸ್ತೆಯ ಆಚೆಗೆ ಪೂರ್ವಕ್ಕೆ ಮುಖಮಾಡಿರುವ ಇನ್ನೊಂದು ಶಿಥಿಲವಾದ ಶಿವ ದೇವಾಲಯವಿದೆ. ಇದರಲ್ಲಿ ಗರ್ಭಗೃಹ ಹಾಗೂ ಅರ್ಧಮಂಟಪ ಎರಡೂ ಸುಸ್ಥಿತಿಯಲ್ಲಿವೆ. ಆದರೆ ನವರಂಗವು ಬಿದ್ದುಹೋಗಿದ್ದು ಕೇವಲ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳು ಮಾತ್ರ ಉಳಿದಿವೆ. ಇದರ ಗರ್ಭಗೃಹದ ಲಲಾಟದಲ್ಲಿ ಜಿನಬಿಂಬವಿದ್ದು ಒಳಗೆ ಜೈನ ಲಕ್ಷಣವಿರುವ ಪಾಣಿಪೀಠದ ಮೇಲೆ ಶಿವಲಿಂಗವನ್ನು ಬಿಡಿಯಾಗಿ ಇರಿಸಲಾಗಿದೆ. ಈಗ ಶಿವಾಲಯವೆಂದು ಕರೆಯಲಾಗುವ ಈ ಕಟ್ಟಡವು ಮೊದಲು ಜೈನ ಬಸದಿಯಾಗಿತ್ತೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಈ ಊರಿನಲ್ಲಿರುವ ಪ್ರಮುಖ ದೇವಾಲಯಗಳೆಂದರೆ ಕಾಶೀವಿಶ್ವೇಶ್ವರ, ಚಂದ್ರಮೌಳೇಶ್ವರ ಮಲ್ಲಿಕಾರ್ಜುನ, ಹಾಲಗುಂದ ಬಸವಣ್ಣ, ವಿರೂಪಾಕ್ಷ, ಲಕ್ಷ್ಮೀನಾರಾಯಣ, ಮಾಣಿಕೇಶ್ವರ, ವೀರಭದ್ರ, ನನ್ನೇಶ್ವರ, ಸೋಮೇಶ್ವರ, ನೀಲಕಂಠೇಶ್ವರ, ವಿಶ್ವನಾಥ ಕುಂಬಾರಗಿರೀಶ್ವರ (ಅಥವಾ ನಾರಾಯಣದೇವ) ಮತ್ತು ನಗರೇ ದೇವರು. ಇವುಗಳಲ್ಲಿ ಬಹುಪಾಲು ದೇವಾಲಯಗಳು ಚೋಳರ (ಕ್ರಿ.ಶ. 1000) ದಾಳಿಗೆ ಸಿಲುಕಿ ನಾಶವಾಗಿವೆ. ಕೆಲವನ್ನು ಮಾತ್ರ ಅನಂತರ ಜೀರ್ಣೋದ್ಧಾರ ಮಾಡಲಾಗಿದೆ. ಈ ಊರಿನಲ್ಲಿರುವ ದೇವಾಲಯಗಳಲ್ಲಿ ಪ್ರಮುಖವಾದುದೆಂದರೆ ಊರ ಹೊರಭಾಗದಲ್ಲಿರುವ ಕಾಶಿವಿಶ್ವೇಶ್ವರ. ಇದು ದ್ವಿಕೂಟವಾಗಿದ್ದು, ಎರಡು ಗರ್ಭಗೃಹ ಅರ್ಧಮಂಟಪ ಹಾಗೂ ನವರಂಗಗಳಿವೆ, ಚಾಳುಕ್ಯರ ಶೈಲಿಯಲ್ಲಿರುವ ಈ ದೇವಾಲಯ ಬಹುಶಃ ಇವರ ಕಾಲಕ್ಕೂ ಮುಂಚೆಯೇ ನಿರ್ಮಿಸಿರಲು ಸಾಧ್ಯ. ಏಕೆಂದರೇ ಯಾವ ಶಾಸನವೂ ಈ ದೇವಾಲಯವನ್ನು ಕಟ್ಟಿಸಿದ ಬಗೆಗೆ ಉಲ್ಲೇಖಿಸುವುದಿಲ್ಲ. ಇದೇ ದೇವಾಲಯದ ನವರಂಗದ ಛಾವಣಿಯ ತೊಲೆಯ ಮೇಲಿರುವ ಶಾಸನದ ಪ್ರಕಾರ ಕ್ರಿ.ಶ. 1156 ರಲ್ಲಿ ಶೈವಗುರು ಮೋಗಿದೇವನ ಶಿಷ್ಯನಾದ ಕಾಳೆಯನಾಯಕನೆಂಬ ಅಧಿಕಾರಿಯು ಮೂರನೇ ತೈಲಪನ ಆಳ್ವಿಕೆಯ ಕಾಲದಲ್ಲಿ ಲೊಕ್ಕಿಗುಂಡಿಯ ಕವತಾಳ ಚಾವುಂಡೇಶ್ವರ ದೇವಾಲಯಕ್ಕೆ ನೀಡಿದ ದಾನಗಳನ್ನು ಉಲ್ಲೇಖಿಸುತ್ತದೆ. ಬಹುಶಃ ಈಗ ಕಾಶಿವಿಶ್ವೇಶ್ವರ ದೇವಾಲಯವೆಂದು ಕರೆಯಲಾಗುವುದು ಈ ಶಾಸನದ ಚಾವುಂಡೇಶ್ವರ ದೇವಾಲಯವೇ ಇರಬೇಕೆಂಬುದು ಸ್ಪಷ್ಟವಾಗಿದೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ದ್ವಾರಬಂಧವು ವಿಪುಲವಾದ ಕೆತ್ತನೆಗಳಿಂದ ಕೂಡಿದೆ. ದ್ವಾರದ ಎರಡೂ ಕಡೆಗಳಲ್ಲಿ ಸಂಗೀತ ವಾದಕರ, ನರ್ತಕಿಯರ ಹಾಗೂ ಶಿಲಾಬಾಲಿಕೆಯರ ಚಿಕ್ಕದಾದ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಅರ್ಧಮಂಟಪದ ದ್ವಾರದ ಎರಡೂ ಕಡೆಗಳಲ್ಲಿ ಅಲಂಕೃತ ಕಂಬಗಳಿವೆ. ನರ್ತಕಿಯರು, ಮಾನವ ಶರೀರದ ಅಸ್ಥಿಪಂಜರವನ್ನು ಹೊಂದಿರುವ ನಟರಾಜನ ಕಿರು ಶಿಲ್ಪವು ಮೇಲ್ಭಾಗದ ಪದಕದಲ್ಲಿರುವುದು ಅತ್ಯಂತ ಕುತೂಹಲಕಾರಿಯಾಗಿದೆ. ನವರಂಗದಲ್ಲಿ ಪೂರ್ವಕ್ಕೆ ಹಾಗೂ ದಕ್ಷಿಣಕ್ಕೆ ವಿಪುಲವಾದ ಅಲಂಕಾರ ದ್ವಾರಬಂಧಗಳಿರುವ ಎರಡು ಪ್ರವೇಶ ದ್ವಾರಗಳಿವೆ. ನವರಂಗದಲ್ಲಿ ಭಗ್ನವಾಗಿರುವ ಗಣೇಶ ಹಾಗೂ ಸಪ್ತಮಾತೃಕೆಯರ ಜೋಡು ಶಿಲ್ಪಗಳಿವೆ. ನವರಂಗದ ಮಧ್ಯಭಾಗದಲ್ಲಿರುವ ನಾಲ್ಕು ಕಂಬಗಳಲ್ಲಿ ಶಿವ ಪುರಾಣದ ಕತೆಗಳನ್ನು ಅಭಿವ್ಯಕ್ತಗೊಳಿಸುವ ಅನೇಕ ಉಬ್ಬು ಶಿಲ್ಪಗಳಿವೆ. ಇದರ ಛಾವಣಿಯಲ್ಲಿ ಭುವನೇಶ್ವರಿ ಇದ್ದು ಇದರ ಮಧ್ಯ ಭಾಗದಲ್ಲಿ ಕೆಳಮುಖ ಮಾಡಿರುವ ಕಮಲದ ಅಷ್ಟದಳದ ಆಕರ್ಷಕ ಕೆತ್ತನೆಯಿದೆ. ನವರಂಗದ ಮುಂಭಾಗದಲ್ಲಿ ಛಾವಣಿ ಇಲ್ಲದ ಶಿಥಿಲವಾದ ಮುಖಮಂಟಪವಿದೆ. ದೇವಾಲಯದ ಮಹಾದ್ವಾರದ ಎದುರಿಗೆ ಪ್ರತ್ಯೇಕವಾಗಿ ಸೂರ್ಯನಾರಾಯಣನ ಕಿರು ದೇವಾಲಯವಿದೆ. ಇದರ ದ್ವಾರದ ಲಲಾಟದಲ್ಲಿ ಸೂರ್ಯನ ಬಿಂಬವು ಕಂಡುಬರುತ್ತದೆ. ಇದರ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವು ಸುಸ್ಥಿತಿಯಲ್ಲಿದೆ. ಹೊರಗೋಡೆಯಲ್ಲಿನ ವಿವಿಧ ಭಂಗಿಯ ಸೂರ್ಯ ಬಿಂಬಗಳೆಲ್ಲ ಭಗ್ನವಾಗಿವೆ. ಕಾಶಿವಿಶ್ವೇಶ್ವರ ದೇವಾಲಯದ ಗರ್ಭಗೃಹದ ಮೇಲಿರುವ ಕದಂಬ ನಾಗರ ಶಿಖರವು

ಬಿದ್ದುಹೋಗಿದೆ. ಹೊರಭಾಗದ ಗೋಡೆಯಲ್ಲಿ ಶಿವಪುರಾಣದ ಅನೇಕ ದೃಶ್ಯಗಳನ್ನು ಕೆತ್ತಲಾಗಿದ್ದು ಆಕರ್ಷಕವಾದ ನಟರಾಜ, ಸುಂದರ ನರ್ತನ ಭಾವಗಳನ್ನು ವ್ಯಕ್ತಪಡಿಸುವ ಮದನಿಕೆಯರ ಹಲವಾರು ಶಿಲ್ಪಗಳಿವೆ.

ಈ ದೇವಾಲಯದ ಹಿಂಭಾಗದಲ್ಲಿ ರಸ್ತೆಯಿಂದಾಚೆಗೆ ಎತ್ತರವಾದ ಪ್ರದೇಶದಲ್ಲಿ ನನ್ನೇಶ್ವರ ದೇವಾಲಯವಿದೆ. ಬಹುಶಃ ಈ ದೇವಾಲಯವನ್ನು ಕ್ರಿ.ಶ. 1186ಕ್ಕೂ ಮೊದಲೇ ನಿರ್ಮಿಸಿರಬೇಕು. ಏಕೆಂದರೆ ಇದೇ ದೇವಾಲಯದ ನವರಂಗದ ಕಂಬದ ಮೇಲಿರುವ ಶಾಸನದ ಪ್ರಕಾರ ಚಾಳುಕ್ಯ ದೊರೆ ನಾಲ್ಕನೇಯ ಸೋಮೇಶ್ವರನ ಕಾಲದಲ್ಲಿ ಬಂಡಿಯ ಬಸವಿಸೆಟ್ಟಿಯ ಮಗನಾದ ಶಂಕರಸೆಟ್ಟಿ ಎಂಬ ವರ್ತಕನು ನನ್ನೇಶ್ವರ ದೇವರ ಪೂಜೆಗೆ ನೀಡಿದ ಧನ ಸಹಾಯದ ಬಗೆಗೆ ಉಲ್ಲೇಖಿಸುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ತೆರೆದ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅದರ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ನವರಂಗಕ್ಕೆ ಪೂರ್ವ ಹಾಗೂ ದಕ್ಷಿಣದಿಂದ ಎರಡು ಪ್ರವೇಶ ದ್ವಾರಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ನುಣುಪಾಗಿದ್ದು ವೃತ್ತಾಕಾರದ ಅಡ್ಡಕೊಯ್ತದವು. ಮುಖಮಂಟಪವು ವಿಶಾಲವಾಗಿದ್ದು ಸುತ್ತಲೂ ಕಕ್ಷಾಸನವಿದೆ. ನವರಂಗಕ್ಕಿರುವ ಮಹಾದ್ವಾರಬಂಧವು ವಿಪುಲವಾದ ಅಲಂಕಾರಿಕ ಕೆತ್ತನೆಗಳನ್ನು ಹೊಂದಿದೆ. ಮಹಾದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.

ನನ್ನೇಶ್ವರ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಊರ ಹೊರಭಾಗದಲ್ಲಿ ಚಾಳುಕ್ಯರ ಶೈಲಿಯ ತ್ರಿಕೂಟಾಚಲ ದೇವಾಲಯವಿದೆ. ಇದನ್ನು ಈಗ ಹಾಲುಗುಂದ ಬಸವೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ. ಮೂರು ಗರ್ಭಗೃಹಗಳಿದ್ದು ಮುಂಭಾಗದಲ್ಲಿ ಪ್ರತ್ಯೇಕ ಅರ್ಧಮಂಟಪಗಳಿದ್ದು ಮಧ್ಯಭಾಗದಲ್ಲಿ ಕೇಂದ್ರೀಯ ನವರಂಗವಿದೆ. ಮೂರು ಗರ್ಭಗೃಹಗಳ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ನವರಂಗದ ಛಾವಣಿಯಲ್ಲಿರುವ ತೊಲೆಯ ಮೇಲೆ ಶಾಸನವಿದೆ. ಮುಖ್ಯ ದ್ವಾರಬಂಧವು ಹಲವಾರು ಶಿಲ್ಪಗಳಿಂದ ಅಲಂಕೃತವಾಗಿದ್ದು ಆಕರ್ಷಕವಾಗಿದೆ. ಈ ದೇವಾಲಯದ ಎದುರು ಭಾಗದಲ್ಲಿ ಸ್ಥಳೀಯವಾಗಿ ಕರೆಯಲಾಗುವ ಮಜ್ಜಲ ಬಾವಿ ಇದೆ. ಇದರಲ್ಲಿರುವ ನೀರು ಕೆಂಪು, ನೀಲಿ ಹಾಗೂ ಕಪ್ಪು ಬಣ್ಣಗಳಿಗೆ ಹಲವು ಮಾಸಗಳಲ್ಲಿ ಬದಲಾಗುತ್ತದೆಂದು ಹೇಳಲಾಗುತ್ತದೆ. ಲಕ್ಕುಂಡಿಯಲ್ಲಿರುವ ಮತ್ತೊಂದು ಮುಖ್ಯ ದೇವಾಲಯವೆಂದರೆ ಮಲ್ಲಿಕಾರ್ಜುನ ದೇವಾಲಯ. ಈ ದೇವಾಲಯವೂ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪಗಳಿವೆ. ಗರ್ಭಗೃಹವು ಚೌರಸ್ರವಾಗಿದ್ದು ಒಳಭಾಗದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ನಾಲ್ಕು ಅತ್ಯಂತ ನುಣುಪಾದ ವೃತ್ತಾಕಾರದ ಕಂಬಗಳಿದ್ದು ಅವುಗಳಲ್ಲಿ ಒಂದರಲ್ಲಿ ಶಾಸನವಿದೆ. ಈ ಶಾಸನವು ಕ್ರಿ.ಶ. 1140 ಕ್ಕೆ ಸೇರಿದ್ದು ಚಾಳುಕ್ಯ ದೊರೆ ಎರಡನೇಯ ಜಗದೇಕಮಲ್ಲನ ಅಧಿಕಾರಿ (ಹೆಸರು ಇಲ್ಲ) ಪೆರ್ಗಡೆ ದಂಡನಾಯಕನೊಬ್ಬನು ತೆಲ್ಲಿಗೇಶ್ವರ ದೇವರಿಗೆ ನೀಡಿದ ದಾನಗಳ ಬಗೆಗೆ ಉಲ್ಲೇಖಿಸುತ್ತದೆ. ಇದೇ ದೇವಾಲಯದ ಹೊರಭಾಗದ ಪ್ರವೇಶದ್ವಾರದ ಗೋಡೆಯ ಮೇಲಿರುವ ಶಾಸನವು ಕ್ರಿ.ಶ. 1076 ಕ್ಕೆ ಸೇರಿದ್ದು ದೇವೇಂದ್ರ ಪಂಡಿತನ ಶಿಷ್ಯನಾದ ಶಂಕರಕೋಟಿಯು ಕಲಿದೇವರಿಗೆ ನೀಡಿದ ಹಲವು ದಾನಗಳ ಬಗೆಗೆ ಉಲ್ಲೇಖಿಸುತ್ತದೆ. ಆದುದರಿಂದ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ತೆಲ್ಲಿಗೇಶ್ವರ ಅಥವಾ ಕಲಿದೇವ ಎನ್ನುವುದು ಪ್ರಸ್ತುತ ಮಲ್ಲಿಕಾರ್ಜುನನೇ ಎಂಬುದು ಸ್ಪಷ್ಟವಾಗಿದೆ. ಮಲ್ಲಿಕಾರ್ಜುನ ದೇವಾಲಯದ ಪಕ್ಕದಲ್ಲೆ ಗರ್ಭಗೃಹವಿಲ್ಲದ ಶಿಥಿಲವಾದ ಚಾಳುಕ್ಯರ ಕಾಲದ ಮತ್ತೊಂದು ಶಿವಾಲಯವಿದೆ.

ಮಲ್ಲಿಕಾರ್ಜುನ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಮತ್ತೊಂದು ಶಿವದೇವಾಲಯವಿದೆ. ಇದನ್ನು ಸ್ಥಳೀಯವಾಗಿ ವಿರೂಪಾಕ್ಷ ದೇವಾಲಯವೆಂದು ಕರೆಯಲಾಗುತ್ತದೆ. ಇದು ಚತುರ್ಭುಜಾಕಾರವಾದ ಸ್ಥಳ ವಿನ್ಯಾಸವನ್ನು ಹೊಂದಿದ್ದು ಬಹಳವಾಗಿ ರಾಷ್ಟ್ರಕೂಟರ ಕಾಲದ ಶೈಲಿಯನ್ನು ಹೋಲುತ್ತದೆ. ಬಹುಶಃ ಅನಂತರ ಚಾಳುಕ್ಯರ ಹಾಗೂ ಹೊಯ್ಸಳರ ಕಾಲದಲ್ಲಿ ದುರಸ್ತಿಗೊಂಡಿರಬೇಕೆಂದು ಹೇಳಬಹುದು. ಗರ್ಭಗೃಹವು ಚೌರಸ ವಿನ್ಯಾಸವನ್ನು ಹೊಂದಿದ್ದು ಮುಂಭಾಗದಲ್ಲಿ ಅರ್ಧಮಂಟಪ ಹಾಗೂ ನವರಂಗಗಳಿವೆ. ಮುಂಭಾಗದಲ್ಲಿ ಮುಖಮಂಟಪವಿದ್ದು ಈಗ ಪೂರ್ಣವಾಗಿ ಬಿದ್ದುಹೋಗಿದ್ದು ಕೇವಲ ತಳಪಾಯ ಮಾತ್ರ ಉಳಿದಿದೆ. ನವರಂಗದ ಕಂಬಗಳು ವಿಶೇಷವಾಗಿ ಚತುಷ್ಕೋನಾಕಾರವಾಗಿವೆ. ಈ ದೇವಾಲಯದ ಸಮೀಪವೇ ಚಾಳುಕ್ಯ ಶೈಲಿಯ ತ್ರಿಕೂಟಾಚಲ ದೇವಾಲಯವಿದೆ. ಸ್ಥಳೀಯವಾಗಿ ಇದನ್ನು ಮಾಣಿಕೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ. ಇದರಲ್ಲಿ ಮೂರು ಪ್ರತ್ಯೇಕ ಗರ್ಭಗೃಹಗಳಿದ್ದು, ಅವುಗಳ ದ್ವಾರಬಂಧಗಳು ವಿಪುಲವಾದ ಕೆತ್ತನೆಗಳಿಂದ ಅಲಂಕೃತಗೊಂಡಿವೆ. ಗರ್ಭಗೃಹಗಳ ಮುಂಭಾಗದಲ್ಲಿ ಪ್ರತ್ಯೇಕ ಅರ್ಧಮಂಟಪಗಳಿದ್ದು ಅವುಗಳ ಪ್ರವೇಶ ದ್ವಾರಗಳ ಇಕ್ಕಡೆಗಳಲ್ಲಿ ಜಾಲಂದ್ರಗಳು ಹಾಗೂ ದ್ವಾರಪಾಲಕರ ಶಿಲ್ಪಗಳು ಕಂಡುಬರುತ್ತವೆ.

ಕೇಂದ್ರಸ್ಥಾನದಲ್ಲಿರುವ ವಿಶಾಲವಾದ ನವರಂಗವು ಸೂಕ್ಷ್ಮ ಕೆತ್ತನೆಗಳುಳ್ಳ ನುಣುಪಾದ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳನ್ನು ಹೊಂದಿವೆ. ಅವುಗಳಲ್ಲಿ ಒಂದು ಕಂಬದ ಪೀಠದ ಮೇಲೆ ಕ್ರಿ.ಶ. 12 ನೇ ಶತಮಾನದ ಲಕ್ಷಣವನ್ನು ಹೋಲುವ ಶಾಸನವಿದ್ದು ಶೈವಗುರು ಕ್ರಿಯಾಶಕ್ತಿ ಪಂಡಿತದೇವರ ಮಾರ್ಗದರ್ಶನದಲ್ಲಿ ಬಡ್ಡಿಯಾರ ಬಸವಿಸೆಟ್ಟಿ ಎಂಬ ಅಧಿಕಾರಿಯು ಈ ದೇವಾಲಯಕ್ಕೆ ಭೋಗಮಂಟಪವನ್ನು ಕಟ್ಟಿಸಿದುದರ ಬಗೆಗೆ ಉಲ್ಲೇಖವಿದೆ. ನವರಂಗದ ಛಾವಣಿಯಲ್ಲಿ ಸುಂದರ ಕೆತ್ತನೆಯುಳ್ಳ ಭುವನೇಶ್ವರಿ ಇದೆ. ಈ ದೇವಾಲಯವನ್ನು ಕೇಂದ್ರ ಪ್ರಾಚ್ಯವಸ್ತು ಸರ್ವೇಕ್ಷಣಾಲಯವು ದುರಸ್ತಿಗೊಳಿಸಿದ್ದು ದೇವಾಲಯದ ಪರಿಸರವು ನಿರ್ಮಲವಾಗಿದೆ. ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ನಿವೇಶನದಲ್ಲಿ ಕಲ್ಲಿನಿಂದ ಅಲಂಕೃತಗೊಂಡಿರುವ ದೊಡ್ಡದಾದ ನೆಲಬಾವಿ ಅಥವಾ ಪುಷ್ಕರಣಿಯನ್ನು ನಿರ್ಮಿಸಲಾಗಿದೆ. ಸ್ಥಳೀಯವಾಗಿ ಮುಸುಕಿನ ಅಥವಾ ಸಿದ್ದರ ಬಾವಿ ಎಂದ ಕರೆಯಲಾಗುವ ಈ ಬಾವಿಯು ಶಾಸನದಲ್ಲಿ 'ನಾಗರಬಾವಿ' ಎಂದು ಉಲ್ಲೇಖವಾಗಿದೆ. ಈ ಬಾವಿಯ ಪ್ರವೇಶ ದ್ವಾರದಲ್ಲಿರುವ ಶಾಸನವು ಕ್ರಿ.ಶ. 1195 ಕ್ಕೆ ಸೇರಿದ್ದು ಹೊಯ್ಸಳ ಅರಸು ಎರಡನೇ ಬಲ್ಲಾಳನ ಕಾಲದಲ್ಲಿ ವಿಷ್ಣುಭಟ್ಟ ಮತ್ತು ಅಡಕೆಯರ ಕೇಶವದೇವನ ಮಗನಾದ ಕೇಶವನು ಈ ನಾಗರ ಬಾವಿಯ ಪಾಲನೆಗಾಗಿ ವರ್ಷಂಪ್ರತಿ 12 ಗದ್ಯಾಣಗಳನ್ನು ನೀಡಿದನೆಂದು ತಿಳಿಸುತ್ತದೆ. ಚಾಳುಕ್ಯರ ಕಾಲದಲ್ಲೇ ಈ ಬಾವಿಯು ನಿರ್ಮಾಣವಾಗಿರಬೇಕೆಂಬುದು ಈ ಶಾಸನದಿಂದ ಸ್ಪಷ್ಟವಾಗಿದೆ. ಬಾವಿಯ ಕಲ್ಲಿನ ಕಟ್ಟಡವು ದೇವಾಲಯಕ್ಕೆ ಉಪಯೋಗಿಸಲಾಗುವ ಕಪ್ಪು ಶಿಲೆಯಿಂದಲೇ ನಿರ್ಮಿಸಲಾಗಿದ್ದು ಸುತ್ತಲೂ ಹಲವಾರು ಚಿಕ್ಕ ಚಿಕ್ಕ ಗುಡಿಗಳಿದ್ದು ಈಗ ಖಾಲಿ ಇದೆ. ನೀರನ್ನು ತಲುಪಲು ಸುವ್ಯವಸ್ಥಿತವಾದ ಮೆಟ್ಟಿಲುಗಳಿವೆ. ಮಾಣಿಕೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲೇ ಗ್ರಾಮ ದೇವತೆಯಾದ ದಂಡಿನ ದುರ್ಗಾದೇವಿಯ ಆಧುನಿಕ ಕಟ್ಟಡವಿರುವ ದೇವಸ್ಥಾನವಿದೆ. ಲಕ್ಕುಂಡಿಯಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿ ಇದೆ.

**ಲಕ್ಷ್ಮೇಶ್ವರ** : ಶಿರಹಟ್ಟಿ ತಾಲೂಕಿನಲ್ಲಿರುವ ಪ್ರಾಚೀನ ಇತಿಹಾಸ ಪಟ್ಟಣ ಲಕ್ಷ್ಮೇಶ್ವರವು (ಜನಸಂಖ್ಯೆ : 28,781) ಶಾಸನೋಕ್ತವಾಗಿ 'ಪುಲಿಗೆರೆ', 'ಹುಲಿಗೆರೆ', 'ಪುರಿಗೆರೆ', 'ಪೋರಿಗೆರೆ', 'ಪುಲಿಕಾನಗರ' (ಗದಗಿನಿಂದ 38 ಕಿ.ಮೀ) ಎಂದು ವಿವಿಧ ಹೆಸರುಗಳಿಂದ ಅಸ್ತಿತ್ವದಲ್ಲಿತ್ತು. ಬಾದಾಮಿ ಚಾಳುಕ್ಯ ವಿನಯಾದಿತ್ಯನ (ಕ್ರಿ.ಶ. 686) ಶಾಸನದಲ್ಲಿ ಈ ಊರನ್ನು ರಾಜಧಾನಿ ಪಟ್ಟಣ 120 ಮಹಾಜನರಿಂದ ಕೂಡಿದ 'ಬ್ರಹ್ಮೇಶ್ವರಗಿರಿ' 'ಘಟಿಕಾಸ್ಥಾನ'ವೆಂದು ವರ್ಣಿಸಲಾಗಿದೆ. ಹಾಗೂ ಇದೊಂದು ಪ್ರಾಚೀನ ಜೈನ ಕೇಂದ್ರವೂ ಆಗಿತ್ತು. ಆದಿಕವಿ ಪಂಪನಿಂದ ಮೊದಲುಗೊಂಡು ಹಲವಾರು ಕನ್ನಡದ ಕವಿಗಳು ಕನ್ನಡನಾಡಿನಲ್ಲೇ ಅತ್ಯಂತ ಪರಿಪಕ್ವವಾದ ಶುದ್ಧ ಕನ್ನಡ (ತಿರುಳ್ಗನ್ನಡ) ಭಾಷೆಯನ್ನು ಮಾತನಾಡುತ್ತಿದ್ದ ಸ್ಥಳವೆಂದು ಇದನ್ನು ವರ್ಣಿಸಿರುವರು. ಸ್ವಾತಂತ್ರ್ಯಕ್ಕೆ ಮೊದಲು ಲಕ್ಷ್ಮೇಶ್ವರವು ಹಿರಿಯ ಮಿರ್ಜಿ ಸಂಸ್ಥಾನದಲ್ಲಿ ಇತ್ತು. ಅನಂತರ ಈಗ ಶಿರಹಟ್ಟಿ ತಾಲೂಕಿನಲ್ಲಿ ಪ್ರಮುಖ ಪಟ್ಟಣ ಸ್ಥಾನವನ್ನು ಪಡೆದಿದೆ. ಈ ಊರು ಸ್ವಾತಂತ್ರ್ಯಪೂರ್ವದಿಂದಲೂ ಕೈಮಗ್ಗ ಕೈಗಾರಿಕೆಗೆ, ಮಣ್ಣಿನ ಪಾತ್ರೆಗಳ ತಯಾರಿಕೆಗೆ ಹಾಗೂ ಕೊಟ್ಟಣದ ಅವಲಕ್ಕಿಗೆ ಜನಪ್ರಿಯವಾಗಿದೆ. ಈ ಪಟ್ಟಣದ ರಚನೆಯು ಕುತೂಹಲಕಾರಿಯಾಗಿದೆ. ಪ್ರಾಚೀನ ಕಾಲದ ಕೋಟೆ ಹಾಗೂ ಕೋಟೆಯ ಭಾಗ ಹುಲಿಗೆರೆ ಬಣ, ಪೇಟೆಬಣ, ದೇಸಾಯಿ ಬಣ, ಬಸದಿ ಬಣ ಮುಂತಾದ ವಿಭಾಗಗಳನ್ನು ಹೊಂದಿದೆ. ಲಕ್ಷ್ಮೇಶ್ವರವು ಪ್ರಾಚೀನ ಕಾಲದಲ್ಲಿ ಪುಲಿಗೆರೆ-300 ಎಂಬ ಆಡಳಿತ ವಿಭಾಗದ ಕೇಂದ್ರಸ್ಥಾನವಾಗಿತ್ತು. ಲಕ್ಷ್ಮೇಶ್ವರವನ್ನು ಕುರಿತು ಹೇಳುವ ಶಾಸನವೊಂದು ಶ್ರೀಹರಿಯಿಂದ ನಿರ್ಮಿತವಾಗಿ ವಿಷ್ಣುಪಲ್ಲಿಯೆಂಬ ಹೆಸರನ್ನೂ, ದ್ವಾಪರಯುಗದಲ್ಲಿ ಶ್ವೇತನೆಂಬ ವಿರಾಟರಾಜನ ಮಗನಿಂದ ನಿರ್ಮಿತವಾಗಿ ಪುರಿಕರವೆಂಬ ಹೆಸರನ್ನು ಪಡೆದಿತ್ತೆಂದು ಹೇಳುವಲ್ಲಿ ಪೌರಾಣಿಕ ಕತೆಯ ಅಂಶ ಸೇರಿದ್ದರೂ ಪುಲಿಗೆರೆಯು ಪ್ರಾಚೀನ ಹಿನ್ನೆಲೆಯನ್ನು ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಲಕ್ಮಣ ಅಥವಾ ಲಕರಸನೆಂಬುವನು ತನ್ನ ಹೆಸರಿನ ಲಕ್ಷ್ಮಣೇಶ್ವರ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಆ ರೀತಿ ನಾಮಕರಣ ಮಾಡಿದ ಕಾರಣ ಕಾಲಾನುಕಾಲಕ್ಕೆ ಈ ಊರಿಗೆ ಲಕ್ಷ್ಮಣೇಶ್ವರ, ಮುಂದೆ ಲಕ್ಷ್ಮೇಶ್ವರ ಎಂಬ ಹೆಸರು ಬಂದಿರುವುದು ವ್ಯಕ್ತವಾಗುತ್ತದೆ.. ಈಗ ಶಿರಹಟ್ಟಿಯ ತಾಲೂಕು ಕಛೇರಿಯ ಗೋಡೆಯಲ್ಲಿರುವ ಶಾಸನದಲ್ಲಿ (ಕ್ರಿ.ಶ. 1179) ಸ್ವಯಂಭೂ ಲಕ್ಷ್ಮೇಶ್ವರ ದೇವರ ಉಲ್ಲೇಖವಿದೆ. ಕ್ರಿ.ಶ. 1074 ರ ಚಾಳುಕ್ಯ ಚಕ್ರವರ್ತಿ ಎರಡನೇ ಸೋಮೇಶ್ವರನ ಆಳ್ವಿಕೆಯಲ್ಲಿ ಪುಲಿಗೆರೆ-300 ನ್ನು ಬೆಳ್ವಲ-300 ನ್ನು ಮಹಾಮಂಡಲೇಶ್ವರ ಲಕ್ಷರಸನೆಂಬ ಅಧಿಕಾರಿಯು ಆಳುತ್ತಿದ್ದನೆಂದು ಹೇಳಲಾಗಿದೆ.

ಲಕ್ಷ್ಮೇಶ್ವರವು ಜೈನ ಶೈವ ಹಾಗೂ ವೈಷ್ಣವ ದೇವಾಲಯಳಿಗೆ ಕೇಂದ್ರವಾಗಿತ್ತೆಂದು ಶಾಸನಾಧಾರಗಳಿಂದ ಹಾಗೂ ಇಲ್ಲಿರುವ ಪ್ರಾಚ್ಯವಸ್ತು ಅವಶೇಷಗಳಿಂದ ವ್ಯಕ್ತವಾಗುತ್ತದೆ. ಇವುಗಳಲ್ಲಿ ಪ್ರಮುಖವಾದುವೆಂದರೆ ಸೋಮನಾಥ ದೇವಾಲಯ, ಲಕ್ಷ್ಮಣೇಶ್ವರ, ರಾಮೇಶ್ವರ, ಹೋಜೇಶ್ವರ (ಕಾವ್ಯಆಧಾರ), ಶೋಭನೇಶ್ವರ (ಶಾಸನೋಕ್ತ), ಬಾಳೇಶ್ವರ (ಈಗಲೂ ಇದೆ) ಮುಂತಾದವುಗಳಿವೆ. ಪುಲಿಗೆರೆಯ ಸೋಮೇಶ್ವರ ಅಥವಾ ಸೋಮನಾಥ ದೇವಾಲಯವು ಕ್ರಿ.ಶ. 11ನೇ ಶತಮಾನದ ಕೊನೆಯಲ್ಲಿ ನಿರ್ಮಾಣವಾಗಿರಬೇಕು.

ಈ ದೇವಾಲಯವು ಮೂರು ಅಗಸೆ ದ್ವಾರಗಳನ್ನೊಳಗೊಂಡ ಕೋಟೆಯಿಂದ ಆವರಿಸಲ್ಪಟ್ಟಿದೆ. ದೇವಾಲಯದ ಮುಖ್ಯ ಕಟ್ಟಡವು ಬೃಹದಾಕಾರವಾದ ಸಂಕೀರ್ಣ ಕಟ್ಟಡವಾಗಿದೆ. ಇದು ಗರ್ಭಗೃಹ, ಆಯತಾಕಾರವಾದ ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಇತ್ತೀಚಿನ ಶೈಲಿಯಲ್ಲಿ ದುರಸ್ತಿಗೊಂಡಿದ್ದು ಹೊಳಪು ಬಿಲ್ಲೆಗಳನ್ನು ಒಳಭಾಗದ ಗೋಡೆಗೆ ಹಾಕಲಾಗಿದೆ. ಆದರೆ ಗರ್ಭಗೃಹದಲ್ಲಿರುವ ನಂದಿಯ ಮೇಲೆ ಕುಳಿತಿರುವ ವಿಶೇಷ ಹಾಗೂ ಅಪರೂಪವಾದ ಶಿವ ಮತ್ತು ಪಾರ್ವತಿಯರ ಚಾಳುಕ್ಯ ಕಾಲದ ಶಿಲ್ಪವು ಅತ್ಯಂತ ಆಕರ್ಷಕವಾಗಿವೆ. ಹರಿಹರನ ಆದಯ್ಯನ ರಗಳೆಯಲ್ಲಿ ಆದಯ್ಯನೆಂಬ ಶೈವ ಭಕ್ತನು ಇಲ್ಲಿದ್ದ ಜಿನಬಿಂಬವನ್ನು ಭಗ್ನಗೊಳಿಸಿ ಶಿವನ ಈ ಪ್ರತಿಮೆಯನ್ನು ಪ್ರತಿಷ್ಠಾಪಿಸಿದನೆಂದು ಒಂದು ಪ್ರಬಲ ವಾದವಿದೆ. ಈ ವಿಗ್ರಹವನ್ನು ತಾನೇ ಸೌರಾಷ್ಟ್ರ ಸೋಮನಾಥದ ಮಾದರಿಯಲ್ಲಿ ಮಾಡಿಸಿ ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ. ಈ ದೇವರನ್ನು ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚರಿತ್ರಮು' ಮತ್ತು 'ಬಸವಪುರಾಣ', ಭೀಮಕವಿಯ 'ವೀರಶೈವಾಮೃತ ಪುರಾಣ' ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣೀ', ರಾಘವಾಂಕನ 'ಸೋಮನಾಥ ಚರಿತೆ' ಮುಂತಾದ ಕೃತಿಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಪ್ರಸ್ತಾಪವಾಗಿರುವುದು ಇದರ ಜನಪ್ರಿಯತೆಗೆ ಕಾರಣವಾಗಿದೆ. ಕನ್ನಡ ಕಾವ್ಯಗಳಲ್ಲಿ ಬರುವ ವರ್ಣನೆಯಂತೆ ಸೌರಾಷ್ಟ್ರದಿಂದ ಬಂದಿದ್ದ ಆದಯ್ಯನೆಂಬ ಶಿವಭಕ್ತನು ಪುಲಿಗೆರೆಗೆ ಬಂದು ಇಲ್ಲಿ ಜೈನನಾದ ಪಾರಿಸೆಟ್ಟಿಯ ಮಗಳು ಪದ್ಮಾವತಿಯನ್ನು ಮೋಹಿಸಿ ನಂತರ ವಿವಾಹವಾಗುತ್ತಾನೆ. ಆಕೆ ತಂದೆಯ ಮಾತನ್ನು ಮೀರಿ ಹೊಜೇಶ್ವರ ಲಿಂಗಸನ್ನಿಧಿಯಲ್ಲಿ ಶಿವದೀಕ್ಷೆಯನ್ನು ಪಡೆಯುತ್ತಾಳೆ. ಶಿವನ ಹಿರಿಮೆಯನ್ನು ಸಾರಲು ಆದಯ್ಯನೇ ಸೌರಾಷ್ಟ್ರದ ಸೋಮೇಶ್ವರನನ್ನು ಪುಲಿಗೆರೆಗೆ ತಂದು ಪ್ರತಿಷ್ಠಾಪಿಸಿದನೆಂದು ಪ್ರತೀತಿಯಿದೆ. ಜೈನ ಬಸದಿಯನ್ನು ಸೋಮೇಶ್ವರ ದೇವಾಲಯವನ್ನಾಗಿ ಪರಿವರ್ತಿಸಿದಿನೆಂತಲೂ ಒಂದು ನಂಬಿಕೆಯಿದೆ. ಆದರೆ ಈ ದೇವಾಲಯದಲ್ಲಿ ಯಾವುದೇ ಜಿನಬಿಂಬವಾಗಲೀ ಅಥವಾ ಇತರೆ ಪುರಾವೆಗಳಾಗಲೀ ಸಿಗುವುದಿಲ್ಲ. ಈ ವಾದಕ್ಕಿರುವ ಮೂಲ ಆಧಾರವೆಂದರೆ ಸಮಕಾಲೀನ ಸಾಹಿತ್ಯ ಕೃತಿಗಳೆಂದು ಹೇಳಬಹುದು. ಸೋಮೇಶ್ವರ ದೇವಾಲಯದ ಗರ್ಭಗೃಹದ ಮುಂಭಾಗದಲ್ಲಿ ನವರಂಗವಿದ್ದು ದಕ್ಷಿಣ ಹಾಗೂ ಉತ್ತರಕ್ಕೆ ಪ್ರವೇಶದ್ವಾರಗಳಿವೆ. ಇದರಲ್ಲಿ ಅಂತರಾಳವಿಲ್ಲ. ಆದರೆ ನವರಂಗದ ಮುಂಭಾಗದಲ್ಲಿ ಒಂದು ಅರ್ಧಮಂಟಪವಿದ್ದು ಅದರ ಮುಂದೆ ವಿಶಾಲವಾದ ಹಲವಾರು ಕಂಬಗಳಿಂದ ಅಲಂಕೃತವಾದ ಹಾಗೂ ಮೂರು ಪ್ರವೇಶದ್ವಾರಗಳನ್ನು ಹೊಂದಿರುವ ಮುಖ ಮಂಟಪವಿದೆ. ಮುಖಮಂಟಪದ ಕೇಂದ್ರದಲ್ಲಿ ವೃತ್ತಾಕಾರವಾದ ನಾಟ್ಯ ಮಂಟಪವಿದ್ದು ಚಾಳುಕ್ಯ ಶೈಲಿಯ ಆಕರ್ಷಕವಾದ ಕಂಬಗಳಿವೆ. ಭುವನೇಶ್ವರಿಯಲ್ಲಿ ವಿಪುಲವಾದ ಕೆತ್ತನೆಯುಳ್ಳ ಕೆಳಮುಖ ಕೂಡಿರುವ ಕಮಲದ ಹೂವಿನ ಕೆತ್ತನೆಯಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಬಹುಕೋನಾಕಾರದ ಕದಂಬ ನಾಗರ ಶಿಖರವಿದೆ. ದೇವಾಲಯದ ಶಿಖರದ ದಕ್ಷಿಣ ಭಾಗದಲ್ಲಿ ಬ್ರಹ್ಮ ಶಿವ, ಯಕ್ಷರನ್ನೂ ಪಶ್ಚಿಮ ಭಾಗದಲ್ಲಿ ಶಕ್ತಿ ಸರಸ್ವತಿಯರನ್ನೂ ಉತ್ತರದ ಭಾಗದಲ್ಲಿ ಶಿವನ ವಿವಿಧ ಅವತಾರಗಳನ್ನು ಅಭಿವ್ಯಕ್ತಿಸಿರುವುದು ಕಂಡುಬರುತ್ತವೆ. ಶಿಖರದ ಮೇಲ್ಭಾಗದ ಲೋಹದ ಕಳಶವನ್ನು ರಂಭಾಪುರಿಯ ಪಂಚಾಚಾರ್ಯ ವೀರಗಂಗಾಧರ ಸ್ವಾಮಿಗಳು ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತದೆ. ಹೊರಭಾಗದ ಗೋಡೆಯ ಭಿತ್ತಿಗಳಲ್ಲಿ ದಾಳಿಗಳಿಗೆ ಸಿಕ್ಕಿ ನಾಶವಾಗಿದ್ದರೂ ಹಲವು ಅಳಿದುಳಿದ ಶಿಲ್ಪಗಳಾದ ಆರು ಭುಜಗಳುಳ್ಳ ಶಿವ, ಗಣೇಶ, ಅಷ್ಟ ದಿಕ್ಪಾಲಕರು ಮತ್ತು ಅಲ್ಲಲ್ಲಿ ಕಂಡುಬರುವ ಯಕ್ಷರು, ಗಂಧರ್ವರು ಮತ್ತು ಸಾಲಬಂಜಿಕೆಯರಿದ್ದಾರೆ. ಹೊರಭಾಗದ ಛಾವಣಿಯ ಭಿತ್ತಿಗಳಲ್ಲಿ ಭೈರವ, ವಿಷ್ಣು, ಶಕ್ತಿ, ನಟರಾಜ, ಗಣೇಶ, ವೀರಭದ್ರ, ವೇಣುಗೋಪಾಲ, ಹರಿಹರ ಮುಂತಾದ ಸುಂದರ ಶಿಲ್ಪಗಳನ್ನು ಬಿಡಿಸಲಾಗಿದೆ. ದಕ್ಷಿಣದಲ್ಲಿರುವ ಒಂದು ಮೂರ್ತಿ ಧ್ಯಾನಾಸಕ್ತನಾದ ಆಸೀನ ಜಿನನಂತೆ ಕಾಣುತ್ತದೆ. ಮುಕ್ಕೊಡೆಯಿದೆ; ಆದರೆ ಇದರ ಬಗೆಗೆ ಬೇರೆ ಹೇಳಿಕೆಗಳೂ ಇದೆ. ದೇವಾಲಯದ ಪ್ರಾಕಾರದಲ್ಲಿ ಹಲವಾರು ಚಿಕ್ಕ ದೇವ ಮಂಟಪಗಳು ಇದ್ದು ಅವು ಬರಿದಾಗಿವೆ. ದೇವಾಲಯದ ಸುತ್ತಲೂ ಕಲ್ಲಿನ ಕೋಟೆಯಿದೆ. ಇದರ ದಕ್ಷಿಣ ದ್ವಾರ ಮಂಟಪದಲ್ಲಿ ನಗಾರಿಖಾನೆ ಇದ್ದು ವಿಜಯನಗರದ ಸಾಲಬಂಜಿಕೆಯರೂ ಹಾಗೂ ಆ ಕಾಲದ ಸ್ತಂಭಗಳೂ ಇವೆ. ದಕ್ಷಿಣ ದ್ವಾರದ ಎಡಬದಿಯಲ್ಲಿ ಸೋಮೇಶ್ವರ ಹಾಗೂ ಶಿವರಾಮ ಒಡೆಯರ ಶಿಲಾಮೂರ್ತಿಗಳಿವೆ. ಈ ನಗಾರಿಖಾನೆಯ ಮುಂಭಾಗದಲ್ಲಿ ಮೂರು ವೀರಗಲ್ಲುಗಳಿವೆ. ಒಂದರಲ್ಲಿ ಕೋಟೆ ಕಾಳಗವನ್ನು ಕಣ್ಣಿಗೆ ಕಟ್ಟುವಂತೆ ಕೆತ್ತಲಾಗಿದೆ. ಈ ಗುಡಿಯ ಹಿಂಭಾಗದಲ್ಲಿ ಬಹುದೊಡ್ಡ ಪುಷ್ಕರಣಿಯಿದ್ದು ಇದನ್ನು ಸ್ಥಳೀಯವಾಗಿ ಗೌರಿ ಎಂಬ ಭಕ್ತೆ ಕಟ್ಟಿಸಿದಳೆಂದು ಹೇಳಲಾಗುತ್ತದೆ. ಈ ಗುಡಿಯ ಹೊರಗೆ ಎಡಭಾಗದಲ್ಲಿ ಪ್ರತ್ಯೇಕವಾದ ಗಣೇಶನ ಗುಡಿಯಿದೆ. ಇದರ ಎದುರಿಗೆ ಮೂಲೆಯಲ್ಲಿ ಗರ್ಭಗೃಹ, ಚಿಕ್ಕ ನವರಂಗಗಳಿರುವ ವಿಜಯನಗರೋತ್ತರ ಶೈಲಿಯ ಶಿವದೇವಾಲಯವಿದೆ. ಪ್ರತೀವರ್ಷ ವೈಶಾಖ ಶುದ್ಧ ದಶಮಿಯಂದು ಜಾತ್ರೆ ನಡೆದಾಗ ರಥೋತ್ಸವವು ಜರಗುತ್ತದೆ. ಸುಮಾರು ಎಂಟು ದಿನಗಳ ಕಾಲ ಜಾತ್ರೆ ನಡೆಯುವಾಗ ಕರ್ನಾಟಕದ ನಾನಾಭಾಗಗಳಿಂದ ಭಕ್ತರು ಬರುತ್ತಾರೆ. ಈ ದೇವಾಲಯಕ್ಕೆ ಸಂಬಂಧಪಟ್ಟಂತೆ 30 ಕ್ಕೂ ಮೇಲ್ಪಟ್ಟ ಶಾಸನಗಳಿವೆ. 1353 ರ ವಿಜಯನಗರದ ಕಾಲದ ಶಾಸನವು ಚಿಕ್ಕಕೆರೆ ನಾಯಕನೆಂಬ ಅಧಿಕಾರಿ ಇದರ

ಜೀರ್ಣೋದ್ಧಾರ ಮಾಡಿದ್ದನ್ನು ಹೇಳುತ್ತದೆ. ಅಲ್ಲದೆ 1392 ರಲ್ಲಿ ಸೋಮೇಶ್ವರ ದೇವಾಲಯದ ದಕ್ಷಿಣ ಪ್ರವೇಶ ದ್ವಾರವನ್ನು ಜೀರ್ಣೋದ್ಧಾರ ಮಾಡದ ಶಾಸನವೂ ಇದೆ.

ಲಕ್ಷ್ಮೇಶ್ವರದ ಹೆಸರಿಗೆ ಕಾರಣವಾಗಿರುವ ಲಕ್ಷ್ಮಣೇಶ್ವರ ದೇವಾಲಯವು ಇಲ್ಲಿನ ಹಿರೇಬಣವೆಂಬ ಜಾಗದಲ್ಲಿದ್ದು ಚಾಲುಕ್ಯ ಶೈಲಿಯ ತ್ರಿಕೂಟಾಚಲವಾಗಿದೆ. ಕಲಚೂರಿ ಸಂಕಮನ ಆಳ್ವಿಕೆಯ ಶಾಸನವು (ಕ್ರಿ.ಶ. 1179) ಲಕ್ಷ್ಮಣೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ತ್ರಿಲೋಚನ ಪಂಡಿತರಿಗೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಇದರಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಮಧ್ಯದಲ್ಲಿ ನವರಂಗ ಹಾಗೂ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪವಿದೆ. ಮುಖ್ಯ ಗರ್ಭಗೃಹದಲ್ಲಿ ಚಾಲುಕ್ಯ ಪೀಠವಿದ್ದು ಮೇಲೆ ಪ್ರಾಚೀನ ಲಕ್ಷಣವುಳ್ಳ ಶಿವಲಿಂಗವಿದೆ. ಅಂತರಾಳದ ಹಾಗೂ ಗರ್ಭಗೃಹದ ಬಾಗಿಲುವಾಡಗಳು ಅಲಂಕೃತವಾಗಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳನ್ನು ಹೊಂದಿವೆ. ಅಂತರಾಳದ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎಡಭಾಗದಲ್ಲಿರುವ ಗರ್ಭಗೃಹದ ಬಾಗಿಲುವಾಡವು ಅಲಂಕೃತವಾಗಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳನ್ನು ಹೊಂದಿದೆ. ಆದರೆ ಒಳಗೆ ಚಾಲುಕ್ಯ ಪೀಠವಿದ್ದು ಯಾವುದೇ ವಿಗ್ರಹವಿಲ್ಲ, ಇದೇ ರೀತಿ ಬಲಭಾಗದ ಗರ್ಭಗೃಹ ಹಾಗೂ ಅಂತರಾಳದ ಬಾಗಿಲುವಾಡಗಳು ಅಲಂಕೃತವಾಗಿದ್ದು ಒಳಗೆ ಪಾಣಿಪೀಠ ಉಳಿದು ಯಾವುದೇ ವಿಗ್ರಹವಿಲ್ಲ, ಮಧ್ಯದಲ್ಲಿರುವ ನವರಂಗವು ಆಯತಾಕಾರವಾಗಿದ್ದು ಚಾಲುಕ್ಯ ಕಂಬಗಳಿಂದ ಅಲಂಕೃತವಾಗಿದೆ. ಇದರ ಛಾವಣಿಯಲ್ಲಿರುವ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ನೃತ್ಯಭಂಗಿಯಲ್ಲಿರುವ ಸಂಗೀತಗಾರರು, ಸಪ್ತಮಾತೃಕೆಯರು ಹಾಗೂ ಕಮಲದ ಹೂವಿನ ಕಲಾಕುಸರಿನ ಕೆತ್ತನೆಗಳನ್ನು ಕಾಣಬಹುದಾಗಿದೆ. ನವರಂಗದಲ್ಲಿ ನಾಲ್ಕು ಗೋಡೆಗಳಲ್ಲೂ ಪ್ರವೇಶ ದ್ವಾರಗಳಿವೆ. ಮಧ್ಯ ಅಂತರಾಳದ ದ್ವಾರದ ಮೇಲ್ಭಾಗದ ಚೌಕಟ್ಟಿನಲ್ಲಿ ಜೈನ ತೀರ್ಥಂಕರ ವಿಗ್ರಹವಿರುವುದು ಸೂಕ್ಷ್ಮವಾಗಿ ಗಮನಿಸಿದರೆ ವ್ಯಕ್ತವಾಗುತ್ತದೆ. ಇದರ ಮುಂದಿರುವ ಬಹು ಕಂಬಗಳಿಂದ ಅಲಂಕೃತವಾದ ಮುಖಮಂಟಪವು ಮೂರು ಪ್ರವೇಶದ್ವಾರಗಳನ್ನು ಹೊಂದಿದ್ದು ಮಧ್ಯದಲ್ಲಿ ಛಾವಣಿಯಲ್ಲಿರುವ ಭುವನೇಶ್ವರಿಯು ಅಲಂಕಾರಯುತ ಕೆತ್ತನೆಗಳನ್ನು ಹೊಂದಿದೆ. ದೇವಾಲಯದ ಹೊರಗೆ ಅದಿಷ್ಠಾನದ ಭಾಗದಲ್ಲಿ ಹಂಸಲತಾಪಟ್ಟಿಕೆ, ಮಣಿಸರ ಮುಂತಾದ ಆಲಂಕಾರಿಕ ಚಿತ್ರಗಳನ್ನು ಕೆತ್ತಲಾಗಿದೆ. ಹೊರಗೋಡೆ ಭಿತ್ತಿಗಳಲ್ಲಿ ವಿಷ್ಣು ಮೊದಲಾದ ದೇವತೆಗಳ ಉಬ್ಬು ಶಿಲ್ಪಗಳಿದ್ದು ಅಲಂಕಾರಯುಕ್ತವಾದ ವಿಶಾಲವಾದ ಬರಿದಾದ ಗೂಡುಗಳಿವೆ. ದಕ್ಷಿಣಭಾಗದ ನವರಂಗದ ಭಿತ್ತಿಗಳಲ್ಲಿ ಅನೇಕ ಮಿಥುನ ಶಿಲ್ಪಗಳಿವೆ. ಈ ದೇವಾಲಯವು ಒಂದು ಬೃಹತ್ಕಟ್ಟಡ ಸಂಕೀರ್ಣವಾಗಿದೆ. ಈ ದೇವಾಲಯದಲ್ಲಿ ಹಲವಾರು ಶಾಸನಗಳಿದ್ದು ನವರಂಗದಲ್ಲಿರುವ ಛಾವಣಿಯಲ್ಲಿರುವ ಶಾಸನವು ರಾಷ್ಟ್ರಕೂಟ ಮೂರನೇ ಇಂದ್ರನ ಕಾಲದ್ದಾಗಿದ್ದು (ಕ್ರಿ.ಶ. 971) ನಾಗಾವುಂಡ, ಚಾವುಂಡನಾಯಕ ಮತ್ತು ಪುಲಿಗೆರೆ ಮುನ್ನೂರರ ಉಲ್ಲೇಖವಿದೆ.

ಇಲ್ಲಿಯ ಮತ್ತೊಂದು ಪ್ರಮುಖ ದೇವಾಲಯವೆಂದರೇ ಚಾಳೇಶ್ವರ. ಇದು ವಿಶೇಷ ವಾಸ್ತು ಲಕ್ಷಣದಿಂದ ಜನಪ್ರಿಯವಾಗಿದೆ. ಎತ್ತರವಾದ ಜಗತಿಯ ಮೇಲೆ ನಿರ್ಮಿತವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಎತ್ತರವಾದ ಶಿವಲಿಂಗವನ್ನು ಹೊಂದಿದೆ. ಒಳಭಾಗದ ಅಲಂಕಾರಕ್ಕಿಂತಲೂ ಹೊರಗೋಡೆಯ ಅಲಂಕಾರ ಅಧಿಕವಾಗಿದೆ. ಕುಂಭಿಯ ಭಾಗದಲ್ಲಿ ಹಲವು ಉಬ್ಬುಶಿಲ್ಪಗಳಿವೆ. ಶಿಲ್ಪಲಕ್ಷಣದ ದೃಷ್ಟಿಯಿಂದ ಇವು ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟ ಲಕ್ಷಣಗಳನ್ನು ಪ್ರತಿನಿಧಿಸುತ್ತವೆ. ಹೊರಗೋಡೆಯ ಮೇಲಿರುವ ಮಕರಗಳು ಇದೇ ಊರಿನ ಬಾದಾಮಿ ಚಾಲುಕ್ಯರ ಕಾಲದ ಶಂಖಬಸದಿಯ ಮಕರಗಳನ್ನು ಹೋಲುತ್ತವೆ. ಇದಲ್ಲದೆ, ನಾಟ್ಯ ಗಣಪತಿ, ಅಷ್ಟಭುಜ ನಟರಾಜ, ಗಜಾಸುರ, ಉಗ್ರನರಸಿಂಹ, ಕಾಳಿ, ಮಾಹಿಷಾಸುರಮರ್ದಿನಿ, ಅರ್ಧನಾರೀಶ್ವರ, ವೃಷಭಾರೂಢ, ಮೊದಲಾದ ಮೂರ್ತಿಗಳೆಲ್ಲಾ ಚೈತನ್ಯ ಪೂರ್ಣವಾಗಿ ನೈಜವಾಗಿ ಮೂಡಿಬಂದಿದೆ. ಕಲ್ಯಾಣದ ಚಾಲುಕ್ಯರ ಶೈಲಿಯ ಅಲಂಕಾರವಿಲ್ಲದಿರುವುದರಿಂದ ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಶೈಲಿಯ ಈ ಉಬ್ಬು ಶಿಲ್ಪಗಳು ಸಾಂಪ್ರದಾಯಿಕ ಕಲಾ ಪ್ರೌಢಿಮೆಯ ಉತ್ತಮ ಪ್ರತೀಕಗಳಾಗಿವೆ.

ಶಾಸನಗಳಲ್ಲಿ ಉಕ್ತವಾಗಿರುವ ಹೋಜೇಶ್ವರ ದೇವಾಲಯವು ಸ್ಥಳೀಯವಾಗಿ ವಾಜೇಶ್ವರ ಗುಡಿಯೆಂದು ಕರೆಯಲಾಗುತ್ತದೆ. ರಾಘವಾಂಕ ಕವಿಯು ಸೋಮನಾಥ ಚರಿತೆಯಲ್ಲಿ ಹರಿಹರನು ಹರಿಹರ ರಗಳೆಯಲ್ಲಿ ಆದಯ್ಯನು ಪುಲಿಗೆರೆಗೆ ಬಂದಾಗ ಹೋಜೇಶ್ವರ ದೇವಾಲಯದಲ್ಲಿ ನೆಲೆನಿಂತನೆಂದು ಹೇಳಿದೆ. ಇತರ ದೇವಾಲಯಗಳಾದ ರಾಮೇಶ್ವರ, ಶೋಭನೇಶ್ವರ, ಓಬಳೇಶ್ವರ, ಕರ್ಮ್ಮಟೇಶ್ವರ ಮುಂತಾದ ದೇವಾಲಯಗಳು ಶಾಸನೋಕ್ತವಾಗಿದ್ದು ಈಗ ಇಲ್ಲವಾಗಿದೆ. ಈ ಊರಿನಲ್ಲಿರುವ ಸಹಸ್ರ ಲಿಂಗ ದೇವಾಲಯವು ಸಾಧಾರಣ ಕಟ್ಟಡವಾಗಿದೆ. ಗರ್ಭಗೃಹದಲ್ಲಿರುವ ಚಾಲುಕ್ಯ ಪಾಣಿಪೀಠದ ಮೇಲೆ ಶಿವಲಿಂಗವಿದ್ದು ಅದರ ಮೇಲೆ 999 ಕಿರು ಶಿವಲಿಂಗಗಳನ್ನು ಕೆತ್ತಿದ್ದಾರೆ. ಇದು ಹಾಳುಬಿದ್ದ ಶಿಥಿಲವಾದ ದೇವಾಲಯ ಕಟ್ಟಡವಾಗಿದೆ. ಈ ಊರಿನಲ್ಲಿರುವ ಇತರ ದೇವಾಲಯಗಳೆಂದರೆ ಈಶ್ವರ,

ನಾರಾಯಣಸ್ವಾಮಿ, ಹನುಮಂತ (ಮೂರು), ಕಾಳಿಕಾದೇವಿ, ದ್ಯಾಮವ್ವ, ದುರ್ಗವ್ವ ಮೈಲಾರಲಿಂಗ ಮುಂತಾದವುಗಳು. ಊರಿನಲ್ಲಿರುವ ಈಶ್ವರ ದೇವಾಲಯವು ಚಾಳುಕ್ಯ ಶೈಲಿಯ ಮತ್ತೊಂದು ಕಟ್ಟಡವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಂಭಾಗದಲ್ಲಿ ವಿಶಾಲವಾದ ಗೋಡೆಗಳಿರುವ ಮುಖಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ಬಸವನ ಮೂರ್ತಿ ಇವೆ. ನವರಂಗಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಮುಖ್ಯದ್ವಾರವು ಪೂರ್ವಕ್ಕಿದ್ದು ಚಾಳುಕ್ಯರ ಶೈಲಿಯ ಅಲಂಕಾರವಿದೆ. ಇದರ ಲಲಾಟದಲ್ಲಿ ಜಿನಬಿಂಬವಿದೆ. ಆದುದರಿಂದ ಇದು ಮೊದಲು ಜೈನ ಬಸದಿಯಾಗಿತ್ತೆಂದು ಹೇಳಬಹುದಾಗಿದೆ. ಮುಖಮಂಟಪದಲ್ಲಿ ಕಂಬಗಳ ಅಲಂಕಾರವಿದ್ದು ಮಧ್ಯದಲ್ಲಿರುವ ಆರು ಕಂಬಗಳು ಚಾಳುಕ್ಯ ಶೈಲಿಯಲ್ಲಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶಿಖರವಿದೆ.

ಈ ಊರಿನಲ್ಲಿರುವ ಬಸದಿಗಳಲ್ಲಿ ಮುಖ್ಯವಾದುವೆಂದರೆ, ಅನಂತನಾಥ ಬಸದಿ ಮತ್ತು ಶಂಖಜಿನಾಲಯ, ಆದರೆ ಶಾಸನೋಕ್ತವಾಗಿರುವ ತೀರ್ಥಬಸದಿ, ರಾಚಮಲ್ಲ ಬಸದಿ, ಗಂಗ ಕದಂರ್ಪಬಸದಿ, ಜಿನಮಂದಿರ, ಗಂಗ ಪೆರ್ಮಾಡಿ ಚೈತ್ಯಾಲಯ, ಶ್ರೀವಿಜಯ ಬಸದಿ, ಮರುದೇವಿ ಬಸದಿ, ಧವಲಜಿನಾಲಯ, ಗೊಗ್ಗಿಯಬಸದಿ, ಆನೆಸಜ್ಜೆ ಬಸದಿ, ಶಾಂತಿನಾಥ ಬಸದಿ ಮೊದಲಾದ ಹಲವಾರು ಇದ್ದವೆಂದು ತಿಳಿದುಬರುತ್ತದೆ. ಆದರೆ ಯಾವುದೂ ಉಳಿದುಬಂದಿಲ್ಲ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ, ಶಂಖಬಸದಿ. ಈ ಬಸದಿಯನ್ನು ಬಾದಾಮಿ ಚಾಲುಕ್ಯರ ಕಾಲಕ್ಕೂ ಮೊದಲೇ ನಿರ್ಮಿಸಿರಬೇಕೆಂದು ವ್ಯಕ್ತವಾಗುತ್ತದೆ. ಇಮ್ಮಡಿ ಪುಲಿಕೇಶಿಯ ಕಾಲದ ಶಾಸನವು (ಶಂಖಬಸದಿಯ ಗೋಡೆಯ ಮೇಲಿದೆ). ಸೇಂದ್ರವಂಶದ ದುರ್ಗಶಕ್ತಿಯಿಂದ ಶಂಖಜಿನಾಲಯಕ್ಕೆ ಬಿಟ್ಟ ಭೂದಾನವನ್ನು ತಿಳಿಯುತ್ತದೆ. ಈ ಬಸದಿಯು ಪದೇ ಪದೇ ಜೀರ್ಣೋದ್ಧಾರವಾಗಿರುವುದು ವ್ಯಕ್ತವಾಗುತ್ತದೆ. ಇದರಲ್ಲಿ ಗರ್ಭಗೃಹ, ನವರಂಗ ಹಾಗೂ ವಿಶಾಲವಾದ ಮುಖಮಂಟಪವಿದೆ. ಗರ್ಭಗೃಹವು ಚೌಕಾಕಾರವಾದ ತಳವಿನ್ಯಾಸವನ್ನು ಹೊಂದಿದ್ದು ಪ್ರಾಚೀನ ಲಕ್ಷಣವುಳ್ಳ ಜೈನ ಪಾಣಿಪೀಠದ ಮೇಲೆ ಧ್ಯಾನಮುದ್ರೆಯ ಆಸೀನ ನೇಮಿನಾಥ ತೀರ್ಥಂಕರ ವಿಗ್ರಹವನ್ನು ಇತ್ತೀಚೆಗೆ ಅಂದರೆ 1987 ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಬಸದಿಯಲ್ಲಿ ಶಾಂತಿನಾಥ ಪ್ರತಿಷ್ಠಾಪನೆಯಾಗಿರಬಹುದೆಂದು ಸುಲಭವಾಗಿ ಊಹೆ ಮಾಡಬಹುದು. ಶಾಂತಿನಾಥನ ಲಾಂಛನವಾದ ಶಂಖದಿಂದ ಬಸದಿಯ ಹೆಸರು ಶಂಖಬಸದಿಯಾಯಿತೆಂದು ಡಾ|| ಎಸ್. ಶೆಟ್ಟರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಶಾಂತಿನಾಥನ ಲಾಂಛನವು ಕುಂಭ; ಶಂಖವು 22 ನೇ ತೀರ್ಥಂಕರನಾದ ನೇಮಿನಾಥನ ಲಾಂಛನ. ಆದುದರಿಂದ ಶಂಖಲಾಂಛನದಿಂದ ಗರ್ಭಗೃಹದಲ್ಲಿಯ ಜಿನಬಿಂಬವು ನೇಮಿನಾಥನೆಂಬುದು ಸ್ಪಷ್ಟವಾಗಿದೆ. ಇದಕ್ಕೆ ಪೂರಕವಾಗಿ 'ಶಂಖ ಜಿನೋದ್ಭವ' ದ ಕೃತಿಯ ಆರಂಭಕ್ಕೆ ಶಂಖ ಕವಿಯು 'ಶ್ರೀ ನೇಮಿನಾಥಾಯ ನಮಃ' ಎಂದು ಕೃತಿಯನ್ನು ಆರಂಭಿಸಲಾಗಿದೆ. ಇಲ್ಲಿದ್ದ ಪ್ರಾಚೀನ ವಿಗ್ರಹವು ಕಾಣದಾಗಿದೆ. ಈಗ 24 ತೀರ್ಥಂಕರರ ಸನ್ನಿಧಿ ಇದೆ. ಗರ್ಭಗೃಹದ ಬಾಗಿಲುವಾಡದ ಇಕ್ಕೆಲಗಳಲ್ಲಿ ಜ್ವಾಲಾಮಾಲಿನಿ, ವೃಕ್ಷ, ಹಾಗೂ ಇತರ ಯಕ್ಷ ಯಕ್ಷಿಯರ ನಂತರದ ಕಾಲದ ಶಿಲ್ಪಗಳಿವೆ. ನವರಂಗದಲ್ಲಿ ಅಲಂಕೃತವಾದ ಆಕರ್ಷಕ ಚಾಳುಕ್ಯ ಶೈಲಿಯ ಹಾಗೂ ಹಲವು ವೃತ್ತಾಕಾರವಾದ ಕಂಬಗಳು (ಎಲ್ಲಾ ಅವಶೇಷಗಳನ್ನು ಅವೈಜ್ಞಾನಿಕವಾಗಿ ಜೀರ್ಣೋದ್ಧಾರ ಮಾಡುವಾಗ ಉಪಯೋಗಿಸಲಾಗಿದೆ) ಕಂಡು ಬರುತ್ತವೆ. ನವರಂಗದಲ್ಲಿ ಎರಡು ಕೊಠಡಿಗಳಿದ್ದು ಬಲಭಾಗದಲ್ಲಿ ಕೊಠಡಿಯಲ್ಲಿ ಧರಣೇಂದ್ರ ಹಾಗೂ ಪದ್ಮಾವತಿಯರ ವಿಗ್ರಹಗಳನ್ನು ಕಲ್ಯಾಣದ ಚಾಳುಕ್ಯ ಶೈಲಿಯ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಹಾಗೂ ಎಡಭಾಗದಲ್ಲಿ ಆದಿನಾಥ ತೀರ್ಥಂಕರನ ಸ್ಥಾನಿಕ ವಿಗ್ರಹವನ್ನು ಹೊಸ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ನವರಂಗದ ಅಲಂಕೃತ ಬಾಗಿಲುವಾಡದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಇದರ ಮುಂಭಾಗದಲ್ಲಿ 16 ಕಂಬಗಳಿಂದ ಅಲಂಕೃತವಾಗಿರುವ ವಿಶಾಲವಾದ ಮುಖಮಂಟಪವಿದೆ. ಈ ಮುಖಮಂಟಪದಲ್ಲಿ ಎಲ್ಲಾ ಕಂಬಗಳು ಚಾಳುಕ್ಯ ಶೈಲಿಯವಿದ್ದು ನುಣುಪಾಗಿದ್ದು ಆಕರ್ಷಕವಾಗಿದೆ. ಇಲ್ಲಿ ಒಂದು ಪಕ್ಕದಲ್ಲಿ ಎತ್ತರವಾದ ಚೌಕಾಕಾರದ ಪೀಠದ ಮೇಲೆ ರೇಖಾನಾಗರ ಶಿಖರದ ಮಾದರಿಯ ಕಿರು ಗೋಪುರವಿರುವ ಮಂಟಪದಲ್ಲಿ ಕಪ್ಪು ಶಿಲೆಯ ಸಹಸ್ರ ಜಿನಬಿಂಬಗಳಿರುವ ಕಿರು ಸ್ತಂಭದಂಥ ರಚನೆಯಲ್ಲಿ ಸ್ವಲ್ಪ ಎತ್ತರದ ತೀರ್ಥಂಕರರ ಶಿಲ್ಪಗಳನ್ನು ನಾಲ್ಕು ಮುಖಗಳಲ್ಲಿ ಅಳವಡಿಸಲಾಗಿದೆ. ಇದು ಇದೇ ಊರಿನ ಹೊಲದಲ್ಲಿ ಸಿಕ್ಕಪ್ರತಿಮೆಯೆಂದು ಹೇಳುವರು. ಇದು ಚಾಳುಕ್ಯರ ಕಲಾ ಪ್ರಾವೀಣ್ಯತೆಯ ಉತ್ತಮ ಪ್ರತೀಕವಾಗಿದೆ. ಮುಖಮಂಟಪದ ಮೂಲೆಯಲ್ಲಿ ಚೈತ್ಯಾಲಯದ ಮಾದರಿಯನ್ನು ಹೋಲುವ ಶಾಸನ ಶಿಲೆ ಇದೆ; ಹಾಗೂ ಗೋಡೆಯಲ್ಲಿ ಶಿಲಾ ಶಾಸನದ ಕಲ್ಲನ್ನು ಸೇರಿಸಲಾಗಿದೆ. ಈ ಬಸದಿಯ ಹೊರಭಾಗದಲ್ಲಿ ಅದಿಷ್ಠಾನದಲ್ಲಿ ಸುತ್ತುವರಿದಿರುವ ಪಟ್ಟಿಕೆಯಲ್ಲಿ ಹಲವಾರು ಮಿಥುನ ಶಿಲ್ಪಗಳಿದ್ದು ಬಹಳಷ್ಟು ನಾಶವಾಗಿವೆ. ಬಸದಿಯ ಮಹಾದ್ವಾರವು ಚಾಳುಕ್ಯ ಶೈಲಿಯ ವಿಪುಲವಾದ ಅಲಂಕಾರವನ್ನು ಹೊಂದಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಇದರ ಲಲಾಟದಲ್ಲಿ ಚಾಳುಕ್ಯಶೈಲಿಯ ಮುಕ್ಕೊಡೆಯಿರುವ ಜಿನ ಬಿಂಬವಿದೆ. ಗರ್ಭಗೃಹದ ಮೇಲ್ಭಾಗದಲ್ಲಿದ್ದ ಪ್ರಾಚೀನ ದ್ರಾವಿಡ ಶಿಖರವು ಕುಸಿದಿದ್ದು ಈಗ ನವ್ಯ ಶೈಲಿಯಲ್ಲಿ ದುರಸ್ತಿಗೊಳಿಸಲಾಗಿದೆ. ಆದಿಕವಿ ಪಂಪನು ಶಂಖಬಸದಿಯಲ್ಲಿ ತನ್ನ ಬೃಹತ್ ಗ್ರಂಥವಾದ ಆದಿನಾಥ ಪುರಾಣವನ್ನು ರಚಿಸಿದನೆಂದು

ಪ್ರತೀತಿಯಿದೆ. ಈ ಬಸದಿಗೆ ಸಂಬಂಧಪಟ್ಟಂತೆ ಸಮೃದ್ಧಿಯಾದ ಶಾಸನಾಧಾರಗಳಿದ್ದು ಬಾದಾಮಿ ಚಾಲುಕ್ಯರ ಕಾಲದಿಂದ ಆರಂಭವಾಗಿ ವಿಜಯನಗರದ ಕಾಲದವರೆಗೂ ಅವುಗಳ ವ್ಯಾಪ್ತಿ ಇದೆ. ಊರಿನ ಹಳೆಯ ತಾಲೂಕು ಕಛೇರಿ ಹಿಂದೆ ಇರುವ ಶಾಸನವು ಕ್ರಿ.ಶ. 1538 ರಲ್ಲಿ ಶಂಖಬಸದಿಯ ಜೈನರಿಗೂ ಸೋಮನಾಥ ದೇವಾಲಯದ ಶೈವರಿಗೂ ತಲೆದೂರಿದ ವ್ಯಾಜ್ಯವನ್ನು ಜೈನರ ಪರವಾಗಿ ನಿರ್ಣಯಿಸಿದ ಬಗೆಗೆ ಉಲ್ಲೇಖಿಸುತ್ತದೆ.

ಲಕ್ಷ್ಮೇಶ್ವರದಲ್ಲಿರುವ ಇನ್ನೊಂದು ಪ್ರಮುಖ ಬಸದಿ ಎಂದರೆ ಊರಿನ ಮಧ್ಯದಲ್ಲಿರುವ ಅನಂತನಾಥ ಬಸದಿ. ಈ ಬಸದಿಯು ತ್ರಿಕೂಟಾಚಲವಾಗಿದ್ದು ಚಾಲುಕ್ಯ ಶೈಲಿಯ ಸುಂದರ ವಾಸ್ತು ಶಿಲ್ಪವಾಗಿದೆ. ಇದರಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಮಧ್ಯದಲ್ಲಿ ನವರಂಗ ಹಾಗೂ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪವಿದೆ. ಮೂಲ ಗರ್ಭಗೃಹದಲ್ಲಿ ಕಲ್ಯಾಣದ ಚಾಲುಕ್ಯ ಶೈಲಿಯ ಪಾಣಿಪೀಠದ ಮೇಲೆ ಸ್ಥಾನಿಕ ಅನಂತನಾಥ ತೀರ್ಥಂಕರ ವಿಗ್ರಹವಿದ್ದು ಹಿಂಭಾಗದಲ್ಲಿ ಸಾಧಾರಣವಾದ ಪ್ರಭಾವಳಿಯಲ್ಲಿ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಮುಖ್ಯ ಅಂತರಾಳದ ಬಾಗಿಲುವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟವು ಬರಿದಾಗಿದೆ. ಎಡಭಾಗದ ಗರ್ಭಗೃಹದಲ್ಲಿ ಚಾಲುಕ್ಯ ಪಾಣಿಪೀಠದ ಮೇಲೆ ಚಂದ್ರಪ್ರಭ ತೀರ್ಥಂಕರರ ಸಂಸ್ಥಾನಿಕ ವಿಗ್ರಹವಿದ್ದು ಹಿಂಭಾಗದಲ್ಲಿ ಮಕರತೋರಣದಿಂದ ಅಲಂಕೃತವಾದ ಪ್ರಭಾವಳಿಯಿದೆ. ಬಲಭಾಗದ ಗರ್ಭಗೃಹದಲ್ಲಿ ಚಾಲುಕ್ಯಶೈಲಿಯ ಪಾರ್ಶ್ವನಾಥ ಮೂರ್ತಿಯಿದ್ದು ಹಿಂಭಾಗದಲ್ಲಿ ವಿಪುಲವಾದ ಅಲಂಕಾರವಿರುವ ನಾಗ ಪ್ರಭಾವಳಿಯಿದೆ. ಎಲ್ಲಾ ಅಂತರಾಳಗಳ ಬಾಗಿಲುವಾಡಗಳೂ ಅಲಂಕೃತವಾಗಿದ್ದು ಇಕ್ಕಡೆಗಳಲ್ಲಿ ಜಾಲಂದ್ರಗಳನ್ನು ಹೊಂದಿವೆ. ಮಧ್ಯದಲ್ಲಿರುವ ನವರಂಗದಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಸುಂದರ ಕಂಬಗಳು ಆಕರ್ಷಕವಾಗಿವೆ. ಎಡಭಾಗದಲ್ಲಿ ಬ್ರಹ್ಮೇಂದ್ರ ಮತ್ತು ಬಲಭಾಗದಲ್ಲಿ ಪದ್ಮಾವತಿ ಯಕ್ಷಿಯ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಈ ಬಸದಿಯಲ್ಲಿ ಪ್ರಾಚೀನ ಕಾಲದ ಅನೇಕ ಜೈನ ತೀರ್ಥಂಕರರ ಕಂಚಿನ ಪ್ರತಿಮೆಗಳಿವೆ. ಅಲ್ಲದೇ ಇತ್ತೀಚಿನ ಸಂಗಮರಿ ಕಲ್ಲಿನ ಮಹಾವೀರ, ಪಾರ್ಶ್ವನಾಥ ಹಾಗೂ ಇತರ ತೀರ್ಥಂಕರರುಗಳ ವಿಗ್ರಹಗಳಿವೆ. ಊರಿನಲ್ಲಿ ಮಹಂತ ಮಠವಿದ್ದು ಅಲ್ಲಿ ಚಾಲುಕ್ಯ ಶೈಲಿ ಅನೇಕ ಆಕರ್ಷಕ ಬಿಡಿ ಶಿಲ್ಪಗಳನ್ನು ಇಡಲಾಗಿದೆ.

ಈ ಊರಿನ ಮತ್ತೊಂದು ಮಹತ್ವದ ಆಕರ್ಷಕ ವಾಸ್ತುಶಿಲ್ಪವೆಂದರೆ ಪೇಟೆಬಣದಲ್ಲಿರುವ ಆದಿಲ್‌ಷಾಹಿ ಕಾಲದ ಜುಮ್ಮಾ ಮಸೀದಿ. ಬಿಜಾಪುರದ ಎರಡನೇ ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಲಕ್ಷ್ಮೇಶ್ವರದಲ್ಲಿ ಆಡಳಿತಾಧಿಕಾರಿಯಾಗಿದ್ದ ಅಂಕುಶ್ ಖಾನನು ಕ್ರಿ.ಶ. 1617ರಲ್ಲಿ ಈ ಮಸೀದಿಯನ್ನು ನಿರ್ಮಿಸಿದನೆಂದು ದಾಖಲೆಗಳಿವೆ. ಎತ್ತರವಾದ ಕೋಟೆಯ ಬಾಗಿಲಿನಂಥಹ ಮಹಾದ್ವಾರದಿಂದ ಪ್ರವೇಶಿಸಿದರೆ ಎತ್ತರವಾದ ಎರಡು ಮೀನರ್‌ಗಳಿಂದ ಹಾಗೂ ಅರ್ಧಗೋಳಾಕಾರವಾದ ದೊಡ್ಡ ಗೋಪುರದಿಂದ ಇಂಡೋಸಾರ್ಸೇನಿಕ್ ಶೈಲಿಯ ವಾಸ್ತು ರಚನೆಯನ್ನು ಮೈತಳೆದಿರುವ ಭವ್ಯ ಕಟ್ಟಡವಾಗಿದೆ. ವಿಶಾಲವಾದ ಪ್ರಾರ್ಥನಾ ಮಂದಿರವಿದ್ದು ಛಾವಣಿಯಲ್ಲಿ ಷಟ್‌ಕೋನಾಕಾರವಾದ ಅಂಕಣಗಳಿದ್ದು ಇವುಗಳ ಆಳವಾದ ಭುವನೇಶ್ವರಿಯ ಮಾದರಿಯನ್ನು ಹೋಲುವ ಅಲಂಕಾರವು ಚಿತ್ತಾಕರ್ಷಕವಾಗಿವೆ. ಛಾವಣಿಯ ಮುಂಭಾಗದಲ್ಲಿರುವ ಛಜ್ಜಾ ಕೋನಗಳಿಂದ ಜೋತು ಬಿಡಲಾಗಿರುವ ದ್ರಾವಿಡ ಶೈಲಿಯ ಅನುಕರಣೆಯಾದ ಕಲ್ಲಿನ ಸರಪಳಿಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಮೇಲ್ಭಾಗದಲ್ಲಿರುವ ಗುಮ್ಮಟದ ತಳದಿಂದ ಮೇಲೇಳುವ ಕಮಲದ ದಳಗಳ ಅಲಂಕಾರವಿದೆ. ಮೀನಾರ್‌ಗಳೂ ಸಹಾ ಕೋನಾಕಾರದಲ್ಲಿ ಎತ್ತರವಾಗಿದ್ದು ಅವುಗಳಲ್ಲಿ ಕಮಾನಿನಾಕಾರದ ಕಿಟಕಿಗಳ ರಚನೆಯಿದೆ. ಗುಮ್ಮಟದ ಒಳಭಾಗದಲ್ಲಿ ಕುಸರಿ ಕೆಲಸ ಹೂಬಳ್ಳಿಗಳ ಅಲಂಕಾರವಿದೆ. ಈ ಸುಂದರ ಮಸೀದಿಯನ್ನು ರಾಜ್ಯ ಪುರಾತತ್ವ ಹಾಗೂ ವಸ್ತು ಸಂಗ್ರಹಾಲಯ ಇಲಾಖೆಯವರು ಸಂರಕ್ಷಿಸಿರುತ್ತಾರೆ. ಈ ಊರಿನಲ್ಲಿರುವ ಇತರ ಮಸೀದಿಗಳೆಂದರೆ ಮುನ್ಸಿಪಲ್ ಕಛೇರಿ ಮುಂದಿರುವ ಬಳ್ಳಾರಿ ಮಸೀದಿ, ಪೇಟೆ ಬಣದಲ್ಲಿ ಇರುವ ಪೀರನ್ ಕಲಿ ಮಸೀದಿ, ದೇಸಾಯಿ ಬಣದಲ್ಲಿರುವ ಸಿದ್ದಿ ಮಸೀದಿ ಮತ್ತು ಹಳೆ ಅಸಾರ್ ಮಸೀದಿ ಹಾಗೂ ಪುಲಿಗೆರೆ ಬಣದಲ್ಲಿರುವ ಮೊಮ್ಮಗ್ಗಿರಿ ಮಸೀದಿ. ಊರಲ್ಲಿರುವ ಎರಡು ದರ್ಗಾಗಳೆಂದರೆ ದೂದ್ ಪೀರಾ ದರ್ಗಾ ಮತ್ತು ಮಲ್ಲಿಕ್‌ಸಾದತ್ ದರ್ಗಾ. ಮೊದಲ ದರ್ಗಾದಲ್ಲಿ ಶವ್ವಾಲ್ ತಿಂಗಳಲ್ಲಿ ಉರುಸ್ ನಡೆಯುತ್ತದೆ; ಮತ್ತು ಎರಡನೇ ದರ್ಗಾದಲ್ಲಿ ಬಕ್ರೀದ್ ತಿಂಗಳಲ್ಲಿ ಉರುಸ್ ನಡೆಯುತ್ತದೆ.

**ವಾಸನ :** (ನರಗುಂದ ತಾ: ಜನಸಂಖ್ಯೆ : 1,241) ನರಗುಂದದಿಂದ ಈಶಾನ್ಯಕ್ಕೆ 22 ಕಿಮೀ ದೂರದಲ್ಲಿ ಕೊಣ್ಣೂರಿನಿಂದ ವಾಯುವ್ಯಕ್ಕೆ ಎರಡು ಕಿಮೀ ದೂರದಲ್ಲಿ ಮಲಪ್ರಭಾ ದಂಡೆಯ ಮೇಲಿದ್ದ ಈ ಊರು ಇಂದು ಒಳನಾಡಿಗೆ ಸ್ಥಳಾಂತರಗೊಂಡಿದ್ದು, ಹಳೆ ವಾಸನ ಹಾಳು ಬಿದ್ದು, ಮುಳ್ಳುಕಂಟಿ ಬೆಳೆದು ನಿಂತಿದೆ. 1980 ರ ದಶಕದಲ್ಲಿ ಇಲ್ಲಿ ನಡೆಸಿದ ಉತ್ಖನನದಲ್ಲಿ ಶಾತವಾಹನರ ಕಾಲದ ಶಾಸನ, ದೇವಾಲಯದ ತಳಪಾಯ ಹಾಗೂ ಮೂರ್ತಿಗಳು ಲಭಿಸಿವೆ. ಶೈವ ದೇವಾಲಯವೊಂದನ್ನು ಪ್ರಸ್ತಾಪಿಸುವ ಈ

ಶಾಸನದಿಂದ ಕ್ರಿ.ಶ. ಎರಡನೇ ಶತಮಾನದ ಅತ್ಯಂತ ಪ್ರಾಚೀನ ದೇವಾಲಯವಿದೆಂಬ ಹೆಗ್ಗಳಿಕೆ ವಾಸನಾದಲ್ಲಿ ಲಭಿಸಿರುವ ಇಟ್ಟಿಗೆ ಕಟ್ಟಡ ರಚನೆಗೆ ಸಲ್ಲುತ್ತದೆ. ಮೇಲಾಗಿ ಇದು ಪೂರ್ವೇತಿಹಾಸವನ್ನು ಹೊಂದಿರುವ ನೆಲೆ ಎಂಬ ಅಂಶವನ್ನೂ ಇಲ್ಲೇ ಲಭಿಸಿರುವ ಸುಮಾರು 3000 ವರ್ಷಗಳಷ್ಟು ಹಳೆಯದಾದ ವೃತ್ತಾಕಾರದ ಕಲ್ಲು ಸಮಾಧಿಗಳು ಸೂಚಿಸುತ್ತವೆ.

ಹೊಸ ವಾಸನದಲ್ಲಿಯ ಮನೆಯೊಂದರ ಮುಂದೆ ಸುಮಾರು ಕ್ರಿಶ. 12 ನೇ ಶತಮಾನದ ಅಲಂಕಾರಿಕ ಕಿರುಶಿಖರ ಮಾದರಿ ಶಿಲ್ಪವೊಂದು ಬಿದ್ದಿದೆ. ಇಲ್ಲಿರುವ ಶರಣ ಬಸವೇಶ್ವರ, ಎಸವಣ್ಣ, ಗಣಪತಿ, ಹನುಮಂತ ಹಾಗೂ ದ್ಯಾಮವ್ವನ ಗುಡಿಗಳು ಇತ್ತೀಚಿನದಾಗಿವೆ.

**ವೆಂಕಟಾಪುರ :** (ಗದಗ ತಾಲೂಕಿನ ವೆಂಕಟಾಪುರವು) ಗದಗಿನಿಂದ ವಾಯುವ್ಯಕ್ಕೆ 16 ಕಿ.ಮೀ ದೂರದಲ್ಲಿ ಗುಡ್ಡದ ಮೇಲೆ ನೈಸರ್ಗಿಕ ಪರಿಸರದಲ್ಲಿರುವ ಒಂದು ಪವಿತ್ರ ಕ್ಷೇತ್ರವಾಗಿದೆ. ಸ್ಥಳಪುರಾಣದ ಪ್ರಕಾರ ಸೊರಟೂರು ಗ್ರಾಮದಲ್ಲಿದ್ದ ವೆಂಕಪ್ಪಯ್ಯ ದೇಸಾಯರ ಕುಲದೇವತೆ ತಿರುಪತಿ ವೆಂಕಟೇಶನಾಗಿದ್ದುದ್ದರಿಂದ ಪ್ರತೀವರ್ಷ ತಿರುಪತಿಗೆ ಹೋಗಿಬರುವ ಅಭ್ಯಾಸವಿಟ್ಟುಕೊಂಡಿದ್ದು, ವೃದ್ಧಾಪ್ಯದಲ್ಲಿ ಅಲ್ಲಿಗೆ ಹೋಗಲು ಸಾಧ್ಯವಾಗದೆ ವೆಂಕಟಾಪುರದಲ್ಲಿ ಈ ದೇವಾಲಯವನ್ನು ನಿರ್ಮಿಸಿದರೆಂದು ಪ್ರತೀತಿಯಿದೆ. ಬಾದಾಮಿ ತಾಲೂಕಿನ ಅನಂತ ಶಾಸ್ತ್ರಿಗಳೆಂಬುವರು ಬ್ರಹ್ಮಚೈತನ್ಯರನ್ನು ಕಂಡು ಗುರುಗಳನ್ನಾಗಿ ಮಾಡಿಕೊಂಡು ಬ್ರಹ್ಮಾನಂದರೆಂದು ನಾಮಾಭಿದಾನ ಹೊಂದಿದರು. ಬ್ರಹ್ಮಾನಂದರು ಈ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ನೆರವಾಗಿರುವರು ಹಾಗೂ ದೇವಾಲಯದ ದೈನಂದಿನ ಅನ್ನದಾನ, ನಂದಾದೀಪ ನಿತ್ಯಪೂಜೆಗಾಗಿ ಹಲವು ದತ್ತಿಗಳನ್ನು ಬಿಟ್ಟರೆಂದು ಪ್ರತೀತಿಯಿದೆ. ಈ ದೇವಾಲಯವು ಆಧುನಿಕ ಕಟ್ಟಡವನ್ನು ಹೊಂದಿದ್ದು ಸುಮಾರು 150 ವರ್ಷಗಳ ಹಿಂದೆ ನಿರ್ಮಿಸಿದರೆಂದು ಹೇಳಲಾಗುತ್ತದೆ. ಗರ್ಭಗೃಹದಲ್ಲಿ ವೆಂಕಟೇಶನ (ಹೆಚ್ಚು ಎತ್ತರವಿಲ್ಲದ) ಸ್ಥಾನಿಕ ಮೂರ್ತಿಯಿದ್ದು ಇದರ ಪಕ್ಕದಲ್ಲೇ ಅಮ್ಮನವರ (ಲಕ್ಷ್ಮಿ) ಆಸೀನ ವಿಗ್ರಹವೂ ಇದೆ. ಈ ಗರ್ಭಗೃಹದ ಮೇಲ್ಭಾಗದಲ್ಲಿ ಆಧುನಿಕ ಶೈಲಿಯ ಗೋಪುರವಿದೆ. ಮುಂಭಾಗದಲ್ಲಿ ವಿಶಾಲವಾದ ಮಂಟಪವಿದೆ. ದೇವಾಲಯದ ಸುತ್ತಲೂ ದೊಡ್ಡದಾದ ಒಳಪ್ರಾಕಾರವಿದೆ. ಮುಖ್ಯ ದೇವಾಲಯದ ಈಶಾನ್ಯಕ್ಕೆ ಗೋಶಾಲೆ ಮತ್ತು ಉತ್ತರಕ್ಕೆ ಒಂದು ಬಂಡೆಗಲ್ಲಿನ ಗವಿಯಲ್ಲಿ ಚಿಕ್ಕಗುಡಿಯನ್ನು ಬ್ರಹ್ಮಾನಂದರು ಕಟ್ಟಿಸಿದರು. ಮಹಾದ್ವಾರದ ಎದುರಿಗೆ ವರಾಹ ಮಂದಿರವಿದ್ದು ಅದರ ಮುಂಭಾಗದಲ್ಲಿ ಅವರು ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಿ ಅದರ ಕೆಳಗೆ ನೆಲಮನೆಯನ್ನು ಕಟ್ಟಿಸಿ, ಅದನ್ನು ತಮ್ಮ ದೈನಂದಿನ ಪೂಜಾ ಅನುಷ್ಠಾನಕ್ಕೆ ಉಪಯೋಗಿಸುತ್ತಿದ್ದರು. ಈ ದೇವಾಲಯದ ಮಹಾದ್ವಾರವನ್ನು ಕ್ರಿ.ಶ. 1885 ರಲ್ಲಿ ಶಿರಹಟ್ಟಿಯ ಸಖೂಬಾಯಿ ಜೋಗಳೇಕರ ಎಂಬ ಭಕ್ತಳು ನಿರ್ಮಿಸಿದಳೆಂದು ಪ್ರತೀತಿಯಿದೆ.

ಈ ದೇವಾಲಯದಲ್ಲಿ ಭಾಗವತ ಸಂಪ್ರದಾಯದ ಪೂಜಾರಿಗಳು ವೈಖಾನಸ ಆಗಮದ ರೀತಿಯಲ್ಲಿ ದೇವರ ಕೈಂಕರ್ಯಗಳನ್ನು ನಡೆಸುತ್ತಾರೆ. ನವರಾತ್ರಿಯ ಪಂಚಮಿಯ ದಿನ ಕಲ್ಯಾಣೋತ್ಸವ ಹಾಗೂ ವಿಜಯದಶಮಿಯ ದಿನ ವೆಂಕಟೇಶ ದೇವರ ರಥೋತ್ಸವವು ನೆರವೇರುತ್ತದೆ. ವೈಶಾಖಶುದ್ಧ ದಶಮಿಯಂದು ಸಾಮೂಹಿಕ ಕಲ್ಯಾಣೋತ್ಸವವು ಜರುಗುತ್ತದೆ. ದೇವಾಲಯದ ವಹಿವಾಟನ್ನು ಖಾಸಗಿ ಸಮಿತಿಯೊಂದು ನೋಡಿಕೊಳ್ಳುತ್ತದೆ. ದೇವಾಲಯದ ಹಿಂಭಾಗದಲ್ಲಿ ಒಂದು ಮರದ ಕೆಳಗೆ ರಾಷ್ಟ್ರಕೂಟ ಅಮೋಘವರ್ಷನ ಶಾಸನವಿದ್ದು (ಕ್ರಿ.ಶ. 907) ಚಂದ್ರ ತೇಜಭಟಾರರಿಗೆ (ಜೈನ ಗುರು ?) ಬಿಟ್ಟ ಭೂ ದಾನವನ್ನು ದಾಖಲಿಸುತ್ತದೆ. ಗದುಗಿಗೆ ಸಮೀಪವಿರುವ ವೆಂಕಟಾಪುರ ಕ್ಷೇತ್ರಕ್ಕೆ ಗದಗಿನಿಂದ ಹಾಗೂ ಲಕ್ಷ್ಮೇಶ್ವರದಿಂದ ಸರಕಾರಿ ಬಸ್ಸಿನ ಸೌಲಭ್ಯವಿದೆ. ಈ ಊರಿನ ಸಮೀಪವಿರುವ ನಾರಾಯಣಪುರದಲ್ಲಿ ಪ್ರಸಿದ್ಧ ಕಾವ್ಯ ಪ್ರಭುಲಿಂಗಲೀಲೆ ರಚಿಸಿದ ಚಾಮರಸನು ನೆಲೆಸಿದ್ದನೆಂದು ಪ್ರತೀತಿಯಿದೆ.

**ಶ್ಯಾಬಾಳ :** (ಶಿಗ್ಗಾವಿ ತಾಲೂಕಿನ ಶ್ಯಾಬಾಳವು) (ಜನಸಂಖ್ಯೆ : 524) ಪ್ರಾಚೀನ ಶಾಸನಗಳಲ್ಲಿ 'ಶಂಬೊಳಲು' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಶಿಗ್ಗಾಂವಿಯಿಂದ ನೈರುತ್ಯಕ್ಕೆ 15 ಕಿಮೀ ದೂರದಲ್ಲಿದೆ. ಹಿಂದೆ ಇದು ಪಾನುಂಗಲ್ಲು-500 ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿದ್ದು, ರಾಮಲಿಂಗ ಗುಡಿ ಮುಂದಿರುವ ಆರನೇ ವಿಕ್ರಮಾದಿತ್ಯನ ಕಾಲದ ಕ್ರಿ.ಶ. 1112 ರ ಶಾಸನ ಪಡೆವಳ ದೇವರಸನು ನೀಡಿದ ಸುಂಕದಾನಗಳ ಬಗ್ಗೆ ಹೇಳಿದರೆ, ಕ್ರಿ.ಶ. 1115 ರ ಶಾಸನ ಶಂಬೊಳಲ ಬಸವಗೌಂಡನು ಕಲಿದೇವ ಹಾಗೂ ಬಸವೇಶ್ವರ ದೇವರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನ ಪೆರ್ಗಡೆ ಬಸವಗೌಡಾದಿಗಳು ಶಂಬೊಳಲ ದಾಸೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಮತ್ತೊಂದು ಶಾಸನ ಮಲ್ಲದೇವರಸಾದಿಗಳು ತೈಲೇಶ್ವರ ಹಾಗೂ ರಾಜಗುರು ತೇಜೋನಿಧಿ ದೇವರಿಗೆ ಶಂಬೊಳಲ ಗೌಡಿಕೆಯನ್ನು

ಕೊಟ್ಟ ಅಂಶವನ್ನು ತಿಳಿಸುತ್ತದೆ. ಆದರೆ ಮೇಲಿನ ಶಾಸನೋಕ್ತ ಗುಡಿಗಳಿಂದು ಶಿಥಿಲಾವಸ್ಥೆಯಲ್ಲಿವೆ. ಊರ ಹೊರಗಿರುವ ರಾಮಲಿಂಗದೇವರ ಗುಡಿ ಶಾಸನೋಕ್ತ ದಾಸೇಶ್ವರ ಗುಡಿಯಾಗಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡ ದ್ವಿಶಾಖೆಯನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಗುಡಿಯ ಮುಂದೆ ಸುಂದರವಾದ ಕಿರಣಸ್ತಂಭವಿದೆ. ಈ ಗುಡಿಯ ಆವರಣದಲ್ಲಿರುವ ಏಳು ವೀರಗಲ್ಲುಗಳಲ್ಲಿ, ಎರಡರಲ್ಲಿ ಮಾತ್ರ ಶಾಸನವಿದ್ದು ಇವು 1247 ರಲ್ಲಿ ಜರುಗಿದ ಯುದ್ಧದಲ್ಲಿ ಮಡಿದ ವೀರರ ಸ್ಮಾರಕಗಳಾಗಿವೆ. ಇವುಗಳಲ್ಲಿ ಹುಲಿಬೇಟೆ ವೀರಗಲ್ಲು ಬಹಳ ಆಕರ್ಷಕವಾಗಿದೆ. ಊರ ನಡುವೆ ಗರ್ಭಗೃಹವಷ್ಟೆ ಉಳಿದಿರುವ ಪ್ರಾಚೀನ ಗುಡಿಯಿದ್ದು (ಮೈಲಾರ ಗುಡಿ) ಇದನ್ನು ಶಾಸನೋಕ್ತ ತೈಲೇಶ್ವರ ಗುಡಿಯೆಂದು ಊಹಿಸಬೇಕೆಂದು ತೋರುತ್ತದೆ. ಗುಡಿಯಲ್ಲಿಂದು ಮೈಲಾರನ ಮೂರ್ತಿಯಿದೆ. ಊರ ಹೊರಗೆ ಜೀರ್ಣಾವಸ್ಥೆಯಲ್ಲಿರುವ ಕಲ್ಲಪ್ಪನ ಗುಡಿಯನ್ನು ಶಾಸನೋಕ್ತ ಕಲಿದೇವ-ಬಸವೇಶ್ವರ ಗುಡಿಯೊಂದಿಗೆ ಗುರುತಿಸಬಹುದಾಗಿದೆ. ಮೂಲತಃ ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದ್ದ ಈ ಗುಡಿಯ ಗರ್ಭಗೃಹ ಹಾಗೂ ಅರ್ಧಮಂಟಪದ ಭಾಗವಷ್ಟೆ ಇಂದು ಉಳಿದಿದೆ. ಈ ಗರ್ಭಗೃಹವು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರುವುದೊಂದು ಗಮನಾರ್ಹ ಅಂಶವಾಗಿದೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ ದ್ಯಾಮವ್ವ ಮುಂತಾದ ದೇವತೆಗಳ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಶಿಗ್ಗಾಂವಿ :** ತಾಲೂಕು ಕೇಂದ್ರವಾದ ಶಿಗ್ಗಾಂವಿಯ (ಜನಸಂಖ್ಯೆ : 10,120) ಪ್ರಾಚೀನ ಶಾಸನಗಳಲ್ಲಿ 'ಸಿಗ್ಗಾಮೆ', 'ಸಿಗ್ಗಾಮಿ' ಎಂದೇ ಉಲ್ಲೇಖಿತವಾಗಿದೆ. ಧಾರವಾಡದಿಂದ ಆಗ್ನೇಯಕ್ಕೆ 65 ಕಿ.ಮೀ ದೂರದಲ್ಲಿ ಬೆಂಗಳೂರು-ಪುಣೆ ರಸ್ತೆಯಲ್ಲಿ ಈ ಊರಿದೆ. ಇತ್ತೀಚೆಗೆ ಶಿಗ್ಗಾಂವಿಯ ಪಶ್ಚಿಮದಲ್ಲಿ ಇಟ್ಟಿಗೆಯ ಕಟ್ಟಡದ ಗೋಡೆ ಹಾಗು ಅವಶೇಷಗಳು, ಬ್ರಾಹ್ಮಿಲಿಪಿಯುಳ್ಳ ಕೆಲವು ನಾಣ್ಯಗಳು ಲಭಿಸಿದ್ದು ಇವುಗಳು ಶಾತವಾಹನರ ಕಾಲದ್ದೆಂದು ಡಾ.ಆರ್.ಎಂ. ಷಡಕ್ಷರಯ್ಯ ಅಭಿಪ್ರಾಯ ಪಡುತ್ತಾರೆ. ಇವು ಶಿಗ್ಗಾಂವಿಯ ಪ್ರಾಚೀನತೆಯನ್ನು ಕ್ರಿ.ಶ. ಎರಡನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಲು ನೆರವಾಗುತ್ತವೆ. ಹಿಂದೆ ಇದು ಪುಲಿಗೆರೆ-300 ಕ್ಕೆ ಸೇರಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ 17 ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ 7-8 ಶಾಸನಗಳು ನೆರೆಯ ಬಂಕಾಪುರ ಮುಂತಾದ ಸ್ಥಳಗಳಿಂದ ತಂದವುಗಳಾಗಿದ್ದರೆ (ಈಗ ತಾಲೂಕು ಕಚೇರಿ ಬಳಿ ಇವೆ) ಬಾದಾಮಿ ಚಾಳುಕ್ಯ ಅರಸ ವಿಜಯಾದಿತ್ಯನ ಕಾಲದ 707 ರ ತಾಮ್ರಶಾಸನ ಲಕ್ಷ್ಮೇಶ್ವರಕ್ಕೆ ಸಂಬಂಧಿಸಿದ್ದು, ಉಳಿದ ಶಾಸನಗಳು ಮಾತ್ರ ಶಿಗ್ಗಾಂವಿಗೆ ಸಂಬಂಧಿಸಿದ ಶಾಸನಗಳಾಗಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ ತಾಮ್ರ ಶಾಸನ ಚಾಳುಕ್ಯ ರಾಜಪುತ್ರಿ ಕುಂಕಮಮಹಾದೇವಿ ಪುಲಿಗೆರೆ (ಲಕ್ಷ್ಮೇಶ್ವರ)ಯಲ್ಲಿ ನಿರ್ಮಿಸಿದ ಆನೆಸಜ್ಜೆ ಬಸದಿಗೆ ಗುಡ್ಡಿಗೆರೆ (ಗುಡಗೇರಿ) ಗ್ರಾಮವನ್ನು ದಾನವಾಗಿ ಕೊಡಿಸಿದ ವಿಷಯವನ್ನು ತಿಳಿಸಿದರೆ, ಒಂದನೇಯ ಅಮೋಘವರ್ಷನ ಕಾಲಕ್ಕೆ ಸೇರಿದ ಮೂರು ಶಾಸನಗಳಲ್ಲಿ ಎರಡು ಶಿಗ್ಗಾಂವಿಯ ನೆರೆಯ ಗ್ರಾಮಗಳಾದ ಮಂತ್ರೋಡಿ ಹಾಗೂ ನಿಡಗುಂದಿ ಗ್ರಾಮಗಳಿಗೆ ಸಂಬಂಧಿಸಿದ್ದು, ಉಳಿದೊಂದು ಸಿಗ್ಗಾಮೆ (ಶಿಗ್ಗಾಂವಿ)ಯ ಕಲ್ಕೆರೆತಿ ಭಟಾರೆಗೆ ಅಲ್ಲಿಯ ಕಳ್ವವಳ್ಳದೆರೆಯನ್ನು ಕುಪ್ಪೆಯರಸನ ಪೂರ್ವಾನುಮತಿಯೊಂದಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಒಂದನೇ ಸೋಮೇಶ್ವರನ ಕಾಲಕ್ಕೆ ಸೇರಿದ ಶಾಸನವು ಬಂಕಾಪುರದ ಕಡಂಬೇಶ್ವರ ದೇವರಿಗೆ, ಮಹಾಮಂಡಳೇಶ್ವರ ಹರಿಕೇಸರಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ.1108 ರ ಶಾಸನ ನಿಡಗುಂದಿಯ ಮೂಲಸ್ಥಾನ ದೇವರಿಗೆ ದಾನ ಬಿಟ್ಟ ಅಂಶವನ್ನು ಹೇಳುತ್ತದೆ. ಶಿಗ್ಗಾಂವಿ ಹುಲಗೂರು ಹೊರವಲಯ ರಸ್ತೆಯಲ್ಲಿರುವ ಕಲ್ಮೇಶ್ವರ (ಮಲ್ಲಿಕಾರ್ಜುನ) ದೇವಾಲಯದ ಬಳಿಯಿರುವ ಯಾದವ ರಾಮಚಂದ್ರನ ಕಾಲಕ್ಕೆ ಸೇರಿದ ಕ್ರಿ.ಶ. 1290 ರ ಶಾಸನ ಗೋಯಿದೇವ ಕಲ್ಲಿನಾಥ ದೇವರಿಗೆ ದಾನಬಿಟ್ಟ ವಿಷಯ ತಿಳಿಸುತ್ತದೆ. ಕಲ್ಮೇಶ್ವರ ಗುಡಿ ಮುಂದಿರುವ ನಿಷಿಧಿ ಶಾಸನ ದೇಸಿಯಗಣದ ಬಾಳಚಂದ್ರ ದೇವರ ಶಿಷ್ಯನ ಸಮಾಧಿ ಮರಣದ ಬಗ್ಗೆ ತಿಳಿಸುತ್ತದೆ. ಮೇಲಿನ ಶಾಸನೋಕ್ತ ಗುಡಿಗಳಾದ ಕಲ್ಕೆರೆತಿ ಬಟರಿ, ಹಾಗೂ ಕಲಿನಾಥ ದೇವಾಲಯಗಳಲ್ಲಿ ಊರ ಹೊರ ವಲಯದ ಹುಲಗೂರು ರಸ್ತೆಯಲ್ಲಿ ಶಿಥಿಲಾವಸ್ಥೆಯಲ್ಲಿ ಕಲ್ಮೇಶ್ವರ (ಮಲ್ಲಿಕಾರ್ಜುನ) ಗುಡಿಯಷ್ಟೆ ಉಳಿದಿದ್ದು ಇನ್ನೊಂದು ಬಹುಶಃ ದುರ್ಗಾ (ಭಟರಿ) ಗುಡಿಯಾಗಿದ್ದು ಗುರುತಿಸಲು ಆಗುತ್ತಿಲ್ಲ.

ಊರ ಹೊರಗಿರುವ ಮಲ್ಲಿಕಾರ್ಜುನ (ಕಲ್ಮೇಶ್ವರ) ಗುಡಿ ಮಣ್ಣಿನ ದಿಬ್ಬದಿಂದ ಭಾಗಶಃ ಮುಚ್ಚಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ ಹಾಗೂ ತೆರೆದ ಅರ್ಧಮಂಟಪವನ್ನುಳ್ಳ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಮುಂಬದಿಯಲ್ಲಿ ಸಪ್ತಮಾತೃಕಾ ಹಾಗೂ ಉಮಾ ಮಹೇಶ್ವರಿ ಶಿಲ್ಪಗಳಿವೆ. ರಾಷ್ಟ್ರಕೂಟರ ಕಾಲದ ಕಲಿನಾಥ ದೇವರು ಇದೇ ಇರಬೇಕೆಂದು ತೋರುತ್ತದೆ. ಊರ ಹಿರೇಕೆರೆ ಬಳಿಯಿರುವ ಈಶ್ವರ ಗುಡಿಯೂ ಕೂಡ ಹಾಳಾಗಿದ್ದು ಗರ್ಭಗೃಹ ಹಾಗೂ ಅರ್ಧಮಂಟಪವಿದೆ. ಇದರ ಬಳಿಯಲ್ಲೇ

ಮಹಿಷಮರ್ದಿನಿಯ ಭಗ್ನ ಶಿಲ್ಪವಿದೆ. ಕಾಲೇಜಿನ ಹಿಂಬದಿಯಲ್ಲಿ ಸಮಾಧಿಯೊಂದರ ಮೇಲಿರುವ ಬರಹ ಅಸಿಸ್ಟೆಂಟ್ ಇಂಜನಿಯರ್ ಆಗಿದ್ದ ಬಾಂಬೆಯ ಎಡ್ಮಂಡ್ ಕ್ಷಾಮಪರಿಹಾರ ಕಾರ್ಯದಲ್ಲಿ ತೊಡಗಿದ್ದಾಗ 1877 ರ ಏಪ್ರಿಲ್ 26 ರಂದು ಕಾಲರಾಕ್ಕೆ ಬಲಿಯಾಗಿ ಶಿಗ್ಗಾಂವಿಯಲ್ಲಿ ಮರಣ ಹೊಂದಿದನೆಂದು ತಿಳಿಸುತ್ತದೆ. ಇವುಗಳೊಂದಿಗೆ ಊರಲ್ಲಿ ಮಾಲತೇಶ, ಬಸವಣ್ಣ, ಆಂಜನೇಯ, ಈಶ್ವರ, ಮೈಲಾರ, ವೀರಭದ್ರ, ಅಂಭಾಭವಾನಿ ಹಾಗೂ ದ್ಯಾಮವ್ವನ ಗುಡಿಗಳಿದ್ದು, ವಿರಕ್ತಮಠ ಹಾಗೂ ನಾಗರಬಾವಿ ಮಠಗಳಿವೆ. ಮೂರು ಮಸೀದಿ ಹಾಗೂ ಒಂದು ದರ್ಗಾ ಕೂಡ ಇದೆ. **ನಾಗನೂರು :** (ಬೇಚರಾಕ್) ಶಿಗ್ಗಾಂವಿಯಿಂದ ಪಶ್ಚಿಮಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿ ಹಳಿಯಾಳ ರಸ್ತೆಯಲ್ಲಿ ಹೊಲಮಾಳದ ನಡುವೆ ಇದೆ. ಇದರ ಪಾಳು ನಿವೇಶನದಲ್ಲಿ ರಾಷ್ಟ್ರಕೂಟರ ಕಾಲದ ಇಟ್ಟಿಗೆಯ ರಚನೆಯಿಂದ ಕೂಡಿದ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗವಿರುವ ಸೋಮಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಸುತ್ತ ಮಣ್ಣ ದಿಬ್ಬವನ್ನು ನಿರ್ಮಿಸಿದ್ದಾರೆ. ಕೆರೆಯ ಬಳಿಯೇ ಇರುವ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗಜಲಕ್ಷ್ಮಿ ಕೆತ್ತನೆ ಇರುವ ತ್ರಿಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದೆ. ತೆರೆದ ಅರ್ಧಮಂಟಪದಲ್ಲಿ ಸುಂದರವಾದ ಚಂದ್ರಶಿಲೆಯಿದೆ. ನವರಂಗದಲ್ಲಿ ಗಣಪತಿ, ಮೈಲಾರ ಹಾಗೂ ಮಾಳಚಿಯರ ಕಿರು ಶಿಲ್ಪಗಳಿವೆ. ಸುಮಾರು ಕ್ರಿ.ಶ. 10 ನೇ ಶತಮಾನದ ರಚನೆಯಾಗಿರಬಹುದಾದ ಈ ಗುಡಿ ಇಂದು ಶಿಥಿಲಾವಸ್ಥೆಯಲ್ಲಿದೆ. ಈ ಗುಡಿಯ ಹಿಂಭಾಗದಲ್ಲಿ ರಾಷ್ಟ್ರಕೂಟ ಕನ್ನರನ ಕಾಲಕ್ಕೆ ಸೇರಿದ ಮೂರು ವೀರಗಲ್ಲು ಶಾಸನಗಳಿದ್ದು ಗೊಗ್ರಹಣದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕಗಳಾಗಿವೆ. ಈ ಊರಿನ ನಿವಾಸಿಗಳು ಶಿಗ್ಗಾಂವಿಗೆ ವಲಸೆ ಬಂದಿರುವುದರಿಂದ ಈ ಊರು ಶಿಗ್ಗಾಂವಿ ಸೀಮೆಗೆ ಸೇರಿಹೋಗಿದೆ. ಗಂಗಿ ಬಾವಿ ಸುಕ್ಷೇತ್ರವು ಹಳಿಯಾಳ ರಸ್ತೆಯಲ್ಲಿ ಶಿಗ್ಗಾಂವಿಯಿಂದ ಪಶ್ಚಿಮಕ್ಕೆ ಸುಮಾರು ಆರು ಕಿ.ಮೀ. ದೂರದಲ್ಲಿದ್ದ ಎಡ್ಲಬಾದ್ (ಬೇಚರಾಕ್) ನಲ್ಲಿರುವ ಪವಿತ್ರಬಾವಿಯೊಂದನ್ನು ಗಂಗೀಬಾವಿ ಎಂದು ಕರೆಯುತ್ತಾರೆ. ಇದು ಸುಂದರ ಆವರಣದೊಳಗಿರುವ ತಟಾಕವಾಗಿದ್ದು ಇದರ ಆವರಣದಲ್ಲಿ ಎರಡು ಗುಡಿಗಳೂ ಇವೆ. ಸುತ್ತ ಗುಡ್ಡಗಾಡು ಹಾಗೂ ನಡುವೆ ಇರುವ ಬಾವಿಯ ಬಳಿಯಲ್ಲೇ ಇರುವ ರಾಮಲಿಂಗೇಶ್ವರ ಗುಡಿ ಈ ಸ್ಥಳದ ಆಕರ್ಷಣೆಯನ್ನು ಹೆಚ್ಚಿಸಿದ್ದು ಇದು ಒಳ್ಳೆಯ ವಿಹಾರತಾಣವಾಗಿದೆ. ಇಲ್ಲಿನ ರಾಮಲಿಂಗೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡದ ತ್ರಿಶಾಖಾಲಂಕೃತವಾಗಿದೆ. ನವರಂಗಕ್ಕೆ ರಾಷ್ಟ್ರಕೂಟ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದ ವಿವಿಧ ಶೈಲಿಯ ಬಹಳ ಸುಂದರವಾದ ಕಂಬಗಳನ್ನು ಬಳಸಲಾಗಿದೆ. ಈ ಗುಡಿಯ ಬಳಿಯಲ್ಲೇ ಇರುವ ಗುಡ್ಡದಲ್ಲಿ ಹಲವಾರು ಗವಿಗಳಿವೆ. ಇತ್ತೀಚೆಗೆ ಒಂದು ದಿಬ್ಬದ ಮೇಲೆ ನಿರ್ಮಾಣಗೊಂಡಿರುವ ರೇಣುಕಾಚಾರ್ಯರ ಮಠದಲ್ಲಿ ಪಂಚಪೀಠಾಧಿಪತಿಗಳ ಸುಂದರ ಶಿಲ್ಪಗಳಿವೆ. ಇವುಗಳನ್ನು ಮಾಡಿರುವ ಶಿಲ್ಪಿ ಕಲಾದಗಿಯ ಎಂ.ಆರ್. ಬಡಿಗೇರ್ ಆಗಿದ್ದಾರೆ. ಇಲ್ಲಿ ಸಂಕ್ರಮಣದಂದು ಜರುಗುವ ಜಾತ್ರೆಯಲ್ಲಿ ಪಾಲ್ಗೊಳ್ಳಲು ಸಾವಿರಾರು ಜನ ನಾನಾ ಕಡೆಗಳಿಂದ ಬಂದು ಸೇರುತ್ತಾರೆ. ಸುಂದರ ಪ್ರಕೃತಿಯ ಮಡಿಲಲ್ಲಿರುವ ಗಂಗೀಬಾವಿ ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದ ಪುಣ್ಯಕ್ಷೇತ್ರವಾಗಿದೆ. ಶಿಗ್ಗಾಂವಿಯಿಂದ 10 ಕಿ.ಮೀ. ವಾಯುವ್ಯಕ್ಕೆ ಇರುವ ಮಳಲಿಕ್ಷೇತ್ರವು ಶಾಸನಗಳಲ್ಲಿ 'ಮಡಿಲೆ' ಎಂದೇ ಉಲ್ಲೇಖಿತವಾಗಿದೆ. ಇಲ್ಲಿನ ಏಕೈಕ ಶಾಸನ ಕಲಿದೇವಸ್ವಾಮಿಗೆ ನೀಡಿದ ದಾನದ ವಿಚಾರ ತಿಳಿಸುತ್ತದೆ. ಶಾಸನೋಕ್ತ ಕಲಿದೇವರ ದೇವಾಲಯವೇ ಈಗಿನ ಕಲ್ಲೇಶ್ವರವಾಗಿ ಯಾತ್ರಾಸ್ಥಳವಾಗಿದೆ.

**ಶಿಡೇನೂರು :** ಬ್ಯಾಡಗಿ ತಾಲೂಕಿನ ಶಿಡೇನೂರು (ಜನಸಂಖ್ಯೆ : 4,602) ಪ್ರಾಚೀನ ಶಾಸನಗಳಲ್ಲಿ 'ಸಿಡಿಯನೂರು' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ಬ್ಯಾಡಗಿಯಿಂದ ನೈರುತ್ಯಕ್ಕೆ ಐದು ಕಿ.ಮೀ ದೂರದಲ್ಲಿ ಕೋಡ ರಸ್ತೆಯಲ್ಲಿದೆ. ಹಿಂದೆ ಇದು ಬನವಾಸಿ-12000 ಕ್ಕೆ ಸೇರಿದ ಸಾತ್ತಳಿಗೆ-70 ಕಂಪಣದಲ್ಲಿದ್ದು, ಇಲ್ಲಿಂದ ಈವರೆಗೆ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ ಹಾಗೂ ನಂತರದ ಕಾಲದ ಎಂಟು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಬಾದಾಮಿ ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ವೀರಗಲ್ಲು ಸಿಂಗವಡ್ಡಗಿ ರಾಪಮ್ಮನು ಸಿರಿವಾಳ (ಸಿರಿವಾಗಿಲ) ಮಾಡಿದನೆಂದು ಹೇಳಿದರೆ, ಇಮ್ಮಡಿ ಕೀರ್ತಿವರ್ಮನ ಕಾಲಕ್ಕೆ ಸೇರಿದ ಶಾಸನ ಚಾಲುಕ್ಯ ರಾಜ್ಯ ಕೆಡುವಾಗ ದೋಸಿ ಹಾಗೂ ಪೊಗಿಲ್ಲಿಯರು ಹೋರಾಡುತ್ತ ಮಡಿದ ವಿಷಯವನ್ನು ಬಹುಶಃ ತಿಳಿಸುವಂತೆ ತೋರುತ್ತದೆ. ಕಲ್ಲೇಶ್ವರ ಗುಡಿ ಬಳಿಯಿರುವ ರಾಷ್ಟ್ರಕೂಟ ಅರಸು ಧ್ರುವ (780-793) ನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನ ಮಾರಕ್ಕರಸನು ಬನವಾಸಿ-12,000 ಆಳುತ್ತಿದ್ದು, ಬಿನಯತಿ ಅಬ್ಬೆ (ವಿನಯತಿ ಅಬ್ಬೆ) ಊರನ್ನು (ಶಿಡೇನೂರು) ಆಳುತ್ತಿದ್ದಾಗ, ನಡೆದ ಕಾಳಗದಲ್ಲಿ ಮಡಿದ ವೀರರ ಸಲುವಾಗಿ ನಿಲ್ಲಿಸಿದ ಸ್ಮಾರಕವಾದರೆ, ಕಲ್ಯಾಣದ ಚಾಲುಕ್ಯ ಅರಸ ಇಮ್ಮಡಿ ಜಯಸಿಂಹನ ಕಾಲದ ಕ್ರಿ.ಶ. 1015 ರ ಶಾಸನ ಕಾಟಿಮಯ್ಯನು ಬನವಾಸಿ-12,000 ಆಳುವಾಗ, ವಾವಣರಸಯ್ಯನು ಸಾತ್ತಳಿಗೆ-70 ಆಳುತ್ತಿದ್ದಾಗ ಪೆರ್ಗಡೆ ಚಾವುಂಡಯ್ಯನು ಮೂಲಸ್ಥಾನದ ಕಲಿದೇವರ ಗುಡಿ ನಿರ್ಮಿಸಲು ಊರ ಹಲವಾರು ಗೌಡರು ಈ ದೇವರಿಗೆ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಇಲ್ಲಿನ ಶಾಸನೋಕ್ತ ಮೂಲಸ್ಥಾನದ ಕಲಿದೇವರು ಕೆರೆವಾಡ ಕತ್ತರಿ ಬಳಿಯಿರುವ ಇಂದಿನ ಕಲ್ಲೇಶ್ವರ

ಗುಡಿಯಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿ, ತ್ರಿಕೂಟಾಚಲವಾಗಿದ್ದು, ಎತ್ತರವಾದ ಸ್ಥಳದಲ್ಲಿದೆ. ಪ್ರಧಾನ ಗರ್ಭಗೃಹಕ್ಕಷ್ಟೆ ಅಂತರಾಳವಿದ್ದು ಉಳಿದೆರಡು ಗರ್ಭಗೃಹಗಳಿಗೆ ಅಂತರಾಳವಿಲ್ಲ. ಮೂರು ಗರ್ಭಗೃಹಗಳಿಗೂ ಸೇರಿದಂತೆ ಒಂದೇ ನವರಂಗವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉಳಿದೆರಡರಲ್ಲೊಂದರಲ್ಲಿ ವಿಜಯನಗರ ಕಾಲದ ವೀರಭದ್ರನ ಮೂರ್ತಿಯಿದ್ದು, ಮತ್ತೊಂದು ಖಾಲಿಯಿದೆ. ನವರಂಗದಲ್ಲಿರುವ ಮೂರು ದೇವಕೋಷ್ಠಗಳಲ್ಲಿ ಕ್ರಮವಾಗಿ ಸಪ್ತಮಾತೃಕಾ, ದೇವಿ ಹಾಗೂ ಗಣಪತಿಯ ಶಿಲ್ಪಗಳಿವೆ. ನವರಂಗದಲ್ಲಿ ಮೂರು ಮಾದರಿಯ ಕಂಬಗಳಿದ್ದು, ನಡುವಣ ಛತ್ತಿನಲ್ಲಿ ಪಂಚದಳದ ಕಮಲವಿದೆ. ಪ್ರಧಾನ ಗರ್ಭಗೃಹಕ್ಕೆ ಕದಂಬನಾಗರ ಶಿಖರವಿದೆ. ಈ ಪರಿಸರದಲ್ಲೇ ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಕಾಲದ ಬೃಹತ್ತಾದ ಮೂರು ವೀರಗಲ್ಲುಗಳಿದ್ದು ಒಂದರಲ್ಲಿ ಪಂಚಮಂಗಳ ಚಿಹ್ನೆಗಳಿವೆ. ವೀರಮಾಸ್ತಿಕಲ್ಲು ಹಾಗೂ ಕುಮಾರ ರಾಮನ ಶಿಲ್ಪ (?) ಗಳಿವೆ. ಇದರ ಬಳಿಯಲ್ಲೇ ಒಂದು ಹೊಲದಲ್ಲಿ 'ಕೋಣನ ತಲೆ' ಶಿಲ್ಪವಿದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ದ್ಯಾಮವ್ವ ಹಾಗೂ ದುರ್ಗವ್ವ ಮುಂತಾದ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಶಿರಹಟ್ಟಿ** : ತಾಲೂಕು ಕೇಂದ್ರವಾದ ಶಿರಹಟ್ಟಿಯು (ಜನಸಂಖ್ಯೆ : 7,696) ಧಾರವಾಡದಿಂದ ಆಗ್ನೇಯಕ್ಕೆ ಸುಮಾರು 89 ಕಿ.ಮೀ. ದೂರದಲ್ಲಿದೆ. ಶಿರಹಟ್ಟಿಯ ಪ್ರಾಚೀನ ಹೆಸರು 'ಶಿರಹಪುರ', ವಿಜಾಪುರದ ಸುಲ್ತಾನರ ಕಾಲದಲ್ಲಿ ಇದು ಲಕ್ಷ್ಮೇಶ್ವರ ಉಪಭಾಗದಲ್ಲೊಂದು ಭಾಗವಾಗಿತ್ತು. ವಿಜಾಪುರ ಸುಲ್ತಾನರ ಆಳ್ವಿಕೆಯಲ್ಲಿ ಜಹಗೀರಾಗಿ ಸ್ವಲ್ಪ ಕಾಲ ಅಂಕುಶಖಾನನ ಕೈಯಲ್ಲಿತ್ತು. ನಂತರದಲ್ಲಿ, ಇದನ್ನು ಲಕ್ಷ್ಮೇಶ್ವರದೊಂದಿಗೆ ಖಾನಗೌಡ ಎಂಬ ಶಿರಹಟ್ಟಿ ದೇಸಾಯಿಯು 1607 ರಲ್ಲಿ ದೇಶಗತಿಯಾಗಿ ಪಡೆದನು. 1686 ರ ನಂತರ, ಶಿರಹಟ್ಟಿ ದೇಸಾಯಿ, ಸವಣೂರ ನವಾಬನೊಂದಿಗೆ ಸಂಧಾನ ಮಾಡಿಕೊಂಡನು. 1756 ರಲ್ಲಿ ಸವಣೂರು ನವಾಬನು ತನ್ನ ಸಂಸ್ಥಾನವನ್ನು ಮರಾಠಾ ಪೇಶ್ವೆಗಳಿಗೆ ಒಪ್ಪಿಸಿದಾಗಲೂ ಶಿರಹಟ್ಟಿ ದೇಸಾಯಿಗಳು ಮುಂದುವರಿದರು. ಮುಂದೆ ಪೇಶ್ವೆ ಸವಣೂರು ಸಂಸ್ಥಾನವನ್ನು, ಪಟವರ್ಧನ ಮನೆತನಕ್ಕೆ ಜಾಹಗೀರಾಗಿ ಕೊಟ್ಟನು. ಇದನ್ನು 1801 ರಲ್ಲಿ ವಿಭಜಿಸಿದಾಗ ಶಿರಹಟ್ಟಿ ಸಾಂಗ್ಲಿ ಸಂಸ್ಥಾನದ ಪಾಲಾಗಿ ಬಾಹುಸಾಹೇಬ್ ಲಾಗು ಎಂಬಾತನ ಆಳ್ವಿಕೆಯನ್ನು ಪಡೆಯಿತು. ಇಲ್ಲೊಂದು ಪುರಸಭೆ 1878 ರಲ್ಲಿ ಪ್ರಾರಂಭವಾಯಿತು. ಸ್ವಾತಂತ್ರ್ಯನಂತರ ಧಾರವಾಡ ಜಿಲ್ಲೆಗೆ ಸೇರಿ ಒಂದು ತಾಲೂಕಾಗಿ ರಚನೆಗೊಂಡಿತು. ಅಂಕುಶಖಾನ್ ಅಥವಾ ಖಾನಗೌಡ ನಿರ್ಮಿಸಿದರೆಂದು ಹೇಳುವ ಶಿರಹಟ್ಟಿಯ ಶಿಥಿಲವಾದ ಕೋಟೆ 19ಅಡಿ ಎತ್ತರ 19ಅಡಿ ದಪ್ಪವಿದ್ದು, 15 ಬುರುಜುಗಳನ್ನು ಹೊಂದಿದ್ದವಂತೆ. ಅವ್ವಲಿಂಗವ್ವನ ಮಠ ಹಾಗೂ ಫಕೀರ ಸ್ವಾಮಿಮಠಗಳು ವೀಕ್ಷಣಾ ಯೋಗ್ಯವಾದ ಸ್ಥಳಗಳಾಗಿವೆ. ಅವ್ವ ಲಿಂಗವ್ವನ ಮಠವು ಅಲಂಕಾರದಿಂದ ಕೂಡಿದ, ಸುಮಾರು 300 ವರ್ಷಗಳಿಗೂ ಪ್ರಾಚೀನವಾದ ಆಕರ್ಷಕ ಕಲ್ಲುಕಟ್ಟಡವಾಗಿದೆ. ಈ ಮಠವನ್ನು ಲಕ್ಷ್ಮೇಶ್ವರ ದೇಶಗತಿಯ ಸಂಸ್ಥಾಪಕಿಯಾದ ಅವ್ವಲಿಂಗವ್ವೆಯ ಸಮಾಧಿಗೆಂದೇ ನಿರ್ಮಿಸಿದರೂ, ಅವಳ ಶವವನ್ನಲ್ಲಿ ಹೂಳಲಿಲ್ಲವೆಂದು ಸ್ಥಳೀಕರು ಹೇಳುತ್ತಾರೆ. ಅವ್ವಿಗವ್ವೆ ಮಠದ ದ್ವಾರಬಂಧ ಆಕರ್ಷಕ ಕೆತ್ತನೆಯನ್ನು ಹೊಂದಿದೆ. ಇಲ್ಲಿನ ಮತ್ತೊಂದು ಆಕರ್ಷಣೆಯೆಂದರೆ ಫಕೀರ ಸ್ವಾಮಿ ಮಠ. ಸುಮಾರು 300 ವರ್ಷಗಳಷ್ಟು ಪ್ರಾಚೀನವಾದ ಈ ಮಠ ಫಕೀರ ಚನ್ನವೀರಸ್ವಾಮಿಯವರಿಗೆ ದಾನ ಬಿಟ್ಟ ವಿಷಯವನ್ನು ಮಠದಲ್ಲೇ ಇರುವ ಒಂದು ಶಾಸನ ಹೇಳಿದರೆ, ಇನ್ನೊಂದು ಶಾಸನ ಕಲಕೇರಿಯ ಚಿನ್ನಪ್ಪನಿಗೆ ಗೌಡನ ತಮ್ಮನು ಸೋಗಿವಾಳ ಗ್ರಾಮದ ಅರ್ಧಭಾಗವನ್ನು ಮಾರಿದ ಅಂಶವನ್ನು ತಿಳಿಸುತ್ತದೆ. ಈ ಮಠದಲ್ಲಿ ಆರು ಮಂದಿ ಸ್ವಾಮಿಗಳ ಸಮಾಧಿಗಳಿವೆ. ಊರಲ್ಲಿರುವ ಇತರ ಗುಡಿಗಳೆಂದರೆ ಲಕ್ಷ್ಮೀನಾರಾಯಣ, ಮಹಾದೇವ, ಮಾರುತಿ, ಗಣೇಶ, ಬೀರಪ್ಪ ಹಾಗೂ ದುರ್ಗಾ ಮಂದಿರಗಳಾಗಿವೆ. ಊರಲ್ಲಿ ಮೂರು ಮಸೀದಿ ಹಾಗೂ ಮಹಬೂಬು ಸುಬಾನಿಯ ದರ್ಗಾವಿದೆ. ಫಕೀರಸ್ವಾಮಿ ಮಠದ ಜಾತ್ರೆ ಮೇ ತಿಂಗಳಲ್ಲಿ ಜರುಗುತ್ತಿದ್ದು ಆ ಸಂದರ್ಭದಲ್ಲಿ ದನಗಳ ದೊಡ್ಡ ಜಾತ್ರೆಯೇ ನಡೆಯುತ್ತದೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ಬೇಂದ್ರೆಯವರ ಹುಟ್ಟೂರು ಇದಾಗಿದೆ.

**ಶಿರೂರು** : ಮುಂಡರಗಿ ತಾಲೂಕಿನ ಹಳ್ಳಿಯಾದ ಶಿರೂರು (ಜನಸಂಖ್ಯೆ : 1,130) ಮುಂಡರಗಿಯಿಂದ ವಾಯುವ್ಯಕ್ಕೆ 20 ಕಿ.ಮೀ. ದೂರದಲ್ಲಿ ಹಾಗೂ ಗದುಗಿನಿಂದ ಆಗ್ನೇಯಕ್ಕೂ 20 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಸಿರಿವೂರು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಮಾಸವಾಡಿ-140 ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಲುಕ್ಯ ಹಾಗೂ ಯಾದವ ಅರಸರಿಗೆ ಸೇರಿದ ಆರು ಶಾಸನಗಳು ವರದಿಯಾಗಿದೆ. ಇವುಗಳಲ್ಲಿ ಬ್ರಹ್ಮದೇವರ ಗುಡಿ- ಬಾಗಿಲವಾಡದ ಮೇಲಿರುವ ಕ್ರಿ.ಶ. 1042 ಶಾಸನ ಒಂದನೆಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಕುಂಚವಡುಗ ದಾಸಯ್ಯನು ಸಿರಿವೂರದ ಸಿರಿವಾಗಿಲ ನಿರ್ಮಿಸಿ ದಾನ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. 1048 ರಲ್ಲಿ ಮಹಾಸಾವಂತದಾಸರಸನು ಸಿರಿವೂರನ್ನಾಳುತ್ತಿರುವಾಗ ಆಯ್ಚ ಹಾಗೂ ನಾಗದೇವ

ಗೌಡರು ಮಠದಲ್ಲಿದ್ದ ಯತಿಗಳಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮಳಗೇಶ್ವರ (ಮಹಾಬಲೇಶ್ವರ) ಗುಡಿ ಎದುರಿನ ಯಾದವ ರಾಮಚಂದ್ರನ ಕ್ರಿ.ಶ. 1291 ರ ಶಾಸನ ಸ್ವಯಂಭೂಲಿಂಗಕ್ಕೆ ನಾಯಕನೊಬ್ಬ ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಉಳಿದ ಶಾಸನಗಳು ಹೆಚ್ಚಿನ ವಿವರ ನೀಡುವುದಿಲ್ಲ, ಮೇಲಾಗಿ ಬಹಳ ಹಾಳಾಗಿವೆ. ಊರ ಹೊರಗೆ ಎತ್ತರವಾದ ದಿನ್ನೆಯ ಮೇಲೆ ಪೂರ್ಣ ಶಿಥಿಲಗೊಂಡಿರುವ ಪ್ರಾಚೀನ ರಾಮಲಿಂಗೇಶ್ವರ ಗುಡಿಯಿದೆ. ಈಗ ಗರ್ಭಗೃಹ ಮಾತ್ರ ಉಳಿದಿದ್ದು, ಅದರಲ್ಲಿ ಶಿವಲಿಂಗ ಹಾಗೂ ನಂದಿಗಳಿವೆ. ಊರ ಹೊರಗೆ ಹೊಲದಲ್ಲಿ ಎತ್ತರವಾದ ದಿನ್ನೆಯ ಮೇಲೆ ಸಿದ್ದೇಶ್ವರ ಗುಡಿಯಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದ ಈ ಗುಡಿಯಿಂದು ಪೂರ್ಣ ಶಿಥಿಲಗೊಂಡು ಗರ್ಭಗೃಹವಷ್ಟೆ ಉಳಿದಿದೆ. ಗರ್ಭಗೃಹದಲ್ಲಿ ಬಲಹರಿ ಲಿಂಗವಿದ್ದು, ಹೊರಗೆ ಬಲಕ್ಕೆ ಮಕರ ಪ್ರಣಾಳವಿದೆ. ಗರ್ಭಗೃಹ ಹಾಗೂ ಅಂತರಾಳದ ಭಾಗ ಅದಿಷ್ಠಾನ ಭಾಗ ಮಾತ್ರ ಉಳಿದಿದ್ದು, ಹಲವಾರು ಹಿಂಚಾಚು ಮುಂಚಾಚು ಕೋನಗಳಿಂದ ಕೂಡಿದ್ದು ಇದು ಆಕರ್ಷಕವಾಗಿದೆ.

ಊರ ಹೊರವಲಯದಲ್ಲೇ ಇರುವ ಮತ್ತೊಂದು ಗುಡಿ ಎಂದರೆ ಮಹಾಬಲೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯಲ್ಲಿ ಕೇವಲ ಗರ್ಭಗುಡಿ ಹಾಗೂ ಅಂತರಾಳಗಳು ಮಾತ್ರ ಉಳಿದಿದ್ದು ಗರ್ಭಗುಡಿ ಎದುರಿಗೆ ಇತ್ತೀಚೆಗೆ ನಂದಿಗುಡಿಯನ್ನು ನಿರ್ಮಿಸಿದ್ದಾರೆ. ಅಲ್ಲೇ ಇರುವ ಕ್ರಿ.ಶ. 1291 ರ ಶಾಸನವೊಂದು ಇದನ್ನು ಸ್ವಯಂಭೂಲಿಂಗ ದೇವಾಲಯವೆಂದು ಕರೆದಿದೆ. ಅಂತರಾಳದ ಬಾಗಿಲವಾಡದಲ್ಲಿ ಗಜಲಕ್ಷ್ಮಿಯಿದೆ. ಗರ್ಭಗೃಹವನ್ನು ಕದಂಬ ನಾಗರ ಶಿಖರ ಅಲಂಕರಿಸಿದೆ. ಈ ಗುಡಿಯ ಮುಂದೆ ರಾಷ್ಟ್ರಕೂಟರ ಕಾಲದ ಕಂಬ (10 ನೇ ಶತಮಾನದ) ವೀರಗಲ್ಲು, ಶಾಸನಕಲ್ಲು, ಸಪ್ತಮಾತೃಕಾ ಪಟ್ಟಿಕೆ, ಮಹಿಷಮರ್ದಿನಿ, ತೀರ್ಥಂಕರ ಹಾಗೂ ಕಿರಣಸ್ತಂಭಗಳ ಭಗ್ನಾವಶೇಷಗಳಿವೆ. ತೋರಣಗಲ್ಲು ಬ್ರಹ್ಮೇಶ್ವರ ಗುಡಿ ಬಳಿ ತೋರಣಗಲ್ಲಿನ ಮೇಲಿನ ಶಾಸನಗಳು ಸಿರಿಯೂರ ಸಿರಿವಾಗಿಲ ನಿರ್ಮಾಣದ ಬಗ್ಗೆ ಹೇಳುತ್ತಿದ್ದು, ಅವೇ ಸಿರಿವಾಗಿಲ ತೋರಣಗಳಾಗಿವೆ. ಊರ ದಕ್ಷಿಣದಲ್ಲಿ ಕೃಷ್ಣನ ದೇವಾಲಯವಿದೆ. ಹಾಳಾದ ಗುಡಿಯ ಅವಶೇಷಗಳನ್ನೇ ಬಳಸಿ ಜೀರ್ಣೋದ್ಧಾರ ಮಾಡಿರುವ ಈ ಗುಡಿಯೂ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ನವರಂಗವನ್ನಷ್ಟೆ ಎತ್ತರದ ವೇದಿಕೆಯ ಮೇಲೆ ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ಐದಡಿ ಎತ್ತರದ ಕೃಷ್ಣನ ಸುಂದರವಾದ ಶಿಲ್ಪವನ್ನು ಚಿತ್ತಾಕರ್ಷಕ ಆಭರಣಗಳಿಂದ ಅಲಂಕರಿಸಲಾಗಿದ್ದು, ಈ ಮೂರ್ತಿಯ ಗರುಡಪೀಠವೂ ಅಷ್ಟೇ ಚೆನ್ನಾಗಿದೆ. ಗರ್ಭಗೃಹದ ಬಾಗಿಲವಾಡವು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದು ಚಿತ್ತಾಕರ್ಷಕ ಕೆತ್ತನೆಯಿಂದ ಕೂಡಿದ ಚತುರ್ಶಾಖಲಂಕಾರವನ್ನು ಹೊಂದಿದ್ದರೆ, ನವರಂಗದ ಬಾಗಿಲವಾಡಗಳು ಪಂಚಶಾಖಾಲಂಕಾರದಿಂದ ಕೂಡಿದ ಗಜಲಕ್ಷ್ಮಿಯನ್ನು ಹೊಂದಿದ್ದು, ಆಕರ್ಷಕವಾಗಿವೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯ ಕಂಬಗಳಾಗಿವೆ. ದೇವಾಲಯದ ಹೊರಭಿತ್ತಿ ಸರಳವಾಗಿದ್ದು, ಕಪೋತ ಭಾಗದಲ್ಲಿ ರಾಷ್ಟ್ರಕೂಟ ಕಂಬಗಳನ್ನು ಹೊಂದಿರುವ ಕಿರು ಮಂಟಪದಲ್ಲಿ ವೈವಿಧ್ಯತೆಯಿಂದ ಕೂಡಿದ ಮಿಥುನ ಶಿಲ್ಪಗಳು ನಾಲ್ಕಾರು ಸಂಖ್ಯೆಯಲ್ಲಿವೆ. ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿರುವ 'ಬಗಲ ಮೇಲೆ ಹಾಕ್ಕೊಂಡು ಹೊಂಟ' ಎಂಬ ನುಡಿಗಟ್ಟಿನಿಲ್ಲಿ ಶಬ್ದಶಃ ಕಂಡರಿಸಿರುವುದನ್ನು ನೋಡಬಹುದಾಗಿದೆ. ಶಾಸನಗಳ ಹಿನ್ನೆಲೆಯಲ್ಲಿ ಇಲ್ಲಿ ದೇವಾಲಯಗಳ ಅಧ್ಯಯನವಾಗಬೇಕಾಗಿದೆ. ಕ್ಷೇತ್ರ ಕಾರ್ಯದಲ್ಲಿ ಗಮನಿಸಿದ ಅಂಶಗಳ ಆಧಾರದ ಮೇಲೆ ಇದು ಶೈವ, ಜೈನ, ಕೇಂದ್ರವಾಗಿ ಮಹತ್ವದ ಸ್ಥಾನ ಪಡೆದಿದ್ದ ಚಿತ್ರ ಕಣ್ಮುಂದೆ ಮೂಡುತ್ತದೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ಈಶ್ವರ, ಕನಕವ್ವ, ದುರ್ಗವ್ವ ಹಾಗೂ ದ್ಯಾಮಪ್ಪನ ಗುಡಿಗಳು, ಧರ್ಮರ ಮಠ, ತೋಂಟದ ಸ್ವಾಮಿ ಮಠ ಹಾಗೂ ಚಂದ್ರಪ್ಪಜ್ಜನ ಮಠಗಳೂ ಇದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಶಿಶುನಾಳ :** ಶಿಗ್ಗಾಂವಿ ತಾಲೂಕಿನ ಶಿಶುನಾಳವು (ಜನಸಂಖ್ಯೆ : 2,609) ಶಿಗ್ಗಾಂವಿಯಿಂದ 15 ಕಿ.ಮೀ. ದೂರದಲ್ಲಿದ್ದು ಕರ್ನಾಟಕದ ಕಬೀರರೆಂದೇ ಪ್ರಖ್ಯಾತರಾದ ಷರೀಫರಿಂದ ಪ್ರಸಿದ್ಧವಾಗಿದೆ. ಕವಿ ಷರೀಫರು (1819-89) ಮೂಲತಃ ಶಿಶುನಾಳದವರು. ಇವರ ಗುರುಗಳಾದ ಗೋವಿಂದ ಭಟ್ಟರು ನೆರೆಯ ಕಳಸದವರು. ಷರೀಫರ ಮನೆ ಹಾಗೂ ಸಮಾಧಿಗಳೆರಡು ಶಿಶುನಾಳದಲ್ಲಿವೆ. ಶಿಶುನಾಳರ ಸಮಾಧಿಯ ಎದುರು ನಿರ್ಮಾಣಗೊಂಡಿರುವ ಶಿಶುನಾಳರ ಸ್ಮಾರಕವು ಬಹಳ ಆಕರ್ಷಕವಾಗಿದ್ದು ಅದರ ಶಿಖರ ಚಿತ್ತಾಕರ್ಷಕವಾದ ಸರ್ವ ಧರ್ಮ ದೇವತಾ ಮೂರ್ತಿಗಳಿಂದ ಕೂಡಿದ್ದು ಭವ್ಯವಾಗಿದೆ. ಇವರ ಗುರುಗಳಾದ ಕಳಸದ ಗೋವಿಂದಜ್ಜನವರ ಚಿತಾಭಸ್ಮವಿರುವ ಸಮಾಧಿಯೂ ಕೂಡ ಇಲ್ಲೇ ಇದೆ. ಗುರುಗಳಾದ ಗೋವಿಂದ ಭಟ್ಟರ ದೊಡ್ಡ ಮಂದಿರ ಸಿದ್ಧವಾಗುತ್ತಿದೆ. 'ಶಿಶುನಾಳಧೀಶ' ಎಂದು ಶರೀಫರು ತಮ್ಮ ಲಾವಣಿ ನೀತಿ ಪದಗಳಲ್ಲಿ ಬಳಸಿರುವ ಈಶ ಶಿಶುನಾಳ ಗ್ರಾಮದ ಅಧಿದೇವತೆಯಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ನಡುವೆ ಸ್ತಂಭದ ಮೇಲಿರುವ ನಂದಿಯೇ (ಬಯಲು ಬಸವಣ್ಣ) ಆ ದೇವರಾಗಿದ್ದು,

ನಂದಿಸ್ತಂಭದ ಮೇಲೆ ಶಾಸನವಿದೆಯೆಂಬ ಅಭಿಪ್ರಾಯವಿದೆ. ಸುಮಾರು ಕ್ರಿ.ಶ. 12-13 ನೇ ಶತಮಾನದ ಈ ಶಾಸನ ಬಹಳ ಹಾಳಾಗಿದ್ದು, ಭೋಗನಾಥ ಹಾಗೂ ಮಲ್ಲಿನಾಥದೇವರಿಗೆ ಬಿಟ್ಟ ಭೂದಾನದ ಬಗ್ಗೆ ತಿಳಿಸುತ್ತದೆ. ಪ್ರತಿ ಅಮಾವಾಸ್ಯೆ ಹಾಗೂ ಶ್ರಾವಣಮಾಸದಲ್ಲಿ ಗದ್ದುಗೆಗೆ ವಿಶೇಷ ಪೂಜೆ ನಡೆಯುತ್ತದೆ. ಪಾಲ್ಗುಣ ಶುದ್ಧ ದಶಮಿಯಿಂದ ಎರಡು ದಿನಗಳ ಕಾಲ ದೊಡ್ಡ ಜಾತ್ರೆಯಾಗುತ್ತದೆ. **ಕಳಸ** (ಕುಂದಗೋಳ ತಾ।।, ಜನಸಂ : 5,464) ಕುಂದಗೋಳದಿಂದ ಆಗ್ನೇಯಕ್ಕೆ 38 ಕಿ.ಮೀ. ಹಾಗೂ ಶಿಶುವಿನಹಾಳದಿಂದ ಪೂರ್ವಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಈ ಊರು ಶಿಶುನಾಳ ಶರೀಫರ ಗುರುಗಳಾದ ಗೋವಿಂದಭಟ್ಟರ ಊರಾದ ಕಾರಣ ಬಹಳ ಪ್ರಸಿದ್ಧಿಯಲ್ಲಿದೆ. ಗೋವಿಂದಜ್ಜನ ಸಮಾಧಿಯ ಮೇಲೆ ಗುಡಿಯನ್ನು ಕಟ್ಟಿದ್ದು ಸುಂದರವಾದ ಶಿಖರವನ್ನು ಹೊಂದಿದೆ. ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ಎರಡು ಪೂರ್ಣ ಹಾಳಾಗಿದ್ದರೆ, ಉಳಿದವುಗಳಿಂದ ಲಭಿಸುವ ವಿವರವೂ ಅತ್ಯಲ್ಪವೇ. ಇವುಗಳಲ್ಲಿ ರಾಷ್ಟ್ರಕೂಟ ಚಕ್ರವರ್ತಿ ನಾಲ್ಕನೆಯ ಗೋವಿಂದನ ಕಾಲದ ಕ್ರಿ.ಶ. 930ರ ಶಾಸನ ರೇವದಾಸ ಹಾಗೂ ವೀಸೋತ್ತರ ದೀಕ್ಷಿತರಿಗೆ ದಾನ ಬಿಟ್ಟ ವಿಷಯ ತಿಳಿಸಿದರೆ, ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಗದೇಕಮಲ್ಲನ ಕಾಲದ ಶಾಸನ - ಗಡಹದ ಯೋಗೇಶ್ವರ ದೇವರಿಗೆ ಇನ್ನೂರ್ವರು ನೀಡಿದ ದಾನದ ಬಗ್ಗೆ ಹೇಳುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲದ ಶಾಸನ ಕಾಡಿಯೂರ ಇನ್ನೂರ್ವರನ್ನು ಉಲ್ಲೇಖಿಸುತ್ತದೆ. ಇದರಿಂದ ಕಳಸದ ಪ್ರಾಚೀನ ಹೆಸರು 'ಕಾಡಿಯೂರು' ಎಂದಿದ್ದು ಇನ್ನೂರು ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿತ್ತೆಂದು ಅನುಮಾನಿಸಬೇಕಾಗುತ್ತದೆ.

**ಶೇಷಗಿರಿ** : ಹಾನಗಲ್ ತಾಲೂಕಿನ ಶೇಷಗಿರಿಯು (ಜನಸಂಖ್ಯೆ : 1,203) ಪ್ರಾಚೀನ ಶಾಸನಗಳಲ್ಲಿ 'ಹತ್ತಿಗುಂದ' ಎಂದು ಉಲ್ಲೇಖಿತಗೊಂಡಿರುವ ಊರು. ಇದು ಹಾನಗಲ್‌ನಿಂದ ಆಗ್ನೇಯಕ್ಕೆ 27 ಕಿ.ಮೀ. ದೂರದಲ್ಲಿ, ತಿಳವಳ್ಳಿಯಿಂದ ವಾಯುವ್ಯಕ್ಕೆ ಸುಮಾರು ಹತ್ತು ಕಿ.ಮೀ. ದೂರದಲ್ಲಿ, ಧರ್ಮಾನದಿಯ ದಂಡೆಯ ಮೇಲಿದೆ. ಹಿಂದೆ ಇದು ಪಾನುಂಗಲ್-500 ರ ಕಂಪಣ ಎಡೆವೊಳಲು- 70ರಲ್ಲಿತ್ತು. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಊರ ಹೊರಗೆ ಹೊಲದಲ್ಲಿರುವ ರಾಮಲಿಂಗ ಗುಡಿ ಮುಂದಿರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಶಾಸನ ಸಿಂಗರಸನು ಹಾನಗಲ್-500 ಆಳುತ್ತಿದ್ದಾಗ ಮಂತಿಸೆಟ್ಟಿ ಹಾಗೂ ಅವನ ಮಡದಿಯರಾದ ಮಾಚಿಕಬ್ಬೆ ಹಾಗೂ ಅಸಗಿಕಬ್ಬೆಯರು ಹತ್ತಿಗುಂದದಲ್ಲಿ ರೇವೇಶ್ವರ ಲಿಂಗವನ್ನು ಸ್ಥಾಪಿಸಿ ಗೊಮ್ಮಟಾಚಾರ್ಯರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತಿದ್ದು ಶಾಸನೋಕ್ತ ರೇವೇಶ್ವರದ ಇಂದಿನ ರಾಮಲಿಂಗ ಗುಡಿಯಾಗಿದೆ. ಹನುಮಂತನ ಗುಡಿಯ ಮುಂದಿನ ದೀಪಸ್ತಂಭದ ಮೇಲಿರುವ ಕ್ರಿ.ಶ. 1814 ರ ಶಾಸನ ನರೇಗಲ್ ಸೀಮೆಯ ದೇಸಾಯಿ ಬಾಳಪ್ಪನು ಆ ದೀಪಸ್ತಂಭ ನಿಲ್ಲಿಸಿದ ಅಂಶವನ್ನು ದಾಖಲಿಸುತ್ತದೆ. ಉಳಿದೆರಡು ಶಾಸನಗಳು ಬಹಳ ಹಾಳಾಗಿವೆ. 'ರಾಮಲಿಂಗ'ನೆಂದು ರೂಢಿಯಲ್ಲಿರುವ ಚಾಳುಕ್ಯ ಶೈಲಿಯ ರೇವೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡ ನಿರಾಡಂಬರವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳ ಹಾಗೂ ನವರಂಗಗಳಲ್ಲಿ ಮಹಿಷಮರ್ದಿನಿ ಶಿಲ್ಪಗಳಿವೆ. ನವರಂಗದ ನಡುವಣ ಕಂಬಗಳ ತಳಭಾಗಗಳಲ್ಲಿ ಭಿಕ್ಷಾಟನಾಮೂರ್ತಿ, ವಿಷ್ಣು, ಭೈರವ, ಗಣಪತಿ, ಸೂರ್ಯ, ಸರಸ್ವತಿ, ಉಮಾಮಹೇಶ್ವರ, ದ್ವಾರಪಾಲಕ ಹಾಗೂ ಚಾಮರಧಾರಿಯರ ಸುಂದರ ಕಿರುಶಿಲ್ಪ ಕೆತ್ತನೆಗಳಿದ್ದು ಚಿತ್ತಾಕರ್ಷಕವಾಗಿವೆ. ನವರಂಗದಲ್ಲಿ ಸಪ್ತಮಾತೃಕಾ ಹಾಗೂ ಮಹಿಷ ಮರ್ದಿನಿಯ ಶಿಲ್ಪಗಳಿದ್ದು, ಛತ್ತಿನಲ್ಲಿ ಪದ್ಮವಿದೆ. ಊರ ಬಳಿಯಲ್ಲೇ ಇರುವ ಗಿರಿಯ ಮೇಲೆ (ಈ ಗಿರಿ ಶೇಷನಾಕಾರವಿದ್ದು ಶೇಷಗಿರಿ ಎನಿಸಿದೆ ಎಂದು ಪ್ರತೀತಿ) ಸಿದ್ದಪ್ಪನ ಗುಡಿಯಿದೆ. ಇಲ್ಲಿ ಮೈಲಾರ ಹಾಗೂ ಮಾಳಚಿಯರ ಕಟ್ಟಿಗೆಯ ಮೂರ್ತಿ ಹಾಗೂ ಸಿಬಾರಗಳಿವೆ. ಗುಡ್ಡದ ಮೇಲೆ ವಿಶಾಲವಾದ ಬಯಲಿದ್ದು, ವಿದ್ಯುಚ್ಛಕ್ತಿ ನೀರಿನ ವ್ಯವಸ್ಥೆಯಾಗುವ ಸಂಭವವಿದೆ. ವಿಹಾರಕ್ಕೆ ಪ್ರಶಸ್ತವಾಗಿರುವ ಈ ಊರಲ್ಲಿ ಹನುಮಂತ, ಬಸವಣ್ಣ, ದ್ಯಾಮವ್ವ ಮುಂತಾದ ದೇವತೆಗಳ ಗುಡಿಗಳಿವೆ. ಮಸೀದಿ ಹಾಗೂ ಮಹಬೂಬು ಸುಬಾನಿಯ ದರ್ಗಾ ಇದ್ದು, ದಸ್ತಗಿರ್ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಸಂಗಮೇಶ್ವರ** : ಕಲಘಟಗಿ ತಾಲೂಕಿನ ಸಂಗಮೇಶ್ವರವು (ಜನಸಂಖ್ಯೆ : 1,708) ಕಲಘಟಗಿಯಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನವಾಗಿದ್ದು ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಮೂರು ಊರ ಹೊರಗಡೆ ಇರುವ ಕಲ್ಮೇಶ್ವರ ಗುಡಿಯ (ಶಾಸನೋಕ್ತ ಹೆಮ್ಮೇಶ್ವರ) ಗುಡಿಯ ತೊಲೆಯ ಮೇಲೆ ಇವೆ. ಇವುಗಳಲ್ಲಿ ಗೋವೆ ಕದಂಬ ಒಂದನೆಯ ಜಯಕೇಶಿಯ ಕ್ರಿ.ಶ. 1068ರ ಶಾಸನ ಚಟ್ಟಗೌಡನು ದೇವಾಲಯಕ್ಕೆ ನೀಡಿದ ಭೂದಾನದ ಬಗ್ಗೆ ಹೇಳಿದರೆ, ಮತ್ತೊಂದು ಹಳ್ಳಗೌಡನು ಶಿವಾಲಯಕ್ಕೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲಿನ ಕ್ರಿ.ಶ. 1082ರ ಮತ್ತೊಂದು ಶಾಸನ ಶಿವಾಲಯಕ್ಕೆ

ದಾನ ಮಾಡಿದ ನಾಗಣ್ಣನ ಬಗ್ಗೆ ತಿಳಿಸಿದರೆ ಕ್ರಿ.ಶ. 1079ರ ವೀರಗಲ್ಲು ಸತ್ತ ಯೋಧನ ಬಗ್ಗೆ ದಾಖಲಿಸುತ್ತದೆ. ಕೆರೆ ಏರಿಯಲ್ಲಿರುವ ಸುಮಾರು ಕ್ರಿ.ಶ. 12 ನೇ ಶತಮಾನದ ಶಾಸನ ಹೆಮ್ಮೇಶ್ವರ ದೇವರ ಬಗ್ಗೆ ಉಲ್ಲೇಖಿಸುತ್ತದೆ. ಹಿಂದೆ ಹಲಸಿಗೆ-12,000 ಕ್ಕೆ ಸೇರಿದ್ದ ಈ ಊರಿಗೆ ಸಂಗಮೇಶ್ವರ ಎಂಬ ಹೆಸರು ಬರಲು ಕಾರಣ ದೊಡ್ಡಹಳ್ಳ ಹಾಗೂ ಮಂಗ್ಯಾನಹಳ್ಳ ಹಂಪಿಹಳ್ಳಿ ಹಾಗೂ ಸಂಗಮೇಶ್ವರಗಳ ನಡುವೆ ಕೂಡುತ್ತಿದ್ದು ಅದು ಇಂದಿನ ಸಂಗಮೇಶ್ವರದಿಂದ ಎರಡುವರೆ ಕಿ.ಮೀ ದೂರದಲ್ಲಿದೆ. ಊರ ಹೊರಗೆ ಹೊಲದಲ್ಲಿರುವ ಕಲ್ಲೇಶ್ವರ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಹಿಂದಿನ ಕೋಷ್ಠದಲ್ಲಿ ಉಮಾ ಮಹೇಶ್ವರ ಶಿಲ್ಪವಿದೆ. ತೆರೆದ ಅರ್ಧಮಂಟಪದ ಶಿರೋಭಾಗದ ತೊಲೆಯಲ್ಲಿ ಕ್ರಿ.ಶ. 1068ರ ದಾನ ಶಾಸನವಿದೆ. ಅರ್ಧಮಂಟಪದಲ್ಲಿ ನಾಗಶಿಲ್ಪ, ಮಹಿಷಾಸುರಮರ್ದಿನಿ ಹಾಗೂ ಸರಸ್ವತಿಯ ಸುಂದರ ಬಿಡಿ ಶಿಲ್ಪಗಳಿವೆ. ನವರಂಗದಲ್ಲಿ ಭೈರವ, ಸಪ್ತಮಾತೃಕಾ ಪಟ್ಟಿಕೆ, ಗಣಪತಿ, ಕಾರ್ತಿಕೇಯರೊಂದಿಗಿರುವ ಶಿವ ಪಾರ್ವತಿ, ನಂದಿ ಹಾಗೂ ಅನಂತಪದ್ಮನಾಭನ ಸುಂದರ ಶಿಲ್ಪಗಳಿವೆ. ಗುಡಿಯ ಮುಂದೆ ಕಿರಣಸ್ತಂಭ ಹಾಗೂ ಚಂದ್ರಶಿಲೆಗಳು ಇವೆ. ನವರಂಗದ ಪ್ರವೇಶದ್ವಾರ ಸರಳ ತ್ರಿಶಾಖೆಯುಳ್ಳ ಬಾಗಿಲವಾಡವನ್ನು ಹೊಂದಿದೆ. ಈ ಗುಡಿಯ ಸುತ್ತ ಮುತ್ತ ಗಿಡಗಂಟೆ ಬೆಳೆದಿದ್ದು ಗುಡಿ ತೀರ ಶಿಥಿಲಾವಸ್ಥೆಯಲ್ಲಿ ಇದೆ. ಅಷ್ಟೇನೂ ಎತ್ತರವಲ್ಲದ ಈ ಗುಡಿಯ ಒಳಗೆ ಇರುವ ಶಿಲ್ಪಗಳು ನಮ್ಮನ್ನು ಅಚ್ಚರಿಗೊಳಿಸುತ್ತವೆ. ಇಲ್ಲಿಂದ ಎರಡೂವರೆ ಕಿಮೀ ದೂರದಲ್ಲಿರುವ ಸಂಗಮದಲ್ಲಿ ಸಂಕ್ರಮಣದಂದು ಜನ ಸಂಕ್ರಾಂತಿಗೆ ಸ್ನಾನಕ್ಕೆಂದು ಬಂದು ಇಲ್ಲಿ ಸೇರುತ್ತಾರೆ. ಇದರೊಂದಿಗೆ ಊರಲ್ಲಿ ದ್ಯಾಮವ್ವ, ಹನುಮಂತ, ಕರಿಯವ್ವ, ಹಾಗೂ ದುರ್ಗವ್ವನ ಗುಡಿಗಳಿದ್ದು, ಮಸೀದಿ ಹಾಗೂ ಯಾಕುಬ್ ವಲಿಯ ದರ್ಗಾ ಕೂಡ ಇದೆ.

**ಸಂಗೂರು** : ಹಾವೇರಿ ತಾಲೂಕಿನ ಸಂಗೂರು (ಜನಸಂಖ್ಯೆ 3,155) ವರದಾ ನದಿಯ ಎಡದಂಡೆಯ ಮೇಲಿದೆ. ಈ ಊರು ತಾಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಸಂಗವೂರು', 'ಚಂಗೂರು', ಚಂಗಾಪುರ' ಎಂದೆಲ್ಲ ಉಲ್ಲೇಖಿಸಲ್ಪಟ್ಟಿದೆ. ಈ ಊರಿನಲ್ಲಿಂದು ಎಂಟು ಶಾಸನಗಳಿವೆ. ರಾಷ್ಟ್ರಕೂಟ ಜಗತ್ತುಂಗನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನವೊಂದು ಸಂಗವೂರಿನ ರಕ್ಷಣೆಗಾಗಿ ರೇಚಗಾಮುಂಡನ ವೀರಮರಣವನ್ನು ದಾಖಲಿಸಿದೆ. ರಾಮಲಿಂಗಗುಡಿ ಹಿಂಬದಿಯಲ್ಲಿರುವ ರಾಷ್ಟ್ರಕೂಟರ ಗೋಸಾಸ ಕಲ್ಲುಗಳು ಇದು ಆ ಕಾಲದಲ್ಲೇ ಪಡೆದಿದ್ದ ಪ್ರಾಮುಖ್ಯತೆಯನ್ನು ಸೂಚಿಸುತ್ತವೆ. ಕಲಚೂರಿ ಬಿಜ್ಜಳನ ಕಾಲದ ಶಾಸನವೊಂದು ತ್ರುಟಿತಗೊಂಡಿದ್ದರೂ ಹೆಗ್ಗಡೆ ಬಮ್ಮರಸ ಬ್ರಹ್ಮೇಶ್ವರ ದೇವರಿಗೆ ಭೂದಾನ ಮಾಡಿದುದನ್ನು ಉಲ್ಲೇಖಿಸುತ್ತದೆ. ಯಾದವ ಅರಸ ಮಹಾದೇವನ ಎರಡು ಶಾಸನಗಳು ಈ ಊರಲ್ಲಿದ್ದು ಒಂದು ನಾಳ್ಗಬು ಸಾವಂತಸೋವನು ಸನ್ಯಸನವಿಧಿಯಿಂದ ಮಡಿದ ಅಂಶವನ್ನು ಅರುಹಿದರೆ ಮತ್ತೊಂದು ಮಹಾಪ್ರಧಾನ ದೇವರಾಜನಿಂದ ಸೊನ್ನಲಿಗೆಯ ಕಪಿಲ ಸಿದ್ಧಮಲ್ಲಿಕಾರ್ಜುನ ದೇವಾಲಯಕ್ಕೆ ಚಂಗೂರನ್ನೇ ದಾನ ಮಾಡಿದ್ದುದಾಗಿ ತಿಳಿಸುತ್ತದೆ. ಸುಮಾರು ಕ್ರಿ.ಶ. 12-13 ನೇ ಶತಮಾನಕ್ಕೆ ಸೇರಿದ ಜೈನ ಶಾಸನವೊಂದು ಊರ ಬಸ್ತಿಮಟ್ಟಿ ಬಯಲಲ್ಲಿ ಬಿದ್ದಿದ್ದು ನೇಮಣ್ಣ ಸಂಗೂರಿನಲ್ಲಿ ಪಾರ್ಶ್ವನಾಥ ಬಸದಿಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆಯಾದರೂ ಇಂದು ಇಲ್ಲಿ ಜೈನಬಸದಿಗಳಾವುದು ಇಲ್ಲ. ವಿಜಯನಗರದ ಒಂದನೆಯ ದೇವರಾಯನ ಕಾಲಕ್ಕೆ ಸೇರಿದ ಕ್ರಿ.ಶ. 1408 ರ ಶಾಸನವೊಂದು ವಿಜಯನಗರದ ಅಧಿಕಾರಿ ಮಾದರಸನು 'ಕುಮಾರ ರಾಮನಾಥದೇವರ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಮಹತ್ವದ ಅಂಶವನ್ನು ಹೇಳುತ್ತದೆ. ಈ ಶಾಸನದ ಮೇಲು ಪಟ್ಟಿಕೆಯಲ್ಲಿ ಭರ್ಜಿ ಹಿಡಿದ ಕುದುರೆ ಸವಾರನನ್ನು ಕಂಡರಿಸಲಾಗಿದೆ. ರಾಷ್ಟ್ರಕೂಟರ ಕಾಲದ ನಾಲ್ಕು ಗೋಸಾಸ ಕಲ್ಲುಗಂಬಗಳು ರಾಮಲಿಂಗನಗುಡಿಯ ಹಿಂದಿವೆ. ಊರಲ್ಲಿ ರಾಮಲಿಂಗದೇವರು, ವೀರಭದ್ರ, ಈಶ್ವರ ಹಾಗೂ ಕಲ್ಲೇಶ್ವರ ದೇವಾಲಯಗಳಿವೆ. ಇವೆಲ್ಲ ಕಲ್ಯಾಣದ ಚಾಲುಕ್ಯರ ಕಾಲದ ರಚನೆಗಳಾಗಿದ್ದು ನಂತರದಲ್ಲಿ ಹಾಳಾಗಿದ್ದು ಇತ್ತೀಚೆಗೆ ದುರಸ್ತಿಗೊಂಡಿವೆ. ರಾಮಲಿಂಗನ ಗುಡಿ ಮುಂದಿರುವ 'ಸಿಂಹ ಬೇಟೆ ವೀರಗಲ್ಲು' ಉಲ್ಲೇಖಾರ್ಹವಾಗಿದೆ. ಸಂಗೂರಿನಲ್ಲಿ ಸಕ್ಕರೆ ಕಾರ್ಖಾನೆಯಿದೆ. ಇದು 1981 ರಿಂದ ಉತ್ಪಾದನೆಯಲ್ಲಿ ತೊಡಗಿದ್ದು, ನೆರೆಹೊರೆ ಜಿಲ್ಲೆಯ 17 ತಾಲೂಕುಗಳ ಕಬ್ಬು ಬೆಳೆಗಾರರಿಗೆ ಇದರಿಂದ ಅನುಕೂಲವಾಗಿದೆ. ದಿನ 2000 ಟನ್ ಕಬ್ಬನ್ನು ಅರಿಯುವ ಸಾಮರ್ಥ್ಯವನ್ನು ಹೊಂದಿದ್ದು, ದಿನ 2000 ಕ್ವಿಂಟಾಲ್ ಸಕ್ಕರೆಯನ್ನು ಇಲ್ಲಿ ಉತ್ಪಾದಿಸಲಾಗುತ್ತದೆ.

**ಸಂಶಿ** : ಕುಂದಗೋಳ ತಾಲೂಕಿನ ಸಂಶಿಯು (ಜನಸಂಖ್ಯೆ : 10,991) ಪ್ರಾಚೀನ ಶಾಸನಗಳಲ್ಲಿ 'ತಪಸಿಗ್ರಾಮಂ' 'ತಪಸೀಪುರಂ ಸವಸಿ' ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಈ ಊರು ಕುಂದಗೋಳದಿಂದ ಆಗ್ನೇಯಕ್ಕೆ 12 ಕಿ.ಮೀ. ದೂರದಲ್ಲಿ ಕುಂದಗೋಳ-ಲಕ್ಷ್ಮೇಶ್ವರ ರಸ್ತೆಯಲ್ಲಿದೆ. ಹಿಂದೆ 400 ಮಹಾಜನರನ್ನು ಹೊಂದಿದ್ದ ಮಹಾವಡ್ಡ ಗ್ರಾಮ ಅಗ್ರಹಾರವಾಗಿದ್ದ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಸಿದ್ದೇಶ್ವರ ಗುಡಿ ಮುಂದಿರುವ ಕ್ರಿ.ಶ. 1074 ರ ಶಾಸನ ತೈಲ್ಲಿಗರೈವತ್ತು ಒಕ್ಕಲು ದೀಪಕ್ಕೆ ಸೊಂಟಿಗೆ

ಎಣ್ಣೆಯನ್ನೂ ತಂಬೂಲಿಗರು ಹೇರಿಗೆ 100 ಎಲೆಯನ್ನೂ ಮಾಲಗಾರರು 40 ಹೂವನ್ನೂ ದೇವರಿಗೆಂದು ಮಹಾಜನ ನಾನ್ನೂರ್ವರ ಕೈಯಲ್ಲಿ ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, ಗುರುಬಸಪ್ಪ ಕುಂಬಿಯವರ ಮನೆ ಮುಂದೆ ಇರುವ ಕಲ್ಯಾಣದ ಚಾಲುಕ್ಯ ಅರಸ ಇಮ್ಮಡಿ ಜಗದೇಕಮಲ್ಲನ ಕ್ರಿ.ಶ. 1144 ರ ಶಾಸನ ಸವಸಿ ಗ್ರಾಮದಲ್ಲಿದ್ದ ಸಕಲ ಜನರ ಸಮಗ್ರ ಚಿತ್ರವನ್ನು ಕೊಡುವಲ್ಲಿ ಯಶಸ್ವಿಯಾಗಿದೆ. ಶಂಕರಲಿಂಗ ಗುಡಿ ಮುಂದಿರುವ ಸುಮಾರು ಕ್ರಿ.ಶ. 11-12 ನೇ ಶತಮಾನದ ಶಾಸನ ಬಹಳ ಹಾಳಾಗಿದ್ದು ಹೆಚ್ಚಿನ ವಿವರ ಲಭ್ಯವಿಲ್ಲ. ಊರಲ್ಲಿ ಇರುವ ಗುಡಿಗಳಲ್ಲಿ ಕಲ್ಮೇಶ್ವರ ಹಾಗೂ ಸಿದ್ಧೇಶ್ವರ ಗುಡಿಗಳು ಪ್ರಾಚೀನ ಗುಡಿಗಳಾಗಿವೆ.

ಎತ್ತರವಾದ ಸ್ಥಳದಲ್ಲಿ ಮನೆಗಳ ನಡುವೆ ಮರೆಯಾಗಿರುವ ಕಲ್ಮೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯನ್ನು ಕಟ್ಟಿಗೆ ಬಳಸಿ ಪುನರ್‌ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಪಂಚ ಶಾಖೆಯನ್ನು ಹೊಂದಿದ್ದು ಜಾಲಾಂಧ್ರವಿದೆ; ಇದರ ಮುಂಬದಿಯಲ್ಲಿ ಸಪ್ತಮಾತೃಕಾ ಪಟ್ಟಿಕೆ ಹಾಗೂ ಯಕ್ಷಿಯ ಶಿಲ್ಪಗಳಿವೆ. ಊರ ಹೊರಗೆ (ಉತ್ತರಕ್ಕೆ) ಹೊಲದಲ್ಲಿರುವ ಸಿದ್ಧೇಶ್ವರ ಗುಡಿ ಸಂಸಿಯ ನಿಜವಾದ ಆಕರ್ಷಣೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಪೂರ್ವಾಭಿಮುಖವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ವಿಶಾಲವಾದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅಂತರಾಳವನ್ನು ತ್ರಿಮೂರ್ತಿ ಕೆತ್ತನೆಯಿರುವ ಮಕರ ತೋರಣದಿಂದ ಅಲಂಕರಿಸಿದ್ದಾರೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯದಾಗಿವೆ; 48 ಕಂಬಗಳು ಸಭಾಮಂಟಪವನ್ನು ಹೊತ್ತು ನಿಂತಿದ್ದು, ನಡುವಣ ಛತ್ತಿನಲ್ಲಿ ಸರಳ ಕಮಲವಿದೆ. ಶಾಸನವೂ ಕೂಡ ಸಿದ್ಧೇಶ್ವರ ಎಂದೇ ಹೇಳುವ ಈ ಗುಡಿಯ ಗರ್ಭಗೃಹದ ಶಿಖರ ಇತ್ತೀಚಿನದ್ದಾಗಿದೆ. ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಶಂಕರಲಿಂಗಗುಡಿ ಕೂಡ ಕಲ್ಯಾಣದ ಚಾಲುಕ್ಯರ ಕಾಲದ ಸುಂದರ ರಚನೆಯಾಗಿದೆ. ಊರ ದಕ್ಷಿಣದಲ್ಲಿ ಉತ್ತರಾಭಿಮುಖವಾಗಿ ನಿಂತಿರುವ ಬೃಹತ್ತಾದ ವೈಭವಯುತವಾದ, ಬ್ರಹ್ಮಾನಂದ ಮಠವಿದೆ. ಇದರ ಒಳಭಾಗವೂ ಅಷ್ಟೇ ರಮ್ಯವಾಗಿದ್ದು ಆಕರ್ಷಕವಾಗಿದೆ. ಇವುಗಳಷ್ಟೇ ಅಲ್ಲದೆ, ಊರಲ್ಲಿ ಹನುಮಂತ ಮೈಲಾರ, ವೀರಭದ್ರ, ರೇಣುಕಾ, ಬೀರೇದೇವರು, ದುರ್ಗ, ದ್ಯಾಮವ್ವ ಹಾಗೂ ಕರಿಯವ್ವ ಗುಡಿಗಳಿವೆ. ಎರಡು ಮಸೀದಿ ಹಾಗೂ ರಾಜಬಾಘ ಸವಾರನ ದರ್ಗಾ ಕೂಡ ಇಲ್ಲಿವೆ.

**ಸವಡಿ:** ರೋಣ ತಾಲೂಕಿನ ಸವಡಿಯು (ಜನಸಂಖ್ಯೆ : 6,365) ಪ್ರಾಚೀನ ಶಾಸನಗಳಲ್ಲಿ 'ಸಯ್ಯಡಿ', 'ಸೈವಿಡಿ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು ರೋಣದಿಂದ ನೈಋತ್ಯಕ್ಕೆ ಏಳು ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಕಿಸುಕಾಡು-70 ಕ್ಕೆ ಸೇರಿದ್ದಂತೆ ಕಂಡುಬರುತ್ತದೆ. ಪಂಚತಂತ್ರವನ್ನು ಬರೆದ ದುರ್ಗಸಿಂಹನು ಈ ಊರಿನವನು. ಬಾದಾಮಿ ಚಾಲುಕ್ಯರ ಕ್ರಿ.ಶ. 683 ರ ಲಕ್ಷ್ಮೇಶ್ವರ ಶಾಸನದಲ್ಲಿ ಹಡಗಿಲೆ ಗ್ರಾಮದ ಸೀಮೆಯನ್ನು ಉಲ್ಲೇಖಿಸುವಾಗ 'ಸೈಯಡಿ'ಗೆ ಹೋದ ದಾರಿ ಎಂಬ ಪ್ರಯೋಗವಿರುವುದರಿಂದ ಈ ಊರಿನ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇಲ್ಲಿನ ಶಾಸನಗಳಲ್ಲಿ ಕ್ರಿ.ಶ. 970 ರ ರಾಷ್ಟ್ರಕೂಟ ಖೊಟ್ಟಿಗನ ಶಾಸನ, ಮಾರಸಿಂಗ ಪೆರ್ಮಾನಡಿಯು ಕಿಸುಕಾಡ-70 ನ್ನು ಆಳುತ್ತಿರುವಾಗ ಗಂಗರ ವತ್ಸಯ್ಯನು ಸ್ವಯಂಭುಲಿಂಗ ಪ್ರತಿಷ್ಠಾಪನೆ ಮಾಡಿ, ಮಠವನ್ನು ನಿರ್ಮಿಸಿದಾಗ, ಸುಂಕದ ಬಲ್ಲಯನು ದೇವಾಲಯಕ್ಕೆ 12 ಮತ್ತರನ್ನೂ, ಸ್ಥಾನಾಚಾರ್ಯರಿಗೆ ಎರಡು ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ಹೇಳುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ. 1083 ರ ಶಾಸನ, ಮಹಾಮಂಡಳೇಶ್ವರ ಆಚುಗಿಪೆರ್ಮಾಡಿದೇವ ಕಿಸುಕಾಡು-70 ಇತ್ಯಾದಿಗಳನ್ನು ಆಳುತ್ತಿರುವಾಗ ಮೂಲಸ್ಥಾನ ದೇವರಿಗೆ ಹಾಗೂ ಭಗವತಿಗೆಂದು ಒಟ್ಟು 36 ಮತ್ತರು ಭೂಮಿಯನ್ನು ಗಂಗರ ಬಾಚಿಮಯ್ಯನು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಬ್ರಹ್ಮದೇವರ ಗುಡಿಯ ಕಂಬವೊಂದರ ಮೇಲಿರುವ ಇಮ್ಮಡಿದೇವರಾಯನ ಕಾಲದ ಕ್ರಿ.ಶ. 1431 ರ ಶಾಸನವು ಬಾದಾಮಿ ಸೀಮೆಯಲ್ಲಿದ್ದ 'ಸೈವಿಡಿ'ಯಲ್ಲಿ ಚೌಡನಾಯಕನು ತ್ರೈಪುರುಷ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ಅಂಶವನ್ನು ತಿಳಿಸುತ್ತದೆ. ಇದರಿಂದ ಇದೊಂದು ವಿದ್ಯಾಕೇಂದ್ರವಾಗಿತ್ತೆಂಬ ಅಂಶ ಗೊತ್ತಾಗುತ್ತದೆ. ಶಾಸನೋಕ್ತ ಸ್ವಯಂಭೂಲಿಂಗ, ಮೂಲಸ್ಥಾನ ದೇವರು, ಭಗವತಿ ಹಾಗೂ ತ್ರೈಪುರುಷ ದೇವಾಲಯಗಳಲ್ಲಿ ಬ್ರಹ್ಮೇಶ್ವರ (ತ್ರೈಪುರುಷ) ಹಾಗೂ ನಾರಾಯಣ ದೇವಾಲಯಗಳಷ್ಟೆ ಉಳಿದಿವೆ. ಊರಲ್ಲಿರುವ ಬ್ರಹ್ಮೇಶ್ವರ ಗುಡಿ ರಾಷ್ಟ್ರಕೂಟರ ಕಾಲದ ರಚನೆಯಾಗಿದ್ದು, ವಿಜಯನಗರದರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ, ತೆರೆದ ಮಂಟಪ ಮತ್ತು ವಿಶಾಲವಾದ ಸಭಾಮಂಟಪವನ್ನಷ್ಟೆ ಹೊಂದಿರುವ ಇದರ ಗರ್ಭಗೃಹದಲ್ಲಿ ಒಂದೇ ಪೀಠದಲ್ಲಿ ಹಂಸಪೀಠದ ಮೇಲಿರುವ ಚತುರ್ಮುಖ ಬ್ರಹ್ಮ ನಂದಿ ಪೀಠದ ಮೇಲಿರುವ ಶಿವಲಿಂಗ ಹಾಗೂ ಗರುಡ ಪೀಠದ ಮೇಲಿರುವ ಚತುರ್ಭುಜ ವಿಷ್ಣು ಮೂರ್ತಿಗಳಿದ್ದು ಬಹಳ ಸುಂದರವಾಗಿದೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು, ಹಂಸಾವಳಿಯ ಸಾಲನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ಗರ್ಭಗೃಹವನ್ನು 12

ಕಂಬಗಳನ್ನು ಬಳಸಿ ಆಯಾಕಾರದಲ್ಲಿ ರಚಿಸಲಾಗಿದ್ದು, ಹೊರಬದಿಯಲ್ಲಿ ನಕ್ಷತ್ರಾಕಾರದ ತಳವಿನ್ಯಾಸವನ್ನು ರೂಪಿಸಿದ್ದಾರೆ. ಸಭಾಮಂಟಪ ವಿಜಯನಗರ ಕಾಲದಲ್ಲಿ ವಿಸ್ತಾರಗೊಂಡಂತೆ ತೋರುತ್ತದೆ. ಸಭಾಮಂಟಪದಲ್ಲಿ ಸಪ್ತಮಾತೃಕಾ ಪಟ್ಟಿಕೆ, ಜೈನತೀರ್ಥಂಕರ ಹಾಗೂ ಆದಿತ್ಯರ ಶಿಲ್ಪಗಳಿವೆ. ನಾಲ್ಕು ಮಾದರಿಯ 60 ಕಂಬಗಳಿರುವ ಸಭಾಮಂಟಪದ ನಡುವಣ ಛತ್ತು ವಿಶಾಲವಾಗಿದೆಯಾದರೂ ನಿರಾಡಂಬರವಾಗಿದೆ. ಈ ದೇವಾಲಯದ ಹೊರಭಿತ್ತಿಯಲ್ಲಿ ಕಿರು ಶಿಖರ ಮಾದರಿ ಹಾಗೂ ಅಲಂಕೃತಸ್ತಂಭಗಳನ್ನು ಅಳವಡಿಸಲಾಗಿದೆ. ಗರ್ಭಗೃಹದ ಶಿಖರ ಶಿಥಿಲವಾಗಿದೆ.

ಈ ಗುಡಿಯ ಹಿಂಬದಿಯಲ್ಲಿರುವ ನಾರಾಯಣ ಗುಡಿಯು ಎರಡು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು ನವರಂಗಕ್ಕೆ ಉತ್ತರ-ದಕ್ಷಿಣದಿಂದ ಪ್ರವೇಶ ಮಾರ್ಗವಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ನಾರಾಯಣನ ಮೂರ್ತಿಯಿದ್ದು, ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಹಂಸಾವಳಿಯನ್ನೂ ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ತೆರೆದ ಅಂತರಾಳದ ಸ್ತಂಭದಲ್ಲಿ ರತಿ-ಮನ್ಮಥರನ್ನೂ ದ್ವಾರಪಾಲಕರೊಂದಿಗೆ ಬಿಡಿಸಿದ್ದಾರೆ. ನವರಂಗದಲ್ಲಿ ಸಪ್ತಮಾತೃಕಾ ಪಟ್ಟಿಕೆ, ಉಮಾಮಹೇಶ್ವರ ಹಾಗೂ ಗಣಪತಿ ಶಿಲ್ಪಗಳಿವೆ. ದೇವಾಲಯದ ಪೂರ್ವದ ಪ್ರವೇಶ ಭಾಗವನ್ನು ಮುಚ್ಚಿ ಗರ್ಭಗೃಹವನ್ನಾಗಿಸಿ, ಶಿವಲಿಂಗವನ್ನು ಪ್ರತಿಷ್ಠೆ ಮಾಡಿ ಇದನ್ನು ದ್ವಿಕೂಟವಾಗಿಸಿದ್ದಾರೆ. ನವರಂಗದ ನಡುವಣ ಕಂಬಗಳು ಆಕರ್ಷಕವಾಗಿದ್ದು ಹೊಳೆಯುತ್ತವೆ. ದಕ್ಷಿಣದಲ್ಲಿರುವ ಪ್ರವೇಶದ್ವಾರದ ದ್ವಾರಬಂಧ ಆಕರ್ಷವಾಗಿದ್ದು, ಹಂಸಾವಳಿ ಸಾಲುಗಳಿವೆ. ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಿರುವ ಈ ಗುಡಿಯ ಹೊರಭಿತ್ತಿಯನ್ನು ಕಿರುಶಿಖರ ಮಾದರಿಗಳು, ಅಲಂಕಾರಿಕ ಸ್ತಂಭಗಳು ಹಾಗೂ ಚಿಕಣಿ ಶಿಲ್ಪಗಳಿಂದ ಅಲಂಕರಿಸಿದ್ದಾರೆ. ಇಲ್ಲಿನ ಬ್ರಹ್ಮೇಶ್ವರ ಹಾಗೂ ನಾರಾಯಣ ದೇವರ ಗುಡಿಗಳು ಉತ್ತಮ ಕಲಾಕೃತಿಗಳಿದ್ದು, ಶಿಥಿಲಗೊಳ್ಳುವ, ಪಾಳು ಬೀಳುವ ಭೀತಿಯಿದೆ. ದೊಡ್ಡದೇವರ ಗುಡಿ ಬಳಿ ಬಹಳ ಸುಂದರವಾದ ಅನಂತಶಯನ ಶಿಲ್ಪವಿದೆ. ಮಹಿಷಮರ್ದಿನಿ, ಉಮಾಮಹೇಶ್ವರ, ಕಾರ್ತಿಕೇಯ, ಗಣಪತಿ, ಸಪ್ತಮಾತೃಕಾ ಪಟ್ಟಿಕೆ ಹಾಗೂ ಇನ್ನಿತರ ಅವಶೇಷಗಳಲ್ಲಿ ಹರಡಿಕೊಂಡಿವೆ. ಊರಲ್ಲಿ ಬಸವಣ್ಣ, ಕಲ್ಮೇಶ್ವರ, ವೀರಭದ್ರ ಬೀರದೇವರು ದುರ್ಗವ್ವ, ದ್ಯಾಮವ್ವ, ಮುಂತಾದ ಗುಡಿಗಳಿವೆ. ಸಂಗಮೇಶ್ವರ ದೇವಾಲಯ ಹಾಗೂ ಮಠಗಳಿವೆ. ಅಲ್ಲದೆ ಮಸೀದಿ ಹಾಗೂ ದರ್ಗಾಗಳು ಇವೆ.

**ಸವಣೂರು :** ತಾಲೂಕು ಕೇಂದ್ರವಾದ ಸವಣೂರು (ಜನಸಂಖ್ಯೆ : 15,332) ಧಾರವಾಡದಿಂದ 78 ಕಿ.ಮೀ. ದೂರದಲ್ಲಿದ್ದು ಕ್ರಿ.ಶ. 1087 ರ ಶಾಸನದಲ್ಲೇ ಸವಣೂರು ಅಗ್ರಹಾರವೆಂದು ಉಲ್ಲೇಖಿತವಾಗಿರುವ ಪ್ರಾಚೀನ ಸ್ಥಳವಾಗಿದೆ. 1969 ರಿಂದ ಇದು ತಾಲೂಕು ಕೇಂದ್ರವಾಗಿದೆ. ಬಂಕಾಪುರದ ನವಾಬರು ಶ್ರಾವಣ ಮಾಸದಲ್ಲಿ ರಾಜಧಾನಿಯನ್ನು ಇಲ್ಲಿಗೆ ಬದಲಾಯಿಸಿದಾಗ 'ಸಾವಣೂರು' ಎಂದು ಹೆಸರಿಟ್ಟರು ಎಂಬ ವಾದವಿದ್ದು ಮೇಲೆ ಹೇಳಿರುವ ಶಾಸನದ ಹಿನ್ನಲೆಯಲ್ಲಿ ಈ ವಾದವು ಗೌಣವಾಗುತ್ತದೆ. ನವಾಬರ ತಮ್ಮ ಕೇಂದ್ರ ಸ್ಥಾಪಿಸಿದ ಸ್ಥಳ ಪ್ರಾಚೀನ ಸವಣೂರಿನ ಸಮೀಪದ ಜನಮಾರನಹಳ್ಳಿ ಎಂಬ ಹೇಳಿಕೆ ಇದೆ. (ಸವಣೂರಿನ ನವಾಬರ ಬಗ್ಗೆ ಅಧ್ಯಾಯ 2 ನೋಡಿ). ಊರಿನ ಸುತ್ತಲೂ ಕೋಟೆಯಿರುವ ಸವಣೂರಿನಲ್ಲಿ ಉತ್ತರಾಧಿಮಠದ ಯತಿಗಳಾದ ಸತ್ಯಬೋಧರ ಮಠ, ಕಲ್ಮಠ, ಅಡವಿ ಸ್ವಾಮಿಮಠ, ದೊಡ್ಡಹುಣಸಿ ಮಠ, ದ್ಯಾಮವ್ವ, ಬಸವಣ್ಣ, ಹನುಮಂತ (ನಾಲ್ಕು), ಈಶ್ವರ, ವಿಠೋಬ, ದುರ್ಗಾದೇವಿ, ವೀರಭದ್ರ, ಲಕ್ಷ್ಮಿ ದೇವಾಲಯಗಳಿವೆ. ಊರಿನ ಮಧ್ಯದಲ್ಲಿರುವ ಉತ್ತರಾದಿಮಠದ ಪರಂಪರೆಯಲ್ಲಿ ಬಂದ ಸತ್ಯಬೋಧ ಸ್ವಾಮಿಗಳ ಮಠವು ಸುಮಾರು ಇನ್ನೂರು ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದೆ. ಈಗ ಇರುವ ಮಠದ ಕಟ್ಟಡವು ಅನೇಕ ಬಾರಿ ಜೀರ್ಣೋದ್ಧಾರ ಹೊಂದಿದೆ. ಸತ್ಯಬೋಧರಾಯರು (ಕ್ರಿ.ಶ. 1742-1783) ಮಧ್ವಾಚಾರ್ಯರ ಮೂಲ ತತ್ವಗಳನ್ನು ಪ್ರಚಾರ ಮಾಡಿದ್ದಲ್ಲದೇ ಸ್ವತಃ ತಾವೇ ಹಲವಾರು ಶಾಸ್ತ್ರ ಗ್ರಂಥಗಳನ್ನು ರಚಿಸಿರುವರು. ಅವರ ಬೃಂದಾವನವು ಈ ಮಠದ ಆವರಣದಲ್ಲೇ ಇದೆ. ಸವಣೂರಿನ ದಿವಾನ ಖಂಡೇರಾವ್ ಅವರನ್ನು ಇಲ್ಲಿ ನೆಲೆಗೊಳಿಸಿದ. ಇದಲ್ಲದೇ ಸತ್ಯಸಂಧರ ಹಾಗೂ ಸತ್ಯಧರ್ಮರ (ಇಬ್ಬರೂ ಉತ್ತರಾಧಿ ಮಠದ ಪರಂಪರೆಯಲ್ಲಿ ಬರುವ ಯತಿಗಳು) ಮೃತ್ತಿಕಾ ಬೃಂದಾವನಗಳೂ ಇಲ್ಲಿವೆ.

ಊರೊಳಗೆ ಬಿ.ಡಿ.ಓ. ಕಚೇರಿ (ಹಳೇ ನವಾಬನ ಬಂಗ್ಲೆ) ಪರಿಸರದಲ್ಲಿ ಶಾಸನವಿದ್ದು ಕಲ್ಯಾಣದ ಚಾಳುಕ್ಯ ಆರ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು (1081) ಅಸ್ಪಷ್ಟವಾಗಿದ್ದು ಬಂಕಾಪುರದ ಪಟ್ಟಕಾಧಿಪತಿ ಸವಣೂರಿನ ಎರಡನೂರು ಮಹಾಜನರಿಗೆ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಇದೇ ಊರಿನ ನವಾಬನ ಬಂಗ್ಲೆ ಹತ್ತಿರವಿರುವ ಇದೇ ಕಾಲದ ಇನ್ನೊಂದು ಶಾಸನವು (ಕ್ರಿ.ಶ. 1087) ಸವಣೂರ ಅಗ್ರಹಾರದ 200 ಮಹಾಜನರು ಗಡಿಗ್ರಾಮ ಸವಣೂರಿನ ಸಂರಕ್ಷಕನೆಂದು ಮಧುಸೂಧನನನ್ನು ಆಯ್ಕೆ ಮಾಡಿದ

ವಿಷಯವನ್ನು ತಿಳಿಸುತ್ತದೆ. ಸವಣೂರು ನವಾಬನ ಬಂಗ್ಲೆ 'ರಷೀದ್ ಮಹಲ್' (ಈಗ ಬಿ.ಡಿ.ಓ. ಕಚೇರಿಯಿದೆ) ಒಂದು ಸುಂದರ ವಿನ್ಯಾಸದ ಮುಸ್ಲಿಂ ಶೈಲಿಯ ಕಟ್ಟಡವಾಗಿದೆ. ಬಂಗ್ಲೆಯ ಒಳಗಡೆ ಗೋಡೆಗಳನ್ನು ಹೂಬಳ್ಳಿಗಳ ಹಾಗೂ ನವಿಲು ಇತರ ಪಕ್ಷಿಗಳ ಸಾಲುಗಳನ್ನು ಸುಂದರ ತೈಲವರ್ಣದ ಚಿತ್ರಗಳಿಂದ ಅಲಂಕರಿಸಲಾಗಿದೆ. ಇದಕ್ಕೆ ಸಮೀಪವೇ (ರಸ್ತೆಯ ಆಚೆ) ನವಾಬರ ಕಾಲದ ಇನ್ನೊಂದು ಬಂಗ್ಲೆ ಇದೆ. ಊರ ಸುತ್ತಲೂ ಇರುವ ಕೋಟೆಯು ಒಂಭತ್ತು ಕೊತ್ತಲಗಳನ್ನು ಹೊಂದಿದೆ. ಕೋಟೆಯ ಮುಖ್ಯ ಬಾಗಿಲಲ್ಲಿರುವ ಶಾಸನವು ಸವಣೂರು ನವಾಬನ ಕಾಲದ್ದಾಗಿದ್ದು (1752-53) ನವಾಬ್ ಅಬ್ದುಲ್ ಮಜೀದ್‌ಖಾನನೆಂಬ ಅಧಿಕಾರಿಯಿಂದ ಕೋಟೆಯ ಅಗಸೆಯ ಬಾಗಿಲ ನಿರ್ಮಾಣವನ್ನು ಮಾಡಿದ ವಿವರವನ್ನು ತಿಳಿಸುತ್ತದೆ. ಈ ಊರಿನಲ್ಲಿರುವ ಇನ್ನೊಂದು ಆಕರ್ಷಣೆಯೆಂದರೇ ಊರ ಹೊರಗಿರುವ ಹುಣಸಿಕಟ್ಟಿಮಠ. ಇದರ ಸಮೀಪವೇ ವಿಚಿತ್ರವಾದ ಮೂರು ಭಾರೀ ಅಗಲದ ಕಾಂಡವನ್ನು ಒಳಗೊಂಡ ಪ್ರೇಕ್ಷಣೀಯವಾದ ವಿದೇಶೀಯ ಮೂಲದ ವೃಕ್ಷಗಳಿವೆ. ಇದನ್ನು 'ದೊಡ್ಡ ಹುಣಸೆ' ಎಂದು ಕರೆಯುತ್ತಿದ್ದು ಒಂದರ ಕಾಂಡದ ಸುತ್ತಳತೆ 6.50 ಮೀಟರ್ ಇದೆ. ಇವುಗಳನ್ನು ಅರಣ್ಯ ಇಲಾಖೆ ಬೇಲಿ ಹಾಕಿ ರಕ್ಷಿಸಿದೆ. ಉಳಿದ ಎರಡು ಮರಗಳ ಕಾಂಡ 14.70 ಮೀಟರ್ ಹಾಗೂ 11.50 ಮೀಟರ್ ಸುತ್ತಳತೆಯವು. ಅಡನ್‌ಸೋನಿಯಾ ಡಿಜಿಟಾಟಾಲಿನ್ ಎಂಬ ಶಾಸ್ತ್ರೀಯ ಹೆಸರಿರುವ ಈ ವೃಕ್ಷಗಳು ಬಂಬೀಸಿಯಾ ಕುಟುಂಬದವು. ಸವಣೂರಿನ ದೊಡ್ಡ ಕೆರೆಯ ದಂಡೆಯಿಂದ ಸುಮಾರು ಒಂದೂವರೆ ಕಿಲೊಮೀಟರ್ ಸಾಗಿದಾಗ ವಿಷ್ಣುತೀರ್ಥ ಎಂಬ ಪ್ರಶಾಂತ ಸ್ಥಳ ಸಿಗುತ್ತದೆ. ಇದು ಸತ್ಯಬೋಧತೀರ್ಥರು ಗಂಗೆಯನ್ನು ಆಹ್ವಾನಿಸಿ ನಿರ್ಮಿಸಿದರೆನ್ನಲಾದ ತಟಾಕವನ್ನು ಹೊಂದಿದೆ. ಸುಮಾರು 600 ಚದರಡಿ ವಿಶಾಲವಾದ ಈಜಲು ಯೋಗ್ಯವಾದ ಈ ತಟಾಕದ ಸುತ್ತ ಜಗಲಿ ಇದ್ದು ಅದು ಮುಸ್ಲಿಂ ಶೈಲಿಯ ಸಾಲಾದ ಕಮಾನುಗಳ ಆಧಾರಗಳ ಮೇಲೆ ಅಚ್ಛಾದಿತವಾದ ಸ್ನಾನ ಘಟ್ಟವಾಗಿದೆ. ಇದರ ಛಾವಣಿಯಲ್ಲಿ ಒಂದೆಡೆ ಸುಂದರ ನಾಗಬಂಧದ ಶಿಲ್ಪವಿದೆ. ಇದರಲ್ಲಿ 16 ಚದರ ಅಡಿ ವಿಸ್ತಾರದ 24 ಅಂಕಣಗಳಿದ್ದು ಒಂದು ದಿಕ್ಕು ಮಾತ್ರ ತೆರವಾಗಿದ್ದು ಅಲ್ಲಿಂದ ತೋಟಕ್ಕೆ ನೀರೆತ್ತಲು ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಒಂದು ಚಿಕ್ಕ ಗುಡಿ ಇದಕ್ಕೆ ಹೊಂದಿದ್ದು ಅದರಲ್ಲಿ 'ಪಾಪ ವಿನಾಶನ' ಎಂದು ಕರೆಯಲಾಗುವ ಲಿಂಗವಿದೆ. ಮಾರುತಿ ಮತ್ತು ಒಂದು ಭಗ್ನವಿಷ್ಣು ಮೂರ್ತಿಗಳೂ ಇಲ್ಲಿವೆ. ಇದು ಒಳ್ಳೆಯ ವಿಹಾರ ತಾಣ.

ಸವಣೂರಿನಲ್ಲಿರುವ ಮುಸ್ಲಿಮರ ಕಟ್ಟಡಗಳು ಈ ಊರಿನ ಮತ್ತೊಂದು ಆಕರ್ಷಣೆಯಾಗಿದೆ. ಇಲ್ಲಿರುವ ಮುಖ್ಯ ಮಸೀದಿಗಳೆಂದರೆ ಆಸರ್‌ಮಸೀದಿ (ಆದಿಲ್ ಷಾ ಕಾಲದ್ದು) ಖಾದರ್ ಭಾಗ ಎಂಬಲ್ಲಿ ಗದಗ ರಸ್ತೆಯಲ್ಲಿದೆ. ಜಾಮಿಯಾ ಮಸೀದಿ (ಶುಕ್ರವಾರಪೇಟೆ), ಗಡೀ ಮಸೀದಿ (ಮಾರ್ಕೆಟ್ ರಸ್ತೆ), ಕಮಾಲ್ ಬಂಗ್ಲೆ ಮಸೀದಿ (ಸುಣಗಾರ್‌ಪೇಟೆ), ಲಾಲಾಷಾ ಕಟ್ಟಾಮಸೀದಿ, ಮಲಂಜಿ ಮಸೀದಿ, ಮಯ್ಯಾಣಿ ಮಸೀದಿ, ಅಲ್ಲಿಖಾನ್ ಮಸೀದಿ, ಸೂರ್ ಮಸೀದಿ, ಮಂಗಳವಾರ ಪೇಟೆ ಮಸೀದಿ, ನವಾಬ್ ಬಂಗ್ಲಾ ಮಸೀದಿ, ಏಕ್‌ಮಿನಾರ್ ಮಸೀದಿ, ಮಟ್ಟಿದುಸ್ತಿದ್ ಮಸೀದಿ, ದಿಲೇರ್‌ಖಾನ್ ಬಂಗ್ಲಾ ಮಸೀದಿ, ಜಿಲೇಖಾನಿ ಮಸೀದಿ ಮತ್ತು ಕಾಶಿಮಸೀದಿ. ಈ ಊರಿನ ಪ್ರಾಂತ ಕಚೇರಿ ಗೋಡೆಯ ಮೇಲಿರುವ ಶಾಸನವು ಆದಿಲ್ ಷಾ ಎರಡನೇ ಇಬ್ರಾಹಿಂನ ಕಾಲದ್ದಾಗಿದ್ದು (ಕ್ರಿ.ಶ. 1599) ಬಂಕಾಪುರ ಕೋಟೆಯ ಅಧಿಕಾರಿ ಖಾನ -ಎ-ಅಜ್ಜ ಖುಸ್ತುರ್‌ಖಾನನಿಂದ ನೀರಲಿಗೆ ಗ್ರಾಮದಲ್ಲಿ ಬಾವಿಯ ನಿರ್ಮಾಣವನ್ನು ತಿಳಿಸುತ್ತದೆ. ನವಾಬನ ಬಂಗ್ಲೆಯ ಹತ್ತಿರ ಇರುವ ಶಾಸನವು ದಿಲೇರ್‌ಖಾನನ ಮಸೀದಿಯನ್ನು ನವಾಬ ದಿಲೇರ್‌ಖಾನನ ಆಜ್ಞೆಯ ಮೇರೆಗೆ ಬಕ್ಷಿ ಖಾದಿರ್‌ಖಾನನೆಂಬ ಅಧಿಕಾರಿಯಿಂದ ಕ್ರಿ.ಶ. 1854-55 ರಲ್ಲಿ ನಿರ್ಮಿಸಿದ ಬಗೆಗೆ ದಾಖಲಿಸುತ್ತದೆ. ಈ ಊರಿನಲ್ಲಿರುವ ಪ್ರಮುಖ ದರ್ಗಾಗಳೆಂದರೆ (ಉರುಸ್‌ಗಳು ನೆರವೇರುವ ಮುಸ್ಲಿಂ ತಿಂಗಳುಗಳನ್ನು ಆವರಣದಲ್ಲಿ ಕೊಟ್ಟಿದೆ); ಅಸಾರ್ ದರ್ಗಾ (ಮೌಲೂಸ್) ಕಮಾಲ್ ಬಂಗಿ (ಮೊಹರಂ), ರಫಯಿಭಾಷಾ (ಬಕ್ರೀದ್), ಸಬ್ಜ್ ಪೋಶ್ ಬಾಷಾ, ಕೆರೆ ಹತ್ತಿರವಿರುವ ಜಲಾಲ್‌ಬಾಷಾ (ದಸ್ತಗೀರ್) ಹಾಗೂ ಮಹಮ್ಮದ್ ಷಾ ದರ್ಗಾ. **ಮಂತ್ರೋಡಿಯು** ಸವಣೂರಿನಿಂದ ಐದು ಕಿ.ಮೀ. ದೂರದಲ್ಲಿದ್ದು ಪ್ರಾಚೀನ ರಾಷ್ಟ್ರಕೂಟರ ಶಾಸನಗಳಲ್ಲಿ 'ಮಂತ್ರವಾಡಿ'ಯೆಂದು ಪ್ರಸಿದ್ಧವಾಗಿದೆ. ರಾಷ್ಟ್ರಕೂಟ ಅಮೋಘವರ್ಷನ ಕಾಲದ ಕ್ರಿ.ಶ. 865ರ ಶಾಸನವು ಎಳ್ಬುಣಸೆಯ 40 ಮಹಾಜನರು ಇಲ್ಲಿನ ಮೂಲಸ್ಥಾನ ದೇವರಿಗೆ ದಾನ ಬಿಟ್ಟ ವಿಷಯ ಹೇಳುತ್ತದೆ. ಸೊನ್ನಲಿಗೆಯ ಕಪಿಲ ಸಿದ್ಧಮಲ್ಲಿಕಾರ್ಜುನ ದೇವರಿಗೆ ಮಂತ್ರವಾಡಿಯನ್ನು ಉಂಬಳಿಬಿಟ್ಟ ವಿಷಯವನ್ನು ಕ್ರಿ.ಶ. 1234ರ ಶಾಸನ ಹೇಳುತ್ತದೆ. ಊರಿನಿಂದ ಅರ್ಧ ಕಿ.ಮೀ. ದೂರದ ಗುಡ್ಡದ ಮೇಲಿನ ಪ್ರಾಚೀನ ಸಿದ್ದೇಶ್ವರ ಗುಡಿ ಈಗ ನವೀಕೃತವಾಗಿದ್ದು ಇಲ್ಲಿ ಶಿವರಾತ್ರಿ ಕಾಲಕ್ಕೆ ಜಾತ್ರೆಯಾಗುತ್ತದೆ. ಊರಲ್ಲಿ ಪ್ರಸಿದ್ಧ ರೇವಣಸಿದ್ಧೇಶ್ವರ ಹಾಗೂ ಮಂತ್ರೋಡಿ ಮಠಗಳಿವೆ.

**ಸಾತೇನಹಳ್ಳಿ** : ಹಿರೇಕೆರೂರು ತಾಲೂಕಿನ (ಜನಸಂಖ್ಯೆ: 1,483) ಹಿರೇಕೆರೂರಿನಿಂದ ವಾಯುವ್ಯಕ್ಕೆ ಒಂಭತ್ತು ಕಿ.ಮೀ. ದೂರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ ನಾಗರಖಂಡ-70ಕ್ಕೆ ಸೇರಿದ್ದ ಈ ಊರಿಂದ ಈವರೆಗೆ 12 ಶಾಸನಗಳು ವರದಿಯಾಗಿವೆ. ಸ್ಥಳೀಕರು 'ವಜ್ರಕಲ್ಲೆ'ಂದು ಕರೆದ ರಾಷ್ಟ್ರಕೂಟರ ಕಾಲದ ಗೋಸಾಸ ಕಲ್ಲುಗಳು ಇಲ್ಲಿನ ಶಾಂತೇಶ್ವರ ದೇವಾಲಯದ ದೀಪಸ್ತಂಭದ ಬಳಿ ಗುರುತಿಸಲ್ಪಟ್ಟಿದ್ದು, ಒಂದರಲ್ಲಿ ಶಾಸನವಿದ್ದು ಹಾಳಾಗಿದೆ. ಕ್ರಿ.ಶ. 1114ರ ಅರ್ಮಡಿ ವಿಕ್ರಮಾದಿತ್ಯನ ಕಾಲದ ಶಾಸನವೊಂದು ಇಲ್ಲಿನ ಗುಂಡೇಶ್ವರ ದೇವರಿಗೆ ಕಳಸ ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1203ರ ಇಮ್ಮಡಿ ಬಲ್ಲಾಳನ ಕಾಲದ ವೀರಗಲ್ಲು ಶಾಸನವೊಂದು ಇಮ್ಮಡಿ ಬಲ್ಲಾಳನ ಮಹಾಮಂಡಲೇಶ್ವರ ಕಾವದೇವರಸನು ಕೊಲ್ಲಿಗೊಡ್ಡೆಯ ಮೇಲೆ ದಾಳಿಮಾಡಿದಾಗ ತ್ರಿಭುವನಮಲ್ಲ ಹರಿಯಮಸೆಟ್ಟಿ ಸಾಯಲು ಲೆಂಕ ಕಬ್ಬಿಲ ಚಟ್ಟನ್ನು ಹೋರಾಡುತ್ತ ಸುರಲೋಕ ಸೇರಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1204ರ ಶಾಸನ ವೆಂಣ್ಣಲೆ ಸೆಟ್ಟಿಕವ್ವೆ ಸತ್ತ ತನ್ನ ತನ್ನ ಮಗನ ಸ್ಮಾರಕವಾಗಿ ವೀರಬಣಂಜು ಪಟ್ಟಣ ಸಾತೆಯನಹಳ್ಳಿಯಲ್ಲಿ ಹರಿಹರೇಶ್ವರ ದೇವಾಲಯವನ್ನು ನಿರ್ಮಿಸಿದಾಗ ಕಮ್ಮಟದ ಮಲ್ಲಯ್ಯ ಈ ಗುಡಿಗೆ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1240ರ ಮತ್ತೊಂದು ಶಾಸನ ಖ್ಯಾತ ನಾರೀಮಣಿ ವೆಂಣ್ಣಲೆಸೆಟ್ಟಿಕವ್ವೆಯ ಮೊಮ್ಮಗ ಶಂಕರಸೆಟ್ಟಿಯ ಮಗ ಬೊಮ್ಮಿಸೆಟ್ಟಿ ನಾಗರ ಖಂಡದ ನಾಳ್ಪ್ರಭುವಾಗಿದ್ದಾಗ ತನ್ನ ತಂದೆಗಾಗಿ ಶಂಕರನಾರಾಯಣ ದೇವಾಲಯವನ್ನು ನಿರ್ಮಿಸಿ ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. 1292ರ ಯಾದವ ರಾಮದೇವನ ಕಾಲದ ನಿಷಿದಿ ಶಾಸನವೊಂದು ಹರಿಯಪ್ಪಯ್ಯನ ಸಮಾಧಿ ಮರಣವನ್ನು ಸೂಚಿಸಿದರೆ ಕ್ರಿ.ಶ. 1581ರ ಶ್ರೀರಂಗರಾಯನ ಕಾಲದಲ್ಲಿ ಇಮ್ಮಡಿ ಸದಾಶಿವರಾಯನ ಕಾರ್ಯಕರ್ತ ಹಾವಸೆಭಾವಿ (ಹಂಸಭಾವಿ)ಯ ಲಖಿನಾಯಕ ಹನುಮಂತದೇವರ ಅರ್ಚನೆಗೆಂದು ಹನುಮಸಮುದ್ರ (ಮುದ್ದುಗೊಂಡ-ಕೊಪ್ಪ; ಮುದ್ದಿನಕೊಪ್ಪ) ಗ್ರಾಮವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಸ. 16 ಶತಮಾನದ ಶಾಸನ ಹನುಮ ದೇವರಿಗಾಗಿ ನವಿಲುಯ್ಯಾಲೆ ಕಂಬವನ್ನು ಸಾತೇನಹಳ್ಳಿಯ ಗೌಡ ತಿಮ್ಮಣ್ಣ ನಿಲ್ಲಿಸಿದನೆಂದು ಹೇಳುತ್ತದೆ. ಕ್ರಿ.ಶ. 1141ರ ಶಾಸನೋಕ್ತ ಗುಂಡೇಶ್ವರ ಗುಡಿಯೇ ಇಂದಿನ ರಾಮಲಿಂಗೇಶ್ವರ ಗುಡಿಯಾಗಿದ್ದು ಇದು ಗರ್ಭಗೃಹ, ಅಂತರಾಳ, ನವರಂಗ ಮತ್ತು ನಂದಿ ಮಂಟಪವನ್ನು ಹೊಂದಿದೆ. ಇದರ ಗರ್ಭಗೃಹ ಇಟ್ಟಿಗೆಯ ರಚನೆಯಾಗಿದ್ದರೆ ಉಳಿದ ಭಾಗಗಳು ಶಿಲಾರಚನೆಯಾಗಿವೆ. ರಾಮಲಿಂಗೇಶ್ವರ ಗುಡಿಯ ಗರ್ಭಗೃಹವು ಇಟ್ಟಿಗೆ ರಚನೆಯಾದ ಕಾರಣ ಇದು ಶಾತವಾಹನರ ಕಾಲದಷ್ಟು (ಸುಮಾರು ಕ್ರಿ.ಶ. ಒಂದನೇಯ ಶತಮಾನ) ಹಿಂದಕ್ಕೆ ಗುರುತಿಸಬೇಕೆಂದು ವಿದ್ವಾಂಸರ ಅಭಿಪ್ರಾಯವಾದರೂ ಇದನ್ನು ಪುಷ್ಟೀಕರಿಸುವುದು ಕಷ್ಟ. ಗರ್ಭಗೃಹ, ಅಂತರಾಳ ಮತ್ತು ನವರಂಗದ ಬಾಗಿಲುವಾಡಗಳು ನಿರಾಡಂಬರವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಗರ್ಭಗೃಹದಲ್ಲಿ ಬೃಹತ್ತಾದ ರಾಷ್ಟ್ರಕೂಟರ ಕಾಲದ ಶಿವಲಿಂಗವಿದೆ. ನವರಂಗದಲ್ಲಿರುವ ದೇವಕೊಷ್ಠಗಳಲ್ಲಿ ಭೈರವನ ಶಿಲ್ಪ ಮತ್ತು ಮುಕ್ಕಾದ ಮಹಿಷಾಸುರಮರ್ದಿನಿ ಶಿಲ್ಪಗಳಿವೆ. ನವರಂಗದ ನಾಲ್ಕು ಕಂಬಗಳು ಬೃಹತ್ತಾಗಿವೆ. ನವರಂಗದ ಛತ್ತಿನಲ್ಲಿ ಮೂರು ವೀರಗಲ್ಲುಗಳನ್ನು ಸೇರಿಸಿ ಜೀರ್ಣೋದ್ಧಾರ ಮಾಡಿದ್ದಾರೆ. ನಂದಿ ಮಂಟಪದಲ್ಲಿ ನಂದಿಯ ಹಿಂಬದಿಯಲ್ಲಿ ಸಪ್ತಮಾತೃಕಾ ಶಿಲ್ಪವನ್ನು ಇಟ್ಟಿದ್ದಾರೆ. ನವರಂಗದ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯವು. ಪೂರ್ವಾಭಿಮುಖವಾಗಿರುವ ಈ ಗುಡಿಯ ಪರಿಸರದಲ್ಲಿ ಮೇಲೆ ಪ್ರಸ್ತಾಪಿಸಿರುವ ವೀರಗಲ್ಲುಗಳು ಸೇರಿದಂತೆ ಎಂಟು ವೀರಗಲ್ಲುಗಳಿವೆ.

ಊರ ಹೊರಗೆ ಹೊಲದಲ್ಲಿರುವ ನಿರಾಡಂಬರ ಗುಡಿಯೇ ಕ್ರಿ.ಶ. 1204ರಲ್ಲಿ ಕೋಣವತ್ತಿಯ ವೆಂಣ್ಣಲಸೆಟ್ಟಿಕವ್ವೆ ನಿರ್ಮಿಸಿದ ಹರಿಹರೇಶ್ವರ ಗುಡಿಯಾಗಿದೆ. ಗರ್ಭಗೃಹ, ಅರ್ಧಮಂಟಪ ಮತ್ತು ತೆರೆದ ನವರಂಗ ಹಾಗೂ ಮುಖಮಂಟಪವನ್ನು ಹೊಂದಿರುವ ಈ ಗುಡಿಯ ಅರ್ಧಮಂಟಪದ ಮೇಲೆ ಹುಲಿಯನ್ನು ವಧಿಸುತ್ತಿರುವ ಸಳನ ಸುಂದರ ಹೊಯ್ಸಳ ಲಾಂಛನವಿದೆ. ಗರ್ಭಗೃಹದ ಬಾಗಿಲವಾಡ ಸರಳವಾಗಿದ್ದು ತ್ರಿಶಾಖಪಟ್ಟಿಕೆ ಹೊಂದಿದ್ದು ಮೇಲೆ ಪಂಚಶಿಖರಗಳಿವೆ. ಅಂತರಾಳದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಜಾಲಂಧ್ರವನ್ನು ಹೊಂದಿದ್ದು ಬ್ರಹ್ಮ ಮಹೇಶ್ವರ ವಿಷ್ಣು ಕೆತ್ತನೆಯಿರುವ ಆಕರ್ಷಕವಾದ ಮಕರತೋರಣವನ್ನು ಹೊಂದಿದೆ. ನವರಂಗದಲ್ಲಿ ಚಾಳುಕ್ಯ ಕಂಬ ಹಾಗೂ ಅರ್ಧಕಂಬಗಳಿದ್ದು ಅಂಚಿನಲ್ಲಿ ಕಕ್ಷಾಸನವಿದೆ. ನವರಂಗದಲ್ಲಿ ನಾಲ್ಕು ದೇವಕೊಷ್ಠಗಳಿದ್ದು, ಅವುಗಳಲ್ಲಿ ಮೂರಡಿ ಎತ್ತರದ ಸಪ್ತಮಾತೃಕಾ, ಗಣಪತಿ, ಮಹಿಷಮರ್ದಿನಿ ಹಾಗೂ ಸೂರ್ಯನ ಸುಂದರ ಶಿಲ್ಪಗಳಿವೆ. ಈ ನವರಂಗದ ದ್ವಾರದ ಬಳಿ ತಾಳವಾರವಾಗಿ ಎರಡು ಆನೆಗಳನ್ನು ನಿಲ್ಲಿಸಲಾಗಿದೆ. ದೇವಾಲಯದ ಶಿಖರವು ಕದಂಬ ನಾಗರ ಶೈಲಿಯಲ್ಲಿದ್ದು ಗರ್ಭಗೃಹದ ಸುತ್ತ ಮೂರು ದಿಕ್ಕಲ್ಲೂ ದೇವಕೋಷ್ಠಗಳಿವೆ. ವೆಂಣ್ಣಲೆಸೆಟ್ಟಿಕವ್ವೆಯ ವ್ಯಕ್ತಿತ್ವವನ್ನು ವರ್ಣಿಸುವ 10 ಅಡಿ ಎತ್ತರದ ಶಿಲಾಶಾಸನವಿದ್ದು, ಈ ಗುಡಿಯ ಮುಂದಿನ ಹೊಲಮಾಳದಲ್ಲಿ ಒಕ್ಕೆ ಹಾಗೂ ಮತ್ತೊಂದು ಜೋಡುಕ್ಕೆ ಮಾಸ್ತಿಕಲ್ಲುಗಳಿವೆ.

ಊರ ನಡುವೆ ಇರುವ ನಾರಾಯಣದೇವರ ಗುಡಿಯ ಕ್ರಿ.ಶ. 1241ರಲ್ಲಿ ನಾಳ್ಪಭು ಬೊಮ್ಮಸೆಟ್ಟಿ ನಿರ್ಮಿಸಿದ ಸಿದ್ಧಶಂಕರ ನಾರಾಯಣದೇವರ ಗುಡಿಯಾಗಿದ್ದು, ಇಂದು ಈ ಗುಡಿ ನಂತರದ ಕಾಲದ ಬುರುಜಿನಲ್ಲಿ ಅಂತರ್ಗತವಾಗಿದ್ದು ಸಮೀಪ ಹೋಗುವವರೆಗೆ ಗುಡಿಯೆಂದು ಗೊತ್ತಾಗುವುದಿಲ್ಲ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಇದರ ಸರಳ ಬಾಗಿಲವಾಡದ ಗರ್ಭಗೃಹದಲ್ಲಿ ಆರಡಿ ಎತ್ತರದ ಸುಂದರ ವಿಷ್ಣು ಶಿಲ್ಪವಿದ್ದು ಪಾದದ ಬಳಿ ಪಟ್ಟಿಕೆ ಮೇಲೆ ಶ್ರೀ ಶಂಕರನಾರಾಯಣ ಎಂಬ ಒಂದು ಸಾಲಿನ ಶಾಸನವಿದೆ. ಇಕ್ಕೆಲದಲ್ಲಿ ಶ್ರೀದೇವಿ ಭೂದೇವಿಯರಿದ್ದಾರೆ. ನವರಂಗದಲ್ಲಿ ಚಾಲುಕ್ಯ ಸ್ತಂಭಗಳಿದ್ದು ಅಲ್ಲಿನ ದೇವಕೋಷ್ಠಗಳಲ್ಲಿ ಮೂರಡಿ ಎತ್ತರದ ಶಿವ ಹಾಗೂ ಅಷ್ಟಭುಜ ದುರ್ಗಾ ಶಿಲ್ಪಗಳಿವೆ. ಈ ಗುಡಿಯ ಹಿಂಬದಿಯಲ್ಲಿರುವ ಗಿಡಗಂಟೆಗಳು ಆ ಭಾಗವನ್ನು ಶಿಥಿಲಗೊಳಿಸಿವೆ.

ಇಲ್ಲಿನ ಮತ್ತೊಂದು ಆಕರ್ಷಣೆಯೆಂದರೆ ಶಾಂತೇಶ್ವರ ದೇವಾಲಯ. ಮೂಲತಃ ಕಲ್ಯಾಣದ ಚಾಲುಕ್ಯರ ಕಾಲದ ಗುಡಿಯಾಗಿದ್ದು ಈ ಗುಡಿಯಲ್ಲಿಂದು ವಿಜಯನಗರ ಕಾಲದ ಹನುಮಂತನ ಮೂರ್ತಿಯಿದೆ. ಗರ್ಭಗೃಹ, ಅಂತರಾಳ, ಮತ್ತು ನವರಂಗದ ಬಾಗಿಲವಾಡಗಳು ಸುಂದರವಾಗಿವೆ. ಅಂತರಾಳದ ಬಾಗಿಲವಾಡದ ಮೇಲೆ ಗಣಪತಿ, ಬ್ರಹ್ಮ, ನಟರಾಜ, ಸೂರ್ಯ ಹಾಗೂ ಮಹಿಷಮರ್ದಿನಿ ಕೆತ್ತನೆಯಿರುವ ಮಕರತೋರಣದ ಅಲಂಕಾರವಿದೆ. ನವರಂಗದಲ್ಲಿ ಇಕ್ಕೆಲದಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಎರಡಡಿ ಎತ್ತರದ ಮೈಲಾರಂಗ ಮತ್ತು ಗಣಪತಿಯ ಸುಂದರ ಶಿಲ್ಪಗಳಿವೆ. ಈ ಗುಡಿಯ ಗರ್ಭಗೃಹವನ್ನು ಸುಂದರವಾದ ಕದಂಬ ನಾಗರ ಶಿಖರ ಅಲಂಕರಿಸಿದೆ. ಈ ಗುಡಿಯ ಆವರಣದಲ್ಲಿರುವ ಪೀಠಸ್ಥ ಚತುರ್ಮುಖ ಬ್ರಹ್ಮಶಿರ ಮೂರ್ತಿಯಿದ್ದು ಇದನ್ನು ಸ್ಥಳೀಕರು 'ಗೋಲಕವ್ವ'ನೆಂದು ಹೇಳಿ ಹಟ್ಟಿ ಹಬ್ಬದಂದು ವಿಶೇಷವಾಗಿ ಪೂಜಿಸುತ್ತಾರೆ.

ಊರಿಂದ ಸುಮಾರು 2.5 ಕಿ.ಮೀ. ಪಶ್ಚಿಮಕ್ಕೆ ಸಾತೇನಹಳ್ಳಿ - ಮಡ್ಲೂರು ಗಡಿಯ ಬಳಿ ಸುಮಾರು ಕ್ರಿ.ಶ. 10-12 ಶತಮಾನದ ಆಕರ್ಷಕವಾದ ಸೋಮಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಅಂತರಾಳದ ಬಾಗಿಲವಾಡದ ಮೇಲೆ ತ್ರಿಮೂರ್ತಿ ಕೆತ್ತನೆಯಿರುವ ಮಕರತೋರಣವಿದ್ದು ಮುಂದಿನ ಬದಿಯಲ್ಲಿ ಚಂದ್ರಶಿಲೆಯಿದೆ. ನವರಂಗದಲ್ಲಿ ಆರು ದೇವಕೋಷ್ಠಗಳಿದ್ದು ಅವುಗಳಲ್ಲಿ ಮೂರಡಿ ಎತ್ತರದ ಸಪ್ತಮಾತೃಕಾ, ಗಣಪತಿ, ಮಹಿಷಮರ್ದಿನಿ, ಕಾರ್ತಿಕೇಯ, ಸೂರ್ಯ ಹಾಗೂ ಪಾರ್ವತಿ-ಪರಮೇಶ್ವರ ಶಿಲ್ಪಗಳಿವೆ. ನವರಂಗದಲ್ಲಿ 24 ಕಂಬಗಳಿವೆ. ಇದರ ಪ್ರವೇಶದ್ವಾರದ ಬಳಿ ಆನೆಗಳಿವೆ. ಶಿಖರ ಭಾಗ ಕಣ್ಮರೆಯಾಗಿರುವ ಈ ಗುಡಿಯ ಹಿಂಬದಿಯನ್ನು ಮಣ್ಣಿನ ದಿಬ್ಬ ಮರೆ ಮಾಡಿದೆ. ಇವುಗಳ ಜೊತೆಗೆ ಊರಲ್ಲಿ ಬಸವಣ್ಣ, ವೀರಭದ್ರ, ಮಾತಂಗವ್ವ, ದ್ಯಾಮವ್ವನ ಗುಡಿಗಳಾಗಿವೆ. ಊರಲ್ಲೊಂದು ಮಸೀದಿಯಿದೆ.

**ಸಾವಿಕೇರಿ** : ಹಾನಗಲ್ ತಾಲೂಕಿನ ಸಾವಿಕೇರಿಯ (ಜನಸಂಖ್ಯೆ : 1,290) ಹಾನಗಲ್‌ನಿಂದ ನೈಋತ್ಯಕ್ಕೆ 12 ಕಿ.ಮೀ. ದೂರದಲ್ಲಿರುವ ಈ ಊರಿನ ಪ್ರಾಚೀನ ಹೆಸರು 'ಸಮಕರಿಗೆ', 'ಸಾವಿಕೆರೆ' ಎಂದು ರಾಷ್ಟ್ರಕೂಟರ ಜಗತ್ತುಂಗನ ಶಾಸನದಿಂದ ಗೊತ್ತಾಗುತ್ತದೆ. ಈ ಊರಿಂದ ಒಟ್ಟು ಎಂಟು ಶಾಸನಗಳು ವರದಿಯಾಗಿದ್ದು, ಶಾಸನಾಧಾರಗಳಿಂದ ಈ ಊರಿನ ಇತಿಹಾಸವನ್ನು ರಾಷ್ಟ್ರಕೂಟರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ವೀರಪ್ಪ ಸಮಸಗಿಯವರ ಹೊಲದಲ್ಲಿರುವ 4-5 ಗೋಸಾಸ ಕಲ್ಲುಗಳು ಈ ಅಂಶವನ್ನು ಪುಷ್ಟೀಕರಿಸುತ್ತವೆ. ಇಲ್ಲಿನ ಉಳಿದ ಶಾಸನಗಳು ವೀರಗಲ್ಲು, ದಾನ ಮತ್ತು ನಿಷಿಧಿ ಶಾಸನಗಳಾಗಿವೆ. ಊರ ಹೊರಗೆ ಇರುವ ಕಲ್ಮೇಶ್ವರ ಗುಡಿ ಪೂರ್ಣ ಹಾಳಾಗಿದ್ದು ಅದರ ಬಳಿ ಪೀಠಸ್ಥ ಬ್ರಹ್ಮಶಿರ ಶಿರ ಮೂರ್ತಿಯಿದೆ. ಇದು ಕಟ್ಟಿಗೆಯ ಮೂರ್ತಿಯಾಗಿದ್ದು ಇದನ್ನು ಗೋಲಕವ್ವ ಎಂದು ಕರೆಯುತ್ತಾರೆ. ವೀರಭದ್ರ ಗುಡಿಯಲ್ಲಿ ಗಣಪತಿ ಹಾಗೂ ವೀರಭದ್ರನ ಸುಂದರ ಮೂರ್ತಿ ಶಿಲ್ಪಗಳಿವೆ. ಈ ಊರಲ್ಲಿರುವ ವೀರಗಲ್ಲುಗಳಲ್ಲಿ ಕೆಲವು ವಿಶಿಷ್ಟವಾದ ಕೆತ್ತನೆಯನ್ನು ಹೊಂದಿವೆ. ಕೆರೆ ದಂಡೆ ಮೇಲಿರುವ ಗುಡಿ ತೋಂಟದ ಬಳಿ ಮೈಲಾರ-ಮಾಳಚಿ ಶಿಲ್ಪವಿದ್ದು, ಇದರ ಬಳಿಯಲ್ಲೇ ಏಳು ಮಂದಿ ಬಿಲ್ಲುಗಾರರು ಮತ್ತು ನಾಯಿಯ ಕೆತ್ತನೆಯಿರುವ ಶಿಲ್ಪವಿದೆ. ಮೈಲಾರನ 'ಏಳ್ಕೋಟಿ' ಭಕ್ತರನ್ನು ಇಲ್ಲಿ ಪ್ರಾತಿನಿಧಿಕವಾಗಿ ಬಿಲ್ಲಾಳುಗಳನ್ನು ಕೆತ್ತುವುದರೊಂದಿಗೆ ಸೂಚಿಸಿರುವಂತೆ ತೋರುತ್ತದೆ. ಇದರ ಬಳಿಯಲ್ಲೇ ತುಂಬನ್ನಲಂಕರಿಸುವ ಗಜಲಕ್ಷ್ಮಿ ಶಿಲ್ಪವಿದ್ದು, ಬುಡದಲ್ಲಿ ಶಾಸನವಿದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ದುರ್ಗವ್ವ ಮೈಲಾರ ಮುಂತಾದ ದೇವರ ಗುಡಿಗಳಿವೆ.

**ಸಿಂಗಟಾಲೂರು :** ಮುಂಡರಗಿ ತಾಲೂಕಿನ ಸಿಂಗಟಾಲೂರು (ಜನಸಂಖ್ಯೆ: 2,482) ಮುಂಡರಗಿಯಿಂದ ದಕ್ಷಿಣಕ್ಕೆ 25 ಕಿ.ಮೀ. ದೂರದಲ್ಲಿ, ತುಂಗಭದ್ರಾ ನದಿಯ ಎಡದಂಡೆಯ ಮೇಲಿರುವ ಒಂದು ಪುಣ್ಯಕ್ಷೇತ್ರವಾಗಿದೆ. ಊರ ಹೊರಗಿರುವ ಗುಡ್ಡದ ಮೇಲಿರುವ ವೀರಭದ್ರ ದೇವಾಲಯದಿಂದಾಗಿ ಇದಕ್ಕೆ ವೀರಣ್ಣನ ಕ್ಷೇತ್ರವೆಂದೂ ಹೆಸರಿದೆ. ಯುಗಾದಿಯಾದ ಐದು ದಿನಕ್ಕೆ ಅಂದರೆ ಚೈತ್ರಶುದ್ಧ ಪಂಚಮಿಯಂದು ವೀರಣ್ಣನ ಜಾತ್ರೆ, ಗುಗ್ಗುಳ ಆಗುತ್ತಿದ್ದು ಸಾವಿರಾರು ಜನ ಭಕ್ತರು ಬಂದು ನೆರೆಯುತ್ತಾರೆ. ಕಪ್ಪತ್ತಗುಡ್ಡ ಅಥವಾ ಹುಲಿಗುಡ್ಡ, (ಕಪೋತಗಿರಿ) ಎಂದೆಲ್ಲಾ ಕರೆಯುತ್ತಾರೆ. ಕಪ್ಪತ್ತಗಿರಿ ಸಾಲಲ್ಲಿರುವ ವೀರಣ್ಣನ ಗುಡಿ ತುಂಗಭದ್ರೆಯತ್ತ ಮುಖ ಮಾಡಿದ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ಆರುವರೆ ಎತ್ತರದ ವೀರಭದ್ರನ ಮೂರ್ತಿಯಿದೆ. ಅಂತರಾಳದಲ್ಲಿ ದಕ್ಷ ಬ್ರಹ್ಮನ ಶಿಲ್ಪವಿದೆ. ನವರಂಗದಲ್ಲಿರುವ ಕಂಬಗಳು ಚಾಲುಕ್ಯ ಶೈಲಿಯ ಕಂಬಗಳಾಗಿದ್ದು, ಈ ಗುಡಿಯ ಪ್ರಾಚೀನತೆಯನ್ನು ಸುಮಾರು ಕ್ರಿ.ಶ. 12ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಈ ದೇವಾಲಯದ ಎಡಬದಿಯಲ್ಲಿ ಒಂದೆರಡು ಗವಿಗಳಿವೆ. ಹಸಿರಿನಿಂದ ಈ ತಾಣ ಸಂದರ್ಶನೀಯ ಸ್ಥಳವಾಗಿದೆ.

**ಸಿದ್ಧಾಪುರ :** ಧಾರವಾಡದಿಂದ ವಾಯುವ್ಯಕ್ಕೆ ಸುಮಾರು 20ಕಿ.ಮೀ. ದೂರದಲ್ಲಿ ಧಾರವಾಡ-ಬೆಳಗಾವಿ ರಸ್ತೆಯಲ್ಲಿ ರಾವರಾಪುರದ ಅಡ್ಡರಸ್ತೆಯಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿರುವ ಬೇಚರಾಕ್ ಊರಾದ ಸಿದ್ಧಾಪುರವು ಇಂದು ಹಾಳು ಸಿದ್ಧಾಪುರ ಎಂದು ಪರಿಚಿತವಾಗಿದೆ. ಹಿಂದೆ ಇದು ಹಲಸಿಗೆ-12000ಕ್ಕೆ ಸೇರಿದ ಕುಂದೂರು-500ರ ಕಂಪಣ ಕಿತ್ತೂರು-30ರಲ್ಲಿತ್ತು. ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಕ್ರಿ.ಶ. 12ನೇಯ ಶತಮಾನದ ಶಾಸನಗಳಲ್ಲಿ 'ಹೊಸಹೊಳಲು' ಎಂದೇ ಈ ಊರನ್ನು ಹೆಸರಿಸಲಾಗಿದೆ. ಹನುಮಂತನ ಗುಡಿ ಮುಂದೆ ನಿಂತಿರುವ ಶಾಸನ ಕ್ರಿ.ಶ. 1120ರಲ್ಲಿ ಹೊಸಹೊಳಲ 60 ಒಕ್ಕಲುಗಳು ಅಲ್ಲಿನ ಮೂಲಸ್ಥಾನದೇವರಿಗೆ ಪೂಜೆ ಕೈಂಕರ್ಯಕ್ಕೆಂದು ದಾನಕೊಟ್ಟ ವಿಷಯ ತಿಳಿಸಿದರೆ, ಶಿವಮಂಟಪದ ಬಳಿಯಿದ್ದ ಕ್ರಿ.ಶ. 1135ರ ಶಾಸನ ಗೋವೆ ಕದಂಬ ಜಯಕೇಶಿ ಹಾಗೂ ಅವನ ರಾಣಿ ಮೈಳಲ ದೇವಿಯರು ಆಳುತ್ತಿದ್ದಾಗ, ಹಳ್ಳಿಗಾವುಂಡನು ಮೂಲಸ್ಥಾನ ದೇವರಿಗೆ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತ ಗಾವರಿ ಹುಲಿಯಮ್ಮ ಸೆಟ್ಟಿ ನಂದಿಯನ್ನು ನಂದಿಮಂಟಪವನ್ನೂ ಮಾಡಿಸಿ ಕೊಟ್ಟ ಅಂಶವನ್ನು ತಿಳಿಸುತ್ತದೆ. ಹಿಂದೆ ಇಲ್ಲಿನ ಪಂಚಲಿಂಗದೇವರ ಗುಡಿಯಲ್ಲಿದ್ದು ಈಗ ಕಿತ್ತೂರಿನ ಚೆನ್ನಮ್ಮ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲ್ಪಟ್ಟಿರುವ ಗೋವೆ ಕದಂಬ ಅರಸರ ಕಾಲದ ಕ್ರಿ.ಶ. 1158ರ ಶಾಸನವು ಕಿತ್ತೂರು-30ರಲ್ಲಿನ ಹೊಸಹೊಳಲ ಪಂಚಲಿಂಗದೇವರ ಚೈತ್ರ ಪವಿತ್ರ ಸೇವೆಗೆಂದು ಊರ ಸಕಲ ಶ್ರೇಣಿಯವರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 12ನೇ ಶತಮಾನದ ದೇವಿ ಪೀಠದಲ್ಲಿರುವ ಶಾಸನ ಮೂಲಸ್ಥಾನದೇವರ ಗುಡಿಯಲ್ಲಿದ್ದ ಭಗವತಿಯನ್ನು ಕಮ್ಮರಸೆಟ್ಟಿ ಮಾಡಿಸಿದನೆಂದು ಹೇಳಿದರೆ, ಅದೇ ಕಾಲದ ವಿನಾಯಕನ ಪೀಠದ ಮೇಲಿರುವ ಶಾಸನ ವಿನಾಯಕ ಸ್ಥಾಪನೆ ಬಗ್ಗೆ ಹೇಳುತ್ತಿದ್ದು ದಾನಿಯ ಹೆಸರಿರುವ ಭಾಗ ತ್ರುಟಿತವಾಗಿದೆ.

ಶಾಸನೋಕ್ತವಾಗಿರುವ ಮೂಲಸ್ಥಾನದೇವರು ಹಾಗೂ ಪಂಚಲಿಂಗದೇವರ ಗುಡಿಗಳಿಂದ ಶಿಥಿಲಗೊಂಡು ಪಾಳು ಬಿದ್ದಿವೆ. ಇಲ್ಲಿನ ಗುಡಿಯನ್ನಿಂದು ಸಿದ್ದೇಶ್ವರ ಎಂದೇ ಕರೆದು ಊರನ್ನೂ ಹಾಳಸಿದ್ಧೇಶ್ವರ ಎಂದೇ ಕರೆಯಲಾಗಿದೆ. ಮೂಲತಃ ತ್ರಿಕೂಟಾಚಲವಾಗಿರುವ ಈ ಗುಡಿಯ ಎಲ್ಲಾ ಗರ್ಭಗೃಹಗಳಿಗೂ ತೆರೆದ ಅರ್ಧಮಂಟಪವಿದ್ದು ಇವೆಲ್ಲವನ್ನೂ ಒಂದೇ ನವರಂಗ ಒಗ್ಗೂಡಿಸಿದೆ. ಯಾವುದೇ ಮೂರ್ತಿ ಶಿಲ್ಪಗಳು ಇಲ್ಲಿ ಉಳಿದಿಲ್ಲ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ದ್ವಾರವನ್ನು ನಿರಾಡಂಬರವಾದ ಪಂಚ ಶಾಖಾಲಂಕೃತ ಬಾಗಿಲವಾಡ ಅಲಂಕರಿಸಿದ್ದರೆ, ಅರ್ಧಮಂಟಪದಲ್ಲಿ ಮಕರತೋರಣದ ಸ್ತಂಭಗಳಷ್ಟೆ ಉಳಿದಿದ್ದು ಉಳಿದ ಗರ್ಭಗೃಹಗಳಲ್ಲಿ ಲಿಂಗವಿಲ್ಲ. ಆದರೆ ನವರಂಗದ ಅಂಚಲ್ಲಿ ನಾಲ್ಕೈದು ಶಿವಲಿಂಗಗಳಿವೆ. ಈ ದೇವಾಲಯದಲ್ಲಿ ಎಂಟು ಮಾದರಿಯ ಕಂಬಗಳನ್ನು ಬಳಸಲಾಗಿದ್ದು, ಹೆಚ್ಚಿನ ಕಂಬಗಳಲ್ಲಿ ರಾಷ್ಟ್ರಕೂಟ ಲಕ್ಷಣವಿದೆ. ಇದರ ಆಧಾರದ ಮೇಲೆ ಈ ಗುಡಿಯ ನಿರ್ಮಾಣ ಕಾಲವನ್ನು ಕ್ರಿ.ಶ. 11ನೇ ಶತಮಾನದ ಆರಂಭಕ್ಕೆ ಗುರುತಿಸುವುದು ಉಚಿತವೆನಿಸುತ್ತದೆ. ಈ ದೇವಾಲಯದ ಬಳಿಯಲ್ಲಿ ಮಹಿಷಮರ್ದಿನಿಯ ಭಗ್ನ ಶಿಲ್ಪವಿದೆ. ಈ ಗುಡಿಯಿಂದ ಹಿಂಬದಿಗೆ ಸುಮಾರು 150 ಮೀಟರ್ ಅಂತರದಲ್ಲಿ ಭಗ್ನ ನಂದಿ ಮೂರ್ತಿಯಿದ್ದು, ಇಲ್ಲಿ ದೊಡ್ಡ ಗಾತ್ರದ ತೆಳುವಾದ ಇಟ್ಟಿಗೆಗಳು ಲಭಿಸುತ್ತಿದ್ದು ಇವು ರಾಷ್ಟ್ರಕೂಟರ ಕಾಲದ ಇಟ್ಟಿಗೆಗಳೆಂದು ತೋರುತ್ತದೆ. ಇಲ್ಲಿನ ಬಹುಪಾಲು ಶಾಸನ ಮೂರ್ತಿಶಿಲ್ಪಗಳನ್ನು ಕಿತ್ತೂರಿನ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ.

**ಸುಳ್ಳ :** ಹುಬ್ಬಳ್ಳಿ ತಾಲೂಕಿನ ಸುಳ್ಳವು (ಜನಸಂಖ್ಯೆ :9,684)ಹುಬ್ಬಳ್ಳಿಯಿಂದ ಈಶಾನ್ಯಕ್ಕೆ ಸುಮಾರು 13 ಕಿ.ಮೀ. ದೂರದಲ್ಲಿದೆ. ಈ ಊರು ಬಹಳ ಪ್ರಾಚೀನದ್ದಾಗಿದ್ದು, ಹಿಂದೆ ಇದು ಬೆಳ್ವೊಲ-300ಕ್ಕೆ ಸೇರಿತ್ತು. ಇಲ್ಲಿನ ಐದು ಶಾಸನಗಳಲ್ಲಿ ಒಂದು ರಾಷ್ಟ್ರಕೂಟರ ಕಾಲದ್ದಾದರೆ, ಉಳಿದವು ಕ್ರಿ.ಶ. 15-17ನೇ ಶತಮಾನಕ್ಕೆ ಸೇರಿದ್ದಾಗಿದೆ. ಖಾಸಗಿ ಮನೆಯೊಂದರ ಬಳಿಯಿರುವ ಪಾದಪೀಠದ ಮೇಲೆ ಒಂದನೇಯ ಅಮೋಘವರ್ಷನ ಕಾಲಕ್ಕೆ ಸೇರಿದ ಶಾಸನ ಗುರುವಿನ ಪಾದುಕೆಗಳ ಪೂಜೆ ಹಾಗೂ ಉಣಕಲ್ಲು ಪ್ರಾಂತ್ಯದ ಗೌಡನ ಉಲ್ಲೇಖವಿದೆ. ಮುಲ್ಕಿ ಪಾಟೀಲರ ಮನೆ ಬಳಿಯಿರುವ ಕ್ರಿ.ಶ. 1509ರ ಶಾಸನ ತಿಮ್ಮಪ್ಪನಾಯಕ ಮತ್ತು ಅರವಟ್ಟಿಗೆಯ ಬಗ್ಗೆ ಉಲ್ಲೇಖಿಸಿದರೆ, ಹಿರೇಗೌಡರ ಮನೆ ಬಳಿಯಿರುವ ಮತ್ತೊಂದು ಶಾಸನ ಇದೇ ತಿಮ್ಮಪ್ಪ ನಾಯ್ಕನು ಸುಳ್ಳದಲ್ಲಿ ಬಾವಿ ಅಗೆಸಿ ದತ್ತಿಕೊಟ್ಟ ವಿಷಯ ತಿಳಿಸುತ್ತದೆ. ಇಲ್ಲಿನ ಮತ್ತೊಂದು ಶಾಸನದಿಂದ ಕ್ರಿ.ಶ. 17ನೇ ಶತಮಾನದಲ್ಲಿ ಸುಳ್ಳದ ಸಿರಿಯಪ್ಪಗೌಡ ಹಾಗೂ ಇತರರು ಅಮರಗೋಳ ಸೀಮೆಯಲ್ಲಿ ಅಗೆಯಿಸಿದ ಬಾವಿಗೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದ ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡು ಕಟ್ಟಿಗೆಯ ಕೆತ್ತನೆಯಿಂದ ಕೂಡಿ ವಿಜೃಂಭಿಸುತ್ತಿದೆ. ಎತ್ತರವಾದ ಸ್ಥಳದಲ್ಲಿ ವಿಶಾಲವಾದ ಪ್ರಾಕಾರ, ಎತ್ತರವಾದ ಎರಡು ಅಂತಸ್ತಿನ ಮೊಗಸಾಲೆಯಿರುವ ಆಕರ್ಷಕವಾದ ಪ್ರಾಕಾರದ ಪ್ರವೇಶದ್ವಾರವನ್ನು ಹೊಂದಿರುವ ಈ ಗುಡಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಹಜಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭೂಲಿಂಗವಿದೆ. ಒಳಂಕಣಗಳು ಪೂರ್ಣ ಕಟ್ಟಿಗೆಯಿಂದ ರಚಿತವಾಗಿದ್ದು ಆಕರ್ಷಕ ಬಾಗಿಲವಾಡ, ಕೆತ್ತನೆಯುಳ್ಳ ಕಂಬಗಳಿಂದ ಕಂಗೊಳಿಸುತ್ತಿದೆ. ಒಟ್ಟಾರೆ, ಕುಸುರಿ ಕೆತ್ತನೆಯಿಂದ ಕೂಡಿರುವ ಈ ಗುಡಿ ಯಾವುದೇ ಕಲ್ಲುಗುಡಿಗಾದರೂ ಸರಿಸಾಟಿಯಾಗಿ ನಿಲ್ಲಬಲ್ಲುದಾಗಿದೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯ ಅನುಕರಣೆಯಾಗಿದ್ದು, ಛತ್ತಿನಲ್ಲಿ ಕಮಲವಿದೆ. ಗರ್ಭಗೃಹದ ಶಿಖರ ಕದಂಬ ನಾಗರ ಶೈಲಿಯಲ್ಲಿದೆ. ಈ ಗುಡಿಯ ಆವರಣದಲ್ಲಿ ರಾಷ್ಟ್ರಕೂಟರ ಕಾಲದ ಭಗ್ನ ಮಹಿಷ ಮರ್ದಿನಿ, ಉಮಾಮಹೇಶ್ವರ ಹಾಗೂ ಕಾರ್ತಿಕೇಯ ಶಿಲ್ಪಗಳಿವೆ. ರಾಷ್ಟ್ರಕೂಟರ ಕಾಲದ ಶಾಸನವಿರುವ ಪಾದಪೀಠವೂ ಕಲಾತ್ಮಕವಾಗಿದೆ. ಬಾದಾಮಿ ಚಾಲುಕ್ಯರ ಶಾಸನವೊಂದರಲ್ಲಿ ದಾನ ನೀಡಿದ ಗ್ರಾಮದ ಗಡಿಗ್ರಾಮವಾಗಿ ಕಾಣಿಸಿಕೊಳ್ಳುವ ಈ ಊರಲ್ಲಿ ಇತ್ತೀಚಿನ ಬಸವಣ್ಣ, ಹನುಮಪ್ಪ, ವೀರಭದ್ರ ದುರ್ಗವ್ವ ಹಾಗೂ ದ್ಯಾಮವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇಲ್ಲಿದೆ. ಮರಾಠರ ಕಾಲದಲ್ಲಿ ಇಲ್ಲಿ ಒಬ್ಬ ದೇಸಾಯಿ ಇದ್ದರು. ಈ ಶತಮಾನದ ಆರಂಭಕ್ಕೆ ಈ ಊರ ದೇಸಾಯಿಯವರು ವೃತ್ತಿರಂಗಭೂಮಿಯಲ್ಲಿ ಹೆಸರು ಮಾಡಿದ್ದರು.

**ಸೂಡಂಬಿ :** ಬ್ಯಾಡಗಿ ತಾಲೂಕಿನ ಇದು (ಜನಸಂಖ್ಯೆ : 1602)ಪ್ರಾಚೀನ ಶಾಸನಗಳಲ್ಲಿ 'ಸೂಡಂಗಿ' ಎಂದು ಉಲ್ಲೇಖಿತವಾಗಿದೆ. ಈ ಊರು ಬ್ಯಾಡಗಿಯಿಂದ ನೈಋತ್ಯಕ್ಕೆ 28 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ನಾಗರಖಂಡ-70ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ರಾಷ್ಟ್ರಕೂಟ-ವಿಜಯನಗರ ಕಾಲಕ್ಕೆ ಸೇರಿದ್ದ ಈ ಶಾಸನಗಳಲ್ಲಿ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದ ಗೋಸಾಸ ಕಲ್ಲು ಶಾಸನ ಬಹಳ ಹಾಳಾಗಿದ್ದರೆ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನ ರುದ್ರಶಕ್ತಿ ದೇವನಿಗೆ ಸೂಡಂಗಿ ಗ್ರಾಮ ದಾನ ನೀಡಿದ್ದನ್ನು ಹೇಳುತ್ತದೆ. ಕ್ರಿ.ಶ. 1415ರ ವೀರಗಲ್ಲು ಶಾಸನ ಸೂಡಂಗಿಯ ಬೋಕಯ್ಯನ ಮರಣವನ್ನು ದಾಖಲಿಸಿದರೆ ವಿಜಯನಗರದ ಸದಾಶಿವರಾಯನ ಕಾಲದ ಶಾಸನ ಬಹುಶಃ ನಾವಿದರಿಗೆ ತೆರಿಗೆ ಮನ್ನಾ ಮಾಡಿದ ವಿಷಯ ತಿಳಿಸುತ್ತವೆ. ತಿಳವಳ್ಳಿಯ ಸಾವಂತೇಶ್ವರ (ಶಾಂತೇಶ್ವರ) ದೇವಾಲಯದ ಸೇವೆಗೆಂದು ಈ ಊರನ್ನೇ ದೇಣಿಗೆಯಾಗಿ ನೀಡಿದ ಅಂಶವನ್ನು ಕ್ರಿ.ಶ. 1239ರ ತಿಳವಳ್ಳಿ ಶಾಸನ ತಿಳಿಸುತ್ತದೆ. ಊರಲ್ಲಿದ್ದ ಪ್ರಾಚೀನ ದೇಗುಲಗಳಾದ ವೀರಭದ್ರ ಹಾಗೂ ಹನುಮಂತನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿವೆ. ರಾಷ್ಟ್ರಕೂಟರ ಕಾಲದ ನಾಲ್ಕಾರು ಗೋಸಾಸ ಕಲ್ಲುಗಳು ಕೆರೆ ಬಳಿ ನಿಂತಿವೆ. ಊರಲ್ಲಿ ಮೂರು ವೀರಗಲ್ಲುಗಳು ಒಂಭತ್ತು ಮಾಸ್ತಿಕಲ್ಲುಗಳೂ ಇವೆ. ಊರಲ್ಲಿ ಬಸವಣ್ಣ, ಈಶ್ವರ, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳೂ ಮಸೀದಿ ಹಾಗೂ ದರ್ಗಾಗಳು ಇವೆ.

**ಸೂಡಿ :** ರೋಣ ತಾಲೂಕಿನ ಸೂಡಿಯ (ಜನಸಂಖ್ಯೆ : 5,365) ಪ್ರಾಚೀನ ಶಾಸನಗಳಲ್ಲಿ 'ಸೂಂಡಿ' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ರೋಣದಿಂದ ಈಶಾನ್ಯಕ್ಕೆ 19 ಕಿ.ಮೀ. ದೂರದಲ್ಲಿ ರೋಣ - ಗಜೇಂದ್ರಗಡ ರಸ್ತೆಯಲ್ಲಿದೆ. ಹಿಂದೆ ಇದು ಕಿಸುಕಾಡು-70ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ 16 ಶಾಸನಗಳು ವರದಿಯಾಗಿವೆ. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಶಾಸನವೊಂದು ಮೂರ್ತಿ ಶಿವಾಚಾರ್ಯ ಹಾಗೂ 70 ಮಹಾಜನರ ಸನ್ನಿಧಿಯಲ್ಲಿ ಪುಲಿಗೆರೆಯ ಬದ್ದೆಗನು, ಬ್ರಹ್ಮಪುರಿ ಎಂದು ನಾಮಕರಣ (ಸೂಡಿಯ ಬ್ರಾಹ್ಮಣ ಕೇರಿಗೆ) ಮಾಡಿದ ವಿಷಯವನ್ನು ತಿಳಿಸಿದರೆ, ಕ್ರಿ.ಶ. 10ನೇ ಶತಮಾನದ ವೀರಗಲ್ಲು ಶಾಸನ

ಸತ್ತ ತುರಗನ ಬಗ್ಗೆ ಉಲ್ಲೇಖಿಸುತ್ತದೆ. ಜೋಡುಕಳಶದೇವರಗುಡಿ ಬಳಿಯಿರುವ ಐದನೆಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ. 1010ರ ಶಾಸನ, ಅಕ್ಕಾದೇವಿಯು ತನ್ನ ಆಳ್ವಿಕೆಯಲ್ಲಿ ಸೂಡಿಯ ಬ್ರಹ್ಮಪುರಿಯ ಮಹಾಜನರಿಗೆ ಭೂದಾನ ಕೊಟ್ಟ ವಿಷಯ ತಿಳಿಸಿದರೆ ಒಂದನೆಯ ಸೋಮೇಶ್ವರನ ಕ್ರಿ.ಶ. 1050ರ ಶಾಸನ ಸಿದ್ದಾಯ ನಿರ್ಧಾರ ಮಾಡಿದ ವಿಷಯ ತಿಳಿಸುತ್ತದೆ. ಮಲ್ಲಿಕಾರ್ಜುನ ಗುಡಿ ಎದುರಿನ ಕಂಬದ ಮೇಲಿನ ಶಾಸನ ಅಕ್ಕಾದೇವಿಯ ಕಾಲದಲ್ಲಿ ನಾಗವರ್ಗಡೆಗಳು ಅಕ್ಕೇಶ್ವರ ದೇವರಿಗೆ ಬಿಟ್ಟದತ್ತಿಯ ಬಗ್ಗೆ ತಿಳಿಸಿದರೆ, ಕ್ರಿ.ಶ. 1058ರ ಶಾಸನ ಈ ದಾನವನ್ನು ಆ ಗುಡಿಗೆ ಪುನರ್ಭರಣ ಮಾಡಿದ ವಿಷಯವನ್ನು ತಿಳಿಸುತ್ತದೆ. ಜೋಡು ಕಳಸದೇವರ ಗುಡಿಯಲ್ಲಿರುವ ಕ್ರಿ.ಶ. 1160ರ ಒಂದನೆಯ ಸೋಮೇಶ್ವರನ ಕಾಲದ ಶಾಸನ, ಮನೆವರ್ಗಡೆ ನಾಗದೇವಯ್ಯನು ನಾಗೇಶ್ವರ ದೇವಾಲಯವನ್ನು ನಿರ್ಮಿಸಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1089 ಶಾಸನ ಪೆರ್ಮಾಡಿ ಸಿಂಗಣದೇವನು ಅಚಲೇಶ್ವರ ಗುಡಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಕ್ರಿ.ಶ. 1075ರ ಶಾಸನ ಇಮ್ಮಡಿ ಸೋಮೇಶ್ವರನು ಸೂಡಿಯ ಪಂಚಲಿಂಗೇಶ್ವರ ಗುಡಿಗೆ ಮುಸಿಯಗೆರೆ ಗ್ರಾಮವನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. 1088ರ ಶಾಸನ ಆರನೇಯ ವಿಕ್ರಮಾದಿತ್ಯನ ಪಿರಿಯರಸಿ ಲಷ್ಮಾದೇವಿಯು ಸೂಂಡಿಯ ಅಚಲೇಶ್ವರಕ್ಕೆ ಪೊಂಗಲಿ ಗ್ರಾಮವನ್ನು ದಾನ ಬಿಟ್ಟ ವಿಷಯ ತಿಳಿಸಿದರೆ ಕ್ರಿ.ಶ. 1103ರ ಶಾಸನವು ಓಜನು ಸೂಂಡಿಯ ಕಲ್ಲೇಶ್ವರ ದೇವಾಲಯದ ನಂದಾದೀಪಕ್ಕೊಂದು ಸುವರ್ಣದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ಇಲ್ಲೊಂದು ಟಂಕಶಾಲೆಯಿದ್ದು, ಅದರ ಅಧಿಕಾರಿ ಇವನೇ ಆಗಿದ್ದನೆಂದು ಈ ಶಾಸನ ತಿಳಿಸುತ್ತದೆ. ಕ್ರಿ.ಶ. 1113ರ ಶಾಸನ ಮಹಾಸಾಮಂತ ದಡಿಗನು ಸೂಡಿಯ ನಗರೇಶ್ವರ ಗುಡಿಗೆ ಭೂಮಿ ದಾನ ಕೊಟ್ಟ ವಿಷಯ ತಿಳಿಸುತ್ತದೆ. ವಿಠೋಬನ ಗುಡಿ ಬಳಿಯಿರುವ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನ ಸಿಂಧ ಅಚುಗಿ ಬ್ರಹ್ಮೇಶ್ವರ ದೇವರಿಗೆ ಭೂದಾನ ಮಾಡಿದ ವಿಷಯ ತಿಳಿಸಿದರೆ, ಕ್ರಿ.ಶ. 1202ರ ಯಾದವ ಸಿಂಘಣನ ಶಾಸನ ಕಿಸುಕಾಡು - 70ರಲ್ಲಿ ಸುಂಕ ಮನ್ನಾ ಮಾಡಿ ವಿಷಯವನ್ನು ತಿಳಿಸುತ್ತದೆ.

ಮೇಲಿನ ಶಾಸನೋಕ್ತ ಗುಡಿಗಳಲ್ಲಿ ಹೆಚ್ಚಿನವು ಹಾಳಾಗಿದ್ದು ಗಣಪತಿ, ಮಲ್ಲಿಕಾರ್ಜುನ ಹಾಗೂ ಜೋಡುಕಳಶದೇವರ ಗುಡಿ ಹಾಗೂ ರಸದ ಬಾವಿಗಳಷ್ಟೆ ಸುಸ್ಥಿತಿಯಲ್ಲಿದ್ದು, ಇತ್ತೀಚೆಗೆ ಇವುಗಳ ಸಂರಕ್ಷಣಾ ಕಾರ್ಯವನ್ನು ರಾಜ್ಯ ಪುರಾತತ್ವ ಇಲಾಖೆಯವರು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಊರ ಹೊರ ವಲಯದಲ್ಲಿ ಗಜೇಂದ್ರಗಡ ರಸ್ತೆಯಲ್ಲಿ ಕಾಣುವ ಜೋಡು ಕಳಸದೇವರ ಗುಡಿ, ಹೆಸರೇ ಸೂಚಿಸುವಂತೆ ಎರಡು ಕಳಶಗಳನ್ನುಳ್ಳ ದ್ವಿಕೂಟವಾಗಿದ್ದು ಇದನ್ನು ಒಂದನೆಯ ಸೋಮೇಶ್ವರನ ದಂಡನಾಯಕ ನಾಗದೇವನು ಕ್ರಿ.ಶ. 1061ರಲ್ಲಿ ನಿರ್ಮಿಸಿ ಭೂದಾನ ಮಾಡಿದ ಅಂಶವನ್ನು ಅಲ್ಲೇ ಇರುವ ಶಾಸನ ಹೇಳುತ್ತಿದ್ದು ಇದನ್ನು ನಾಗೇಶ್ವರ ದೇವಾಲಯವೆಂದು ಕರೆದಿದೆ. ಪ್ರಧಾನ ಗರ್ಭಗೃಹ ಪೂರ್ವಾಭಿಮುಖವಾಗಿದ್ದು ತೆರೆದ ಅರ್ಧಮಂಟಪವನ್ನು ಹೊಂದಿದ್ದು, ಇದಕ್ಕೆ ಎದುರಾಗಿ ಮತ್ತೊಂದು ಗರ್ಭಗೃಹ ಹಾಗೂ ಅರ್ಧಮಂಟಪಗಳಿದ್ದು ಇವೆರಡನ್ನೂ ಉತ್ತರ ದಕ್ಷಿಣವಾಗಿರುವ ಆಯಾಕಾರದ ಒಂದೇ ತೆರೆದ ನವರಂಗವು ಜೋಡಿಸಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಗರ್ಭಗೃಹದ ಒಳಗೆ ಮೂರು ಬದಿಗಳಲ್ಲಿರುವ ಕಿರುದೇವಕೋಷ್ಠಗಳಲ್ಲಿ ಕ್ರಮವಾಗಿ ಬ್ರಹ್ಮ ಮಹೇಶ್ವರ ಹಾಗೂ ವಿಷ್ಣುವಿನ ಕಿರು ಶಿಲ್ಪಗಳಿದ್ದು ಈ ದೇವಕೋಷ್ಠಗಳನ್ನು ಸುಂದರವಾದ ಮಕರತೋರಣಗಳು ಅಲಂಕರಿಸಿವೆ. ಇದರ ಎದುರಿರುವ ಗರ್ಭಗೃಹ ಈಗ ಬರಿದಾಗಿದೆಯಾದರೂ ಸಾಂದರ್ಭಿಕ ಆಧಾರಗಳಿಂದ ಇದು ಆದಿತ್ಯನ ಗುಡಿ ಎಂದು ತರ್ಕಿಸಬಹುದಾಗಿದೆ. ಪಶ್ಚಿಮಾಭಿಮುಖವಾಗಿರುವ ಈ ಗರ್ಭಗುಡಿಯ ಒಳಗೆ ಮೂರು ಬಂದಿಗಳಲ್ಲಿರುವ ಕಿರುದೇವಕೋಷ್ಠಗಳಲ್ಲಿ ಎರಡರಲ್ಲಿ ಸಮಭಂಗಿಯಲ್ಲಿ ನಿಂತಿರುವ ಸೂರ್ಯ, ಒಂದರಲ್ಲಿ ವಿಷ್ಣುವಿನ ಶಿಲ್ಪಗಳನ್ನು ಕೆತ್ತಲಾಗಿದೆ. ತೆರೆದ ನವರಂಗದಲ್ಲಿ ನಾಲ್ಕು ಮಾದರಿಯ ಕಂಬಗಳನ್ನು ಬಳಸಿದೆ. ಕಕ್ಷಾಸನವನ್ನು ಹೊಂದಿರುವ ನವರಂಗದ ನಡುವಣ ಛತ್ತಿನಲ್ಲಿ ಸರಳ ಕಮಲವಿದೆ. ನವರಂಗದ ನಡುವೆ ನಂದಿಯಿದೆ. ಇಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಎರಡು ಶಾಸನಗಳಿವೆ. ನವರಂಗವನ್ನು ಪ್ರವೇಶಿಸಲು ಇರುವ ಮಾರ್ಗಕ್ಕೆ ಸೋಪಾನವಿದ್ದು ಕೈಪಿಡಿಯಿದೆ. ಈ ದೇವಾಲಯದ ಗರ್ಭಗೃಹಗಳಿಗೆ ಆಕರ್ಷಕವಾದ ದ್ರಾವಿಡ ಶಿಖರಗಳಿದ್ದು ಚಿಕಣಿ ಶಿಲ್ಪಕೆತ್ತನೆಯಿದೆ. ಈ ದೇವಾಲಯದ ಹೊರಭಿತ್ತಿಯಲ್ಲಿ ಆನೆ, ಹುಲಿ, ಸಿಂಹಗಳ ಸಾಲಿರುವ ಅಡ್ಡ ಪಟ್ಟಿಕೆಗಳಿವೆ. ಅಲಂಕಾರಿಕ ಕಂಬಗಳು ಹಾಗೂ ಕಿರು ಶಿಖರ ಮಾದರಿಗಳನ್ನು ಬಳಸಲಾಗಿದೆ. ಕಕ್ಷಾಸನದ ಹೊರಭಿತ್ತಿಯಲ್ಲಿ ಕಿರು ಶಿಖರ ಮಾದರಿಗಳಿವೆ.

ಊರ ಪ್ರವೇಶದಲ್ಲೇ ಇರುವ ಗಣೇಶಗುಡಿ ಗರ್ಭಗೃಹವನ್ನಷ್ಟೆ ಹೊಂದಿದ್ದು ಉಳಿದ ಭಾಗಗಳು ಹಾಳಾಗಿವೆ. ಸುಮಾರು ಒಂಭತ್ತು ಅಡಿ ಎತ್ತರವಿರುವ ಈ ಆಸೀನ ಮೂರ್ತಿ ಚತುರ್ಭುಜದಾರಿಯಾಗಿದ್ದು ಸುಂದರವಾಗಿದೆ. ಇದೇ ಪರಿಸರದಲ್ಲಿ ಬೃಹತ್ತಾದ 3-4

ಲಿಂಗಗಳಿದ್ದು ಇವುಗಳ ಮಂಟಪವನ್ನು ದುರಸ್ತಿಮಾಡಿದ್ದಾರೆ. ಇದರ ಬಳಿಯಲ್ಲೇ ಭವ್ಯವಾದ ನಾಗರಭಾವಿ ('ರಸದ ಬಾವಿ') ಇದೆ. ಮೂರು ಹಂತದಲ್ಲಿರುವ ಈ ಚೌಕಾಕಾರದ ಹೊಂಡಕ್ಕೆ ನಾಲ್ಕು ಕಡೆಯಿಂದಲೂ ಸೋಪಾನವಿದೆ. ಈ ಬಾವಿಯ ಮೂರೂ ಪಾರ್ಶ್ವದ ಭಿತ್ತಿಯ ಒಳಮುಖದ ಮೇಲಿನ ಕಿರು ಶಿಖರ ಮಾದರಿಗಳ ರಚನೆ ಹಾಗೂ ಅಲಂಕಾರಿಕ ಕಂಬಗಳ ಕೆತ್ತನೆಗಳು ಕಲಾತ್ಮಕತೆಯ ಆಗರವಾಗಿವೆ. ಬಾವಿಯ ಪಾರ್ಶ್ವ ಭಿತ್ತಿಯ ಒಳಮೈಮೇಲಿನ ಈ ಕೆತ್ತನೆಗಳು, ದೇವಾಲಯದ ಭಿತ್ತಿಯನ್ನು ಹೋಲುವಷ್ಟು, ಮೀರಿಸುವಷ್ಟು ಸುಂದರವಾಗಿವೆ. ನಾಗರಭಾವಿ, ಈಶ್ವರ ಹಾಗೂ ಗಣಪತಿಗಿರುವ ಈ ಆವರಣವೂ ಸಂರಕ್ಷಿತ ಪ್ರದೇಶವಾಗಿದೆ. ಇದೇ ಆವರಣದಲ್ಲಿ ದ್ವಾರಪಾಲಕರ ಎರಡು ಶಿಲ್ಪಗಳಿವೆ.

ಊರ ನಡುವೆ ಪೂರ್ವಾಭಿಮುಖವಾಗಿರುವ ಮಲ್ಲಿಕಾರ್ಜುನ ದೇವಾಲಯವಿದೆ. ತ್ರಿಕೂಟಾಚಲವಾದ ಈ ಗುಡಿಯ ಪ್ರಧಾನ ಗರ್ಭಗೃಹಕ್ಕಷ್ಟೆ ತೆರೆದ ಅರ್ಧಮಂಟಪವಿದ್ದು, ಉತ್ತರ ದಕ್ಷಿಣದಲ್ಲಿ ಗರ್ಭಗೃಹಗಳಷ್ಟೆ ಇದ್ದು ಇವುಗಳನ್ನು ಒಂದೇ ನವರಂಗ ಒಗ್ಗೂಡಿಸಿದೆ. ಅಷ್ಟಕೋನಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಅರ್ಧಮಂಟಪದಲ್ಲಿ ನಂದಿಯಿದ್ದು ತ್ರಿಮೂರ್ತಿ ಕೆತ್ತನೆಯಿರುವ ಆಕರ್ಷಕವಾದ ಮಕರ ತೋರಣವಿದೆ. ದಕ್ಷಿಣದ ಗರ್ಭಗೃಹದಲ್ಲಿ ಆಭರಣಾಲಂಕೃತ ಶೇಷಶಯನ ಪದ್ಮನಾಭನ ಸುಂದರ ಶಿಲ್ಪವಿದ್ದು ಇದರ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಗಳಿವೆ. ಉತ್ತರದ ಗರ್ಭಗೃಹದಲ್ಲಿ ಸ್ಥಾನಿಕ ಉಮಾ ಮಹೇಶ್ವರ ಶಿಲ್ಪವಿದೆ. ನಂದಿಯನ್ನು ಬಲಕ್ಕೂ ಕಾರ್ತಿಕೇಯ ಗಣಪತಿಗಳನ್ನು ಬದಿಯಲ್ಲೂ ಕೆತ್ತಲಾಗಿದ್ದು, ಇದೂ ಕೂಡ ಸುಂದರವಾದ ಶಿಲ್ಪವಾಗಿದೆ. ಈ ಗುಡಿಯು ಎತ್ತರವಾದ ವೇದಿಕೆ ಮೇಲಿದ್ದು ಇದರ ಎಡಬದಿಯಲ್ಲಿ ಗಣಪತಿಯ ಚಿಕ್ಕಗುಡಿಯಿದೆ. ಇದರ ಶಿಖರ ದ್ರಾವಿಡಶೈಲಿಯಲ್ಲಿದ್ದು ಹೊರಭಿತ್ತಿಯಲ್ಲಿ ಅಲ್ಪ ಅಲಂಕಾರವಿದೆ. ಇವುಗಳೊಂದಿಗೆ, ಊರಲ್ಲಿ ನಗರೇಶ್ವರ, ಕಲ್ಮೇಶ್ವರ, ಲಕ್ಷ್ಮಿನರಸಿಂಹ ನಾರಾಯಣ ಬಸವಣ್ಣ ಮುಂತಾದ ಪ್ರಾಚೀನ ಗುಡಿಗಳಿದ್ದು, ಶಿಥಿಲಾವಸ್ಥೆಯಲ್ಲಿವೆ ಇತ್ತೀಚಿನ ಹನುಮಂತ, ಮೈಲಾರ, ದುರ್ಗಮ್ಮ ಹಾಗು ದ್ಯಾಮವ್ವನಂತಹ ಹಲವಾರು ಸಣ್ಣಪುಟ್ಟ ಗುಡಿಗಳಿವೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳು ಕೂಡ ಇವೆ.

**ಸೊರಟೂರು** : ಗದಗ ತಾಲೂಕಿನ ಸೊರಟೂರು (ಜನಸಂಖ್ಯೆ : 6,090) ಗದಗಿನಿಂದ 24 ಕಿ.ಮೀ. ದೂರದಲ್ಲಿರುವ ರಾಷ್ಟ್ರಕೂಟರ ಕಾಲದಿಂದಲೂ ಸೊರಟೂರು ಎಂದೇ ಕರಯಲಾಗಿರುವ ಮತ್ತು ಹೊಯ್ಸಳರ ಹಾಗೂ ಸೇಉಣರ ನಡುವೆ ಸಂಭವಿಸಿದ ಭಾರೀ ಯುದ್ಧ ಒಂದರ ರಂಗವಾಗಿತ್ತು (1910). ಈ ಊರಿನಲ್ಲಿರುವ ಪ್ರಮುಖ ದೇವಾಲಯಗಳೆಂದರೆ ರಾಮೇಶ್ವರ, ಹನುಮಂತ, ನಾರಾಯಣ, ಭವಾನಿಶಂಕರ, ವೀರಭದ್ರ, ಈಶ್ವರ (ಎರಡು) ಮುಂತಾದವುಗಳು. ರಾಮೇಶ್ವರಗುಡಿ ಶಿಥಿಲವಾಗಿದ್ದು ಗರ್ಭಗೃಹ ಮತ್ತು ಅರ್ಧಮಂಟಪ ಮಾತ್ರ ಇವೆ. ಅರ್ಧಮಂಟಪದ ಬಾಗಿಲುವಾಡವು ಅಲಂಕೃತವಾಗಿದ್ದು ಎರಡು ಚಾಳುಕ್ಯ ಶೈಲಿಯ ಕಂಬಗಳಿವೆ. ಈ ಗುಡಿಯ ಎದುರಿಗೆ ಚಾಳುಕ್ಯ ಶೈಲಿಯ ಗರ್ಭಗೃಹದಲ್ಲಿ ಹನುಮಂತನ ವಿಗ್ರಹವಿದೆ. ಹಾಗೂ ಒಳಗೆ ಗಣೇಶನ ಮೂರ್ತಿ ಇಡಲಾಗಿದೆ. ಇದರ ಮುಂಭಾಗದಲ್ಲಿ ಒಂದು ಚಾಳುಕ್ಯ ಕಂಬ ಬಿದ್ದಿದೆ. ಇದರ ಸಮೀಪವೇ ಎರಡು ಶಾಸನವಿರುವ ವೀರಗಲ್ಲುಗಳಿವೆ. ಎರಡರಲ್ಲೂ ಬಿರುಸಿನ ಯುದ್ಧದ ಚಿತ್ರಣವಿದ್ದು ವೀರರ ಮರಣವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಇದರಲ್ಲಿರುವ ಶಾಸನವು ಸುಮಾರು ಕ್ರಿ.ಶ. 13ನೇ ಶತಮಾನಕ್ಕೆ ಸೇರಿದ್ದು ನಿಡುಗಲ್ಲ ಕಾಳಗದಲ್ಲಿ ನಾಯಕನೊಬ್ಬನ ಮರಣವನ್ನು ದಾಖಲಿಸುತ್ತದೆ. ಇದರ ಹತ್ತಿರವೇ ವಾಲ್ಮೀಕಿ ಮಂದಿರವೆಂದು ಕರೆಯಲಾಗುವ ಸ್ಥಳದಲ್ಲಿ ಒಂದು ಎತ್ತರವಾದ (ಒಂದು ಮೀಟರ್) ವೀರಗಲ್ಲಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಕಲ್ಯಾಣದ ಚಾಳುಕ್ಯ ಶೈಲಿಯ ನಾರಾಯಣ ದೇವರ ಗುಡಿಯಿದೆ. ಇದರಲ್ಲಿ ಕೇವಲ ಗರ್ಭಗೃಹವಿದ್ದು ಒಳಗೆ ನಾರಾಯಣದ ವಿಗ್ರಹವಿದೆ. ಇದು ಚತುರ್ಭುಜ ಮೂರ್ತಿಯಾಗಿದ್ದು ಶಂಖ, ಚಕ್ರ, ವರದ, ಅಭಯ ಹಸ್ತಗಳನ್ನು ಹೊಂದಿದೆ. ಈ ದೇವಾಲಯದ ಮುಂಭಾಗದಲ್ಲಿ ಬಾದಾಮಿ ಚಾಲುಕ್ಯ ಅಥವಾ ರಾಷ್ಟ್ರಕೂಟರ ಕಾಲದ ವೃತ್ತಾಕಾರದ ಕಂಬಗಳಿವೆ. ಇದರ ಆವರಣದಲ್ಲೇ ಭವಾನಿ ಶಂಕರ ದೇವಾಲಯವಿದೆ. ಇದು ಇತ್ತೀಚಿನ ಕಟ್ಟಡವನ್ನು ಹೊಂದಿದ್ದರೂ ಪ್ರಾಚೀನ ದೇವಾಲಯದ ತಳಹದಿಯಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಚಾಳುಕ್ಯ ಶೈಲಿಯ ಕಂಬಗಳಿದ್ದು ಆಕರ್ಷಕವಾಗಿದೆ. ನವರಂಗದಲ್ಲಿ ನಾಟ್ಯ ಗಣಪತಿ ಹಾಗೂ ಸುಮಾರು ಐದು ಅಡಿ ಎತ್ತರವಿರುವ ಸುಂದರವಾದ ಸೂರ್ಯನಾರಾಯಣನ ಚಾಳುಕ್ಯ ಶೈಲಿಯ ಶಿಲಾಮೂರ್ತಿಯಿದ್ದು ಇಕ್ಕೆಲಗಳಲ್ಲಿ ಉಷಾ-ಪ್ರತ್ಯುಷೆಯರ ಶಿಲ್ಪವಿದೆ. ಹಾಗೂ ಇದರ ಪಾಣಿಪೀಠವು ಚಾಳುಕ್ಯ ಲಕ್ಷಣವನ್ನು ಹೊಂದಿದೆ. ಇದರ ಪಕ್ಕದಲ್ಲೇ ಭಗ್ನ ಶಿವಲಿಂಗವಿದೆ. ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅಂತರಾಳದಲ್ಲಿ ಆಸೀನ ಗಣೇಶನ ಶಿಲ್ಪ ಹಾಗೂ ದುರ್ಗಿಯ ಶಿಲ್ಪಗಳಿವೆ.

ಈ ಗುಡಿಯಿಂದ ಸ್ವಲ್ಪ ಮುಂದೆ ವೀರಭದ್ರಗುಡಿಯಿದೆ. ಇದು ಸಾಧಾರಣವಾದ ಆಧುನಿಕ ಕಟ್ಟಡವಾಗಿದೆ. ಇದರ ಮುಂಭಾಗದಲ್ಲಿ ದ್ವಿಬಾಹು ಗಣೇಶನ ಆಸೀನ ವಿಗ್ರಹ, ಮೂರು ಶಾಸನಗಳು ಹಾಗೂ ನಾಲ್ಕು ಗೋಸಾಸ ಕಲ್ಲುಗಳಿವೆ. ಒಂದು ಕಲ್ಲಿನ ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪ ಹಾಗೂ ರಾಷ್ಟ್ರಕೂಟ ಶೈಲಿಯ ಪೂರ್ಣ ಕುಂಭದ ಕಿರು ಕೆತ್ತನೆಗಳಿವೆ. ಒಂದು ಶಾಸನವು ರಾಷ್ಟ್ರಕೂಟ ಮೊದಲನೇ ಅಮೋಘವರ್ಷನ ಕಾಲದ್ದಾಗಿದ್ದು (ಕ್ರಿ.ಶ. 869) ವಿಳಕ್ಕರ ನಾಗಿಯಮ್ಮ ಗಾವುಂಡನೆಂಬ ಅಧಿಕಾರಿಯು ಸಿರಿವಾಗಿಲನ್ನು ನಿಲ್ಲಿಸಿದನೆಂದು ಉಲ್ಲೇಖಿಸುತ್ತದೆ. ಇದರ ಪಕ್ಕದಲ್ಲೆ ಇರುವ ಇನ್ನೊಂದು ಗೋಸಾಸ ಶಾಸನವು ರಾಷ್ಟ್ರಕೂಟವು ಎರಡನೇ ಕೃಷ್ಣನ ಕಾಲಕ್ಕೆ ಸೇರಿದ್ದು (ಕ್ರಿ.ಶ. 883) ಸೊರಟೂರ ಐವತ್ತು ಮಹಾಜನರ ಸನ್ನಿಧಿಯಲ್ಲಿ ಗೋಸಹಸ್ರ ದಾನವನ್ನು ಉಲ್ಲೇಖಿಸುತ್ತದೆ. ಇದೇ ಕಾಲಕ್ಕೆ ಸೇರಿದ ರಾಷ್ಟ್ರಕೂಟ ಮೂರನೇ ಕೃಷ್ಣನ ಶಾಸನವೂ ಇದರ ಪಕ್ಕದಲ್ಲೆ ಇದ್ದು (ಕ್ರಿ.ಶ. 951)ದೇವರಿಗೆ ನೀಡಿದ ಹಲವು ದಾನಗಳನ್ನು ತಿಳಿಸುತ್ತದೆ. ಇಲ್ಲಿಂದ ಸಮೀಪವಿರುವ ಕಲ್ಗುಡಿ ಓಣಿಯಲ್ಲಿ ಎರಡು ಶಿಥಿಲವಾದ ಈಶ್ವರ ದೇವಾಲಯಗಳಿವೆ. ಕೇವಲ ಗರ್ಭಗೃಹ ಮತ್ತು ಅರ್ಧಮಂಟಪ ಮಾತ್ರ ಉಳಿದಿದೆ. ಒಂದರಲ್ಲಿ ಮುಂಭಾಗದ ಅರ್ಧಮಂಟಪದಲ್ಲಿ ಎರಡು ಕಲ್ಯಾಣದ ಚಾಳುಕ್ಯ ಕಂಬಗಳಿವೆ. ಇದರ ಒಂದು ಕಂಬದಲ್ಲಿ ಶಾಸನವಿದ್ದು ಕ್ರಿ.ಶ. 1356ರಲ್ಲಿ ಪ್ರಾಚೀನ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಬಸವೇಶ್ವರ ವಿಗ್ರಹ ಸ್ಥಾಪಿಸಿದ ಉಲ್ಲೇಖವಿದೆ. ಇನ್ನೊಂದು ಈಶ್ವರ ಗುಡಿಯು ಗರ್ಭಗೃಹ ಮತ್ತು ಅರ್ಧಮಂಟಪವನ್ನು ಮಾತ್ರ ಹೊಂದಿದೆ. ಅರ್ಧ ಮಂಟಪದ ಬಾಗಿಲುವಾಡದ ಬಳಿ ಜಾಲಂದ್ರಗಳಿವೆ. ಹಾಗೂ ಹೊರಗೆ ಶಾಸನದ ಕಲ್ಲಿದೆ. ಇದರ ಸಮೀಪ ಬೇವಿನ ಮರದ ಕೆಳಗೆ ಕೊಲ್ಲಾಪುರದ ಮಹಾಲಕ್ಷ್ಮಿ ಹಾಗೂ ಇತರ ಶಿಲ್ಪಗಳು ಬಿದ್ದಿವೆ. ಊರ ಹಿಂಭಾಗದಲ್ಲಿ ಖಾಸಗಿ ಭೂಮಿಯಲ್ಲಿ ದೊಡ್ಡದಾದ ಕಲ್ಲಿನ ಕಟ್ಟಡವಿರುವ ಬಾವಿಗಳಿವೆ. ಇದರ ದಂಡೆಯಲ್ಲಿ ಒಂದು ವೀರಗಲ್ಲಿದೆ. ಸ್ವಲ್ಪ ದೂರದಲ್ಲಿ ಶಿವಲಿಂಗವಿದೆ ಹಾಗೂ ಕೊತ್ತಲಮ್ಮನ ಶಿಲಾವಿಗ್ರಹವಿದೆ. ಈ ಪರಿಸರದಲ್ಲಿ ದೇವಾಲಯದ ಅನೇಕ ಅವಶೇಷಗಳು ಬಿದ್ದಿರುವ ಸಾಧ್ಯತೆಗಳಿವೆ. ಬಾವಿಯಲ್ಲಿ ಎರಡು ಗೂಡುಗಳಿದ್ದು ನಾಗಕನ್ಯೆ ಹಾಗೂ ನಾಗಬಂಧ ಶಿಲ್ಪಗಳಿವೆ. ಖಾಸಗಿ ತೋಟದ ಒಂದು ಕಟ್ಟೆಯಲ್ಲಿ ಪ್ರಾಚೀನ ಲಕ್ಷಣವಿರುವ ದುರ್ಗಿ ಹಾಗೂ ಚಾಳುಕ್ಯ ಶೈಲಿಯ ಒಂದು ಸೂರ್ಯನ ವಿಗ್ರಹಗಳಿವೆ. ಊರಿನ ಮುಂಭಾಗದಲ್ಲಿ ಬಸ್‌ನಿಲ್ದಾಣದ ಹತ್ತಿರ ಕಾಳಭೈರವ ಗುಡಿ ಇದೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿಯಿದೆ.

**ಹತ್ತಿಮತ್ತೂರು :** ಸವಣೂರು ತಾಲೂಕಿನ ಹತ್ತಿಮತ್ತೂರು (ಜನಸಂಖ್ಯೆ :5,751)ಸವಣೂರಿನಿಂದ 14ಕಿ.ಮೀ. ದೂರದಲ್ಲಿದೆ. ಈ ಊರು ಸುಮಾರು 400 ಎಕರೆಯಷ್ಟು ವಿಶಾಲವಾದ ಕೆರೆಯನ್ನು ಹೊಂದಿದೆ. ಪ್ರಾಚೀನ ಶಾಸನಗಳಲ್ಲಿ ಪತ್ತಿ ಯಮತ್ತುವೂರು, ಪತ್ತಿಯಮತ್ತೂರು ಎಂಬ ಹೆಸರಿದ್ದು ಹತ್ತಿಬೆಳೆಗೆ ಈ ಊರು ಹಿಂದೆ ಪ್ರಸಿದ್ಧವಾಗಿರಬೇಕು. ಇಲ್ಲಿ 11 ಶಾಸನಗಳಿದ್ದು ಕ್ರಮವಾಗಿ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ ಹಾಗೂ ಯಾದವರ ಕಾಲಕ್ಕೆ ಸೇರಿದ್ದಾಗಿದೆ. ಹೊಂಡದ ಉತ್ತರ ದಂಡೆಗೆ ಸೇರಿರುವ ವೀರಗಲ್ಲು ರಾಷ್ಟ್ರಕೂಟ ಒಂದನೇಯ ಕೃಷ್ಣನ ಕಾಲಕ್ಕೆ ಸೇರಿದ್ದು ಊರಿಗಾಗಿ ದಾಸಮ್ಮ ಮತ್ತು ಎರೆಯರು ಹೋರಾಡಿ ಸತ್ತ ವಿಷಯವನ್ನು ದಾಖಲಿಸುತ್ತದೆ. ಕೋಡಿ ಹೊನ್ನಪ್ಪನ ಗುಡಿ ಬಳಿಯಿರುವ ನಿತ್ಯವರ್ಷ (ಕ್ರಿ.ಶ. 917)ನ ಶಾಸನ ತೆಲ್ಲಿಗ 50ಒಕ್ಕಲುಗಳು ಭೋಗೇಶ್ವರ ದೇವರಿಗೆ ಎಣ್ಣೆದಾನ ಮಾಡಿದುದನ್ನು ದಾಖಲಿಸಿದೆ. ಅಲ್ಲೇ ಇರುವ ಮತ್ತೊಂದು ಶಾಸನ ಆರ್ಮಡಿ ವಿಕ್ರಮಾದಿತ್ಯನ ದಂಡನಾಯಕ ಮಾಕರಸ ಹಾಗೂ ಇತರರು ದೇವಿಂಗೆರೆಯ ಜೀರ್ಣೋದ್ಧಾರಕಾಗಿ ಸುಂಕದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಯಾದವ ಮಹಾದೇವನ (ಕ್ರಿ.ಶ.1270)ಕಾಲದ ಶಾಸನವೊಂದು ಹತ್ತಿಯಮತ್ತೂರ ಬಸದಿಯ ಆಚಾರ್ಯರು ಸಮಾಧಿ ಮರಣ ಹೊಂದಿದುದನ್ನು ಉಲ್ಲೇಖಿಸಿದರೆ, ಕ್ರಿ.ಶ. 1266ರ ಮತ್ತೊಂದು ಶಾಸನ ಜಕ್ಕಿಯನ ಮಡದಿ ಮಾದವೆವೆ ಸಮಾಧಿ ಮರಣ ಹೊಂದಿದ್ದಾಗಿ ಹೇಳುತ್ತದೆ.

ಊರಲ್ಲಿ ಹರಡಿಕೊಂಡಿರುವ ವೀರಗಲ್ಲು, ಶಾಸನಗಳನ್ನು ಬಿಟ್ಟರೆ ಪ್ರಮುಖವಾದದ್ದು ಕೋಡಿಹೊನ್ನಪ್ಪನ ಗುಡಿಯೇ. ಹೊಂಡದ ಮುಂದಿರುವ ಈ ಗುಡಿ ಇಂದು ಬಹಳ ಬದಲಾವಣೆಯೊಂದಿಗೆ ಉಳಿದಿದೆ. ಈ ಗುಡಿಯಲ್ಲಿ 4.5 ಅಡಿ ಎತ್ತರದ ಸಪ್ತಮಾತೃಕೆಯರ ಪ್ರತ್ಯೇಕ ಮೂರ್ತಿ ಶಿಲ್ಪಾವಶೇಷಗಳಿವೆ. ಇಲ್ಲಿನ ಶಾಸನವೊಂದರಲ್ಲಿ ದೇವಿಂಗೆರೆಯ ಪ್ರಸ್ತಾಪ ಬರುವುದರಿಂದ, ಈ ಗುಡಿಯೇ ದೇವಿಯ ಗುಡಿಯಾಗಿದ್ದು, ಮುಂದಿರುವ ಹೊಂಡವೇ, ಶಾಸನೋಕ್ತ ದೇವಿಂಗೆರೆ ಎಂದು ತೋರುತ್ತದೆ. ಈ ಗುಡಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಕಾಣಬಹುದಾಗಿದೆ. ಹೊಂಡದ ಬಳಿಯಿರುವ ಮಾಸ್ತಿಕಲ್ಲು ಸತಿ ಹೋದ ಹೆಣ್ಣಿನ ಸ್ಮಾರಕವಾಗಿದೆ. ಇಲ್ಲಿನ ಸಂಗಮೇಶ್ವರ ಗುಡಿ ಪುನಃ ಜೀರ್ಣೋದ್ಧಾರದಿಂದಾಗಿ ಮೂಲ ಸ್ವರೂಪ ಕಳೆದುಗೊಂಡಿದೆ.

ಇಲ್ಲಿನ ಮಸೀದಿ ಹಾಗೂ ಹಜರತ್ ಸೈಯದ್ ಮುರ್ತಜಾ ಷಾ ಖಾದ್ರಿ ದರ್ಗಾ ಉಲ್ಲೇಖಾರ್ಹವಾಗಿವೆ. ಇಂದು ಈ ಊರು ಹತ್ತಿ, ಎಲೆ, ಬಾಳೆ ಬೇಸಾಯಕ್ಕೆ ಪ್ರಸಿದ್ಧವಾಗಿದ್ದು ಕೆರೆ ಕಟ್ಟೆಗಳು ಬಹಳ ಸಂಖ್ಯೆಯಲ್ಲಿವೆ.

**ಹರಳಹಳ್ಳಿ :** ಹಾವೇರಿ ತಾಲೂಕಿನ ಹರಳಹಳ್ಳಿಯು (ಜನಸಂಖ್ಯೆ : 672) ರಾಣೆಬೆನ್ನೂರಿನಿಂದ 27 ಕಿ.ಮೀ. ದೂರದಲ್ಲಿ ತುಂಗಭದ್ರಾ ದಂಡೆಯಲ್ಲಿದ್ದು ಶಾಸನದಲ್ಲಿ ವಿಕ್ರಮಪುರವೆಂದು ಉಲ್ಲೇಖಗೊಂಡಿರುವ ಪುರಾತನ ಸ್ಥಳವಾಗಿದೆ. ಈ ಊರಿನಲ್ಲಿರುವ ಕಲ್ಯಾಣದ ಚಾಳುಕ್ಯರ ಕಾಲದ (ಹೊಯ್ಸಳ ಶೈಲಿಯನ್ನು ಹೋಲುವ) ತ್ರಿಕೂಟಾಚಲವಿರುವ ಈಶ್ವರ ದೇವಾಲಯವಿದೆ. ಇದರಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು ಹಾಗೂ ಮಧ್ಯದಲ್ಲಿ ಒಂದೇ ನವರಂಗವಿದೆ. ಮೂರು ಗರ್ಭಗೃಹಗಳ ಬಾಗಿಲುವಾಡಗಳು ಅನೇಕ ಶಾಖೆಗಳನ್ನು ಹೊಂದಿದ್ದು ಅಲಂಕೃತವಾಗಿವೆ ಹಾಗೂ ಮೂರರಲ್ಲೂ ಶಿವಲಿಂಗಗಳಿವೆ. ಅಂತರಾಳಗಳ ಬಾಗಿಲುವಾಡದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಎಲ್ಲಾ ಅಂತರಾಳದ ಲಲಾಟಗಳಲ್ಲಿ ತ್ರಿಮೂರ್ತಿಗಳ ಜೊತೆಗೆ ಗಣಪತಿ, ಮಹಿಷಮರ್ದಿನಿ ಮತ್ತು ಚಾಮರಧಾರಿಣಿಯರಿರುವ ಮಕರ ತೋರಣಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಹೊಯ್ಸಳ ಶೈಲಿಯ ಕಂಬಗಳು ವೃತ್ತಾಕಾರವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತವೆ, ಮತ್ತು ಇದರ ಛಾವಣಿಯಲ್ಲಿರುವ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಕಮಲದ ಹೂವಿನ ಅಲಂಕಾರವಿದೆ. ನವರಂಗದ ಒಳಭಿತ್ತಿಯಲ್ಲಿ ಎಂಟು ದೇವಕೋಷ್ಠಗಳಿದ್ದು ಕೇವಲ ಒಂದರಲ್ಲಿ ಸಪ್ತಮಾತೃಕೆಯರ ಪಟ್ಟಿಕೆ ಮಾತ್ರ ಉಳಿದಿದೆ. ನವರಂಗದ ಮಧ್ಯದಲ್ಲಿ ಬಸವನ ಏಕಶಿಲಾಕೃತಿಯಿದೆ. ನವರಂಗದ ಕಕ್ಷಾಸನದಲ್ಲಿ ವಿಜಯನಗರದ ಕಾಲದ ರೇಖಾಚಿತ್ರಗಳಿವೆ. ದೇವಾಲಯದ ಅಧಿಷ್ಠಾನದಲ್ಲಿ ಸಿಂಹಗಳ ಚಿಕಣಿ ಶಿಲ್ಪಗಳಿವೆ. ಹೊರಭಿತ್ತಿಯಲ್ಲಿ ಸುಮಾರು ಮುಕ್ಕಾಲು ಅಡಿ ಎತ್ತರವಾದ ಸಾಲಭಂಜಿಕಾ ಶಿಲ್ಪಗಳನ್ನು ಬಿಡಿಸಲಾಗಿದೆ. ಹೊರಭಾಗದಲ್ಲಿರುವ ದೇವಕೋಷ್ಠಗಳಲ್ಲಿ ಒಂದರಲ್ಲಿ ಮಾತ್ರ ಭೈರವನ ಶಿಲ್ಪವಿದ್ದು ಉಳಿದವು ಬರಿದಾಗಿವೆ. ಮುಖ್ಯ ಗರ್ಭಗುಡಿಯ ಮೇಲೆ ಶಿಖರವಿದ್ದು ಮುಂಭಾಗದ ಶುಕನಾಸಿಯಲ್ಲಿ ಇದ್ದಿರಬಹುದಾದ ಹೊಯ್ಸಳ ಲಾಂಛನವು ಈಗ ದೇವಾಲಯದ ಒಳಗೆ ಇಟ್ಟಿರುತ್ತಾರೆ. ಉಳಿದೆರಡು ಗರ್ಭಗೃಹಗಳ ಮೇಲೂ ಕದಂಬನಾಗರ ಶೈಲಿಯ ಶಿಖರಗಳಿವೆ. ಈ ದೇವಾಲಯದ ಬಳಿ ಇನ್ನೂ ಎರಡು ಶಿಥಿಲವಾದ ದೇವಾಲಯಗಳು ಕಂಡುಬರುತ್ತವೆ. ಊರಿನಲ್ಲಿ ಖಾಸಗಿ ಮನೆಯ ಹತ್ತಿರವಿದ್ದು ಈಗ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿರುವ ಶಾಸನವು ಕ್ರಿ.ಶ. 1181ರಲ್ಲಿ ಕಲ್ಯಾಣ ಶಕ್ತಿ ಮುನಿಯ ವಿನಂತಿಯ ಮೇರೆಗೆ ಜೋಯಿದೇವರಸನು ತುಂಗಭದ್ರಾ ತೀರದಲ್ಲಿ ವಿಕ್ರಮಪುರ ಗ್ರಾಮವನ್ನು ನಿರ್ಮಿಸಿ ವಿಕ್ರಮೇಶ್ವರ ಮತ್ತು ಗುತ್ತೇಶ್ವರ ದೇವಾಲಯಗಳಿಗೆ ಬಿಟ್ಟ ದಾನವನ್ನು ತಿಳಿಸುತ್ತದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು ಗುತ್ತ ವಿಕ್ರಮಾದಿತ್ಯನ ಕಾಲದ್ದಾಗಿದ್ದು (ಕ್ರಿ.ಶ. 1188)ಮಹಾಪ್ರಧಾನ ದಂಡನಾಯಕ ದಾಸಿರಾಜನೆಂಬ ಅಧಿಕಾರಿಯಿಂದ ದಾಸೇಶ್ವರ ದೇವಾಲಯದ ನಿರ್ಮಾಣ ಹಾಗೂ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಇದರ ಪಕ್ಕದಲ್ಲಿರುವ ಇನ್ನೊಂದು ಶಾಸನವೂ ಇದೇ ಕಾಲದ್ದಾಗಿದ್ದು ಗುತ್ತ ವಿಕ್ರಮಾದಿತ್ಯನು ತನ್ನ ಮಗಳಾದ ತುಳುವಲದೇವಿಯ ಸ್ವರ್ಗಕಾರ್ಥವಾಗಿ ತುಳುವಲೇಶ್ವರ ದೇವಾಲಯ ನಿರ್ಮಿಸಿ ಗ್ರಾಮವನ್ನು ದಾನಬಿಟ್ಟ ವಿವರಗಳನ್ನು ದಾಖಲಿಸುತ್ತದೆ. ಇದಲ್ಲದೇ ಹೊಳೆದಂಡೆಯಲ್ಲಿ ಹನುಮಂತ ದೇವಾಲಯ, ದುರ್ಗಾ ದೇವಾಲಯ, ದೊಡ್ಡದಾದ ಕೋಣನ ತಲೆ ಶಿಲ್ಪವಿದೆ. ಇತ್ತೀಚೆಗೆ ಈ ಊರು ನೆರೆಯ ಹಾವಳಿಗೆ ಆಗಾಗ ತುತ್ತಾಗುತ್ತಿರುವುದರಿಂದ ಊರನ್ನು ಸ್ವಲ್ಪ ಎತ್ತರ ಪ್ರದೇಶಕ್ಕೆ ಸ್ಥಳಾಂತರಿಸುತ್ತಿದ್ದಾರೆ.

**ಹಲಗೇರಿ :** ರಾಣೆಬೆನ್ನೂರು ತಾಲೂಕಿನ ಹಲಗೇರಿಯು (ಜನಸಂಖ್ಯೆ : 6,506) ರಾಣೆಬೆನ್ನೂರಿನಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಈ ಊರು ಇಂದು ಆಯಕಟ್ಟಾದ ಸ್ಥಳದಲ್ಲಿದ್ದು, ಕೋಡ, ಮಾಸೂರು, ಸಮಸಗಿ ರಸ್ತೆಗಳು ಕೂಡುವ ಕೇಂದ್ರ ಸ್ಥಳವಾಗಿದೆ. ಕ್ರಿ.ಶ. 1404ರ ಶಾಸನವೊಂದು ನರಸನಾಯಕ ಹಲಗೆರೆಯಲ್ಲಿ ನೀಡಿದ ಭೂದಾನವನ್ನು ತಿಳಿಸುತ್ತದೆ. ಇಲ್ಲಿನ ಹಾಲಸಿದ್ಧೇಶ್ವರ ಗುಡಿ ಮೂಲತಃ ಕ್ರಿ.ಶ. 12-13ನೇ ಶತಮಾನದ ರಚನೆಯಾಗಿದ್ದು, ಇತ್ತೀಚೆಗೆ ಪೂರ್ಣ ದುರಸ್ತಿಗೊಂಡಿದೆ. ಈ ಗುಡಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿಯಿದೆ. ಗರ್ಭಗೃಹ, ಅಂತರಾಳಗಳ ಬಾಗಿಲವಾಡಗಳು ಸರಳವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದಲ್ಲಿರುವ ಒಂದೇ ದೇವಕೋಷ್ಠದಲ್ಲಿ ಆದಿತ್ಯನ ಶಿಲ್ಪವಿದೆ. ಊರಲ್ಲಿ ಹನುಮಂತನ ಗುಡಿಯಿದೆ. ಈ ಗುಡಿ ಆವರಣದಲ್ಲಿ ಪಾರ್ವತಿ-ಪರಮೇಶ್ವರ ಮತ್ತು ಗಜಲಕ್ಷ್ಮಿ ಶಿಲ್ಪಗಳಿವೆ. ದುರ್ಗಮ್ಮನ ಗುಡಿಯಲ್ಲಿ ಇತ್ತೀಚಿನ ಮಹಿಷಮರ್ದಿನಿ ಶಿಲ್ಪವಿದೆ. ಊರಲ್ಲಿ ಮೂರು ಮಸೀದಿಗಳಿದ್ದು ಅದರಲ್ಲಿ ಜಾಮಿಯಾ ಮಸೀದಿ ದೊಡ್ಡದಾಗಿದ್ದು ಚೆನ್ನಾಗಿದೆ. ಮೇಲಾಗಿ ಜುಮಾಲ್‌ಷಾ ದರ್ಗಾವಿದೆ. ಖ್ಯಾತ ರಂಗನಟರಾದ ಹಲಗೇರಿ ಜಟ್ಟೆಪ್ಪ ಈ ಊರಿನವರು. ಇವರು ಹಲಗೇರಿ ನಾಟಕ ಕಂಪನಿಯ ಸಂಸ್ಥಾಪಕರು.

**ಹಾನಗಲ್ಲು :** ತಾಲೂಕು ಕೇಂದ್ರವಾದ ಹಾನಗಲ್ಲು (ಜನಸಂಖ್ಯೆ : 20,906) ಧಾರವಾಡದಿಂದ 94 ಕಿ.ಮೀ. ದೂರದಲ್ಲಿದೆ. ಶಾಸನೋಕ್ತ 'ಪಾನುಂಗಲ್' , 'ಹಾನುಂಗಲ್-500' 'ಹಾನಗಲು' ಕದಂಬರ ಒಂದು ಶಾಖೆಯ ರಾಜಧಾನಿಯಾಗಿದ್ದು ಈಗ ತಾಲೂಕು

ಹಾಗೂ ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿದೆ. ಮಹಾಭಾರತ ಕಾಲದ ವಿರಾಟನಗರ ಇದೆಂದು ಬಲವಾದ ನಂಬುಗೆಯಿದ್ದು ಪಾಂತೀಪುರವೆಂದೂ ಈ ಊರನ್ನು ಕರೆಯಲಾಗಿದೆ. ಅಂತೆಯೇ ಹಳೆ ದಾಖಲೆಗಳಲ್ಲಿ ಈ ಊರನ್ನು ವಿರಾಟಪುರ, ವಿರಾಟನಕೋಟೆ, ವಿರಾಟನಗರ, ಪಾನುಂಗಲ್ ಮುಂತಾದ ಹೆಸರುಗಳಿಂದ ಐತಿಹ್ಯಗಳನ್ನು ಹೇಳಿ ಗುರುತಿಸಲಾಗುತ್ತದೆ. ಈ ಪೌರಾಣಿಕ ಸಂಬಂಧದ ಐತಿಹ್ಯಕ್ಕೆ ಸಾಕ್ಷಿಯೆಂದು ಕೀಚಕನ ಗರಡೀಮನೆ (ಭೀಮಸೇನ ಕೀಚಕನನ್ನು ಕೊಂದದ್ದು ಇಲ್ಲಿ), ಕುಂತಿ ದಿಬ್ಬ ಮುಂತಾದ ಕುರುಹುಗಳನ್ನು ಸ್ಥಳೀಯ ಜನರು ತೋರಿಸುತ್ತಾರೆ. ಇದೇ ರೀತಿ ಕದಂಬರ ಕಾಲದ ಅರಮನೆಯನ್ನೂ ತೋರಿಸುತ್ತಾರೆ. ಅಲ್ಲಿ ದೊರೆಯುವುದು ಬಣ್ಣದ ಹಂಚು, ಸುಟ್ಟ ಮಣ್ಣಿನ ಮಣಿ, ಮಣ್ಣಿನ ಪಾತ್ರೆಯ ಚೂರುಗಳು ಸಿಗುವುದರಿಂದ ಹಾನಗಲ್ಲಿನ ಪರಿಸರದ ಉತ್ಖನನವಾದಲ್ಲಿ ಕ್ರಿ.ಶ. ಎರಡನೇ ಶತಮಾನಕ್ಕೂ ಮೊದಲ ಪ್ರಾಚ್ಯ ಅವಶೇಷಗಳು ಸಿಗಬಹುದೆಂದು ಎ.ಎಂ. ಅಣ್ಣಿಗೇರಿಯವರು ಅಭಿಪ್ರಾಯಪಡುತ್ತಾರೆ. ಹಾನಗಲ್ಲು ಹಿಂದೆ 500 ಹಳ್ಳಿಗಳ ಮುಖ್ಯ ಆಡಳಿತ ಸ್ಥಳವಾಗಿ ಬನವಾಸಿನಾಡಿಗೆ ಸೇರಿತ್ತು. ಕ್ರಿ.ಶ. 1068 ರಿಂದ 1203ರವರೆಗೆ ಆಳಿದ ಹಾನಗಲ್ ಕದಂಬ ಮನೆತನದ ರಾಜರು ಬಹಳ ಕಾಲ ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿ ಈ ಊರಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಹೊಯ್ಸಳ ವೀರಬಲ್ಲಾಳನು ಕ್ರಿ.ಶ. 1197ರಲ್ಲಿ ಕದಂಬ ಕಾಮದೇವನ ಕಾಲಕ್ಕೆ ಹಾನಗಲ್ ಮೇಲೆ ದಾಳಿಮಾಡಿ ಈ ಊರಿನ ಆನೆಯ ಕೆರೆಯ ಹತ್ತಿರ ಬೀಡುಬಿಟ್ಟಿದ್ದನೆಂದು ಪ್ರತೀತಿಯಿದೆ. ನಂತರ ಕೆಲವು ಕಾಲ ಹಾನಗಲ್ಲು ಹೊಯ್ಸಳರ ಅಧಿಪತ್ಯಕ್ಕೆ ಒಳಪಟ್ಟಿತ್ತು. ಬಹುಶಃ ಈ ಕಾಲದಲ್ಲಿಯೇ ಆಗಲೇ ಇದ್ದ ತಾರಕೇಶ್ವರ ದೇವಾಲಯಕ್ಕೆ ತಮ್ಮ ಕೆಲವು ಭಾಗಗಳನ್ನು ಹೊಯ್ಸಳರು ಸೇರಿಸಿರಬಹುದು ಎಂಬ ಅಂಶವು ಅಲ್ಲಿರುವ ಹೊಯ್ಸಳ ಶೈಲಿಯ ಶಿಲ್ಪಗಳಿಂದ ವ್ಯಕ್ತವಾಗುತ್ತದೆ. ಸೇಊಣರ ಮತ್ತು ಹೊಯ್ಸಳರ ಸೆಣಸಾಟದಲ್ಲಿ ಹಾನಗಲ್ಲು ಸ್ವಲ್ಪಮಟ್ಟಿಗೆ ಹಾನಿಗೆ ಒಳಗಾಗಿರಬಹುದು. ಈ ಊರಿನಲ್ಲಿ ಮಣ್ಣಿನ ಕೋಟೆಯಿದ್ದುದು ವ್ಯಕ್ತವಾಗುತ್ತದೆ. ಕೋಟೆಯ ಗೋಡೆಯಲ್ಲಿ ಅಲ್ಲಲ್ಲಿ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೋಟೆಯ ಒಳಗೆ ವೀರಭದ್ರಗುಡಿಯಿದೆ. ಈಗಿನ ಗ್ರಾಮವು ಕೋಟೆಯ ಸಮೀಪವಿದ್ದು ಸವಿಸ್ತಾರವಾದ ಸುತ್ತಳತೆಯ ರಸ್ತೆಗಳು ನೈಜವಾದ ಸಂರಕ್ಷಣೆಯನ್ನು ನೀಡಿದೆ. ಊರಿನಲ್ಲಿ ಹಳೆಯ ಕೋಟೆಯ ಸ್ಥಳವನ್ನೂ ಕಾಣಬಹುದಾಗಿದೆ. ಈ ಕೋಟೆಯ ಪ್ರಮುಖ ಮೇಲ್ಭಾಗವನ್ನು ಧರ್ಮಾನದಿಯು ಕೋಟೆಯನ್ನು ಸುತ್ತುವರೆದು ಹರಿಯುವ ಪಾತ್ರವನ್ನನುಸರಿಸಿ ನಿರ್ಮಿಸಲಾಗಿದೆ. ಹಾನಗಲ್‌ನಲ್ಲಿರುವ ಪ್ರಮುಖ ದೇವಾಲಯಗಳೆಂದರೆ, ಹನುಮಾನ್, ದುರ್ಗಾ (ಎರಡು) ಈಶ್ವರ, ಬಿಲ್ಲೇಶ್ವರ, ನಾರಾಯಣ, ರಾಮಲಿಂಗ, ತಾರಕೇಶ್ವರ, ವೀರಭದ್ರ ಗಣಪತಿ ಮತ್ತು ವಿರೂಪಾಕ್ಷ. ಎಲ್ಲಾ ದೇವಾಲಯಕ್ಕಿಂತಲೂ ಕಲ್ಯಾಣದ ಚಾಳುಕ್ಯ ಶೈಲಿಯ ತಾರಕೇಶ್ವರ ದೇವಾಲಯವು ಒಂದು ಭವ್ಯ ಪ್ರಾಚೀನ ದೇವಾಲಯವಾಗಿದ್ದು ಒಂದು ಸಂಕೀರ್ಣ ಕಟ್ಟಡವಾಗಿದೆ. ಈ ದೇವಾಲಯವು ಬಹು ವಿಶಾಲವಾದ ನಿವೇಶನದಲ್ಲಿ ನಿರ್ಮಿತವಾಗಿದ್ದು ಆಕರ್ಷಕ ಸುಂದರ ಶಿಲ್ಪಗಳನ್ನೊಳಗೊಂಡ ವಾಸ್ತು ರಚನೆಯಾಗಿದೆ. ಈ ಕಟ್ಟಡವು ಮೂರು ಹಂತಗಳಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಬಹುಕೋನಾಕಾರವಾದ ತಳ ವಿನ್ಯಾಸವನ್ನು ಹೊಂದಿದ್ದು ಒಳಗೆ ಪ್ರಾಚೀನ ಲಕ್ಷಣವುಳ್ಳ (ಕದಂಬರ ಕಾಲದ) ಪಾಣಿಪೀಠದ ಮೇಲೆ ಎತ್ತರವಾದ ಶಿವಲಿಂಗವಿದೆ. ಇದರ ಬಾಗಿಲುವಾಡವು ಪಂಚಶಾಖಾಲಂಕಾರವನ್ನು ಹೊಂದಿದೆ. ಮುಂಭಾಗದಲ್ಲಿರುವ ಅಂತರಾಳವು ಅಲಂಕೃತ ಬಾಗಿಲುವಾಡವನ್ನು ಹೊಂದಿದ್ದು ಇಕ್ಕೆಲಗಳಲ್ಲಿ ಜಲಾಂಧ್ರಗಳಿವೆ. ನವರಂಗವು ವಿಶಾಲವಾಗಿದ್ದು ಹೊಯ್ಸಳ ಮಾದರಿಯ ದುಂಡನೆಯ ನುಣುಪಾಗಿ ಹೊಳೆಯುವ ಆಕರ್ಷಕ ಕಂಬಗಳನ್ನೂ ಭಾರಿಗಾತ್ರದ ತೊಲೆಗಳನ್ನು ಆಧರಿಸಿವೆ. ನವರಂಗವು ನಾಲ್ಕು ಪ್ರವೇಶದ್ವಾರಗಳನ್ನು ಹೊಂದಿದ್ದು ಪ್ರವೇಶಿಸಲು ಪಾವಟಿಗೆಗಳಿವೆ. ಹಲವಾರು ಕಂಬಗಳಿಂದ ಅಲಂಕೃತವಾಗಿದ್ದು ಸುತ್ತುವರೆದಂತೆ ಕಿರು ಸ್ತಂಭಗಳಿಂದ ಕೂಡಿದ ಕಕ್ಷಾಸನವಿದೆ. ಪ್ರತಿಯೊಂದು ಪ್ರವೇಶ ದ್ವಾರಕ್ಕೂ ಅಲಂಕೃತ ಕಂಬಗಳಿಂದ ಕೂಡಿದ ಕಿರು ಮಂಟಪಗಳಿವೆ.

ಇದರ ಛಾವಣಿಯು ಆಳವಾಗಿದ್ದು ವಿಶಾಲವಾದ ಕಮಲದ ದಳಗಳ ಉಬ್ಬು ಕೆತ್ತನೆಗಳನ್ನು ಇಳಿಬಿದ್ದಂತೆ ಕಂಡರಿಸಿದೆ. ಸುಮಾರು 30 ಅಡಿ ಸುತ್ತಳತೆಯಿರುವ ಈ ಭುವನೇಶ್ವರಿಯ ಮಧ್ಯದಲ್ಲಿ ಇಳಿ ಬಿದ್ದಿರುವ ಕಮಲದ ಮೊಗ್ಗು ಆಕರ್ಷಕವಾಗಿದೆ. ಮೂಲೆಗಳಲ್ಲಿ ಹಾಗೂ ಹಲವು ಹಂತಗಳಲ್ಲಿ ಇದರಲ್ಲಿ ಕಿರುಶಿಲ್ಪಗಳನ್ನು ಬಿಡಿಸಲಾಗಿದೆ. ನವರಂಗ ಮಂಟಪದ ಮುಂಭಾಗದಲ್ಲಿ ಕಕ್ಷಾಸನದಿಂದ ಕೂಡಿರುವ ಇನ್ನೊಂದು ಮುಖಮಂಟಪವಿದ್ದು ಪ್ರವೇಶದ್ವಾರವನ್ನು ಹೊಂದಿದೆ. ದೇವಾಲಯದ ನವರಂಗದ ವೃತ್ತ ಭುವನೇಶ್ವರಿಯಲ್ಲಿ ಹಾಗೂ ಮುಂಭಾಗದ ಮುಖಮಂಟಪದ ಕಕ್ಷಾಸನದ ಹೊರ ಭಾಗದಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತವನ್ನು ಪ್ರತಿನಿಧಿಸುವ ಕೃಷ್ಣನ ಜನನ ಮತ್ತು ಬಾಲಲೀಲೆಗಳನ್ನು ಪ್ರತಿನಿಧಿಸುವ ಕಿರು ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯವು ಏಕಕೂಟವಾಗಿದ್ದು ಗರ್ಭಗೃಹದ ಹೊರಭಿತ್ತಿಯ ದೇವಕೋಷ್ಠಗಳಲ್ಲಿ ಮೂರು ಕಡೆಗಳಲ್ಲಿ ದೇವಾಲಯದ ಶಿಖರಗಳ ಮಾದರಿಗಳನ್ನು ಬಿಡಿಸಲಾಗಿದೆ. ಈ ದೇವಾಲಯದ ಹೊರಭಾಗದ ಉತ್ತರಗೋಡೆಯಲ್ಲಿ ಭೈರವ, ಬ್ರಹ್ಮ ಹಾಗೂ ದಕ್ಷಿಣ ಭಾಗದ ಗೋಡೆಯ ಮೇಲಿನ ಕಿರುಶಿಖರ

ಹಾಗೂ ಅಲಂಕಾರಯುತವಾದ ಸಿಂಹ ಲಲಾಟವಿದೆ. ಈ ರೀತಿಯ ಅಲಂಕಾರಗಳು ಆದಿಷ್ಠಾನದಿಂದ ಹಿಡಿದು ಛಾವಣಿಯವರೆಗೂ ಅಲ್ಲಲ್ಲಿರುವ ದೇವಕೋಷ್ಠಗಳಲ್ಲಿ ಕಂಡುಬರುತ್ತವೆ. ಈ ದೇವಾಲಯದ ಪರಿಸರದಲ್ಲಿರುವ ಎರಡು ವೀರಗಲ್ಲುಗಳು ಕೋಟೆಕಾಳಗಕ್ಕೆ ಸಂಬಂಧಿಸಿರುವ ಉತ್ತಮ ಉದಾಹರಣೆಗಳಾಗಿವೆ. ಹಾಗೂ ಇವು ಕದಂಬ ಕಾಮದೇವನ ಕಾಲಕ್ಕೆ ಸೇರಿದುದಾಗಿವೆ. ಇದರ ಮೇಲಿರುವ ಶಾಸನವು ಹಾನಗಲ್ ಕದಂಬರ ಕಾಲಕ್ಕೆ ಸೇರಿದ್ದು (ಕ್ರಿ.ಶ.ಸು.13ನೇ ಶತಮಾನ) ಹೊಯ್ಸಳ ಬಲ್ಲಾಳನು ಹಾನಗಲ್ಲನ್ನು ಮುತ್ತಿದ್ದಾಗ ಸಾಹಣಿಯೊಬ್ಬನ ಮರಣವನ್ನು ದಾಖಲಿಸುತ್ತದೆ. ದೇವಾಲಯದ ಮುಂದೆ ಇರುವ ಕಂಬಗಳು ರಾಷ್ಟ್ರಕೂಟರ ಕಾಲದ್ದಾಗಿರುವ ಸಾಧ್ಯತೆಯಿದೆ. ಗರ್ಭಗೃಹದ ಮೇಲಿರುವ ಕದಂಬನಾಗರ ಶೈಲಿಯ ಶಿಖರವು ಅನೇಕ ಶೈವ ಪುರಾಣವನ್ನು ಪ್ರತಿನಿಧಿಸುವ ಶಿಲ್ಪಗಳನ್ನು ಹೊಂದಿದೆ. ಈ ಶಿಖರವು ಹಲವಾರು ಭಾರಿ ದುರಸ್ತಿಗೊಂಡಿರುವುದು ವ್ಯಕ್ತವಾಗುತ್ತದೆ. ಶಿಖರದ ಮುಂಭಾಗದಲ್ಲಿ ಶುಕನಾಸವಿದ್ದು ಮುಂದೆ ಕೀರ್ತಿಮುಖ ಹಾಗೂ ಅಲಂಕಾರಿಕ ಪದಕವನ್ನು ಹೊಂದಿದೆ. ಈ ಮುಖ್ಯ ದೇವಾಲಯದ ಪಕ್ಕದಲ್ಲೇ ಗಣಪತಿಯ ಪ್ರತ್ಯೇಕ ದೇವಾಲಯವಿದೆ. ಇದು ಚಿಕ್ಕದಾಗಿದ್ದು ಕರ್ನಾಟಕದಲ್ಲಿ ದೊರೆಯುವ ಭೂಮಿಜ (ರೇಖಾನಾಗರ) ಶೈಲಿಯ ಶಿಖರದ ಮಾದರಿಗೆ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯದ ಬಗೆಗೆ ಸಾಕಷ್ಟು ಶಾಸನಾಧಾರಗಳು ದೊರೆಯುತ್ತವೆ.

ಹಾನಗಲ್ಲಿನ ಬಿಲ್ಲೇಶ್ವರ ಹಾಗೂ ಈಶ್ವರ ದೇವಾಲಯಗಳೂ ಕಲ್ಯಾಣದ ಚಾಳುಕ್ಯರ ವಾಸ್ತು ಶೈಲಿಯಲ್ಲಿರುವ ಪ್ರಮುಖ ಕಟ್ಟಡಗಳಾಗಿವೆ. ಬಿಲ್ಲೇಶ್ವರದ ಗರ್ಭಗೃಹ ಮಾತ್ರ ಉಳಿದಿದ್ದು ಶಿವಲಿಂಗವು ಚಾಳುಕ್ಯರಿಗಿಂತ ಪೂರ್ವದ್ದಾಗಿದ್ದು ಸುಮಾರು ಐದು ಅಡಿ ಎತ್ತರವಿದೆ. ಗರ್ಭಗೃಹದ ಛಾವಣಿಯಲ್ಲಿ ನಾಲ್ಕು ಸುತ್ತಿನ ಕಮಲದ ಅಲಂಕಾರವಿದೆ. ದೇವಾಲಯದ ಮುಂದಿನ ಚಂದ್ರಶಿಲೆ ಬಹು ಸುಂದರವಾಗಿದೆ. ಗರ್ಭಗೃಹದ ದ್ವಾರಬಂಧವು ಪಂಚಶಾಖಾಲಂಕೃತವಾಗಿದ್ದು ಬಹಲ ಎತ್ತರವಾಗಿದ್ದು ಸುಂದರವಾಗಿದೆ. ಇದರ ಲಲಾಟದಲ್ಲಿ ದೊಡ್ಡ ಗಜಲಕ್ಷ್ಮಿಯ ಶಿಲ್ಪವಿದೆ. ದೇವಾಲಯದ ಹೊರಭಾಗವು ಭದ್ರ ಮಾದರಿಯಲ್ಲಿದ್ದು ಭದ್ರಗಳ ಭಾಗದಲ್ಲಿ ಬಹು ವಿವರವಾದ ಅಲಂಕೃತವಾದ ದೇವಾಲಯ ಶಿಖರಗಳ ಮಾದರಿಗಳಿವೆ. ಈ ಗುಡಿಯ ಮುಂದೆ ಹಾವಳಿ ಮಾರುತಿ ದೇವಾಲಯವಿದ್ದು ಅದರ ಪರಿಸರದಲ್ಲಿ ಸಪ್ತಮಾತೃಕೆಯರ ಪಟ್ಟಿಕೆ, ಜೈನಯಕ್ಷಿ ಶಿಲ್ಪಗಳು ಮುಂತಾದ ಅವಶೇಷಗಳು ಬಿದ್ದಿವೆ. ಬಿಲ್ಲೇಶ್ವರ ದೇವಾಲಯದ ಬಳಿ ಮೇಟಿ ಕಲ್ಲೊಂದಿದ್ದು ಅದರಲ್ಲಿ ಸುಮಾರು ಎಂಟನೇ ಶತಮಾನಕ್ಕೆ ಸೇರಬಹುದಾದ ಗುಣಗನ ಮೇಣ್ಣೆಯೆಂಬ ಬರಹವಿದೆ.

ಪೇಟೆ ಬೀದಿಯಲ್ಲಿರುವ ಬನಶಂಕರಿ ದೇವಾಲಯವು ಒಂದು ಅಂಕಣದ್ದಾಗಿದ್ದು ಒಳಗೆ ಬನಶಂಕರಿ (ಪಾರ್ವತಿ)ಯ ಶಿಲ್ಪವಿದೆ. ಮೂಲ ವಿಗ್ರಹವು ಸುಮಾರು ನಾಲ್ಕು ಅಡಿ ಎತ್ತರವಿದ್ದು ಲಲಿತಾಸನದಲ್ಲಿ ಆಸೀನಳಾಗಿ ಖಡ್ಗ, ಡಮರು, ಕಪಾಲ ಹಾಗೂ ತ್ರಿಶೂಲವನ್ನು ನಾಲ್ಕು ಹಸ್ತಗಳಲ್ಲಿ ಹೊಂದಿದ್ದು ಉಗ್ರರೂಪದ ಬಿಂಬವಾಗಿದೆ. ಇದಲ್ಲದೆ ದೇವಾಲಯದ ಹೊರಗೆ ಕುಮಾರಸ್ವಾಮಿ, ಗಣಪತಿ ಹಾಗೂ ಭೈರವನ ಶಿಲ್ಪಗಳಿವೆ. ಕಲ್ಯಾಣದ ಚಾಳುಕ್ಯ ಶೈಲಿಯ ಕಂಬಗಳು ಇದರಲ್ಲಿ ಕಂಡುಬಂದರೂ ದೇವಾಲಯವು ಜೀರ್ಣೋದ್ಧಾರಗೊಂಡಿದೆ. ಕಬ್ಬೂರು ಓಣಿಯಲ್ಲಿರುವ ವೀರಭದ್ರ ದೇವಾಲಯ 1940ರ ದಶಕದಲ್ಲಿ ಕಟ್ಟಿರಬಹುದಾದ ಕಟ್ಟಡವಾಗಿದೆ. ವೀರಭದ್ರನ ಶಿರೋಭಾಗದಲ್ಲಿ ಏಳು ಹೆಡೆಯ ಸರ್ಪಶಿರವಿದೆ. ಹಾನಗಲ್ಲಿನ ಇತರ ದೇವಾಲಯಗಳೆಂದರೆ ವೆಂಕಟೇಶ, ಆಂಜನೇಯ, ದ್ಯಾಮವ್ವ, ದುರ್ಗವ್ವ, ಮುಂತಾದುವುಗಳಿವೆ. ಕೋಟೆಯ ಒಳಗೆ ತೋಟಗಾರಿಕೆ ಇಲಾಖೆಯ ಆವರಣದಲ್ಲಿರುವ ಈಶ್ವರ ದೇವಾಲಯವು ಮೂಲತಃ ಜೈನ ಬಸದಿಯಾಗಿದ್ದು ಗರ್ಭಗೃಹ, ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡವು ಅಲಂಕೃತವಾಗಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳನ್ನು ಹೊಂದಿದೆ. ನವರಂಗವು ಚಿಕ್ಕದಾಗಿದ್ದು ಭದ್ರ ರೂಪದಲ್ಲಿದೆ ಹಾಗೂ ಇದರ ಕಂಬಗಳು ಹೊಯ್ಸಳರ ಶೈಲಿಯಲ್ಲಿವೆ. ಇದರ ಛತ್ತಿನಲ್ಲಿ ಜಿನಬಿಂಬಗಳನ್ನು ಬಿಡಿಸಲಾಗಿದೆ. ಹೊರಭಾಗದ ಭಿತ್ತಿಗಳು ಅಲ್ಲಲ್ಲಿ ಯಕ್ಷಯಕ್ಷಿಯ ಶಿಲ್ಪಗಳನ್ನು ಕಂಡರಿಸಿದೆ. ಗರ್ಭಗೃಹದ ಹೊರಭಾಗದ ದೇವರ ಕೋಷ್ಠಗಳ ಜಾಗದಲ್ಲಿ ಮೂರು ಕಡೆ ದೇವಾಲಯ ಶಿಖರಗಳ ಉತ್ತಮ ಮಾದರಿ ಶಿಲ್ಪಗಳಿವೆ. ಹಳೆಯ ಬಸ್ ನಿಲ್ದಾಣದ ಬಳಿ ಕೆರೆಯ ದಂಡೆಯಲ್ಲಿ ಒಂದು ಶಿಥಿಲವಾಗಿರುವ ಶಿವಾಲಯವಿದೆ. ಇದರಲ್ಲಿ ಶಿವಲಿಂಗವಿದೆ. ಅದರ ಹಿಂಬದಿಯ ಗೋಡೆಗೆ ಮತ್ತು ಅಂತರಾಳದ ಲಲಾಟದಲ್ಲಿ ಶಿಲ್ಪಗಳನ್ನು ಬಿಡಿಸಲಾಗಿವೆ. ಲಲಾಟದಲ್ಲಿರುವ ಎಂಟು ಹಸ್ತಗಳಿರುವ ನಟರಾಜನ ಸುತ್ತಲೂ ಬಳ್ಳಿಯ ಅಲಂಕಾರವಿದ್ದು ಇದು ಒಂದು ಸುಂದರ ಶಿಲ್ಪವಾಗಿದೆ. ಕಲ್ಯಾಣದ ಚಾಳುಕ್ಯರ ಕಾಲದ ಒಂದು ವೀರಗಲ್ಲಿದೆ. ಇಲ್ಲಿಯೇ ಹಳೆಯ ಮುನಿಸಿಪಾಲ್ ಕಛೇರಿ ಬಳಿ ಎರಡು ವೀರಗಲ್ಲುಗಳಿವೆ. ಪಾಂಡುರಂಗ ಗುಡಿಯು ಈಗ ನಿರ್ಮಾಣವಾಗುತ್ತಿದೆ. ಊರಲ್ಲಿ ಅಲ್ಲಲ್ಲಿ ಬಿಡಿ ಶಿಲ್ಪಗಳು ಹಾಗೂ ದೇವಾಲಯದ ಅವಶೇಷಗಳು ಕಾಣಸುತ್ತವೆ. ಸಂಗೀತ ವಿಶಾರದೆ ಗಂಗೂಬಾಯಿ ಹಾನಗಲ್ ದಿವಂಗತ ಪಂಚಾಕ್ಷರಿ ಗವಾಯಿಗಳು ಹಾಗೂ ಗಾನಯೋಗಿ ಪುಟ್ಟರಾಜ ಗವಾಯಿಗಳು ಈ ತಾಲೂಕಿನವರು. ಹಾನಗಲ್‌ನ ವಿರಕ್ತಮಠವು ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರವಾಗಿದೆ. ಶ್ರೀ ಅಲ್ಲಮಪ್ರಭು ದೇವರ

ನಿರಂಜನ ಗುರುಪರಂಪರೆಯ ಈ ಪೀಠದ ಕ್ರಿ.ಶ. 18ನೇ ಶತಮಾನದಲ್ಲಿದ್ದ ಕುಮರ ತಿಭು ಎಂಬುವರು 'ಭಿಕ್ಷುಕ ಮಹೇಶ ವಿಲ್ಲಾಸ' ಎಂಬ ಕಿರು ಸರಸ ಚಂಪೂಕಾವ್ಯ ಹಾಗೂ 'ಕುಮಾರೇಶ್ವರ ಪುರಾಣ'ದ ಕರ್ತೃ ಇವರೇ.

**ಹಾವಣಗಿ :** ಹಾನಗಲ್ ತಾಲೂಕಿನ ಹಾವಣಗಿಯು (ಜನಸಂಖ್ಯೆ : 1,563) ಪ್ರಾಚೀನ ಶಾಸನಗಳಲ್ಲಿ 'ಹಾವಣಿಗೆ' ಎಂದು ಉಲ್ಲೇಖಿತಗೊಂಡಿದೆ. ಈ ಊರು, ಹಾನಗಲ್‌ನಿಂದ ಆಗ್ನೇಯಕ್ಕೆ 15 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಬನವಾಸಿ-12000ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ ಹಾಗೂ ಹಾನಗಲ್ ಕದಂಬರ ಕಾಲಕ್ಕೆ ಸೇರಿದ ಎಂಟು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ರಾಷ್ಟ್ರಕೂಟ ಅರಸ ಮುಮ್ಮಡಿ ಇಂದ್ರನ ಕಾಲದ ಕ್ರಿ.ಶ. 918ರ ಶಾಸನ ಭಾಗಶಃ ಹಾಳಾಗಿದ್ದರೂ, 'ಹಾವಣಿಗೆ'ಯ ಕಲಿದೇವರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸಿದರೆ, ಇವರ ಕಾಲದ ವೀರಗಲ್ಲು ಶಾಸನ ಶಂಕರಗಂಡನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲದ ಶಾಸನ ರಾಮೇಶ್ವರ ದೇವರನ್ನು ಉಲ್ಲೇಖಿಸಿದರೆ, ಮುಮ್ಮಡಿ ಸೋಮೇಶ್ವರನ ಕಾಲದ ಕ್ರಿ.ಶ. 1131ರ ಶಾಸನ ಹಾನಗಲ್ ಕದಂಬ ಮಯೂರವರ್ಮನು ಬನವಾಸಿ-12,000 ಆಳುವಾಗ ಸೋಮಗಾವುಂಡನು ಮೂಲಸ್ಥಾನ ಕಲಿದೇವರಿಗೆ ನೀಡಿದ ದಾನದ ಬಗ್ಗೆ ಮಾಹಿತಿ ಒದಗಿಸುತ್ತದೆ. ಸುಮಾರು ಕ್ರಿ.ಶ. 12ನೇಯ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನವೊಂದು ಗೋಗ್ರಹಣಮೋ ಪ್ರಸಂಗದಲ್ಲಿ ಅಂಚೆಯ ಸೋವೆಯನಾಯಕನು ಮಡಿದ ವಿಷಯವನ್ನು ತಿಳಿಸಿದರೆ, ಆದಿತ್ಯ ಪೀಠದ ಮೇಲಿರುವ ಕ್ರಿ.ಶ. 1119ರ ಶಾಸನ ಸಂಗಿವಂಶದ ಬಮ್ಮಿಸೆಟ್ಟಿ ಆದಿತ್ಯ ಪ್ರತಿಮೆಯನ್ನು ಮಾಡಿಸಿದ ಅಂಶವನ್ನು ತಿಳಿಸುತ್ತದೆ. ಶಾಸನಗಳಲ್ಲಿರುವ ಕಲಿದೇವ ಹಾಗೂ ಮೂಲಸ್ಥಾನ ಕಲಿದೇವಗಳೆರಡೂ ಒಂದೇ ಆಗಿದ್ದು, ಅದೇ ಇಂದಿನ ಕಲ್ಲೇಶ್ವರ ದೇವಾಲಯವಾಗಿದೆ. ಊರ ಹೊರಗೆ ಇರುವ ಈ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಇಟ್ಟಿಗೆ ಕಟ್ಟಡವಿರುವ ಗರ್ಭಗೃಹವು ಮೂಲತಃ ರಾಷ್ಟ್ರಕೂಟರ ಕಾಲದ್ದಾಗಿದ್ದು ಒಳಗೆ ಶಿವಲಿಂಗವಿದೆ. ಅಂತರಾಳವೂ ಇಟ್ಟಿಗೆ ರಚನೆಯಾಗಿದೆ. ತೆರೆದ ನವರಂಗದಲ್ಲಿ ಸಪ್ತಮಾತೃಕಾ, ವಿಷ್ಣು, ಗಣಪತಿ ಹಾಗೂ ಮಹಿಷಮರ್ದಿನಿಯ ಸುಂದರ ಬಿಡಿ ಶಿಲ್ಪಗಳಿವೆ. ಇವು ಗಾತ್ರದಲ್ಲಿ ಚಿಕ್ಕದಾದರೂ ಸುಂದರವಾಗಿದೆ. ನವರಂಗದಲ್ಲಿ ನಡುವೆ ನಂದಿಯಿದ್ದು, ಛತ್ತಿನಲ್ಲಿ ಸರಳ ಕಮಲವಿದೆ. ಮೂಲತಃ ಒಂಭತ್ತನೇಯ ಶತಮಾನದ ಅಂಚಿನಲ್ಲಿ ನಿರ್ಮಾಣಗೊಂಡಿರಬಹುದಾದ ಈ ಗುಡಿಗೆ, ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ನವರಂಗದ ಸೇರ್ಪಡೆಯಾಗಿರುವಂತೆ ತೋರುತ್ತದೆ. ಆದರೆ ಇಂದು ಈ ಗುಡಿ ಶಿಥಿಲಾವಸ್ಥೆಯಲ್ಲಿದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ಈಶ್ವರ, ಕೋಟೆಸಿದ್ದೇಶ್ವರ, ಉಡಚಮ್ಮ, ದುರ್ಗ ಹಾಗೂ ದ್ಯಾಮವ್ವನ ಗುಡಿಗಳಿವೆ. ಕೋಟೆ ಸಿದ್ದೇಶ್ವರ ದೇವರ ಜಾತ್ರೆ ಧವನದ ಹುಣ್ಣಿಮೆಯಂದು ಜರುಗುತ್ತಿದ್ದು, ಸಾವಿರಾರು ಜನ ಬಂದು ಸೇರುತ್ತಾರೆ. ಊರಲ್ಲಿ ಮಸೀದಿ ಹಾಗೂ ದರ್ಗಾಗಳು ಕೂಡ ಇವೆ.

**ಹಾವನೂರು :** ಹಾವೇರಿ ತಾಲೂಕಿನ ಹಾವನೂರು (ಜನಸಂಖ್ಯೆ : 7,085) ಹಾವೇರಿಯಿಂದ 35 ಕಿ.ಮೀ. ದೂರದಲ್ಲಿ ತುಂಗಭದ್ರಾ ದಂಡೆಯಲ್ಲಿರುವ ಪ್ರಾಚೀನ ಅಗ್ರಹಾರವಾಗಿದ್ದು ಒಂದು ಜನಪ್ರಿಯ ಕ್ಷೇತ್ರವಾಗಿದೆ. ಹಿಂದೆ ಕೋಟೆಯಿದ್ದು ಅಲ್ಲಲ್ಲಿ ಅವಶೇಷಗಳು ಉಳಿದಿವೆ. ಕೋಟೆಯ ಪ್ರದೇಶದಲ್ಲಿ ತ್ರಿಪುರಾಂತೇಶ್ವರ, ಗಣಪತಿ ಮಂಟಪ ಮತ್ತು ಹನುಮಂತ ದೇವರಗುಡಿಗಳಿದ್ದು ಇವು ಆ ಊರಿನ ಪಾಳೆಯಗಾರನಾಗಿದ್ದ ಹನುಮಂತಗೌಡನ ಕಾಲದಲ್ಲಿ ನಿರ್ಮಾಣವಾದ ಕಟ್ಟಡಗಳೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಊರಿನಲ್ಲಿರುವ ದ್ಯಾಮವ್ವನ ಚೌಕಕಟ್ಟೆಯ ಕಟ್ಟಡಕ್ಕೆ ಹೊಂದಿಕೊಂಡಂತೆ ಹಿಂಬದಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಹೊನ್ನೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಇಲ್ಲಿಗೆ ಸಮೀಪದಲ್ಲಿರುವ ದ್ಯಾಮವ್ವನ ದೇವಾಲಯವು 1958ರಲ್ಲಿ ಜೀರ್ಣೋದ್ಧಾರವಾಗಿದ್ದರೂ ಬಹು ಪ್ರಮುಖ ದೇವಾಲಯವಾಗಿದೆ. ಮಾಘಮಾಸದ ಮೊದಲ ಶುಕ್ರವಾರ ಗಡಿ ಅನಂತರ ಬುಧವಾರ ಜಾತ್ರೆ ನಡೆಯುತ್ತದೆ. ಈ ದೇವರು (ಪೆಟ್ಟಿಗೆಯ ದೇವರು) ಸಂಸ್ಥಾನಿಕನ ಕಾಲದಲ್ಲಿ ಇಲ್ಲಿಗೆ ಬಂತೆಂದು ಐತಿಹ್ಯವಿದೆ. ದ್ಯಾಮವ್ವನ ಗುಡಿಯ ಬಳಿಯೇ ಕೊತ್ತಲ ದುರ್ಗವ್ವ (ಮಹಿಷ ಮರ್ದಿನಿ), ಬ್ರಹ್ಮೇಶ ಮತ್ತು ದತ್ತಮೂರ್ತಿಯ ಪಾದುಕೆಗಳಿವೆ. ಮುಂದೆ ನದಿಯ ತೀರದ ಕೋಟೆಯ ಬಳಿ ಮುಸುಕಿನ ಬಾವಿಯಿದೆ. ದ್ಯಾಮವ್ವನ ಗುಡಿಯ ಹಿಂಬದಿಗೆ ಕೋಟೆ ಅಂಚಿನಲ್ಲಿ ತಂಗ ಮೈಲಾರನ ಗುಡಿಯಿದ್ದು ಕಲ್ಯಾಣದ ಚಾಳುಕ್ಯರ ಶೈಲಿಯ ಕಟ್ಟಡವಾಗಿದೆ. ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿವೆ. ವೀರಭದ್ರ, ವಿಷ್ಣು ಮುಂತಾದ ಬಿಡಿಶಿಲ್ಪಗಳನ್ನು ಈ ದೇವಾಲಯದಲ್ಲಿಡಲಾಗಿದೆ. ಅಂತರಾಳದ ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದುರ್ಗಮ್ಮನ ದೇವಾಲಯದಲ್ಲಿ ಕುದುರೆಯ ಮೇಲೆ ಆಸೀನನಾಗಿರುವ ಮರದ ಬಿಂಬಗಳಿವೆ. ಗುತ್ತಲದ ರಸ್ತೆಯಲ್ಲಿರುವ ದುರ್ಗಾದೇವಿ ಗುಡಿಯ ಬಳಿ ಶಾಸನವಿದ್ದು ಕಲ್ಯಾಣದ ಚಾಳುಕ್ಯ ಮೊದಲ ಸೋಮೇಶ್ವರನ ಕಾಲದ್ದಾಗಿದ್ದು (ಕ್ರಿ.ಸ.1053) ಪೆರ್ಗಡೆ

ಬೀಚಿಮಯ್ಯದಿಗಳಿಂದ ಮೂಲಸ್ಥಾನ ಕಲಿದೇವಸ್ವಾಮಿಗೆ ಸುಂಕದಾನ ಬಿಟ್ಟ ಬಗೆಗೆ ಉಲ್ಲೇಖವಿದೆ. ಊರಿನಲ್ಲಿರುವ ಇತರ ದೇವಾಲಯಗಳೆಂದರೆ ಕಾಳಮ್ಮ, ಬಸವಣ್ಣ, ವೆಂಕಟೇಶ, ಕೇಶವ, ಬೀರೇಶ್ವರ, ಹನುಮಂತ, ಮಾಸ್ತಿಗುಡಿ, ಹಾಳಮ್ಮ, ಗಂಗಮ್ಮ, ದುರ್ಗಾದೇವಿ ಮುಂತಾದವುಗಳಿವೆ. ದುರ್ಗಾದೇವಿ ಗುಡಿಯ ಮುಂದಿರುವ ಶಾಸನವು ಮೂರನೇ ಜಗದೇಕಮಲ್ಲನ ಕಾಲದ್ದಾಗಿದ್ದು (ಕ್ರಿ.ಶ.1188) ಗುತ್ತವಿಕ್ರಮಾದಿತ್ಯ ದೇವನಿಂದ ಮೂಲಸ್ಥಾನ ಕಲಿದೇವರಿಗೆ ನೀಡಿದ ಭೂದಾನದ ಬಗೆಗೆ ಉಲ್ಲೇಖವಿದೆ. ಕೇಶವದೇವರ ಗುಡಿಯು ಪುರಾತನವಾಗಿದ್ದು ಮೂಲ ವಿಗ್ರಹವು ಅಮತ್ರ ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿದೆ. ಮಾಸ್ತಿಗುಡಿಯ ಬಾಗಿಲುವಾಡ ಮತ್ತು ಹೊರಗಿನ ಕಂಬಗಳು ರಾಷ್ಟ್ರಕೂಟರ ಕಾಲದ ಲಕ್ಷಣವನ್ನು ಹೊಂದಿವೆ. ವೆಂಕಟೇಶದೇವರ ಗುಡಿಯ ಬಳಿ ನದಿಯ ದಂಡೆಗೆ ವಾದಿರಾಜಸ್ವಾಮಿಗಳ ಮಠವಿದ್ದು ವಾದಿರಾಜ ತೀರ್ಥರ ಮೃತ್ತಿಕಾ ಬೃಂದಾವನವಿದೆ. ವಾದಿರಾಜರ ಇಂಥಾ ಬೃಂದಾವನಗಳು ಇಡೀ ದಕ್ಷಿಣ ಭಾರತದಲ್ಲಿ ಆರು ಏಳು ಮಾತ್ರವಿದ್ದು ಇದು ಪ್ರಾಚೀನವಾದುದು. ಈ ಬೃಂದಾವನದ ಮುಂಭಾಗದಲ್ಲಿ ಹನುಮ - ಭೀಮ - ಮಧ್ವ ತ್ರಯರಅವತಾರ ಸಮನ್ವಯವುಳ್ಳ ವಿಶಿಷ್ಟ ಕೆತ್ತನೆಯಿದೆ. ಊರಿನಲ್ಲಿ ಚಿದಂಬರ ಮಂದಿರವಿದೆ. ಈ ಮಂದಿರದಲ್ಲಿ ಲಕ್ಷ್ಮಿನರಸಿಂಹ ಒಡೆಯರ್ ಅವರ ಬೃಂದಾವನವಿದೆ. ಹಾವನೂರಲ್ಲಿ ಎರಡು ಮಸೀದಿಗಳು, ರಾಜಾ ಬಾಗ್‌ಸವಾರ್ ದರ್ಗಾ, ಚಾಂದ್‌ಪೀರ್‌ಷಾವಲಿ ದರ್ಗಾ ಸೋಲಾ ಮಾಸಿಂಸಾಬ್ ದರ್ಗಾ, ಜಮಾಲ್‌ಷಾವಲಿ ದರ್ಗಾ ಮತ್ತು ಮೆಹಬೂಬ್ ಸುಬಾನಿ ದರ್ಗಾಗಳಿವೆ.

**ಹಾವೇರಿ :** ತಾಲೂಕು ಕೇಂದ್ರವಾದ ಹಾವೇರಿಯು (ಜನಸಂಖ್ಯೆ ; 1,75,181) ಬೆಂಗಳೂರು-ಪುಣೆ ರಸ್ತೆಯಲ್ಲಿ, ಜಿಲ್ಲಾ ಕೇಂದ್ರವಾದ ಧಾರವಾಡದಿಂದ ಆಗ್ನೇಯಕ್ಕೆ 86 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಪಾವರಿ, ಹಾವರಿ, ಹಾವೇರಿ, ನಳಪುರಿ ಎಂದೆಲ್ಲ ಉಲ್ಲೇಖಗೊಂಡಿರುವ ಈ ಊರು ಬಾಸವೂರು-140ಕ್ಕೆ ಸೇರಿದ್ದು, 400ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿತ್ತು. ಕ್ರಿ.ಶ. 1157ರ ಶಾಸನವೊಂದು ನಳನ ಜೊತೆ ಸಂಬಂಧ ಹೇಳುವುದರೊಂದಿಗೆ ಹಾವೇರಿಯ ಪ್ರಾಚೀನತೆಯನ್ನು ಪೌರಾಣಿಕ ಕಾಲಕ್ಕೆ ಒಯ್ಯಲು ಯತ್ನಿಸಿದೆ. ಐತಿಹಾಸಿಕವಾಗಿ, ಈ ಊರಲ್ಲಿ ಈವರೆಗೆ ಲಭಿಸಿರುವ 35 ಶಾಸನಗಳಲ್ಲಿ ರಾಷ್ಟ್ರಕೂಟ ಕನ್ನರನ ಕಾಲದ ವೀರಗಲ್ಲು ಶಾಸನ ಪ್ರಾಚೀನದ್ದಾಗಿದ್ದು ಊರ ರಕ್ಷಣೆಗಾಗಿ ಹೋರಾಡಿ ಮಡಿದ ವೀರನದಾಗಿದ್ದರೆ, ಕಲ್ಯಾಣದ ಚಾಲುಕ್ಯ, ಕಳಚೂರಿ, ಹೊಯ್ಸಳ ಹಾಗೂ ಸೇಉಣರ ಅರಸರ ಕಾಲಕ್ಕೆ ಸೇರಿದ 18ಶಾಸನಗಳು, ಪುರದ ಸಿದ್ಧೇಶ್ವರ ದೇವಾಲಯಕ್ಕೆ ಬಿಟ್ಟ ದಾನಶಾಸನಗಳಾಗಿದ್ದು ಮತ್ತೆರಡು ಶಾಸನಗಳು ಹಾವೇರಿಯ ಹೆಗ್ಗೆರೆಗೆ ನೀಡಿದ ದತ್ತಿಶಾಸನಗಳಾಗಿವೆ. ಕ್ರಿ.ಶ. 1134ರ ಶಾಸನವೊಂದು ಈ ಕೆರೆಯನ್ನು ನಲ್ಲಹಳಕೆರೆ ಎಂದೇ ಕರೆದಿದೆ. ಈ ಕೆರೆ ಹಾವೇರಿಗೆ 2.5 ಕಿ.ಮೀ. ದೂರದಲ್ಲಿದ್ದು ವನಭೋಜನ, ವಿಹಾರಗಳಿಗೆ ಪ್ರಶಸ್ತವಾಗಿದೆ. ತಲಾ ಒಂದೊಂದು ಶಾಸನ ಹಾವೇರಿಯ ವಿನಾಯಕ, ಗೋಪಾಲದೇವರು ಹಾಗೂ ಇಂದ್ರೇಶ್ವರ ಮಂದಿರಗಳಿವೆ ನೀಡಿದ ದಾನಗಳಾದರೆ, ಮತ್ತೊಂದು ಜೈನಧರ್ಮಕ್ಕೆ ಸಂಬಂಧಿಸಿದ ಶಾಸನವಾಗಿದೆ. ಆರ್ಮಡಿ ವಿಕ್ರಮಾದಿತ್ಯ (ಕ್ರಿ.ಶ. 1109)ನ ಕಾಲದ ಶಾಸನ ದಾನ ನೀಡುವುದರ ಮೂಲಕ ಮೊದಲ ಬಾರಿಗೆ ಸಿದ್ಧೇಶ್ವರ ಗುಡಿಯನ್ನು ಹೆಸರಿಸುತ್ತದೆ. ಆ ಕಾಲದಲ್ಲಿ ಇದೊಂದು ಪ್ರಮುಖ ಧಾರ್ಮಿಕ ಸ್ಥಳವಾಗಿತ್ತೆಂಬ ಅಂಶವನ್ನು ದಾನಶಾಸನಗಳೇ ಸಮರ್ಥಿಸುತ್ತವೆ. ಇದು ನಾಥಪಂಥಕ್ಕೆ ಸೇರಿದ ಮಂದಿರವಾಗಿರುವ ಸಾಧ್ಯತೆ ಇದೆ.

ಹಾವೇರಿ ಗುತ್ತಲದ ರಸ್ತೆಯಲ್ಲಿರುವ ಸಿದ್ಧೇಶ್ವರ ಗುಡಿಯನ್ನು (ಗ್ರಾಮಾಧೀಶ) 'ಸ್ವಯಂಭು ಸಿದ್ಧೇಶ್ವರ' 'ಸಿದ್ಧನಾಥ' 'ಪುರದಸಿದ್ಧೇಶ್ವರ' 'ವಿಷಪ್ರಹಾರಿ' ಎಂದೆಲ್ಲ ಪ್ರಾಚೀನ ಶಾಸನಗಳು ಕರೆದಿವೆ. ತಗ್ಗಾದ ಸ್ಥಳದಲ್ಲಿರುವ ಈ ಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ಮೂರು ದಿಕ್ಕಲ್ಲೂ ಮುಖಮಂಟಪವನ್ನು ಹೊಂದಿರುವ ತೆರೆದ ನವರಂಗವಿದೆ. ಗರ್ಭಗೃಹದ ಬಾಗಿಲವಾಡ ಚಿತ್ತಾರ್ಷಕವಾಗಿದೆ. ಅಂತರಾಳದ ಬಾಗಿಲವಾಡವನ್ನು ಸುಂದರವಾದ ಮಕರತೋರಣ ಅಲಂಕರಿಸಿದೆ. ಅಂತರಾಳದ ದೇವಕೋಷ್ಠದಲ್ಲಿ ಪದ್ಮಾಸೀನ ಧ್ಯಾನಮುದ್ರಾ ಮೂರ್ತಿಯಿದೆ. ನವರಂಗದಲ್ಲಿ ಸುಂದರವಾದ ಯೋಗವಿಷ್ಣು ಶಿಲ್ಪವಿದೆ. ಗಣಪತಿ, ಆದಿಶಕ್ತಿ ಶಿಲ್ಪಗಳಿವೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯವು. ನವರಂಗದಂಚಿನುದ್ದಕ್ಕೂ ಕಕ್ಷಾಸನವಿದೆ. ಗರ್ಭಗೃಹದ ಶಿಖರ ದ್ರಾವಿಡ ಶೈಲಿಯಲ್ಲಿದ್ದು ಸುಂದರವಾದ ಚಿಕಣಿ ಕೆತ್ತನೆಯನ್ನು ಹೊಂದಿದೆ. ಗರ್ಭಗೃಹದ ಹೊರಭಿತ್ತಿಯಲ್ಲೂ, ಮೂರು ದಿಕ್ಕಲ್ಲೂ ದೇವಕೋಷ್ಠಗಳಿದ್ದು, ಅವು ಬರಿದಾಗಿದೆ. ಹೊಂತದ ಬಳಿ ಸಪ್ತಮಾತೃಕಾ ಶಿಲ್ಪವಿದೆ.

ಈ ಗುಡಿಯ ಎಡಭಾಗಕ್ಕೆ ಉಗ್ರನರಸಿಂಹನ ದೇವಾಲಯವಿದೆ. ಸಂರಕ್ಷಣೆಗೆ ಒಳಗಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಉಗ್ರನರಸಿಂಹನ ಮೂರ್ತಿಯಿದೆ. ಶಾಸನೋಕ್ತ ಇಂದ್ರೇಶ್ವರ ಗುಡಿ ಇದೇ ಆಗಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ದ್ಯಾಮವ್ವನ ಓಣಿಯಲ್ಲಿ ಕಲ್ಲೇಶ್ವರ ಗುಡಿಯಿದೆ. ಈ ಗುಡಿಯ ಸಭಾಮಂಟಪದ

ಕಂಬವೊಂದರ ಮೇಲಿರುವ ಕ್ರಿ.ಶ. 1254ರ ಯಾದವ ಕನ್ನರನ ಶಾಸನವು ಗೋಪಾಲ ದೇವರ ಆರಾಧನೆಗೆಂದು ದಾನ ಕೊಟ್ಟ ವಿಚಾರ ಹೇಳುತ್ತದೆ. ಈ ಗುಡಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡಕ್ಕೂ ಮಕರತೋರಣ ಅಲಂಕಾರವಿದೆ. ನವರಂಗದಲ್ಲಿ ಐದು ದೇವಕೋಷ್ಠಗಳಿದ್ದು ಎರಡರಲ್ಲಿ ಸಪ್ತಮಾತೃಕೆಯರ ಪಟ್ಟಿಕೆ ಇದ್ದು ಒಂದರಲ್ಲಿ ಗಣಪತಿ, ಇನ್ನೊಂದರಲ್ಲಿ ಕಾರ್ತಿಕೇಯ ಶಿಲ್ಪಗಳಿವೆ. ತೆರೆದ ಸಭಾಮಂಟಪದಲ್ಲಿ 16 ಕಂಬಗಳಿವೆ. ಮುಂದೆ ಮುಖ ಮಂಟಪವೂ ಇದೆ. ಕಲ್ಯಾಣದ ಚಾಲುಕ್ಯರ ಕಾಲದ ಕಂಬಗಳನ್ನು ಬಳಸಿ ಈ ಗುಡಿಯನ್ನು ರಚಿಸಲಾಗಿದೆ. ಗರ್ಭಗೃಹದ ಶಿಖರ ದುರಸ್ತಿಯಾಗಿದೆ. ವಿರಕ್ತಮಠದಲ್ಲಿರುವ ಶಾಸನ ಹುಚ್ಚ ಬಸಲಿಂಗಸ್ವಾಮಿಗಳ, ಚರಮೂರ್ತಿ ಹುಚ್ಚ ಚನ್ನವೀರಪ್ಪನವರ ಮಠ ಕ್ರಿ.ಶ. 1759ರಲ್ಲಿ ಸ್ಥಾಪನೆಯಾಯಿತೆಂದು ತಿಳಿಸುತ್ತದೆ. ಹಾವೇರಿಯಲ್ಲಿ ಹಲವಾರು ಮಠಗಳಿದ್ದು ವಿಶಾಲವಾದ ಹುಕ್ಕೇರಿ ಮಠ, ಹೊಸಕೇರಿ ಮಠ, ಹೊಸಮಠ, ಮುರುಘಸ್ವಾಮಿ ಮಠ, ಹಾಗೂ ರಾಘವೇಂದ್ರ ಮಠಗಳು ಪ್ರಸಿದ್ಧವಾಗಿದೆ. ಇಷ್ಟೇ ಅಲ್ಲದೆ ಊರಲ್ಲಿ ವೀರಭದ್ರ ಗಣಪತಿ, ಮಾಲತೇಶ, ಎಲ್ಲವ್ವ, ದುರ್ಗಾ, ದ್ಯಾಮವ್ವ, ಬಸವಣ್ಣ, ಭರಮಪ್ಪ, ಗಿರಿ ಮಲ್ಲೇಶ್ವರ, ಮೈಲಾರಲಿಂಗ, ಬಾಲಕೃಷ್ಣ, ದತ್ತಾತ್ರೇಯ, ನಾಗೇಂದ್ರ, ಪಂತರ ಬಸವೇಶ್ವರ, ಅಕ್ಕಮಹಾದೇವಿ, ಒಡ್ಡಮ್ಮ ಕಾಳಿಕಾ, ಮರಿಯಮ್ಮ ಗಾಳಿಯವ್ವ, ಮಂಜುನಾಥ, ಚೌಡವ್ವ, ಮುಂತಾದ ಇತ್ತೀಚಿನ ಗುಡಿಗಳಿವೆ.

ನಾಲ್ಕಾರು ಮಸೀದಿ, ಹತ್ತಾರು ದರ್ಗಾಗಳು ಊರಲ್ಲಿ ಹರಡಿಕೊಂಡಿವೆ. ಹಿಂದೆ ಪ್ರಮುಖ ಅಗ್ರಹಾರವಾಗಿ, ವಿದ್ಯಾಕೇಂದ್ರವಾಗಿ ಮೆರೆದಿರುವ ಈ ಊರು ಕ್ರಿ.ಶ. 18ನೇಯ ಶತಮಾನದ ಆರಂಭಕ್ಕೆ ಪೇಶ್ವೆಯರ ಯತ್ನದಿಂದ ಗಣ್ಯ ವ್ಯಾಪರಕೇಂದ್ರವಾಯಿತು. 1905ರಲ್ಲಿ ತಾಲೂಕು ಕೇಂದ್ರವಾಯಿತು. ಇಲ್ಲಿನ ಪುರಸಭೆ 1879ರಷ್ಟು ಪ್ರಾಚೀನವಾದುದು. ಹಾವೇರಿ ಪೋಲಿಸ್ ಠಾಣೆ ಬಳಿ ಸ್ವಾತಂತ್ರ ಹೋರಾಟಗಾರ ಮೈಲಾರ ಮಹಾದೇವಪ್ಪನ ಪ್ರತಿಮೆಯನ್ನು ಅನಾವರಣ ಮಾಡಲಾಗಿದೆ. ಯಾಲಕ್ಕಿ ಸಂಸ್ಕರಣ ಸ್ಥಳವಾಗಿ ಕೂಡ ಇದು ಇತ್ತೀಚಿನವರೆಗೆ ಪ್ರಸಿದ್ಧವಾಗಿತ್ತು. ಇಲ್ಲಿ ಸುಂದರ ಯಾಲಕ್ಕಿ ಮಾಲೆ ಮಾಡುವವರಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಣ್ಯಕೇಂದ್ರವಾಗಿದ್ದು ಹೊಸಮನಿ ಸಿದ್ದಪ್ಪ ಇದೇ ಊರವರು. ಹುಕ್ಕೇರಿಮಠದ ಜಾತ್ರೆ ಜನವರಿ ತಿಂಗಳಲ್ಲೂ, ಸಿದ್ಧೇಶ್ವರ, ಜಾತ್ರೆ ದಸರಾದಲ್ಲೂ, ವೀರಭದ್ರ ಜಾತ್ರೆ ಯುಗಾದಿಯಲ್ಲೂ ಜರುಗುತ್ತದೆ.

**ಹಿರೇಅಣಜಿ :** ಬ್ಯಾಡಗಿ ತಾಲೂಕಿನ ಹಿರೇಅಣಜಿಯು (ಜನಸಂಖ್ಯೆ : 1,231) ಬ್ಯಾಡಗಿಯಿಂದ ನೈಋತ್ಯಕ್ಕೆ 28 ಕಿ.ಮೀ. ದೂರದಲ್ಲಿರುವ ಈ ಊರು ಹಿಂದೆ ಬಾಸವೂರು-140 ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಹತ್ತು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಆರು ಕ್ರಿ.ಶ. 13-14ನೇ ಶತಮಾನಕ್ಕೆ ಸೇರಿದ ನಿಷಿಧಿ ಶಾಸನಗಳಾಗಿದ್ದು ಉಳಿದ ನಾಲ್ಕರಲ್ಲಿ ಎರಡು ಬಸದಿಗೆ ನೀಡಿದ ದಾನ ಶಾಸನಗಳಾಗಿವೆ. ಇವುಗಳಲ್ಲಿ ಕ್ರಿ.ಶ. 1238 ರ ಶಾಸನ (ಈಶ್ವರಗುಡಿಯ ವೀರಗಲ್ಲು) ಯಾದವ ಸಿಂಘಣದ ಆಳ್ವಿಕೆಯಲ್ಲಿ ಬಾಸವೂರು - 140 ರ ಗೊಟ್ಟಗಡಿ (ಇಂದಿನ ಹಿರೇಹಳ್ಳಿ)ಯ ಗೋಗ್ರಹಣದಲ್ಲಿ ಗೊಗ್ಗಿಸೆಟ್ಟಿಯು ವೀರಸ್ವರ್ಗ ಸೇರಿದ ವಿಷಯ ತಿಳಿಸಿದರೆ, ಕ್ರಿ.ಶ. 1293 ರ ಎರಡು ಶಾಸನಗಳು ಯಾದವ ರಾಮಚಂದ್ರನ ಶಾಸನಗಳಾಗಿದ್ದು ನೇಮಿನಾಥ ಬಸದಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಹೊರಗೆ ಕೆರೆದಂಡೆಯ ಮೇಲೆ ಪ್ರಾಚೀನವಾದ ಈಶ್ವರ ಹಾಗೂ ಕಲ್ಲುಮಲ್ಲಪ್ಪನ ಎರಡು ಪ್ರತ್ಯೇಕ ಗುಡಿಗಳಿವೆ. ಇವುಗಳಲ್ಲಿ ಈಶ್ವರಗುಡಿ ಸ್ವಲ್ಪ ದೊಡ್ಡದಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದರೆ, ಕಲ್ಲುಮಲ್ಲಪ್ಪನ ಗುಡಿ ಕಿರಿದಾಗಿದ್ದು ಗರ್ಭಗೃಹ ಹಾಗೂ ಅರ್ಧಮಂಟಪವಷ್ಟೆ ಇದೆ. ಅಂತರಾಳದ ಬಾಗಿಲವಾಡ ದ್ವಿಶಾಖೆಯನ್ನು ಹೊಂದಿದ್ದು, ಇಕ್ಕೆಲಗಳಲ್ಲಿ ಜಾಲಂಧ್ರಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಸ್ಥಾನಿಕ ಭೈರವ ಹಾಗೂ ಒಂದೂವರೆ ಅಡಿ ಎತ್ತರದ ಆಸೀನ ಭೈರವಿಯರ ಸುಂದರ ಶಿಲ್ಪಗಳಿವೆ. ಈ ಗುಡಿ ಪರಿಸರದಲ್ಲಿ ಎರಡು ವೀರಗಲ್ಲುಗಳಿವೆ. ಕಲ್ಲುಮಪ್ಪನ ಗಡಿಯಲ್ಲಿ ಶಿವಲಿಂಗವಿದ್ದು, ಅರ್ಧಮಂಟಪದಲ್ಲಿ ಸಪ್ತಮಾತೃಕಾ ಪಟ್ಟಿಕೆಯಿದೆ. ಈ ಗುಡಿಗಳಿಂದ ಸುಮಾರು 100 ಮೀಟರ್ ಅಂತರದಲ್ಲಿ ಗಜಲಕ್ಷ್ಮಿ ತೋರಣವಿದ್ದು ಬಳಿಯಲ್ಲೇ ಕೋಣನ ತಲೆಯ ಸುಂದರವಾದ ಎರಡು ಶಿಲ್ಪಗಳಿವೆ. ಇವುಗಳೊಂದಿಗೆ ಊರಲ್ಲಿ ಪ್ರಾಚೀನವಾದ ವೀರಭದ್ರಗುಡಿ, ಹನುಮಂತ ಹಾಗೂ ದ್ಯಾಮವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಇವೆ.

**ಹಿರೇಕೆರೂರು :** ತಾಲೂಕು ಕೇಂದ್ರವಾದ ಹಿರೇಕೆರೂರು (ಜನಸಂಖ್ಯೆ : 13,588) ಧಾರವಾಡದಿಂದ ಆಗ್ನೇಯಕ್ಕೆ 140 ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಕಾಲದ ಶಾಸನಗಳಲ್ಲಿ 'ಪಿರಿಯ ಕೆರೆಯೂರು', 'ಮಹಾತಟಾಕಗ್ರಾಮ' ಎಂದೆಲ್ಲಾ

ಉಲ್ಲೇಖಿತಗೊಂಡಿದ್ದು, ಇಂದಿನ ಹಿರೆಕೆರೂರ, ಅದರ ರೂಪವಾಗಿದೆ. ಹಿಂದೆ ಬನವಾಸಿ-12,000 ನಾಡಿಗೆ ಸೇರಿದ್ದ ಪಿರಿಯ ಕೆರೆಯೂರು 12 ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು ಸಾವಿರ ಮಹಾಜನರನ್ನು ಒಳಗೊಂಡಿದ್ದ ಮಹಾ ಅಗ್ರಹಾರ ಗ್ರಾಮವಾಗಿತ್ತು. ಶಾಸನಗಳಲ್ಲಿ ಬರುವ 'ತೆಂಕಣ ಅಯ್ಯಾವೊಳೆ ಪಿರಿಯ ಕೆರೆಯೂರು' ಎಂಬ ಉಲ್ಲೇಖವು ಇದೊಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತೆಂಬ ಅಂಶವನ್ನು ಸೂಚಿಸುತ್ತದೆ. ಹಿರಿದಾದ ಕೆರೆಯನ್ನು ಹೊಂದಿರುವ ಈ ಊರಿಂದ ಈವರೆಗೆ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ಹಾಗೂ ವಿಜಯನಗರದ ಅರಸರ 17 ಶಾಸನಗಳು ವರದಿಯಾಗಿವೆ. ತೋಟದ ವೀರಣ್ಣನ ಗುಡಿ ಹಿಂದಿರುವ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದ ಕ್ರಿ.ಶ. 960 ರ ಗೋಸಾಸ ಶಾಸನ ಕಲ್ಲುಗಳು ಮಾರಸಿಂಗ ಹಾಗೂ ಇತರರು ಗೋಸಾಸ ದಾನ ಮಾಡಿದ ಅಂಶವನ್ನು ತಿಳಿಸುತ್ತವೆ. ಊರ ಹೆಗ್ಗೆರೆಗೆ ಬೇರೆ ಬೇರೆ ಅರಸರ ಆಳ್ವಿಕೆಯಲ್ಲಿ ವಿವಿಧ ಅಧಿಕಾರಿಗಳು ಹಾಗೂ ಗಣ್ಯರು ನೀಡಿದ ದಾನಗಳ ವಿವರವನ್ನು ಕ್ರಿ.ಶ. 1054, ಕ್ರಿ.ಶ. 1060 ಹಾಗೂ ಕ್ರಿ.ಶ. 1131 ರ ಶಾಸನಗಳು ತಿಳಿಸುತ್ತವೆ. ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಕ್ರಿ.ಶ. 1074 ರ ಶಾಸನ ದೇವತೆಗೆ ದತ್ತಿ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. 1124 ರ ಶಾಸನ ನಿಡುಗುಂದಿ ಅಗ್ರಹಾರದ ಗುಂಡವರಸನು ಜಕ್ಕೇಶ್ವರ ದೇವರಿಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಕೆರೆ ದಂಡೆ ಬಳಿಯಿರುವ ಕ್ರಿ.ಶ. 1125 ರ ಶಾಸನ ಭೂಜಂಗೇಶ್ವರ ದೇವರ ಪಾದಾರಾಧಕ ಬೊಜಂಗರ ನಾರಣಯ್ಯನ ಮಗ ಹರಣ್ಣ ಹಾಗೂ ಸಾತಿಗರು ಗೋಗ್ರಹಣದಲ್ಲಿ ಹೋರಾಡುತ್ತ ಮಡಿದ ವಿಷಯವನ್ನು ತಿಳಿಸಿದರೆ, ಅಲ್ಲೇ ಇರುವ ಸುಮಾರು ಕ್ರಿ.ಶ. 13 ನೇ ಶತಮಾನದ ವೀರಗಲ್ಲು ಶಾಸನ ಹುಲಿಯೊಂದಿಗೆ ಹೋರಾಡುತ್ತ ಮಡಿದ ನಾಯಕನ ಬಗ್ಗೆ ಹೇಳುತ್ತದೆ. ವಿಜಯನಗರದ ಸದಾಶಿವರಾಯನ ಕಾಲಕ್ಕೆ ಸೇರಿದ ಕ್ರಿ.ಶ. 1545 ರ ಶಾಸನ, ಕ್ಷೌರಿಕರಿಗೆ ತೆರಿಗೆ ರದ್ದು ಮಾಡಿದ ವಿಷಯವನ್ನು ತಿಳಿಸುತ್ತದೆ. ಈ ಶಾಸನದಿಂದ ರಟ್ಟಿಹಳ್ಳಿ ಸೀಮೆಗೆ ಸೇರಿದ್ದ ಕೋಡ ಸೀಮೆಗೆ ಹಿರೇಕೆರೂರು ಸೇರಿತ್ತೆಂಬ ಅಂಶ ಗೊತ್ತಾಗುತ್ತದೆ. ನೆರೆಯ ನೂಲಗೇರಿ ಗ್ರಾಮದ ಕ್ರಿ.ಶ. 1109 ರ ಶಾಸನ ಹಿರೇಕೆರೂರಿನ ಸಾವಿರ ಮಹಾಜನರ ಮಹೋನ್ನತಿಯನ್ನು ಹೊಗಳುತ್ತ ಅವರ ಸಮ್ಮುಖದಲ್ಲಿ ಬಮ್ಮಿಸೆಟ್ಟಿ ನಿರ್ಮಿಸಿದ ಗವರೇಶ್ವರ ದೇವರಿಗೆ ನೂಳಗೇರಿಯ ಬಣಜಿಗರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ಜಕ್ಕೇಶ್ವರ, ಬೊಜಂಗೇಶ್ವರ ದೇವಿ ಹಾಗೂ ಗವರೇಶ್ವರ ದೇವಾಲಯಗಳಿಂದು ಗುರುತಿಸಲಾಗದಷ್ಟು ಬದಲಾಗಿವೆ.

ಹಿರೇಕೆರೂರಿನ ಕೇಂದ್ರ ಆಕರ್ಷಣೆಯಾದ 'ಹೆಗ್ಗೆರೆ' ಊರಿಂದ ಎರಡು ಕಿ.ಮೀ. ದೂರದಲ್ಲಿದ್ದು ಇದು ಸುಮಾರು ಸಾವಿರ ವರ್ಷಗಳಷ್ಟು ಪ್ರಾಚೀನ ಕೆರೆಯಾಗಿದೆ. ಅದರ ವೀಕ್ಷಣೆಯೇ ಅವರ್ಣನೀಯ ಆನಂದವನ್ನು ನೀಡುತ್ತದೆ. ಇಲ್ಲಿ ಸದಾ ತಣ್ಣನೆ ಗಾಳಿ ಬೀಸುತ್ತದೆ. ಹೆಗ್ಗೆರೆಯ ದಂಡೆಯ ಮೇಲಿರುವ ಇತ್ತೀಚೆಗೆ ನಿರ್ಮಾಣಗೊಂಡಿರುವ ವಿಶಾಲವಾದ ದುರ್ಗಾ ದೇವಾಲಯವಿದೆ. ಈ ದೇವಾಲಯದ ಪ್ರವೇಶದ್ವಾರದ ಮೇಲೆ ಮಹಿಷನ ಸಂಹಾರದಲ್ಲಿ ನಿರತಳಾಗಿರುವ ಸಿಂಹವಾಹಿನಿ ಅಷ್ಟದಶಭುಜ ಮಹಿಷಮರ್ದಿನಿಯ ಆಧುನಿಕ ಶಿಲ್ಪ ಆಕರ್ಷಕವಾಗಿದೆ. ಇಲ್ಲಿನ ತ್ರೈಪುರುಷ ಶಿಲ್ಪವೂ ಉಲ್ಲೇಖಾರ್ಹವಾದುದಾಗಿದೆ. ಮೂರು ವರ್ಷಕ್ಕೊಮ್ಮೆ ಭಾರತ ಹುಣ್ಣಿಮೆಯಂದು ದೇವಿಯ ಜಾತ್ರೆ ಅದ್ದೂರಿಯಿಂದ ಜರಗುತ್ತದೆ.

ಹೆಗ್ಗೆರೆಗೆ ಹೋಗುವ ಹಾದಿಯಲ್ಲೇ ತೋಟದ ವೀರಣ್ಣ ಹಾಗೂ ಜನಾರ್ಧನ ಗುಡಿಗಳಿವೆ. ತೋಟದ ವೀರಣ್ಣನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಇದರ ಸುತ್ತಮುತ್ತ ಶಾಸನ-ವೀರಗಲ್ಲುಗಳು ನಿಂತಿವೆ. ಇದರ ಬಳಿಯಲ್ಲೇ ಇರುವ ಜನಾರ್ಧನ ಗುಡಿಯು ಗರ್ಭಗುಡಿ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದ್ದು, ಇಂದು ಶಿಥಿಲವಾಗಿದೆ. ಈ ಗುಡಿಯನ್ನು ಪೂರ್ಣವಾಗಿ ಮಣ್ಣಿನ ದಿಬ್ಬ ಮುಚ್ಚಿದೆ. ಗರ್ಭಗೃಹದಲ್ಲಿ ಸುಂದರವಾದ ಯೋಗವಿಷ್ಣು ಶಿಲ್ಪವಿದೆ. ಸುಮಾರು ಕ್ರಿ.ಶ. 15 ನೇ ಶತಮಾನದ ರಚನೆಯಾಗಿರಬಹುದಾದ ಇದರ ನವರಂಗ ಭಾಗ ಜೀರ್ಣಾವಸ್ಥೆಯಲ್ಲಿದೆ. ಊರ ನಡುವೆ ಪೇಟೆಯಲ್ಲಿರುವ ಗೌರೇಶ್ವರ ದೇವಾಲಯ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ಗುಡಿಯ ಗರ್ಭಗೃಹದಲ್ಲಿ ಗೌರೇಶ್ವರ ಲಿಂಗವಿದೆ. ಮೇಲೆ ಹೇಳಿರುವ ಗವರೇಶ್ವರ ಇದೇ ಆಗಿದೆ. ಗರ್ಭಗೃಹದ ಬಾಗಿಲವಾಡ ಪಂಚಶಾಖಾಲಂಕಾರವನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಗರ್ಭಗೃಹದ ಬಾಗಿಲ ಇಬ್ಬದಿಯಲ್ಲಿರುವ ಶಿವಲಿಂಗಗಳನ್ನು ನಗರೇಶ್ವರ ಹಾಗೂ ಠಗರೇಶ್ವರವೆಂದು ಆರಾಧಿಸಲಾಗುತ್ತದೆ. ಚಾಳುಕ್ಯರ ಕಂಬಗಳನ್ನು ಹೊಂದಿರುವ ನವರಂಗದಲ್ಲಿ ಮಹಿಷಮರ್ದಿನಿ, ಸಪ್ತಮಾತೃಕಾ ಪಟ್ಟಿಕೆ, ಗಣಪತಿ ಹಾಗೂ ಮಹೇಶ್ವರನ ಮೂರ್ತಿಗಳಿದ್ದು, ನಂದಿಯನ್ನು ನುಚ್ಚಕ್ಕಿ ಬಸವಣ್ಣನೆಂದು ಪೂಜಿಸುತ್ತಾರೆ. ಈ ಗುಡಿಯ ಮುಂದಿರುವ ಹನುಮಂತನ ಗುಡಿ ಆವರಣದಲ್ಲಿ ಆಳೆತ್ತರದ ಚತುರ್ಮುಖ ಬ್ರಹ್ಮನ ಭಗ್ನ ಶಿಲ್ಪವಿದೆ. ಬಾಲಕಿಯರ ಶಾಲೆಯ ಆವರಣದಲ್ಲಿ ಆಳೆತ್ತರದ ಚತುರ್ಭುಜ ವಿಷ್ಣುಮೂರ್ತಿ ಅಭಯ ಮುದ್ರೆಯಲ್ಲಿದ್ದು ಇದರ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಸುಂದರವಾಗಿದ್ದಿರಬಹುದಾದ ಈ ಶಿಲ್ಪವು ಇಂದು ಭಗ್ನಾವಸ್ಥೆಯಲ್ಲಿದೆ.

ಇವುಗಳೊಂದಿಗೆ ಊರಲ್ಲಿ ಹನುಮಂತ, ಬಸವಣ್ಣ (ಮೂರು), ವೀರಭದ್ರ (ಎರಡು) ವಿಠಲ, ಬ್ರಹ್ಮೇಶ್ವರ, ಶಾಕಂಬರಿ ಕೋಟೆದುರ್ಗವ್ವ ಹಾಗೂ ದತ್ತಾತ್ರೇಯ ಮಂದಿರಗಳಿವೆ. ಬ್ರಹ್ಮೇಶ್ವರ ಗುಡಿ ಬಳಿ ರಾಷ್ಟ್ರಕೂಟರ ಕಾಲದ ಬೃಹತ್ತಾದ ವೀರಗಲ್ಲಿದೆ. ಊರಲ್ಲಿ ಆದಿಲ್ ಷಾಹಿಗಳ ಕಾಲಕ್ಕೆ ಸೇರಿದ ಜಾಮಿಯಾ ಮಸೀದಿ ಹಾಗೂ ನೂರಾನಿ ಮಸೀದಿಗಳಿದ್ದು, ಅಬ್ದುಲ್‌ವಹಾಬ್ ಷಾವಲಿ, ಮಾಲೂಕ್ ಅಲಿಷಾ ಹಾಗೂ ಮಹಬೂಬು ಸುಬಾನಿಯ ದರ್ಗಾಗಳಿದ್ದು, ಇಲ್ಲಿ ಕ್ರಮವಾಗಿ ರಜಾಬ್, ಮಹರ್ ಹಾಗೂ ದಸ್ತಗಿರ್ ತಿಂಗಳಲ್ಲಿ ಉರುಸು ಜರುಗುತ್ತದೆ.

**ಹಿರೇಕೋಣತಿ :** ಹಿರೇಕೆರೂರು ತಾಲೂಕಿನ ಊರಾದ ಹಿರೇಕೋಣತಿ (ಜನಸಂಖ್ಯೆ : 1,261) ಅಥವಾ ಶಾಸನೋಕ್ತ 'ಕೋಣಾವತ್ತಿ' ಹಿರೇಕೆರೂರಿನಿಂದ 14 ಕಿ.ಮೀ. ದೂರದಲ್ಲಿರುವ ಪ್ರಾಚೀನ ಸ್ಥಳವಾಗಿದೆ. ಈ ಊರಿನ ತುಂಬಾ ಚದುರಿದಂತೆ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಊರಿನಲ್ಲಿರುವ ನಾರಾಯಣ ದೇವರಗುಡಿ ಹತ್ತಿರ ಎರಡು ವೀರಗಲ್ಲುಗಳು ಹಾಗೂ ಎರಡು ನಿಷಿಧಿ ಕಲ್ಲುಗಳಿವೆ. ಇದರಲ್ಲಿ ಒಂದು ಯಾದವರ ಕಾಲಕ್ಕೆ ಸೇರಿದ್ದು (ಕ್ರಿ.ಶ. 1271), ಅನಂತಕೀರ್ತಿಭಟ್ಟಾರಕರ ಶಿಷ್ಯೆ ಕಾಮನೆಯ ಸನ್ಯಸನ ಮರಣವನ್ನು ದಾಖಲಿಸುತ್ತದೆ. ಇದರ ಪಕ್ಕದ ಇನ್ನೊಂದರಲ್ಲಿಯೂ ಶಾಸನವಿದ್ದು ಇದು ಯಾದವ ರಾಮಚಂದ್ರನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1278) ಅದರ ಬರಹ ಅಸ್ಪಷ್ಟವಾಗಿದ್ದು ಸೇನಭಟ್ಟಾರಕ ದೇವರ ಶಿಷ್ಯನಾದ ಸೆಟ್ಟಿಯೊಬ್ಬನ ಸನ್ಯಸನ ಮರಣವನ್ನು ತಿಳಿಸುತ್ತದೆ. ಈ ಗುಡಿಯ ಪರಿಸರದಲ್ಲಿ ಮುಂಭಾಗದಲ್ಲಿ ಬಿದ್ದಿರುವ ಚಾಳುಕ್ಯ ಶೈಲಿಯ ಬಾಗಿಲುವಾಡದಲ್ಲಿ ಜಿನಬಿಂಬವಿದೆ. ನಾರಾಯಣಗುಡಿಯ ಗರ್ಭಗೃಹದಲ್ಲಿ ಸಿಂಹಲಾಂಛನವಿರುವ ಜೈನಪೀಠವಿದ್ದು ಮೇಲ್ಭಾಗದಲ್ಲಿ ಚಾಳುಕ್ಯ ಶೈಲಿಯ ಕೇಶವ ಶಿಲ್ಪವಿದೆ. ಚಾಳುಕ್ಯ ಕಂಬಗಳು ಬಿದ್ದಿವೆ. ಇದರ ಸಮೀಪವೇ ಹಲವಾರು ವೀರಗಲ್ಲುಗಳಿದ್ದು ವಿಜಯನಗರೋತ್ತರ ಶೈಲಿಯ ಮೂರು ಸ್ಮಾರಕ ಶಿಲೆಗಳಿವೆ. ಇನ್ನೊಂದರಲ್ಲಿ ಕುಳಿತ ಸತೀಕಲ್ಲಿನಲ್ಲಿ ಕುದುರೆ ಮೇಲೆ ಗಂಡು ಹೆಣ್ಣು ಕುಳಿತ ರಾಜನಂತಹ ಕೆತ್ತನೆಯಿದೆ; ಹಾಗೂ ಛತ್ರಧ್ವಜಗಳಿವೆ. ಊರಿನಲ್ಲಿರುವ ಬನ್ನಿಕಟ್ಟೆಯ ಬಳಿ ಇನ್ನೊಂದು ಸತಿ ಕಲ್ಲಿದೆ. ಕೆರೆದಂಡೆಯಲ್ಲಿ ಕರಿಯಮ್ಮನ ಚಿಕ್ಕಗುಡಿಯ ಬಳಿ ಲಿಪಿ ಇರುವ ವೀರಗಲ್ಲು ಕೆಳಗೆ ಸತಿಕಲ್ಲು, ಮಹಿಷಮರ್ದಿನಿ, ನಿಷಿಧಿಕಲ್ಲು ಮತ್ತು ತುಂಡು ನಾಗನ ಹೆಡೆಭಾಗದಲ್ಲಿ ಪ್ರಾಣಿ ಇರುವ ಭಿನ್ನ ಬಿಂಬವಿದೆ. (ಗುರುತಿಸಲು ಸಾಧ್ಯವಿಲ್ಲ) ಇಲ್ಲಿರುವ ವೀರಗಲ್ಲಿನಲ್ಲಿ ಕಲಚೂರಿಯ ಬಿಜ್ಜಳನ ಕಾಲಕ್ಕೆ ಸೇರಿದ್ದು (ಕ್ರಿ.ಶ. 1166) ದಾಳಿಯಲ್ಲಿ ಕೋಣಾವತ್ತಿಯ ಕೇತಿಸೆಟ್ಟಿಯ ವೀರಮರಣವನ್ನು ದಾಖಲಿಸುತ್ತದೆ. ಊರಿನಲ್ಲಿರುವ ಇತರ ಗುಡಿಗಳೆಂದರೆ ಗಾಳಿ ದುರ್ಗವ್ವ, ಮಾತಂಗಿ, ಕರಿಯವ್ವ, ರೇಣುಕಾದೇವಿ, ಕಲ್ಲೇಶ್ವರ ಮುಂತಾದವುಗಳು. ರೇಣುಕಾದೇವಿಯ ಜಾತ್ರೆಯು ಯುಗಾದಿಯಾದ ಒಂಭತ್ತನೇ ದಿನ ನಡೆಯುತ್ತದೆ. ಕೆರೆದಂಡೆಯಲ್ಲಿ ಕಲ್ಲೇಶ್ವರ ಗುಡಿಯಲ್ಲಿ ಚಾಳುಕ್ಯ ಲಕ್ಷಣವುಳ್ಳ ಪಾಣಿಪೀಠವಿದೆ. ಊರಿನಲ್ಲಿ ಒಂದು ಮಸೀದಿ ಹಾಗೂ ದರ್ಗಾಗಳು ಇವೆ.

**ಹಿರೇಬಾಸೂರು :** ಹಾನಗಲ್ ತಾಲೂಕಿನ ಹಿರೇಬಾಸೂರು (ಜನಸಂಖ್ಯೆ : 1,650) ಹಾನಗಲ್‌ನಿಂದ ಆಗ್ನೇಯಕ್ಕೆ 24 ಕಿ.ಮೀ. ದೂರದಲ್ಲಿದ್ದು ಶಾಸನಗಳು ವ್ಯಾಸಪುರ ಬಾಸಪುರ, ಬಾಸವೂರ ಎಂದೆಲ್ಲ ಹೆಸರಿಸಿರುವ ಊರಾಗಿದೆ. ಶಿಲಾಹಾರರ ಶಾಖೆಯೊಂದಕ್ಕೆ ಕೇಂದ್ರವಾಗಿದ್ದ ಈ ಊರು ಶಾಸನಗಳಲ್ಲಿ ಬಾಸೂರು-140 ಎಂದೇ ಪ್ರಸಿದ್ಧವಾಗಿದೆ. ಇಲ್ಲಿಂದ ಈವರೆಗೆ ಒಟ್ಟು ಆರು ಶಾಸನಗಳು ವರದಿಯಾಗಿದ್ದು ಅವು ಕಳಚೂರಿ ಮತ್ತು ಯಾದವ ಅರಸರ ಕಾಲದ್ದಾಗಿದೆ. ಕಳಚೂರಿ ಬಿಜ್ಜಳನ ಕಾಲಕ್ಕೆ ಸೇರಿದ ಶಾಸನವೊಂದು ಅತ್ತಿರಾಜನು ವ್ಯಾಸಪುರ (ಬಾಸೂರು) ದಲ್ಲಿ ವ್ಯಾಸೇಶ್ವರದೇವಾಲಯ ನಿರ್ಮಿಸಿ ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಯಾದವ ಸಿಂಘಣನ ಕಾಲಕ್ಕೆ ಸೇರಿದ ಶಾಸನವೊಂದು ಬಾಸೂರಿನ ಬಾಸೇಶ್ವರ ಗುಡಿಗೆ ಬಿಟ್ಟ ದತ್ತಿಯಾಗಿದ್ದರೆ ಮತ್ತೊಂದು ಜೀಮೂತವಾಹನ ಕುಲಕ್ಕೆ ಸೇರಿದ ಮಲ್ಲಿದೇವನು ಬ್ರಹ್ಮದೇವಾಲಯಕ್ಕೆ ಬಿಟ್ಟ ದತ್ತಿ ಶಾಸನವಾಗಿದೆ. ಇಲ್ಲಿನ ಮೂರು ಶಾಸನಗಳಲ್ಲಿ ಎರಡು ಕೋಟೆ ಕಾಳಗಕ್ಕೆ ಸಂಬಂಧಿಸಿದ ವೀರಗಲ್ಲು ಶಾಸನಗಳಾಗಿದ್ದು ಊರಳಿವಿನಲ್ಲಿ ಮಡಿದ ಮಲ್ಲಿಸೆಟ್ಟಿ ಮತ್ತು ನಾಗೆಯನ ಸ್ಮಾರಕ ಶಿಲೆಗಳಾಗಿವೆ. ಹನುಮಂತನ ಗುಡಿಯ ಬಳಿಯ ಬಯಲಲ್ಲಿ ಒಂದೇ ಸ್ಥಳದಲ್ಲಿ ಏಳು ಮಾಸ್ತಿಕಲ್ಲುಗಳಿದ್ದು, ಎರಡರಲ್ಲಿ ಶಾಸನವಿದೆಯಾದರೂ ತ್ರುಟಿತವಾಗಿವೆ. ಆಳೆತ್ತರದ ಈ ಮಾಸ್ತಿಕಲ್ಲುಗಳು ಸುಮಾರು ಕ್ರಿ.ಶ. 14 ನೇ ಶತಮಾನಕ್ಕೆ ಸೇರಿದ್ದಾಗಿದೆ. ಊರ ಬಳಿಯ ಗುಡ್ಡವನ್ನು ಐರೇಗುಡ್ಡ ಎಂದು ಕರೆಯುತ್ತಾರೆ. ಗುಡ್ಡದ ಮೇಲೆ ಇದ್ದ ಕೋಟೆ ಹಾಳಾಗಿದೆ. ಊರ ಹೊರಗಿರುವ ವಿಶ್ವೇಶ್ವರ ದೇವಾಲಯವೇ ಮೇಲೆ ಪ್ರಸ್ತಾಪಿಸಿರುವ ವ್ಯಾಸೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಎಡಭಾಗದ ದೇವಕೋಷ್ಠಗಳಲ್ಲಿ ಅಷ್ಟಭುಜ ಮಹಿಷಮರ್ದಿನಿ, ಕಾರ್ತಿಕೇಯ ಹಾಗೂ ಬ್ರಹ್ಮನ ಶಿಲ್ಪಗಳನ್ನೂ ಎಡಭಾಗದ ದೇವಕೋಷ್ಠಗಳಲ್ಲಿ ಚತುರ್ಭುಜ ವಿಷ್ಣು ಸಪ್ತಮಾತೃಕಾ ಹಾಗೂ ಹರಿಹರ ಶಿಲ್ಪಗಳನ್ನು ನೋಡಬಹುದಾಗಿದೆ. ಸುಮಾರು ಮೂರು ಅಡಿ ಎತ್ತರವಿರುವ ಈ ಬಿಡಿ ಶಿಲ್ಪಗಳು

ಸುಂದರ ಬಿಂಬಗಳಾಗಿದ್ದು ಅದರಲ್ಲೂ ಬ್ರಹ್ಮ ವಿಷ್ಣು ಹರಿಹರರ ಶಿಲ್ಪಗಳು ಉತ್ಕೃಷ್ಟವಾಗಿವೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯವು. ಈ ಗುಡಿ ಶಿಥಿಲಾವಸ್ಥೆಯಲ್ಲಿದೆ. ಶಾಸನೋಕ್ತ ಬ್ರಹ್ಮೇಶ್ವರ ಗುಡಿ ಇಂದಿಲ್ಲವಾದರೂ ಸುಮಾರು ಎಂಟು ಅಡಿ ಎತ್ತರವಿದ್ದಿರಬಹುದಾದ ಮೂರ್ತಿಯ ಶಿರೋಭಾಗ ಮಾತ್ರ ಕೋಣದ ಭರಮಪ್ಪನೆಂಬ ಹೆಸರಿನೊಂದಿಗೆ ಸೋಮಸಾಗರ ರಸ್ತೆ ಬಳಿ ಬಿದ್ದಿದೆ. ಇಲ್ಲೇ ಬೇರೆ ಬೇರೆ ಪ್ರಮಾಣದ ಕೋಣನ ತಲೆ ಶಿಲ್ಪಗಳಿದ್ದು, ಅದರಲ್ಲೊಂದು ಬೃಹತ್ ಆಗಿದ್ದು ನಾಲಿಗೆ ಹೊರಚಾಚಿರುವ ಕೋಣನ ಕೋಡಿನ ನಡುವೆ ಸುಂದರವಾದ ಕಮಲವಿದೆ. ಊರಲ್ಲಿರುವ ರಾಮಲಿಂಗನ ಗುಡಿ ಪ್ರಾಚೀನದ್ದಾದರೂ ಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ಅಂತರಾಳ, ಶಿವಲಿಂಗ, ನಂದಿಯಷ್ಟೆ ಉಳಿದಿದೆ. ಹನುಮಂತನ ಗುಡಿ ಪೂರ್ಣ ಜೀರ್ಣೋದ್ಧಾರ ಗೊಂಡಿದೆಯಾದರೂ ಆವರಣದಲ್ಲಿ ವಿಜಯನಗರ ಕಾಲಕ್ಕೆ ಸೇರಿದ ತ್ರುಟಿತ ಶಾಸನವಿದೆ. ನಾಲ್ಕು ಮುಖದ ಪೀಠಸ್ಥ ಬ್ರಹ್ಮನನ್ನು ಸ್ಥಳೀಕರು 'ಗೋಲಕವ್ವ'ನೆಂದು ದೀಪಾವಳಿಯಲ್ಲಿ ವಿಶೇಷವಾಗಿ ಆರಾಧಿಸುತ್ತಾರೆ. ಇವುಗಳ ಜೊತೆಗೆ ಇತ್ತೀಚಿನ ಬಸವಣ್ಣ, ಭರಮಪ್ಪ, ದ್ಯಾಮವ್ವ, ಉಡಚವ್ವ ಹಾಗೂ ಮಾತಂಗವ್ವನ ಗುಡಿಗಳಿವೆ. ಊರಲ್ಲಿ ಒಂದು ಮಸೀದಿಯಿದೆ. ನೆರೆಯಗ್ರಾಮ ಚಿಕ್ಕ ಬಾಸೂರಲ್ಲಿ ಪ್ರತೀ ವರ್ಷ ನವೆಂಬರ್ ತಿಂಗಳಲ್ಲಿ ಮೆಹಬೂಬ್ ಸುಬಾನಿಯ ಉರುಸು ಜರುಗುತ್ತಿದ್ದು, ಅದರಲ್ಲಿ ಇಲ್ಲಿಯ ಮುಸ್ಲಿಂಮರು ಪಾಲ್ಗೊಳ್ಳುತ್ತಾರೆ.

**ಹಿರೇಬೆಂಡಿಗೇರಿ** : ಶಿಗ್ಗಾಂವಿ ತಾಲೂಕಿನ ಹಿರೇಬೆಂಡಿಗೇರಿಯು (ಜನಸಂಖ್ಯೆ : 2,777) ಶಿಗ್ಗಾಂವಿಯಿಂದ ಉತ್ತರಕ್ಕೆ 12 ಕಿ.ಮೀ. ದೂರದಲ್ಲಿರುವ ಊರು. ಚಾರಿತ್ರಿಕವಾಗಿ ಮಹತ್ವದ್ದಾಗಿರುವ ಈ ಊರಿನಿಂದ ಈವರೆಗೆ ಏಳು ಶಾಸನಗಳು ದೊರೆತ್ತಿದ್ದು, ಅವುಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ. 1126ರ ಶಾಸನ ಹಾಳಾಗಿದೆ. ಇದರಲ್ಲಿ ಪೆರ್ಗಡೆ ನರಸಿಂಗನು ಮಾಚೇಶ್ವರ ದೇವರಿಗೆ ಭೂಮಿಯನ್ನು ಹಾಗೂ ದೀಪಕ್ಕೆ ಎಣ್ಣೆಯನ್ನು ದಾನಕೊಟ್ಟ ವಿಷಯ ತಿಳಿಸುತ್ತದೆ. ಚಾಳುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದ ಕ್ರಿ.ಶ. 1143ರ ಶಾಸನ ಬಲ್ಲಗಾವುಂಡ ಹಾಗೂ ನಿಜಕಬ್ಬೆಗಾವುಂಡಿ ದಂಪತಿಗಳು ಮಾಚೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ಕ್ರಿ.ಶ. 1148ರ ಶಾಸನ ಮಾದಿಗಾವುಂಡಾದಿಗಳಿಂದ ಕಲಿದೇವಸ್ವಾಮಿಗೆ ಭೂಮಿ ಹಾಗೂ ನಿವೇಶನಗಳ ದಾನದ ಬಗ್ಗೆ ಉಲ್ಲೇಖಿಸುತ್ತದೆ. ಕಲ್ಲೇಶ್ವರ ಗುಡಿ ಮುಂದಿರುವ ಕ್ರಿ.ಶ. 1148ರ ಶಾಸನ ದಂಡನಾಯಕ ಮಾಚರಸಾದಿಗಳಿಂದ ಸ್ವಯಂಭೂ ಕಲಿದೇವಸ್ವಾಮಿ ದೇಗುಲಕ್ಕೂ ಹಳ್ಳಿಯಕೇರಿ ಗ್ರಾಮವನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ. ಇಲ್ಲೇ ಇರುವ ಕಲಚೂರಿ ಬಿಜ್ಜಳನ ಕಾಲಕ್ಕೆ ಸೇರಿದ ಕ್ರಿ.ಶ. 1168ರ ಶಾಸನ ಮಾಂಡಳಿಕ ಪೇರಯಾದಿಗಳಿಂದ ಕಲಿದೇವಸ್ವಾಮಿಗೆ ಹಾನಗುಂದ ಗ್ರಾಮವನ್ನು ದತ್ತಿಬಿಟ್ಟ ಅಂಶವನ್ನು ತಿಳಿಸುತ್ತದೆ.ಇದೇ ದೇವಾಲಯದ ಕಂಬದ ಮೇಲಿರುವ ಸುಮಾರು ಕ್ರಿ.ಶ. 12ನೇ ಶತಮಾನದ ಶಾಸನ ಗೋರವಬ್ಬೆಯ ಚಟ್ಟಿಸೆಟ್ಟಿ ಸ್ವಯಂಭೂ ದೇವರಿಗೆ ನಾಟ್ಯಶಾಲೆ ಕಟ್ಟಿಸಿದ ಅಂಶವನ್ನು ನೀಡುತ್ತದೆ. ಸುಮಾರು ಕ್ರಿ.ಶ. 15ನೇ ಶತಮಾನಕ್ಕೆ ಸೇರಿದ ಶಾಸನ ಬಿಳಿಗೆಯ ಘಂಟೆ ಒಡೆಯನಿಂದ ಕೋರ್ಯಾಣ್ಣ ಮಠಕ್ಕೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ದೇವಾಲಯಗಳಲ್ಲಿ ಹಿಂದೆ ಎರಡು ಗ್ರಾಮಗಳನ್ನು ದಾನ ಪಡೆದಿದ್ದ ಸ್ವಯಂಭೂ ಕಲಿದೇವರ ಗುಡಿಯೊಂದು ಮಾತ್ರ ಊರ ಹೊರಗೆ ಪೂರ್ವಾಭಿಮುಖವಾಗಿ ಭಾಗಶಃ ಜೀರ್ಣೋದ್ಧಾರಗೊಂಡು ನಿಂತಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಗರ್ಭಗೃಹದ ಬಾಗಿಲವಾಡ ಸರಳವಾದ ದ್ವಿಶಾಖೆಯನ್ನು ಹೊಂದಿದೆ. ಅಂತರಾಳದ ಬಾಗಿಲವಾಡವೂ ಇಷ್ಟೇ ಅಲಂಕಾರ ಹೊಂದಿದ್ದು, ನವರಂಗ ಭಾಗದ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಇತ್ತೀಚಿನ ಶಿಖರ ಗರ್ಭಗೃಹವನ್ನು ಅಲಂಕರಿಸಿದೆ. ಊರಲ್ಲಿ ಬಸವಣ್ಣ, ವೀರಭದ್ರ, ಮೈಲಾರ, ಹನುಮಂತ, ದುರ್ಗಮ್ಮ, ದ್ಯಾಮವ್ವ ಹಾಗೂ ಕರಿಯಮ್ಮನ ಗುಡಿಗಳಿವೆ; ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಹಿರೇಮಾಗನೂರು** : ರಾಣೆಬೆನ್ನೂರು ತಾಲೂಕಿನ ಹಿರೇಮಾಗನೂರು (ಜನಸಂಖ್ಯೆ : 852) ರಾಣೆಬೆನ್ನೂರಿನಿಂದ ದಕ್ಷಿಣಕ್ಕೆ 18 ಕಿ.ಮೀ. ದೂರದಲ್ಲಿದ್ದು, ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದುದೆಂಬ ಅಂಶ ರಾಷ್ಟ್ರಕೂಟ ಮುಮ್ಮಡಿ ಇಂದ್ರನ ಕಾಲದ ಕ್ರಿ.ಶ. 918ರ ಶಾಸನವೊಂದರಿಂದ ತಿಳಿಯುತ್ತದೆ. 'ಮಾಗುನ್ನುರ' ಗೌಂಡನು ಕೆರೆಯೂರು ಹಾಗೂ ತಾಣಗುನ್ನೂರ (ತಾಳಗುಂದ) ಮಹಾಜನರ ಹರಕೆಯಂತೆ 'ಚಿತ್ರಗೋಸಾಸ ಮಿಳ್ದು' ಎರಡು ಕೆರೆಯ ಕಟ್ಟಿಸಿ, ಲಿಂಗ ಪ್ರತಿಷ್ಠಾಪನೆ ಮಾಡಿ ದೇವಾಲಯ ಕಟ್ಟಿಸಿದನೆಂದು ಗೊತ್ತಾಗುತ್ತದೆ. ಈ ಶಾಸನವನ್ನು ಕಲ್ಲೇಶ್ವರ ಗುಡಿ ಮುಂದಿರುವ ಗೋಸಾಸ ಕಲ್ಲು ಸಮೂಹದಲ್ಲಿ ಒಂದರ ಮೇಲೆ ಕೆತ್ತಲಾಗಿದೆ. ಈ ಕಲ್ಲುಗಳನ್ನು ಸ್ಥಳೀಕರು ನವಗ್ರಹಕಲ್ಲುಗಳೆಂದು ಭಾವಿಸಿ ಪೂಜಿಸುತ್ತಾರೆ. ಇಲ್ಲಿ ಮೂರರ ಸಾಲಿನಲ್ಲಿ ಒಂಬತ್ತು ಗೋಸಾಸ ಕಲ್ಲುಗಳನ್ನು ನಿಲ್ಲಿಸಿದ್ದಾರೆ. ಇವುಗಳ ಮೇಲೆ ಕಳಸ, ನೇಗಿಲಿನ ಕೆತ್ತನೆಯಿದೆ. ಈ ಶಾಸನದಲ್ಲಿರುವ 'ಮಾಗುನ್ನುರು' ಹಿರೇಮಾಗನೂರಿನ ಪ್ರಾಚೀನ ಹೆಸರಾಗಿದ್ದು

ಈ ಅವಧಿಯಲ್ಲಿ ನಿರ್ಮಾಣಗೊಂಡ ಗುಡಿ ಇಂದಿನ ಕಲ್ಲೇಶ್ವರ ಗುಡಿಯೇ. ಈ ಕಲ್ಲೇಶ್ವರ ಗುಡಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು ನವರಂಗದ ಉತ್ತರದಲ್ಲೂ ಒಂದು ಚಿಕ್ಕ ಗರ್ಭಗೃಹವಿದೆ. ಅಂತರಾಳದ ದ್ವಾರಬಂಧಕ್ಕೆ ಜಾಲಂಧ್ರವಿದೆ. ಎರಡೂ ಗರ್ಭಗೃಹಗಳಲ್ಲೂ ಶಿವಲಿಂಗವಿದ್ದು, ನವರಂಗದ ನಡುವೆ ನಂದಿ ಮೂರ್ತಿಯಿದೆ. ನವರಂಗದಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಕ್ರಮವಾಗಿ ಸಪ್ತಮಾತೃಕಾ ಹಾಗೂ ಸುಂದರವಾದ ನಾಲ್ಕು ಅಡಿ ಎತ್ತರದ ಭೈರವನ ಶಿಲ್ಪಗಳಿವೆ. ನವರಂಗದ ನಡುವಿನ ಛತ್ತಲ್ಲಿ ಗಜಚರ್ಮಾಂಬರಧಾರಿ ನಟರಾಜನ ಸುಂದರ ಶಿಲ್ಪಕೆತ್ತನೆಯಿದ್ದು, ಸುತ್ತ ಅಷ್ಟದಿಕ್ಪಾಲಕರನ್ನು ಕೆತ್ತಿದ್ದಾರೆ. ಇದರ ಶಿಖರ ಶಿಥಿಲಗೊಂಡಿದ್ದು ಸ್ಥಳಿಕರು ದುರಸ್ತಿ ಮಾಡಿದ್ದಾರೆ. ಈ ಗುಡಿ ಇಂದಿಗೂ ಪೂಜಿಸಲ್ಪಡುತ್ತಿದ್ದು ಇದರ ಜಾತ್ರೆ ಡಿಸೆಂಬರ್ ತಿಂಗಳಲ್ಲಿ ಜರುಗುತ್ತದೆ. ಊರ ನಡುವೆ ವೀರಗಲ್ಲಪ್ಪಜ್ಜನ ಕಟ್ಟೆಯಲ್ಲಿ ಸುಮಾರು ಕ್ರಿ.ಶ. 15-16 ನೇ ಶತಮಾನದ ಆರಡಿ ಎತ್ತರದ ಬಿಲ್ಲಾಳು ಯೋಧನ ಸುಂದರ ವೀರಗಲ್ಲಿದ್ದು, ಇದನ್ನು ತಳವಾರ ಜನಾಂಗದವರು ವಿಶೇಷವಾಗಿ ಪೂಜಿಸುತ್ತಾರೆ.

**ಹಿರೇಹಳ್ಳಿ** : ಬ್ಯಾಡಗಿ ತಾಲೂಕಿನ ಹಿರೇಹಳ್ಳಿಯು (ಜನಸಂಖ್ಯೆ : 2,164) ಬ್ಯಾಡಗಿಯಿಂದ ನೈಋತ್ಯಕ್ಕೆ 30 ಕಿ.ಮೀ. ದೂರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ 'ಗೊಟ್ಟಗಡಿ' ಎಂದು ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬಾಸವೂರು-140 ಕ್ಕೆ ಸೇರಿದ್ದ ಕಾಗಿನೆಲೆ-12 ರಲ್ಲಿ ಅಂತರ್ಗತವಾಗಿತ್ತು. ಇಲ್ಲಿನ ಭವ್ಯವಾದ ಕೋಟೇಶ್ವರ ಅಥವಾ ಗಜೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿರುವ ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಗುಡಿಯ ಮುಂದಿರುವ ಕಲ್ಯಾಣದ ಚಾಳುಕ್ಯ ಆರ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಕ್ರಿ.ಶ. 1121 ರ ಶಾಸನ ಶೋಭನಸೆಟ್ಟಿ ಹಾಗೂ ಅವನ ಮಡದಿ ಸೋವಿಯಕ್ಕ 'ಗೊಟ್ಟಗಡಿ'ಯಲ್ಲಿ ಅಂಗಜೇಶ್ವರ ದೇವಾಲಯವನ್ನು ದೇವರ ಅಂಗ ರಂಗ ಭೋಗಕ್ಕೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಗಜೇಶ್ವರ ದೇವಾಲಯದ ಸ್ತಂಭವೊಂದರ ಮೇಲಿರುವ ಇಮ್ಮಡಿ ಜಗದೇಕಮಲ್ಲನ ಕಾಲದ ಶಾಸನ ವಿವಿಧ ಆಡಳಿತಾಧಿಕಾರಿಗಳ ಬಗ್ಗೆ ಮಾಹಿತಿ ನೀಡಿದ್ದರೆ, ಗುಡಿಯ ಮುಂದಿರುವ ಹರಿಹರನ ಕಾಲದ ಕ್ರಿ.ಶ. 14 ನೇ ಶತಮಾನದ ವೀರಗಲ್ಲು ಶಾಸನ ಚಳುಕಿ ನೆಡಿಲಗೌಡ ಹಾಗೂ ಮುದಿಗೌಡಿಯ ಮಗ ನಿಧನ ಹೊಂದಿದ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ಅಂಗಜೇಶ್ವರ ಗುಡಿಯೇ ಇಂದಿನ ಗಜೇಶ್ವರ ಗುಡಿಯಾಗಿದೆ. ಊರ ಹೊರಗೆ ಇರುವ ಈ ಪ್ರಾಚೀನಗುಡಿ ಮಣ್ಣುಕೋಟೆಯಿಂದ ಆವರಿಸಿದ್ದರಿಂದ, ಇದಕ್ಕೆ ಕೋಟೇಶ್ವರ ಎಂಬ ಹೆಸರು ಬಂದಿದೆ. ಗಾತ್ರದಲ್ಲಿ ಸ್ವಲ್ಪ ಹಿರಿದಾದ, ವಿಶಾಲವಾದ ಈ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದ್ದು ಕಕ್ಷಾಸನವನ್ನೂ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಸರಳ ಪಂಚಶಾಖೆಯನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ಬಾಗಿಲವಾಡವು ತ್ರಿಶಾಖೆಯನ್ನು ಹೊಂದಿದ್ದು, ತ್ರಿಮೂರ್ತಿ ಕೆತ್ತನೆಯಿರುವ ಮಕರತೋರಣದಿಂದ ಅಲಂಕೃತವಾಗಿದೆ. ನವರಂಗದ ಉತ್ತರದಂಚಲ್ಲಿ ಒಂದಂಕಣದ ಗರ್ಭಗೃಹ (ಇದು ನಂತರದ ಸೇರ್ಪಡೆ ಎಂದು ತೋರುತ್ತದೆ)ದಲ್ಲಿ ಸುಮಾರು ಏಳೂವರೆ ಅಡಿ ಎತ್ತರದ ಚತುರ್ಭುಜ ವಿಷ್ಣುವಿನ ಶಿಲ್ಪವಿದ್ದು ಭಾಗಶಃ ಭಗ್ನವಾಗಿದೆ. ವಿಷ್ಣುಶಿಲ್ಪದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ನವರಂಗದ ದೇವಕೋಷ್ಠಗಳಲ್ಲಿ, ಕ್ರಮವಾಗಿ ಮೂರಡಿ ಎತ್ತರದ ಸಪ್ತಮಾತೃಕೆಯರು, ಗಣಪತಿ, ಮೈಲಾರ ಹಾಗೂ ಕಾರ್ತಿಕೇಯನ ಶಿಲ್ಪಗಳಿವೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯ ಉತ್ಕೃಷ್ಟ ಉದಾಹರಣೆಗಳಾಗಿವೆ. ಇದರ ಛಾವಣಿಯು ಕಟ್ಟಿಗೆಯ ಕುಸುರಿ ಕೆತ್ತನೆಯ ಅನುಕರಣೆಯಾಗಿದೆ. ದೇವಾಲಯದ ಹೊರಭಿತ್ತಿಯನ್ನು ದೇವಕೋಷ್ಠ, ಮಂಟಪ, ಕಿರುಶಿಖರ, ಅಲಂಕಾರಿಕ ಸ್ತಂಭಗಳು ಶೃಂಗರಿಸಿವೆ. ಗರ್ಭಗೃಹದ ಶಿಖರ ದ್ರಾವಿಡ ಶೈಲಿಯಲ್ಲಿದೆ. ಡಾ॥ ಎಂ.ಎಂ. ಕಲ್ಬುರ್ಗಿ ಶರಣಮಸಣಯ್ಯನು ಹಿರೆಹಳ್ಳಿ (ಗೊಟ್ಟಗಡಿ)ಯವನಾಗಿದ್ದು ಅಲ್ಲಿನ ಅಂಗಜೇಶ್ವರನ ಭಕ್ತನಿರಬೇಕೆಂದು ಅನುಮಾನಿಸುತ್ತಾರೆ. ಇದಕ್ಕೆ ಖಚಿತ ಆಧಾರ ಇನ್ನೂ ಸಿಗಬೇಕಾಗಿದೆ. ಊರಲ್ಲಿ ಬಸವಣ್ಣ, ವೀರಭದ್ರ, ಹನುಮಂತ, ದ್ಯಾಮವ್ವ ಮತ್ತು ದುರ್ಗವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಹಿರೇಹಾಳ** : ರೋಣ ತಾಲೂಕಿನ ಹಿರೇಹಾಳವು (ಜನಸಂಖ್ಯೆ : 3,520) ಪ್ರಾಚೀನ ಶಾಸನಗಳಲ್ಲಿ 'ಕಿಸುವಾವಿ' ಎಂದು ಉಲ್ಲೇಖಿತಗೊಂಡಿದೆ. ಈ ಊರು, ರೋಣದಿಂದ ಈಶಾನ್ಯಕ್ಕೆ ಐದು ಕಿ.ಮೀ. ದೂರದಲ್ಲಿ ರೋಣ-ಬಾದಾಮಿ ರಸ್ತೆಯಲ್ಲಿದೆ. ಹಿಂದೆ ಇದು ಕಿಸುಕಾಡು-70 ಕ್ಕೆ ಸೇರಿದ್ದು, 84 ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ರಾಮೇಶ್ವರ ದೇವಾಲಯದ ಮುಂದಿರುವ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕಾಲದ ಕ್ರಿ.ಶ. 1130 ರ ಶಾಸನದಿಂದ ಅಗ್ರಹಾರ ಕಿಸುವಾವಿ (ಹಿರೇಹಾಳ)ಯ 84 ಮಹಾಜನಗಳು ತಪೋಧನರ ಆಹಾರಕ್ಕೆಂದು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ನಡುವಿನ ಭಾವಿಯಲ್ಲಿ ಶಾಸನಕಲ್ಲುಗಳಿವೆಯಂತೆ; ಕ್ಷೇತ್ರಕಾರ್ಯ ನಡೆಸಿದರೆ ಇಲ್ಲಿ ಮತ್ತಷ್ಟು

ಶಾಸನಗಳು ಸಿಗುವ ಸಾಧ್ಯತೆ ಇದೆ. ಊರಲ್ಲಿಂದು ಪ್ರಾಚೀನವಾದ ರಾಮೇಶ್ವರ ಅಥವಾ ರಾಮಲಿಂಗ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹವು ಒಳಗೆ ಚೌಕಾಕಾರದ, ಹೊರಗೆ ನಕ್ಷತ್ರಾಕಾರದ ತಳವಿನ್ಯಾಸವನ್ನು ಪಡೆದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡ ಸರಳ ಪಂಚಶಾಖೆಯನ್ನುಳ್ಳದ್ದಾಗಿದೆ. ನವರಂಗಕ್ಕೆ ಪೂರ್ವ-ಉತ್ತರಗಳಿಂದ ಪ್ರವೇಶವಿದ್ದು, ಇದರ ಬಾಗಿಲವಾಡಗಳು ಆಕರ್ಷಕವಾಗಿವೆ. ಉತ್ತರದ ಬಾಗಿಲವಾಡದಲ್ಲಿ ಹಂಸಾವಳಿ ಪಟ್ಟಿಕೆಯಿದ್ದು ಎರಡರ ಲಲಾಟದಲ್ಲೂ ಗಜಲಕ್ಷ್ಮಿ ಕೆತ್ತನೆಯಿದೆ. 16 ಕಂಬಗಳ ಮೇಲೆ ನಿಂತರುವ ನವರಂಗದ ನಡುವಿನ ನಾಲ್ಕು ಕಂಬಗಳು ಚಾಳುಕ್ಯ ಶೈಲಿಯ ಕಂಬಗಳಾಗಿದ್ದು, ಸುಂದರವಾಗಿವೆ. ದೇವಾಲಯ ಹೊರಭಿತ್ತಿಯಲ್ಲಿ ಆಲಂಕಾರಿತ ಸ್ತಂಭಗಳು. ಕಿರು ಶಿಖರ ಮಾದರಿಯ ಕೆತ್ತನೆಯನ್ನು ನೋಡಬಹುದು. ಸಂಕೇಶ್ವರ, ಕೆರೆ ಬಸವಣ್ಣ (ವಿರೂಪಾಕ್ಷ), ಸೋಮೇಶ್ವರ, ಮಲ್ಲಿಕಾರ್ಜುನ ಹಾಗೂ ನಾಗಲಿಂಗೇಶ್ವರ ದೇವಾಲಯಗಳೆಂಬ ಪ್ರಾಚೀನ ಪಂಚಲಿಂಗ ಗುಡಿಗಳಿದ್ದು ಇವು ಶಿಥಿಲವಾಗಿವೆ. ಇವುಗಳ ಜೊತೆಗೆ ಊರಲ್ಲಿಂದು ವೀರಭದ್ರ, ಹನುಮಂತ, ರೇವಣ-ಸಿದ್ದೇಶ್ವರ ಹಾಗೂ ದ್ಯಾಮವ್ವನ ಗುಡಿಗಳಿವೆ ಹಾಗೂ ಮುದಿಯಪ್ಪಜ್ಜನ ಮಠವಿದೆ. ಊರಲ್ಲಿ ಒಂದು ಮಸೀದಿ ಹಾಗೂ ಖಾದಿರ್‌ಸಾಬ್ ಅಜ್ಜನ ದರ್ಗಾ ಕೂಡ ಇವೆ. ಮೊಹರಂ ತಿಂಗಳಲ್ಲಿ ಉರುಸಾಗುತ್ತದೆ.

**ಹಿರೇಹುಲ್ಲಾಳ :** ಹಾನಗಲ್ ತಾಲೂಕಿನ ಹಿರೇಹುಲ್ಲಾಳವು (ಜನಸಂಖ್ಯೆ : 1,274) ಹಾನಗಲ್‌ನಿಂದ ಆಗ್ನೇಯಕ್ಕೆ 30 ಕಿ.ಮೀ. ದೂರದಲ್ಲಿದೆ. ಊರಿಗೆ ಹಾವೇರಿಯಿಂದ ಹೋಗಲು ಒಳ್ಳೆಯ ರಸ್ತೆಮಾರ್ಗವಿದೆ. ಹಿಂದೆ ಇದು ಬಾಸವೂರು-140 ಕ್ಕೆ ಸೇರಿದ್ದು, ಪ್ರಾಚೀನ ಶಾಸನಗಳಲ್ಲಿ 'ಪುಲ್ಲವಲ' ಎಂದೇ ಉಲ್ಲೇಖಿತಗೊಂಡಿದೆ. ಈ ಊರಲ್ಲಿ ಗೋಸಾಸ ಕಲ್ಲುಗಳನ್ನು ಇತ್ತೀಚೆಗೆ ಪತ್ತೆ ಹಚ್ಚಲಾಗಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ರಾಷ್ಟ್ರಕೂಟ ಇಂದ್ರನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನ ಬನವಾಸಿ-12000 ದ ನಾಡಗೌಡ ಚೋಳಗಾವುಂಡನ ಮಗ ನಾಗಯ್ಯನು ಹೋರಾಡುತ್ತ ಮಡಿದ ವಿಷಯವನ್ನು ತಿಳಿಸಿದರೆ, ಕಲ್ಲೇಶ್ವರ ಗುಡಿ ಹಿಂದೆ ಇತ್ತೀಚೆಗೆ ಪತ್ತೆಯಾಗಿರುವ ರಾಷ್ಟ್ರಕೂಟರ ಕಾಲದ ವೀರಗಲ್ಲು ಶಾಸನದಿಂದ 'ಪುಲವಲ' ಹಾಗೂ 'ಪೆರೂರು' (ಹೆರೂರು) ಗ್ರಾಮಗಳ ನಡುವಿನ ಕದನದಲ್ಲಿ ಯೋಧನೊಬ್ಬನು ಸತ್ತ ವಿಷಯವನ್ನು ತಿಳಿಸುತ್ತದೆ. ಹನುಮಂತನ ಗುಡಿ ಮುಂದಿರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಶಾಸನ ಅನಂತಪಾಲನು ಬೆಳ್ವೊಲ-ಪುರಿಗೆರೆ, ಬನವಾಸಿ, ಹಾಗೂ ಹಲಸಿಗೆ ನಾಡುಗಳನ್ನು ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ. ಸುಮಾರು ಕ್ರಿ.ಶ. 14 ನೇ ಶತಮಾನದ ವೀರಗಲ್ಲು ಶಾಸನ ರೂವಾರಿ ಚಂದ್ರೋಜನ ಹೆಸರನ್ನು ಉಲ್ಲೇಖಿಸುತ್ತದೆ.

ಚಾರಿತ್ರಿಕ ಮಹತ್ವದ ಈ ಊರಲ್ಲಿ ಶಿಥಿಲಾವಸ್ಥೆಯಲ್ಲಿರುವ ಎರಡು ಪುರಾತನ ಗುಡಿಗಳಿವೆ. ಊರ ಹೊರಗೆ ಇರುವ ಕಲ್ಲೇಶ್ವರ ಗುಡಿಯ ಗರ್ಭಗೃಹ ಹಾಗೂ ಅಂತರಾಳವಷ್ಟೇ ಉಳಿದಿದ್ದು, ನವರಂಗ ಭಾಗ ಪೂರ್ಣ ಇಲ್ಲವಾಗಿದೆ. ಈ ಗುಡಿಯ ಗರ್ಭಗೃಹವು ಇಟ್ಟಿಗೆಯ ರಚನೆಯಾಗಿದ್ದು, ಒಳಗೆ ಶಿವಲಿಂಗವಿದೆ. ಇದರ ದ್ವಾರವು ಗಜಲಕ್ಷ್ಮಿಯನ್ನು ಲಲಾಟದಲ್ಲಿ ಹೊಂದಿರುವ ಚತುರ್ಶಾಖಾಲಂಕೃತ ಬಾಗಿಲವಾಡದಿಂದ ಅಲಂಕೃತಗೊಂಡಿದ್ದು, ದ್ವಾರಬಂಧನದ ಇಬ್ಬದಿಯಲ್ಲಿ ಪೂರ್ಣ ಕುಂಭಗಳಿವೆ. ಗುಡಿಯ ಮುಂಬದಿಯಲ್ಲಿ ಕಿರಣಸ್ತಂಭವಿದ್ದು, ಸಪ್ತಮಾತೃಕಾ, ವಿಷ್ಣು ಹಾಗೂ ಮಹಿಷಮರ್ದಿನಿಯ ಭಗ್ನ ಶಿಲ್ಪಗಳಿವೆ. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ಗುಡಿ ಸುಮಾರು ಕ್ರಿ.ಶ. 950 ರಲ್ಲಿ ರಚನೆಯಾಗಿರಬಹುದೆಂದು ಊಹಿಸಬಹುದಾಗಿದೆ. ಈ ಗುಡಿಯ ಮುಂದೆ ರಾಷ್ಟ್ರಕೂಟರ ಕಾಲದ ವೀರಗಲ್ಲಿದ್ದು, ಬಹಳ ಜೀರ್ಣಾವಸ್ಥೆಯಲ್ಲಿದೆ. ಇಲ್ಲಿರುವ ಮತ್ತೊಂದು ಪ್ರಾಚೀನ ದೇವಾಲಯ ಈಶ್ವರ ಗುಡಿಯಾಗಿದ್ದು, ಇದಕ್ಕೂ ಗರ್ಭಗೃಹ ಅಂತರಾಳಗಳಷ್ಟೆ ಉಳಿದಿದ್ದು ಇವುಗಳ ಬಾಗಿಲವಾಡಗಳೂ ಸುಂದರವಾಗಿದ್ದು, ಅಂತರಾಳದ ಬಾಗಿಲವಾಡವನ್ನು ಸುಂದರವಾದ ತ್ರಿಮೂರ್ತಿ ಕೆತ್ತನೆಯಿರುವ ಆಕರ್ಷಕ ಮಕರತೋರಣ ಅಲಂಕರಿಸಿದೆ. ಈ ಗುಡಿ ಪರಿಸರದಲ್ಲಿ ಭಗ್ನ ಶಿಲ್ಪಾವಶೇಷಗಳಿವೆ. ಹನುಮಂತನ ಗುಡಿ ಬಳಿ ಕೂಡ ವೀರಗಲ್ಲು ಹಾಗೂ ಕಿರಣಸ್ತಂಭಗಳಿವೆ. ಇವುಗಳ ಜೊತೆಗೆ ಊರಲ್ಲಿ ಉಡಚವ್ವ, ದ್ಯಾಮವ್ವ ವೀರಭದ್ರ, ಬಸವಣ್ಣ ಹಾಗೂ ಹನುಮಂತನ ಗುಡಿಗಳಿವೆ. ಮಸೀದಿ ಇದೆ.

**ಹುಬ್ಬಳ್ಳಿ :** (ತಾಲೂಕು ಕೇಂದ್ರ, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ) ಶಾಸನೋಕ್ತ ಎಲೆಯ ಪೂರ್ವದ ಹಳ್ಳಿ, ಪಿರಿದೆಲೆಯ ಪೂರ್ವಳ್ಳಿ, ಪೂಬ್ಬಳ್ಳಿ, ಹುಬ್ಬಳ್ಳಿ ಸೀಮೆ (ಧಾರವಾಡದಿಂದ 19 ಕಿ.ಮೀ.)ಎಂದು ವಿವಿಧವಾಗಿ ಕರೆಯಲಾಗಿದ್ದು ಪ್ರಸಿದ್ಧ ವ್ಯಾಪಾರ ಹಾಗೂ ವಾಣಿಜ್ಯ ಕೇಂದ್ರವಾಗಿರುವುದೇ ಅಲ್ಲದೇ ಪ್ರಮುಖ ಕೈಗಾರಿಕಾ ನಗರವಾಗಿದೆ. ಪ್ರಾಚೀನ ಕಾಲದಲ್ಲಿ ಹುಬ್ಬಳ್ಳಿಯು 200 ಮಹಾಜನಗಳನ್ನೊಳಗೊಂಡ ಅಗ್ರಹಾರವಾಗಿತ್ತು. ಎಲೆಯ ಅಂದರೆ ವಿಳೇದೆಲೆಯ ಹಸಿರು ತೋಟಗಳು ಸಮೃದ್ಧವಾಗಿದ್ದ ಕಾರಣ ಎಲೆಯ ಪೂರ್ವದ ಹಳ್ಳಿ ಎಂಬ ಅನ್ವರ್ಥನಾಮ ಊರಿಗೆ ಬಂದಿರುವುದು ಶಾಸನಾಧಾರಗಳಿಂದ ವ್ಯಕ್ತವಾಗುತ್ತದೆ. ಕ್ರಿ.ಶ. 12 ನೇ

ಶತಮಾನದ ಶಾಸನದ ವಿವರದ ಪ್ರಕಾರ ಈ ಎಲೆಯ ಪೂರ್ವದ ಹಳ್ಳಿಯು ಒಂದು ಬಂಗಾರದ ಕಿರೀಟದಂತಿದ್ದು ಬಯಲುಗಳು, ನಾಲೆಗಳು ಹಾಗೂ ನೀರಾವರಿ ಮಾರ್ಗಗಳಿಂದ ತುಂಬಿದ್ದ ದೃಶ್ಯವನ್ನು ವರ್ಣಿಸುತ್ತದೆ. ಕ್ರಿ.ಶ. 19ನೇ ಶತಮಾನದವರೆಗೂ ಹುಬ್ಬಳ್ಳಿಯ ಸುತ್ತಮುತ್ತ ಮೈಲಿಗಳ ಉದ್ದದ ಮಾವಿನ ತೋಪುಗಳಿದ್ದುದರ ಬಗೆಗೆ ಉಲ್ಲೇಖವಿದೆ. ಹುಬ್ಬಳ್ಳಿಯು ಕ್ರಿ.ಶ. 10 ರಿಂದ 13 ನೇ ಶತಮಾನದಲ್ಲಿ ಬೆಳವಲ-300 ಮತ್ತು ಹಲಸಿಗೆ-12,000 ಎಂಬ ಎರಡು ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿತ್ತು. ರಾಷ್ಟ್ರಕೂಟ ಅಮೋಘವರ್ಷನ ಶಾಸನಗಳು ಹುಬ್ಬಳ್ಳಿಯಲ್ಲಿ ದೊರೆತಿವೆ. ಕ್ರಿ.ಶ. 11 ನೇ ಶತಮಾನದ ಶಾಸನದಲ್ಲಿ ವಿಕ್ರಮಾದಿತ್ಯನ ಚಕ್ರವರ್ತಿಯ ಹಿರಿಯ ರಾಣಿ ಮಲಯವತಿ ಮಹಾದೇವಿ ಹುಬ್ಬಳ್ಳಿ ಅಗ್ರಹಾರವನ್ನು ಆಳುತ್ತಿದ್ದಳೆಂದು ಹೇಳಲಾಗಿದೆ. ಹುಬ್ಬಳ್ಳಿಯಲ್ಲಿ ಸೇನಿಗೇಶ್ವರ (ಕುರುಬ ಸೇನಿಗರ ವರ್ಗದ) ದೇವಾಲಯವನ್ನು ಹಳೇ ಹುಬ್ಬಳ್ಳಿಯಲ್ಲಿರುವ ಭವಾನಿಶಂಕರ ದೇವಾಲಯದ ಪರಿಸರದಲ್ಲಿ ನವಿಲೂರ ಕುರುಬ ಸೇಣಿಗರು ನಿರ್ಮಿಸಿದ್ದ ಬಗೆಗೆ ಶಾಸನ ಉಲ್ಲೇಖವಿದೆ. ಇದೇ ಮೂಲದ ಹುಬ್ಬಳ್ಳಿ. ಹಳೇ ಹುಬ್ಬಳ್ಳಿಯು ಪುರಾತನ ಸ್ಥಳವಾಗಿದ್ದು ಕಲ್ಯಾಣದ ಚಾಳುಕ್ಯರ ತರುವಾಯ ವಿಜಯನಗರದ ಅರಸರ ಕಾಲದಲ್ಲಿ ಆಳ್ವಿಕೆಯು ಮುಂದುವರೆದಾಗ ಈ ಊರಿಗೆ 'ರಾಯರ ಹುಬ್ಬಳ್ಳಿ' ಎಂಬ ಹೆಸರು ರೂಢಿಗೆ ಬಂದಿತು. ವಿಜಯನಗರದ ಅರಸರು ವಿಸ್ತರಿಸಿದರೆಂದು ಹೇಳಲಾಗುವ ರಾಯರ ಹುಬ್ಬಳ್ಳಿಯಲ್ಲಿ ಕೋಟೆಯನ್ನು ನಿರ್ಮಿಸಿದ್ದರು. ಈಗಲೂ ಹಳೇ ಹುಬ್ಬಳ್ಳಿಯಲ್ಲಿ ದುರ್ಗದ ಬಯಲಿದೆ. ವಿಜಯನಗರ ಹಾಗೂ ಪೋರ್ಚುಗೀಸರ ಒಂದು ವ್ಯಾಪಾರ ಒಪ್ಪಂದದಲ್ಲಿ ಹುಬ್ಬಳ್ಳಿಯನ್ನು 'ಒಬೇಲಿ' ಎಂದು ಕರೆಯಲಾಗಿದ್ದು ಈ ಊರು ಪೆಟ್ಲುಪ್ಪು (ಪೊಟೇಶಿಯಂ ನೈಟ್ರೇಟ್) ಕಬ್ಬಿಣ, ಸಿಡಿಮದ್ದು ಪೂರೈಸುವ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಈ ಪ್ರದೇಶವು ಕ್ರಿ.ಶ. 1573 ರಲ್ಲಿ ಬಿಜಾಪುರದ ವಶವಾಗಿರಬೇಕು. ಹಳೇ ಹುಬ್ಬಳ್ಳಿಯಲ್ಲಿರುವ (ಕ್ರಿ.ಶ. 1600) ಶಾಸನವು ಹಮೀದ್‌ಖಾನನೆಂಬ ಬಿಜಾಪುರದ ಅಧಿಕಾರಿಯೊಬ್ಬನನ್ನು ಉಲ್ಲೇಖಿಸುತ್ತದೆ. ಈತನ ಜಂಗಮ ವರ್ಗದವರಿಗೆ ಹಲವು ಸುಂಕಗಳ ರಿಯಾಯತಿ ನೀಡಿದ್ದನು. ಬಿಜಾಪುರದ ಆಡಳಿತವಿದ್ದಾಗಲೇ ಬ್ರಿಟಿಷರು ಹಳೇ ಹುಬ್ಬಳ್ಳಿಯಲ್ಲಿ ಮಳಿಗೆಯೊಂದನ್ನು ಪ್ರಾರಂಭಿಸಿದರು (1638). ಕೈಮಗ್ಗ ಕೈಗಾರಿಕೆಯಲ್ಲಿ ಈ ನಗರವು ಅಕಾಲದಿಂದಲೂ ಜನಪ್ರಿಯವಾಗಿತ್ತು. ಕ್ರಿ.ಶ. 1673 ರಲ್ಲಿ ಈ ವೈಭವಯುತ ನಗರವನ್ನು ಶಿವಾಜಿಯ ಸೇನಾಪತಿ ಅಣ್ಣಾಜಿ ದತ್ತೋ ಕೊಳ್ಳೆಹೊಡೆದು ವಿಪುಲವಾದ ಸಂಪತ್ತನ್ನು ದೋಚಿದನು. ಇದಕ್ಕೆ ಮೊದಲು ಕ್ರಿ.ಶ. 1667 ರಲ್ಲಿ ಇದು ಮೊಗಲರ ವಶವಾಗಿ ಔರಂಗಜೇಬನ ದಂಡಾಧಿಕಾರಿ ಶಹಾಮಹಮ್ಮದ ಖಾನನ ಜಹಗೀರಾಗಿತ್ತು. ಅನಂತರ ಬಿಜಾಪುರದ ಸುಲ್ತಾನನು ಹುಬ್ಬಳ್ಳಿಯನ್ನು ಬಂಕಾಪುರದ ರಾಜ್ಯಪಾಲನಿಗೆ ವಹಿಸಿಕೊಟ್ಟು ಮರಾಠರು ಈ ಪ್ರದೇಶಕ್ಕೆ ಅಧಿಕಾರ ವಿಸ್ತರಿಸುವುದನ್ನು ಯಶಸ್ವಿಯಾಗಿ ತಡೆಹಿಡಿದನು. ಕ್ರಿ.ಶ. 1727 ರಲ್ಲಿ ಹುಬ್ಬಳ್ಳಿ ಸವಣೂರಿನ ನವಾಬನ ಜಹಗೀರಾಗಿತ್ತು. ಇದೇ ವರ್ಷದಲ್ಲಿ ಹಳೆಯ ಹುಬ್ಬಳ್ಳಿಯ ಪ್ರಸಿದ್ಧ ವೀರಶೈವ ವ್ಯಾಪಾರಿ ಕಲ್ಯಾಣ ಶೆಟ್ಟರ ಸೋದರಳಿಯ ಬಸಪ್ಪಶೆಟ್ಟಿಯು ಮೊದಲು ಬೊಮ್ಮಾಪುರದಲ್ಲಿ ನೆಲೆಸಿ ಸವಣೂರಿನ ನವಾಬನಾಗಿದ್ದ ಮಜೀದ್‌ಖಾನನ ಸಹಾಯದಿಂದ ಹೊಸ ಹುಬ್ಬಳ್ಳಿ ಮತ್ತು ಅದರ ಕೋಟೆಯನ್ನು (ಇಂದಿನ ಹೊಸ ಹುಬ್ಬಳ್ಳಿ ದುರ್ಗದ ಬಯಲಿನ ಪ್ರದೇಶದ ಬಳಿ) ಕಟ್ಟಿಸಿದನೆಂದು ಪ್ರತೀತಿಯಿದೆ. ನವಾಬನ ಹೆಸರಿನ ಭಾಗ ಮಜೀದಪುರ ಎಂದಿದೆ. ಸುಮಾರು ಎಂಭತ್ತು ಎಕರೆಯಷ್ಟು ಸುತ್ತಳತೆಯ ಕೋಟೆಯ ಗೋಡೆಯನ್ನು ಕ್ರಿ.ಶ. 1876-78 ರಲ್ಲಿ ಕ್ಷಾಮ ಪರಿಹಾರ ಕಾರ್ಯದ ಸಲುವಾಗಿ ಬ್ರಿಟಿಷರ ಕಾಲದಲ್ಲಿ ಕೆಡವಲಾಯಿತೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಒಂದು ಸಾಂಪ್ರದಾಯಿಕ ನಂಬುಗೆಯ ಪ್ರಕಾರ ಇದೇ ವರ್ಷದಲ್ಲಿ ಮೂರು ಸಾವಿರ ಮಠವು ಬಸಪ್ಪ ಸೆಟ್ಟಿ ದಾನವಾಗಿ ಕೊಟ್ಟ ಭೂ ನಿವೇಶನದಲ್ಲಿ ಹೊಸದಾಗಿ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ಚಿತ್ರದುರ್ಗದ ಮಠದಿಂದ ಪ್ರತ್ಯೇಕಗೊಂಡ ಗುರುಸಿದ್ದಪ್ಪ ಸ್ವಾಮಿಗಳು ಈ ಮಠದ ಕಟ್ಟಡವನ್ನು ಕ್ರಿ.ಶ. 1820 ರಲ್ಲಿ ನಿರ್ಮಿಸಿ ಕಾಲಾನುಕಾಲಕ್ಕೆ ವಿಸ್ತರಿಸಲಾಯಿತೆಂದು ಹಳೇಗ್ಯಾಸೆಟಿಯರ್ ಹೇಳುತ್ತದೆ. (ಅಧ್ಯಾಯ ಮೂರು ನೋಡಿ) ಈ ಮಠದ ಬಳಿಯಿರುವ ಕೆರೆಗೆ ಗುರುಸಿದ್ದಪ್ಪನ ಹೊಂಡವೆಂದೇ ಕರೆಯಲಾಗುತ್ತದೆ. ನಂತರ ಪೇಶ್ವೆಯ ಪರವಾಗಿ ಸಾಂಗ್ಲಿಯ ಪಟವರ್ಧನನು ಸವಣೂರು ನವಾಬನನ್ನು ಸೋಲಿಸಿ ಹುಬ್ಬಳ್ಳಿಯನ್ನು ತನ್ನ ಹತೋಟಿಗೆ ತೆಗೆದುಕೊಂಡರು. ಈ ಸಮಯದಲ್ಲಿ ಹುಬ್ಬಳ್ಳಿಯ ಕೋಟೆಯ ಸಮೀಪವಿದ್ದ ಗುಳ್ಳಪ್ಪನಕೆರೆಯ ಸಮೀಪವೇ ಬ್ರಹ್ಮಪುರಿ (ಅಗ್ರಹಾರ)ವನ್ನು ಮರಾಠರು ಪ್ರಾರಂಭಿಸಿದರು. ಮರಾಠರ ಅಧೀನದಲ್ಲಿದ್ದಾಗಲೂ ಮೊಗಲರು ಹಳೆಯ ಹುಬ್ಬಳ್ಳಿಯ ಮೇಲೆ ಅಧಿಕಾರವನ್ನು ಇನ್ನೂ ಹೊಂದಿದ್ದರು. ಹೈದರ್‌ಅಲಿಯು ಸವಣೂರಿನ ನವಾಬನನ್ನು ವೈವಾಹಿಕ ಸಂಬಂಧ ಬೆಳೆಸುವ ಮೂಲಕ ದುರ್ಬಲನನ್ನಾಗಿ ಮಾಡಿದ್ದನು. ಅನಂತರ ಟಿಪ್ಪು ಸುಲ್ತಾನನು ಹುಬ್ಬಳ್ಳಿಯನ್ನು ವಶಪಡಿಸಿಕೊಂಡು ಮರಾಠರನ್ನು ಓಡಿಸಿದನು. ಸ್ವಲ್ಪ ಸಮಯದ ನಂತರ ಮರಾಠರು ಸವಣೂರು ನವಾಬನು ಶರಣಾಗತನಾಗುವಂತೆ ಮಾಡಿ ಟಿಪ್ಪು ಸುಲ್ತಾನನನ್ನು ತುಂಗಭದ್ರೆಯಿಂದಾಚೆಗೆ ಹಿಮ್ಮೆಟ್ಟಿಸಿದರು. ಆಗ ಹಳೇ ಹುಬ್ಬಳ್ಳಿಯನ್ನು ಫಡಕೆ (ಪೇಶ್ವೆಯರ ಸಂಬಂಧಿಗಳು) ಕುಟುಂಬಕ್ಕೂ ಮತ್ತು ಹೊಸ ಹುಬ್ಬಳ್ಳಿಯನ್ನು ಸಾಂಗ್ಲಿಯ ಪಟವರ್ಧನರಿಗೂ ವಹಿಸಿಕೊಟ್ಟರು. ಮುಂದೆ 1817-18 ರಲ್ಲಿ ನಡೆದ ಕೊನೆಯ ಮರಾಠಾ ಯುದ್ಧದಲ್ಲಿ ಜನರಲ್

ಮನ್ರೋ ಹಳೇ ಹುಬ್ಬಳ್ಳಿಯನ್ನು ಗೆದ್ದನು. ಸಾಂಗ್ಲಿಯ ಪಟವರ್ಧನನು ಆಗಲೇ ಬ್ರಿಟಿಷರ ಅಧಿಪತ್ಯ ಒಪ್ಪಿಕೊಂಡಿದ್ದು ಬ್ರಿಟಿಷರಿಗೆ ಕೊಡಬೇಕಾದ ಪೊಗದಿಗೆ ಬದಲಾಗಿ ಹೊಸ ಹುಬ್ಬಳ್ಳಿಯನ್ನು ಇತರ 47 ಗ್ರಾಮಗಳ ಜೊತೆ ಬ್ರಿಟಿಷರಿಗೆ ಬಿಟ್ಟುಕೊಟ್ಟನು (1820). ಧಾರವಾಡವನ್ನೂ ಈ ವೇಳೆಗಾಗಲೇ ತಮ್ಮ ವಶಕ್ಕೆ ತೆಗೆದುಕೊಂಡಿದ್ದ ಬ್ರಿಟಿಷರು ಹುಬ್ಬಳ್ಳಿಯನ್ನು ದಕ್ಷಿಣ ಮರಾಠಾ ದೇಶದ ಭಾಗವನ್ನಾಗಿ ಮಾಡಿಕೊಂಡರು. ಆ ಸಂದರ್ಭದಲ್ಲಿ 1826 ರಲ್ಲಿ ಪ್ರಥಮ ಸರಕಾರಿ ಮರಾಠಿ ಶಾಲೆಯನ್ನು ಆರಂಭಿಸಿದರು. ಈ ಭಾಗವು ಕನ್ನಡ ಭಾಷಾ ಪ್ರದೇಶವೆಂದು ಅರಿವಾದ ತಕ್ಷಣ ಬ್ರಿಟಿಷರು 1835 ರಲ್ಲಿ ಪ್ರಥಮ ಕನ್ನಡ ಶಾಲೆಯನ್ನೂ ಆರಂಭಿಸಿದರು. 1883-84 ರ ವೇಳೆಗೆ ಹುಬ್ಬಳ್ಳಿಯಲ್ಲಿ 26 ಶಾಲೆಗಳಿದ್ದವು ಮತ್ತು 1904 ರಲ್ಲಿ ಲ್ಯಾಮಿಂಗ್ಟನ್ ಪ್ರೌಢಶಾಲೆಯನ್ನು ಆರಂಭಿಸಿದರು. ಈಗ ಹುಬ್ಬಳ್ಳಿಯು ರಾಜ್ಯದಲ್ಲೇ ಗಣ್ಯ ವಿದ್ಯಾಕೇಂದ್ರವೆನಿಸಿದೆ. ವಿಜ್ಞಾನ, ವಾಣಿಜ್ಯ, ಕಾನೂನು, ವೈದ್ಯಕೀಯ ಸರಕಾರಿ ಕಾಲೇಜು (1957), ತಾಂತ್ರಿಕ ಮಹಾವಿದ್ಯಾಲಯ (1948), ಆಯುರ್ವೇದ ಕಾಲೇಜು ಮುಂತಾದವುಗಳಿವೆ. ಹುಬ್ಬಳ್ಳಿ ನಗರಕ್ಕೆ ಅಲ್ಲಿ ನಗರ ಸಭೆ ಆದಾಗ ಅಳವಡಿಸಿದ ಗ್ರಾಮಗಳೆಂದರೆ ತಿಮ್ಮಸಾಗರ, ಅರಳಿಕಟ್ಟಿ, ನಾಗಸೆಟ್ಟಿಕೊಪ್ಪ, ಬೆಂಗೇರಿ, ಕೇಶವಪುರ, ಗಣೇಶಪೇಟೆ, ಮಜೀದ್‌ಪುರ, ಯಲ್ಲಾಪುರ, ಶಹರವೀರಾಪುರ, ಬೊಮ್ಮಾಪುರ, ಬಿಡನಾಳ್ ಮತ್ತು ಉಣಕಲ್ ಎಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ.

ಹುಬ್ಬಳ್ಳಿಯಲ್ಲಿರುವ ಪ್ರಾಚೀನ ದೇವಾಲಯಗಳಲ್ಲಿ ಭವಾನಿಶಂಕರ (ಹಳೇಹುಬ್ಬಳ್ಳಿ) ದೇವಾಲಯವು ಸಂಕೀರ್ಣ ಕಟ್ಟಡವಾಗಿದ್ದು ಪ್ರಮುಖವಾಗಿದೆ. ಈ ದೇವಾಲಯವು ಬಹಳಷ್ಟು ಬಾರಿ ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹದಲ್ಲಿ ಚಾಳುಕ್ಯ ಲಕ್ಷಣವುಳ್ಳ ಪೀಠದ ಮೇಲ್ಭಾಗದಲ್ಲಿ ಪ್ರಾಚೀನ ಶೈಲಿಯ ಶಿವಲಿಂಗವಿದೆ. ದೇವಾಲಯದ ಪಶ್ಚಿಮಕ್ಕೆ ಪ್ರತ್ಯೇಕವಾದ ಚಾಳುಕ್ಯ ಶೈಲಿಯ ದೇವಾಲಯವಿದ್ದು ಗರ್ಭಗೃಹ ಮತ್ತು ಅಂತರಾಳವಿದ್ದು ಗರ್ಭಗೃಹದಲ್ಲಿ ಪ್ರಾಚೀನ ಪಾಣಿಪೀಠದ ಮೇಲೆ ಸುಮಾರು ಒಂದು ಮೀಟರ್ ಎತ್ತರವಿರುವ ಕಪ್ಪು ಶಿಲೆಯ ಚಾಳುಕ್ಯ ಶೈಲಿಯ ನಾರಾಯಣ ವಿಗ್ರಹವಿದ್ದು ಹಿಂಭಾಗದಲ್ಲಿ ಪ್ರಭಾವಳಿಯಲ್ಲಿ ಮಕರತೋರಣವಿದೆ. ಸುತ್ತಲೂ ದಶಾವತಾರ ಶಿಲ್ಪಗಳಿವೆ. ಈ ದೇವಾಲಯದ ಪ್ರವೇಶದ್ವಾರವು ಕುಸಿದಿದ್ದು ವಿಜಯನಗರ ಶೈಲಿಯ ನಗಾರಿಖಾನೆಯನ್ನು ಹೋಲುತ್ತದೆ. ಈ ದೇವಾಲಯದ ಮುಂಭಾಗದಲ್ಲಿ ಆಯಕಟ್ಟಿನ ಕಲ್ಲುಗಳಿಂದ ನಿರ್ಮಿಸಲಾದ ಪುಷ್ಕರಣಿಯಿದೆ. ಹುಬ್ಬಳ್ಳಿಯಲ್ಲಿರುವ ಇತರ ದೇವಾಲಯಗಳೆಂದರೇ ದತ್ತಾತ್ರೇಯ (ರಾದಾಕೃಷ್ಣಗಲ್ಲಿ ಮತ್ತು ಬಡಗೇರ ಓಣಿ), ಅಂಬಾಭವಾನಿ (ದಾಜೀಬಾನ್‌ಪೇಟೆ) ಬನಶಂಕರಿ (ಹಳೇ ಹುಬ್ಬಳ್ಳಿ), ತುಳಜಾಭವಾನಿ (ಜೀಬಾ ದಾನ್‌ಪೇಟೆ) ದುರ್ಗವ್ವ, ಬೊಮ್ಮಾಪುರ ಮತ್ತು ಯಲ್ಲಾಪುರ), ಕಾಳಮ್ಮ (ಬಾಗರ ಬೀದಿ) ತುಳಜಾಭವಾನಿ (ಕೆ.ಎಸ್.ಆರ್.ಟಿ.ಸಿ ವಿಭಾಗೀಯ ಕಛೇರಿ), ಗಜಾನನ (ದಾಜೀಬಾನ್‌ಪೇಟೆ), ಹರಿಮಂದಿರ (ಕೋಟೆ), ಮುರಳೀಧರ (ತಾಲೂಕು ಕಛೇರಿ) ರಾಮ (ಗೌಳಿಗಲ್ಲಿ ದುರ್ಗದ ಬಯಲು) ವೆಂಕಟರಮಣ (ಹೊಸ ಹುಬ್ಬಳ್ಳಿ), ಈಶ್ವರ ಮಂದಿರ (ಕೋಟೆ) ಈಶ್ವರ ಮಂದಿರ (ಮೇದರ್ ಓಣಿ, ಹಳೇ ಹುಬ್ಬಳ್ಳಿ) ಪಾರ್ವತೇಶ್ವರ (ಹಳೇಹುಬ್ಬಳ್ಳಿ ಮತ್ತು ಭೂಸ್ ಓಣಿ) ನಾಗೇಶ್ವರ (ಕನೆಹಗಾರ್ ಗಲ್ಲಿ), ಈಶ್ವರ ಗಜಾನನ ಮತ್ತು ನವಗ್ರಹ (ರೈಲು ನಿಲ್ದಾಣದ ಹತ್ತಿರ) 12 ಮಾರುತಿ ದೇವಾಲಯಗಳು (ಅಶೋಕನಗರ ನೂಲ್ವಿ, ಅರಳಿಕಟ್ಟೆ ಓಣಿ, ದುರ್ಗದಬೈಲು, ಕೇಶವಾಪುರ, ಮರಾಠಾಗಲ್ಲಿ, ಹಳೇಹುಬ್ಬಳ್ಳಿ, ನಾಗಶೆಟ್ಟಿಕೊಪ್ಪ, ವಿದ್ಯಾನಗರ ವಿಜಯನಗರ ಮತ್ತು ಯಲ್ಲಾಪುರ), ಬಸವೇಶ್ವರ (ಘಂಟಿಕೇರಿ) ಬಸವೇಶ್ವರ (ಇಟಗಿಗಲ್ಲಿ) ವೀರಭದ್ರ (ಪಗಡಿ ಓಣಿ) ಮುಂತಾದವುಗಳಿವೆ. ಇಲ್ಲಿರುವ ಬಸದಿಗಳ ಪೈಕಿ ಹಳೇಹುಬ್ಬಳ್ಳಿಯಲ್ಲಿರುವ ಅನಂತನಾಥ ಮತ್ತು ಪಾರ್ಶ್ವನಾಥ ಬಸದಿಗಳು ಸುಮಾರು ಕ್ರಿ.ಶ. 12-13 ನೇ ಶತಮಾನದಲ್ಲಿ ನಿರ್ಮಿಸಿರುವ ಸಾಧ್ಯತೆಯಿದೆ. ಅನಂತನಾಥ ಬಸದಿಯ ಬ್ರಹ್ಮದೇವನ ಪೀಠದ ಶಾಸನವು ಸುಮಾರು ಕ್ರಿ.ಶ. 12 ನೇ ಶತಮಾನಕ್ಕೆ ಸೇರಿದ್ದು ಅಸ್ಪಷ್ಟವಾಗಿದ್ದು ಬ್ರಹ್ಮೇಶ್ವರ ಪ್ರತಿಮೆಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸುತ್ತದೆ. ಅನಂತನಾಥ ವಿಗ್ರಹದ ಪೀಠದಲ್ಲಿರುವ ಶಾಸನವು ಸುಮಾರು ಕ್ರಿ.ಶ. 13ನೇ ಶತಮಾನಕ್ಕೆ ಸೇರಿದ್ದು ಯಾಪನೀಯ ಸಂಘ, ಕಾಡೂರ ಗಣದ ಬಗೆಗೆ ಉಲ್ಲೇಖವಿದೆ. ಇದೇ ಬಸದಿಯಲ್ಲಿರುವ ಜಾಗಟೆಯ ಮೇಲಿರುವ ಶಾಸನವು ಕ್ರಿ.ಶ. 1862 ರಲ್ಲಿ ಹಳೆಯ ಹುಬ್ಬಳ್ಳಿಯ ಅನಂತನಾಥ ಬಸದಿಯ 1000 ವರ್ಷಗಳ ಹಿಂದಿನ ಮುರಿದ ಜಾಗಟೆಯನ್ನು ಹೊಸದಾಗಿ ಮಾಡಿಸಿದ ಉಲ್ಲೇಖವಿದೆ. ನಗರದಲ್ಲಿರುವ ಇತರ ಜೈನ ಬಸದಿಗಳೆಂದರೆ ಕಂಚುಗಾರ ಗಲ್ಲಿಯಲ್ಲಿರುವ ಬಸದಿ ಮತ್ತು ಬೋಗಾರಗಲ್ಲಿಯಲ್ಲಿರುವ ಬಸದಿ.

ಹುಬ್ಬಳ್ಳಿಯಲ್ಲಿರುವ ಮಠಗಳಲ್ಲಿ ಸಿದ್ಧಾರೂಢಮಠ ಹಾಗೂ ವೀರಶೈವ ಮಠಗಳಲ್ಲಿ ಮೂರು ಸಾವಿರ ಮಠ (ವಿಕ್ಟೋರಿಯಾ ರಸ್ತೆ), ರುದ್ರಾಕ್ಷಿಮಠ, ಹೊಸಮಠ, ಹನ್ನೆರಡು ಮಠ, ಜಡಿಮಠ (ಗೂಡ್ಸ್‌ಷೆಡ್ ರಸ್ತೆ) ಹೊತ್ತಿಮಠ (ಜೋಳದ ಓಣಿ) ಹಾಗೂ ಜೋಡೆತ್ತಿನ ಮಠ (ವೀರಾಪುರ ರಸ್ತೆ) ಪ್ರಮುಖವಾದುವು. ಹಳೇ ಹುಬ್ಬಳ್ಳಿಯಲ್ಲಿರುವ ಸಿದ್ಧಾರೂಢಮಠವು ಅದ್ವೈತದ ಸಂಪ್ರದಾಯದ್ದಾಗಿದ್ದು ಸಿದ್ಧಾರೂಢಸ್ವಾಮಿಗಳು ಬೀದರ್ ಜಿಲ್ಲೆಯ ಚಳಕಾಪುರದಿಂದ ಇಲ್ಲಿಗೆ ಬಂದು ಕ್ರಿ.ಶ. 1877 ರಲ್ಲಿ ಮುಳ್ಳಿನ

ಗಿಡಗಳಿಂದ ತುಂಬಿದ್ದ ವಿಶಾಲವಾದ ಪ್ರದೇಶದಲ್ಲಿ ಒಂದು ಸುಂದರ ತಾಣವನ್ನಾಗಿ ಮಾಡುವುದರ ಮೂಲಕ ಈ ಮಠವನ್ನು ಸ್ಥಾಪಿಸಿದರು. ಮುಂಬೈಯಿಂದ ಬಂದು ಇಲ್ಲಿ ನೆಲೆಸಿದ್ದ ಪಾರ್ಸಿಗಳು ಹಾಗೂ ಹಳೇ ಹುಬ್ಬಳ್ಳಿಯಲ್ಲಿದ್ದ ಬಡವರಾದಿಯಾಗಿ ಮೋಚಿಗಳವರೆಗೂ ಈ ಮಠದ ಭಕ್ತಾದಿಗಳಾದುದು ಈ ಮಠದ ವಿಶಾಲಮನೋಧರ್ಮವನ್ನು ತೋರಿಸುತ್ತದೆ. ಇಲ್ಲಿ ನಿತ್ಯ ಸತತ ಭಜನೆ, ಸಂಕೀರ್ತನೆ ನಡೆಯುತ್ತದೆ. ಸಿದ್ಧಾರೂಢ ಸ್ವಾಮಿಗಳು 1929ರಲ್ಲಿ ವಿಧಿವಶರಾದರು. ಪ್ರತೀ ವರ್ಷವು ಶಿವರಾತ್ರಿ, ಶ್ರಾವಣಮಾಸ ಹಾಗೂ ಶ್ರೀರಾಮನವಮಿಗಳಲ್ಲಿ ಅನುಕ್ರಮವಾಗಿ ರಥೋತ್ಸವ, ತೆಪ್ಪೋತ್ಸವ ಮತ್ತು ಪಲ್ಲಕ್ಕಿ ಉತ್ಸವಗಳು ನೆರವೇರುತ್ತವೆ. ರಥೋತ್ಸವದ ಸಂದರ್ಭದಲ್ಲಿ ಲಕ್ಷಾಂತರ ಜನ ಭಕ್ತಾದಿಗಳು ಸೇರುತ್ತಾರೆ.

ಇಲ್ಲಿಯ ವಿಕ್ಟೋರಿಯಾ ರಸ್ತೆಯಲ್ಲಿರುವ ಮೂರು ಸಾವಿರ ಮಠವು ವಿಶಾಲವಾದ ಪ್ರದೇಶದಲ್ಲಿ ಪ್ರಮುಖ ಕಟ್ಟಡವನ್ನು ಹೊಂದಿದೆ. ಬಸವಣ್ಣನವರ ಸಮಕಾಲೀನರಾದ ಕಲ್ಯಾಣದಿಂದ ಬಂದ ಒಬ್ಬ ಶರಣರು ಈ ಮಠವನ್ನು ಮೂಲತಃ ಸ್ಥಾಪಿಸಿದರೆಂದು ಐತಿಹ್ಯವಿದೆ. (ಅಧ್ಯಾಯ ಮೂರು ನೋಡಿ) ಇತ್ತೀಚಿನ ದಾಖಲೆಗಳಂತೆ ಒಬ್ಬ ವಿರಕ್ತ ಸ್ವಾಮಿಗಳು ಚಿತ್ರದುರ್ಗದ ಮುರಘರಾಜೇಂದ್ರ ಮಠದಿಂದ ಕ್ರಿ.ಶ. 1727ಹೊಸ ಹುಬ್ಬಳ್ಳಿಗೆ ಬಂದು ನೆಲೆಸಿ ಮೂರು ಸಾವಿರ ಮಠದ ಪ್ರಾರಂಭಕ್ಕೆ ಕಾರಣರಾದರೆಂದು ತಿಳಿದುಬರುತ್ತದೆ. ಹೊಸಹುಬ್ಬಳ್ಳಿಯನ್ನು ಆಗತಾನೆ ಸ್ಥಾಪಿಸಿದ ವೀರಶೈವ ವರ್ತಕ ಬಸಪ್ಪಸೆಟ್ಟಿಯು ಮೂರು ಸಾವಿರ ಮಠದ ಸ್ವಾಮಿಗಳಿಗೆ ಆಶ್ರಯ ನೀಡಿದುದೇ ಅಲ್ಲದೇ ಈಗಿರುವ ಮಠದ ನಿವೇಶನವನ್ನು (ಭೂಸಪೇಟೆ ಜಾಗದಲ್ಲಿ) ದಾನವಾಗಿ ಕೊಟ್ಟನೆಂದು ಮಠದ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆಗ ಈ ಮಠಕ್ಕೆ ಹಿರೇಮಠವೆಂದೇ ಕರೆಯಲಾಗುತ್ತಿತ್ತು. ಈಗಿರುವ ಮಠದ ಕಟ್ಟಡವನ್ನು 1820 ರಲ್ಲಿ ಗುರುಸಿದ್ಧಪ್ಪ ಸ್ವಾಮಿಗಳು ಸಾರ್ವಜನಿಕ ದೇಣಿಗೆಗಳಿಂದ ನಿರ್ಮಿಸಿದರೆಂದು ಪ್ರತೀತಿಯಿದೆ. ಮಠದ ಆವರಣದಲ್ಲಿ ಈ ಪೀಠದ ಹಲವು ಸ್ವಾಮಿಗಳ ಗದ್ದುಗೆಗಳಿವೆ. ವೀರಶೈವ ಭಕ್ತಾದಿಗಳು ವರ್ಷವಿಡಿ ಈ ಮಠಕ್ಕೆ ಬರುತ್ತಾರೆ. ಶ್ರಾವಣಮಾಸದ ಮೂರನೇಯ ಮತ್ತು ನಾಲ್ಕನೇ ಸೋಮವಾರಗಳಂದು ಹಾಗೂ ಕಾರ್ತೀಕ ಮಾಸದಲ್ಲಿ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಅದೇ ಸಂದರ್ಭದಲ್ಲಿ ರಥೋತ್ಸವ ಮತ್ತು ಜಾತ್ರೆಯು ಜರುಗುತ್ತವೆ. ಮಂಗಳವಾರ ಪೇಟೆಯಲ್ಲಿರುವ ರುದ್ರಾಕ್ಷಿಮಠವನ್ನು ಸುಮಾರು 300 ವರ್ಷಗಳ ಹಿಂದೆ ನಿರ್ಮಿಸಲಾಯಿತೆಂದು ಪ್ರತೀತಿಯಿದೆ. ಹುಬ್ಬಳ್ಳಿಯ ರೈಲ್ವೆ ನಿಲ್ದಾಣದ ರಸ್ತೆಯಲ್ಲಿರುವ ಶಿಗ್ಗಾಂವಿ ಮಠವು ಸಾಧಾರಣವಾದ ಕಟ್ಟಡವನ್ನು ಹೊಂದಿದೆ. ಮಂಗಳವಾರ ಪೇಟೆಯಲ್ಲಿರುವ ಕಲ್ಯಾಣ ಮಠ ಮತ್ತು ಕಲುಬುರ್ಗಿ ಮಠ ಹಾಗೂ ಬೋಗಾರ ಪೇಟೆಯಲ್ಲಿರುವ ಹೊಸಮಠ ಈ ಊರಿನ ಇತರ ವೀರಶೈವ ಮಠಗಳಾಗಿವೆ.

ಈ ನಗರದಲ್ಲಿರುವ ವೈದಿಕ ಮಠಗಳೆಂದರೆ ಸತ್ಯಬೋಧರಾಯಸ್ವಾಮಿ ಮಠ (ಹಳೇ ಹುಬ್ಬಳ್ಳಿ), ರಾಘವೇಂದ್ರಸ್ವಾಮಿ ಮಠ (ತೊರವಿಗಲ್ಲಿ ಮತ್ತು ದೇಶಪಾಂಡೆನಗರ) ಹಾಗೂ ಕೃಷ್ಣ ಮಂದಿರ (ದೇಶಪಾಂಡೆನಗರ). ಅದ್ವೈತ ಸಂಪ್ರದಾಯದ ಶಂಕರಮಠವು ಈ ಊರಿನ ಬೆಳಗಾವಿ ಗಲ್ಲಿಯಲ್ಲಿದೆ. ಸವಣೂರಿನಲ್ಲಿ ಸತ್ಯಬೋಧ ಸ್ವಾಮಿಗಳ ಮೂಲಮಠವಿದ್ದು ಈ ಊರಿನಲ್ಲಿ ಮೃತ್ತಿಕಾ ಬೃಂದಾವನ ಹಾಗೂ ಶಾಖಾಮಠವಿದೆ. ದೇಶಪಾಂಡೆನಗರದಲ್ಲಿ ಶೀಖ್ಖರ ಗುರುದ್ವಾರವಿದೆ.

ಹುಬ್ಬಳ್ಳಿಯಲ್ಲಿರುವ ಪ್ರಮುಖ ಚರ್ಚ್‌ಗಳೆಂದರೆ ಕೇಶವಪುರದಲ್ಲಿರುವ ಸೆಂಟ್ ಜೋಸೆಫ್ಸ್ ಕ್ಯಾಥೊಲಿಕ್ ಚರ್ಚ್ (1888), ಹೊಸ ರೈಲ್ವೆ ಆಸ್ಪತ್ರೆ ಹತ್ತಿರವಿರುವ ಸೆಂಟ್ ಆಯಂಡ್ರೂಸ್ ಚರ್ಚ್ (1890), ದೇಶಪಾಂಡೆನಗರದಲ್ಲಿರುವ ಅಸ್ಸೆನ್ಷನ್ ಚರ್ಚ್ (1905), ಘಂಟಿಕಾರ್ ಕಾಲೋನಿಯಲ್ಲಿರುವ ಹೋಲಿನೇಮ್ ಚರ್ಚ್ (1928) ಹಾಗೂ ಗದಗ ರಸ್ತೆಯಲ್ಲಿರುವ ಸೆಂಟ್ ಜಾನ್ ಲೂಥರನ್ ಚರ್ಚ್ (1944). ಸರಕಾರಿ ನಿರೀಕ್ಷಣಾ ಬಂಗ್ಲೆ ಹತ್ತಿರವಿರುವ ಎಸ್.ಪಿ.ಜಿ. ಮಿಶನ್ ಚರ್ಚ್ ಹಾಗೂ ಇದೇ ಚರ್ಚಿನ ಎರಡು ಶಾಖೆಗಳು ಹುಬ್ಬಳ್ಳಿಯಲ್ಲಿವೆ. ಕೇಶವಾಪುರದಲ್ಲಿರುವ ಸೆಂಟ್ ಜೋಸೆಫ್ಸ್ ಚರ್ಚನ್ನು ಯೂರೋಪಿನ ಗಾಥಿಕ್ ಶೈಲಿಯಲ್ಲಿ ಎತ್ತರವಾದ ನಿವೇಶನದಲ್ಲಿ ಜಗತಿಯನ್ನು ಸೃಷ್ಟಿಸಿ ನಿರ್ಮಿಸಲಾಗಿದೆ. ಇಲ್ಲಿ ಸೆಂಟ್ ಜೋಸೆಫ್ಸ್ ಮತ್ತು ಲೇಡಿ ಲೌರ್ದ್ಸ್‌ಗಳ ಆಧುನಿಕ ಶೈಲಿಯ ಪ್ರತಿಮೆಗಳಿವೆ. ಬೆಳಗಾವಿಯ ಹೊಸ ಡಯೋಸಿಸ್ ಸಂಸ್ಥೆಯ ಅಧೀನದಲ್ಲಿರುವ ಈ ಚರ್ಚ್‌ನಲ್ಲಿ ಸೆಂಟ್ ಮೇರಿಯವರ ಬಾಲಕರ ಪ್ರೌಢಶಾಲೆಯನ್ನು ಹಾಗೂ ಹತ್ತಿರದಲ್ಲಿ ಸೇಕ್ರೆಡ್ ಹಾರ್ಟ್ ಕಾನ್‌ವೆಂಟ್ ಶಾಲೆಯನ್ನು ನಡೆಸಲಾಗುತ್ತಿದೆ.

ಈ ನಗರದಲ್ಲಿ ಮುಸಲ್ಮಾನರ ಹಲವಾರು ಮಸೀದಿಗಳೂ ಹಾಗೂ ದರ್ಗಾಗಳಿವೆ. ಇವುಗಳಲ್ಲಿ ಹಳೇ ಹುಬ್ಬಳ್ಳಿಯ ಮುಲ್ಲಾ ರಸ್ತೆಯಲ್ಲಿರುವ ಜುಮ್ಮಾ ಮಸೀದಿಯು ಬಿಜಾಪುರದ ಆದಿಲ್ ಷಾಹಿ ಕಾಲದ ಪ್ರಾಚೀನ ಮಸೀದಿ ಎಂದು ಪರಿಗಣಿಸಲಾಗಿದೆ. ಈ ಊರಿನಲ್ಲಿರುವ ಇತರ ಮಸೀದಿಗಳೆಂದರೆ ಅಸರ್ ಓಣಿಯಲ್ಲಿರುವ ಮಸೀದಿ, ಗವಿಗಲ್ಲಿಯಲ್ಲಿರುವ ಮಸೀದಿ, ಹಳೇ ಹುಬ್ಬಳ್ಳಿಯಲ್ಲಿರುವ

ಇಸ್ಲಾಂಪುರ ಮಸೀದಿ, ಮಜೇದಾಪುರ ಬಂಡಿವಾಡದಲ್ಲಿರುವ ಜುಮ್ಮಾಮಸೀದಿ, ಕೌಲ್‌ಪೇಟೆ ಮಸೀದಿ, ಗಣೇಶಪೇಟೆಯ ಬಡೀ ಮಸೀದಿ ಮತ್ತು ಮಹದಿಮಸೀದಿ ಪೆಂಡಾರ್‌ಗಲ್ಲಿಯಲ್ಲಿರುವ ಜೋಟಿ ಮಸೀದಿ, ಹಳೇ ಹುಬ್ಬಳ್ಳಿಯಲ್ಲಿರುವ ಕಿಲ್ಲಾ ಮಸೀದಿ ಸಾದರ್‌ಸೋಫಾ ಮಸೀದಿ, ಕಸಬಾ ಮೊಹಲ್ಲಾ ಮಸೀದಿ, ಮಹಮದ್ ನಗರ್ ಮಸೀದಿ, ಬೊಮ್ಮಾಪುರ ಮಸೀದಿ, ಕುಂಬಾರರಗಲ್ಲಿ ಮಸೀದಿ, ಗವಿಮೊಹಲ್ಲಾ ಮಸೀದಿ, ಕೋಲಸಾಬ್ ಮಸೀದಿ, ಮಹಲ್‌ದಾರ್ ಓಣಿಯಲ್ಲಿರುವ ಮಸೀದಿ, ಖರಡಾ ಮಸೀದಿ, ಖಾಜಿಗಲ್ಲಿಯಲ್ಲಿರುವ ಜುಮ್ಮಾಮಸೀದಿ, ಗೋಪನಕೊಪ್ಪದಲ್ಲಿರುವ ಜುಮ್ಮಾಮಸೀದಿ, ಜಂಗಲಿಪೇಟೆಯಲ್ಲಿರುವ ಜುಮ್ಮಾಮಸೀದಿ, ಜಂಗಲಿಪೇಟೆಯಲ್ಲಿರುವ ಜುಮ್ಮಾಮಸೀದಿ, ಬೆಂಗೇರಿಯಲ್ಲಿರುವ ಜುಮ್ಮಾ ಮಸೀದಿ ಮತ್ತು ಮೊಹಲ್ಲಾ ರಾಮನಗರದಲ್ಲಿರುವ ಅಹಲೆ ಸುನ್ನತ್ ಜಮಾತ್ ಮಕ್ಕಾ ಮಸೀದಿ, ಮತ್ತು ಯಲ್ಲಾಪುರದಲ್ಲಿರುವ ಮಸೀದಿ. ಇತ್ತೀಚೆಗೆ ಅಂದರೆ 1980 ರಲ್ಲಿ ಹಳೇ ಹುಬ್ಬಳ್ಳಿಯಲ್ಲಿ ನಿರ್ಮಿಸಲಾಗಿರುವ ಮಸ್ತಾನ್‌ಸೋಪಾ ಮಸೀದಿಯು ಆಧುನಿಕವಾಗಿದ್ದರೂ ಇಂಡೋ-ಸಾರ್ಸೆನಿಕ್ ಶೈಲಿಯಲ್ಲಿರುವ ಸುಂದರ ವಾಸ್ತು ರಚನೆಯೆಂದು ಹೇಳಬಹುದು. ಹುಬ್ಬಳ್ಳಿಯಲ್ಲಿರುವ ಮುಖ್ಯವಾದ ದರ್ಗಾಗಳೆಂದರೆ (ಉರುಸ ನಡೆಯುವ ತಿಂಗಳುಗಳನ್ನು ಆವರಣದಲ್ಲಿ ಕೊಟ್ಟಿದೆ) ಪಿ.ಬಿ. ರಸ್ತೆಯ ಭೈರೇದೇವರ ಕೊಪ್ಪದಲ್ಲಿರುವ ಸೈಯದ್ ಮಹಮೂದ್‌ಷಾದರ್ಗಾ (5-6 ದಿವಸ, ಶವ್ವಾಲ್), ಕಾರವಾರ ರಸ್ತೆಯಲ್ಲಿರುವ ಸೈಯದ್ ಫತೇಷಾವಲಿ ದರ್ಗಾ (ಜಿಲ್‌ಹಜ್) ಭಂಡಿವಾಡದಲ್ಲಿರುವ ಗೈಬ್‌ಷಾವಲಿ ದರ್ಗಾ (ಸಫರ್), ಬಂಕಾಪುರ ಚೌಕದಲ್ಲಿರುವ ಮೊಯಿದ್ದೀನ್ ದಿವಾನ್ ಚುಚಿಯಾ ದರ್ಗಾ (ಶವ್ವಾಲ್), ಸ್ಟೇಷನ್ ರಸ್ತೆಯಲ್ಲಿರುವ ಬೋಡಕೆಷಾವಲಿ ದರ್ಗಾ (ಜಮಾದಿಲ್ ಅವ್ವಲ್), ಬೊಮ್ಮಾಪುರಗಲ್ಲಿಯಲ್ಲಿರುವ ಸೈಯದ್ ಸಾದತ್‌ವಲ್ಲಿ ದರ್ಗಾ (ರಬೀಲ್ ಅವ್ವಲ್) ಹಳೇ ಹುಬ್ಬಳ್ಳಿಯಲ್ಲಿರುವ ಕರಿಮುಲ್ಲಾಷಾ ದರ್ಗಾ (ರಬೀಲ್ ಅವ್ವಲ್), ಚಾಂದ್ ಪೇಟೆಯಲ್ಲಿರುವ ಕಂಬಲ್‌ಷಾಲೆ ಪೀರ್ ದರ್ಗಾ (ಉರುಸ್ ಗೊತ್ತಿಲ್ಲ) ಮತ್ತು ತಬೀಬ್ ಲ್ಯಾಂಡ್‌ನಲ್ಲಿರುವ ಮೌಲಾಅಲಿದರ್ಗಾ (ಮೊಹರಂ).

ಹುಬ್ಬಳ್ಳಿಯಲ್ಲಿರುವ ಸಾರ್ವಜನಿಕ ಕಟ್ಟಡಗಳ ಪೈಕಿ ವಿದ್ಯಾನಗರ ಕಾಲೇಜಿನ ಕಟ್ಟಡ, ಇಂದಿರಾಗಾಂಧಿ ಸ್ಮಾರಕ ಗಾಜಿನ ಮನೆ, ಕರ್ನಾಟಕ ವೈದ್ಯಕೀಯ ವಿದ್ಯಾಲಯ, ಮೂರು ಸಾವಿರ ಮಠದ ಆಶ್ರಯದಲ್ಲಿ ನಡೆಯುತ್ತಿರುವ ಜಗದ್ಗುರು ಗಂಗಾಧರ ಸಂಸ್ಕೃತ ವಿದ್ಯಾಲಯ ಮುಂತಾದವುಗಳ ಗಮನೀಯವಾಗಿವೆ. ಹುಬ್ಬಳ್ಳಿಯ ಜಯಚಾಮರಾಜನಗರದಲ್ಲಿರುವ ಜವಹರ್ ಮೈದಾನದಲ್ಲಿ 1951. ರಲ್ಲಿ ನಿರ್ಮಿಸಲಾಗಿರುವ ಪುರಭವನವು ಇನ್ನೊಂದು ಮುಖ್ಯ ಸಾರ್ವಜನಿಕ ಕಟ್ಟಡವಾಗಿದೆ. ಈ ಪುರಭವನದಲ್ಲಿ ಸಾಂಸ್ಕೃತಿಕ ಹಾಗೂ ಸಂಗೀತಕಛೇರಿಗಳ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಹುಬ್ಬಳ್ಳಿಯ ನಗರಾಡಳಿತವನ್ನು ಮೊದಲು 1855 ರಲ್ಲಿ ಸ್ಥಾಪಿತವಾಗಿದ್ದ ಪುರಸಭೆ ನೋಡಿಕೊಳ್ಳುತ್ತಿತ್ತು. ಅನಂತರ 1925 ರಲ್ಲಿ ಅದನ್ನು ಬರೋ (ನಗರ) ಮುನಿಸಿಪಾಲಿಟಿಯಾಗಿ ವಿಸ್ತರಿಸಲಾಯಿತು. 1962 ರಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯನ್ನು ಸ್ಥಾಪಿಸಲಾಯಿತು. ಹುಬ್ಬಳ್ಳಿಯಲ್ಲಿರುವ ಎರಡೂ ಮಹಾನಗರಗಳ ಪಾಲಿಕೆಯ ಆಡಳಿತ ಕೇಂದ್ರವಾದ ಕಟ್ಟಡವೊಂದು ಮುಖ್ಯವಾದ ಸಾರ್ವಜನಿಕ ಕಟ್ಟಡವಾಗಿದೆ. ಹುಬ್ಬಳ್ಳಿಯ ಬೃಹದಾಕಾರದ ಅಶ್ವಾರೂಢ ಕಿತ್ತೂರು ಚನ್ನಮ್ಮ ಪ್ರತಿಮೆಯಿದೆ. ವಾಣಿಜ್ಯ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಸಮಸಮವಾಗಿ ಬೆಳೆದುದು ಈ ನಗರದ ವೈಶಿಷ್ಟ್ಯವಾಗಿದೆ. ಈ ನಗರಕ್ಕೆ ಸಂಪರ್ಕಿಸುವ ರೈಲುಮಾರ್ಗಗಳು ಹಾಗೂ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳು ವಾಣಿಜ್ಯ ಪ್ರಗತಿಯ ಜೀವಾಳವಾಗಿವೆ. ಈ ನಗರದಿಂದ ಮುಂಬೈ, ಕಾರವಾರ, ಗೋವಾ (ಧಾರವಾಡದ ಮೂಲಕ) ಬಿಜಾಪುರ ಮತ್ತು ಗದಗಿನ ಮೂಲಕ ಸೊಲ್ಲಾಪುರ ಹಾಗೂ ದಕ್ಷಿಣಕ್ಕೆ ಬೆಂಗಳೂರಿಗೆ ವೇಗವಾಗಿ ಚಲಿಸಲು ಅನುಕೂಲವಾದ ಹೆದ್ದಾರಿಗಳಿವೆ. ರೈಲುಮಾರ್ಗಗಳಲ್ಲಿ ಹುಬ್ಬಳ್ಳಿಯೊಂದು ಜಂಕಷನ್ ಎಂದು ಪರಿಗಣಿಸಲಾಗಿದೆ. ಇಲ್ಲಿಂದ ಪುಣೆ, ಗೋವಾ ಮತ್ತು ಬೆಂಗಳೂರು ರೈಲುಮಾರ್ಗವನ್ನು ಸಂಚಾರಕ್ಕೆ 1882 ರಲ್ಲಿಯೇ ತೆರೆಯಲಾಯಿತು. ಬಿಜಾಪುರದ ಮೂಲಕ ಸೊಲ್ಲಾಪುರಕ್ಕೆ ಹೋಗಬಹುದಾದ ರೈಲುಮಾರ್ಗವನ್ನು 1884 ರಲ್ಲಿ ಹೊಸಪೇಟೆಯ ಮೂಲಕ ಗುಂತಕಲ್ ಮದರಾಸ್ ತಲುಪಲು ಸಾಧ್ಯವಾಗುವ ರೈಲುಮಾರ್ಗವನ್ನು 1885 ರಲ್ಲೂ ಸಂಚಾರಕ್ಕೆ ತೆರೆಯಲ್ಪಟ್ಟಿವು. ದಕ್ಷಿಣ ಮರಾಠಾ ರೈಲು ಸಂಸ್ಥೆಯವರು 1887 ರಲ್ಲಿ ಧಾರವಾಡವನ್ನು ಆಡಳಿತ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದ್ದ ಅಲ್ಲದೇ ಅದೇ ವರ್ಷ ರೈಲ್ವೆ ಕಾರ್ಯಾಗಾರವನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಿದರು. ಮುಂದೆ ಮದರಾಸು ರೈಲ್ವೆ ಸಂಸ್ಥೆ ಹಾಗೂ ದಕ್ಷಿಣ ಮರಾಠ ರೈಲ್ವೆ ಸಂಸ್ಥೆಗಳು ವಿಲೀನಗೊಂಡಾಗ ಈ ಕಾರ್ಯಾಗಾರವು ಪ್ರಮುಖ ಮೀಟರ್‌ಗೇಜ್ ಕಾರ್ಯಾಗಾರವಾಗಿ ಪರಿವರ್ತನೆಗೊಂಡಿತು. ಪ್ರಸ್ತುತ ಹುಬ್ಬಳ್ಳಿಯಲ್ಲೂ ಯೂನಿಗೇಜ್ (ಬ್ರಾಡ್‌ಗೇಜ್) ಪರಿವರ್ತನೆ ಕಾರ್ಯ ಅಂತಿಮ ಘಟ್ಟದಲ್ಲಿರುವುದರಿಂದ ಈ ನಗರವು ರಾಷ್ಟ್ರಮಟ್ಟದ ಮಹತ್ವವನ್ನು ಸದ್ಯದಲ್ಲೆ ಪಡೆಯಲಿದೆ. ಹತ್ತಿಯ ವ್ಯಾಪಾರಕ್ಕೆ ಪ್ರಾರಂಭದಿಂದಲೂ ಹುಬ್ಬಳ್ಳಿ ಜನಪ್ರಿಯವಾಗಿದೆ.

1860ರ ದಶಕದಲ್ಲಿ ಅಮೆರಿಕಾದಲ್ಲಿ ಸಂಭವಿಸಿದ ಅಂತರಿಕ ಯುದ್ಧಗಳ ಪರಿಣಾಮವಾಗಿ ಪ್ರವರ್ಧಗೊಂಡ 'ಕಾಟನ್‌ಬೂಮ್' ಕಾಲದಿಂದ ಹುಬ್ಬಳ್ಳಿಯು ಪ್ರಮುಖ ಹತ್ತಿಯ ಸರಬರಾಜಿನ ಕೇಂದ್ರವಾಗಿ ಬೆಳೆಯಿತು. ಇದರ ಮುಖ್ಯ ಪರಿಣಾಮವೆಂದರೇ ಹುಬ್ಬಳ್ಳಿಯಲ್ಲಿ ಹತ್ತಿಯ ಗಿರಣಿಗಳು ಪ್ರಾರಂಭವಾದುದೇ ಆಗಿದೆ. 1881 ರಲ್ಲಿಯೇ ಕ್ರಿಸ್ಟಲ್ ಕಂಪನಿಯು ಗಿರಣಿ ಪ್ರಾರಂಭವಾಗಿ 1883 ರ ವೇಳೆಗೆ 10,000 ಸ್ಪಿಂಡಲ್ಸ್‌ಗಳಲ್ಲಿ ನೂಲಿನ ಉತ್ಪಾದನೆ ಆಗುತ್ತಿತ್ತು. ಸ್ವಲ್ಪ ಸಮಯದಲ್ಲೆ ಹುಬ್ಬಳ್ಳಿಯಲ್ಲಿ ಒಟ್ಟು ಎರಡು ಗಿರಣಿಗಳಿದ್ದು ಅವುಗಳ ಒಟ್ಟು ಸಾಮರ್ಥ್ಯ 35,000 ಸ್ಪಿಂಡಲ್ಸ್‌ಗಳು. ಹತ್ತಿ ಗಿರಣಿಗಳ ಕಾರಣವಾಗಿ ಹುಬ್ಬಳ್ಳಿಯ ವ್ಯಾಪಕ ನಗರೀಕರಣಕ್ಕೆ ದಾರಿಯಾಯಿತು. ಸೋಮವಂಶದ ಸಹಸ್ರಾರ್ಜುನ ಕ್ಷತ್ರಿಯರು ಅಥವಾ ಪಟ್ವೇಗಾರರು (ರೇಷ್ಮೆ ಬಟ್ಟೆಗಳ ನೇಯ್ಗೆಯಲ್ಲೆ ಪರಿಣತರಾಗಿರುವವರು), ಸ್ವಕುಲಸಾಳಿ, ಕುರುಹೀನ ಶೆಟ್ಟರು, ದೇವಾಂಗದವರು ಹಾಗೂ ಮುಸ್ಲಿಮರೂ ಸೇರಿದಂತೆ ನೇಕಾರರು ನಗರದ ಬಟ್ಟೆ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿದ್ದಾರೆ. ಶುದ್ಧ ರೇಷ್ಮೆಯ ಇಳಕಲ್ ಸೀರೆ ತಯಾರಿಸುವಲ್ಲಿ ಈ ಊರು ಹೆಸರುವಾಸಿಯಾಗಿದೆ. ಇಳಕಲ್ ಸೀರೆಯಷ್ಟೇ ಪ್ರಸಿದ್ಧವಾಗಿರುವ ಚೋಳಿಯ ಖಣಗಳು ('ಮದರ್ ಇಂಡಿಯಾ' ಶೈಲಿಯದು) ಇಲ್ಲೇ ತಯಾರಾಗುತ್ತವೆ. ಬ್ರಿಟಿಷರು 1638 ರಲ್ಲಿ ಕಾರವಾರದ ಬಳಿ ಕಡವಾಡದಲ್ಲಿ ಮೊದಲು ತಮ್ಮ ಮಳಿಗೆಯ ಆರಂಭಿಸಿದ ಸಮಯದಲ್ಲೆ ಹುಬ್ಬಳ್ಳಿ ಹಾಗೂ ಅದರ ಪರಿಸರದಲ್ಲಿ ಸುಮಾರು 50,000 ನೇಕಾರರನ್ನು ನೇಮಕಮಾಡಿಕೊಂಡು ತಮ್ಮ ಮಳಿಗೆ ಶಾಖಾ ಘಟಕವನ್ನು ತೆರೆದದ್ದು ಇಲ್ಲಿ ಗಮನೀಯವಾಗಿದೆ.

ಈ ಮಹಾನಗರದ ಸಾಂಸ್ಕೃತಿಕ ಚಟುವಟಿಕೆಯ ಜೊತೆಗೆ ಮುಖ್ಯವಾದುದೆಂದರೆ ಪತ್ರಿಕೋದ್ಯಮ ಕ್ಷೇತ್ರಕ್ಕೆ ಇಲ್ಲಿಯ ಬುದ್ಧಿಜೀವಿಗಳು ನೀಡಿದ ಕೊಡುಗೆಯೆನ್ನಬಹುದು. ಈ ಶತಮಾನದ ಆರಂಭದಲ್ಲೇ ಹುಬ್ಬಳ್ಳಿಯಲ್ಲಿ ಮುತಾಲಿಕ್ ದೇಸಾಯಿಯವರು 'ಕನ್ನಡಕೇಸರಿ' (1905) ಎಂಬ ಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆಯಲ್ಲಿ ಡಾ|| ಹರ್ಡೀಕರ್ ಉಪ-ಸಂಪಾದಕರಾಗಿ ದುಡಿದು ಲೋಕಮಾನ್ಯ ತಿಲಕರ 'ಕೇಸರಿ'ಯ ಸಂದೇಶವನ್ನು ಕನ್ನಡಿಗರಿಗೂ ಲಭಿಸುವಂತೆ ಮಾಡಿದರು. ಅನಂತರ ವಿ.ಬಿ. ಪುರಾಣಿಕ್‌ಮಠ ಅವರು 1924 ರಲ್ಲಿ 'ಲೋಕಮತ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಬೆಳಗಾವಿಯಲ್ಲಿ ಹಿಂದೆಯೇ ಪ್ರಾರಂಭವಾಗಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು 1933 ರಲ್ಲಿ ಹುಬ್ಬಳ್ಳಿಗೆ ಸ್ಥಳಾಂತರಿಸಲಾಯಿತು. ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ನೇಸ್ವಿಯವರ 'ನವಯುಗ' ಮತ್ತು ಕೆ.ಎಫ್. ಪಾಟೀಲರು 'ವಿಶಾಲ ಕರ್ನಾಟಕ' ಪತ್ರಿಕೆ ಇಲ್ಲಿಂದ ಹೊರಟವು. ಪಾಟೀಲಪುಟ್ಟಪ್ಪನವರು 1954 ರಲ್ಲಿ ಆರಂಭಿಸಿದ 'ಪ್ರಪಂಚ' ವಾರ ಪತ್ರಿಕೆ ಇಂದಿಗೂ ಜನಪ್ರಿಯವಾಗಿದೆ. ಡಾ|| ಹರ್ಡಿಕರ್ 'ಜೈಹಿಂದ್' ಎಂಬ ವಾರಪತ್ರಿಕೆಯನ್ನು ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಪ್ರಸ್ತುತ 'ಸಂಯುಕ್ತ ಕರ್ನಾಟಕ' ಮತ್ತು 'ಪ್ರಜಾವಾಣಿ' (ಬೆಂಗಳೂರಿನದೇ ಶಾಖೆ) ದೈನಂದಿನ ಪತ್ರಿಕೆಗಳು ಹುಬ್ಬಳ್ಳಿ ಹಾಗೂ ಬೆಂಗಳೂರಿನಿಂದ ಏಕಕಾಲಕ್ಕೆ ಪ್ರಕಟವಾಗುತ್ತಿವೆ.

ಸ್ವಾತಂತ್ರ್ಯ ಹೋರಾಟದಲ್ಲಿ ಈ ನಗರದ ಪಾತ್ರವೂ ಸಹ ಹಿರಿದಾದುದಾಗಿದೆ. ಹರ್ಡಿಕರ್ ಅವರ ಹಿಂದುಸ್ಥಾನೀ ಸೇವಾದಳದ ಅಖಿಲಭಾರತ ಕೇಂದ್ರ ಹುಬ್ಬಳ್ಳಿಯಾಗಿತ್ತು. ವಿಶ್ವನಾಥರಾವ್ ಜೋಶಿ, ರಂಗನಾಥ ದಿವಾಕರ್, ಡಾ: ಹರ್ಡೀಕರ್, ಸರ್ದಾರ ವೀರಣ್ಣಗೌಡ ಪಾಟೀಲ್, ಉಮಾಬಾಯಿ ಕುಂದಾಪುರ, ಗುದ್ಲೆಪ್ಪ ಹಳ್ಳಿಕೇರಿ, ವೆಂಕಟೇಶ ಮಾಗಡಿ, ಮುಂತಾದ ಧೀಮಂತರುಗಳು ಹುಬ್ಬಳ್ಳಿಯನ್ನು ತಮ್ಮ ಹೋರಾಟಗಳ ಕಾರ್ಯಕೇಂದ್ರವನ್ನಾಗಿ ಮಾಡಿಕೊಂಡರು. ಆದುದರಿಂದ ಕೆ.ಪಿ.ಸಿ.ಸಿಯ ಕೇಂದ್ರಸ್ಥಾನವೂ ಈ ನಗರವೇ ಆಗಿತ್ತು. ಸರ್ ಸಿದ್ದಪ್ಪ ಕಂಬಳಿಯವರು ಬ್ರಾಹ್ಮಣೇತರ ಚಳವಳಿ ಆರಂಭಿಸಿದ್ದು ಇಲ್ಲಿಂದಲೇ (1920). ಪ್ರಸಿದ್ಧ ನಾಟಕಕಲಾವಿದರುಗಳು, ಸಿನಿಮಾ ಕಲಾವಿದರುಗಳು ಹಾಗೂ ಸಂಗೀತಗಾರರನ್ನು ಪಡೆದ ಹೆಮ್ಮೆಯ ಸ್ಥಳವಿದು. ಗಂಗೂಬಾಯಿ ಹಾನಗಲ್, ಮಿಣಜಗಿ ಮುಂತಾದವರ ಹೆಸರುಗಳು ಜನಪ್ರಿಯವಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ವೈದ್ಯಕೀಯ ಇಂಜಿನಿಯರಿಂಗ್ ಹಾಗೂ ಕಾನೂನು ಮುಂತಾದ ಎಲ್ಲ ವಿಧದ ಶಿಕ್ಷಣಕ್ಕೂ ಇಲ್ಲಿ ಅವಕಾಶವಿದೆ. ಈ ಊರಲ್ಲಿ ನಡೆಯುವ ಸಾರ್ವಜನಿಕ ಗಣೇಶ ಉತ್ಸವಗಳು ಪರವೂರಿನಿಂದ ಸಾವಿರಾರು ಜನರನ್ನು ಆಕರ್ಷಿಸುತ್ತದೆ.

**ಹುಣಸಿಕಟ್ಟಿ** : ಕಲಘಟಗಿ ತಾಲೂಕಿನ ಹುಣಸೀಕಟ್ಟೆಯು (ಜನಸಂಖ್ಯೆ : 872) ಕಲಘಟಗಿಯಿಂದ ಆಗ್ನೇಯಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಈ ಊರು ಹಿಂದೆ ಹಲಸಿಗೆ-12000 ಕ್ಕೆ ಸೇರಿದ ಮಾವಳ್ಳಿ - 500 ನಾಡಿನ ಹುಲಿಗೋಡ-12 ಕ್ಕೆ ಸೇರಿದ್ದಂತೆ ತೋರುತ್ತದೆ. ಈ ಊರಿಂದ ಈವರೆಗೆ ಆರ್.ಎನ್. ಗುರವ್ ಎರಡು ಶಾಸನಗಳನ್ನು ವರದಿ ಮಾಡಿದ್ದಾರೆ. ಮಲ್ಲಿಕಾರ್ಜುನ ಗುಡಿ ಮುಂದಿರುವ ಕಲ್ಯಾಣದ ಚಾಳುಕ್ಯ ಮುಮ್ಮಡಿ ಸೋಮೇಶ್ವರನ ಕಾಲದ ಕ್ರಿ.ಶ. 1130-31 ರ ಶಾಸನ ಅಪೂರ್ಣವಾಗಿದ್ದು,

ಶಾಂತಿಗೌಡನನ್ನು ಉಲ್ಲೇಖಿಸಿದರೆ, ಗೋವೆ ಕದಂಬ ಪೆರ್ಮಾಡಿದೇವನ ಕಾಲದ ಕ್ರಿ.ಶ. 1142 ರ ಶಾಸನ, ಹುಲಿಗೋಡ ಮುದ್ದಗಾವುಂಡನು ಹೋಬೇಶ್ವರ ದೇವರಿಗೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಉಕ್ತವಾಗಿರುವ ಗುಡಿ, ಇಂದಿನ ಮಲ್ಲಿಕಾರ್ಜುನ ಗುಡಿಯಾಗಿದೆ. ಊರ ಹೊರಗಿರುವ ಈ ಗುಡಿ ಗರ್ಭಗೃಹ ಅಂತರಾಳ ಹಾಗೂ ಹಜಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಸರಳವಾಗಿದೆ. ಅಂತರಾಳದಲ್ಲಿ ನಂದಿ ಹಾಗೂ ಕೇಶವನ ಶಿಲ್ಪಗಳಿವೆ. ಸುಮಾರು ಎರಡೂವರೆ ಅಡಿ ಎತ್ತರವಿರುವ ಈ ಕೇಶವ ಚತುರ್ಭುಜಧಾರಿಯಾಗಿದ್ದಾನೆ. ಅಂತರಾಳದ ಬಾಗಿಲವಾಡ ಚತುರ್ಶಾಖೆಯನ್ನು ಹೊಂದಿದ್ದು, ಪೂರ್ಣಕುಂಬವಿದ್ದರೂ ನಿರಾಡಂಬರವಾಗಿದೆ. ಜೀರ್ಣೋದ್ಧಾರದ ಸಂದರ್ಭದಲ್ಲಿ ಹಜಾರವನ್ನು ವಿಸ್ತರಿಸಿದ್ದಾರೆ. ಈ ಗುಡಿಯ ಬಳಿ ಭಗ್ನವಾದ ಗಣಪತಿ ಶಿಲ್ಪವಿದೆ. ಶಿವರಾತ್ರಿಯಂದು ಈ ದೇವರ ಜಾತ್ರೆ ನಡೆಯುತ್ತದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಈಶ್ವರ, ಹನುಮಂತ ಹಾಗೂ ದ್ಯಾಮವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಹುಲಗೂರು** : ಶಿಗ್ಗಾಂವಿ ತಾಲೂಕಿನಲ್ಲಿರುವ ಇದು (ಜನಸಂಖ್ಯೆ : 7,135) ಶಾಸನಗಳಲ್ಲಿ 'ಪುಲ್ಲುಂಗೂರು', 'ಹುಲ್ಲುಂಗೂರು', 'ಹುಲಗೂರು' ಎಂದೆಲ್ಲಾ ಉಲ್ಲೇಖಗೊಂಡಿದೆ. ಈ ಊರು ಶಿಗ್ಗಾಂವಿಯಿಂದ ಈಶಾನ್ಯಕ್ಕೆ 10 ಕಿ.ಮೀ. ದೂರದಲ್ಲಿದೆ. ಹಿಂದೆ ಇದು ಪುಲಿಗೆರೆ-300 ಕ್ಕೆ ಸೇರಿದ ಕಾಲಡಿ-96 ರಲ್ಲಿ ಅಂತರ್ಗತವಾಗಿತ್ತು. ಹಿಂದೆ ಚಾರಿತ್ರಿಕ ಮಹತ್ವದ ಸ್ಥಳವಾಗಿ ಮೆರೆದಿರುವ ಈ ಊರಿಂದ ಈವರೆಗೆ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಯಾದವರು ಹಾಗೂ ಕಲಚೂರಿ ಅರಸು ಮನೆತನಗಳ ಕಾಲಕ್ಕೆ ಸೇರಿದ 17 ಶಾಸನಗಳು ವರದಿಯಾಗಿದ್ದು ಇವುಗಳಲ್ಲಿ ರಾಷ್ಟ್ರಕೂಟ ಅರಸ ಖೊಟ್ಟಿಗನ ಕಾಲಕ್ಕೆ ಸೇರಿದ ಕ್ರಿ.ಶ. 970 ರ ಶಾಸನ ಪುಲಿಗೆರೆಯ ಅಧಿಕಾರಿ ಗುತ್ತಿಯ ಗಂಗನ ಮಡದಿ ಅಂಕಬ್ಬರಸಿಯು ಪುಲಂಗೂರಬ್ಬೆ (ಹುಲಗೂರು ಗ್ರಾಮದೇವತೆ)ಗೆ ಭೂಮಿ ಹಾಗೂ ಸುಂಕಗಳನ್ನು ದಾನ ಕೊಟ್ಟ ವಿಷಯ ತಿಳಿಸಿದರೆ, ಕಲ್ಮೇಶ್ವರ ಗುಡಿ ಬಳಿಯಿರುವ ಕ್ರಿ.ಶ. 1018 ರ ಶಾಸನ ವಾವನಾರ್ಯನು ರಾಮೇಶ್ವರ ದೇವರಿಗೆ ಭೂ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1038 ರ ಶಾಸನ ನಿಡಗುಂದದ ಭೂತಗೌಂಡ ಹಾಗೂ ತಿಪ್ಪರಸರಿಂದ ನಾರಾಯಣ ದೇವರಿಗೆ ಭೂದಾನ ಹಾಗೂ ಇತರ ದಾನಗಳ ಬಗ್ಗೆ ಹೇಳಿದರೆ, ಕ್ರಿ.ಶ. 1062 ರ ಶಾಸನ ದಂಡನಾಯಕ ದೇವಪಾಲ ಅರಸು ಪುಲ್ಲುಂಗೂರನ್ನು ಆಳುವಾಗ ಕೆರೆಗಳಿಗೆ ಬಿಟ್ಟ ದತ್ತಿಯ ಬಗ್ಗೆ ಹೇಳುತ್ತದೆ. ಕ್ರಿ.ಶ. 1077 ರ ಮತ್ತೊಂದು ಶಾಸನ ಅಧಿಕಾರಿಗಳು ಕೊಯ್ಯಾಳೇಶ್ವರ ದೇವರಿಗೆ ನಗದು ಹಣ ದಾನ ಕೊಟ್ಟ ವಿಷಯ ತಿಳಿಸಿದರೆ ಕ್ರಿ.ಶ. 1154 ಹಾಗೂ ಕ್ರಿ.ಶ. 1156 ರ ಶಾಸನಗಳು ತೋಂಟದ ಸುಂಕವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತವೆ. ಕಲಚೂರಿ ಅರಸರ ಆಳ್ವಿಕೆಗೆ ಸೇರಿದ ಕ್ರಿ.ಶ. 1161 ಹಾಗೂ ಕ್ರಿ.ಶ. 1174 ರ ಶಾಸನಗಳಿಂದ ರಾಮೇಶ್ವರ ದೇವರಿಗೆ ಪೆರ್ಗಡೆ ಏಚಯ್ಯ, ಮಾಯಿಣ ಹಾಗೂ ದಂಡನಾಯ್ಕ ಮಾಹೇಶ್ವರರು ದಾನ ಕೊಟ್ಟ ವಿಷಯ ಗೊತ್ತಾದರೆ, ಯಾದವ ಸಿಂಘಣನ ಕಾಲಕ್ಕೆ ಸೇರಿದ ಕ್ರಿ.ಶ. 1245 ತಾಮ್ರಶಾಸನದಿಂದ ಕದಂಬ ಮಲ್ಲಿದೇವನ ರಾಣಿ ಪದ್ಮಲದೇವಿ ಹುಲಗೂರಲ್ಲಿ ಪ್ರಸನ್ನಕೇಶವ, ಮಾಧವ ಹಾಗೂ ನಾರಾಯಣ ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡಿ 275 ನಿವರ್ತನ ಭೂಮಿಯನ್ನು ಷಡ್‌ಧರ್ಮಗಳೆಯಲ್ಲಿ ಅಳೆದು ದಾನ ಬಿಟ್ಟು ಪ್ರಸನ್ನಪುರಿ ಎಂಬ ಬ್ರಹ್ಮಪುರಿಯನ್ನು ಸ್ಥಾಪಿಸಿದ ವಿಷಯ ತಿಳಿಸುತ್ತದೆ. ಸಾಂದರ್ಭಿಕವಾಗಿ ಪದ್ಮಲೇಶ್ವರ ದೇವಾಲಯದ ಬಗೆಗೂ ಹೇಳುತ್ತದೆ. ಮಣಗಟ್ಟಿ ಕ್ರಿ.ಶ. 1148 ರ ಶಾಸನ ಈ ಊರಗೌರೇಶ್ವರ ದೇವಾಲಯವನ್ನು ಉಲ್ಲೇಖಿಸುತ್ತದೆ.

ಮೇಲಿನ ಶಾಸನಗಳು ಹಲವಾರು ದೇಗುಲಗಳ ಬಗ್ಗೆ ಪ್ರಸ್ತಾಪಿಸಿದರೂ ಇಂದು ಊರಲ್ಲಿರುವ ಪ್ರಾಚೀನ ದೇವಾಲಯವೆಂದರೆ ಕಲ್ಮೇಶ್ವರ. ಪೂಜಾರಿ ಓಣಿಯಲ್ಲಿರುವ ಈ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದೆಯಾದರೂ, ಪ್ರಾಚೀನ ಅವಶೇಷಗಳಿರುವುದು ಈ ಗುಡಿ ಪರಿಸರದಲ್ಲೇ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಚತುರ್ಶಾಖಾಲಂಕೃತವಾಗಿದೆ. ಅಂತರಾಳದಲ್ಲಿ ನಂದಿಯಿದ್ದು, ನವರಂಗದಲ್ಲಿ ಅನಂತಪದ್ಮನಾಭ, ಗಣಪತಿ ಹಾಗೂ ಸಪ್ತಮಾತೃಕಾ ಪಟ್ಟಿಕೆಗಳಿವೆ. ಇದರ ಬದಿಯಲ್ಲೇ ರಾಷ್ಟ್ರಕೂಟರ ಕಾಲದ ಎರಡು ಗೋಸಾಸ ಕಲ್ಲುಗಳನ್ನು ಗಮನಿಸಲಾಗಿದ್ದು ಒಂದರಲ್ಲಿ ಶಾಸನವಿದೆ. ಈ ಗುಡಿಯ ಬದಿಯಲ್ಲಿರುವ ತಿಪ್ಪೆಗುಂಡಿಯಲ್ಲಿ ಆರು ಶಾಸನಗಳಿವೆ. ಗಜಲಕ್ಷ್ಮಿಯ ಕೆತ್ತನೆಯನ್ನು ಶಿರೋಭಾಗದಲ್ಲಿ ಹೊಂದಿರುವ ಸುಮಾರು ಕ್ರಿ.ಶ. 10-11 ನೇ ಶತಮಾನದ ಶಾಸನ ಬಹಳ ಸುಂದರವಾಗಿದ್ದು ಇದರಲ್ಲಿ ಮಂಗಳಸೂಚಕ ಪಂಚಚಿಹ್ನೆಯನ್ನೂ ಬಿಡಿಸಲಾಗಿದೆ. ಊರ ಪ್ರವೇಶದಲ್ಲಿರುವ ಸುಂದರವಾದ ಬೃಹತ್ತಾದ ಗಜಲಕ್ಷ್ಮಿ ಶಿಲ್ಪವಿದೆ. ಇದೇ ಶಾಸನೋಕ್ತ ಪುಲ್ಲುಂಗೂರಬ್ಬೆ ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಬಳಿಯಲ್ಲೇ ಪೀಠಸ್ಥ ಚತುರ್ಮುಖ ಬ್ರಹ್ಮನ (ಗೋಲಕವ್ವ) ಶಿರವಿರುವ ಶಿಲ್ಪವಿದೆ. ಇದರೊಂದಿಗೆ ಊರಲ್ಲಿ ಈಶ್ವರ, ಬಸವಣ್ಣ, ಸಿದ್ಧಲಿಂಗೇಶ್ವರ, ವೀರಭದ್ರ, ದುರ್ಗಾ, ಎಲ್ಲಮ್ಮ, ಬನಶಂಕರಿ,

ಮರಿಯಮ್ಮ, ದ್ಯಾಮವ್ವ, ಹಾಗೂ ಉಡಚಮ್ಮನ ಗುಡಿಗಳಿದ್ದು ಕಲ್ಮಠ ಹಾಗೂ ಹಿರೇಮಠಗಳಿವೆ. ಒಂದೆರಡು ಮಸೀದಿಗಳಿವೆ. ಊರ ಹೊರಗೆ ಪಾಣೆಗಟ್ಟಿ ರಸ್ತೆಯಲ್ಲಿರುವ ಹಜರತ್ ಷಾ ಖಾದ್ರಿಯ ದರ್ಗಾ ಬಹಳ ಪ್ರಸಿದ್ಧವಾಗಿದೆ. ಸವಣೂರು ನವಾಬನ ಆಸ್ಥಾನದಲ್ಲಿ ಸುಮಾರು ಕ್ರಿ.ಶ. 1800ರಲ್ಲಿ ಜೀವಿಸಿದ್ದ ಈ ಸಂತರು ತಮ್ಮ ಕೊನೆಯ ದಿನಗಳನ್ನು ಹುಲಗೂರಲ್ಲೇ ಕಳೆದರು. ಮಾಘಪೌರ್ಣಿಮೆಯ ನಂತರ ಇಲ್ಲಿ ಉರುಸು ಜರುಗುತ್ತದೆ. ನೆರೆಯ ಮೈಲಾರದ ಜಾತ್ರೆಗೆ ಬಂದ ಜನ ಇಲ್ಲಿಗೂ ಬಂದು ಹೋಗುತ್ತಾರೆ.

**ಹೂಲಿಹಳ್ಳಿ :** ರಾಣೆಬೆನ್ನೂರು ತಾಲೂಕಿನ ಹೂಲಿಹಳ್ಳಿಯು (ಜನಸಂಖ್ಯೆ : 1,854) ರಾಣೆಬೆನ್ನೂರಿನಿಂದ ಪಶ್ಚಿಮಕೆ. ಎಂಟು ಕಿ.ಮೀ ದೂರದಲ್ಲಿದೆ. ಈ ಊರು, ಇಂದು ಪುಣೆ-ಬೆಂಗಳೂರು ರಸ್ತೆಯತ್ತ ವರ್ಗಾವಣೆಗೊಳ್ಳುತ್ತಿದ್ದರೂ, ಹಳೇ ಊರಲ್ಲಿ ಹಾಗೂ ಹೊಲದಲ್ಲಿ ಪ್ರಾಚೀನ ಕಾಲದ ಗುಡಿಗಳಿದ್ದು, ಹಲವಾರು ಶಾಸನಗಳಿವೆ. ಪ್ರಾಚೀನ ಕಾಲದಲ್ಲಿ ಬಿಂನವೂರ (ರಾಣೆಬೆನ್ನೂರು)-12 ಕ್ಕೆ ಸೇರಿದ್ದ ಈ ಊರು ಕ್ರಿ.ಶ. 12ನೇ ಶತಮಾನದ ಶಾಸನಗಳಲ್ಲಿ 'ಉಲಿಹಳ್ಳಿ' 'ಉಲಿಯಹಳ್ಳಿ' ಎಂದು ಉಲ್ಲೇಖಿತಗೊಂಡಿದ್ದರೆ, ಕ್ರಿ.ಶ. 8-9ನೇ ಶತಮಾನದ ರಾಷ್ಟ್ರಕೂಟರ ಗೋಸಾಸ ಶಾಸನದಲ್ಲಿ 'ಪುಲಿಅಲ್ಲಾ' ಎಂಬ ಉಲ್ಲೇಖವಿದ್ದು ಇದು ಹೂಲಿಹಳ್ಳಿಯ ಪ್ರಾಚೀನ ರೂಪದ್ದಾಗಿರುವಂತೆ ತೋರುತ್ತದೆ. ಊರ ಹೊರಗೆ ಯರಗುಪ್ಪಿ ಹೊಲದಲ್ಲಿರುವ ರಾಮಲಿಂಗ ಗುಡಿ ರಾಷ್ಟ್ರಕೂಟರ ಕಾಲದ ಗೋಸಾಸ ಕಲ್ಲುಗಳ ಗುಂಪಿನ ಬಳಿಯೇ ಇರುವುದು-ಗಮನಾರ್ಹವಾಗಿದೆ. ಇಲ್ಲಿ ಮೂರರ ಸಾಲಿನಂತೆ ಹನ್ನೆರಡು ಗೋಸಾಸ ಕಲ್ಲುಗಳಿದ್ದು, ಇವುಗಳಲ್ಲಿ ಮೂರು ಶಾಸನಗಳನ್ನು ಹೊಂದಿದ್ದು, ಅವು ಕ್ರಮವಾಗಿ ಮಾರಮ್ಮ, ಹೊನ್ನಮಾರ ಮತ್ತು ಸಿಂಗೆಯರ ವಿನಕ ಹಾಗೂ ಮುಲ್ಕಾಡರಮಾರ ಇವರು ದಾನಾನಂತರ ಮೇಂಟಿ ನಿಲ್ಲಿಸಿದ್ದನ್ನು ದಾಖಲಿಸುತ್ತವೆ. ಈ ಮೂರು ಶಾಸನಗಳಲ್ಲಿ ಬರುವ ಮಾರ ಒಬ್ಬನೇ ಆಗಿರುವ ಸಾಧ್ಯತೆಯಿದೆ. ಕ್ರಿ.ಶ. 1143 ರ ಶಾಸನ ಉಲಿಹಳ್ಳಿಯ ಸ್ವಯಂಭುಕಲಿದೇವಸ್ವಾಮಿಗೆ ಕೇಶವನಾಯಕ ಹಾಗೂ ಇತರ ಅಧಿಕಾರಿಗಳು ವಿವಿಧ ದಾನನೀಡಿದನ್ನು ತಿಳಿಸಿದರೆ, ಕ್ರಿ.ಶ. 1292ರ ಮತ್ತೊಂದು ಶಾಸನ ಈ ಗುಡಿಗೆ ತೆಲ್ಲಿಗರು ಎಣ್ಣೆಯನ್ನು, ನೇಕಾರರು ಮಗ್ಗದೆರೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1183 ರ ಶಾಸನ ಉಲಿಹಳ್ಳಿಯಲ್ಲಿ ಬಮ್ಮಗೌಂಡ ಹಾಗೂ ಅವನ ತಮ್ಮ ಕೇಶವಗಂಡರೂ ನಿರ್ಮಿಸಿದ ರಾಮೇಶಭವಾಲಯಕ್ಕೆ ಕೇಶವನಾಯಕನ ಮಗ ಬಿನವೂರು-12ರ ನಾಳ್ಗಭು ಸಾವಂತಕೇತಗಾವುಂಡ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಶಾಸನಗಳಲ್ಲಿ ಉಕ್ತವಾಗಿರುವ ಎರಡು ಗುಡಿಗಳನ್ನು ಕಲ್ಲೇಶ್ವರ (ಕಲ್ಲಪ್ಪ) ಮತ್ತು ರಾಮಲಿಂಗ ಎಂದು ಸ್ಥಳೀಕರು ಕರೆಯುತ್ತಾರೆ.

ಯರಗುಪ್ಪಿಯ ಹೊಲದಲ್ಲಿರುವ ರಾಮಲಿಂಗ (ಶಾಸನೋಕ್ತ ರಾಮೇಶಭವಾಲಯ) ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಮಂಟಪ ಮತ್ತು ನವರಂಗವನ್ನು ಹೊಂದಿದೆ. ನವರಂಗದ ಕಂಬಗಳು ಚಾಳುಕ್ಯರವೇ. ಈ ಗುಡಿ, ಭಿತ್ತಿಯವರೆಗೆ ಪೂರ್ಣ ಮಣ್ಣಿಂದ ಮುಚ್ಚಲ್ಪಟ್ಟಿದ್ದು ಕ್ರಿ.ಶ. 1143ರ ನಂತರ ಕ್ರಿ.ಶ. 1183ಕ್ಕೆ ಮೊದಲು ನಿರ್ಮಾಣಗೊಂಡಿದೆಯೆಂದು ನಿರ್ಧರಿಸಬಹುದಾಗಿದ್ದು ಹೊರಗೆ ರಾಷ್ಟ್ರಕೂಟರ ಕಾಲದ ವೀರಗಲ್ಲಿದೆ.

ಹಳೆಹೂಲಿಹಳ್ಳಿಯಲ್ಲಿರುವ ಕಲ್ಲೇಶ್ವರ (ಶಾಸನೋಕ್ತ ಸ್ವಯಂಭೂ ಕಲಿದೇವಸ್ವಾಮಿ) ಗುಡಿ ಕ್ರಿ.ಶ. 1183 ಕ್ಕೆ ಪೂರ್ವದ ಗುಡಿಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದ್ದು, ಇದರ ಪ್ರವೇಶದ್ವಾರ ದಕ್ಷಿಣಾಕ್ಕಿದೆ. ಅಂತರಾಳದ ಬಾಗಿಲವಾಡವನ್ನು ಸುಂದರವಾದ ಮಕರತೋರಣ ಅಲಂಕರಿಸಿದ್ದು, ಜಾಲಂಧ್ರವಿದೆ. ನವರಂಗದಲ್ಲಿ ದಕ್ಷಿಣಾಭಿಮುಖವಾಗಿ ದೇವಕೋಷ್ಠವಿದ್ದು, ಅದರಲ್ಲಿ ಸುಂದರವಾದ ಸರಸ್ವತಿ ಶಿಲ್ಪವಿದೆ. ಮತ್ತೊಂದರಲ್ಲಿ ಚತುರ್ಭುಜ ಮಹಿಷಮರ್ದಿನಿಯ ಮೂರ್ತಿಯಿದ್ದು, ಸ್ವಲ್ಪ ಭಿನ್ನವಾದ ಸಪ್ತಮಾತೃಕಾ ಶಿಲ್ಪವೂ ಇದೆ. ನವರಂಗದ ಪ್ರವೇಶದ್ವಾರ ಪಂಚಶಾಖಾಲಂಕೃತವಾಗಿದ್ದು, ನಡುವೆ ಗಜಲಕ್ಷ್ಮಿಯಿದೆ. ಗುಡಿಯ ಭಿತ್ತಿ ಸರಳವಾಗಿದೆ. ಗರ್ಭಗೃಹಕ್ಕೆ ಕದಂಬನಾಗರ ಶಿಖರವಿದೆ. ಸುತ್ತ ಗಿಡಗಂಟೆ ಬೆಳೆದಿರುವುದರಿಂದ ಗುಡಿ ಶಿಥಿಲಗೊಳ್ಳುವ ಭೀತಿಯಿದೆ. ಈ ಗುಡಿಯ ಬದಿಯಲ್ಲೇ ವಿಶಾಲವಾದ ಪ್ರಾಕಾರದಲ್ಲಿ ಹನುಮಂತನ ಗುಡಿಯಿದೆ. ಈ ಗುಡಿಯ ಆವರಣದಲ್ಲಿ ವಿಜಯನಗರ ಕಾಲದ ಸುಂದರವಾದ ಮಾಸ್ತಿಕಲ್ಲಿದ್ದು ಮಾಸ್ತಿಯ ಹೆರಳು ಬಹಳ ಸುಂದರವಾದ ಮೂಡಿಬಂದಿದೆ. ಯುಗಾದಿಯಾದ ಒಂಭತ್ತನೇ ದಿನಕ್ಕೆ ಹನುಮಂತನ ಜಾತ್ರೆ ಜರುಗುತ್ತದೆ. ಇವುಗಳ ಜೊತೆಗೆ ಊರಲ್ಲಿ ಹನುಮಂತ, ವೀರಭದ್ರ ಮತ್ತು ದ್ಯಾಮವ್ವನ ಗುಡಿಗಳಿವೆ. ಊರಲ್ಲೊಂದು ವಿರಕ್ತಮಠವೂ ಇದೆ. ಮುಸ್ಲಿಮರ ಮಸೀದಿ ಹಾಗೂ ದರ್ಗಾಗಳಿವೆ.

**ಹೆಬ್ಬಳ್ಳಿ :** ಧಾರವಾಡ ತಾಲೂಕಿನ ಹೆಬ್ಬಳ್ಳಿಯು (ಜನಸಂಖ್ಯೆ : 9,840) ಧಾರವಾಡದಿಂದ ಪೂರ್ವಕ್ಕೆ 12 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ ಅನಾದಿ ಬಣಂಜುಪಟ್ಟಣ 'ಹೆರ್ಬ್ಬಳ್ಳಿ' 'ಹೆಬ್ಬಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು

ಬೆಳ್ವೊಲ-300 ಕ್ಕೆ ಸೇರಿತ್ತೆಂದು ತೋರುತ್ತದೆ. ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು ಶಾಸನ ಪಾಠವನ್ನು ಡಾ. ಎಂ.ಎಂ. ಕಲ್ಬುರ್ಗಿಯವರು ಪ್ರಕಟಿಸಿದ್ದಾರೆ. ಇಲ್ಲಿನ ಮೂರು ಶಾಸನಗಳು ಕ್ರಿ.ಶ. 13ನೇ ಶತಮಾನಕ್ಕೆ ಸೇರಿದ್ದಾದರೆ, ಉಳಿದೊಂದು ಸುಮಾರು ಕ್ರಿ.ಶ. 16ನೇ ಶತಮಾನದ್ದಾಗಿದೆ. ಶಂಭುಲಿಂಗ ಗುಡಿ ಮುಂದಿರುವ ಯಾದವ ಸಿಂಘಣನ ಕಾಲಕ್ಕೆ ಸೇರಿದ ಕ್ರಿ.ಶ. 1244 ರ ಶಾಸನ ದೇವಾಲಯಕ್ಕೆ ಐದು ಎತ್ತುಗಳನ್ನು ದಾನಕೊಟ್ಟ ವಿಷಯ ತಿಳಿಸಿದರೆ, ಅಲ್ಲೇ ಇರುವ ಯಾದವ ಕನ್ನರನ ಕಾಲದ ಕ್ರಿ.ಶ. 1248ರ ಮತ್ತೊಂದು ಶಾಸನ ಪಂಡರಂಗೆಯ ಶ್ರೀ ವಿಠಲದೇವರ ಪಾರಿಯ ಶ್ರೀ ಹರಿದಾಸಂಗಳ ದೇವರಿಗೆ ಕಲುವರ ಸಿಂಗಗೌಂಡನು ಭೂಮಿಯನ್ನು ಬಿಟ್ಟ ವಿಷಯವನ್ನು ಹೇಳುತ್ತದೆ. ಅಲ್ಲದೆ ಮಹಾಪ್ರಧಾನಿ ಬಿಚಿಸೆಟ್ಟಿಯ ಅಳಿಯ ಸರ್ವಾಧಿಕಾರಿ ಮಲ್ಲಿಸೆಟ್ಟಿಯರು ಹೆಬ್ಬಳ್ಳಿಯ ಎಂಟು ಹಿಟ್ಟು, ಪಂಚಮಠದವರು, ಬ್ರಹ್ಮಪುರಿಯ ಬ್ರಾಹ್ಮಣರಿಗೆ ವೃತ್ತಿಕೊಟ್ಟ ವಿಷಯ ಕೂಡ ತಿಳಿಸುತ್ತದೆ. ಊರಿಗೆ ಕೋಟೆ ಇತ್ತೆಂದೂ ಈ ಶಾಸನ ಹೇಳುತ್ತದೆ. ಇಲ್ಲಿನ ಮತ್ತೊಂದು ಜೈನದಾನಶಾಸನವಾಗಿದ್ದು ಇದರ ಕಾಲ ಕ್ರಿ.ಶ. 13 ನೇ ಶತಮಾನವಾಗಿದೆ. ಮೇಲಿನ ಶಾಸನದಲ್ಲಿ ಉಕ್ತವಾಗಿರುವ ದೇವಾಲಯ ಬಹುಶಃ ಇಂದಿನ ಶಂಭುಲಿಂಗವೇ ಇರಬೇಕೆಂದು ತೋರುತ್ತದೆ. ಇಂದು ಪೂರ್ಣ ಜೀರ್ಣಗೊಂಡಿರುವ ಈ ಗುಡಿಯು ಗರ್ಭಗೃಹ, ಅಂತರಾಳ ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಸುಮಾರು ಕ್ರಿ.ಶ. 10-11 ನೇ ಶತಮಾನದ ರಚನೆಯಾದ ಇದರ ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಮಕರ ತೋರಣದಿಂದ ಅಲಂಕರಿಸಲ್ಪಟ್ಟಿದೆ. ನವರಂಗದ ಛತ್ತಿನಲ್ಲಿ ಸರಳ ಕಮಲವಿದ್ದು ಚಾಳುಕ್ಯ ಕಂಬಗಳಿವೆ. ಈ ಗುಡಿಗೆ ಪ್ರಾಕಾರವಿದೆ. ಜೀರ್ಣೋದ್ಧಾರದ ಅವಧಿಯಲ್ಲಿ ಗುಡಿಯ ಎತ್ತರವನ್ನು ಹೆಚ್ಚಿಸಿ ದುರಸ್ತಿ ಮಾಡಿದ್ದಾರೆ. ಬಳಿಯಲ್ಲೇ ಹಳೆಯ ಕೋಟೆಯಿತ್ತೆಂದು ಸೂಚಿಸುವ ಕುರುಹುಗಳಿವೆ.

ಊರ ಕೆರೆ ಬಳಿ ಪ್ರಾಚೀನ ಚಂದ್ರಪರಮೇಶ್ವರಿ ಗುಡಿ ಇದೆ. ಇದು ಗುಡಿಯೊಂದರ ನವರಂಗವಾಗಿದ್ದಂತೆ ತೋರುತ್ತದೆ. ಇಂದು ಶಿವಲಿಂಗದ ಪೀಠದ ಮೇಲೆ ಇತ್ತೀಚಿನ ದೇವಿ ಶಿಲ್ಪವಿದೆ. ಒಳಗಿನ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯಲ್ಲಿದ್ದು, ಬಾಗಿಲವಾಡವು ಚತುರ್ಶಾಖಾಲಂಕೃತವಾಗಿದೆ. ಗುಡಿಯ ಹೊರಗೆ ಪದ್ಮಾಸೀನ ರುದ್ರ, ಭಗ್ನವಾಗಿರುವ ತೀರ್ಥಂಕರ ಮೂರ್ತಿ ಇದೆ. ಇವು ಇತ್ತೀಚೆಗೆ ಕೆರೆಯಂಗಳದಲ್ಲಿ ಸಿಕ್ಕಿತೆಂದು ಸ್ಥಳೀಕರು ಹೇಳುತ್ತಾರೆ. ಇಲ್ಲೇ ಸುಮಾರು ಐದೂವರೆ ಕಿ.ಗ್ರಾಂ ತೂಕದ ಬಂಗಾರದ ಲೇಪನವಿರುವ ತೀರ್ಥಂಕರ ಮೂರ್ತಿ ಸಿಕ್ಕಿದ್ದು, ಅದು ಸದ್ಯ ತಾಲೂಕು ಕಛೇರಿಯಲ್ಲಿರುವುದೆಂದು ಸ್ಥಳೀಕರು ಹೇಳುತ್ತಾರೆ. ಇದೇ ಗುಡಿ ಬಳಿ ಸಪ್ತಮಾತೃಕಾ ಪಟ್ಟಿಕೆಯಿದೆ.

ಇವುಗಳೊಂದಿಗೆ ಊರಲ್ಲಿ ವೆಂಕಟೇಶ್ವರ, ವೀರಣ್ಣ, ಹನುಮಂತ, ಪಾಂಡುರಂಗ, ಮೈಲಾರ, ಗ್ರಾಮದೇವರು, ಮಲ್ಲಯ್ಯ, ಬಸವಣ್ಣ, ದ್ಯಾಮವ್ವ, ದುರ್ಗವ್ವ, ಶಂಕರಮ್ಮ ಲೋಕೂರ ದ್ಯಾಮವ್ವ, ಸತ್ಯನಾರಾಯಣ ಹಾಗೂ ಚೆಂಗಲವ್ವನ ಗುಡಿಗಳಿವೆ. ಊರಲ್ಲಿ ಶಿವಾನಂದ ಮಠ, ಚಿದಂಬರ ಮಠ ಹಾಗೂ ಪ್ರಸಿದ್ಧ ಗೊಂದಾವಲಿ ಮಠಗಳಿವೆ. ಮಸೀದಿ ಹಾಗೂ ಮಹಬೂಬು ಸುಬಾನಿಯ ದರ್ಗಾ ಕೂಡ ಊರಲ್ಲಿದ್ದು ಉರುಸು ನಡೆಯುತ್ತದೆ.

**ಹೆಬ್ಬಾಳ** : ಶಿರಹಟ್ಟಿ ತಾಲೂಕಿನ ಹೆಬ್ಬಾಳವು (ಜನಸಂಖ್ಯೆ : 3,215) ಶಿರಹಟ್ಟಿಯಿಂದ 32 ಕಿ.ಮೀ. ದೂರದಲ್ಲಿದ್ದು ಈ ಊರಲ್ಲಿ ಮಾರುತಿ, ರಾಮಲಿಂಗ, ಸೋಮನಾಥ, ದ್ಯಾಮವ್ವ, ಮುಕ್ತೇಶ್ವರ, ಮೌನೀಶ್ವರ, ಬನಶಂಕರಿ ಮುಂತಾದ ದೇವಾಲಯಗಳಿವೆ. ಯಾವ ದೇವಾಲಯವೂ ಮೂಲ ಸ್ವರೂಪದಲ್ಲಿರದೇ ಜೀರ್ಣೋದ್ಧಾರವಾಗಿವೆ ಅಥವಾ ಶಿಥಿಲವಾಗಿವೆ. ಗಂಗ ಮಾರಸಿಂಹನ ಅಜ್ಜಿ ಬುಜ್ಜಬ್ಬರಸಿಯು ಈ ಊರಿನಲ್ಲಿ ಕೆರೆಯನ್ನು ಕಟ್ಟಿಸಿ ತೂಬನ್ನಿಡಿಸಿರುವ ಉಲ್ಲೇಖವಿದ್ದರೂ ಈ ಊರಿನಲ್ಲಿ ಕೆರೆಯಿಲ್ಲ. ಆದರೆ, ಈ ವಿಷಯ ತಿಳಿಸುವ ಶಾಸನವಿದೆ. ಇದೇ ಶಾಸನದಲ್ಲಿ (ರಾಷ್ಟ್ರಕೂಟ ಎರಡನೇಯ ಕೃಷ್ಣ), ಕ್ರಿ.ಶ. 975 ರಲ್ಲಿ ಬುಜ್ಜಬ್ಬರಸಿಯಿಂದ ಶಿವದೇವಾಲಯದ ನಿರ್ಮಾಣ ಹಾಗೂ ಬಿಟ್ಟ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಆ ಕಾಲದ (ಕ್ರಿ.ಶ.10-11 ನೇ ಶತಮಾನದ) ಕಂಬಗಳು ಹಾಗೂ ಇತರ ಅವಶೇಷಗಳು ಊರಿನಲ್ಲಿ ಚದುರಿದಂತೆ ಅಲ್ಲಲ್ಲಿ ಬಿದ್ದಿವೆ. ಊರ ಹೊರಗೆ ಬನಶಂಕರಿ ದೇವಾಲಯವಿದ್ದು ಸು. ನಾಲ್ಕು ಅಡಿ ಎತ್ತರವಿರುವ ಸ್ಥಾನಿಕ ವಿಗ್ರಹವಿದ್ದು ಶೂಲ, ಖಡ್ಗ, ಡಮರು ಮತ್ತು ಕಪಾಲಗಳನ್ನು ನಾಲ್ಕು ಹಸ್ತಗಳಲ್ಲಿ ಹೊಂದಿದೆ. ಇದರ ಪೀಠದಲ್ಲಿ ವರಾಹ, ಶವ, ಚೇಳುಗಳನ್ನು ಬಿಡಿಸಲಾಗಿದೆ. ಊರಿನಲ್ಲಿ ಶಿವಯೋಗಿ ವೀರಶೈವ ಮಠ ಮತ್ತು ಸಿದ್ಧರಾಮೇಶ್ವರರ ಸಮಾಧಿಗಳಿವೆ. ಶಿವಯೋಗೀಶ್ವರ ಮಠವು ಊರಹೊರಗಿದ್ದು ಅದರ ಬಾಗಿಲುವಾಡ ಮತ್ತು ದ್ಯಾಮವ್ವನ ಗುಡಿಯ ಬಾಗಿಲುಗಳನ್ನು ಸ್ಥಳೀಯವಾಗಿ ಮಾಡಿದ್ದ ಬಹು ಸುಂದರವಾಗಿವೆ. ಈ ಊರಲ್ಲಿ ಅನೇಕ ಪ್ರಸಿದ್ಧ ಶಿಲ್ಪಗಳನ್ನು ತಯಾರಿಸಲಾಗುತ್ತದೆ ಹಾಗೂ ಬಹುದೂರದಿಂದ ಶಿಲ್ಪಗಳಿಗಾಗಿ ಬೇಡಿಕೆ ಸಲ್ಲಿಸುತ್ತಾರೆ. ಕಲ್ಲಿನ ಬಾಗಿಲುವಾಡಗಳು, ಮರದ ಸುಂದರ ಕುಸುರಿ ಕೆತ್ತನೆಯಿರುವ ಮರದ

ಬಾಗಿಲುವಾಡಗಳು ಹಾಗೂ ಬಾಗಿಲುಗಳನ್ನು, ಪ್ರತಿಮೆಗಳನ್ನು ಹಾಗೂ ದೇವರ ವಾಹನಗಳನ್ನೂ ತಯಾರಿಸುವ ವಿಶೇಷ ಕರಕುಶಲ ಕಲೆ ಈ ಊರಿನಲ್ಲಿ ಈಗಲೂ ಜಾರಿಯಲ್ಲಿವೆ.

**ಹೆರೂರು :** ಹಾನಗಲ್ ತಾಲೂಕಿನ ಹೆರೂರು (ಜನಸಂಖ್ಯೆ : 2,366) ಹಾನಗಲ್‌ನಿಂದ ಆಗ್ನೇಯಕ್ಕೆ ಸುಮಾರು 25 ಕಿ.ಮೀ. ದೂರದಲ್ಲಿದೆ. ಈ ಊರನ್ನು ತಲುಪಲು ಹಾವೇರಿಯಿಂದ ಸಾಕಷ್ಟು ವಾಹನ ಸೌಲಭ್ಯವಿದೆ. ಬಾಸವೂರು-140 ಕ್ಕೆ ಸೇರಿದ್ದ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಕಲ್ಯಾಣದ ಚಾಳುಕ್ಯ, ಹೊಯ್ಸಳ, ಯಾದವ ಹಾಗೂ ವಿಜಯನಗರ ಕಾಲಕ್ಕೆ ಸೇರಿದ ಈ ಶಾಸನಗಳಲ್ಲಿ ಮೂರು ವೀರಗಲ್ಲು ಶಾಸನಗಳಾಗಿದ್ದು, ಉಳಿದೊಂದು ಮಾಸ್ತಿಶಾಸನವಾಗಿದೆ. ನೆರೆಯ ಗ್ರಾಮ ಹಿರೇಹುಲ್ಯಾದಲ್ಲಿ ಲಭಿಸಿರುವ ರಾಷ್ಟ್ರಕೂಟ ಶಾಸನವೊಂದರಲ್ಲಿ ಹೆರೂರನ್ನು ಪೆರೂರು ಎಂದು ಕರೆದಿರುವುದರಿಂದ ಹೆರೂರಿನ ಪ್ರಾಚೀನತೆಯನ್ನು ರಾಷ್ಟ್ರಕೂಟರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ.

ಊರ ಕೆರೆ ದಂಡೆ ಮೇಲೆ ನಾಲ್ಕು ವೀರಗಲ್ಲುಗಳಿದ್ದು ಅವುಗಳಲ್ಲೊಂದು ಹೊಯ್ಸಳ ಇಮ್ಮಡಿ ಬಲ್ಲಾಳನ ಆಳ್ವಿಕೆಯ 26 ನೇ ವರ್ಷದಾಗಿದ್ದು ಚಲಂಕದಸೆಟ್ಟಿ ನಿಧನಗೊಂಡ ವಿಷಯವನ್ನು ತಿಳಿಸುತ್ತದೆ. ಕೆರೆಯ ದಂಡೆಯ ಮೇಲಿದ್ದ ಈಶ್ವರ ಗುಡಿ ಇಂದು ಶಿಥಿಲವಾಗಿ ಕೇವಲ ಲಿಂಗ, ನಂದಿಯಷ್ಟೆ ಉಳಿದಿದೆ. ಖಾಸಗಿ ಹಿತ್ತಿಲಲ್ಲಿರುವ ಹಾಳಾದ ನಿಷಿಧಿ ಕಲ್ಲುಗಳನ್ನು ಗಮನಿಸಿದರೆ, ಇಲ್ಲಿ ಇನ್ನೂ ಅಧಿಕ ಪ್ರಮಾಣದಲ್ಲಿ ಜೈನಾವಶೇಷಗಳು ಲಭಿಸುವಂತೆ ತೋರುತ್ತದೆ.

ಊರಲ್ಲಿ ಇತ್ತೀಚಿನ ಹನುಮಂತ, ಉಡಚವ್ವ, ಬಸವಣ್ಣ ಹಾಗೂ ದ್ಯಾಮವ್ವ ಗುಡಿಗಳಿವೆ. ದ್ಯಾಮವ್ವನ ಗುಡಿಯಲ್ಲಿ ಷೋಡಶಭುಜದ ದ್ಯಾಮವ್ವನ ಕಟ್ಟಿಗೆ ಮೂರ್ತಿಯಿದೆ. ಊರಲ್ಲಿ ಪೀಠಸ್ಥ ಚತುರ್ಮುಖ ಬ್ರಹ್ಮ ಶಿಲ್ಪವಿದ್ದು ಇದನ್ನು 'ಗೋಲಕವ್ವ' ಎಂದು ದೀಪಾವಳಿಯಲ್ಲಿ (ಹಟ್ಟಿ ಅಮಾವಾಸ್ಯೆ) ಆರಾಧಿಸುವ ಸಂಪ್ರದಾಯವಿದೆ. ನೆರೆಯ ಗ್ರಾಮವಾದ ಕಲಕೇರಿ, ಹಿರೇಹುಲ್ಯಾಳ, ಕನ್ನೇಶ್ವರಗಳು ಹಲವಾರು ಪ್ರಾಚೀನ ದೇವಾಲಯಗಳನ್ನು ಹೊಂದಿದ್ದು, ನೋಡಬೇಕಾದ ಚಾರಿತ್ರಿಕ ಸ್ಥಳಗಳಾಗಿವೆ.

**ಹೊಂಬಳ :** ಗದಗು ತಾಲೂಕಿನ ಊರಾದ ಹೊಂಬಳವು ಗದುಗಿನಿಂದ 11 ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಪೊಂಬುಳ್ಳ', 'ಪೊಂಬೊಳಲು' ಎಂದು ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಬೆಳ್ವೊಲ-300 ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ಒಂಭತ್ತು ಶಾಸನಗಳು ವರದಿಯಾಗಿವೆ. 120ಮಹಾಜನರನ್ನು ಒಳಗೊಂಡ ಮಹಾ ಅಗ್ರಹಾರವಾಗಿದ್ದ ಇದು ವಿದ್ಯಾಕೇಂದ್ರವೂ ಆಗಿತ್ತು. ಶಂಕರಲಿಂಗ ದೇವಾಲಯದ ಮುಂದಿರುವ ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲದ ಕ್ರಿ.ಶ. 1049 ರ ಶಾಸನ ಕುಮಾರ ಸೋಮೇಶ್ವರ (ಎರಡನೇಯ ಸೋಮೇಶ್ವರ)ನು ಬೆಳ್ವೊಲ-300 ಹಾಗೂ ಪುಲಿಗೆರೆ-300 ಅನ್ನು ಆಳುತ್ತಿದ್ದಾಗ ಜಕ್ಕಿಮಯ್ಯನು ಆಳಿದಿದ್ದ ವಿಷ್ಣು ದೇವಾಲಯವನ್ನು ಜೀರ್ಣೋದ್ಧಾರಮಾಡಿ 24 ಮತ್ತರು ಭೂಮಿಯನ್ನು ದಾನ ಬಿಟ್ಟರೆ, ನಾಗವರ್ಮಯ್ಯನು ವಿಷ್ಣುದೇವಾಲಯಕ್ಕೆ ಸೇರಿದಂತೆ ಸತ್ರ ನಿರ್ಮಿಸಿ ಅದಕ್ಕೆ ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ನಾಲ್ಕನೆಯ ಸೋಮೇಶ್ವರನ ಕಾಲದ ಕ್ರಿ.ಶ. 1189 ರ ಶಾಸನ ರುದ್ರಶಕ್ತಿ ದೇವರು ಹರಲಿಂಗವನ್ನು ಸ್ಥಾಪಿಸಿ ಕುಮಾರ ಬೊಂತೇಶ್ವರ ಗುಡಿಯನ್ನು ನಿರ್ಮಿಸಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಏಳನೇಯ ಶತಮಾನದ ವೀರಗಲ್ಲು ಶಾಸನ ಮಾಗುಡ ಮಲ್ಲಯ್ಯ ನಾಯಕನ ವೀರಮರಣವನ್ನು ಹೇಳಿದರೆ, ಮತ್ತೊಂದು 120 ಮಹಾಜನರ ಬಗ್ಗೆ ಉಲ್ಲೇಖಿಸುತ್ತದೆ. ಹಡಪದವರ ಓಣಿಯಲ್ಲಿರುವ ವಿಜಯನಗರದ ಸದಾಶಿವರಾಯನ ಕಾಲದ ಕ್ರಿ.ಶ. 1547 ರ ಶಾಸನ ಮಲ್ಲೋಜ ಹಾಗೂ ಚಂದೋಜನ ಮನವಿಯಂತೆ ತೊರಗಲೆ ಸೀಮೆಯಲ್ಲಿ ಹಡಪಿಗರ ಸುಂಕ ಮನ್ನಾ ಮಾಡಿದ ವಿಷಯವನ್ನು ತಿಳಿಸುತ್ತವೆ. ಮೇಲಿನ ಶಾಸನಗಳಿಂದ ಇದು ಕಾಳಾಮುಖ ಪಂಥರ ಪ್ರಮುಖ ಕಾರ್ಯಕೇಂದ್ರವೆಂಬ ಅಂಶ ಸ್ಪಷ್ಟವಾಗುತ್ತದೆ. ಮೇಲಿನ ಶಾಸನಗಳಿಂದ ಹಿಂದೆ ಇಲ್ಲಿ ವಿಷ್ಣು ಹಾಗೂ ಕುಮಾರಬೊಂತೇಶ್ವರ ಗುಡಿಗಳಿದ್ದ ಅಂಶ ಗೊತ್ತಾದ್ದರೂ, ಇಂದು ಊರಲ್ಲಿರುವ ಶಂಕರಗುಡಿ ಆವರಣದಲ್ಲೇ ಪ್ರಾಚೀನ ಅವಶೇಷಗಳು ವ್ಯವಸ್ಥಿತವಾಗಿ ಇಡಲ್ಪಟ್ಟಿವೆ.

ಇಂದಿನ ಶಂಕರಗುಡಿ ಬಹುಶಃ ಶಾಸನೋಕ್ತ ಕುಮಾರ ಬೊಂತೇಶ್ವರ ಗುಡಿಯಾಗಿದ್ದಿರಬೇಕೆಂದೆನಿಸುತ್ತದೆ. ವಿಶಾಲವಾದ ಪ್ರಾಕಾರದಲ್ಲಿ ಎತ್ತರವಾದ ಸ್ಥಳದಲ್ಲಿ ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ನವರಂಗ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು ಇದರ ಬಾಗಿಲವಾಡ ಆಕರ್ಷಕವಾಗಿದೆ. ನವರಂಗದಲ್ಲಿ ಐದು ದೇವಕೋಷ್ಠಗಳಿದ್ದು ಇವುಗಳಲ್ಲಿ ಕ್ರಮವಾಗಿ ಉಮಾಮಹೇಶ್ವರ, ಅನಂತಪದ್ಮನಾಭ, ಮಹಿಷಮರ್ದಿನಿ ಹಾಗೂ ಗಣಪತಿಯ (ಎರಡು) ಶಿಲ್ಪಗಳಿವೆ. ಈ

ಗುಡಿಯ ಆವರಣದಲ್ಲಿ ಮಧ್ಯಮ ಪ್ರಮಾಣದ ನಾಲ್ಕು ಲಿಂಗಗಳು, ನಂದಿ, ಸಪ್ತಮಾತೃಕಾ ಪಟ್ಟಿಕೆ, ಗಜಲಕ್ಷ್ಮಿ ಹಾಗೂ ವೀರಗಲ್ಲುಗಳಿವೆ. ಪ್ರಾಕಾರದ ಹಿಂಬದಿಯ ದ್ವಾರದ ಬಳಿ ಸುಮಾರು ಕ್ರಿ.ಶ. 10-11ನೇ ಶತಮಾನದ ರಾಷ್ಟ್ರಕೂಟ ಪ್ರಭಾವವಿರುವ ಕಂಬಗಳು ಹಾಗು ಕಿರಣಸ್ತಂಭಗಳಿವೆ. ಸುಮಾರು 1933ರಲ್ಲಿ ಪೂರ್ಣ ಜೀರ್ಣೋದ್ಧಾರಗೊಂಡಿರುವ ಈ ಗುಡಿಯನ್ನು ಎತ್ತರವಾದ ಅಷ್ಟಕೋನಾಕಾರದ ಸೋಪಾನ ಶಿಖರ ಅಲಂಕರಿಸಿದ್ದು ಶಿಖರದ ನಾಲ್ಕು ಮೂಲೆಯಲ್ಲೂ ಅಷ್ಟಕೋನಾಕಾರದ ಕಿರುಶಿಖರಗಳಿವೆ. ಗುಡಿಯ ಮುಂಬದಿಯಲ್ಲಿ ರಾಷ್ಟ್ರಕೂಟರ ಕಾಲದ (ಕ್ರಿ.ಶ.10 ನೇ ಶತಮಾನ) ವೀರಗಲ್ಲೊಂದಿದೆ.

ಇವುಗಳ ಜೊತೆಗೆ ಊರಲ್ಲಿ ಯೋಗನಾರಾಯಣ (ಕಲ್ಲೇರಾಯ ಮಾರುತಿ), ಬಸವಣ್ಣ, ವೀರಭದ್ರ, ಹನುಮಂತ, ಚೌಡೇಶ್ವರಿ, ದುರ್ಗಿ, ಗಣಪತಿ ಮುಂತಾದ ದೇವಾಲಯಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಹೊಂಬಳಿ :** ಹಾನಗಲ್ ತಾಲೂಕಿನ ಹೊಂಬಳಿ (ಜನಸಂಖ್ಯೆ : 413) ಹಾನಗಲ್‌ನಿಂದ ಈಶಾನ್ಯಕ್ಕೆ 24 ಕಿ.ಮೀ. ದೂರದಲ್ಲಿದೆ. ಧರ್ಮಾನದಿ ಬಲದಂಡೆ ಮೇಲಿರುವ ಈ ಊರು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾದ ಊರೆಂಬ ಅಂಶವನ್ನು ರಾಷ್ಟ್ರಕೂಟ ಚಕ್ರವರ್ತಿ ಧ್ರುವನ ಕಾಲದ ವೀರಗಲ್ಲು ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿ ನಾಲ್ಕು ಶಾಸನಗಳು ಲಭಿಸಿದ್ದು, ರಾಷ್ಟ್ರಕೂಟ ಮಾಂಡಳಿಕ ಮಾರಕ್ಕರಸ ಬನವಾಸಿ-12,000ವನ್ನಾಳುತ್ತಿದ್ದಾಗ, ಬಾದುಗಿಲ್ಲಿಗಾಮುಂಡನ ವೀರಮರಣವನ್ನು ಶಾಸನವೊಂದು ತಿಳಿಸಿದರೆ, ಸುಮಾರು ಕ್ರಿ.ಶ. 15 ನೇ ಶತಮಾನದ ಮತ್ತೊಂದು ಶಾಸನ ಸಹವಾಸಿ ಹೊನ್ನರಸನು ರಾಮೇಶ್ವರ ದೇವಾಲಯ ನಿರ್ಮಿಸಿ ದೇವರನ್ನು ಪುನರ್ ಪ್ರತಿಷ್ಠೆ ಮಾಡಿದ ಅಂಶವನ್ನು ತಿಳಿಸುತ್ತದೆ. ಉಳಿದೆರಡು ಶಾಸನಗಳು, ರಾಮೇಶ್ವರ ಗುಡಿಯ ಭೋಗಮಂಟಪ ನಿರ್ಮಾಣ ಹಾಗೂ ಅಣಿಮೋಂಟಿಯ ವೀರಮರಣದ ಬಗ್ಗೆ ತಿಳಿಸುತ್ತದೆ.

ಊರ ಹೊರಗಡೆ ಎತ್ತರವಾದ ಸ್ಥಳದಲ್ಲಿ ಮೇಲೆ ಶಾಸನದಲ್ಲಿ ಉಕ್ತವಾಗಿರುವ ರಾಮೇಶ್ವರ (ಈಗಿನ ಬಸವಣ್ಣ) ದೇವಾಲಯವಿದೆ. ಕಲ್ಯಾಣದ ಚಾಳುಕ್ಯರ ಕಾಲದ ಗುಡಿಯಾಗಿದ್ದಿರಬಹುದಾದ ಇದು ಕ್ರಿ.ಶ. 15 ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡಿರುವ ಅಂಶವನ್ನು ಈಗಾಗಲೇ ನೋಡಿದ್ದೇವೆ. ಈ ಗುಡಿ ವಿಶಾಲವಾದ ಸಭಾಮಂಟಪವನ್ನು ಪೂರ್ವ ಪಶ್ಚಿಮಾಭಿಮುಖವಾಗಿ ಎರಡು ಗರ್ಭಗೃಹಗಳನ್ನು ಹೊಂದಿದ್ದು ಪ್ರಧಾನ ಗರ್ಭಗೃಹಕ್ಕೆ ತೆರೆದ ಅಂತರಾಳವಿದೆ. ಈ ಗುಡಿಯ ದೇವಕೋಷ್ಠವೊಂದರಲ್ಲಿ ವೀರಭದ್ರನ ಮೂರ್ತಿಯಿದೆ. ಈ ಗುಡಿಯ ಆವರಣದಲ್ಲಿ ಸುಮಾರು ಐದು ಅಡಿ ಎತ್ತರದ ಸುಂದರವಾದ ಆದಿಶಕ್ತಿ, ವಿಷ್ಣು, ಸೂರ್ಯ ಹಾಗೂ ಸರಸ್ವತಿಯ ಶಿಲ್ಪಗಳಿವೆ. ಆದಿಶಕ್ತಿ ಶಿಲ್ಪ ಬಹಳ ವಿಶಿಷ್ಟವಾಗಿದ್ದು ಪೀಠದಲ್ಲಿ ಸರಸ್ವತಿ, ಲಕ್ಷ್ಮಿ ಮತ್ತು ಮಹೇಶ್ವರಿಯರನ್ನು ಅವರವರ ವಾಹನದೊಂದಿಗೆ ಕೆತ್ತಿದ್ದಾರೆ. ಈ ಎಲ್ಲಾ ಮೂರ್ತಿಗಳು ಮುಕ್ಕಾಗಿವೆ. ಊರ ಹೊರಗಡೆ ಬಯಲಲ್ಲಿ 15 ಅಡಿ ಎತ್ತರದ ಆಸೀನ ಚತುರ್ಬಾಹು ಗಣಪತಿ ಮೂರ್ತಿಯಿದೆ. ವಿಜಯನಗರ ಕಾಲದ್ದಾಗಿರುವ ಈ ಸುಂದರ ಶಿಲ್ಪದ ಮುಂಭಾಗ ಪೂರ್ಣ ಭಗ್ನವಾಗಿದೆ.

**ಹೊನ್ನತ್ತಿ :** ರಾಣೆಬೆನ್ನೂರು ತಾಲೂಕಿನ ಹೊನ್ನತ್ತಿಯು (ಜನಸಂಖ್ಯೆ : 2,730) ರಾಣೆಬೆನ್ನೂರಿನಿಂದ ಉತ್ತರಕ್ಕೆ 14 ಕಿ.ಮೀ ದೂರದಲ್ಲಿದೆ. ಈ ಊರು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನದ್ದಾಗಿದೆ. ಶಾಸನಗಳಲ್ಲಿ 'ಪುನ್ನವತ್ತಿ', 'ಅಗ್ರಹಾರ ಹೊನ್ನವರ್ತಿ', 'ಪೊನ್ನವತ್ತಿ', 'ಪೊನ್ನವರ್ತಿ', 'ಹೋನವತ್ತಿ' ಎಂದೆಲ್ಲಾ ಉಲ್ಲೇಖಗೊಂಡಿರುವ 'ಹೊನ್ನತ್ತಿ'ಯ ಪ್ರಾಚೀನ ರೂಪ 'ಪುನ್ನವನ್ತಿ'. ಪೊನ್ನವರ್ತಿ ಎಂದರೆ ಹೊನ್ನಿನ ಚಿಲುಮೆ ಎಂದು ಅರ್ಥವಿದ್ದು ಒರತೆಯಿಂದಾಗಿ ಈ ಹೆಸರು ಬಂದಿರುವಂತೆ ತೋರುತ್ತದೆ. 12 ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದ ಈ ಊರಿನಲ್ಲಿ ಐದು ಶಾಸನಗಳಿವೆ. 200 ಮಹಾಜನರಿದ್ದ ಅಗ್ರಹಾರವು ಆಗಿತ್ತೆಂದು ಕ್ರಿ.ಶ. 1124 ರ ಶಾಸನದಿಂದ ತಿಳಿದುಬರುತ್ತದೆ. ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಕಾಲದ ತೇದಿರಹಿತ ಶಾಸನವು ಲೋಕಟೆ ಬನವಾಸಿಯನ್ನಾಳುತ್ತಿದ್ದಾಗ ಅವನ ಮಗ ಕಲಿವಿಟ್ಟನು ಪುನ್ನವಂತ್ತಿ-12ಅನ್ನು ಆಳುತ್ತಿರಲು ಅಧಿಕಾರಿಗಳು ಭೂದಾನ ಮಾಡಿದ ವಿಷಯವನ್ನು ತಿಳಿಸಿದರೆ, ಆರ್ಮಡಿ ವಿಕ್ರಮಾದಿತ್ಯನ (ಕ್ರಿ.ಶ. 1124) ಶಾಸನದಿಂದ ಹೊನ್ನವರ್ತಿಯ ಊರೊಡೆಯನಾಗಿದ್ದ ವಿಕ್ರಮಾಂಕದಂಡಾಧಿಪ ಚೋಮದೇವನ ಪ್ರಧಾನರಾದ ದೇಕಣ ಮತ್ತು ನಾಕಣ್ಣ ಸೋದರರು ಚಾಮೇಶ್ವರ ದೇವರ ಗುಡಿ ನಿರ್ಮಿಸಿ ಸ್ಥಾನಚಾರ್ಯ ಬ್ರಹ್ಮರಾಶಿಜೀಯರಿಗೆ ಕಬ್ಬವಿಗಳೆಯಲ್ಲಿ ದಾನಮಾಡಿದ ಭೂಮಿಯ ಗಡಿ, ಕಲಿದೇವರು, ಕೇಶವ, ಹಾಗೂ ಬಾಣೇಶ್ವರ ದೇವರ ಹೊಲಗಳಿಗೆ ಹತ್ತಿ ಇದ್ದವೆಂದು ಹೇಳುತ್ತದೆ. ಕ್ರಿ.ಶ. 1190 ರ ಇಮ್ಮಡಿ ಬಲ್ಲಾಳನ ಕಾಲದ ಒಂದು ಶಾಸನ ಹೊಯ್ಸಳ ಅಧಿಕಾರಿ ದಾವಣ್ಣ ಹೊಂನವತ್ತಿಯ ಕೇಶವ ದೇವರಿಗೆ ನಂದಾದೀಪಕ್ಕೆ ಗಾಣವೊಂದನ್ನು ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1187 ರ ಶಾಸನದಿಂದ ಸರ್ವಾಧಿಕಾರಿ ಬೀಚಿಸೆಟ್ಟಿಯ ಅಪೇಕ್ಷೆಯಂತೆ

ಪ್ರಧಾನ ತಿಪ್ಪರಸ ಚಾಮೇಶ್ವರದ ಬಳಿ ರಾಜೇಶ್ವರ ದೇವರ ಪ್ರತಿಷ್ಠೆ ಮಾಡಿ ಗಂಗನ ನಾಲ್ಕು ಮತ್ತರು ಭೂಮಿ ಹಾಗೂ ಹಲವಾರು ದಾನಗಳನ್ನೂ ಮಾಡಿದ ವಿಷಯ ತಿಳಿದುಬರುತ್ತದೆ. ಕೇಶವನ ಗುಡಿಯನ್ನು ಶಾಸನದಲ್ಲಿ ಕೀರ್ತಿನಾರಾಯಣ ಗುಡಿಯೆಂದು ಕರೆದಿದೆ.

ಹೊನ್ನತ್ತಿಯಲ್ಲಿಂದು ಹೊನ್ನಮ್ಮನ ಗುಡಿಯಿರುವ ಪ್ರದೇಶವನ್ನು ಗುಡಿ ಹೊನ್ನತ್ತಿ ಎಂದೂ ಪ್ರಾಚೀನ ಕಾಲದ ಗುಡಿಗಳಿರುವ ಸ್ಥಳವನ್ನು ಹಳೆಹೊನಿನತ್ತಿ ಎಂದು ಸ್ಥಳೀಕರು ಕರೆಯುತ್ತಾರೆ. ಗುಡಿ ಹೊನ್ನತ್ತಿಯ ಹೊನ್ನಮ್ಮ ಇಂದೂ ಪೂಜಿಸಲ್ಪಡುತ್ತಿರುವ ದೇವತೆಯಾಗಿದ್ದು, ಇದರಲ್ಲಿ ಗರ್ಭಗೃಹ, ನವರಂಗ, ಹಾಗೂ ಮುಖಮಂಟಪಗಳಿದ್ದು, ಗರ್ಭಗೃಹದಲ್ಲಿ ಹೊನ್ನಮ್ಮನ ಮೂರ್ತಿಯಿದೆ. ಬಾಗಿಲವಾಡ ಸುಂದರವಾಗಿದೆ. ನವರಂಗದಲ್ಲಿನ ಎರಡು ದೇವಕೋಷ್ಠಗಳಲ್ಲಿ ಭೈರವ ಹಾಗೂ ಕಾರ್ತಿಕೇಯನ ಶಿಲ್ಪಗಳಿವೆ. ಗುಡಿಯ ಆವರಣದಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಈ ಗುಡಿಯ ಹಿಂಬದಿಯಲ್ಲಿ ಸ್ವಯಂಭು ಈಶ್ವರ ಗುಡಿಯಿದ್ದು, ಪೂರ್ಣ ಹೊಸರಚನೆಯಾಗಿ ಮಾರ್ಪಟ್ಟಿದೆ. ಇನ್ನೊಂದು ಬದಿಯಲ್ಲಿ ಭರಮಪ್ಪನ ಗುಡಿ ಎಂದಿರುವ ಸ್ಥಳದಲ್ಲಿ ಭೈರವ ದುರ್ಗಿಯರ ಶಿಲ್ಪವಿದೆ. ಬಳಿಯಲ್ಲೇ ಕುಮಾರ ರಾಮನ(?) ಶಿಲ್ಪವಿದೆ. ಈ ಗುಡಿ ಕಲ್ಯಾಣದ ಚಾಳುಕ್ಯ ಕಾಲದ್ದೆಂದು ಊಹಿಸಬಹುದಾಗಿದೆ. ಗುಡಿಯ ಹಿಂಬದಿಯಲ್ಲಿರುವ ಕೆರೆಯ ದಂಡೆಗೆ ಸೇರಿದಂತೆ ತಗ್ಗಾದ ಸ್ಥಳದಲ್ಲಿ ಈಶ್ವರ ಗುಡಿಯಿದ್ದು, ಗರ್ಭಗೃಹ, ಅರ್ಧಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಬಾಗಿಲುವಾಡ ಆಕರ್ಷಕವಾಗಿದೆ. ಅರ್ಧಮಂಟಪದಲ್ಲಿ ಸಪ್ತಮಾತೃಕಾ, ವಿಷ್ಣು ಹಾಗೂ ನಾಗ-ನಾಗಿಣಿ ಶಿಲ್ಪಗಳಿವೆ. ಇವುಗಳಲ್ಲಿ ನಾಲ್ಕಡಿ ಎತ್ತರದ ಚತುರ್ಭುಜ ವಿಷ್ಣು ಶಿಲ್ಪ ಸುಂದರವಾಗಿದೆ. ಸುಮಾರು ಕ್ರಿ.ಶ. 950 ಕ್ಕೆ ಸೇರಿದ ಈ ಗುಡಿಯನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, ಇದೊಂದು ರಾಷ್ಟ್ರಕೂಟ ರಚನೆಯಾಗಿದೆ. ಕೆರೆ ಏರಿ ಕೆಳಗೆ ಬಾರಕೇರ ಹೊಲದಲ್ಲಿ ನಾಲ್ಕು ಅಡಿ ಎತ್ತರದ ಸುಂದರವಾದ ಆದಿತ್ಯನ ಶಿಲ್ಪವಿದೆ. ಗುಡಿ ಹೊನ್ನತ್ತಿಯಿಂದ ಗುತ್ತಲ ರಸ್ತೆಯಲ್ಲಿ ಸುಮಾರು ಒಂದು ಕಿಮೀ ಮುಂದಕ್ಕೆ ಹೋದರೆ ಹಳೆಹೊನ್ನತ್ತಿ ಸಿಗುತ್ತದೆ. ಊರನ್ನು ಪ್ರವೇಶಿಸುತ್ತಿದ್ದಂತೆ ಕಾಣುವ ಗುಡಿಯೇ ವೀರಭದ್ರನ ಗುಡಿಯಾಗಿದ್ದು, ನಿರಾಡಂಬರವಾಗಿದೆ; ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲುವಾಡಗಳು ಸರಳವಾಗಿವೆ. ನವರಂಗದ ಬಲಭಾಗದಲ್ಲಿ ಸುಮಾರು ಆರು ಅಡಿ ಎತ್ತರದ ವೀರಭದ್ರನ ಮೂರ್ತಿ ಇದ್ದು ಇದು ಚಾಳುಕ್ಯ ಶೈಲಿಯದು. ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವನ್ನು ಈ ಗುಡಿಯು ಹೊಂದಿದೆ. ಈ ಗುಡಿಯ ರಚನೆಯನ್ನು ನೋಡಿದರೆ ಮೂಲತಃ ಇದು ಜೈನ ಬಸದಿಯಾಗಿದ್ದಿರಬೇಕೆಂದು ತೋರುತ್ತದೆ.

ಊರ ಒಳಗೆ ವೀರನಾರಾಯಣ ಗುಡಿಯಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಮುಂಭಾಗ ಹಾಳಾಗಿದ್ದು, ದುರಸ್ತಿಯಾಗಿದೆ. ಗರ್ಭಗೃಹದಲ್ಲಿ 4.5 ಅಡಿಯ ಕೇಶವನ ಮೂರ್ತಿ ಗರುಡ ಪೀಠದ ಮೇಲೆ ವಿರಾಜಿಸುತ್ತಿದ್ದು, ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಗರ್ಭಗೃಹ ಅಂತರಾಳದ ಬಾಗಿಲವಾಡಗಳು ಸರಳವಾಗಿದ್ದು ನಡುವೆ ಗಜಲಕ್ಷ್ಮಿ ಇದ್ದು ನವರಂಗದಲ್ಲಿ ಸುಂದರವಾದ ಅನಂತಪದ್ಮನಾಭನ ಶಿಲ್ಪವಿದೆ. ಇದರ ಪ್ರಭಾವಳಿಯಲ್ಲೂ ದಶಾವತಾರ ಕೆತ್ತನೆಯಿದ್ದು ವಿಷ್ಣುವಿನ ನಾಭಿಯಿಂದ ಹೊರಟ ಪದ್ಮದಲ್ಲಿ ಬ್ರಹ್ಮ ಸೃಷ್ಟಿಯ ಕೆತ್ತನೆ ಮನಮೋಹಕವಾಗಿದೆ. ಈ ಗುಡಿಯ ಹೊರಬದಿಯಲ್ಲಿ ಕ್ರಿ.ಶ. 13 ನೇ ಶತಮಾನದ ನಿಷಿಧಿ ಶಾಸನ ಶಿಲ್ಪವಿದೆ.

ಊರ ಹೊರಗೆ ಗುತ್ತಲ ರಸ್ತೆಯಲ್ಲಿ ಮತ್ತೆ ಅರ್ಧ ಕಿಮೀ ಮುಂದೆ ಹೋದರೆ ರಸ್ತೆಯ ಎಡಬದಿಯಲ್ಲಿ ಸ್ವಲ್ಪ ಒಳಗೆ ಸುಮಾರು ಕ್ರಿ.ಶ. 11 ನೇ ಶತಮಾನದ ಸುಂದರವಾದ ತ್ರಿಕೂಟ ದೇವಾಲಯವಿದೆ. ಈ ಗುಡಿ ಬಹುಶಃ ಕ್ರಿ.ಶ. 1134 ರ ಶಾಸನದಲ್ಲಿ ಉಕ್ತವಾಗಿರುವ ಕಲಿದೇವ-ಕೇಶವದೇವರ ಗುಡಿಯಾಗಿರಬೇಕು. ಎಲ್ಲಾ ಮೂರು ಗರ್ಭಗೃಹಗಳಿಗೂ ಅಂತರಾಳವಿದ್ದು ಎಲ್ಲಕ್ಕೂ ಸೇರಿದ್ದಂತೆ ಒಂದೇ ನವರಂಗವಿದೆ. ಎಲ್ಲಾ ಗರ್ಭಗೃಹಗಳ ಬಾಗಿಲವಾಡ ಪಂಚಶಾಖಾಲಂಕೃತಗಳಿಂದ ಅಲಂಕೃತವಾಗಿದ್ದು ನಡುವೆ ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿವೆ. ಅಪರೂಪಕ್ಕೆಂಬಂತೆ ದಕ್ಷಿಣದ ಅಂತರಾಳದ ಲಲಾಟದಲ್ಲಿ ಲಕ್ಷ್ಮಿಯೊಂದಿಗೆ ಪ್ರಾಣಿಯೊಂದನ್ನು ಕೆತ್ತಿದ್ದಾರೆ. ಉತ್ತರದ ದಕ್ಷಿಣದ ಗರ್ಭಗೃಹಗಳು ಬರಿದಾಗಿವೆ. ಅಂತರಾಳದ ಬಾಗಿಲವಾಡದ ಇಕ್ಕೆಲಗಳಲ್ಲಿ ಸುಂದರವಾದ ಜಾಲಂಧ್ರಗಳಿವೆ. ನವರಂಗದ ಒಂದು ಕಂಬದ ಮೇಲೆ ದೇವನಾಗರಿ ಲಿಪಿಯಲ್ಲಿ ಹರಿಹರರನ್ನು ಸ್ತುತಿಸುವ ಕಿರುಶಾಸನವಿದೆ. ಈ ಗುಡಿಯ ಶಿಖರಗಳು ಹಾಳಾಗಿವೆ. ಈ ಗುಡಿಯ ಮುಂದೆ ಹಾಳಾದ ಬೃಹತ್ ಪ್ರಮಾಣದ ವೀರಗಲ್ಲು ಶಾಸನವಿದೆ.

ಈ ಗುಡಿಗೆ ಸಮೀಪದಲ್ಲೇ ರಸ್ತೆಯ ಬಲಬದಿಯಲ್ಲಿ ರಾಮಲಿಂಗ ದೇವರ ಗುಡಿಯಿದೆ. ಇದೂ ಕೂಡ ತ್ರಿಕೂಟವಾಗಿದ್ದು ಪ್ರಧಾನ ಗರ್ಭಗೃಹವಷ್ಟೆ ಅಂತರಾಳವನ್ನು ಹೊಂದಿದ್ದು, ಉಳಿದೆರಡು ಗರ್ಭಗೃಹಗಳಿಗೆ ಅಂತರಾಳವಿಲ್ಲ. ಎಲ್ಲಕ್ಕೂ ಸೇರಿ ಒಂದೇ ನವರಂಗವಿದೆ. ಸುತ್ತ ಗಿಡಗಂಟೆಗಳು ಬೆಳೆದು ಪಾಳು ಬಿದ್ದಿರುವ ಈ ಗುಡಿಗೆ ಶಿಖರವಿದ್ದು, ಹೊರಭಿತ್ತಿಯ ಮೇಲಿನ ಆಕರ್ಷಕ

ಕಿರುಶಿಖರಗಳು ಗಮನ ಸೆಳೆಯುತ್ತದೆ. ಈ ಗುಡಿ ಪರಿಸರದಲ್ಲಿರುವ ಒಂದು ಶಾಸನ (ಕ್ರಿ.ಶ. 1124) ಗುತ್ತ ಜೋಯಿದೇವನ ಪ್ರಧಾನರಾದ ದೇಕಣ್ಣ ಮತ್ತು ನಾಕಣ್ಣರು ನಿರ್ಮಿಸಿದ ಚಾಮೇಶ್ವರ ದೇವರ ಗುಡಿಗೆ ಮಹಾಜನ 200ರ ಒಪ್ಪಿಗೆ ಪಡೆದು ಭೂದಾನ ಮಾಡಿದ ಅಂಶವನ್ನು ತಿಳಿಸುತ್ತದೆ. ಸಾಂದರ್ಭಿಕವಾಗಿ (ಶ್ರೀ) ಕಲಿದೇವರ, ಕೇಶವ ದೇವರನ್ನು ಹಾಗೂ ಬಾಣೇಶ್ವರ ದೇವರನ್ನು ಪ್ರಸ್ತಾಪಿಸುತ್ತದೆ. ಇಲ್ಲಿನ ಚಾಮನಾಥ ದೇವರಿಗೆ ಉಳಿಯ-300ರು ದಾನ ಕೊಟ್ಟ ಅಂಶವನ್ನು ಈ ಶಾಸನ ದಾಖಲಿಸಿದರೆ, ಗುಡಿಯ ಕಂಬದ ಮೇಲಿರುವ ಮತ್ತೊಂದು ಶಾಸನ (ಕ್ರಿ.ಶ. 1187) ಮಹಾಪ್ರಧಾನ ಬಿಚಿಸೆಟ್ಟಿಯ ಅಪೇಕ್ಷೆಯಂತೆ ಚಾಮೇಶ್ವರ ಗುಡಿಯ ಬಳಿ ರಾಜೇಶ್ವರ ದೇವರ ಪ್ರತಿಷ್ಠೆ ಮಾಡಿ ಆ ದೇವರಿಗೆ ಗಂಗನ (ಗಳೆಯಲ್ಲಿ) ಹಲವಾರು ಮತ್ತರು ಭೂಮಿ ದಾನ ಮಾಡಿದ ಅಂಶವನ್ನು ತಿಳಿಸುತ್ತ ಸಾಂದರ್ಭಿಕವಾಗಿ ಕೀರ್ತಿನಾರಾಯಣ ಗುಡಿಯ ಬಗ್ಗೆಯೂ ಪ್ರಸ್ತಾಪಿಸುತ್ತದೆ. ಈ ಎರಡೂ ಶಾಸನಗಳು ಹೇಳುವ ಚಾಮೇಶ್ವರ, ರಾಜೇಶ್ವರ ಗುಡಿ ಇದೇ ಆಗಿದೆ. ದೇವಾಲಯದ ಒಳಾಂಗಣದಲ್ಲಿ ಮೂರ್ತಿ ಶಿಲ್ಪಗಳಾವುವು ಉಳಿದಿಲ್ಲ.

ಇವುಗಳ ಜೊತೆಗೆ ಊರಲ್ಲಿ ಭರಮಪ್ಪ, ಮಾಸ್ತಮ್ಮ, ಬಸವಣ್ಣ ಮುಂತಾದ ಗುಡಿಗಳಿವೆ. ಹೊನ್ನತ್ತಿ ಪ್ರವಾಸಿಕೇಂದ್ರವಾಗಿ ಬೆಳೆಯುವ ಅನುಕೂಲಗಳನ್ನು ಹೊಂದಿದೆ.

**ಹೊಮ್ಮರಡಿ :** ಹಾವೇರಿ ತಾಲೂಕಿನ ಹೊಮ್ಮರಡಿಯು (ಜನಸಂಖ್ಯೆ: 3,059)ಹಾವೇರಿಯಿಂದ ದಕ್ಷಿಣಕ್ಕೆ 5ಕಿಮೀ ದೂರದಲ್ಲಿದೆ. ಈ ಊರು ಪ್ರಾಚೀನ ಕಾಲದಲ್ಲಿ ಬಾಸವೂರು-140 ಕ್ಕೆ ಸೇರಿತ್ತು. ಪ್ರಾಚೀನ ಶಾಸನಗಳಲ್ಲಿ 'ಪೊಮ್ಮರಡಿ', 'ಒಮ್ಮರಡಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ರಾಷ್ಟ್ರಕೂಟರ ಕಾಲದಷ್ಟು ಪುರಾತನವಾಗಿದ್ದು ಅವರ ಕಾಲದ ಗೋಸಾಸ ಕಲ್ಲು, ವೀರಗಲ್ಲು ಶಾಸನ ಹಾಗೂ ದೇವಾಲಯಗಳಿವೆ. ಈ ಊರಲ್ಲಿ ಐದು ಶಾಸನಗಳಿದ್ದು, ಅವುಗಳಲ್ಲಿ ಮೂರು ಬೇರೆ ಬೇರೆ ಕಾಲದ ವೀರಗಲ್ಲುಗಳಿದ್ದು, ಉಳಿದೆರಡು ದಾನ ಶಾಸನಗಳಾಗಿವೆ. ವೀರಭದ್ರ ಗುಡಿಯ ಮುಂದಿರುವ ಕ್ರಿ.ಶ. 10 ನೇಯ ಶತಮಾನದ ರಾಷ್ಟ್ರಕೂಟ ವೀರಗಲ್ಲು ಶಾಸನ ಮಡಿದ ವೀರನ ಬಗ್ಗೆ ಹೇಳಿದರೆ, ರಾಮಲಿಂಗನ ಗುಡಿ ಮುಂದಿರುವ ಕ್ರಿ.ಶ. 1049 ರ ಮತ್ತೊಂದು ವೀರಗಲ್ಲು ಶಾಸನ ಎಲೆಯ ಬೊಂಜಗರ ಸಲುವಾಗಿ ಹೋರಾಡಿ ಮಡಿದ ವೀರನಿಗೆ ಬಿಟ್ಟ ದಾನವನ್ನು ತಿಳಿಸುತ್ತದೆ. ಇಲ್ಲಿನ ಸುಮಾರು ಕ್ರಿ.ಶ. 11 ನೇ ಶತಮಾನದ ಎರಡೂ ದಾನಶಾಸನಗಳು ಬಹಳ ಹಾಳಾಗಿದ್ದು ವಿವರಗಳು ಲಭ್ಯವಿಲ್ಲದಿರುವುದರಿಂದ ದೇವಾಲಯಗಳ ಹೆಸರೇನೆಂದು ಗೊತ್ತಾಗುವುದಿಲ್ಲ.

ಊರ ನಡುವೆಯಿರುವ ಪರಮೇಶ್ವರ ಗುಡಿ ದ್ವಿಕೂಟವಾಗಿದ್ದು, ಎರಡು ಗರ್ಭಗೃಹಗಳನ್ನು ಹೊಂದಿದೆಯಾದರೂ ಪ್ರಧಾನ ಗರ್ಭಗೃಹಕ್ಕಷ್ಟೆ ಅಂತರಾಳವಿರುವುದು ಗಮನಿಸಬೇಕಾದ ಅಂಶವಾಗಿದೆ. ಗರ್ಭಗೃಹದಲ್ಲಿ ಸ್ವಯಂಭುಲಿಂಗವಿದೆ. ಇದು ತೆರೆದ ಅಂತರಾಳವನ್ನು ಹೊಂದಿದೆ. ಮತ್ತೊಂದು ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಸಮಭಂಗಿಯಲ್ಲಿ ನಿಂತ ಸೂರ್ಯನ ಸುಂದರ ಶಿಲ್ಪವಿದೆ. ನವರಂಗದ ಕಂಬಗಳು ಕಲ್ಯಾಣದ ಚಾಳುಕ್ಯರ ಕಂಬಗಳಾಗಿವೆ. ಸಿಂಹ ಪೀಠದ ಮೇಲೆ ನಂದಿಯನ್ನು ಕೂರಿಸಿದ್ದಾರೆ. ನವರಂಗದ ಬಾಗಿಲವಾಡ ಬಹಳ ಆಕರ್ಷಕವಾಗಿದ್ದು ಪಂಚಶಾಖೆಗಳು ಭವ್ಯವಾದ ಕುಸುರಿ ಕೆತ್ತನೆಯಿಂದ ಅಲಂಕೃತಗೊಂಡಿದ್ದು ನಡುವೆ ಗಜಲಕ್ಷ್ಮಿಯ ಕೆತ್ತನೆಯಿದೆ. ಈ ಗುಡಿ ಆವರಣದಲ್ಲಿ ದುರ್ಗಾ ಹಾಗೂ ವೀರಭದ್ರನ ಮೂರ್ತಿಗಳಿವೆ. ಜೊತೆಗೆ ರಾಷ್ಟ್ರಕೂಟರ ಕಾಲದ ಗೋಸಾಸ ಕಲ್ಲೂ ಕೂಡ ಇವೆ.

ಊರ ಕೆರೆಯ ಬಳಿಯಲ್ಲಿ ಪ್ರಾಚೀನವಾದ ರಾಮಲಿಂಗನ ಗುಡಿಯಿದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗ, ತೆರೆದ ಅಂತರಾಳದಲ್ಲಿ ನಂದಿಯಿವೆ. ನವರಂಗವು ನಾಲ್ಕು ಮಾದರಿಯ ಕಂಬಗಳನ್ನು ಹೊಂದಿದೆ. ಇವುಗಳ ಜೊತೆಗೆ ಊರಲ್ಲಿ ಕಲ್ಲೇಶ್ವರ, ಹನುಮಂತ, ವೀರಭದ್ರ, ದುರ್ಗಾ ಹಾಗೂ ಬಸವಣ್ಣನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಹೊಸರಿತ್ತಿ :** ಹಾವೇರಿ ತಾಲೂಕಿನ ಹೊಸರಿತ್ತಿಯು (ಜನಸಂಖ್ಯೆ : 4,830) ಹಾವೇರಿಯಿಂದ 24 ಕಿ.ಮೀ. ದೂರದಲ್ಲಿದ್ದು ವರದಾನದಿಯ ದಂಡೆಯಲ್ಲಿರುವ ಪ್ರಸಿದ್ಧವಾದ ಸ್ವಾತಂತ್ರ್ಯ ಚಳುವಳಿಯ ಕೇಂದ್ರವಾಗಿದೆ. ಈಗ ಮಧ್ವಮತದ ಅನುಯಾಯಿಗಳಿಗೆ ಪವಿತ್ರ ಕ್ಷೇತ್ರ ಆಗಿದೆ. ಊರಿನಲ್ಲಿ ವಿಭುದೇಂದ್ರ ಮಠದ ಮೂಲ ಪರಂಪರೆಯ ಯತಿಗಳಾದ ಧೀರೇಂದ್ರತೀರ್ಥ (ಕ್ರಿ.ಶ. 1785) ಮತ್ತು ಸುಶೀಲೇಂದ್ರತೀರ್ಥರ ಬೃಂದಾವನಗಳಿವೆ. ಧೀರೇಂದ್ರರು ಸಮಾಜದ ಎಲ್ಲಾ ಜಾತಿ ಮತ್ತು ವರ್ಗದ ಜನರಿಂದಲೂ

ಗೌರವಾಧಾರಗಳಿಂದ ಪೂಜಿಸಲ್ಪಡುತ್ತಾರೆ. ಇವರು ಅನೇಕ ಶಾಸ್ತ್ರಗ್ರಂಥಗಳನ್ನು ರಚಿಸಿ ತಮ್ಮ ಸಂಸ್ಥಾನದಲ್ಲಿ ಅನೇಕ ಪವಾಡಗಳನ್ನು ಮಾಡುತ್ತಿದ್ದರೆಂದು ಹೇಳಲಾಗುತ್ತದೆ. ಧೀರೇಂದ್ರರ ಬೃಂದಾವನದ ಪಕ್ಕದಲ್ಲೇ ವಿಭುದೇಂದ್ರ ಮಠದ ಪರಂಪರೆಯಲ್ಲೆ ಬಂದ ಸುಶೀಲೇಂದ್ರತೀರ್ಥರ ಬೃಂದಾವನವೂ ಇದೆ. ಊರಿನಲ್ಲಿ ಗುದ್ದಲಿ ಸ್ವಾಮಿಗಳ ಮಠವಿದೆ; ಮತ್ತು ಈ ಸ್ವಾಮಿಗಳು ಬೆಳಗಾವಿ ಜಿಲ್ಲೆ ಇಟ್ಟಂಗಿಯ ಕಡೆಯವರೆಂದೂ ಇಲ್ಲಿ ಬಂದು ಕಾಲವಾದರೆಂದೂ ಹೇಳಲಾಗುತ್ತದೆ. ಅವರ ಗದ್ದುಗೆಯಿರುವ ಒಂದು ಮಠವಿದೆ. ಪುಷ್ಯಮಾಸದ ಹುಣ್ಣಿಮೆಯಂದು ಇಲ್ಲಿ ರಥೋತ್ಸವ ನಡೆಯುತ್ತದೆ. ಊರಲ್ಲಿ ವೀರಭದ್ರ, ಆಂಜನೇಯ, ಬಸವನ ದೇವಾಲಯಗಳಿವೆ. ವೀರಬಭದ್ರನ ವಿಗ್ರಹವು ಸುಮಾರು ನಾಲ್ಕು ಅಡಿ ಎತ್ತರವಿದೆ. ಇಲ್ಲಿಯೇ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾದ ಮೈಲಾರ ಮಹಾದೇವ ಮತ್ತು ಅವರ ಸಂಗಡಿಗರು 1943 ರಲ್ಲಿ ಸ್ವಾತಂತ್ರ್ಯ ಚಳವಳಿಯ ಕಾಲಕ್ಕೆ ಹುತಾತ್ಮರಾದರು. ಊರ ಹೊರಗೆ ಇರುವ ಆಂಜನೇಯ ದೇವಾಲಯಕ್ಕೆ ಪ್ರಾಚೀನ ದೇವಾಲಯದ ಅವಶೇಷಗಳನ್ನು ಬಳಸಲಾಗಿದೆ. ಊರಿನಲ್ಲಿ ಜಾಮಿಯಾ ಮಸೀದಿ ಹಾಗೂ ಚಮನ್‌ಷಾವಲಿ ದರ್ಗಾ ಇದೆ. ಈ ದರ್ಗಾದಲ್ಲಿ ಜಿಲ್‌ಹಜ್ ತಿಂಗಳಲ್ಲಿ 10-11 ದಿನಗಳ ಕಾಲ ಭಾರಿ ಉರುಸು ನಡೆಯುತ್ತದೆ. 1960 ರಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಪ್ರಾರಂಭವಾಗಿ ವಸತಿ ಶಾಲೆ ನಡೆಯುತ್ತಿದೆ. ಇದೇ ಊರಿನ ಸ್ವಾತಂತ್ರ್ಯಯೋಧ ಹಳ್ಳಿಕೇರಿ ಗುದ್ಲೆಪ್ಪ, ಇದರ ಸ್ಥಾಪಕರು. **ಹಳೇರಿತ್ತಿಯು** (ಜನಸಂಖ್ಯೆ : 1943) ಹೊಸರಿತ್ತಿಯಿಂದ ನೈರುತ್ಯಕ್ಕೆ 5 ಕಿ.ಮೀ. ದೂರದಲ್ಲಿರುವ ಪುರಾತನ ಸ್ಥಳವಾಗಿದೆ. ಈ ಊರಲ್ಲಿ ಆದಿಶಕ್ತಿ, ಉಡಚವ್ವ, ದುರ್ಗವ್ವನ ಮತ್ತು ಆಂಜನೇಯ ಗುಡಿಗಳಿವೆ. ಇವುಗಳಲ್ಲಿ ಆಂಜನೇಯ ಮತ್ತು ಉಡಚವ್ವ ಗುಡಿಗಳು ಇತ್ತೀಚೆಗೆ ಜೀರ್ಣೋದ್ಧಾರವಾಗಿದೆ. ಉಳಿದವು ಇಟ್ಟಿಗೆ ಮತ್ತು ಕಲ್ಲುಗಾರೆ ಬಳಸಿ ಕಟ್ಟಿಸಿದವುಗಳಾಗಿವೆ. ಆದಿಶಕ್ತಿ ದೇವಾಲಯದಲ್ಲಿನ ಸುಮಾರು 2.5 ಅಡಿ ಎತ್ತರದ ಮಹಿಷಮರ್ದಿನಿ ಶಿಲ್ಪವು, ರಾಷ್ಟ್ರಕೂಟರ ಲಕ್ಷಣವನ್ನು ಹೊಂದಿದ್ದು ಕೊಂಬುಳ್ಳ ಮನುಷ್ಯಾಕಾರದ ಮಹಿಷನನ್ನು ತಿವಿಯುತ್ತಿರುವಂತೆ ಕಂಡರಿಸಿದೆ. ಈ ಶಿಲ್ಪವು ಅದೇ ದೇವಾಲಯದ ಮುಂದೆ ನೆಲದಲ್ಲಿ ಸಿಕ್ಕಿದ್ದೆಂದು ಹೇಳುತ್ತಾರೆ. ಉಡಚವ್ವನ ಗುಡಿಯ ಪಕ್ಕದ ಹೊಲದಲ್ಲಿ ಸುಮಾರು ಕ್ರಿ.ಶ. 10-11 ನೇ ಶತಮಾನಕ್ಕೆ ಸೇರಬಹುದಾದ ಸುಂದರವಾದ ಗಜಲಕ್ಷ್ಮಿ ಶಿಲ್ಪ ಹಾಗೂ ಕೋಣನ ತಲೆಯಿದೆ. ಊರಿನ ಅಗಸೆ ಕಂಬದ ಮೇಲೆ ಶಾಸನವಿದ್ದು ರಾಷ್ಟ್ರಕೂಟ ಕಾಲದ್ದಾ(ಕ್ರಿ.ಶ. 929)ಗಿದ್ದು ಮಹಾಸಾಮಂತ ಬಂಕೆಯ ಬನವಾಸಿಯನ್ನಾಳುವಾಗ ಗೋಸಹಸ್ರದಾನ ಮಾಡಿದ ಉಲ್ಲೇಖವನ್ನು ನೀಡುತ್ತದೆ.

**ಹೊಳೆಆನವೇರಿ** : ರಾಣೆಬೆನ್ನೂರು ತಾಲೂಕಿನ ಹೊಳೆಆನವೇರಿಯು (ಜನಸಂಖ್ಯೆ : 1,363) ರಾಣೆಬೆನ್ನೂರಿನಿಂದ ಆಗ್ನೇಯಕ್ಕೆ 70 ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಆನೆವರಿ' ಎಂದೇ ಉಲ್ಲೇಖಗೊಂಡಿದ್ದು, ಹಿಂದೆ ಇದು ರಟ್ಟೆಹಳ್ಳಿ-70 ಕ್ಕೆ ಸೇರಿದ ಗ್ರಾಮವಾಗಿತ್ತು. ಕುಮುದ್ವತಿ ಹಾಗೂ ತುಂಗಭದ್ರಾನದಿಗಳ ಸಂಗಮ ಸ್ಥಳದಲ್ಲಿರುವ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ರಾಮೇಶ್ವರ ಗುಡಿ ಮುಂದಿರುವ ಕ್ರಿ.ಶ. 1048 ರ ಶಾಸನ ಕೂಡಲ ಸಂಗಮದ ರಾಮತೀರ್ಥಕ್ಕೆ ಆನೆವರಿ ಗ್ರಾಮವನ್ನು ಅಧಿಕಾರಿಗಳು ದಾನ ನೀಡಿ ದೇವಾಲಯದ ಪರಿವಾರದವರಿಗೆ ಭೂದಾನ ಮಾಡಿದ ಅಂಶವನ್ನು ತಿಳಿಸಿದರೆ, ಸಂಗಮೇಶ್ವರ ದೇವಾಲಯದ ಕಂಬದ ಮೇಲಿರುವ ಕ್ರಿ.ಶ. 1247 ರ ಶಾಸನ ವಿಶ್ವರೂಪದೇವರಿಗೆ ನಾಗವ್ವೆ ಹೂಸೇವೆಗೆಂದು ಒಂದು ಗದ್ಯಾಣವನ್ನು ದಾನ ಮಾಡಿ, ಅದರ ಬಡ್ಡಿಯಾಗಿ ದಿನಪ್ರತಿ 50 ಹೂಗಳನ್ನು ಪೂಜಾರಿಗಳು ದೇವರಿಗೆ ನಡೆಸಬೇಕೆಂದು ಆದೇಶಿಸುತ್ತದೆ. ಬನಶಂಕರಿ ಗುಡಿ ದ್ವಾರದ ಮೇಲಿರುವ ಕ್ರಿ.ಶ. 1249 ರ ಶಾಸನ ರಾಮನಾಥದೇವರಿಗೆ ಮಾಯಿದೇವ ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಊರಲ್ಲಿರುವ ಎರಡು ಪ್ರಾಚೀನ ದೇವಾಲಯಗಳಲ್ಲಿ ಹೊಳೆಯಂಚಲ್ಲಿರುವ ರಾಮೇಶ್ವರ ಗುಡಿಯೇ ಪ್ರಾಚೀನದ್ದಾಗಿದ್ದು, ಇಂದು ಪೂರ್ಣ ಶಿಥಿಲಗೊಂಡಿದೆ. ಮೂಲತಃ ಗರ್ಭಗೃಹ ಹಾಗೂ ಅರ್ಧಮಂಟಪವನ್ನು ಹೊಂದಿದ್ದ ಈ ಗುಡಿಯ ಗರ್ಭಗೃಹದಲ್ಲಿ ರಾಷ್ಟ್ರಕೂಟರ ಕಾಲದ ಬೃಹತ್ ಶಿವಲಿಂಗವಿದ್ದು, ಇದರ ಛಾವಣಿ ಕುಸಿದಿದೆ. ಗರ್ಭಗೃಹದ ಬಾಗಿಲವಾಡವು ಸುಮಾರು 10 ಅಡಿ ಎತ್ತರವಿದ್ದು ಆಕರ್ಷಕವಾಗಿದೆ. ಅರ್ಧಮಂಟಪ ಭಾಗ ಸಾಕಷ್ಟು ಹಾಳಾಗಿದೆ. ಈ ಗುಡಿಯು ರಾಷ್ಟ್ರಕೂಟರ ಕಾಲದ್ದೆಂದು ಊಹಿಸಬಹುದಾಗಿದೆ. ಈ ಊರಿನ ಮತ್ತೊಂದು ಆಕರ್ಷಣೆಯೆಂದರೆ, ಊರ ಹೊರಗೆ ಎರಡೂ ನದಿಗಳ ಸಂಗಮ ಸ್ಥಳದಲ್ಲಿರುವ ನಾಜೂಕಾದ ಭವ್ಯ ಶಿಲ್ಪಗಳ ಅತ್ಯಾಕರ್ಷಕ ಕೆತ್ತನೆಯಿರುವ ಸಂಗಮೇಶ್ವರ (ಶಾಸನೋಕ್ತ ವಿಶ್ವರೂಪದೇವರು) ದೇವಾಲಯವಾಗಿದ್ದು, ಇದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಚೌಕ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡ ಪಂಚಶಾಖಾಲಂಕೃತವಾಗಿದ್ದು ಶೈವ ದ್ವಾರಪಾಲಕರನ್ನು ಹೊಂದಿದೆ. ಅಂತರಾಳದಲ್ಲಿ ನಂದಿಯಿದ್ದು ಇದರ ಬಾಗಿಲವಾಡವು ವೃತ್ತಾಕಾರದ ಬಳ್ಳಿಯ ನಡುವೆ ವಾದ್ಯಗಾರರು, ನರ್ತಕರನ್ನು ಹೊಂದಿರುವ ಸುಂದರವಾದ ಜಾಲಾಂಧ್ರವನ್ನು ಹೊಂದಿದ್ದು ಇಕ್ಕೆಲದಲ್ಲಿರುವ ಮನಸ್ತಂಭ

ಕೆತ್ತನೆ ಗಮನಾರ್ಹವಾಗಿದೆ. ನವರಂಗದಲ್ಲಿ ವೃತ್ತ ಅಡ್ಡಕೊಯ್ತದ ಆಕರ್ಷಕ ಚಾಳುಕ್ಯ ಕಂಬಗಳಿವೆ. ಈ ದೇವಾಲಯದ ಹೊರಮೈ ಅತ್ಯಂತ ನವಿರಾದ ಆಕರ್ಷಕ ಕೆತ್ತನೆಗೆ ಹೆಸರಾಗಿದೆ. ಈ ಗುಡಿಯ ಆದಿಷ್ಠಾನ ಸುಂದರವಾದ ಪಂಚಪಟ್ಟಿಕೆಯನ್ನು ಒಳಗೊಂಡಿದ್ದು ಗರ್ಭಗೃಹದ ಮತ್ತು ಅಂತರಾಳದ ಭಿತ್ತಿಯು ಕಿರಿದಾದ ದೇವಕೋಷ್ಠ, ವೈವಿಧ್ಯಮಯವಾದ ಕಿರು ಶಿಖರ, ಆಲಂಕಾರಿಕ ಕಿರುಸ್ತಂಭ, ಚಿಕಣಿ ಶಿಖರಗಳ ಸರಮಾಲೆಯ ನಡುವೆ, ವೀಣೆ ನುಡಿಸುತ್ತ ಹಾಡುತ್ತ, ನರ್ತಿಸುತ್ತಿರುವ ಸುಂದರಿ ಹಾಗೂ ಪರಿವಾರ ಕಲಾವಿದೆಯರ ಆಕರ್ಷಕ ಶಿಲ್ಪಗಳಿವೆ. ಹೊರಮೈಯ ನಯನ ಮನೋಹರ ಕೆತ್ತನೆಯಿಂದ ವೀಕ್ಷಕರ ಮನಗೆಲ್ಲುವ ಈ ಗುಡಿಯ ಶಿಖರ ಹಾಳಾಗಿದೆ. ಸಂಕ್ರಾಂತಿಯಂದು ಇಲ್ಲಿ ಜಾತ್ರೆ ನಡೆಯುತ್ತದೆ. ಸಂಕ್ರಾಂತಿ ಸ್ನಾನಕ್ಕೆಂದು ಸಾವಿರಾರು ಜನ ಸಂಗಮಕ್ಕೆ ಬಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಗುಡಿಗೆ ಸೇರಿದಂತೆ ಬಲಬದಿಯಲ್ಲಿ ಹಾನಗಲ್ ಕುಮಾರಸ್ವಾಮಿಗಳ ಗದ್ದುಗೆಯಿದೆ.

ರಾಮೇಶ್ವರ ಗುಡಿ ಬಳಿಯಲ್ಲಿ ಬನಶಂಕರಿ ಗುಡಿಯಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿರುವ ಈ ಗುಡಿ, ಪೂರ್ಣ ದುರಸ್ತಿಗೊಂಡಿದೆಯಾದರೂ ಗರ್ಭಗೃಹದಲ್ಲಿರುವ ದೇವಿ ಮೂರ್ತಿ, ಬಾಗಿಲವಾಡ ಹಾಗೂ ಕೆಲವು ಕಂಬಗಳು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿವೆ. ಈ ಗುಡಿಯ ಆವರಣದಲ್ಲಿ ಭಗ್ನವಾದ ಸೂರ್ಯ ಮತ್ತು ಸಪ್ತಮಾತೃಕಾ ಶಿಲ್ಪಗಳಿವೆ. ಈ ದೇವಿಯ ಜಾತ್ರೆ ಭಾರತ ಹುಣ್ಣಿಮೆಗೆ ಐದು ದಿನ ಮೊದಲೇ ವಿಜೃಂಭಣೆಯಿಂದ ನಡೆಯುತ್ತದೆ. ಇವುಗಳ ಜೊತೆಗೆ ಊರಲ್ಲಿ ಇತ್ತೀಚಿನ ಹನುಮಂತ, ದುರ್ಗಾ, ಬೀರದೇವ, ಬಸವಣ್ಣನ, ಹಾಗೂ ರಾಮನ ಗುಡಿಗಳಿವೆ. ಊರಲ್ಲಿ ಒಂದೆರಡು ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳೂ ಇವೆ. ಊರಲ್ಲಿ ಒಂದು ಮಸೀದಿ ಇದೆ.

**ಹೊಳೆ ಆಲೂರು :** ರೋಣ ತಾಲೂಕಿನ ಹೊಳೆಆಲೂರು (ಜನಸಂಖ್ಯೆ : 7,565) ರೋಣದಿಂದ ವಾಯುವ್ಯಕ್ಕೆ 25 ಕಿಮೀ ದೂರದಲ್ಲಿದೆ. ಈ ಊರು ಮಲಪ್ರಭಾ ನದಿಯ ದಂಡೆಯ ಮೇಲಿರುವುದರಿಂದ ಹೊಳೆ ಆಲೂರೆಂದು ಕರೆಯುತ್ತಾರೆ. ಇದು ಗದಗ-ಬಾಗಲಕೋಟೆ ರೈಲು ಮಾರ್ಗದಲ್ಲಿದ್ದು ಹೊಳೆ ಆಲೂರಲ್ಲೂ ನಿಲ್ದಾಣವಿದೆ. ಹೀಗಾಗಿ ಈ ಊರನ್ನು 'ಗಾಡಿ ಆಲೂರು' ಎಂದೂ ಕರೆಯುತ್ತಾರೆ. ಇತಿಹಾಸ ಪೂರ್ವ ಕಾಲದ ಪಳಿಯುಳಿಕೆಗಳು ಇಲ್ಲಿ ಲಭಿಸಿವೆಯೆಂದು ಡಾ|| ಸುಂದರ ರವರು ಹೇಳುತ್ತಾರೆ. ರೋಣ ತಾಲೂಕಿನ ಪ್ರಮುಖ ಊರುಗಳಲ್ಲಿ ಒಂದಾಗಿರುವ ಇದು ಕಲಾತ್ಮಕವಾದ ಕುಸುರಿ ಕೆಲಸಗಳಿಂದ ಕೂಡಿದ ಕಟ್ಟಿಗೆಯ ಬಾಗಿಲವಾಡಗಳ ತಯಾರಿಕೆಗೆ ಪ್ರಸಿದ್ಧವಾಗಿದ್ದು ಇವುಗಳಿಗೆ ಈ ಭಾಗದಲ್ಲಿ ಒಳ್ಳೆಯ ಬೇಡಿಕೆಯಿದೆ. ಇಲ್ಲಿನ ಎಚ್ಚರಸ್ವಾಮಿ ಮಠ ಮತ್ತೊಂದು ಆಕರ್ಷಣೆಯಾಗಿದೆ. ಹಿಂದೂ ಮುಸ್ಲಿಮರೆನ್ನದೆ ಸಕಲರೂ ನಡೆದುಕೊಳ್ಳುವ ಈ ಮಠದ ಜಾತ್ರೆ ಡಿಸೆಂಬರ್ ತಿಂಗಳಲ್ಲಿ ಜರುಗುತ್ತದೆ. ಸಂಕ್ರಾಂತಿ ಹಬ್ಬದಂದು ಸಂಕ್ರಾಂತಿಯ ಸ್ನಾನಕ್ಕೆಂದು ಇಲ್ಲಿಗೆ ಹತ್ತಾರು ಸಾವಿರ ಜನ ಬಂದು ಸೇರುತ್ತಾರೆ. ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರಲ್ಲಿ ಅಗ್ರಗಣ್ಯರಾದ ಆಲೂರು ವೆಂಕಟರಾಯರು ಈ ಊರವರು.